ಶ್ರೀಸುಮಧ್ವವಿಜಯಮಹಾಕಾವ್ಯಂ

ಶ್ರೀನಾರಾಯಣಪಂಡಿತಾಚಾರ್ಯವಿರಚಿತಂ

ಭಾಗ — ೨

೫ ರಿಂದ ೮ ರ ವರೆಗಿನ ನಾಲ್ಕು ಸರ್ಗಗಳು

ಕನ್ನಡ ಟೀಕಾಸಹಿತ

★

ಅನುವಾದಕ :

ಆಚಾರ್ಯ ಸಾಣೂರು ಭೀಮಭಟ್ಟ, ಎಂ.ಎ.
ನಿವೃತ್ತ ತರ್ಕಶಾಸ್ತ್ರ ಪ್ರಾಧ್ಯಾಪಕ
ಸರ್ಕಾರದ ಸಂಸ್ಕೃತ ಮಹಾಪಾಠಶಾಲಾ
ಬೆಂಗಳೂರು — ೫೬೦ ೦೧೮

ಪ್ರಕಾಶಕ :

ಆಚಾರ್ಯ ಸಾಣೂರು ಭೀಮಭಟ್ಟ, ಎಂ.ಎ.
ನಂ. ೨೨/೪, "ಈಶಾವಾಸ್ಯಂ"
೬ ನೇ ಅಡ್ಡರಸ್ತೆ, ಅಪ್ಪೂರಾವ್ ರಸ್ತೆ
ಚಾಮರಾಜಪೇಟೆ
ಬೆಂಗಳೂರು – ೫೬೦ ೦೧೮

ಪ್ರಥಮ ಮುದ್ರಣ : ೧೯೮೫

ಸರ್ವಾಧಿಕಾರಗಳೂ ಸುರಕ್ಷಿತ

೧,೦೦೦ ಪ್ರತಿಗಳು

ಬೆಲೆ : ೧೬ ರೂಪಾಯಿಗಳು

ಮುದ್ರಕರು :

ಶ್ರೀ ವಿಜಯ ಪ್ರಿಂಟಿಂಗ್ ಹೌಸ್
ಟಿ. ಎಸ್. ಎ. ೪೨, ಗವೀಪುರ
ಬೆಂಗಳೂರು–೫೬೦ ೦೧೯

Rarest Archiver

H. H. SRI VIDYAMANYA TEERTHA SWAMIJI
Sri Palimar & Bhandarakeri Mutt
UDUPI – 576 101

श्री श्री विद्यामान्यतीर्थ स्वामीजी
श्री पलिमारु भण्डारकेरी मठ
उडुपि – 576 101

Ref......................... *Date 31-8-1985*
Camp ಬೆಂಗಳೂರು

ಅನುಗ್ರಹವಚನ

ಶ್ರೀಸುಮಧ್ವವಿಜಯವು ತಾರಕಮಂತ್ರ

ಒಂದು ಇತಿಹಾಸ:—ಒಬ್ಬ ಭಕ್ತರು ಮಂತ್ರಾಲಯದಲ್ಲಿ ತಾರಕ ಮಂತ್ರವು ಯಾವುದು ಎಂದು ಶ್ರೀರಾಯರಿಂದ ತಿಳಿಯುವುದಕ್ಕಾಗಿ ಬಹುಕಾಲ ಸೇವೆಯನ್ನು ಮಾಡಿದರು. ಅವರಿಗೆ ರಾಯರು ಸ್ವಪ್ನದಲ್ಲಿ ಉಡುಪಿಶ್ರೀಕೃಷ್ಣ ಪೂಜೆಯನ್ನು ಈಗ ಮಾಡಿಕೊಂಡಿರುವ ಸರ್ವಜ್ಞಪೀಠಾರೂಢರಾದ ಸ್ವಾಮಿಗಳಲ್ಲಿ ಕೇಳು. ಅವರು ಯಾವುದನ್ನು ತಾರಕಮಂತ್ರವೆಂದು ಹೇಳುತ್ತಾರೋ ಅದೇ ನಿನಗೆ ತಾರಕಮಂತ್ರ ಎಂದು ಹೇಳಿದರು. ಆ ಭಕ್ತರು ಉಡುಪಿಗೆ ಹೋಗಿ ಪೀಠಾರೂಢಸ್ವಾಮಿಗಳಲ್ಲಿ ಕೇಳಿದಾಗ ಅವರು **ಶ್ರೀಸುಮಧ್ವವಿಜಯವೇ ತಾರಕಮಂತ್ರ**ವೆಂದು ಥಟ್ಟನೆ ಹೇಳಿದರು. ಅದನ್ನು ಕೇಳಿಕೊಂಡ ಆ ಭಕ್ತರು ಭಕ್ತಿಯಿಂದ ಸುಮಧ್ವವಿಜಯವನ್ನು ಪುನಶ್ಚರಣಮಾಡುತ್ತಾ ಉತ್ತಮಜ್ಞಾನವನ್ನು ಹೊಂದಿದರು. ಇಂತಹ ಇತಿಹಾಸಪ್ರಸಿದ್ಧವಾದ ಸುಮಧ್ವವಿಜಯಕ್ಕೆ ನ್ಯಾಯ-ವ್ಯಾಕರಣ, ಅಲಂಕಾರ, ವೇದಾಂತವಿದ್ವಾನ್ ಸಾಣೂರುಭೀಮಭಟ್ಟರು ಉತ್ತಮರೀತಿಯಲ್ಲಿ ಅನ್ವಯಾರ್ಥ, ತಾತ್ಪರ್ಯ-ವಿಶೇಷಾರ್ಥ, ವಿಗ್ರಹ, ಧಾತುರೂಪಗಳನ್ನು ಚೆನ್ನಾಗಿ ಬರೆದದ್ದನ್ನು ನೋಡಿ ನಾವು ಬಹಳ ಸಂತೋಷಪಟ್ಟಿದ್ದೇವೆ. ಇವರು ಇಂತಹ ಶ್ರೇಷ್ಠಶ್ರೀಹರಿಸೇವೆಯನ್ನು ಬಹಳವಾಗಿ ಮಾಡುತ್ತಾ ಶ್ರೀಹರಿವಾಯುಗಳ ಪೂರ್ಣಾನುಗ್ರಹಪಾತ್ರರಾಗಬೇಕು. ಈ ಗ್ರಂಥದಿಂದ ಅಶೇಷಸಜ್ಜನರಿಗೆ ಮಹೋಪಕಾರವಾಗಿರುತ್ತದೆ.

ಇತ್ಯನೇಕನಾರಾಯಣ ಸ್ಮರಣೆಗಳು
ಶ್ರೀ (ರುಜು)

Rarest Archives

Rarest Archiver

ಮೊದಲ ಮಾತು

ಶ್ರೀಹರಿವಾಯುಗಳ ಕೃಪೆಯಿಂದ ಶ್ರೀಸುಮಧ್ವವಿಜಯಮಹಾಕಾವ್ಯಾನುವಾದದ ಎರಡನೆಯ ಭಾಗವು ಈಗ ವಾಚಕರ ಹಸ್ತಕಮಲವನ್ನು ಸೇರುತ್ತಿದೆ. ಮೊದಲನೆಯ ಭಾಗವು ಪ್ರಕಟವಾದ ೫ ವರ್ಷಗಳಲ್ಲಿ ಈ ಎರಡನೆಯ ಭಾಗವು ಪ್ರಕಟವಾಗುತ್ತಿದೆ. ಈ ಮಂದಗತಿಯನ್ನು ನೋಡಿದಾಗಲೇ ಜನರಿಗೆ ಇಂದು ಇಂತಹ ಗ್ರಂಥಗಳಲ್ಲಿ ಆದರವು ಕಡಿಮೆಯಾಗಿದೆಯೋ ಎನ್ನಿಸುತ್ತದೆ. ಆದರೂ ಹರಿಗುರುಗಳ ಸೇವಾರೂಪವಾದ ಈ ಕಾರ್ಯವನ್ನು ಮುಂದುವರಿಸಿ ಬಹಳ ಸಾಹಸದಿಂದ ಎರಡನೆಯ ಭಾಗವನ್ನು ಹೊರತರಲಾಗಿದೆ. ನಮ್ಮ ಶಕ್ತಿಯನ್ನೇ ಮೀರಿ ಈ ಪುಸ್ತಕದ ಬೆಲೆಯನ್ನು ಸಾಧ್ಯವಿದ್ದಷ್ಟು ಕಡಿಮೆಯಾಗಿ ಇಡಲಾಗಿದೆ. ಮಾಧ್ವಬಂಧುಗಳು ಈ ಪುಸ್ತಕವನ್ನು ಕೊಂಡು ಲೇಖಕನ ಶ್ರಮವನ್ನು ಕಡಿಮೆ ಮಾಡುತ್ತಾರೆಂದು ಭರವಸೆಯನ್ನು ಇಟ್ಟುಕೊಂಡಿದ್ದೇನೆ.

೫ನೆಯ ಸರ್ಗದಲ್ಲಿ ಅನ್ವಯವನ್ನು ಕೊಟ್ಟಿದ್ದರೂ ಮುಂದೆ ಗ್ರಂಥವು ಬೆಳೆಯುವುದೆಂದೂ ಪುಟಗಳು ಹೆಚ್ಚುತ್ತವೆಯೆಂದೂ ತಿಳಿದು ಪ್ರತ್ಯೇಕವಾದ ಅನ್ವಯವನ್ನು ಕೊಡಲಿಲ್ಲ. ಅನ್ವಯಾರ್ಥದಲ್ಲಿಯೇ ಅನ್ವಯವನ್ನು ತಿಳಿಯಬಹುದು. ಅವತಾರಿಕಾ, ಶ್ಲೋಕ, ಅನ್ವಯಾನುಸಾರವಾಗಿ ಅರ್ಥ (ಅ.ಅ) ತಾತ್ಪರ್ಯ, ವಿಗ್ರಹ, ಧಾತುರೂಪ ಇವುಗಳನ್ನು ಕ್ರಮವಾಗಿ ಕೊಡಲಾಗಿದೆ.

ಶ್ರೀಮನ್ನಾರಾಯಣಪಂಡಿತಾಚಾರ್ಯರೇ ರಚಿಸಿರುವ ಭಾವಪ್ರಕಾಶಿಕಾ ಟಿಪ್ಪಣಿಯ ಅಂಶಗಳನ್ನು ತಾತ್ಪರ್ಯದಲ್ಲಿ ಸೇರಿಸಲಾಗಿದೆಯಲ್ಲದೆ, ಅಲ್ಲಲ್ಲಿ ಅಲ್ಲಿನ ಶ್ಲೋಕಗಳನ್ನೇ ಉದಾಹರಿಸಲಾಗಿದೆ. ವಿಗ್ರಹ ಎಂಬ ಶೀರ್ಷಿಕೆಯಲ್ಲಿ ಸಮಾನಪದಗಳ ಪುನರುಕ್ತಿಯಾಗದಂತೆ ಎಚ್ಚರಿಕೆ ವಹಿಸಿದೆ. ಉದಾ:— ಕಲಿಕಾಲಕಾಲಿತಗುಣೇ ಧರಾತಲೇ ಎಂಬಲ್ಲಿ (ಪುಟ ೩೦೪ ಶ್ಲೋಕ ೪೯) ಕಲೇಃ ಕಾಲಃ ಎಂದು ವಿಗ್ರಹವನ್ನು ತೋರಿಸಿದ ಅನಂತರ ಕಲಿಕಾಲಃ ಎಂಬ ಸಮಸ್ತಪದವನ್ನು ಕೊಟ್ಟಿಲ್ಲ. ಮುಂದೆ ಕಲಿಕಾಲೇನ ಕಾಲಿತಾಃ ಎಂಬ ವಿಗ್ರಹ

Rarest Archiver

ವನ್ನು ನೋಡಿದಾಗ ಹಿಂದಿನ ವಿಗ್ರಹದ ಸಮಾಸವು ಕಲಿಕಾಲ। ಎಂದು ಆಗಬೇಕೆಂದು ತಿಳಿಯಲು ಸಾಧ್ಯವಿದೆ. ಎಷ್ಟು ಸುಲಭವಾಗುವಂತೆ ತಿಳಿಸಿದರೂ ಇದು ಶಾಸ್ತ್ರಕಾವ್ಯವಾದುದರಿಂದ ಇನ್ನೂ ಕೆಲವು ಗಹನವಾದ ಅಂಶವನ್ನು ಬಿಡಿಸಲು ಸಾಧ್ಯವಾಗದೇ ಹೋಗಿರಬಹುದು ಅಥವಾ ಚೆನ್ನಾಗಿ ವಿವರಿಸಿದ್ದರೂ ತಿಳಿಯಲು ಇನ್ನೂ ಕಷ್ಟವಾಗಿರಲೂ ಬಹುದು. ಇದು ಮಹಾಮಂತ್ರರೂಪವಾದ ಶ್ರೇಷ್ಠಗ್ರಂಥ. ಇದನ್ನು ಗುರುಗಳ ಮೂಲಕವೇ ಅಧ್ಯಯನಮಾಡಬೇಕಾಗಿದೆ. ಆದರೂ ಸಂಸ್ಕೃತಬಾರದ ಮಾಧ್ವಬಂಧುಗಳಿಗೆ ಉಪಕಾರವಾಗಲೆಂದು ಕನ್ನಡದಲ್ಲಿ ಸಾಧ್ಯವಿದ್ದಷ್ಟು ಸುಲಭೀಕರಿಸಿ ವ್ಯಾಖ್ಯಾನಮಾಡಿ ಕೊಡಲಾಗಿದೆ.

ಈ ಗ್ರಂಥವನ್ನು ಪರಿಶೀಲಿಸಿ ತಮ್ಮ ಅನುಗ್ರಹವಚನವನ್ನು ದಯಪಾಲಿಸಿ ನನ್ನನ್ನು ಆಶೀರ್ವದಿಸಿದ ಉಡುಪಿ ಪಲಿಮಾರು-ಭಂಡಾರಕೇರಿ ಉಭಯ ಮಠಾಧೀಶರೂ ಮುಂದಿನ ಪರ್ಯಾಯಪೀಠವನ್ನು ಏರಲಿರುವವರೂ ಆದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರ ಪಾದಕಮಲಗಳಲ್ಲಿ ಅನೇಕ ಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸುತ್ತೇನೆ.

ಕೊನೆಯದಾಗಿ ಈ ಗ್ರಂಥವನ್ನು ಬಹಳ ಶ್ರದ್ಧೆಯಿಂದ ಚೆನ್ನಾಗಿ ಮುದ್ರಿಸಿ ಅನುಕೂಲಮಾಡಿಕೊಟ್ಟ ಶ್ರೀ ವಿಜಯ ಮುದ್ರಣಾಲಯಾಧಿಕಾರಿಗಳಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು.

ಕ್ರೋಧನ ಸಂ. ನಿಜಶ್ರಾವಣ
ಬಹುಳ ದ್ವಿತೀಯಾ
೧-೯-೧೯೮೫
ಬೆಂಗಳೂರು

ಇತಿ ಹರಿಭಕ್ತರ ಪಾದಸೇವಕ
ಆಚಾರ್ಯ ಸಾಣೂರು ಭೀಮಭಟ್ಟ

Rarest Archive

ವಿಷಯಾನುಕ್ರಮಣಿಕಾ

ಐದನೆಯ ಸರ್ಗ ಕಥಾಸಾರ—

೧ ಪೂರ್ಣಪ್ರಜ್ಞರು ಆನಂದತೀರ್ಥರಾದರು. ೧

೨ ಆನಂದತೀರ್ಥರು ಅಚ್ಯುತಪ್ರೇಕ್ಷರ ಮಿತ್ರ್ರಯತಿಗಳ ಶಿಷ್ಯರನ್ನು ಸೋಲಿಸಿದರು. ೪

೩ ವಾದಿಸಿಂಹಬುದ್ಧಿಸಾಗರರ ಪರಾಜಯ. ೧೩

೪ ಶಾಂಕರಭಾಷ್ಯದಲ್ಲಿ ದೋಷಗಳ ಉದ್ಘಾಟನೆ. ೨೫

೫ ಆನಂದತೀರ್ಥರಿಗೆ ಆಕ್ಷೇಪಪೂರ್ವಕವಾಗಿ ಭಾಷ್ಯಮಾಡಲು ಅಪ್ಪಣೆ. ೩೫

೬ ಇನ್ನೂರು ಬಾಳೆಹಣ್ಣುಗಳ ಸ್ವೀಕಾರ. ೪೩

೭ ಅನಂತಶಯನದಲ್ಲಿ ಮಣಿಮಂತಸಂಕರನ ಜತೆಗೆ ವಾದ ೫೧

೮ ರಾಮೇಶ್ವರದಲ್ಲಿ ಚಾತುರ್ಮಾಸ್ಯ. ೬೦

೯ ಪಯಸ್ವಿನೀತೀರದ ದೇವಾಲಯಕ್ಕೆ ಆಗಮನ. ೬೮

ಆರನೆಯಸರ್ಗ ಕಥಾಸಾರ— ೭೫

೧೦ ಐತರೇಯಮಂತ್ರಾರ್ಥ ವಿವರಣ. ೭೮

೧೧ ಸಹಸ್ರನಾಮದಲ್ಲಿ ವಿಶ್ವಶಬ್ದಾರ್ಥನಿರ್ವಚನ. ೮೨

೧೨ ಕೇರಳದ ಬ್ರಾಹ್ಮಣರ ಪರಾಜಯ. ೮೯

೧೩ ಅಪಾಲಾಶಬ್ದಾರ್ಥವನ್ನು ಹೇಳುವ ಸಂದರ್ಭದಲ್ಲಿ ತೋರಿದ ಮಹಿಮೆ. ೯೮

೧೪ ವೇದವ್ಯಾಖ್ಯಾನ ಪ್ರತಿಜ್ಞೆ. ೧೦೭

೧೫ ಜ್ಯೇಷ್ಠಯತಿಗಳಿಗೆ ಗೀತಾಭ್ಯಾಸವನ್ನು ಕೊಟ್ಟು ಉತ್ತರದಿಗ್ವಿಜಯಪ್ರಯಾಣ. ೧೧೯

Rarest Archiver

೧೬	ಬದರಿಯಲ್ಲಿ ನಾರಾಯಣದೇವರಿಗೆ ಗೀತಾಭಾಷ್ಯಾರ್ಪಣ.	೧೨೭
೧೭	ವೇದವ್ಯಾಸರ ಆಜ್ಞೆಯಂತೆ ಉತ್ತರಬದರಿಪ್ರಯಾಣ.	೧೩೭
೧೮	ಹಿಮಾಲಯದರ್ಶನ, ಶ್ರೀಹರಿಧ್ಯಾನ.	೧೪೬
	ಏಳನೆಯಸರ್ಗ ಕಥಾಸಾರ—	೧೫೫
೧೯	ಬದರಿಕಾಶ್ರಮವರ್ಣನ.	೧೫೬
೨೦	ಆಚಾರ್ಯರನ್ನು ಕಂಡು ಬದರಿಯಲ್ಲಿರುವ ಋಷಿಗಳ ಊಹಾಪೋಹಗಳು.	೧೬೧
೨೧	ಬದರೀವೃಕ್ಷವರ್ಣನೆ ಮತ್ತು ವೇದವ್ಯಾಸವರ್ಣನೆ.	೧೬೬
೨೨	ವೇದವ್ಯಾಸನಮನ, ಆಚಾರ್ಯರಿಗೆ ಸತ್ಕಾರ.	೨೧೧
	ಎಂಟನೆಯಸರ್ಗ ಕಥಾಸಾರ—	೨೨೬
೨೩	ನಾರಾಯಣ ಸಂದರ್ಶನ.	೨೨೯
೨೪	ಶ್ರೀಮನ್ನಾರಾಯಣವರ್ಣನ, ವಂದನ.	೨೩೯
೨೫	ಬ್ರಹ್ಮಸೂತ್ರಭಾಷ್ಯಮಾಡಲು ಅಪ್ಪಣೆ.	೨೦೧
೨೬	ಭಾಷ್ಯರಚನಾಂಗೀಕಾರ.	೩೦೫

Rarest Archiver

ಕೆಲವು ತಿದ್ದುಪಡಿಗಳು

ಪುಟ ೧೦ ಪಂಕ್ತಿ ೯ ರಲ್ಲಿ ಯಥಾರ್ಥ ಎಂಬ ಪದವನ್ನು ಬಿಟ್ಟು ಜ್ಞಾನಕ್ಕೆ ವಿಷಯವಲ್ಲ ಎಂದು ಓದಿಕೊಳ್ಳಬೇಕು.

ಪುಟ ೭ರಲ್ಲಿ ಭೇದಪರಂಪರೆಯಿಂದ ಅನವಸ್ಥಾದೋಷವೆಂದು ತಿಳಿಯಬೇಕು. ಮತ್ತು ಇತರರ ರೀತಿಯಿಂದ ಭೇದವನ್ನು ಸಾಧಿಸುವುದು ಬಹಳಕಷ್ಟ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎಂದು ಮಾತ್ರ ತಿಳಿಯಬೇಕು.

ಪುಟ ೨೩೦ರಲ್ಲಿ ತಾತ್ಪರ್ಯದಲ್ಲಿ ಮೆಲ್ಲನೆ ಬಂದರು ಆದ ಮೇಲೆ ವಿಗ್ರಹ ಹೀಗೆ ತಿಳಿಯಬೇಕು—ಪ್ರತಿಭಾ ಚ ಪ್ರಭಾ ಚ (ಪ್ರಭಾವಶ್ಚ) ತೇ (ತೌ) ಪ್ರಮುಖೇ (ಮುಖೇ) ಯೇಷಾಂತೇ, ಸಂತಶ್ಚ ತೇ ಗುಣಾಶ್ಚ, ಪ್ರತಿಭಾ-ಮುಖಾಶ್ಚತೇ ಸದ್ಗುಣಾಶ್ಚ ಪ್ರತಿಭಾಪ್ರಭಾ (ವ) ಪ್ರಮುಖಸದ್ಗುಣಾಃ ತೈಃ, ನಿಯಮಃ ಏಷಾಂ ಅಸ್ತೀತಿ ತೇಷಾಂ, ಪುರುಃ ಧೀಃ ಯಸ್ಯ ಸಃ, ವೇದಾನಾಂ ನಾಯಕಃ ತಂ.

Rarest Archiver

Rarest Archiver

॥ ಶ್ರೀ ಗುರುಭ್ಯೋನಮಃ ॥

ಶ್ರೀಮಧ್ವವಿಜಯಮಹಾಕಾವ್ಯಂ

ಐದನೆಯಸರ್ಗದಕಥಾಸಾರಾಂಶ

ತರುವಾಯ ಅಚ್ಯುತಪ್ರೇಕ್ಷಾಚಾರ್ಯರು ವೇದಾಂತಸಾಮ್ರಾಜ್ಯವನ್ನು ಪಾಲಿಸಲು ಈ ಪೂರ್ಣಪ್ರಜ್ಞರೇ ಅರ್ಹರೆಂದು ತಿಳಿದು ಅವರಿಗೆ **ಆನಂದತೀರ್ಥ** ಎಂಬ ಹೆಸರನ್ನಿಟ್ಟು ಪಟ್ಟಾಭಿಷೇಕಮಾಡಿದರು. ಒಂದು ದಿನ ಅಚ್ಯುತಪ್ರೇಕ್ಷರ ಸ್ನೇಹಿತರಾದ ಯತಿಗಳೊಬ್ಬರು ತರ್ಕಪಂಡಿತರಾದ ತಮ್ಮ ಶಿಷ್ಯರೊಡನೆ ಬಂದಾಗ ಉದ್ಧತರಾದ ಆ ಶಿಷ್ಯರು ಆನಂದತೀರ್ಥರನ್ನು ಜಯಿಸಲು ವಾದವನ್ನಾರಂಭಿಸಿದರು. ಪೂರ್ಣಪ್ರಜ್ಞರು ಅವರ ಮಾತುಗಳನ್ನು ಅನುಮಾನಗಳಿಂದ ಖಂಡಿಸಿ **ಅನುಮಾನತೀರ್ಥ**ರೆಂದು ಹೆಸರು ಪಡೆದರು. ಹೀಗೆಯೇ ಒಂದಾನೊಂದುದಿನ ವಾದಿಸಿಂಹ ಮತ್ತು ಬುದ್ಧಿಸಾಗರ ಎಂಬ ಇಬ್ಬರು ಬೌದ್ಧಪಂಡಿತರು ಅಚ್ಯುತಪ್ರೇಕ್ಷರ ಬಳಿಗೆ ವಾದಕ್ಕಾಗಿ ಬಂದರು. ಕೂಡಲೇ ಅಚ್ಯುತಪ್ರೇಕ್ಷರು ಬೇರೊಂದು ಮಠದಲ್ಲಿದ್ದ ಆನಂದತೀರ್ಥರನ್ನು ಕರೆಸಿದರು. ಅವರು ಬಂದು ಕುತೂಹಲಿಗಳಾದ ಜನರ ನಡುವೆ ವಾದಿಸಿಂಹನ ಮಾತುಗಳನ್ನು ಖಂಡಿಸಿದರು. ಆದರೆ ಅವನು ಮರಳಿ ಅಸೂಯೆಯಿಂದ ಒಂದು ವಿಷಯವನ್ನು ಹದಿನೆಂಟು ರೀತಿಗಳಿಂದ ವಿಕಲ್ಪಿಸಿ ತನ್ನ ವಾದವನ್ನು ಮುಂದುವರಿಸಿದಾಗ ಅಲ್ಲಿದ್ದ ಜನರು ಇವನನ್ನು ಪೂರ್ಣಪ್ರಜ್ಞರು ಜಯಿಸಲಾರರೆಂದು ಸಂಶಯಪಟ್ಟರು. ಆನಂದತೀರ್ಥರು ಅವನ ವಿಕಲ್ಪಗಳನ್ನು ಖಂಡಿಸಿ, ಅವನನ್ನೂ ಬುದ್ಧಿಸಾಗರನನ್ನೂ ಜಯಿಸಿದರು. ಸೋತ ಅವರಿಬ್ಬರೂ ನಾಳೆ ಪುನಃ ವಾದಿಸೋಣ ಎಂದರು. ಆನಂದತೀರ್ಥರು ಉತ್ತರ ತಿಳಿದರೆ ಈಗಲೇ ಹೇಳಿರಿ ಎಂದರು. ಆ ವಾದಿಗಳು ಮಾತನಾಡದೆ ರಾತ್ರಿವೇಳೆಯೇ ಅಲ್ಲಿಂದ ಓಡಿಹೋದರು.

ಒಂದಾನೊಂದು ದಿನ ಆನಂದತೀರ್ಥರು ತರ್ಕಪಂಡಿತರ ಸಭೆಯಲ್ಲಿ ಶಂಕರಾಚಾರ್ಯರಿಂದ ರಚಿತವಾದ ಭಾಷ್ಯವನ್ನು ವಿವರಿಸುತ್ತಾ ಬ್ರಹ್ಮಸೂತ್ರಗಳಿಗೂ ಈ ಭಾಷ್ಯಕ್ಕೂ ಸಂಬಂಧವೇ ತೋರುವುದಿಲ್ಲವೆಂದರು. ಅಲ್ಲಿದ್ದ ಪಂಡಿತರು

Rarest Archiver

ಸಮಾಧಾನವನ್ನು ಹೇಳಲು ತೋಚದೆ ನೀವೇ ಸರಿಯಾದ ಅರ್ಥವನ್ನು ಹೇಳಿ ಎಂದರು. ಕೂಡಲೇ ಆನಂದತೀರ್ಥರು ನಿಷ್ಕೃಷ್ಟವಾದ ಸೂತ್ರಾರ್ಥವನ್ನು ಹೇಳಿದರು. ಅನಂತರ ಅವರು ತನ್ನನ್ನು ಜಯಿಸಲು, ಅಥವಾ ತತ್ತ್ವವನ್ನು ತಿಳಿಯಲು ಬಂದ ಅನೇಕಮಂದಿಯನ್ನು ಯುಕ್ತಿಯುಕ್ತವಾದ ಮಾತುಗಳಿಂದ ಸಮಾಧಾನಗೊಳಿಸಿದರು.

ಒಂದಾನೊಂದುದಿನ ಮಗನಲ್ಲಿ ಹಿಂದೆ ಬೇಸರಪಟ್ಟಿದ್ದ ಮಧ್ಯಗೇಹಭಟ್ಟರು ಆಚಾರ್ಯರಿದ್ದಲ್ಲಿಗೆ ಬಂದು ಅವರ ತೇಜಸ್ಸು ಮತ್ತು ಪ್ರವಚನಗಳನ್ನು ಕಂಡು ಕೇಳಿ ಆನಂದಪಟ್ಟರು. ಅಚ್ಯುತಪ್ರೇಕ್ಷರಿಗೂ ಆನಂದತೀರ್ಥರಿಗೂ ಬ್ರಹ್ಮಸೂತ್ರಗಳ ಅರ್ಥದ ವಿಷಯದಲ್ಲಿ ಆಗಾಗ್ಗೆ ಭಿನ್ನಾಭಿಪ್ರಾಯಗಳು ತಲೆದೋರುತ್ತಿದ್ದುವು. ಒಂದು ಬಾರಿ ಗುರುಗಳು ಸಿಟ್ಟಾಗಿ 'ನಿನಗೆ ಸೂತ್ರಾರ್ಥಗಳು ಸರಿಯಾಗಿ ತಿಳಿದಿದ್ದರೆ ಅವುಗಳಿಗೆ ಬೇರೆ ಭಾಷ್ಯವನ್ನು ಬರಿ' ಎಂದರು. ಆಚಾರ್ಯರು ಕುಪಿತರಾಗದೆ ಗುರುಗಳ ಮಾತಿನ 'ಬರಿ' ಎಂಬ 'ವಿಧಿಯ' ಅಂಶವನ್ನು ಸ್ವೀಕರಿಸಿ ಲಿಕುಚ ವಂಶದ ಹಿರಿಯ ಸಂನ್ಯಾಸಿಯೊಬ್ಬರಿಗೆ ಅವರ ಅಪೇಕ್ಷೆಯಂತೆ ಸರಿಯಾದ ಸೂತ್ರಾರ್ಥವನ್ನು ಹೇಳಿದರು.

ಹೀಗೆಯೇ ಶ್ರೀಮಧ್ವಾಚಾರ್ಯರು ದಕ್ಷಿಣದೇಶದ ವಿದ್ವಾಂಸರನ್ನು ಜಯಿಸಲು ಇಚ್ಛಿಸಿ ಗುರುಗಳೊಡನೆ ವಿಷ್ಣುಮಂಗಲವೆಂಬ ದೇವಾಲಯಕ್ಕೆ ಹೋದರು. ಅಲ್ಲಿ ಒಬ್ಬ ಗೃಹಸ್ಥನು ಭಿಕ್ಷೆಯ ಕೊನೆಯಲ್ಲಿ ಆಚಾರ್ಯರ ಭೋಜನ ಶಕ್ತಿಯನ್ನು ಪರೀಕ್ಷಿಸಲು ಇನ್ನೂರಕ್ಕಿಂತ ಹೆಚ್ಚು ಬಾಳೆಹಣ್ಣುಗಳನ್ನು ತಿನ್ನಲು ಕೊಟ್ಟನು. ಅವನ್ನೆಲ್ಲಾ ತಿಂದರೂ ಯಾವ ವಿಧವಾದ ಆಯಾಸ ಹೊಟ್ಟೆಉಬ್ಬರ ಇತ್ಯಾದಿಗಳು ಇಲ್ಲದಿರುವುದನ್ನು ನೋಡಿ ಗುರುಗಳು ರಹಸ್ಯದಲ್ಲಿ ಇದೆಲ್ಲಾ ಹೇಗೆ ಸಾಧ್ಯವಾಯಿತು ಎಂದು ಕೇಳಿದಾಗ ಆಚಾರ್ಯರು ನನ್ನ ಹೊಟ್ಟೆಯಲ್ಲಿ ನನ್ನ ಹೆಬ್ಬೆಟ್ಟಿನ ಗಾತ್ರದ ಪ್ರಪಂಚವನ್ನೇ ಸುಡಬಲ್ಲ ನನಗೆ ಹಿತಕರವಾದ ಅಗ್ನಿಯಿದೆ. ಆದರಿಂದ ಈರೀತಿಯ ಭೋಜನವು ಸಾಧ್ಯವಾಗುತ್ತದೆ ಎಂದರು. ಆಚಾರ್ಯರು ಅಲ್ಲಿಂದ ಮುಂದೆ ಹೋಗುತ್ತಾ ಅನೇಕವಾದಗಳನ್ನು ಖಂಡಿಸಿ ಪಯಸ್ವಿನೀತೀರದಲ್ಲಿ ಅವತರಿಸಲಿರುವ ದುರ್ಗೆಯನ್ನು ಸ್ಮರಿಸಿದರು. ಅನಂತಶಯನಕ್ಕೆ ಹೋಗಿ ಅಲ್ಲಿ ವಿದ್ವಾಂಸರ ಸಭೆಯಲ್ಲಿ ಶಿಷ್ಯರಿಗೆ ಬ್ರಹ್ಮಸೂತ್ರಪ್ರವಚನಮಾಡುತ್ತಾ

Rarest Archiver

ವಿಷ್ಣುವು ಸರ್ವಗುಣಪರಿಪೂರ್ಣನು, ಸಮಸ್ತಜೀವರಿಗಿಂತ ಭಿನ್ನನು ಎಂದು ಉಪದೇಶಿಸಿದರು. ಕುದ್ಯಪುಸ್ತೂರಾಯವಂಶದಲ್ಲಿ ಎರಡನೆಯ ಬಾರಿ ಹುಟ್ಟಿದ್ದ ಮಣಿಮಂತದೈತ್ಯನು ಆಚಾರ್ಯರು ಭಾಷ್ಯಕಾರರಲ್ಲದ್ದರಿಂದ ಸೂತ್ರಾರ್ಥವನು ಹೇಳಬಾರದೆಂದನು. ಆಗ ಆಚಾರ್ಯರು–ನಿನಗೆ ನನ್ನ ಮಾತನ್ನು ಖಂಡಿಸುವ ಶಕ್ತಿಯಿದ್ದರೆ ಹೇಳು. ನಾನೂ ಸೂತ್ರಭಾಷ್ಯವನ್ನು ಬರೆಯಲಿದ್ದೇನೆ. ಅದನ್ನು ತಡೆಯುವವರಾರು ? ಎಂದಾಗ ವಿದ್ವಾಂಸರು ಆನಂದಪಟ್ಟು, ಅವರ ಮಾತನ್ನು ಅಭಿನಂದಿಸಿ ಅವರ ಶರೀರದಲ್ಲಿ ಮಹಾಪುರುಷರ ಮೂವತ್ತ ಎರಡು ಲಕ್ಷಣಗಳಿವೆ ಎಂದು ಹೊಗಳಿದರು. ಸಂಕರನ ಪಕ್ಷದವರು ಸಂಕರನ ಸೊಂಟದ ಕೆಳಭಾಗ ದಪ್ಪ ವಾಗಿದೆ ಎಂದು ಮಾತ್ರ ಹೊಗಳಿದರು. ಆಚಾರ್ಯರು ಸೊಂಟದ ಕೆಳಭಾಗ ದಪ್ಪ ವಾಗಿರುವುದು ಅಪಲಕ್ಷಣವೆಂದು ಶಾಸ್ತ್ರಾಧಾರದಿಂದ ಹೇಳಿದಾಗ ಸಿಟ್ಟುಗೊಂಡ ಆ ಯತಿಯು ಇವರ ದಂಡವನ್ನು ತುಂಡರಿಸುತ್ತೇನೆಂದು ಪ್ರತಿಜ್ಞೆ ಮಾಡಿದನು.

ಅನಂತರ ಆಚಾರ್ಯರು ಅನಂತಶಯನ ಕನ್ಯಾಕುಮಾರೀತೀರ್ಥಗಳಲ್ಲಿ ಸ್ನಾನಮಾಡಿ ರಾಮೇಶ್ವರಕ್ಕೆ ತೆರಳಿ ಲಿಂಗಾಂತರ್ಯಾಮಿಯಾದ ಹರಿಯನ್ನು ವಂದಿಸಿದರು, ಅಲ್ಲಿ ತನಗೆ ಎದುರಾದ ಆ ಯತಿಯನ್ನು ಕುರಿತು ತನ್ನ ದಂಡ ವನ್ನು ತೋರಿಸಿ –ನಿನಗೆ ಶಕ್ತಿ ಇದ್ದರೆ ನನ್ನ ದಂಡವನ್ನು ಮುರಿ ಎಂದು ಹೇಳಿ ದಾಗ ಅವನು ನಾಚಿಕೆಯಿಂದ ತಲೆ ತಗ್ಗಿಸಿ ಅಲ್ಲಿದ್ದ ಬ್ರಾಹ್ಮಣರ ಸಹಾಯವನ್ನು ಯಾಚಿಸಿ ವಿಫಲನಾದನು. ಆಚಾರ್ಯರು ರಾಮೇಶ್ವರದಲ್ಲಿ ಚಾತುರ್ಮಾಸ್ಯವನ್ನು ಮುಗಿಸಿ ಶ್ರೀರಂಗಕ್ಕೆ ಬಂದು ರಂಗನಾಥನನ್ನು ವಂದಿಸಿ ಅಲ್ಲಿಂದ ಉತ್ತರಕ್ಕೆ ಪ್ರಯಾಣ ಮಾಡುತ್ತಾ ಅನೇಕಮಹಿಮೆಗಳನ್ನು ತೋರಿಸುತ್ತಾ ಪಯಸ್ವಿನೀ ನದಿಯ ದಡದಲ್ಲಿರುವ ಒಂದು ದೇವಾಲಯವನ್ನು ಪ್ರವೇಶಿಸಿದರು. ಅಲ್ಲಿ ಸಾಂಗ ವೇದಾಧ್ಯಯನಮಾಡಿದ ಪಂಡಿತರು ಸೇರಿದ್ದರು. ಇತರರೂ ಸುಂದರರಾದ ಆಚಾರ್ಯರನ್ನು ನೋಡಲು ಅಲ್ಲಿಗೆ ಬಂದರು. ಆಚಾರ್ಯರು ಆ ಸಭಾಮಧ್ಯದಲ್ಲಿ ಸೂರ್ಯನಂತೆ, ಸಿಂಹದಂತೆ, ಚಂದ್ರನಂತೆ ತೇಜಸ್ವಿಗಳಾಗಿ ಧೈರ್ಯಶಾಲಿಗಳಾಗಿ ಆನಂದಪ್ರದರಾಗಿ ಶೋಭಿಸಿದರು.

Rarest Archiver

ಶ್ರೀಸುಮಧ್ವವಿಜಯಮಹಾಕಾವ್ಯಂ

ಐದನೆಯ ಸರ್ಗ

ಶ್ರೀ ಪೂರ್ಣಪ್ರಜ್ಞಾಚಾರ್ಯರ ದಕ್ಷಿಣದಿಗ್ವಿಜಯವು

ಅವತಾರಿಕಾ — ಅಚ್ಯುತಪ್ರೇಕ್ಷಾಚಾರ್ಯರು ವೇದಾಂತವಿದ್ಯಾ ಸಾಮ್ರಾಜ್ಯದ ರಕ್ಷಣೆಗಾಗಿ ಪೂರ್ಣಪ್ರಜ್ಞಾಚಾರ್ಯರಿಗೆ ಪಟ್ಟಾಭಿಷೇಕ ಮಾಡಿದರೆಂದು ಹೇಳುತ್ತಾರೆ—

ವೇದಾಂತವಿದ್ಯಾನಿಜರಾಜ್ಯಪಾಲನೇ
ಸಂಕಲ್ಪ್ಯಮಾನೋ ಗುರುಣಾ ಗರೀಯಸಿ
ಅದಭ್ರಚೇತಾ ಅಭಿಷಿಚ್ಯತೇ ಪುರಾ
ಸ ವಾರಿಭಿರ್ವಾರಿಜಪೂರಿತೈರಥ ॥೧॥

ಅನ್ವಯ — ಅಥ ಗರೀಯಸಿ ವೇದಾಂತವಿದ್ಯಾನಿಜರಾಜ್ಯಪಾಲನೇ ಸಂಕಲ್ಪ್ಯಮಾನಃ ಸಃ ಅದಭ್ರಚೇತಾಃ ಗುರುಣಾ ವಾರಿಜಪೂರಿತೈಃ ವಾರಿಭಿಃ ಅಭಿಷಿಚ್ಯತೇ ಪುರಾ ।

ಅನ್ವಯಾರ್ಥ — ಅಥ = ಸ್ವಲ್ಪಸಮಯದ ಅನಂತರ, ಗರೀಯಸಿ = ಅತ್ಯುತ್ತಮವಾದ, ವೇದಾಂತವಿದ್ಯಾನಿಜರಾಜ್ಯಪಾಲನೇ = ಬ್ರಹ್ಮಮೀಮಾಂಸಾ ಶಾಸ್ತ್ರವೆಂಬ ತನ್ನ ರಾಜ್ಯದ ರಕ್ಷಣೆಯಲ್ಲಿ, ಸಂಕಲ್ಪ್ಯಮಾನಃ = ಸಂಕಲ್ಪಿಸಲ್ಪಡುತ್ತಿರುವ, ಸಃ = ಆ, ಅದಭ್ರಚೇತಾಃ = ಶ್ರೀಪೂರ್ಣಪ್ರಜ್ಞಾಚಾರ್ಯರು, ಗುರುಣಾ = ಗುರುಗಳಾದ ಅಚ್ಯುತಪ್ರೇಕ್ಷಾಚಾರ್ಯರಿಂದ, ವಾರಿಜಪೂರಿತೈಃ = ಶಂಖದಲ್ಲಿ ತುಂಬಿದ, ವಾರಿಭಿಃ = ನೀರುಗಳಿಂದ, ಅಭಿಷಿಚ್ಯತೇ ಪುರಾ = ಅಭಿಷೇಕಿಸಲ್ಪಟ್ಟರು.

Rarest Archiver

ತಾತ್ಪರ್ಯ—ಹಿಂದಿನ ಸರ್ಗದ ಕೊನೆಯಲ್ಲಿ ಹೇಳಿದಂತೆ ಆಚಾರ್ಯರು ಭಾಗವತ ವ್ಯಾಖ್ಯಾನಾದಿಗಳನ್ನು ಮಾಡುತ್ತಾ, ಇತರ ಗ್ರಂಥಗಳ ಪ್ರವಚನ ಮಾಡುತ್ತಾ ಇದ್ದರು. ಕೆಲವು ಸಮಯದ ನಂತರ ಗುರುಗಳಾದ ಅಚ್ಯುತ ಪ್ರೇಕ್ಷಾಚಾರ್ಯರು ಮಹತ್ತಾದ ವೇದಾಂತವಿದ್ಯೆಯೆಂಬ ಸಾಮ್ರಾಜ್ಯದ ಪರಿಪಾಲನ ಕಾರ್ಯದಲ್ಲಿ ಈ ಪೂರ್ಣಪ್ರಜ್ಞಾಚಾರ್ಯನೇ ಸಮರ್ಥನೆಂದು ಮನಸ್ಸಿನಲ್ಲಿ ಸಂಕಲ್ಪಿಸಿದರು. ಅವರು 'ಶ್ರೀಪೂರ್ಣಪ್ರಜ್ಞಾಚಾರ್ಯರು ವೇದಾಂತಶಾಸ್ತ್ರವನ್ನು ಶಿಷ್ಯರಿಗೆ ಉಪದೇಶಿಸುತ್ತಾ, ಸಜ್ಜನರಲ್ಲಿ ಸತ್‌ಸಂಪ್ರದಾಯವನ್ನು ಬೆಳೆಸುತ್ತಾ, ದುರ್ವಾದಿಗಳ ಮತಗಳನ್ನು ನಿರಾಕರಿಸುತ್ತಾ ವೇದಾಂತವಿದ್ಯಾರಾಜ್ಯವನ್ನು ಕಾಪಾಡುತ್ತಿರಲಿ' ಎಂದು ಸಂಕಲ್ಪಿಸಿ ಶಂಖದಲ್ಲಿ ಶುದ್ಧಜಲವನ್ನು ತುಂಬಿ ಶ್ರೀಪೂರ್ಣಪ್ರಜ್ಞಾಚಾರ್ಯರಿಗೆ ವೇದಾಂತರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿದರು.

ವಿಗ್ರಹ — ವೇದಾನಾಂ ಅಂತಃ ಯಯಾ ಸಾ ವೇದಾಂತಾ, ವೇದಾಂತಾ ಚ ಸಾ ವಿದ್ಯಾ ಚ ವೇದಾಂತವಿದ್ಯಾ, ನಿಜಂ ಚ ತತ್ ರಾಜ್ಯಂ ಚ ನಿಜರಾಜ್ಯಂ, ವೇದಾಂತವಿದ್ಯೈವ ನಿಜರಾಜ್ಯಂ ವೇದಾಂತವಿದ್ಯಾನಿಜರಾಜ್ಯಂ, ವೇದಾಂತವಿದ್ಯಾನಿಜರಾಜ್ಯಸ್ಯ ಪಾಲನಂ ವೇದಾಂತವಿದ್ಯಾನಿಜರಾಜ್ಯಪಾಲನಂ ತಸ್ಮಿನ್, ಸಂಕಲ್ಪ್ಯತೇ ಅಸೌ ಸಂಕಲ್ಪ್ಯಮಾನಃ, ಅತಿಶಯೇನ ಗುರು ಗರೀಯಃ ತಸ್ಮಿನ್, ಅದಭ್ರಂ ಚೇತಃ ಯಸ್ಯ ಸಃ ಅದಭ್ರಚೇತಾಃ, ವಾರಿಣಿ ಜಾಯತೇ ಇತಿ ವಾರಿಜಃ (ಶಂಖಃ) ವಾರಿಜೇ ಪೂರಿತಾನಿ ವಾರಿಜಪೂರಿತಾನಿ ತೈಃ; ಅದಭ್ರ= ಬಹಳ, ಪೂರ್ಣ, ಅದಭ್ರಂ ಬಹುಲಂ ಬಹು—ಅಮರ. ವಾರಿಜ= ಶಂಖ, ಲವಣಾಂಬುಜಯೋರಬ್ಜಂ ಕ್ಲೀಬೇ ಶಂಖೇ ತು ಪುಂಸಿ ಚ ಭಾಸ್ಕರಃ. ಅಬ್ಜಂ (ನಪುಂಸಕ) ಉಪ್ಪು, ಕಮಲ, ಅಬ್ಜಃ ವಾರಿಜಃ ಪುಲ್ಲಿಂಗ, ಶಂಖ.

ಕ್ರಿಯಾಪದ—ಅಭಿಷಿಚ್ಯತೇ, ಅಭಿ+ಸಿಚ್ಯತೇ ಸಿಚ್ಯೇತೇ ಸಿಚ್ಯಂತೇ ಸಿಚ್ಯಸೇ ಸಿಚ್ಯೇಥೇ ಸಿಚ್ಯಧ್ವೇ, ಸಿಚ್ಯೇ ಸಿಚ್ಯಾವಹೇ ಸಿಚ್ಯಾಮಹೇ, ಷಿಚ (ಸಿಚ್) ಕ್ಷರಣೇ sprinkle, ಸಕ. ಅನಿಟ್. ಕರ್ಮಣಿ ಲಟ್. ಅಭಿಷಿಚ್ಯತೇ ಪುರಾ-ಎಂಬಲ್ಲಿ ಯಾವತ್‌ಪುರಾನಿಪಾತಯೋರ್ಲಟ್ ಎಂಬ ಸೂತ್ರದಿಂದ ಭೂತ ಕಾಲದ ಅರ್ಥದಲ್ಲಿ ಲಟ್ (ವರ್ತಮಾನಕಾಲ) ಪ್ರಯೋಗ.

Rarest Archiver

ವೃತ್ತ — ಇಲ್ಲಿ ಇಂದ್ರವಂಶಾವೃತ್ತ — ಲಕ್ಷಣ —'ತಚ್ಚೇಂದ್ರವಂಶಾ ಗದಿತಾ ತತೌ ಜರೌ'.

ಅವ—ಗುರುಗಳು ಪಟ್ಟಾಭಿಷೇಕಾನಂತರದಲ್ಲಿ ಪೂರ್ಣಪ್ರಜ್ಞರ ವಿದ್ಯಾ-ಬುದ್ಧಿಗಳಿಗೆ ಮೆಚ್ಚಿ **ಆನಂದತೀರ್ಥ** ಎಂಬುದಾಗಿ ಕೊಟ್ಟ ಪಟ್ಟಾಭಿಷೇಕದ ಅನಂತರದ ಹೆಸರು ಅನ್ವರ್ಥಕವಾಯಿತು ಎಂದು ಹೇಳುತ್ತಾರೆ—

ಆನಂದರೂಪಸ್ಯ ಪರಸ್ಯ ಪಾತ್ರಧೀ
ರಾನಂದಸಂದಾಯಿಸುಶಾಸ್ತ್ರಕೃತ್ ಸ ಯತ್
ಆನಂದತೀರ್ಥೇತಿಪದಂ ಗುರೂದಿತಂ
ಬಭೂವ ತಸ್ಯಾತ್ಯನುರೂಪರೂಪಕಮ್ ॥೨॥

ಅ — ಯತ್ ಸಃ ಆನಂದರೂಪಸ್ಯ ಪರಸ್ಯ ಪಾತ್ರಧೀಃ ಆನಂದ-ಸಂದಾಯಿಸುಶಾಸ್ತ್ರಕೃತ್ (ತತ್) ಗುರೂದಿತಂ ಆನಂದತೀರ್ಥೇತಿಪದಂ ತಸ್ಯ ಅತ್ಯನುರೂಪರೂಪಕಂ ಬಭೂವ।

ಅ.ಅ.—ಯತ್ = ಯಾವಕಾರಣದಿಂದ, ಸಃ = ಆಪೂರ್ಣಪ್ರಜ್ಞರು, ಆನಂದರೂಪಸ್ಯ = ಸುಖಸ್ವರೂಪನಾದ, ಪರಸ್ಯ = ಸರ್ವೋತ್ತಮನಾದ ಶ್ರೀ ಹರಿಗೆ, ಪಾತ್ರಧೀಃ = ಆವಾಸಸ್ಥಾನವಾದ ಬುದ್ಧಿ ಉಳ್ಳವರಾಗಿದ್ದಾರೋ, ಆನಂದಸಂದಾಯಿ = ಆನಂದವನ್ನು ಕೊಡುವ, ಸುಶಾಸ್ತ್ರಕೃತ್ = ಒಳ್ಳೆಯ ಶಾಸ್ತ್ರವನ್ನು ಮಾಡುವರೋ, ತತ್ = ಆಕಾರಣದಿಂದ, ಗುರೂದಿತಂ = ಗುರುಗಳಿಂದ ಹೇಳಲ್ಪಟ್ಟ, ಆನಂದತೀರ್ಥೇತಿಪದಂ = ಆನಂದತೀರ್ಥ ಎಂಬ ಹೆಸರು, ತಸ್ಯ = ಆ ಪೂರ್ಣಪ್ರಜ್ಞರಿಗೆ, ಅತ್ಯನುರೂಪರೂಪಕಂ = ಅತಿಶಯವಾಗಿ ಅನುಕೂಲವಾದ ಸ್ವರೂಪವುಳ್ಳದ್ದು, ಬಭೂವ = ಆಯಿತು.

ತಾ—ಅನಂತರ ಗುರುಗಳಾದ ಅಚ್ಯುತಪ್ರೇಕ್ಷರು ಪೂರ್ಣಪ್ರಜ್ಞರಿಗೆ ಆನಂದತೀರ್ಥರು ಎಂದು ಹೆಸರಿಟ್ಟರು. ಅವರು ಆನಂದರೂಪನಾದ ಸರ್ವೋತ್ತಮನಾದ ಹರಿಯ ಸನ್ನಿಧಾನಪಾತ್ರವಾದ ಅಂತಃಕರಣವುಳ್ಳವರಾದುದರಿಂದಲೂ **ಆನಂದ** ಎಂಬ ಹೆಸರುಳ್ಳ ಪರಮಾತ್ಮನಿಂದ **ತೀರ್ಥರು** ಅಂದರೆ ಪರಿಶುದ್ಧರಾಗಿರುವುದರಿಂದಲೂ, ಮತ್ತು ಆನಂದಕರವಾದ ಶಾಸ್ತ್ರವನ್ನು ರಚಿಸುವವ

Rarest Archiver

ರಾದುದರಿಂದಲೂ ಆನಂದತೀರ್ಥ* ಎಂಬ ಅವರ ಹೆಸರು ಅವರಿಗೆ ಬಹಳ ಚೆನ್ನಾಗಿ ಒಪ್ಪಿತು. ಅನ್ವರ್ಥಕವಾಯಿತು.

ವಿ—ಆನಂದಃ ರೂಪಂ ಯಸ್ಯ ಸಃ ಆನಂದರೂಪಃ, ತಸ್ಯ, ಪಾತ್ರಂ ಧೀಃ ಯಸ್ಯ ಸಃ ಪಾತ್ರಧೀಃ, ಆನಂದಂ ಸಂದಾತುಂ ಶೀಲಂ ಅಸ್ಯೇತಿ ಆನಂದ ಸಂದಾಯಿ, ಆನಂದಸಂದಾಯಿ ಚ ತತ್ ಸುಶಾಸ್ತ್ರಂ ಚ ಆನಂದಸಂದಾಯಿ-ಸುಶಾಸ್ತ್ರಂ, ತತ್ ಕರೋತೀತಿ ಆನಂದಸಂದಾಯಿಸುಶಾಸ್ತ್ರಕೃತ್; ಗುರುಣಾ ಉದಿತಂ ಗುರೂದಿತಂ, ಅತ್ಯನುರೂಪಂ ರೂಪಂ ಯಸ್ಯ ತತ್ ಅತ್ಯನುರೂಪ ರೂಪಕಂ.

ಕ್ರಿ—ಬಭೂವ ಬಭೂವತುಃ ಇತ್ಯಾದಿ ಭೂಸತ್ತಾಯಾಂ ಲಿಟ್.

ಕದಾಚಿದತ್ರೋಪಯಯೌ ಯತಿಸ್ಸಖಾ
ಗೋವಿಂದಬುದ್ಧೇರ್ಬಹುಶಿಷ್ಯಸಂವೃತಃ ।
ಅಮುಷ್ಯ ಶಿಷ್ಯಾ ಅನುಮಾನಶಿಕ್ಷಿತಾಸ್ತದಾ-
ಜಿಗೀಷನ್ಗುರುಬುದ್ಧಿಮುದ್ಧತಾಃ ॥೩॥

ಅ—ಕದಾಚಿತ್ ಬಹುಶಿಷ್ಯಸಂವೃತಃ ಗೋವಿಂದಬುದ್ಧೇಃ ಸಖಾ ಯತಿಃ ಅತ್ರ ಉಪಾಯಯೌ. ತದಾ ಅನುಮಾನಶಿಕ್ಷಿತಾಃ ಉದ್ಧತಾಃ ಅಮುಷ್ಯ ಶಿಷ್ಯಾಃ ಗುರುಬುದ್ಧಿಂ ಅಜಿಗೀಷನ್ ।

ಅ.ಅ.—ಕದಾಚಿತ್ = ಒಂದಾನೊಂದು ಸಮಯದಲ್ಲಿ, ಬಹುಶಿಷ್ಯ-ಸಂವೃತಃ = ಅನೇಕಮಂದಿಶಿಷ್ಯರಿಂದ ಸುತ್ತುವರಿಯಲ್ಪಟ್ಟ, ಗೋವಿಂದಬುದ್ಧೇಃ = ಶ್ರೀಅಚ್ಯುತಪ್ರೇಕ್ಷಾಚಾರ್ಯರ, ಸಖಾ = ಸ್ನೇಹಿತನಾದ, ಯತಿಃ = ಸನ್ನ್ಯಾಸಿಯು, ಅತ್ರ = ಈ ಸ್ಥಳಕ್ಕೆ (ಉಡುಪಿಗೆ), ಉಪಯಯೌ = ಬಂದರು. ತದಾ = ಆಗ, ಅನುಮಾನಶಿಕ್ಷಿತಾಃ = ಪಂಚಾವಯವಯುಕ್ತವಾದ ತರ್ಕಶಾಸ್ತ್ರ ದಲ್ಲಿ ವಿಶೇಷಾಭ್ಯಾಸವುಳ್ಳ, ಉದ್ಧತಾಃ = ಗರ್ವದಿಂದ ಕೂಡಿದ, ಅಮುಷ್ಯ = ಈ

‡ ತೀರ್ಥ = ಶುದ್ಧಜಲಸ್ಥಾನ, ಶಾಸ್ತ್ರ, ಗುರುಗಳು = A placc of holy water, An ascetic, A holy personage.

Rarest Archive

ಅಚ್ಯುತಪ್ರೇಕ್ಷರ ಸ್ನೇಹಿತನಾದ ಯತಿಯ, ಶಿಷ್ಯಾಃ = ಶಿಷ್ಯರು, ಗುರುಬುದ್ಧಿಂ = ಶ್ರೀಪೂರ್ಣಪ್ರಜ್ಞರನ್ನು, ಅಜಿಗೀಷನ್ = ಜಯಿಸಲು ಇಚ್ಛಿಸಿದರು.

ತಾ—ಒಂದಾನೊಂದು ದಿನ ಅಚ್ಯುತಪ್ರೇಕ್ಷಾಚಾರ್ಯರ ಸ್ನೇಹಿತರಾದ ಒಬ್ಬ ಯತಿಗಳು ತಮ್ಮ ಅನೇಕಮಂದಿಶಿಷ್ಯರೊಡನೆ ಅವರ ಹತ್ತಿರಕ್ಕೆ ಬಂದರು. ಆ ಸಂದರ್ಭದಲ್ಲಿ ಪಂಚಾವಯವಯುಕ್ತವಾದ ತರ್ಕಶಾಸ್ತ್ರದಲ್ಲಿ ಪಂಡಿತರಾದ ಅವರ ಶಿಷ್ಯರು ತಮ್ಮ ಪಾಂಡಿತ್ಯದ ಅಹಂಕಾರದಿಂದ ಆನಂದತೀರ್ಥರನ್ನು ಜಯಿಸಲು ಇಚ್ಛಿಸಿದರು.

ವಿ—ಗೋವಿಂದೇ ಬುದ್ಧಿಃ ಯಸ್ಯ ಸಃ ಗೋವಿಂದಬುದ್ಧಿಃ ತಸ್ಯ, ಬಹವಶ್ಚ ತೇ ಶಿಷ್ಯಾಶ್ಚ ಬಹುಶಿಷ್ಯಾಃ, ಬಹುಶಿಷ್ಯೈಃ ಸಂವೃತಃ ಬಹುಶಿಷ್ಯ-ಸಂವೃತಃ, ಅನುಮಾನೇ ಶಿಕ್ಷಿತಾಃ ಅನುಮಾನಶಿಕ್ಷಿತಾಃ, ಗುರ್ವೀ ಬುದ್ಧಿಃ ಯಸ್ಯ ಸಃ ಗುರುಬುದ್ಧಿಃ ತಂ.

ಕ್ರಿ—ಉಪ+ಯಯೌ, ಯಯತುಃ ಯಯುಃ, ಯಯಿಥ ಯಯಾಥ, ಯಯಥುಃ ಯಯ, ಯಯೌ ಯಯಿವ ಯಯಿಮ. ಉಪ ಉಪಸರ್ಗ, ಯಾ ಪ್ರಾಪಣೇ ಲಿಟ್, ಜೇತುಂ ಐಚ್ಛನ್, ಅಜಿಗೀಷನ್, ಅಜಿಗೀಷತ್ ಅಜಿಗೀಷತಾಂ ಅಜಿಗೀಷನ್, ಅಜಿಗೀಷಃ ಅಜಿಗೀಷತಂ ಅಜಿಗೀಷತ, ಅಜಿಗೀಷಂ ಅಜಿಗೀಷಾವ ಅಜಿಗೀಷಾಮ. ಜಿ ಅಭಿಭವೇ ಸನ್ನಂತ, ಲಙ್ ಪ್ರ. ಪು. ಬ.

ಅವ—ಆಚಾರ್ಯರು ಆ ಉದ್ಧತರಾದ ಶಿಷ್ಯರು ಪ್ರಯೋಗಿಸಿದ ಅನುಮಾನವನ್ನು ಖಂಡಿಸಿದರೆಂದು ಹೇಳುತ್ತಾರೆ—

ಭಿದಾ ಸುಸಾಧ್ಯೇತ್ಯನುಮಾನಮತ್ರ ತೈಃ
ಪ್ರಾಯುಜ್ಯತಾಶು ಪ್ರತಿಪಕ್ಷಭೀಷಣಂ ।
ಅಖಂಡಯದ್ ವ್ಯಕ್ತಮಖಂಡಧೀರಿದಂ
ಸ ಪಕ್ಷದಕ್ಷಃ ಫಣಿನಂ ವಿರಾಡಿವ ॥೪॥

ಅ—ತೈಃ ಭಿದಾ ಸುಸಾಧ್ಯಾ ಇತಿ ಅತ್ರ ಪ್ರತಿಪಕ್ಷಭೀಷಣಂ (ಪ್ರತಿ) ಅನುಮಾನಂ ಆಶು ಪ್ರಾಯುಜ್ಯತ । ಪಕ್ಷದಕ್ಷಃ ಅಖಂಡಧೀಃ ಸಃ ಫಣಿನಂ (ಪಕ್ಷದಕ್ಷಃ) ವಿರಾಟ್ ಇವ ಇದಂ ವ್ಯಕ್ತಂ ಅಖಂಡಯತ್ ।

Rarest Archiver

ಅ.ಅ.—ತ್ಯೈಃ= ಆ ಶಿಷ್ಯರಿಂದ, ಭಿದಾ = ಭೇದವು, ಸುಸಾಧ್ಯಾ = ಅನಾಯಾಸವಾಗಿ ಸಾಧಿಸಲು ಶಕ್ಯವು, ಇತಿ= ಈ ಅಭಿಪ್ರಾಯದಿಂದ, ಅತ್ರ= ಈ ಭೇದವನ್ನು ಸಾಧಿಸುವ ವಿಷಯದಲ್ಲಿ, ಪ್ರತಿಪಕ್ಷಭೀಷಣಂ (ಪ್ರತಿ) = ಪ್ರತಿವಾದಿಗಳಿಗೆ ಭಯಂಕರರಾದ ಆಚಾರ್ಯರನ್ನು ಕುರಿತು (ಪ್ರತಿವಾದಿಗಳಿಗೆ ಹೆದರಿಕೆಯನ್ನುಂಟುಮಾಡುವ), ಅನುಮಾನಂ = ಅನುಮಾನವು, ಆಶು = ಬೇಗನೆ, ಪ್ರಾಯುಜ್ಯತ=ಪ್ರಯೋಗಿಸಲ್ಪಟ್ಟಿತು. ಪಕ್ಷದಕ್ಷಃ= ಅಂಗೀಕರಿಸಿದ ವಿಷಯವನ್ನು ಸಾಧಿಸುವುದರಲ್ಲಿ ಸಮರ್ಥರಾದ, ಅಖಂಡಧೀಃ = ಪೂರ್ಣವಾದ ಬುದ್ಧಿಯುಳ್ಳ, ಸಃ=ಆ ಆನಂದತೀರ್ಥರು, ಫಣಿನಂ= ಸರ್ಪವನ್ನು (ಪಕ್ಷದಕ್ಷಃ =ರೆಕ್ಕೆಗಳಿಂದ ಹಾರಿ ರೆಕ್ಕೆಗಳಿಂದ ಶತ್ರುಗಳನ್ನು ನಿಗ್ರಹಿಸುವುದರಲ್ಲಿ ಸಮರ್ಥನಾದ) ವಿರಾಟ್ ಇವ=ಗರುಡನಂತೆ, ಇದಂ= ಈ ಅನುಮಾನವನ್ನು, ವ್ಯಕ್ತಂ =ಸ್ಪಷ್ಟವಾಗಿ, ಅಖಂಡಯತ್=ಖಂಡಿಸಿದರು.

ತಾ—ಆ ತಾರ್ಕಿಕಶಿಷ್ಯರು ಭೇದವು ಸಾಧನೆಮಾಡಲು ಸುಲಭವೆಂದು, ಪ್ರತಿವಾದಿಗಳಿಗೆ ಹೆದರಿಕೆಯನ್ನುಂಟುಮಾಡುವ ಅನುಮಾನವನ್ನು ಪ್ರತಿವಾದಿ ಭಯಂಕರರಾದ ಆಚಾರ್ಯರನ್ನು ಕುರಿತು ಕೂಡಲೇ ಪ್ರಯೋಗಿಸಿದರು. ಆ ಪೂರ್ಣಪ್ರಜ್ಞಾಚಾರ್ಯರು ತಾನು ಅಂಗೀಕರಿಸಿದ ಪಕ್ಷವನ್ನು ಸಾಧಿಸಲು ಸಮರ್ಥರಾದುದರಿಂದ ಪ್ರಬಲವಾದ ರೆಕ್ಕೆಗಳ ಸಾಮರ್ಥ್ಯದಿಂದ ಗರುಡದೇವನು ಸರ್ಪವನ್ನು ಖಂಡಿಸುವಂತೆ ಈ ಅನುಮಾನವನ್ನು ಖಂಡಿಸಿದರು. (ಅನುಮಾನ ಮತ್ತು ಅದರ ಖಂಡನಕ್ರಮ;—ವಿಮತೌ ಜೀವಪರಮಾತ್ಮಾನೌ ಭಿನ್ನೌ ನಿಯಮ್ಯನಿಯಾಮಕತ್ವಾತ್ ರಾಜಭೃತ್ಯರಾಜವತ್, ಭೇದವುಳ್ಳವರು ಹೌದೋ ಅಲ್ಲವೋ ಎಂದು ವಿವಾದಕ್ಕೆ ವಿಷಯರಾದ ಜೀವಪರಮಾತ್ಮರು ಪರಸ್ಪರಭೇದವುಳ್ಳವರು, ಅರಸನ ಅಪ್ಪಣೆಯಂತೆ ನಡೆಯುವ ಸೇವಕ, ತನ್ನ ಅಭಿಪ್ರಾಯದಂತೆ ನಡೆಸುವ ರಾಜನಂತೆ, ಜೀವನೂ ಕೂಡ ತನ್ನ ಸ್ವಾಮಿಯಾದ ಪರಮಾತ್ಮನ ಅಪ್ಪಣೆಯಂತೆ ನಡೆಯುತ್ತಾನೆ. ಅದುದರಿಂದ ಅವರಿಬ್ಬರೂ ಭಿನ್ನರು ಎಂದು ಅನುಮಾನದ ಅರ್ಥ.

ಇದನ್ನು ಪೂರ್ಣಪ್ರಜ್ಞರು ಖಂಡಿಸಿದ ರೀತಿ:—ಭಿನ್ನತ್ವವಿಶೇಷಣಂ ಪಕ್ಷಾದ್ ಭಿನ್ನಮಭಿನ್ನಂ ವಾ ಭಿನ್ನಾಭಿನ್ನಂ ವಾ, ನ ಪ್ರಥಮಃ ಭೇದ-

Rarest Archive

ಪರಂಪರಯಾ ಅನವಸ್ಥಾನಾತ್। ನ ದ್ವಿತೀಯಃ ವಿಶೇಷಣವಿಶೇಷ್ಯಯೋಃ ಅನ್ಯತರಶೇಷಾಪತ್ತೇಃ। ನ ತೃತೀಯಃ ಪೂರ್ವೋಕ್ತದೋಷದ್ವಯಾಪಾತಾತ್ ವ್ಯಾಹತೇಶ್ಚ, ತತಃ ಪ್ರತಿಜ್ಞಾಯಾ ಏವ ಅಸಂಭವಾತ್ ಭೇದಸಾಧನಮಶಕ್ಯಂ =ಭಿನ್ನತ್ವ ಎಂಬ ವಿಶೇಷಣವು ಪಕ್ಷಕ್ಕಿಂತ ಭಿನ್ನವೇ ಅಭಿನ್ನವೇ ಭಿನ್ನಾಭಿನ್ನವೇ ? ಎಂದು ವಿಕಲ್ಪಮಾಡುತ್ತೇವೆ. ಭಿನ್ನತ್ವವೆಂಬ ವಿಶೇಷಣವು ಪಕ್ಷವಾದ ಜೀವೇಶ್ವರರಿಗಿಂತ ಭಿನ್ನವೆಂದರೆ ಈ ಭಿನ್ನವಾದ ವಿಶೇಷಣ ಮತ್ತು ಪಕ್ಷಗಳಿಗೆ ಸಂಬಂಧವಿದ್ದೇ ವಿಶೇಷಣವಿಶೇಷ್ಯಭಾವವನ್ನು ಹೇಳಬೇಕು. ಸಂಬಂಧವು ಎರಡು ಪದಾರ್ಥಗಳಿಗೇ ಬರುವುದರಿಂದ ಭಿನ್ನವಾದ ವಸ್ತುಗಳಿಗೇ ಸಂಬಂಧವನ್ನು ಹೇಳಬೇಕು. ಅಭಿನ್ನ ವಸ್ತುಗಳಿಗೆ ಸಂಬಂಧವನ್ನು ಹೇಳಲು ಬರುವುದಿಲ್ಲ. ಹೀಗೆ ವಿಶೇಷಣವಾದ ಭೇದಕ್ಕೂ ವಿಶೇಷ್ಯವಾದ ಭೇದವುಳ್ಳ ಜೀವಪರಮಾತ್ಮರಿಗೂ ಪರಸ್ಪರಸಂಬಂಧವುಳ್ಳವರಿಗೇ ವಿಶೇಷಣವಿಶೇಷ್ಯಭಾವವನ್ನು ಹೇಳಬೇಕು. ಅಲ್ಲಿಯೂ ಮತ್ತೊಂದು ಸಂಬಂಧವನ್ನು ಹೇಳಬೇಕು. ಅಲ್ಲಿಯೂ ಭೇದವು ಬೇಕು. ಹೀಗೆ ವಿಶೇಷಣವಾದ ಭಿನ್ನತ್ವವು ಭಿನ್ನವೆಂದರೆ ಕೊನೆಯ ತನಕವೂ ನಿಶ್ಚಯವೇ ಆಗಲಾರದು. ಅನವಸ್ಥಾದೋಷವು ಬಂದೀತು. ಭಿನ್ನತ್ವವೆಂಬ ವಿಶೇಷಣವು ಅಭಿನ್ನವೆಂದರೆ ಭಿನ್ನತ್ವವೆಂಬ ವಿಶೇಷಣ ಒಂದೇ ಸಾಕು, ವಿಶೇಷ್ಯವಾದ ಜೀವೇಶ್ವರರೇ ಸಾಕು ಎರಡೂ ಬೇಡ ಎಂಬ ದೋಷವು ಬರುತ್ತದೆ. ಭಿನ್ನಾಭಿನ್ನವೆಂಬ ಮೂರನೆಯ ಪಕ್ಷದಲ್ಲಿ ಹಿಂದೆ ಹೇಳಿದ ಅನವಸ್ಥಾದೋಷವೂ, ವಿಶೇಷಣವೊಂದೇ ಸಾಕು ಪಕ್ಷವೊಂದೇ ಸಾಕು ಎರಡೂ ಬೇಡ ಎಂಬ ದೋಷವೂ ಮತ್ತು ಭೇದ ಮತ್ತು ಅಭೇದಗಳು ಪರಸ್ಪರವಿರುದ್ಧವಾಗುದರಿಂದ ವ್ಯಾಹತಿ ಎಂಬ ದೋಷವೂ ಬರುತ್ತದೆ. ಹೀಗೆ ವಿಮತೌ ಭಿನ್ನೌ ಎಂಬ ಪ್ರತಿಜ್ಞೆಯೇ ಕೂಡುವುದಿಲ್ಲವಾಗಿ ಕೇವಲ ಅನುಮಾನದಿಂದ ಭೇದವನ್ನು ಸಾಧಿಸಲು ಬರುವುದಿಲ್ಲ. (ನಮ್ಮ ಸಿದ್ಧಾಂತದಲ್ಲಿ ಪ್ರತ್ಯಕ್ಷಾಗಮಗಳ ಸಹಾಯದಿಂದ ಧರ್ಮಿಸ್ವರೂಪವಾದ ಭೇದವನ್ನು ಒಪ್ಪಿರುವುದರಿಂದ ಈ ದೋಷಗಳು ಬರುವುದಿಲ್ಲ. ಕೇವಲ ಅನುಮಾನದಿಂದಭೇದವನ್ನು ಸಾಧಿಸುತ್ತೇವೆ ಎಂದು ಹೇಳುವ ತಾರ್ಕಿಕರನ್ನು ಇಲ್ಲಿ ಖಂಡಿಸಿದ್ದಾರೆ ಎಂದು ತಿಳಿಯಬೇಕು. ಪ್ರತ್ಯಕ್ಷಾನುಮಾನಗಳಿಂದ ಭೇದವು ಸಿದ್ಧಿಸುವುದಿಲ್ಲ. ಆಗಮದಿಂದಲೇ ಭೇದವು ಸಿದ್ಧಿಸುತ್ತದೆ. ಆದುದರಿಂದ ಭೇದಕ್ಕೆ ಅಪೂರ್ವತೆ ಇದೆ ಎಂದು ಭಾವ.)

Rarest Archiver

ವಿ—ಪ್ರತಿಪಕ್ಷಸ್ಯಭೀಷಣಃ ತಂ (ಪ್ರತಿಪಕ್ಷಸ್ಯ ಭೀಷಣಂ, ತತ್) ಅಖಂಡಾ ಧೀಃ ಯಸ್ಯ ಸಃ ಅಖಂಡಧೀಃ, ಪಕ್ಷೇ ದಕ್ಷಃ, (ಪಕ್ಷಾಭ್ಯಾಂ ದಕ್ಷಃ) ಪಕ್ಷದಕ್ಷಃ, ಫಣಾ ಅಸ್ಯ ಅಸ್ತೀತಿ ಫಣೀ ತಂ, ವೀನಾಂ ರಾಟ್ ವಿರಾಟ್, ಪಕ್ಷಿಗಳ ರಾಜ, ಗರುಡ, ವಿಃ ಪಕ್ಷಿಪರಮಾತ್ಮನೋಃ—ಕೋಶ.

ಕ್ರಿ—ಪ್ರ+ಅಯುಜ್ಯತ ಅಯುಜ್ಯೇತಾಂ ಅಯುಜ್ಯಂತ, ಅಯುಜ್ಯಥಾಃ ಅಯುಜ್ಯೇಥಾಂ ಅಯುಜ್ಯಧ್ವಂ, ಅಯುಜ್ಯೇ ಅಯುಜ್ಯಾವಹಿ ಅಯುಜ್ಯಾಮಹಿ ಪ್ರ ಉಪ. ಯುಜಿರ್ ಯೋಗೇ ಕರ್ಮಣಿ ಲಙ್. ಅಖಂಡಯತ್ ಅಖಂಡಯತಾಂ ಅಖಂಡಯನ್ ಇತ್ಯಾದಿ ಖಡಿ ಭೇದನೇ ಲಙ್.

ಅವ—ಹೀಗೆ ಹಿಂದಿನ ಅನುಮಾನವನ್ನು ಖಂಡಿಸಿದರೂ ಅನುಮಾನ ದಿಂದ ಮತ್ತೊಂದು ವಿಷಯವನ್ನು ಸಾಧಿಸಲು ಪ್ರಾರಂಭಿಸಿದರೆನ್ನುತ್ತಾರೆ—

ಅಥಾಪಿ ಮಿಥ್ಯಾ ವಿಮತಂ ಮತತ್ವತೋ
ವಿವಾದನಿರ್ಮುಕ್ತವದಿತ್ಯವಾದಿ ತೈಃ।
ಅನೇನ ಸತ್ಯಂ ವಿಮತಂ ಮತತ್ವತೋ
ಯಥಾ ಘಟಾದೀತ್ಯನುಮಾ ನ್ಯಗದ್ಯತ ॥೫॥

ಅ.—ಅಥಾಪಿ ವಿಮತಂ ಮಿಥ್ಯಾ ಮತತ್ವತಃ ವಿವಾದನಿರ್ಮುಕ್ತವತ್ ಇತಿ ತೈಃ ಅನುಮಾ ಅವಾದಿ। ವಿಮತಂ ಸತ್ಯಂ ಮತತ್ವತಃ ಯಥಾ ಘಟಾದಿ ಇತಿ ಅನೇನ ಅನುಮಾ ನ್ಯಗದ್ಯತ।

ಅ. ಅ.—ಅಥಾಪಿ=ಹೀಗೆ ಖಂಡಿತರಾದಾಗ್ಯೂ, ವಿಮತಂ=ಸುಳ್ಳೋ ಸತ್ಯವೋ ಎಂದು ವಿವಾದಕ್ಕೆ ವಿಷಯವಾದ ಆಕಾಶಾದಿಪ್ರಪಂಚವು, ಮಿಥ್ಯಾ =ಸುಳ್ಳಾದುದು, ಮತತ್ವತಃ=ಕಣ್ಣಿಗೆ ಕಾಣುತ್ತಿರುವುದರಿಂದ, (ದೃಶ್ಯತ್ವ ಹೇತುಬಲದಿಂದ) ವಿವಾದನಿರ್ಮುಕ್ತವತ್ = ವಿವಾದರಹಿತವಾದ ಮುತ್ತಿನ ಚಿಪ್ಪಿನಲ್ಲಿ ಕಾಣುವ ಸುಳ್ಳಾದ ಬೆಳ್ಳಿಯಂತೆ, ಇತಿ=ಎಂದು, ತೈಃ=ಆ ಶಿಷ್ಯರಿಂದ, ಅನುಮಾ=ಅನುಮಾನವು, ಅವಾದಿ=ಹೇಳಲ್ಪಟ್ಟಿತು. ವಿಮತಂ=ವಿವಾದ ವಿಷಯವಾದ ಜಗತ್ತು, ಸತ್ಯಂ=ನಿಜವಾದುದು, ಮತತ್ವತಃ=ಕಾಣುತ್ತಿರು ವುದರಿಂದ, ಯಥಾ ಘಟಾದಿ=ಹೇಗೆ ಮಡಿಕೆಮೊದಲಾದುದೋ (ತಥಾ=

Rarest Archiver

ಹಾಗೆ) ಇತಿ=ಎಂದು, ಅನೇನ=ಈ ಆನಂದತೀರ್ಥರಿಂದ, ಅನುಮಾ= ಅನುಮಾನವು, ನ್ಯಗದ್ಯತ=ಹೇಳಲ್ಪಟ್ಟಿತು.

ತಾ—ಹೀಗೆ ಭೇದವನ್ನು ಸಾಧಿಸುವ ಅನುಮಾನವನ್ನು ಖಂಡಿಸಿದ ಅನಂತರವೂ ಕೂಡ ತಾರ್ಕಿಕರಾದ ಆ ಶಿಷ್ಯರು ಭೇದಪಕ್ಷವನ್ನು ಬಿಟ್ಟು ಜಗತ್ತು ಸುಳ್ಳು ಎಂದು ಸಾಧಿಸುವ ಅನುಮಾನವನ್ನು ಪ್ರಯೋಗಿಸಿದರು. 'ಸತ್ಯವೋ ಸುಳ್ಳೋ'ಎಂದು ವಿವಾದವಿಷಯವಾದ ಈ ಪ್ರಪಂಚವು ಬೆಳ್ಳಿಯೆಂದು ಭ್ರಾಂತಿಗೆ ವಿಷಯವಾದ ಮುತ್ತಿನ ಚಿಪ್ಪಿನಲ್ಲಿ ಕಾಣಿಸುವ ಬೆಳ್ಳಿಯಂತೆ ಕಣ್ಣಿಗೆ ಕಾಣಿಸುವುದರಿಂದ ಸುಳ್ಳಾಗಿದೆ' ಎಂದು ಸಾಧಿಸಿದರು. ಆಗ ಶ್ರೀಮಧ್ವಾಚಾರ್ಯರು ಅವರನ್ನು ಖಂಡಿಸುವ ಅನುಮಾನವನ್ನು ಪ್ರಯೋಗಿಸಿದರು. 'ಸತ್ಯವೋ ಸುಳ್ಳೋ ಎಂದು ನಮಗೂ ನಿಮಗೂ ವಿವಾದಗ್ರಸ್ತವಾದ ಪ್ರಪಂಚವು ಮಡಿಕೆ ಮೊದಲಾದ ವಸ್ತುವಿನಂತೆ ಕಣ್ಣಿಗೆ ಪ್ರತ್ಯಕ್ಷವಾಗುವುದರಿಂದ ನಿಜವಾಗಿರುತ್ತದೆ' ಎಂದು ಆಚಾರ್ಯರು ಸಾಧಿಸಿದರು.

ವಿ—ಮತಸ್ಯ ಭಾವಃ ಮತತ್ವಂ, ಮತತ್ವಾತ್ ಇತಿ ಮತತ್ವತಃ, ವಿವಾದಾತ್ ನಿರ್ಮುಕ್ತಂ ವಿವಾದನಿರ್ಮುಕ್ತಂ, ವಿವಾದನಿರ್ಮುಕ್ತೇನ ತುಲ್ಯಂ ವಿವಾದನಿರ್ಮುಕ್ತವತ್, ಘಟಃ ಆದಿಃ ಯಸ್ಯ ತತ್ ಘಟಾದಿ.

ಕ್ರಿ.—ಅವಾದಿ ಅವಾದಿಷಾತಾಂ ಅವಾದಿಷತ, ಅವಾದಿಷ್ಠಾಃ ಅವಾದಿಷಾಥಾಂ ಅವಾದಿಢ್ವಂ, ಅವಾದಿಷಿ ಅವಾದಿಷ್ವಹಿ ಅವಾದಿಷ್ಮಹಿ; ವದ ವ್ಯಕ್ತಾಯಾಂ ವಾಚಿ ಸಕರ್ಮಕ, ಕರ್ಮಣಿ ಲುಙ್. ನಿ+ ಅಗದ್ಯತ ಅಗದ್ಯೇತಾಂ ಅಗದ್ಯಂತ. ಗದ ವ್ಯಕ್ತಾಯಾಂ ವಾಚಿ ಕರ್ಮಣಿ ಲಙ್.

ಅವ—ಮತ್ತೂ ವಾದಿಸುವ ಆ ತಾರ್ಕಿಕರನ್ನು ಆನಂದತೀರ್ಥರು ಜಯಿಸಿದ ರೀತಿಯನ್ನು ಹೇಳುತ್ತಾರೆ—

ಹೇತೋರತಿವ್ಯಾಪ್ತಿರವಾದಿ ತೈರ್ಯದಾ
ಸಕೌತುಕೈಸ್ತೂರ್ಣಮಸಾವವಿಸ್ಮಯಃ ।
ನ ಶುಕ್ತಿರೂಪ್ಯಾದಿ ಮತಂ ಯದನ್ಯಥಾ
ಮತಂ ತದಿತ್ಯಾದಿ ವದನ್ ಜಿಗಾಯ ತಾನ್ ॥೬॥

ಅ—ಯದಾ ಸಕೌತುಕೈಃ ತೈಃ ತೂರ್ಣಂ ಹೇತೋಃ ಅತಿವ್ಯಾಪ್ತಿಃ ಅವಾದಿ, (ತದಾ) ಅಸೌ ಅವಿಸ್ಮಯಃ ಶುಕ್ತಿರೂಪ್ಯಾದಿ ನ ಮತಂ ; ಯತ್ ತತ್ ಅನ್ಯಥಾಮತಂ ಇತ್ಯಾದಿ ವದನ್ ತಾನ್ ಜಿಗಾಯ ।

ಅ. ಅ.—ಯದಾ = ಯಾವಾಗ, ಸಕೌತುಕೈಃ = ಕುತೂಹಲದಿಂದ ಕೂಡಿದ, ತೈಃ = ಆ ಶಿಷ್ಯರಿಂದ, ತೂರ್ಣಂ = ಕೂಡಲೇ, ಹೇತೋಃ = ಮತತ್ವ (ದೃಶ್ಯತ್ವ) ಎಂಬ ಆಚಾರ್ಯರು ಹೇಳಿದ ಹೇತುವಿಗೆ, ಅತಿವ್ಯಾಪ್ತಿಃ = ವ್ಯಭಿಚಾರವು, ಅವಾದಿ = ಹೇಳಲ್ಪಟ್ಟಿತೋ, (ತದಾ = ಆಗಲೇ) ಅಸೌ = ಶ್ರೀಮಧ್ವಾಚಾರ್ಯರು, ಅವಿಸ್ಮಯಃ = ಭ್ರಮಿಸದವರಾಗಿ, ಶುಕ್ತಿರೂಪ್ಯಾದಿ = ಮುತ್ತಿನಚಿಪ್ಪಿನಲ್ಲಿ ತೋರುವ ಬೆಳ್ಳಿ ಮುಂತಾದುದು, ನ ಮತಂ = ಯಥಾರ್ಥ-ಜ್ಞಾನಕ್ಕೆ ವಿಷಯವಲ್ಲ, ಯತ್ = ಏಕೆಂದರೆ, ತತ್ = ಅದು (ಶುಕ್ತಿರಜತವು), ಅನ್ಯಥಾಮತಂ = ವಿಪರೀತವಾದ ಜ್ಞಾನಕ್ಕೆ ವಿಷಯವು, ಇತ್ಯಾದಿ = ಇದು ಮೊದಲಾದ ಯುಕ್ತಿಯನ್ನು, ವದನ್ = ಹೇಳುತ್ತಾ, ತಾನ್ = ಅವರನ್ನು, ಜಿಗಾಯ = ಗೆದ್ದರು.

ತಾ:—'ವಿಮತಂ ಸತ್ಯಂ ಮತತ್ವಾತ್ ಘಟಾದಿವತ್' ವಿವಾದವಿಷಯವಾದ ಜಗತ್ತು ಸತ್ಯವು, ಪ್ರತ್ಯಕ್ಷಕ್ಕೆ ವಿಷಯವಾದುದರಿಂದ ಎಂಬ ಆಚಾರ್ಯರ ಅನುಮಾನಕ್ಕೆ ಬೆರಗಾದ ಆ ಶಿಷ್ಯರು ಕೂಡಲೇ ನಿಮ್ಮ ಅನುಮಾನಕ್ಕೆ ಶುಕ್ತಿ ರಜತದಲ್ಲಿ ವ್ಯಭಿಚಾರವು ಬಂತು ಎಂದರು. ಅಂದರೆ ಶುಕ್ತಿರಜತದಲ್ಲಿ ದೃಶ್ಯತ್ವ ವಿದೆ ಆದರೆ ಸತ್ಯತ್ವವಿಲ್ಲ, ಆದುದರಿಂದ ಸಾಧ್ಯವಿಲ್ಲದಿದ್ದಲ್ಲಿ ಹೇತುವು ಬಂದರೆ ವ್ಯಭಿಚಾರವೆಂಬ ದೋಷವು ಬಂತು ಎಂದರು. ಆಗ ಆಚಾರ್ಯರು 'ನಮ್ಮ ಅನುಮಾನಕ್ಕೆ ನೀವು ವ್ಯಭಿಚಾರದೋಷ ಹೇಳಿದುದು ಸರಿಯಲ್ಲ. ದೃಶ್ಯತ್ವ ಎಂದರೆ ದೃಕ್ (ಜ್ಞಾನ) ಮತ್ತು ದೃಶ್ಯ (ಜ್ಞಾನವಿಷಯವಸ್ತು) ಇವುಗಳ ಸಂಬಂಧ. ಶುಕ್ತಿಯಲ್ಲಿ ರಜತವು ತೋರಿದರೂ, ಅನಂತರ 'ಸರ್ವಥಾ ಅಸತ್ ಆದ ರಜತವೇ ತೋರಿತು'ಎಂದು ಬಾಧಜ್ಞಾನದ ಅನಂತರ ಅಸತ್ತ್ವಾನುಭವವು ಬರುವುದರಿಂದ ಅಸತ್ತಿನ ಜೊತೆಗೆ ಸಂಬಂಧವು ಕೂಡುವುದಿಲ್ಲವಾದುದರಿಂದ ಶುಕ್ತಿರೂಪ್ಯಕ್ಕೂ ದೃಕ್ (ಜ್ಞಾನ)ಗೂ ಸಂಬಂಧವಿಲ್ಲ. ಶುಕ್ತಿಗೂ ಜ್ಞಾನಕ್ಕೂ ಸಂಬಂಧವಿದೆ. ಆದ್ದರಿಂದ ಶುಕ್ತಿಗೆ ದೃಶ್ಯತ್ವವಿದೆ. ಅಲ್ಲಿ ಸತ್ಯತ್ವವೂ ಇದೆ. ಆದ

Rarest Archive

ಕಾರಣ ನೀವು ಹೇಳುವ ವ್ಯಭಿಚಾರದೋಷವು ಸರಿಯಲ್ಲ'ವೆಂದು ಖಂಡಿಸಿ ಆ ವಾದಿಗಳನ್ನು ಗೆದ್ದರು.

ವಿ.—ಕೌತುಕೇನ ಸಹ ವರ್ತಂತೇ ಇತಿ ಸಕೌತುಕಾಃ ತೈಃ, ನ ವಿದ್ಯತೇ ವಿಸ್ಮಯಃ ಯಸ್ಯ ಸಃ ಅವಿಸ್ಮಯಃ, ಶುಕ್ತೌ ಭಾಸಮಾನಂ ರೂಪ್ಯಂ ಶುಕ್ತಿರೂಪ್ಯಂ ಶುಕ್ತಿರೂಪ್ಯಂ ಆದಿ ಯಸ್ಯ ತತ್ ಶುಕ್ತಿರೂಪ್ಯಾದಿ.

ಕ್ರಿ.—ಜಿಗಾಯ ಜಿಗ್ಯತುಃ ಜಿಗ್ಯುಃ, ಜಿಗಯಿಥ ಜಿಗೇಥ, ಜಿಗ್ಯಥುಃ ಜಿಗ್ಯ, ಜಿಗಾಯ ಜಿಗಯ ಜಿಗ್ಯಿವ ಜಿಗ್ಯಿಮ. ಜಿ ಅಭಿಭವೇ ಪರಸ್ಮೈಪದಿ ಲಿಟ್.

ಅವ—ಹೀಗೆ ವಾದಿಗಳು ಪ್ರಯೋಗಿಸಿದ ಅನುಮಾನಗಳನ್ನೆಲ್ಲ ಖಂಡಿಸಿ, ಆಚಾರ್ಯರು **ಅನುಮಾನತೀರ್ಥ** ಎಂಬ ಮತ್ತೊಂದು ಬಿರುದನ್ನು ಪಡೆದರೆಂದು ಹೇಳುತ್ತಾರೆ—

ತತ್ತ್ವೇಽಪ್ಯತತ್ತ್ವೇ ವಿಮತೇಽನುಮಾಂ ವದಂ
ಸ್ತದಪ್ರತಿಷ್ಠಾಂ ಪ್ರತಿಪಾದುಕಃ ಸ್ವಯಂ ।
ವಿಜಿತ್ಯ ವಿಶ್ವಾನ್ ವಿದುಷಃ ಸಭಾಸ್ವಸೌ
ಜಗಾಮ ನಾಮ್ನಾಪ್ಯನುಮಾನತೀರ್ಥತಾಂ ॥೭॥

ಅ—ತದಪ್ರತಿಷ್ಠಾಂ ಪ್ರತಿಪಾದುಕಃ ಅಸೌ (ವಿದುಷಾಂ) ಸಭಾಸು ವಿಮತೇ ತತ್ತ್ವೇ ಅತತ್ತ್ವೇ ಅಪಿ ಸ್ವಯಂ ಅನುಮಾಂ ವದನ್ ವಿಶ್ವಾನ್ ವಿದುಷಃ ವಿಜಿತ್ಯ ನಾಮ್ನಾ ಅಪಿ ಅನುಮಾನತೀರ್ಥತಾಂ ಜಗಾಮ ।

ಅ. ಅ.—ತದಪ್ರತಿಷ್ಠಾಂ, ತತ್ = ಆ ಅನುಮಾನದ, ಅಪ್ರತಿಷ್ಠಾಂ= ಅಸ್ಥಿರತೆಯನ್ನು, (ಅಪ್ರಾಮಾಣ್ಯವನ್ನು) ಪ್ರತಿಪಾದುಕಃ=ಪ್ರತಿಪಾದಿಸುವ ಸ್ವಭಾವವುಳ್ಳ, ಅಸೌ = ಈ ಪೂರ್ಣಪ್ರಜ್ಞಾಚಾರ್ಯರು, (ವಿದುಷಾಂ = ವಿದ್ವಾಂಸರ) ಸಭಾಸು = ಸಭೆಗಳಲ್ಲಿ, ವಿಮತೇ = ಆಯಾ ಪ್ರಮೇಯವು ವಿವಾದ ವಿಷಯವಾಗಲು, ತತ್ತ್ವೇ = ಯಥಾರ್ಥವಿಷಯದಲ್ಲಿಯೂ, ಅತತ್ತ್ವೇ ಅಪಿ = ಅಯಥಾರ್ಥವಿಷಯದಲ್ಲಿಯೂ, ಸ್ವಯಂ= ತಾನೇ, ಅನುಮಾಂ= ಅನುಮಾನ ವನ್ನು, ವದನ್ (ಸನ್) = ಹೇಳುತ್ತಾ, ವಿಶ್ವಾನ್ = ಎಲ್ಲಾ, ವಿದುಷಃ=

Rarest Archiver

ವಿದ್ವಾಂಸರಾದ ವಾದಿಗಳನ್ನು, ವಿಜಿತ್ಯ = ಜಯಿಸಿ, ನಾಮ್ನಾ ಅಪಿ = ಹೆಸರಿನಿಂದಲೂ, ಅನುಮಾನತೀರ್ಥತಾಂ = ಅನುಮಾನತೀರ್ಥ ಎಂಬ ಹೆಸರುಳ್ಳತನವನ್ನು, ಜಗಾಮ = ಹೊಂದಿದರು.

ತಾ—ಯಥಾರ್ಥವಿಷಯದಲ್ಲಿಯೇ ಆಗಲಿ ಅಯಥಾರ್ಥವಿಷಯದಲ್ಲಿಯೇ ಆಗಲಿ ವಿವಾದ ಬಂದಾಗ, ಶ್ರೀಮಧ್ವಾಚಾರ್ಯರು ಆಯಾ ಸಭೆಗಳಲ್ಲಿ ಅನುಮಾನವನ್ನು ಪ್ರಯೋಗಿಸುತ್ತಿದ್ದರು. ಶಬ್ದವು ನಿತ್ಯವೇ ಅನಿತ್ಯವೇ ಎಂದು ವಿವಾದವು ಬಂದಾಗ, ಶಬ್ದವು ಉತ್ಪನ್ನವಾಗುವುದರಿಂದ ಮಡಿಕೆಯಂತೆ ಅನಿತ್ಯ ಎಂದು ಅನಿತ್ಯತ್ವವಿಷಯದಲ್ಲಿ ಅನುಮಾನವನ್ನು ಹೇಳಿ, ಅಲ್ಲಿ ಪ್ರತಿಪಕ್ಷವನ್ನು ಹೇಳುವ ವಾದಿಗಳನ್ನೆಲ್ಲಾ ಜಯಿಸಿ ಅನಿತ್ಯತ್ವವನ್ನು ವ್ಯವಸ್ಥಾಪಿಸುತ್ತಿದ್ದರು. ಅನಂತರ ಅವರ ಅಸಾಮರ್ಥ್ಯ ಪ್ರಕಟನೆಗೋಸ್ಕರ, ಶಬ್ದವು ಸ್ಪರ್ಶವಿಲ್ಲದ ದ್ರವ್ಯವಾದುದರಿಂದ ಆಕಾಶದಂತೆ ನಿತ್ಯವೆಂದು ಸಾಧಿಸುತ್ತಿದ್ದರು. ಅದನ್ನೂ ಆಕ್ಷೇಪಿಸುವ ವಾದಿಗಳನ್ನು ಜಯಿಸಿ, ಶಬ್ದವನ್ನು ನಿತ್ಯವೆಂದಾಗಲೀ ಅನಿತ್ಯವೆಂದಾಗಲೀ ಅನುಮಾನದಿಂದ ಸಾಧಿಸಲು ಬರುವುದಿಲ್ಲ. ಯಾವುದನ್ನು ಸಾಧಿಸಲಿಕ್ಕೂ ಅನುಮಾನ ಒಂದೇ ಸಮರ್ಥವಲ್ಲ. ಪ್ರತ್ಯಕ್ಷ ಅಥವಾ ವೇದಾದಿವಚನಗಳ ಬೆಂಬಲವಿದ್ದರೆ ಮಾತ್ರವೇ ಅನುಮಾನವು ಅರ್ಥಸಾಧಕಪ್ರಮಾಣ ಎಂದು ಹೇಳುತ್ತಿದ್ದರು. ವಾದಿಗಳು ಹೇಳಿದ ಅನುಮಾನಗಳನ್ನು ನಿರಾಕರಿಸಿ ಪ್ರತ್ಯಕ್ಷ ಆಗಮಸಹಕಾರವುಳ್ಳ ಬಲಿಷ್ಠವಾದ ಅನುಮಾನಗಳನ್ನು ಪ್ರಯೋಗಿಸಿ ವಾದಿಗಳನ್ನು ಗೆದ್ದುದರಿಂದ ಅವರಿಗೆ ಅನುಮಾನತೀರ್ಥರೆಂದು ಹೆಸರುಂಟಾಯಿತು ಎಂದು ಭಾವವು. (ಅನುಮಾನ—ಪ್ರತ್ಯಕ್ಷ ಅಥವಾ ನಂಬಲುಯೋಗ್ಯವಾದ ವಚನದಿಂದ ಒಂದು ಹೇತುವಿನ ಒಟ್ಟಿಗಿರುವ ವಸ್ತುವನ್ನು ಬೇರೆ ಕಡೆಯಲ್ಲಿ ಕಂಡು ನಿಶ್ಚಯಿಸಿದ್ದರಿಂದ ಹೇತುವು ಮಾತ್ರ ಕಂಡಲ್ಲಿ ಆ ಹೇತುವಿನ ಒಟ್ಟಿಗಿರುವ ವಸ್ತುವು ಇರಲೇಬೇಕೆಂದು ಪ್ರಾಮಾಣಿಕವಾಗಿ ಊಹಿಸುವುದು. ಅಡಿಗೆ ಮನೆಯಲ್ಲಿ ಹೊಗೆಯೂ ಬೆಂಕಿಯೂ ಇದ್ದು, ಹೊಗೆ ಇದ್ದಲ್ಲೆಲ್ಲ ಬೆಂಕಿ ಇದೆ ಎಂದು ನಿಶ್ಚಯಉಂಟಾದುದರಿಂದ ಬೆಟ್ಟದಲ್ಲಿ ಹೊಗೆಯನ್ನು ಕಂಡೊಡನೆ ಅಲ್ಲಿ ಬೆಂಕಿ ಇದ್ದೇ ಇದೆ ಎಂದು ದೃಢವಾಗಿ ಊಹಿಸುವುದು.)

ವಿ—ತಸ್ಯ ಅಪ್ರತಿಷ್ಠಾ ತದಪ್ರತಿಷ್ಠಾ ತಾಂ, ಅನುಮಾನಪ್ರಯೋಗೇ

Rarest Archive

ತೀರ್ಥಃ (ಗುರುಃ) ಅನುಮಾನತೀರ್ಥಃ ತಸ್ಯ ಭಾವಃ ಅನುಮಾನತೀರ್ಥತಾ ತಾಂ.

ಕ್ರಿ — ಜಗಾಮ ಜಗ್ಮತುಃ ಜಗ್ಮುಃ, ಜಗಮಿಥ ಜಗಂಥ ಜಗ್ಮಥುಃ ಜಗ್ಮ, ಜಗಾಮ ಜಗಮ ಜಗ್ಮಿವ ಜಗ್ಮಿಮ. ಗಮ್ಲೃ ಗತೌ ಲಿಟ್.

ಅವ — ಬುದ್ಧಿಸಾಗರ ಮತ್ತು ವಾದಿಸಿಂಹರೆಂಬ ಇಬ್ಬರು ವಾದಿಗಳು ಅಚ್ಯುತಪ್ರೇಕ್ಷಾಚಾರ್ಯರ ಜತೆಗೆ ವಾದಕ್ಕೆ ಬಂದರೆಂದು ಮತ್ತೊಂದು ಕಥೆಯನ್ನು ಆರಂಭಿಸುತ್ತಾರೆ—

ಸಮಸ್ತವಾದೀಂದ್ರಗಜಪ್ರಭಂಗದ-
ಶ್ಚರನ್ನವನ್ಯಾಂ ಪ್ರತಿಪಕ್ಷಕಾಂಕ್ಷಯಾ ।
ವೇದದ್ವಿಷಾಂ ಯಃ ಪ್ರಥಮಃ ಸಮಾಯಯೌ
ಸವಾದಿಸಿಂಹೋಽತ್ರ ಸ ಬುದ್ಧಿಸಾಗರಃ ॥೮॥

ಅ — ಸಮಸ್ತವಾದೀಂದ್ರಗಜಪ್ರಭಂಗದಃ ಅವನ್ಯಾಂ ಪ್ರತಿಪಕ್ಷಕಾಂಕ್ಷಯಾ ಚರನ್ ವೇದದ್ವಿಷಾಂ ಯಃ ಪ್ರಥಮಃ ಸಃ ಬುದ್ಧಿಸಾಗರಃ ಅತ್ರ ಸವಾದಿಸಿಂಹಃ (ಸನ್) ಸಮಾಯಯೌ ।

ಅ. ಅ. — ಸಮಸ್ತ = ಎಲ್ಲಾ, ವಾದೀಂದ್ರ = ವಾದಿಶ್ರೇಷ್ಠರೆಂಬ, ಗಜ = ಆನೆಗಳಿಗೆ, ಪ್ರಭಂಗದಃ = ಪರಾಜಯವನ್ನುಂಟುಮಾಡುತ್ತಿದ್ದ, ಅವನ್ಯಾಂ = ಭೂಮಿಯಲ್ಲಿ, ಪ್ರತಿಪಕ್ಷಕಾಂಕ್ಷಯಾ = ಪ್ರತಿವಾದಿಗಳನ್ನು (ಜಯಿಸುವ) ಅಪೇಕ್ಷೆಯಿಂದ, ಚರನ್ = ಸಂಚರಿಸುತ್ತಿದ್ದ, ವೇದದ್ವಿಷಾಂ = ವೇದವು ಪ್ರಮಾಣವಲ್ಲವೆಂದು ಸಾಧಿಸುವ ಬೌದ್ಧರ ಮಧ್ಯದಲ್ಲಿ, ಯಃ = ಯಾವನು, ಪ್ರಥಮಃ = ಮೊದಲನೆಯವನೋ, ಸಃ ಬುದ್ಧಿಸಾಗರಃ = ಅಂತಹ ಬುದ್ಧಿಸಾಗರನೆಂಬ ವಾದಿಯು, ಅತ್ರ = ಈ ಅಚ್ಯುತಪ್ರೇಕ್ಷರ ಹತ್ತಿರ, ಸವಾದಿಸಿಂಹಃ (ಸನ್) = ವಾದಿಸಿಂಹನೆಂಬ ತನ್ನ ಅನುಯಾಯಿಯಿಂದ ಸಹಿತನಾಗಿ, ಸಮಾಯಯೌ = ಬಂದನು.

ತಾ — ವೇದಾಪ್ರಾಮಾಣ್ಯವನ್ನು ಸಾಧಿಸುವುದರಿಂದ ವೇದದ್ವೇಷಿಗಳಾದ

Rarest Archiver

ಬೌದ್ಧರಲ್ಲಿ ಅಗ್ರಗಣ್ಯನಾದ ಬುದ್ಧಿಸಾಗರನೆಂಬ ವಾದಿಯು ಪ್ರತಿವಾದಿ ಗಜಗಳನ್ನೆಲ್ಲಾ ಜಯಿಸಿ, ಇನ್ನು ನನ್ನೊಡನೆ ವಾದ ಮಾಡುವವರು ಎಲ್ಲಿ ಇದ್ದಾರೆಂದು ಹುಡುಕುತ್ತಾ ಭೂಮಂಡಲದಲ್ಲೆಲ್ಲಾ ತಿರುಗಾಡುತ್ತಿದ್ದನು. ವಾದಿಸಿಂಹನೆಂಬ ಬ್ರಾಹ್ಮಣನು ತಾರ್ಕಿಕನಾಗಿದ್ದು ಬುದ್ಧಿಸಾಗರನೊಡನೆ ವಾದಿಸಿ ಸೋತು ಬೌದ್ಧರ ಪಕ್ಷವನ್ನೇ ಸ್ವೀಕರಿಸಿ ಬುದ್ಧಿಸಾಗರನೊಡನೆಯೇ ತಿರುಗಾಡುತ್ತಿದ್ದನು. ಅಂತಹ ವಾದಿಸಿಂಹನೊಡನೆ ಬುದ್ಧಿಸಾಗರನು ಅಚ್ಯುತಪ್ರೇಕ್ಷಾಚಾರ್ಯರ ಬಳಿ ವಾದಕ್ಕಾಗಿ ಬಂದನು.

ವಿ—ವಾದಿನಾಂ ಇಂದ್ರಾಃ ವಾದೀಂದ್ರಾಃ ಸಮಸ್ತಾಶ್ಚ ತೇ ವಾದೀಂದ್ರಾಶ್ಚ ಸಮಸ್ತವಾದೀಂದ್ರಾಃ ಸಮಸ್ತವಾದೀಂದ್ರಾಃ ಏವ ಗಜಾಃ ಸಮಸ್ತವಾದೀಂದ್ರಗಜಾಃ, ಪ್ರಭಂಗಂ ದದಾತೀತಿ ಪ್ರಭಂಗದಃ, ಸಮಸ್ತವಾದೀಂದ್ರಗಜಾನಾಂ ಪ್ರಭಂಗದಃ ಸಮಸ್ತ....ದಃ, ಪ್ರತಿಪಕ್ಷಸ್ಯ ಕಾಂಕ್ಷಾ ಪ್ರತಿಪಕ್ಷಕಾಂಕ್ಷಾ ತಯಾ, ವೇದಾನ್ ದ್ವಿಷಂತೀತಿ ವೇದದ್ವಿಷಃ ತೇಷಾಂ, ವಾದಿಸಿಂಹೇನ ಸಹಿತಃ ಸವಾದಿಸಿಂಹಃ.

ಕ್ರಿ—ಸಮ್+ಆ+ಯಯೌ, ಯಯತುಃ ಯಯುಃ, ಯಯಿಥ ಯಯಾಥ, ಯಯಥುಃ ಯಯ, ಯಯೌ ಯಯಿವ ಯಯಿಮ. ಯಾ ಪ್ರಾಪಣೇ ಲಿಟ್.

ಅವ—ಆಗ ಅಚ್ಯುತಪ್ರೇಕ್ಷರು ಆ ವಾದಿಗಳನ್ನು ಜಯಿಸುವುದಕ್ಕಾಗಿ ಬೇರೆ ಮಠದಲ್ಲಿರುವ ಶ್ರೀಮಧ್ವಾಚಾರ್ಯರನ್ನು ಕರೆಸಿದರೆಂದು ಹೇಳುತ್ತಿದ್ದಾರೆ—

ತಸ್ಯೋರುದುರ್ಗರ್ವವತೋ ಜಿಗೀಷಯಾ
ನಿಶಾತಮಾದತ್ತ ಮುಕುಂದಧೀರ್ದ್ರುತಮ್-
ಸ್ವಶಿಷ್ಯಹಸ್ತೇನ ಮಠಾಂತರೇಷುಧೇಃ
ಸುಪಕ್ಷದಕ್ಷಂ ಸುಖತೀರ್ಥಮಾರ್ಗಣಮ್ ॥೯॥

ಅ—ಮುಕುಂದಧೀಃ ಉರುದುರ್ಗರ್ವವತಃ ತಸ್ಯ ಜಿಗೀಷಯಾ ನಿಶಾತಂ ಸುಪಕ್ಷದಕ್ಷಂ ಸುಖತೀರ್ಥಮಾರ್ಗಣಂ ಮಠಾಂತರೇಷುಧೇಃ, ಸ್ವಶಿಷ್ಯಹಸ್ತೇನ ದ್ರುತಂ ಆದತ್ತ ।

Rarest Archive

ಅ. ಅ.—ಮುಕುಂದಧೀಃ = ಅಚ್ಯುತಪ್ರೇಕ್ಷಾಚಾರ್ಯರು, ಉರು-ದುರ್ಗರ್ವತಃ = ಹೆಚ್ಚಾದ ದುರಹಂಕಾರವುಳ್ಳ, ತಸ್ಯ = ಆ ಬುದ್ಧಿಸಾಗರನ, ಜಿಗೀಷಯಾ = ಜಯದ ಅಪೇಕ್ಷೆಯಿಂದ, ನಿಶಾತಂ = ಬುದ್ಧಿವಂತನಾದ, ಹರಿತವಾದ, ಸುಪಕ್ಷದಕ್ಷಂ = ಒಳ್ಳೆಯ ಸಿದ್ಧಾಂತದಲ್ಲಿ ಕುಶಲನಾದ, ಒಳ್ಳೆಯ (ಬಾಣದ) ರೆಕ್ಕೆಯಿಂದ ಸಮರ್ಥವಾದ, ಸುಖತೀರ್ಥಮಾರ್ಗಣಂ = ಆನಂದ ತೀರ್ಥರೆಂಬ ಬಾಣವನ್ನು, ಮತಾಂತರ = ಬೇರೊಂದು ಮತವೆಂಬ, ಇಷುಧೇಃ = ಬತ್ತಳಿಕೆಯಿಂದ, ಸ್ವಶಿಷ್ಯಹಸ್ತೇನ = ತನ್ನ ಶಿಷ್ಯನೆಂಬ ಕೈಯಿಂದ, ತನ್ನ ಶಿಷ್ಯ ನಂತಿರುವ ಕೈಯಿಂದ, ದ್ರುತಂ = ಜಾಗ್ರತೆಯಾಗಿ, ಆದತ್ತ = ಕರೆಯಿಸಿದರು, ತೆಗೆದುಕೊಂಡರು.

ತಾ—ಒಬ್ಬ ಭಟನು ತನ್ನ ಶತ್ರುವನ್ನು ಗೆಲ್ಲುವುದಕ್ಕಾಗಿ, ಹರಿತವಾದ ಒಳ್ಳೆಯ ಗರಿಯನ್ನು ಜೋಡಿಸಿದ್ದರಿಂದ ಅತಿವೇಗವುಳ್ಳ ಬಾಣವನ್ನು ಬತ್ತಳಿಕೆ ಯಿಂದ ತನ್ನ ಶಿಷ್ಯನಂತಿರುವ ಕೈಯಿಂದ ತೆಗೆದುಕೊಳ್ಳುತ್ತಾನೆ. ಅದರಂತೆ ಅಚ್ಯುತಪ್ರೇಕ್ಷರು ತನಗೆ ಸಮಾನರಿಲ್ಲವೆಂಬ ದುರಹಂಕಾರದಿಂದ ಕೊಬ್ಬಿದ್ದ ಆ ಬುದ್ಧಿಸಾಗರನನ್ನು ಸೋಲಿಸಲು ತೀಕ್ಷ್ಣಬುದ್ಧಿಯುಳ್ಳವರೂ, ತನ್ನ ಸಿದ್ಧಾಂತ ವನ್ನು ಸಾಧಿಸುವುದರಲ್ಲಿ ಸಮರ್ಥರೂ ಆದ ಬೇರೆ ಮತದಲ್ಲಿದ್ದ ಶ್ರೀಮಧ್ವಾಚಾರ್ಯ ರನ್ನು ತನ್ನ ಒಬ್ಬ ಶಿಷ್ಯನನ್ನು ಕಳುಹಿಸಿ ಉಡುಪಿಗೆ ಬೇಗನೆ ಕರೆಸಿಕೊಂಡರು.

ವಿ—ಉರುಶ್ಚಾಸೌ ದುರ್ಗರ್ವಶ್ಚ ಉರುದುರ್ಗರ್ವಃ ಸಃ ಅಸ್ಯ ಅಸ್ತೀತಿ ಉರುದುರ್ಗರ್ವವಾನ್ ತಸ್ಯ, ಜೇತುಂ ಇಚ್ಛಾ ಜಿಗೀಷಾ ತಯಾ, ಸ್ವಸ್ಯ ಶಿಷ್ಯಃ ಸ್ವಶಿಷ್ಯಃ ತಸ್ಯ ಹಸ್ತಃ ತೇನ, ಅನ್ಯೋ ಮತಃ ಮತಾಂತರಂ, ತದೇವ ಇಷುಧಿಃ ಮತಾಂತರೇಷುಧಿಃ ತಸ್ಮಾತ್, ಶೋಭನಶ್ಚಾಸೌ ಪಕ್ಷಶ್ಚ ಸುಪಕ್ಷಃ ಸುಪಕ್ಷೇ ದಕ್ಷಃ ಸುಪಕ್ಷದಕ್ಷಃ ತಂ, ಸುಖತೀರ್ಥ ಏವ ಮಾರ್ಗಣಃ ಸುಖತೀರ್ಥಮಾರ್ಗಣಃ ತಂ.

ಕ್ರಿ—ಆ + ಆದತ್ತ ಆದದಾತಾಂ ಆದದತ, ಆದತ್ಥಾಃ ಆದದಾಥಾಂ ಆದದ್ಧ್ವಂ, ಆದದಿ ಆದದ್ವಹಿ ಆದದ್ಮಹಿ. ಡು (ದಾ)' ಞ್ ದಾನೇ ಆತ್ಮನೇ ಲಙ್.

ಅವ—ಈ ವಾದಯುದ್ಧದಲ್ಲಿ ಯಾರು ಜಯಿಸುವರೆಂದು ತಿಳಿಯಲು

Rarest Archiver

ಅಲ್ಲಿ ಜನರ ಸಮೂಹವು ಸೇರಿದ್ದಾಗ ಶ್ರೀಮಧ್ವಾಚಾರ್ಯರು ಬಂದು ಗುರುಗಳಿಗೆ ವಂದಿಸಿದರೆಂದು ಹೇಳುತ್ತಾರೆ—

ಜೈತ್ರಂ ಪ್ರಜಿಜ್ಞಾಸು ಕುತೂಹಲಾಕುಲಂ
ನೃಣಾಂ ಕುಲಂ ಪ್ರತ್ವರಿತಂ ನಿಶಾಮಯನ್ ।
ಅವಂದತೋಪೇತ್ಯ ಗುರುಂ ಗರಿಷ್ಠಧೀಃ
ಸ ರೂಪ್ಯಪೀಠಾಯತನೋತ್ತಮಸ್ಥಿತಮ್ ॥೧೦॥

ಅ—ಗರಿಷ್ಠಧೀಃ ಸಃ ಜೈತ್ರಂ ಪ್ರಜಿಜ್ಞಾಸು ಕುತೂಹಲಾಕುಲಂ ಪ್ರತ್ವರಿತಂ ನೃಣಾಂ ಕುಲಂ ನಿಶಾಮಯನ್ ರೂಪ್ಯಪೀಠಾಯತನೋತ್ತಮಸ್ಥಿತಂ ಗುರುಂ ಉಪೇತ್ಯ ಅವಂದತ ।

ಅ. ಅ. — ಗರಿಷ್ಠಧೀಃ = ಶ್ರೇಷ್ಠವಾದ ಬುದ್ಧಿಯುಳ್ಳ, ಸಃ = ಆ ಪೂರ್ಣಪ್ರಜ್ಞಾಚಾರ್ಯರು, ಜೈತ್ರಂ = ಜಯಶಾಲಿಯನ್ನು, ಪ್ರಜಿಜ್ಞಾಸು = ತಿಳಿಯುವ ಇಚ್ಛೆಯುಳ್ಳ, ಕುತೂಹಲಾಕುಲಂ = ಕೌತುಕದಿಂದ ತುಂಬಿದ, ಪ್ರತ್ವರಿತಂ = ತುಂಬಾ ಅವಸರವುಳ್ಳ, ನೃಣಾಂ ಕುಲಂ = ಮನುಷ್ಯರ ಸಮೂಹವನ್ನು, ನಿಶಾಮಯನ್ = ನೋಡುತ್ತಾ, ರೂಪ್ಯಪೀಠ = ಉಡುಪಿಯಲ್ಲಿರುವ, ಆಯತನೋತ್ತಮ = ಶ್ರೇಷ್ಠವಾದ ಮಠದಲ್ಲಿ, ಸ್ಥಿತಂ = ಇರುವ, ಗುರುಂ = ಗುರುಗಳಾದ ಅಚ್ಯುತಪ್ರೇಕ್ಷರನ್ನು, ಉಪೇತ್ಯ = ಸಮೀಪಿಸಿ, ಅವಂದತ = ನಮಸ್ಕರಿಸಿದರು.

ತಾ— 'ಈಗ ನಡೆಯಲಿರುವ ಈ ವಾದಯುದ್ಧದಲ್ಲಿ ಯಾರು ಜಯಿಸುವರೋ' ಎಂದು ತಿಳಿಯಲು ಅಪೇಕ್ಷಿಸಿ ತುಂಬಾ ಕುತೂಹಲ ಮತ್ತು ಅವಸರದಿಂದ ರಜತಪೀಠಪುರದ ಅಚ್ಯುತಪ್ರೇಕ್ಷರ ಮಠದಲ್ಲಿ ದೊಡ್ಡಜನ ಸಮೂಹವು ಸೇರಿತ್ತು. ಶ್ರೀಮಧ್ವಾಚಾರ್ಯರು ಆ ಜನರನ್ನು ನೋಡುತ್ತಾ ಅಚ್ಯುತಪ್ರೇಕ್ಷಾಚಾರ್ಯರ ಬಳಿಗೆ ಬಂದು ವಂದಿಸಿದರು.

ವಿ—ಪ್ರಜ್ಞಾತುಂ ಇಚ್ಛು ಪ್ರಜಿಜ್ಞಾಸು, ಕುತೂಹಲೇನ ಆಕುಲಂ ಕುತೂಹಲಾಕುಲಂ ತತ್, ಗರಿಷ್ಠಾ ಧೀಃ ಯಸ್ಯ ಸಃ ಗರಿಷ್ಠಧೀಃ, ರೂಪ್ಯಾತ್ಮಕಂ ಪೀಠಂ ರೂಪ್ಯಪೀಠಂ, ಆಯತನೇಷು ಉತ್ತಮಂ ಆಯತನೋತ್ತಮಂ ರೂಪ್ಯ-ಪೀಠೇ ಆಯತನೋತ್ತಮಂ ರೂಪ್ಯ....ತ್ತಮಂ ತಸ್ಮಿನ್ ಸ್ಥಿತಃ ತಂ.

Rarest Archiver

ಕ್ರಿ—ಅವಂದತ ಅವಂದೇತಾಂ ಅವಂದಂತ, ಅವಂದಥಾಃ ಅವಂದೇಥಾಂ ಅವಂದಧ್ವಂ, ಅವಂದೇ ಅವಂದಾವಹಿ ಅವಂದಾಮಹಿ. ವದಿ ಅಭಿವಾದನ ಸ್ತುತ್ಯೋಃ ಆತ್ಮನೇ. ಲಙ್.

ಅವ—ಆ ಮಧ್ವಾಚಾರ್ಯರು ಮೊದಲು ವಾದಿಸಿಂಹನನ್ನು ಗೆದ್ದುದನ್ನು ವಿವರಿಸುತ್ತಾರೆ—

ಸ ವಾದಿಸಿಂಹಸ್ಯ ಗಿರಂ ಗರೀಯಸೀಮ್
ಅಖಂಡಯತ್ ಪಂಡಿತಮಂಡಲಾಂತರೇ ।
ತೀಕ್ಷ್ಣೇನ ವಾಕ್ಯೇನ ಮಿತೇನ ವೇಗಿನಾ
ಗದಾಂ ಶರೇಣೇವ ವಿಶಾರದೋ ಮುಹುಃ ॥೧೧॥

ಅ—ವಿಶಾರದಃ ಸಃ ತೀಕ್ಷ್ಣೇನ ಮಿತೇನ ವೇಗಿನಾ ವಾಕ್ಯೇನ ವಾದಿಸಿಂಹಸ್ಯ ಗರೀಯಸೀಂ ಗಿರಂ ಶರೇಣ ಗದಾಂ ಇವ ಪಂಡಿತಮಂಡಲಾಂತರೇ ಮುಹುಃ ಅಖಂಡಯತ್।

ಅ.ಅ.—ವಿಶಾರದಃ ಸಃ = ವಾದಿನಿಗ್ರಹದಲ್ಲಿ ಕುಶಲರಾದ ಆ ಪೂರ್ಣಪ್ರಜ್ಞಾಚಾರ್ಯರು, ತೀಕ್ಷ್ಣೇನ = ಸಹಿಸಲಾಗದ, ಹರಿತವಾದ, ಮಿತೇನ = ಸ್ವಲ್ಪವಾದ, ಅಲ್ಪಪರಿಮಾಣದ, ವೇಗಿನಾ = ವೇಗವುಳ್ಳ, ವಾಕ್ಯೇನ = ಮಾತಿನಿಂದ, ವಾದಿಸಿಂಹಸ್ಯ = ವಾದಿಸಿಂಹನ, ಗರೀಯಸೀಂ = ಪ್ರಬಲವಾದ, ತುಂಬಾ ಭಾರವಾದ, ಗಿರಂ = ಮಾತನ್ನು, ಗದಾಂ ಇವ = ಗದೆಯನ್ನು ಎಂಬಂತೆ, ಪಂಡಿತಮಂಡಲಾಂತರೇ = ಪಂಡಿತರ ಸಮೂಹದ ನಡುವೆ, ಮುಹುಃ = ಬಾರಿ ಬಾರಿಗೂ, ಅಖಂಡಯತ್ = ಖಂಡಿಸಿದರು.

ತಾ:—ಶ್ರೀಪೂರ್ಣಪ್ರಜ್ಞರು ಪ್ರತಿವಾದಿಗಳನ್ನು ನಿರಾಕರಿಸುವುದರಲ್ಲಿ ಅತ್ಯಂತ ನಿಪುಣರು. ಒಬ್ಬ ಯುದ್ಧ ಚತುರನಾದ ಭಟನು ಒಳ್ಳೆಯ ವೇಗವುಳ್ಳ, ಹರಿತವಾದ ಚಿಕ್ಕಬಾಣವನ್ನು ಪ್ರಯೋಗಿಸಿ ಪ್ರತಿಯೋಧನ ಭಾರವಾದ ದೊಡ್ಡ ಗದಾಯುಧವನ್ನು ತುಂಡರಿಸುವನು. ಅದರಂತೆ ಮಧ್ವಾಚಾರ್ಯರು ಪಂಡಿತರ ಸಮಾಜದ ಮಧ್ಯದಲ್ಲಿ ಪ್ರತಿವಾದಿಗೆ ನಿರಾಕರಿಸಲು ಸಾಧ್ಯವಿಲ್ಲದ ಅಲ್ಪಶಬ್ದವುಳ್ಳ ತನ್ನ ಪ್ರತಿವಾದದ ಮಾತನ್ನು ವಾದಿಯ ಮಾತು ನಿಂತಕೂಡಲೇ

Rarest Archiver

ಪ್ರಯೋಗಿಸಿ ವಾದಿಸಿಂಹನ ದೊಡ್ಡ ಮಾತನ್ನು ಚೆನ್ನಾಗಿ ಖಂಡಿಸಿದರು. (ಬುದ್ಧಿ ಸಾಗರನ ಸಮ್ಮತಿಯಿಂದ ಮೊದಲು ವಾದಿಸಿಂಹನೇ ವಾದಮಾಡಿದನು. ಆಚಾರ್ಯರು ಅವನ ದೊಡ್ಡ ಪೂರ್ವಪಕ್ಷವನ್ನು ಚಿಕ್ಕಮಾತಿನಿಂದ ನಿರಾಕರಿಸಿದರು.)

ವಿ.—ಅತಿಶಯೇನ ಗುರುಃ ಗರೀಯಸೀ ತಾಂ, ಪಂಡಿತಾನಾಂ ಮಂಡಲಂ ಪಂಡಿತಮಂಡಲಂ, ಪಂಡಿತಮಂಡಲಸ್ಯ ಅಂತರಂ ಪಂಡಿತಮಂಡಲಾಂತರಂ ತಸ್ಮಿನ್, ವೇಗಃ ಅಸ್ಯ ಅಸ್ತೀತಿ ವೇಗಿ (ವಾಕ್ಯಂ) (ವೇಗೀ ಶರಃ) ತೇನ,

ಕ್ರಿ.—ಅಖಂಡಯತ್ ಅಖಂಡಯತಾಮ್ ಅಖಂಡಯನ್ ಇತ್ಯಾದಿ ಖಡಿ ಭೇದನೇ ಚುರಾದಿ ಲಙ್.

ಅವ.—ಆ ಕೂಡಲೇ ವಾದಿಸಿಂಹನ ವಾದಚಮತ್ಕಾರದಿಂದ ಜನರು ಬೆರಗಾದರು ಎಂದು ಹೇಳುತ್ತಾರೆ—

ಅಸಾವಸೂಯನ್ ದ್ವಿನವಪ್ರಕಾರತೋ
ವ್ಯಚೀಕ್ಲೃಪತ್ ಕಂಚಿದಥಾರ್ಥಮುಚ್ಚಕೈಃ ।
ಜಗದ್ವಿಜೇತುಶ್ಚ ಜಯೋ ಸಸಂಶಯಃ
ಸ್ತಾವಜ್ಜನೋಽಜಾಯತ ಪೂರ್ಣಚೇತಸಃ ॥೧೨॥

ಅ—ಅಥ ಅಸೂಯನ್ ಅಸೌ ಕಂಚಿತ್ ಅರ್ಥಂ ಉಚ್ಚಕೈಃ ದ್ವಿನವ-ಪ್ರಕಾರತಃ ವ್ಯಚೀಕ್ಲೃಪತ್. ತಾವತ್ ಜನಃ ಜಗದ್ವಿಜೇತುಃ ಪೂರ್ಣಚೇತಸಃ ಜಯೇ ಚ ಸಸಂಶಯಃ ಅಜಾಯತ ।

ಅ.ಅ.—ಅಥ = ಅನಂತರ, ಅಸೂಯನ್ = ಹೊಟ್ಟೆಕಿಚ್ಚಿನವನಾದ, ಅಸೌ = ಈ ವಾದಿಸಿಂಹನು, ಕಂಚಿತ್ = ಯಾವುದೋ ಒಂದು, ಅರ್ಥಂ = ವಿಷಯವನ್ನು, ಉಚ್ಚಕೈಃ = ಗಟ್ಟಿಯಾಗಿ, ದ್ವಿನವಪ್ರಕಾರತಃ = ಹದಿನೆಂಟು ಪ್ರಕಾರಗಳಿಂದ, ವ್ಯಚೀಕ್ಲೃಪತ್ = ಹೀಗೋ ಹಾಗೋ ಎಂದು ವಿಕಲ್ಪಮಾಡಿದನು, ತಾವತ್ = ಆಗ, ಜನಃ = ಅಲ್ಲಿ ಸೇರಿದ್ದ ಜನರು, ಜಗತ್ = ಲೋಕವನ್ನು, ವಿಜೇತುಃ = ಜಯಿಸುವ, ಪೂರ್ಣಚೇತಸಃ = ಪೂರ್ಣಪ್ರಜ್ಞರ,

Rarest Archiver

ಜಯೇ ಚ = ಜಯದ ವಿಷಯದಲ್ಲಿಯೂ, ಸಸಂಶಯಃ = ಸಂದೇಹದಿಂದ ಕೂಡಿದವರು, ಅಜಾಯತ=ಆದರು.

ತಾ—ಶ್ರೀಮಧ್ವಾಚಾರ್ಯರು ಆ ವಾದಿಸಿಂಹನ ವಚನವನ್ನು ಖಂಡಿಸಿದಾಗ ಆತನು ಆಚಾರ್ಯರ ಈ ಜಯವನ್ನೂ, ಮೇಲ್ಮೆಯನ್ನೂ ಸಹಿಸಲಾರದೆ ಅಸೂಯೆಯಿಂದ ಒಂದು ವಿಷಯವನ್ನು ತೆಗೆದುಕೊಂಡು ಅದರಲ್ಲಿ ಹದಿನೆಂಟು ವಿಕಲ್ಪಗಳನ್ನು (ಪ್ರಕಾರಭೇದಗಳನ್ನು) ಘಟ್ಟಿಯಾದ ಸ್ವರದಿಂದ ಹೇಳಿದನು. ಆಗ ಅಲ್ಲಿ ನೆರೆದಿದ್ದ ಜನರು ಈ ಪೂರ್ಣಪ್ರಜ್ಞಾಚಾರ್ಯರು ಇಂತಹ ವಾದಿಸಿಂಹನನ್ನು ಹೇಗೆ ಗೆದ್ದಾರೆಂದು ಜಗತ್ತನ್ನೇ ಜಯಿಸಲು ಸಮರ್ಥರಾದ ಅವರ ವಿಷಯದಲ್ಲಿ ಸಂಶಯಪಟ್ಟರು.

ವಿ.—ನವ ಚ ತೇ ಪ್ರಕಾರಾಶ್ಚ ನವಪ್ರಕಾರಾಃ, ದ್ವೌ ಚ ತೇ ನವ-ಪ್ರಕಾರಾಶ್ಚ ದ್ವಿನವಪ್ರಕಾರಾಃ, ತೈಃ ಇತಿ ದ್ವಿನವಪ್ರಕಾರತಃ, ಜಗತಃ ವಿಜೇತಾ ಜಗದ್ವಿಜೇತಾ ತಸ್ಯ, ಸಂಶಯೇನ ಸಹಿತಃ ಸಸಂಶಯಃ, ಪೂರ್ಣಂ ಚೇತಃ ಯಸ್ಯ ಸಃ ಪೂರ್ಣಚೇತಾಃ ತಸ್ಯ,

ಕ್ರಿ.—ವಿ+ಅಚೀಕ್ಲೃಪತ್ ಅಚೀಕ್ಲೃಪತಾಂ ಅಚೀಕ್ಲೃಪನ್ ಇತ್ಯಾದಿ, ಕೃಪೂ ಸಾಮರ್ಥ್ಯೇ ಣಿಜಂತ ಲುಙ್. ಅಜಾಯತ ಅಜಾಯೇತಾಂ ಅಜಾಯಂತ ಇತ್ಯಾದಿ ಜನೀ ಪ್ರಾದುರ್ಭಾವೇ ಲಙ್.

ಅವ.—ಆಗ ಮಧ್ವಾಚಾರ್ಯರು ವಾದಿಸಿಂಹನು ಮಾಡಿದ ವಿಕಲ್ಪಗಳನ್ನು ಖಂಡಿಸಿ ಮಂದಹಾಸದಿಂದ ಸುಂದರವದನರಾಗಿ ಕಂಗೊಳಿಸಿದರು ಎನ್ನುತ್ತಾರೆ–

ವಿಕಲ್ಪಕೋಟೀರಥ ಖಂಡಯನ್ ದ್ರುತಂ
ರೇಜೇಽಧಿಕಂ ಸ್ಮೇರಮುಖೋ ಬೃಹನ್ಮತಿಃ ।
ತಮಸ್ತತೀರ್ವಾ ದ್ಯುಮಣಿರ್ವಿಶುದ್ಧಯಾ
ಗವಾಶ್ರಿತೋ ವಿಷ್ಣುಪದಂ ಸದಾಸ್ಪದಮ್ ॥೧೩॥

ಅ—ಅಥ ಸದಾಸ್ಪದಂ ವಿಷ್ಣುಪದಂ ಶ್ರಿತಃ ಸ್ಮೇರಮುಖಃ ಬೃಹನ್ಮತಿಃ,

Rarest Archiver

ವಿಕಲ್ಪಕೋಟೀಃ ದ್ರುತಂ ವಿಶುದ್ಧಯಾ ಗವಾ ದ್ಯುಮಣಿಃ ತಮಸ್ತತೀಃ ವಾ ಖಂಡಯನ್ ಅಧಿಕಂ ರೇಜೇ.

ಅ.ಅ.—ಅಥ=ಅನಂತರ, ಸದಾಸ್ಪದಂ=ಸಜ್ಜನರಿಗೆ ಆಶ್ರಯವಾದ, ನಕ್ಷತ್ರಗಳಿಗೆ ಮತ್ತು ಪ್ರಾಣಿಗಳಿಗೆ ಆಶ್ರಯವಾದ, ವಿಷ್ಣುಪದಂ = ಶ್ರೀಹರಿಯ ಪಾದವನ್ನು, ಆಕಾಶವನ್ನು, ಶ್ರಿತಃ=ಆಶ್ರಯಿಸಿದ, ಸ್ಮೇರಮುಖಃ=ಮಂದಹಾಸ ದಿಂದ ಕೂಡಿದ ಮುಖವುಳ್ಳ, ಬೃಹನ್ಮತಿಃ = ಶ್ರೀಪೂರ್ಣಪ್ರಜ್ಞಾಚಾರ್ಯರು, ವಿಕಲ್ಪಕೋಟೀಃ=ವಿಕಲ್ಪಗಳ ಪ್ರಕಾರಗಳನ್ನು, ದ್ರುತಂ=ಬೇಗನೇ, ವಿಶುದ್ಧ-ಯಾ=ಶಬ್ದ ಮತ್ತು ಅರ್ಥದೋಷಗಳಿಲ್ಲದ, ಗವಾ = ಮಾತಿನಿಂದ, ಕಿರಣ ದಿಂದ, ದ್ಯುಮಣಿಃ=ಸೂರ್ಯನು, ತಮಸ್ತತೀಃ ವಾ=ಕತ್ತಲೆಯ ಸಮೂಹ ವನ್ನೆಂಬಂತೆ, ಖಂಡಯನ್=ನಿರಾಕರಿಸುತ್ತಾ, ಅಧಿಕಂ=ಹೆಚ್ಚಾಗಿ, ರೇಜೇ =ಪ್ರಕಾಶಿಸಿದರು.

ತಾ — ಆಕಾಶವು ನಕ್ಷತ್ರಗಳಿಗೆ ಆಧಾರವಾಗಿದೆ. ಪ್ರಾಣಿಗಳ ಸಂಚಾರಕ್ಕೂ ಅನುಕೂಲವಾಗಿದೆ. ಸೂರ್ಯನು ಇಂತಹ ಆಕಾಶವನ್ನು ಆಶ್ರಯಿಸಿ ನಿರ್ಮಲವಾದ ತನ್ನ ಕಿರಣಗಳಿಂದ ಕತ್ತಲೆಯ ರಾಶಿಯನ್ನು ಕತ್ತರಿಸಿ ನಾಶಗೊಳಿಸುತ್ತಾನೆ. ಹಾಗೆಯೇ ಅಲ್ಲಿ ಸೇರಿದ ಜನರು ಈ ಪೂರ್ಣಪ್ರಜ್ಞಾ ಚಾರ್ಯರು ವಾದಿಸಿಂಹನ ವಿಕಲ್ಪಗಳನ್ನು ಖಂಡಿಸುವರೋ ಇಲ್ಲವೋ ಎಂದು ಸಂದೇಹ ಪಡುತ್ತಿರುವಾಗಲೇ, ಸಜ್ಜನರಿಗೆ ಆಶ್ರಯವಾದ ಶ್ರೀಮನ್ನಾರಾಯಣನ ಪಾದವನ್ನು ಆಶ್ರಯಿಸಿದ ಈ ಪೂರ್ಣಪ್ರಜ್ಞಾಚಾರ್ಯರು ಮಂದಹಾಸ ಮಾಡಿ ದರು. ಮತ್ತು ಅನಾಯಾಸವಾಗಿ ವಾದಿಸಿಂಹನ ವಿಕಲ್ಪಪ್ರಕಾರಗಳನ್ನು ಬೇಗನೇ ನಿರ್ದೋಷವಾದ ಮಾತುಗಳಿಂದ ನಿರಾಕರಿಸಿ ಕತ್ತಲೆಯನ್ನು ನಾಶಗೊಳಿಸಿದ ಬಳಿಕ ಸೂರ್ಯನಂತೆ ಮತ್ತೂ ಕಂಗೊಳಿಸಿದರು. (ಸೂರ್ಯನ ಕಿರಣವು ತಲೆ ದೋರಿದ ಕೂಡಲೇ ಕತ್ತಲೆಯು ತಾನಾಗಿಯೇ ಯಾವ ಪ್ರಯಾಸವೂ ಇಲ್ಲದೆ ಅಡಗಿ ಹೋಗುವಂತೆ ಆಚಾರ್ಯರ ಮಾತಿನಿಂದ ಸುಲಭವಾಗಿ ಆ ವಿಕಲ್ಪಗಳೆಲ್ಲ ಖಂಡಿಸಲ್ಪಟ್ಟವು ಎಂದು ಭಾವವು).

ವಿ.—ವಿಕಲ್ಪಸ್ಯ ಕೋಟಯಃ ವಿಕಲ್ಪಕೋಟಯಃ ತಾಃ, ಸ್ಮೇರಂ ಮುಖಂ ಯಸ್ಯ ಸಃ ಸ್ಮೇರಮುಖಃ, ಬೃಹತೀ ಮತಿಃ ಯಸ್ಯ ಸಃ ಬೃಹನ್ಮತಿಃ,

Rarest Archiver

(ಸತಾಂ ಆಸ್ಪದಂ ಸದಾಸ್ಪದಂ ತತ್) ತಮಸಾಂ ತತಯಃ ತಮಸ್ತತಯಃ, ದಿವಃ ಮಣಿಃ ದ್ಯುಮಣಿಃ, ವಿಷ್ಣೋಃ ಪದಂ ವಿಷ್ಣುಪದಂ ತತ್.

ಕ್ರಿ.—ರೇಜೇ ರೇಜಾತೇ ರೇಜಿರೇ ಇತ್ಯಾದಿ, ರಾಜೃ ದೀಪ್ತೌ ಆತ್ಮನೇ. ಲಿಟ್.

ಅವ.—ಅನಂತರ ಶ್ರೀಮಧ್ವಾಚಾರ್ಯರು ಬುದ್ಧಿಸಾಗರನನ್ನು ಜಯಿಸಿದರೆಂದು ಹೇಳುತ್ತಾರೆ-

ಅಗಾಧಮಾತ್ಮನ್ಯತಿವೇಲಮುದ್ಧತಂ
ತಿರಸ್ಕೃತಾಶೇಷಸರಸ್ವತೀತತಿಮ್ ।
ಕಾಮಂ ಮಹಾಮಾನಸಕುಂಭಸಂಭವೋ
ಲಘೂಚಕಾರೇತ್ಯಪಿ ಬುದ್ಧಿಸಾಗರಮ್ ॥೧೪॥

ಅ.—ಮಹಾಮಾನಸಕುಂಭಸಂಭವಃ ಅಗಾಧಂ ಆತ್ಮನಿ ಅತಿವೇಲಂ ಉದ್ಧತಂ, ತಿರಸ್ಕೃತಾಶೇಷಸರಸ್ವತೀತತಿಂ ಬುದ್ಧಿಸಾಗರಂ ಅಪಿ ಇತಿ ಕಾಮಂ ಲಘೂಚಕಾರ।

ಅ.ಅ.—ಮಹಾಮಾನಸ= ಶ್ರೀಪೂರ್ಣಪ್ರಜ್ಞಾಚಾರ್ಯರೆಂಬ, ಕುಂಭಸಂಭವಃ = ಅಗಸ್ತ್ಯಮುನಿಗಳು, ಅಗಾಧಂ = ಗಂಭೀರಬುದ್ಧಿಯುಳ್ಳ, ಆಳವಾದ, ಆತ್ಮನಿ= ತನ್ನ ವಿಷಯದಲ್ಲಿ, ಅತಿವೇಲಂ = ಬಹಳವಾಗಿ, ದಡವನ್ನು ಮೀರಿ, ಉದ್ಧತಂ= ಅವಿಧೇಯನಾದ, ಉಬ್ಬಿದ, ತಿರಸ್ಕೃತ = ನಿರಾಕರಿಸಿದ, ಅಶೇಷ = ಎಲ್ಲಾ, ಸರಸ್ವತೀ= ವಾದಿಯ ಮಾತುಗಳ, ಮತ್ತು ನದಿಗಳ, ತತಿಂ = ಸಮೂಹವುಳ್ಳ, ಬುದ್ಧಿಸಾಗರಂ ಅಪಿ = ಬುದ್ಧಿಸಾಗರನನ್ನೂ ಕೂಡ, ಇತಿ = ಹೀಗೆಯೇ, ಕಾಮಂ= ಯಥೇಚ್ಛವಾಗಿ, ಲಘೂಚಕಾರ = ಅಲ್ಪನನ್ನಾಗಿ ಮಾಡಿದರು. (ಅಹಂಕಾರವಿಲ್ಲದವನನ್ನಾಗಿ ಮಾಡಿದರು).

ತಾ—ಸಮುದ್ರವು ಅಗಾಧ, ಅಲೆಗಳಿಂದ ತುಂಬಿ ಉಬ್ಬಿ ಮೇಲಕ್ಕೆ ಹಾರುತ್ತಾ ಇರುತ್ತದೆ. ತನ್ನನ್ನು ಸೇರುವುದಕ್ಕೆ ಬರುವ ನದಿಗಳನ್ನು ತನ್ನ ಅಲೆಗಳಿಂದ ಹೊಡೆದು ತಿರಸ್ಕರಿಸುತ್ತದೆ. ಆದರೆ ಅಗಸ್ತ್ಯಮಹರ್ಷಿಗಳು ಇಂತಹ

Rarest Archiver

ಸಮುದ್ರವನ್ನು ಅಲ್ಪೀಕರಿಸಿ ಅಂಗೈಯಲ್ಲಿ ನಿಲ್ಲಿಸಿ ಆಪೋಶನೆ ಮಾಡಿದರು. (ಕುಡಿದು ಬಿಟ್ಟರು). ಆದರಂತೆ ಆಚಾರ್ಯರೂ, ಅತ್ಯಂತ ಬುದ್ಧಿವಂತನೂ, ಅತ್ಯಂತ ದುರಹಂಕಾರಿಯೂ, ಸಕಲಪಂಡಿತರ ವಚನಗಳನ್ನು ಧಿಕ್ಕರಿಸುವವನೂ ಆದ, ಬುದ್ಧಿಸಾಗರನನ್ನು ಅನಾಯಾಸದಿಂದ ಗೆದ್ದರು. ಅವನ ಅಹಂಕಾರವನ್ನು ಖಂಡಿಸಿದರು.

ವಿ—ಅಶೇಷಾಶ್ಚ ತಾಃ ಸರಸ್ವತ್ಯಶ್ಚ ಅಶೇಷಸರಸ್ವತ್ಯಃ, ತಿರಸ್ಕೃತಾ ಅಶೇಷಸರಸ್ವತೀನಾಂ ತತಿಃ ಯೇನ ಸಃ ತಿರಸ್ಕೃತಾಶೇಷಸರಸ್ವತೀತತಿಃ ತಂ, ಮಹತ್ ಮಾನಸಂ ಯಸ್ಯ ಸಃ ಮಹಾಮಾನಸಃ ಮಹಾಮಾನಸ ಏವ ಕುಂಭಸಂಭವಃ ಮಹಾಮಾನಸಕುಂಭಸಂಭವಃ, ಅಲಘುಂ ಲಘುಂ ಸಂಪದ್ಯ-ಮಾನಂ ಚಕಾರ ಲಘೂಚಕಾರ.

ಕ್ರಿ—ಚಕಾರ ಚಕ್ರತುಃ ಚಕ್ರುಃ, ಚಕರ್ಥ ಚಕ್ರಥುಃ ಚಕ್ರ, ಚಕಾರ ಚಕರ ಚಕೃವ ಚಕೃಮ. ಡು (ಕೃ) ಞ್ ಕರಣೇ, ಪರಸ್ಮೈ. ಲಿಟ್.

ಅವ.—ಆ ವಾದಿಗಳಿಬ್ಬರೂ ಸೋತು ರಾತ್ರಿಯಲ್ಲಿಯೇ ಪಲಾಯನ ಮಾಡಿದರೆಂದು ಹೇಳುತ್ತಾರೆ-

ಶ್ವ ಏವ ವಾದೋಽಸ್ತ್ವಿತಿ ವಾದಿನೌ ಖಲಾ
ವದ್ಯೋತ್ತರಂ ಭಾತಿ ಯದೀರ್ಯತಾಮಿತಿ ।
ಮಧ್ವೇ ಬ್ರುವಾಣೇಽಮತ ತೌ ಜಿತೌ ಜನಃ
ಸ ನಿಶ್ಚಿಕಾಯಾಥ ನಿಶಾಪಲಾಯನಾತ್ ॥೧೫॥

ಅ—ವಾದಃ ಶ್ವಃ ಏವ ಅಸ್ತು ಇತಿ ವಾದಿನೌ ಖಲೌ ತೌ, ಮಧ್ವೇ, ಉತ್ತರಂ ಭಾತಿ ಯದಿ ಅದ್ಯ ಉದೀರ್ಯತಾಂ ಇತಿ ಬ್ರುವಾಣೇ (ಸತಿ) ಜನಃ ತೌ ಜಿತೌ ಅಮತ. ಸಃ ಅಥ ನಿಶಾಪಲಾಯನಾತ್ ನಿಶ್ಚಿಕಾಯ ।

ಅ.ಅ—ವಾದಃ = ಚರ್ಚೆಯು, ಶ್ವಃ ಏವ = ನಾಳೆಯೇ, ಅಸ್ತು = ಆಗಲಿ, ಇತಿ = ಹೀಗೆಂದು, ವಾದಿನೌ = ಹೇಳುತ್ತಿರುವ, ಖಲೌ = ದುಷ್ಟರಾದ, ತೌ = ಆ ವಾದಿಸಿಂಹ ಮತ್ತು ಬುದ್ಧಿಸಾಗರರನ್ನು ಕುರಿತು, ಮಧ್ವೇ =

Rarest Archiver

ಮಧ್ವಾಚಾರ್ಯರು, ಉತ್ತರಂ = ಉತ್ತರವು, ಭಾತಿ ಯದಿ = ಹೊಳೆಯು ತ್ತಿದ್ದರೆ, ಅದ್ಯ = ಈ ದಿನವೇ (ಈಗಲೇ), ಉದೀರ್ಯತಾಂ = ಹೇಳಲ್ಪಡಲಿ, ಇತಿ = ಹೀಗೆಂದು, ಬ್ರುವಾಣೇ (ಸತಿ) = ಹೇಳುತ್ತಿರಲು, ಜನಃ = ಜನರು, (ತೌ = ಅವರಿಬ್ಬರನ್ನು) ಜಿತೌ = ಜಯಿಸಲ್ಪಟ್ಟವರನ್ನಾಗಿ, ಅಮತ = ತಿಳಿದರು. ಸಃ = ಆ ಜನರು, ಅಥ = ಬಳಿಕ, ನಿಶಾಪಲಾಯನಾತ್ = ರಾತ್ರಿ (ಅವರಿಬ್ಬರು) ಓಡಿಹೋದುದರಿಂದ, ನಿಶ್ಚಿಕಾಯ = ನಿಶ್ಚಯಿಸಿದರು.

ತಾ—ದುಷ್ಟರಾದ ಆ ವಾದಿಗಳಿಬ್ಬರೂ 'ಇನ್ನು ನಾಳೆಯೇ ವಾದ ನಡೆಯಲಿ' ಎಂದರು. ಆಚಾರ್ಯರು 'ನಿಮಗೆ ಈಗಲೇ ಉತ್ತರ ತಿಳಿದಿದ್ದರೆ ಹೇಳಿರಿ' ಎಂದರು. ಅವರಿಬ್ಬರೂ ಆಚಾರ್ಯರ ಮಾತಿಗೆ ಸುಮ್ಮನಿದ್ದರು. ಆಗಲೇ ಜನರು ಆ ಇಬ್ಬರು ವಾದಿಗಳೂ ಪರಾಜಿತರಾದರೆಂದು ತಿಳಿದರು. ರಾತ್ರಿ ಯಾರಿಗೂ ತಿಳಿಸದೆ ಆ ವಾದಿಗಳಿಬ್ಬರೂ ಓಡಿಹೋದರೆಂದು ಮರುದಿನ ಸಮಾಚಾರ ಕೇಳಿದಾಗ ಜನರು 'ಆ ಇಬ್ಬರು ವಾದಿಗಳೂ ಸೋತಿದ್ದಾರೆ' ಎಂದು ನಿಶ್ಚಯಿಸಿದರು.

ವಿ. —ನಿಶಾಯಾಂ ಪಲಾಯನಂ ನಿಶಾಪಲಾಯನಂ ತಸ್ಮಾತ್ ।

ಕ್ರಿ—ಅಸ್ತು ಸ್ತಾತ್ ಸ್ತಾಂ ಸಂತು, ಅಸ ಭುವಿ. ಪರ. ಲೋಟ್. ಉದ್ + ಈರ್ಯತಾಂ ಈರ್ಯೇತಾಂ ಈರ್ಯಂತಾಂ – ಈರ ಪ್ರೇರಣೇ ಕರ್ಮಣಿ ಲೋಟ್ ಆತ್ಮನೇ. ಅಮತ ಅಮನಿಷ್ಟ ಅಮನಿಷಾತಾಂ ಅಮನಿಷತ, ಅಮಥಾಃ ಅಮನಿಷ್ಠಾಃ ಅಮನಿಷಾಥಾಂ ಅಮನಿಧ್ವಂ ಅಮನಿಷಿ ಅಮನಿಷ್ವಹಿ ಅಮನಿ-ಷ್ಮಹಿ. ಮನು ಅವಬೋಧನೇ ಆತ್ಮ. ಲುಙ್. ನಿಸ್ + ಚಿಕಾಯ ಚಿಕ್ಯತುಃ ಚಿಕ್ಯುಃ, ಚಿಕಯಿಥ ಚಿಕೇಥ ಚಿಕ್ಯಥುಃ ಚಿಕ್ಯ, ಚಿಕಾಯ ಚಿಕಯ ಚಿಕ್ಯಿವ ಚಿಕ್ಯಿಮ. ಚಿಞ್ ಚಯನೇ, ಪರ. ಲಿಟ್.

ಅವ.— ಪ್ರಸಿದ್ಧರಾದ ಈ ವಾದಿಗಳಿಬ್ಬರನ್ನೂ ಎರಡು ಗಳಿಗೆಯ ವಾದದಿಂದಲೇ ಶ್ರೀಮಧ್ವಾಚಾರ್ಯರು ಗೆದ್ದರೆಂದು ಜನರು ಆಶ್ಚರ್ಯಪಟ್ಟರು—

ಬುದ್ಧ್ಯಬ್ಧಿನಾ ವಾದಿವರೇಣ ಚಾರ್ಜಿತಾಂ
ಜಯಶ್ರಿಯಂ ಭೂಪರಿವರ್ತಿನಾ ಚಿರಾತ್ ।

Rarest Archiver

ಅಹೋ ಮುಹೂರ್ತಾದಯಮಪ್ರಯತ್ನವಾ
ನವಾಪ್ತವಾನಿತ್ಯತಿವಿಸ್ಮಿತಂ ಜನೈಃ ॥೧೬॥

ಅ—ಅಯಂ ಭೂಪರಿವರ್ತಿನಾ ಬುದ್ಧ್ಯಬ್ಧಿನಾ ವಾದಿವರೇಣ ಚ ಚಿರಾತ್ ಆರ್ಜಿತಾಂ ಜಯಶ್ರಿಯಂ ಮುಹೂರ್ತಾತ್ ಅಪ್ರಯತ್ನವಾನ್ ಅವಾಪ್ತವಾನ್ ಅಹೋ ಇತಿ ಜನೈಃ ಅತಿವಿಸ್ಮಿತಂ.

ಅ.ಅ.—ಅಯಂ = ಈ ಮಧ್ವಾಚಾರ್ಯರು, ಭೂಪರಿವರ್ತಿನಾ = (ಪ್ರತಿವಾದಿಗಳನ್ನು ಜಯಿಸುವ ಇಚ್ಛೆಯಿಂದ) ದೇಶದಲ್ಲೆಲ್ಲಾ ತಿರುಗಾಡುತ್ತಿದ್ದ, ಬುದ್ಧ್ಯಬ್ಧಿನಾ = ಬುದ್ಧಿಸಾಗರನಿಂದ, ವಾದಿವರೇಣ ಚ=ವಾದಿಸಿಂಹನಿಂದಲೂ, ಚಿರಾತ್ = ಬಹಳ ಕಾಲದಿಂದ, ಆರ್ಜಿತಾಂ = ಸಂಪಾದಿಸಲ್ಪಟ್ಟ, ಜಯಶ್ರಿಯಂ = ಜಯಲಕ್ಷ್ಮಿಯನ್ನು, (ಜಯಸಮೃದ್ಧಿಯನ್ನು) ಮುಹೂರ್ತಾತ್ = ಸ್ವಲ್ಪ ಹೊತ್ತಿನಲ್ಲಿಯೇ, ಅಪ್ರಯತ್ನವಾನ್ = ಪ್ರಯತ್ನವಿಲ್ಲದವರಾಗಿ, ಅವಾಪ್ತವಾನ್ = ಹೊಂದಿದರು. ಅಹೋ = ಆಶ್ಚರ್ಯ. ಇತಿ = ಹೀಗೆಂದು, ಜನೈಃ = ಜನರಿಂದ, ಅತಿವಿಸ್ಮಿತಂ = ಅತ್ಯಂತ ಆಶ್ಚರ್ಯ ಹೊಂದೋಣವಾಯಿತು.

ತಾ—ಆ ಬುದ್ಧಿಸಾಗರನೂ ವಾದಿಸಿಂಹನೂ ಪ್ರತಿವಾದಿಗಳನ್ನು ಹುಡುಕುತ್ತಾ ಭಾರತದೇಶದಲ್ಲೆಲ್ಲಾ ಸಂಚರಿಸಿ, ಆ ಪ್ರತಿವಾದಿಗಳನ್ನು ಜಯಿಸಿ ಅಪಾರವಾದ ಕೀರ್ತಿಯನ್ನೂ, ಜಯಲಕ್ಷ್ಮಿಯನ್ನೂ ಗಳಿಸಿದ್ದರು. ಆದರೆ ಈ ಮಧ್ವಾಚಾರ್ಯರು ಒಂದು ಮುಹೂರ್ತದಲ್ಲಿಯೇ ಯಾವ ಹೆಚ್ಚಿನ ಪ್ರಯತ್ನವಿಲ್ಲದೆಯೇ ಅವರಿಬ್ಬರನ್ನೂ ಗೆದ್ದು ಆ ಜಯಲಕ್ಷ್ಮಿಯನ್ನು ತನ್ನ ಕಡೆಗೆ ಒಲಿಯುವಂತೆ ಮಾಡಿದರು. ಆಶ್ಚರ್ಯ! ಎಂದು ಅಲ್ಲಿ ಸೇರಿದ್ದ ಜನರು ಆಶ್ಚರ್ಯ ಪಟ್ಟರು.

ವಿ.—ಜಯ ಇತಿ ಶ್ರೀಃ ಜಯಶ್ರೀಃ ತಾಂ, ಭುವಂ ಪರಿವರ್ತಿತುಂ ಶೀಲಂ ಅಸ್ಯೇತಿ ಭೂಪರಿವರ್ತೀ ತೇನ, ಪ್ರಯತ್ನಃ ಅಸ್ಯ ಅಸ್ತೀತಿ ಪ್ರಯತ್ನವಾನ್, ನ ಪ್ರಯತ್ನವಾನ್ ಅಪ್ರಯತ್ನವಾನ್.

ಅವ.—ಶ್ರೀಮಧ್ವಾಚಾರ್ಯರು ಶಾಂಕರಭಾಷ್ಯದ ಪ್ರವಚನ ಮಾಡುತ್ತಿದ್ದಾಗ ಅದರಲ್ಲಿ ದೋಷಗಳನ್ನು ಕಂಡರು—

Rarest Archiver

ವ್ಯಾಖ್ಯಾನ್ ಕದಾಚಿನ್ಮಣಿಮದ್ವಿನಿರ್ಮಿತಂ
ಭಾಷ್ಯಂ ಜನೈಸ್ತರ್ಕವಿಶಾರದೈರ್ವೃತಃ।
ಉವಾಚ ವಾಚಂ ಪರಿಹಾಸಹಾಸವಾನ್
ಸಂಮೋದತೀರ್ಥಃ ಸುರಮೋದದಾಯಿನೀಮ್ ॥೧೭॥

ಅ—ಕದಾಚಿತ್ ಮಣಿಮದ್ವಿನಿರ್ಮಿತಂ ಭಾಷ್ಯಂ ವ್ಯಾಖ್ಯಾನ್ ತರ್ಕವಿಶಾರದೈಃ ಜನೈಃ ವೃತಃ ಸಮ್ಮೋದತೀರ್ಥಃ ಪರಿಹಾಸಹಾಸವಾನ್ ಸುರಮೋದದಾಯಿನೀಂ ವಾಚಂ ಉವಾಚ।

ಅ.ಅ.—ಕದಾಚಿತ್ = ಒಂದಾನೊಂದು ದಿನ, ಮಣಿಮದ್ವಿನಿರ್ಮಿತಂ = ಸಂಕರನೆಂಬ ಹೆಸರಿನಿಂದ ಭೂಮಿಯಲ್ಲಿ ಅವತರಿಸಿದ ಮಣಿಮಂತದೈತ್ಯನಿಂದ ರಚಿತವಾದ, ಭಾಷ್ಯಂ = ಬ್ರಹ್ಮಸೂತ್ರಭಾಷ್ಯವನ್ನು, ವ್ಯಾಖ್ಯಾನ್ = ವ್ಯಾಖ್ಯಾನಿಸುತ್ತಿರುವ, ತರ್ಕವಿಶಾರದೈಃ = ಯುಕ್ತಿಕುಶಲರಾದ, ಜನೈಃ = ಜನರಿಂದ, ವೃತಃ = ಸುತ್ತುವರೆಯಲ್ಪಟ್ಟ, ಸಮ್ಮೋದತೀರ್ಥಃ = ಸಂತೋಷವನ್ನುಂಟುಮಾಡುವ ಶಾಸ್ತ್ರವುಳ್ಳ ಆನಂದತೀರ್ಥರು, ಪರಿಹಾಸಹಾಸವಾನ್ = ಅಪಹಾಸಮಾಡುವ ನಗುವುಳ್ಳವರಾಗಿ, ಸುರಮೋದದಾಯಿನೀಂ = ದೇವತೆಗಳಿಗೆ ಆನಂದವನ್ನುಂಟುಮಾಡುವ, ವಾಚಂ ಉವಾಚ = ಮಾತನ್ನು ಹೇಳಿದರು.

ತಾ—ಒಂದಾನೊಂದು ದಿನ ಆಚಾರ್ಯರು ಸಂಕರನ ರೂಪವನ್ನು ತಾಳಿದ್ದ ಮಣಿಮಂತನು ರಚಿಸಿದ ಅದ್ವೈತಭಾಷ್ಯವನ್ನು ಪಾಠಹೇಳುತ್ತಿದ್ದರು. ಆಗ ಅವರ ಸುತ್ತಲೂ ತರ್ಕಶಾಸ್ತ್ರಕುಶಲರಾದ ಅನೇಕಮಂದಿ ಪಂಡಿತರು ಕುಳಿತಿದ್ದರು. ಆಗ ಆಚಾರ್ಯರು ಪರಿಹಾಸಕ್ಕಾಗಿ ನಗುತ್ತಾ ದೇವತೆಗಳಿಗೆ ಸಂತೋಷಕರವಾದ ಮಾತನ್ನಾಡಿದರು.

ವಿ.—ಮಣಿಮತಾ ವಿನಿರ್ಮಿತಂ ಮಣಿಮದ್ವಿನಿರ್ಮಿತಂ ತತ್, ಪರಿಹಾಸರೂಪಃ ಹಾಸಃ ಪರಿಹಾಸಹಾಸಃ, ಸಃ ಅಸ್ಯ ಅಸ್ತೀತಿ ಪರಿಹಾಸಹಾಸವಾನ್, ಸಮ್ಮೋದಃ ತೀರ್ಥಂ ಯಸ್ಮಾತ್ ಸಃ ಸಮ್ಮೋದತೀರ್ಥಃ, ಸುರಾಣಾಂ ಮೋದಃ ಸುರಮೋದಃ, ತಂ ದಾತುಂ ಶೀಲಂ ಅಸ್ಯಾಃ ಇತಿ ಸುರಮೋದದಾಯಿನೀ ತಾಂ;

Rarest Archiver

ಧಾತು— ಉವಾಚ ಊಚತುಃ ಊಚುಃ, ಉವಚಿಥ ಉವಕ್ಥ ಊಚಥುಃ ಊಚ, ಉವಾಚ ಉವಚ ಊಚಿವ ಊಚಿಮ; ಬ್ರೂಞ್ ವ್ಯಕ್ತಾಯಾಂ ವಾಚಿ ಪರಸ್ಮೈ. ವಚ್ ಆದೇಶ, ಲಿಟ್.

ಅವ— ಶ್ರೀಮಧ್ವಾಚಾರ್ಯರು ಅದ್ವೈತಭಾಷ್ಯಕ್ಕೂ ಬ್ರಹ್ಮಸೂತ್ರಗಳಿಗೂ ಸಂಬಂಧವೇ ಇಲ್ಲವೆಂದು ಹೇಳಿದರು-

ಸತ್ಸೂತ್ರಭಾವೇ ಪ್ರವಿಚಾರಿತೇ ಮುಹು
ರ್ಭಾಷ್ಯಾಭಿಸಂಧೌ ಚ ವಿಶುದ್ಧಬುದ್ಧಿಭಿಃ ।
ನಿಗೃಹ್ಯ ಗೂಢಾಗ್ರಹಮುಗ್ರಮೇತಯೋ
ರ್ಮಾನ್ಯೋಽನ್ವಯೋಽನ್ಯೋನ್ಯಮಹೋ ನ ದೃಶ್ಯತೇ ॥೧೮॥

ಅ—ವಿಶುದ್ಧಬುದ್ಧಿಭಿಃ ಉಗ್ರಂ ಗೂಢಾಗ್ರಹಂ ನಿಗೃಹ್ಯ ಸತ್ಸೂತ್ರಭಾವೇ ಭಾಷ್ಯಾಭಿಸಂಧೌ ಚ ಪೃಥಕ್ ಪ್ರವಿಚಾರಿತೇ (ಸತಿ) ಏತಯೋಃ ಅನ್ಯೋನ್ಯಂ ಮಾನ್ಯಃ ಅನ್ವಯಃ ನ ದೃಶ್ಯತೇ, ಅಹೋ !

ಆ.ಅ.—ವಿಶುದ್ಧಬುದ್ಧಿಭಿಃ = ಶುದ್ಧವಾದ ಮನಸ್ಸುಳ್ಳವರಿಂದ, ಉಗ್ರಂ = ಕಠಿಣವಾದ (ಅನಿಷ್ಟಕಾರಿಯಾದ), ಗೂಢಾಗ್ರಹಂ = ಗುಟ್ಟಾದ ಹಠವನ್ನು, ನಿಗೃಹ್ಯ = ತಡೆದುಕೊಂಡು, ಸತ್‌ಸೂತ್ರ = ನಿರ್ದೋಷವಾದ ಬ್ರಹ್ಮಸೂತ್ರದ, ಭಾವೇ = ಅಭಿಪ್ರಾಯವು, ಭಾಷ್ಯಾಭಿಸಂಧೌ ಚ = ಅದ್ವೈತಭಾಷ್ಯದ ಅಭಿಪ್ರಾಯವೂ, ಪೃಥಕ್ = ಪ್ರತ್ಯೇಕವಾಗಿ, ಪ್ರವಿಚಾರಿತೇ (ಸತಿ) = ವಿಚಾರ ಮಾಡಲ್ಪಟ್ಟಾಗ, ಏತಯೋಃ = ಈ ಬ್ರಹ್ಮಸೂತ್ರ ಮತ್ತು ಸಂಕರಭಾಷ್ಯಗಳಿಗೆ, ಅನೋನ್ಯಂ = ಪರಸ್ಪರವಾಗಿ, ಮಾನ್ಯಃ = ಯೋಗ್ಯವಾದ (ಪೂಜ್ಯವಾದ), ಅನ್ವಯಃ = ಸಂಬಂಧವು, ನ ದೃಶ್ಯತೇ = ನೋಡಲ್ಪಡುವುದಿಲ್ಲ. ಅಹೋ = ಆಶ್ಚರ್ಯ !

ತಾ—ಕೆಲವು ಬಾರಿ ಮನಸ್ಸಿನಲ್ಲಿ ನರಕಾದಿ ಅನರ್ಥಕ್ಕೆ ಕಾರಣವಾದ ಅತಿ ಭಯಂಕರವಾದ ಗುಟ್ಟಾದ ಆಗ್ರಹವಿರುತ್ತದೆ. ನಿರ್ಮಲವಾದ ಬುದ್ಧಿಯುಳ್ಳವರು ಆ ಆಗ್ರಹವನ್ನು ಬಿಟ್ಟು ನಿರ್ದೋಷವಾದ ಬ್ರಹ್ಮಸೂತ್ರಗಳ ಅಭಿಪ್ರಾಯವನ್ನೂ ಈ ಶಾಂಕರಭಾಷ್ಯದ ಅಭಿಪ್ರಾಯವನ್ನೂ ಪ್ರತ್ಯೇಕವಾಗಿ ಚೆನ್ನಾಗಿ ವಿಚಾರ

Rarest Archiver

ಮಾಡಿದರೆ ಈ ಸೂತ್ರ ಮತ್ತು ಭಾಷ್ಯಗಳಿಗೆ ಪರಸ್ಪರವಿರೋಧವಿಲ್ಲದ ಹಾಗೆ ಅಂಗೀಕರಿಸಲು ಯೋಗ್ಯವಾದ ಸಂಬಂಧವು ಕಾಣುವುದಿಲ್ಲ. 'ನಾರಾಯಣನೇ ಸರ್ವೋತ್ತಮನು, ನಿರ್ದೋಷನು, ಚೇತನಾಚೇತನರೂಪವಾದ ಸಮಸ್ತ ಜಗತ್ತಿಗಿಂತ ಅತ್ಯಂತ ಭಿನ್ನನು. ಪರಮಮುಖ್ಯವೃತ್ತಿಯಿಂದ ಸಮಸ್ತವೇದ ಗಳಿಂದ ಪ್ರತಿಪಾದ್ಯನು. ಸಕಲಜೀವರಿಗೂ ನಿಯಾಮಕನು. ಪ್ರಪಂಚವೆಲ್ಲವೂ ಸತ್ಯವು-ಎಂದು ಬ್ರಹ್ಮಸೂತ್ರಗಳ ತಾತ್ಪರ್ಯವು ಕಾಣಿಸುತ್ತದೆ. ಪರಬ್ರಹ್ಮನು ನಿರ್ಗುಣ, ಜೀವರಿಗೂ ಅವನಿಗೂ ಭೇದವಿಲ್ಲ. (ಆದುದರಿಂದ ಅವನು ಎಲ್ಲಾ ದೋಷವುಳ್ಳವನೂ ಆಗುತ್ತಾನೆ.) ವೇದಾದಿಗಳಿಂದ ಅವನನ್ನು ತಿಳಿಸಲು ಸಾಧ್ಯವಾಗುವುದಿಲ್ಲ. ಜಗತ್ತು ಸುಳ್ಳು. ಮೋಕ್ಷದಲ್ಲಿ ಜೀವರಿಗೂ ಪರಬ್ರಹ್ಮ ನಿಗೂ ಭೇದವಿಲ್ಲ. ಇತ್ಯಾದಿಯಾಗಿ ಶಾಂಕರಭಾಷ್ಯದ ತಾತ್ಪರ್ಯವು ಕಂಡು ಬರುತ್ತದೆ. ಹೀಗೆ ಈ ಭಾಷ್ಯವು ಬ್ರಹ್ಮಸೂತ್ರಗಳ ಸರಿಯಾದ ಅಭಿಪ್ರಾಯ ವನ್ನು ಪ್ರಕಟಿಸದಿದ್ದರೂ ಇದನ್ನು ಪ್ರಮಾಣವೆಂದು ಒಪ್ಪಿಕೊಂಡು ಈ ಗ್ರಂಥದ ಶ್ರವಣಾದಿಗಳನ್ನು ಮಹಾಜನರು ಮಾಡುತ್ತಿರುವುದು ಆಶ್ಚರ್ಯಕರ ವಾಗಿದೆ.

ವಿ.—ಸಂತಿ ಚ ತಾನಿ ಸೂತ್ರಾಣಿ ಚ ಸತ್ಸೂತ್ರಾಣಿ, ಸತ್ಸೂತ್ರಾಣಾಂ ಭಾವಃ ಸತ್ಸೂತ್ರಭಾವಃ ತಸ್ಮಿನ್, ಭಾಷ್ಯಸ್ಯ ಅಭಿಸಂಧಿಃ ತಸ್ಮಿನ್, ವಿಶುದ್ಧಾ ಬುದ್ಧಿಃ ಯೇಷಾಂ ತೇ ವಿಶುದ್ಧಬುದ್ಧಯಃ ತೈಃ, ಗೂಢಶ್ಚಾಸೌ ಆಗ್ರಹಶ್ಚ ಗೂಢಾಗ್ರಹಃ ತಂ;

ಕ್ರಿ.—ದೃಶ್ಯತೇ ದೃಶ್ಯೇತೇ ದೃಶ್ಯಂತೇ ದೃಶಿರ್ (ದೃಶ್) ಕರ್ಮಣಿ ಲಟ್ ಆತ್ಮನೇ.

ಅವ.—ಹೀಗೆ ಆಚಾರ್ಯರು ಶಾಂಕರಭಾಷ್ಯದಲ್ಲಿ ದೋಷಗಳನ್ನು ಪ್ರಕಟಿಸಿದರೂ ಯಾರೂ ಆ ದೋಷಗಳನ್ನು ಪರಿಹರಿಸಲು ಸಮರ್ಥರಾಗಲಿಲ್ಲ.

ಇತಿ ಬ್ರುವಾಣೇ ಪ್ರತಿಪಾದಯತ್ಯಲಂ
ಭಾಷ್ಯೇಽತ್ರದೋಷಾನ್ ಪ್ರಬಲಾನ್ ಮುಹುರ್ಮುಹುಃ ।
ತಸ್ಮಿಂಸ್ತು ವಿಸ್ಮೇರಧಿಯೋಽಪಿ ಯತ್ನತೋ
ನ ಸ್ಥೇಯಸಃ ಪರ್ಯಹರನ್ನಿಮಾನಮೀ ॥೧೯॥

Rarest Archiver

ಅ—ಇತಿ ಬ್ರುವಾಣೇ ತಸ್ಮಿನ್ ತು ಅತ್ರ ಭಾಷ್ಯೇ ಪ್ರಬಲಾನ್ ದೋಷಾನ್ ಮುಹುಃ ಮುಹುಃ ಅಲಂ ಪ್ರತಿಪಾದಯತಿ ವಿಸ್ಮೇರಧಿಯಃ ಅಮೀ ಸ್ಥೇಯಸಃ ಇಮಾನ್ ಯತ್ನತಃ ಅಪಿ ನ ಪರ್ಯಹರನ್ ।

ಅ.ಅ.—ಇತಿ = ಈ ರೀತಿ, ಬ್ರುವಾಣೇ = ಹೇಳುತ್ತಿರುವ, ತಸ್ಮಿನ್ ತು = ಆ ಮಧ್ವಾಚಾರ್ಯರಾದರೋ, ಅತ್ರಭಾಷ್ಯೇ = ಈ ಶಾಂಕರಭಾಷ್ಯದಲ್ಲಿ, ಪ್ರಬಲಾನ್ = ಪರಿಹರಿಸಲು ಸಾಧ್ಯವಿಲ್ಲದ, ದೋಷಾನ್ = ತಪ್ಪುಗಳನ್ನು, ಮುಹುಃ ಮುಹುಃ = ಬಾರಿ ಬಾರಿಗೂ, ಅಲಂ = ಚೆನ್ನಾಗಿ, ಪ್ರತಿಪಾದಯತಿ ಸತಿ = ವಿವರಿಸುತ್ತಿರಲು, ವಿಸ್ಮೇರಧಿಯಃ = ಆಶ್ಚರ್ಯಗೊಂಡ ಬುದ್ಧಿಯುಳ್ಳ, ಅಮೀ = ಈ ಜನರು, ಸ್ಥೇಯಸಃ = ಅತಿದೃಢವಾದ, ಇಮಾನ್ = ಈ ದೋಷ ಗಳನ್ನು, ಯತ್ನತಃ ಅಪಿ = ಪ್ರಯತ್ನದಿಂದಲೂ, ನ ಪರ್ಯಹರನ್ = ನಿವಾರಿಸಲಿಲ್ಲ.

ತಾ—ಶ್ರೀಮಧ್ವಾಚಾರ್ಯರು ಈ ರೀತಿ ಹೇಳಿ ಈ ಸಂಕರಭಾಷ್ಯದಲ್ಲಿ ಬಹಳ ಬಲವಾದ ದೋಷಗಳನ್ನು ಮತ್ತೂ ಮತ್ತೂ ಎಲ್ಲರಿಗೂ ತಿಳಿಯುವಂತೆ ಪ್ರಕಟಿಸುತ್ತಿದ್ದರು. ತರ್ಕಪಂಡಿತರಾದ ಆ ಸಭೆಯ ಜನರು ಮನಸ್ಸಿನಲ್ಲಿ ಆಶ್ಚರ್ಯ ಪಟ್ಟು ಆ ದೋಷಗಳನ್ನು ಪರಿಹರಿಸಲು ಬಹಳವಾಗಿ ಪ್ರಯತ್ನಪಟ್ಟರು. ಆದರೂ ಸಾಧ್ಯವಾಗಲಿಲ್ಲ. ಯಾವ ಭಾಷ್ಯವನ್ನು ನಿರ್ದೋಷವಾದ ಗ್ರಂಥವೆಂದು ಅವರು ಬಹುಮಾನಿಸುತ್ತಿದ್ದರೋ ಆ ಗ್ರಂಥದಲ್ಲಿಯೇ ಶ್ರೀಮಧ್ವಾಚಾರ್ಯರು ಪ್ರಬಲ ವಾದ ದೋಷಗಳನ್ನು ಹೇಳಿದಾಗ ಅವರು ಕುತೂಹಲಭರಿತರಾದರು, ನಿರಾ ಕರಿಸಲು ಪ್ರಯತ್ನಪಟ್ಟರು. ಆದರೂ ಸಮರ್ಥರಾಗಲಿಲ್ಲ ಎಂದು ಭಾವ.

ವಿ.—ವಿಸ್ಮೇರಾಃ ಧಿಯಃ ಯೇಷಾಂ ತೇ ವಿಸ್ಮೇರಧಿಯಃ, ಅತಿಶಯೇನ ಸ್ಥಿರಾಃ ಸ್ಥೇಯಾಂಸಃ ತಾನ್,

ಧಾತು—ಪರಿ + ಅಹರನ್, ಅಹರತ್ ಅಹರತಾಂ ಅಹರನ್, ಅಹರಃ ಅಹರತಂ ಅಹರತ, ಅಹರಂ ಅಹರಾವ ಅಹರಾಮ ; ಹೃಞ್ (ಹೃ) ಹರಣೇ. ಪರ. ಲಙ್.

ಅವ.—ಹಾಗಾದರೆ ಈ ಸೂತ್ರಕ್ಕೆ ಬೇರೆ ಸರಿಯಾದ ಅರ್ಥವನ್ನು ಹೇಳಿರಿ–

Rarest Archiver

ನನ್ವಸ್ಯ ಸೂತ್ರಸ್ಯ ಪರೋಽರ್ಥ ಉಚ್ಯತಾಂ
ಯದ್ಭಾಷ್ಯಮಾತ್ರಂ ಭವತಾ ನಿರಸ್ಯತೇ ।
ಭವಾದೃಶೈರ್ಯಃ ಕವಿಭಿರ್ನಿರಸ್ಯತೇ
ಕಥಂಚನೇತ್ಯೂಚುರಿಮೇ ವಚಸ್ವಿನಃ ॥೨೦॥

ಅ.—ನನು ಯತ್ ಭವತಾ ಭಾಷ್ಯಮಾತ್ರಂ ನಿರಸ್ಯತೇ (ತತ್) ಭವಾದೃಶೈಃ ಕವಿಭಿಃ ಯಃ ಕಥಂಚನ ನ ದೂಷ್ಯತೇ (ತಾದೃಶಃ) ಪರಃ ಅರ್ಥಃ ಅಸ್ಯ ಸೂತ್ರಸ್ಯ ಉಚ್ಯತಾಂ ಇತಿ ವಚಸ್ವಿನಃ ಇಮೇ ಊಚುಃ ।

ಅ.ಅ.—ನನು = ಎಲೈ ಮಧ್ವಾಚಾರ್ಯರೇ !, ಯತ್ = ಯಾವ- ಕಾರಣದಿಂದ, ಭವತಾ = ನಿಮ್ಮಿಂದ, ಭಾಷ್ಯಮಾತ್ರಂ = ಕೇವಲಭಾಷ್ಯವು, ನಿರಸ್ಯತೇ = ದೂಷಿಸಲ್ಪಡುತ್ತದೆ, (ತತ್ = ಆದ್ದರಿಂದ) ಭವಾದೃಶೈಃ= ನಿಮ್ಮಂತಹ, ಕವಿಭಿಃ = ವಿದ್ವಾಂಸರಿಂದ, ಯಃ = ಯಾವ ಅರ್ಥವು, ಕಥಂಚನ= ಯಾವರೀತಿಯಿಂದಲೂ, ನ ದೂಷ್ಯತೇ = ಖಂಡಿಸಲ್ಪಡುವುದಿಲ್ಲವೋ, (ತಾದೃಶಃ = ಅಂತಹ) ಪರಃ ಅರ್ಥಃ = ಶ್ರೇಷ್ಠವಾದ ಬೇರೊಂದು ಅರ್ಥವು, ಅಸ್ಯ ಸೂತ್ರಸ್ಯ = ಈ ಬ್ರಹ್ಮಸೂತ್ರಕ್ಕೆ, ಉಚ್ಯತಾಂ = ಹೇಳಲ್ಪಡಲಿ, ಇತಿ = ಎಂಬುದಾಗಿ, ವಚಸ್ವಿನಃ = ವಾಗ್ಮಿಗಳಾದ, ಇಮೇ = ಈ ಪಂಡಿತರು, ಊಚುಃ = ಹೇಳಿದರು.

ತಾ.—'ಎಲೈ ಮಧ್ವಾಚಾರ್ಯರೇ ! ನೀವು ಶಾಂಕರಭಾಷ್ಯವನ್ನು ಮಾತ್ರ ನಿರಾಕರಿಸುತ್ತಿದ್ದೀರಿ, ಸೂತ್ರವು ನಿಮಗೆ ಪ್ರಮಾಣವೆಂದಾಯಿತು. ಆದ್ದರಿಂದ ಈ ಬ್ರಹ್ಮಸೂತ್ರಕ್ಕೆ ನಿಮ್ಮಂತಹ ಪಂಡಿತರು ಯಾವರೀತಿಯಿಂದಲೂ ನಿರಾಕರಿಸಲು ಸಾಧ್ಯವಿಲ್ಲದ ಬೇರೊಂದು ಅರ್ಥವನ್ನು ನೀವೇ ಹೇಳಿರಿ' ಎಂದು ಅಲ್ಲಿಯ ಸಭ್ಯರು ಹೇಳಿದರು. 'ಭಾಷ್ಯದಲ್ಲಿ ಮಾತ್ರವೇ ದೋಷವನ್ನು ಹೇಳುವುದರಿಂದ, ಸೂತ್ರಕ್ಕೆ ಎಲ್ಲರಿಗೂ ಸಮ್ಮತವಾಗುವ ಹೊಸ ಅರ್ಥವನ್ನು ಹೇಳಿರಿ' ಎಂದು ಆ ಪಂಡಿತರು ತಿಳಿಸಿದರು ಎಂದು ಭಾವವು.

ವಿ. ಕ್ರಿ.—ಪ್ರಶಸ್ತಂ ವಚಃ ಏಷಾಂ ಅಸ್ತೀತಿ ವಚಸ್ವಿನಃ ; ಉಚ್ಯತಾಂ ಉಚ್ಯೇತಾಂ ಉಚ್ಯಂತಾಮ್, ಬ್ರೂಞ್ ಧಾತು ಕರ್ಮಣಿ ವಚ್ ಆದೇಶ.

Rarest Archiver

ಲೋಟ್. ಆತ್ಮನೇ. ನಿರ್ + ಅಸ್ಯತೇ ಅಸ್ಯೇತೇ ಅಸ್ಯಂತೇ ಅಸು ನಿರಸನೇ ನಿರ್ ಉಪ. ಕರ್ಮಣಿ ಲಟ್, ಆತ್ಮ. ದೂಷ್ಯತೇ ದೂಷ್ಯೇತೇ ದೂಷ್ಯಂತೇ-ದುಷ ವೈಕೃತ್ಯೇ ಣಿಜಂತಾತ್ ಕರ್ಮಣಿ ಲಟ್ ಆತ್ಮನೇ; ಊಚುಃ–೧೭ ನೇ ಶ್ಲೋಕದ ವ್ಯಾಖ್ಯಾನ ನೋಡಿರಿ.

ಅವ—ಆಗ ಶ್ರೀಮಧ್ವಾಚಾರ್ಯರ ಸೂತ್ರಾರ್ಥಪ್ರವಚನವು ಹೇಗಿತ್ತು—

ಅಕ್ಲಿಷ್ಟಶಬ್ದಾನ್ವಯಮೇಷ ಸಂಭವತ್-
ಸೂತ್ರಾರ್ಥಮುಚ್ಚೈರ್ವಚನಂ ತದಾದದೇ ।
ಮಾನೀಕೃತಾಮ್ನಾಯಯುತಸ್ಮೃತಿಕ್ಷಣಾ-
ದೇಷ್ಯತ್ಕಥಾತಾಂಡವಸೂತ್ರಧಾರಕಮ್ ॥೨೧॥

ಅ—ಏಷಃ ತದಾ ಅಕ್ಲಿಷ್ಟಶಬ್ದಾನ್ವಯಂ ಸಂಭವತ್ಸೂತ್ರಾರ್ಥಂ ಮಾನೀ-ಕೃತಾಮ್ನಾಯಯುತಸ್ಮೃತಿ ಏಷ್ಯತ್ಕಥಾತಾಂಡವಸೂತ್ರಧಾರಕಂ ವಚನಂ ಉಚ್ಚೈಃ ಕ್ಷಣಾತ್ ಆದದೇ.

ಆ.ಅ.—ಏಷಃ= ಈ ಶ್ರೀಮಧ್ವಾಚಾರ್ಯರು, ತದಾ= ಆಗ, ಅಕ್ಲಿಷ್ಟ= ಕ್ಲೇಶವಿಲ್ಲದಿರುವ, ಶಬ್ದಾನ್ವಯಂ= ಪದಗಳ ಅರ್ಥಸಂಬಂಧವುಳ್ಳ, ಸಂಭವತ್= ಹೊಂದಾಣಿಕೆಯಾಗುವ, ಸೂತ್ರಾರ್ಥಂ=ಸೂತ್ರಗಳ ಅರ್ಥವುಳ್ಳ, ಮಾನೀಕೃತ = ಪ್ರಮಾಣವಾಗಿ ಉದ್ಧರಿಸಲ್ಪಟ್ಟ, ಆಮ್ನಾಯ= ವೇದದಿಂದ, ಯುತ= ಕೂಡಿದ, ಸ್ಮೃತಿ= ಸ್ಮೃತಿಗಳುಳ್ಳ, ಏಷ್ಯತ್= ಮುಂದೆ ಬರಲಿರುವ, ಕಥಾ= ಭಾಷ್ಯರೂಪವಾದ ವಾಕ್ಯಪ್ರಬಂಧವೆಂಬ, ತಾಂಡವ=ನರ್ತನಕ್ಕೆ, ಸೂತ್ರಧಾರಕಂ = ಸೂತ್ರಧಾರನಂತಿರುವ, ವಚನಂ= ಮಾತನ್ನು, ಉಚ್ಚೈಃ= ಗಟ್ಟಿಯಾಗಿ, ಕ್ಷಣಾತ್= ಸ್ವಲ್ಪ ಹೊತ್ತಿನಲ್ಲಿಯೇ, ಆದದೇ= ತೆಗೆದುಕೊಂಡರು (ಹೇಳಿದರು).

ತಾ.—ಆಗ ಆಚಾರ್ಯರು ಬ್ರಹ್ಮಸೂತ್ರಾರ್ಥೋಪನ್ಯಾಸವನ್ನು ಕೂಡಲೇ ಉಚ್ಚಸ್ವರದಿಂದ ಮಾಡಲು ಪ್ರಾರಂಭಿಸಿದರು. ಅವರ ಉಪನ್ಯಾಸದಲ್ಲಿ ಪದಗಳ ಅರ್ಥಗಳ ಸಂಬಂಧವು ಕ್ಲೇಶವಿಲ್ಲದೆ ಸುಲಭವಾಗಿ ತೋರುತ್ತಿತ್ತು. ಅವರು ಸೂತ್ರಗಳಿಗೆ ಹೊಂದಾಣಿಕೆಯಾಗುವ ಅರ್ಥವನ್ನೇ ಹೇಳುತ್ತಿದ್ದರು. ಅವರು ಸೂತ್ರಾರ್ಥಗಳ ಉಪನ್ಯಾಸವನ್ನು ಮಾಡುತ್ತಿರುವಾಗ ವೇದ ಮತ್ತು ಸ್ಮೃತಿಗಳ

Rarest Archive

ಪ್ರಮಾಣವಚನಗಳನ್ನು ಯಥೇಚ್ಛವಾಗಿ ಉದಾಹರಿಸುತ್ತಿದ್ದರು. ಮುಂದೆ ಆಚಾರ್ಯರು ಮಾಡಲಿರುವ ಸೂತ್ರಭಾಷ್ಯವೆಂಬ ನಾಟಕಕ್ಕೆ ಅವರ ಉಪನ್ಯಾಸವು ಸೂತ್ರಧಾರನಂತೆ ಇತ್ತು. ಪೂರ್ವರಂಗದಂತೆ ಇತ್ತು. ಆ ದಿನದ ಬ್ರಹ್ಮ ಸೂತ್ರಾರ್ಥೋಪನ್ಯಾಸವು ಮುಂದೆ ಅಭಿನಯಿಸುವ ನಾಟಕಕ್ಕೆ ಸೂತ್ರಧಾರನ ಪ್ರವೇಶದಂತೆ ಇತ್ತು. ನಾಟಕದ ಪೂರ್ವರಂಗದಂತೆ ಇರುವ ಇಂತಹ ಬ್ರಹ್ಮ ಸೂತ್ರಾರ್ಥೋಪನ್ಯಾಸವು ಮುಂದೆ ಮಾಡಬೇಕಾಗಿರುವ ಬ್ರಹ್ಮಸೂತ್ರಭಾಷ್ಯಕ್ಕೆ ಮಂಗಳರೂಪವಾಯಿತು. ಹೀಗೆ ಆನಂದತೀರ್ಥರ ಉಪನ್ಯಾಸವು ಸಪ್ರಮಾಣ ವಾಗಿಯೂ, ಎಲ್ಲರಿಗೂ ತಿಳಿಯುವ ಅರ್ಥವಿವರಣಉಳ್ಳದ್ದೂ ಆಗಿತ್ತೆಂದು ಉಪನ್ಯಾಸದ ಗುಣಗಳನ್ನು ವರ್ಣಿಸಿದ್ದಾರೆ.

ವಿ —ಶಬ್ದಾನಾಂ ಅನ್ವಯಃ ಶಬ್ದಾನ್ವಯಃ, ಅಕ್ಲಿಷ್ಟಃ ಶಬ್ದಾನ್ವಯಃ ಯಸ್ಮಿನ್ ತತ್ ಅಕ್ಲಿಷ್ಟಶಬ್ದಾನ್ವಯಂ, ಸೂತ್ರಾಣಾಂ ಅರ್ಥಃ ಸೂತ್ರಾರ್ಥಃ, ಸಂಭವನ್ ಸೂತ್ರಾರ್ಥಃ ಯಸ್ಮಿನ್ ತತ್ ಸಂಭವತ್ ಸೂತ್ರಾರ್ಥಂ, ಆಮ್ನಾ-ಯೈಃ ಯುತಾಃ ಆಮ್ನಾಯಯುತಾಃ, ಆಮ್ನಾಯಯುತಾಶ್ಚ ತಾಃ ಸ್ಮೃತ ಯಶ್ಚ ಆಮ್ನಾಯಯುತಸ್ಮೃತಯಃ, ಮಾನೀಕೃತಾಃ ಆಮ್ನಾಯಯುತ-ಸ್ಮೃತಯಃ ಯಸ್ಮಿನ್ ತತ್ ಮಾನೀಕೃತಾಮ್ನಾಯಯುತಸ್ಮೃತಿ, ಏಷ್ಯಂತೀ ಚ ಸಾ ಕಥಾ ಚ ಏಷ್ಯತ್‌ಕಥಾ, ಏಷ್ಯತ್‌ಕಥೈವ ತಾಂಡವಂ ಏಷ್ಯತ್‌ಕಥಾ ತಾಂಡವಂ, ತಸ್ಯ ಸೂತ್ರಧಾರಕಂ ಏಷ್ಯತ್‌ಕಥಾತಾಂಡವಸೂತ್ರಧಾರಕಂ, ತತ್.

ಕ್ರಿ.—ಆ + ದದೇ ದದಾತೇ ದದಿರೇ, ದದಿಷೇ ದದಾಥೇ ದದಿಧ್ವೇ, ದದೇ ದದಿವಹೇ ದದಿಮಹೇ. ಆಙ್ (ಆ) ಉಪಸರ್ಗ, ಡು (ದಾ)ಞ್ ದಾನೇ ಆತ್ಮನೇ. ಲಿಟ್.

ಅವ.—ಈ ರೀತಿಯಾಗಿ ತನ್ನ ಬಳಿಗೆ ಬಂದ ತಾರ್ಕಿಕರನ್ನೆಲ್ಲಾ ಆಚಾರ್ಯರು ಗೆದ್ದರು.

ಬುಭುತ್ಸಯಾ ಮತ್ಸರವರ್ಜಿತಾಞ್ಜನಾನ್
ಸಮತ್ಸರಾನ್ ವಾ ವಿಜಿಗೀಷಯಾಗತಾನ್

Rarest Archiver

ಶ್ರುತಪ್ರವೀಣಾನತಿತಾರ್ಕಿಕಾನ್ ಮುಹು-
ರ್ಭಂಗ್ಯಾನಯಾ ಭಂಗಮುಪಾನಿನಾಯ ಸಃ ॥೨೨॥

ಅ.—ಸಃ ಶ್ರುತಪ್ರವೀಣಾನ್ ಅತಿತಾರ್ಕಿಕಾನ್ ಮತ್ಸರವರ್ಜಿತಾನ್ ಬುಭುತ್ಸಯಾ ವಾ, ಸಮತ್ಸರಾನ್ ವಿಜಿಗೀಷಯಾ ಆಗತಾನ್ ಜನಾನ್ ಅನಯಾ ಭಂಗ್ಯಾ ಮುಹುಃ ಭಂಗಂ ಉಪಾನಿನಾಯ ।

ಅ.ಅ.—ಸಃ = ಆ ಮಧ್ವಾಚಾರ್ಯರು, ಶ್ರುತಪ್ರವೀಣಾನ್ = ಶಾಸ್ತ್ರ ಶ್ರವಣದಿಂದ ಬುದ್ಧಿವಂತರಾಗಿರುವ, ಅತಿತಾರ್ಕಿಕಾನ್ = ಚೆನ್ನಾಗಿ ತರ್ಕಶಾಸ್ತ್ರ ವನ್ನು ತಿಳಿದಿರುವ, ಮತ್ಸರವರ್ಜಿತಾನ್ = ಅಸೂಯೆಯಿಲ್ಲದ, ಬುಭುತ್ಸಯಾ = ತತ್ತ್ವವನ್ನು ತಿಳಿಯುವ ಇಚ್ಛೆಯಿಂದ, ವಾ = ಮತ್ತು, ಸಮತ್ಸರಾನ್ = ಅಸೂಯೆ ಯಿಂದ ಕೂಡಿದ, ವಿಜಿಗೀಷಯಾ = ಜಯಿಸುವ ಇಚ್ಛೆಯಿಂದ, ಆಗತಾನ್ = ಬಂದ, ಜನಾನ್ = ಜನರನ್ನು, ಅನಯಾ ಭಂಗ್ಯಾ = ಹಿಂದೆ ಹೇಳಿದ ರೀತಿಯಿಂದ, ಭಂಗಂ = ಪರಾಜಯವನ್ನು, ಉಪಾನಿನಾಯ = ಹೊಂದಿಸಿದರು.

ತಾ.—ಅನಂತರ ಶ್ರೀ ಮಧ್ವಾಚಾರ್ಯರ ಬಳಿಗೆ ಅನೇಕರೀತಿಯ ಪಂಡಿತರು ಬಂದರು. ಅವರಲ್ಲಿ ಕೆಲವರು ಚೆನ್ನಾಗಿ ಶಾಸ್ತ್ರಶ್ರವಣ ಮಾಡಿದವರು; ತರ್ಕಶಾಸ್ತ್ರದಲ್ಲಿಯೂ ಪಾರಂಗತರು. ತತ್ತ್ವವನ್ನು ತಿಳಿಯಬೇಕೆಂದು ಯಾವ ದ್ವೇಷವೂ ಇಲ್ಲದೆ ತನ್ನ ಬಳಿಗೆ ಬಂದ ಇಂತಹ ಪಂಡಿತರಿಗೆ ಸರಿಯಾದ ಉಪದೇಶ ಮಾಡಿ ಅವರ ಮನಸ್ಸಿಗೆ ಸಮಾಧಾನವನ್ನುಂಟುಮಾಡಿ ಯಾವ ಆಕ್ಷೇಪವೂ ಇಲ್ಲದಂತೆ ಮಾಡಿದರು. ದ್ವೇಷದಿಂದ ಗೆಲ್ಲಬೇಕೆಂದು ಬಂದವರಿಗೆ ಅವರ ಉತ್ತರ ಗಳನ್ನು ಖಂಡಿಸಿ ಪ್ರತಿಯಾಗಿ ಉತ್ತರ-ಹೇಳಲು ಬಾರದಂತೆ ಮಾಡಿ ಗೆದ್ದರು.

ವಿ.—ಬೋದ್ಧುಂ ಇಚ್ಛಾ ಬುಭುತ್ಸಾ ತಯಾ, ಮತ್ಸರೇಣ ವರ್ಜಿತಾಃ ಮತ್ಸರವರ್ಜಿತಾಃ ತಾನ್, ಮತ್ಸರೇಣ ಸಹಿತಾಃ ಸಮತ್ಸರಾಃ ತಾನ್, ವಿಜೇತುಂ ಇಚ್ಛಾ ವಿಜಿಗೀಷಾ ತಯಾ, ಶ್ರುತೇ ಪ್ರವೀಣಾಃ ಶ್ರುತಪ್ರವೀಣಾಃ ತಾನ್,

ಕ್ರಿ.—ಉಪ + ಆ + ನಿನಾಯ ನಿನ್ಯತುಃ ನಿನ್ಯುಃ, ನಿನಯಿಥ ನಿನೇಥ ನಿನ್ಯಥುಃ ನಿನ್ಯ, ನಿನಾಯ ನಿನಯ ನಿನ್ಯಿವ ನಿನ್ಯಿಮ ಣೀಞ್ (ನೀ) ಪ್ರಾಪಣೇ ಪರ. ಲಿಟ್.

Rarest Archive

ಅವ.—ಮಧ್ಯಗೇಹಭಟ್ಟರು ಮಗನ ಬಳಿಗೆ ಬಂದರು-

ಕದಾಚಿದೇನಂ ಪ್ರತಿಗಮ್ಯ ಸೌಮ್ಯಧೀಃ
ಸ ಮಧ್ಯಗೇಹಾರ್ಯವರಃ ಪ್ರಸೇದಿವಾನ್ ।
ಹೇತೋಃ ಕುತಶ್ಚಿದ್ವಿಮನೀಕೃತೋಽಪ್ಯಹೋ
ಗುಣಾಬ್ಧಿಲುಬ್ಧಃ ಸುಜನಃ ಪ್ರಸೀದತಿ ॥೨೩॥

ಅ.—ಸೌಮ್ಯಧೀಃ ಸಃ ಮಧ್ಯಗೇಹಾರ್ಯವರಃ ಕುತಶ್ಚಿತ್ ಹೇತೋಃ ವಿಮನೀಕೃತೋಽಪಿ ಕದಾಚಿತ್ ಏನಂ ಪ್ರತಿಗಮ್ಯ ಪ್ರಸೇದಿವಾನ್। ಅಹೋ ಗುಣಾಬ್ಧಿಲುಬ್ಧಃ ಸುಜನಃ ಪ್ರಸೀದತಿ ।

ಅ.ಅ.—ಸೌಮ್ಯಧೀಃ=ಮೃದುವಾದ ಮನಸ್ಸುಳ್ಳ, ಸಃ ಮಧ್ಯಗೇಹಾರ್ಯವರಃ=ಆ ಮಧ್ಯಗೇಹಭಟ್ಟರೆಂಬ ಸಜ್ಜನಶ್ರೇಷ್ಠರು, ಕುತಶ್ಚಿತ್=ಯಾವುದೋ ಒಂದು, ಹೇತೋಃ=ಕಾರಣದಿಂದ, ವಿಮನೀಕೃತಃ ಅಪಿ=ಬೇಸರಗೊಂಡಿದ್ದರೂ, ಕದಾಚಿತ್=ಒಂದಾನೊಂದುದಿನ, ಏನಂ=ಈ ಮಧ್ವಾಚಾರ್ಯರನ್ನು, ಪ್ರತಿಗಮ್ಯ=ಸಮಿಾಪಿಸಿ, ಪ್ರಸೇದಿವಾನ್=ಪ್ರಸನ್ನರಾದರು. ಅಹೋ=ಆಶ್ಚರ್ಯ, ಸುಜನಃ=ಸಜ್ಜನರು, ಗುಣಾಬ್ಧಿ=ಗುಣಗಳೆಂಬ ಸಮುದ್ರದಲ್ಲಿ, ಲುಬ್ಧಃ=ಆಸೆಯುಳ್ಳವರಾಗಿ, ಪ್ರಸೀದತಿ=ಸಂತೋಷಪಡುತ್ತಾರೆ.

ತಾ.—ಶ್ರೀಆನಂದತೀರ್ಥರ ಪೂರ್ವಾಶ್ರಮದ ತಂದೆಯಾದ ಮಧ್ಯಗೇಹ ಭಟ್ಟರು ಜ್ಞಾನಿವರೇಣ್ಯರು, ನಿರ್ಮಲಬುದ್ಧಿಯುಳ್ಳವರು. ಅವರು ಹಿಂದೆ ತನ್ನ ಮಗನು ಸನ್ಯಾಸಸ್ವೀಕಾರಮಾಡುವಸಮಯದಲ್ಲಿ ಯಾವುದೋ ಒಂದು ಕಾರಣ ದಿಂದ ಸಿಟ್ಟುಗೊಂಡಿದ್ದರು. ಅವರು ಒಂದಾನೊಂದು ದಿನ ಶ್ರೀಮಧ್ವಾಚಾರ್ಯರ ಬಳಿಗೆ ಬಂದು ನೋಡಿ ಸಂತೋಷಪಟ್ಟರು. ಸಜ್ಜನರು ಗುಣಸಮುದ್ರರಾದ ಯೋಗ್ಯಪುರುಷರ ಗುಣಗಳ ಮೇಲಿನ ಪ್ರೀತಿಯಿಂದ ಪ್ರಸನ್ನರಾಗುತ್ತಾರೆ. ಅದರಂತೆ ಸರ್ವಸದ್ಗುಣಭರಿತರಾದ ಶ್ರೀಮಧ್ವಾಚಾರ್ಯರ ವಿಷಯದಲ್ಲಿ, ಸನ್ಯಾಸ ಸ್ವೀಕಾರಮಾಡಿದ ಕಾರಣದಿಂದ ಮಧ್ಯಗೇಹಭಟ್ಟರು ಮನಸ್ಸಿನಲ್ಲಿ ನೊಂದು ಕೊಂಡಿದ್ದರೂ ಮಗನ ಬಳಿಗೆ ಬಂದಕೂಡಲೆ ಆ ಮಹಾತ್ಮರ ಗುಣಗಳನ್ನು ಮೆಚ್ಚಿ ತುಂಬಾ ಸಂತೋಷಪಟ್ಟರು ಎಂದು ಭಾವ. ಅರ್ಥಾಂತರನ್ಯಾಸ ಅಲಂಕಾರ.

Rarest Archiver

ವಿ.—ಸೌಮ್ಯಾ ಧೀಃ ಯಸ್ಯ ಸಃ ಸೌಮ್ಯಧೀಃ, ಆರ್ಯೇಷು ವರಃ ಆರ್ಯವರಃ, ಪ್ರಸೇದಿವಾನ್ ಪ್ರಸೇದಿವಾಂಸೌ ಪ್ರಸೇದಿವಾಂಸಃ, ಹೇ ಪ್ರಸೇದಿ-ವನ್, ಪ್ರಸೇದಿವಾಂಸಂ, ಪ್ರಸೇದುಷಃ, ಪ್ರಸೇದುಷಾ ಪ್ರಸೇದಿವದ್ಭ್ಯಾಂ ಪ್ರಸೇದಿವದ್ಭಿಃ, ಸಕಾರಾಂತ ಪ್ರಸೇದಿವಸ್ ಶಬ್ದ, ಅವಿಮನಾಃ ವಿಮನಾಃ ಸಂಪದ್ಯಮಾನಃ ಕೃತಃ ವಿಮನೀಕೃತಃ, ಗುಣಾನಾಂ ಅಬ್ಧಿಃ ಗುಣಾಬ್ಧಿಃ, ಗುಣಾಬ್ಧೌ ಲುಬ್ಧಃ ಗುಣಾಬ್ಧಿಲುಬ್ಧಃ, ಶೋಭನಶ್ಚಾಸೌ ಜನಶ್ಚ ಸುಜನಃ। ವಿಮನಾಃ = ಬೇಸರಗೊಂಡವನು, ದುರ್ಮನಾ ವಿಮನಾಃ ಅಂತರ್ಮನಾಃ ಸ್ಯಾತ್ –ಅಮರ.

ಕ್ರಿ.—ಪ್ರ + ಸೀದತಿ ಸೀದತಃ ಸೀದಂತಿ ಸೀದಸಿ ಇತ್ಯಾದಿ. ಷದ್ಲೃ (ಸೀದ್) ವಿಶರಣಗತ್ಯವಸಾದನೇಷು ಲಟ್.

ಅವ.—ಮಗನನ್ನು ಕಣ್ಣುಗಳಿಂದ ನೋಡಿ, ಅವನ ಪ್ರವಚನವನ್ನು ಕಿವಿಗಳಿಂದ ಕೇಳಿ ಮಧ್ಯಗೇಹಭಟ್ಟರು ಆನಂದಪಟ್ಟರು—

ತೇಜೋಽಮೃತಂ ನಂದನಗಾತ್ರಪಾತ್ರಗಂ
ನೇತ್ರಾಂಜಲಿಭ್ಯಾಮಪಿಬತ್ ಸದಾವ್ಯಯಮ್ ।
ವಿದ್ಯಾಸುಧಾಂ ಚಾಸ್ಯ ವಚೋಮಹಾಘಟೇ
ಪೂರ್ಣಾಮಸೌ ಕರ್ಣಪುಟೇನ ಪಂಡಿತಃ ॥೨೪॥

ಅ.—ಪಂಡಿತಃ ಅಸೌ ನಂದನಗಾತ್ರಪಾತ್ರಗಂ ಸದಾ ಅವ್ಯಯಂ ತೇಜೋಽಮೃತಂ ನೇತ್ರಾಂಜಲಿಭ್ಯಾಂ ಅಪಿಬತ್। ಅಸ್ಯ ವಚೋಮಹಾಘಟೇ ಪೂರ್ಣಾಂ ವಿದ್ಯಾಸುಧಾಂ ಚ ಕರ್ಣಪುಟೇನ ಅಪಿಬತ್।

ಅ.ಅ.—ಪಂಡಿತಃ = ಜ್ಞಾನಿಗಳಾದ, ಅಸೌ = ಈ ಮಧ್ಯಗೇಹಭಟ್ಟರು, ನಂದನ = ಮಗನ, ಗಾತ್ರ = ದೇಹವೆಂಬ, ಪಾತ್ರಗಂ = ಪಾತ್ರೆಯಲ್ಲಿರುವ, ಸದಾ = ಯಾವಾಗಲೂ, ಅವ್ಯಯಂ = ನಾಶವಿಲ್ಲದ, ತೇಜೋಽಮೃತಂ = ಕಾಂತಿಯೆಂಬ ಅಮೃತವನ್ನು, ನೇತ್ರ = ಎರಡುಕಣ್ಣುಗಳೆಂಬ, ಅಂಜಲಿಭ್ಯಾಂ = ಎರಡುಬೊಗಸೆಗಳಿಂದ, ಅಪಿಬತ್ = ಕುಡಿದರು. ಅಸ್ಯ = ಈ ಮಗನ, ವಚೋಮಹಾಘಟೇ =

Rarest Archives

ಪ್ರವಚನವೆಂಬ ದೊಡ್ಡ ಕಲಶದಲ್ಲಿ, ಪೂರ್ಣಾಂ=ತುಂಬಿದ, ವಿದ್ಯಾಸುಧಾಂ ಚ= ವಿದ್ಯೆಯೆಂಬ ಅಮೃತವನ್ನೂ, ಕರ್ಣಪುಟೇನ=ಕಿವಿಗಳೆಂಬ ದೊನ್ನೆಯಿಂದ, ಆಪಿಬತ್=ಕುಡಿದರು.

ತಾ—ಮಧ್ಯಗೇಹಭಟ್ಟರು ಮಗನ ಶರೀರವೆಂಬ ಪಾತ್ರೆಯಲ್ಲಿ ತುಂಬಿರುವ, ಎಂದೂ ಹ್ರಾಸವಿಲ್ಲದಿರುವ ಕಾಂತಿಯೆಂಬ ಅಮೃತವನ್ನು ಕಣ್ಣುಗಳೆಂಬ ಬೊಗಸೆಗಳಿಂದ ಕುಡಿದರು. ಪಾತ್ರೆಯಲ್ಲಿ ತುಂಬಿರುವ ಅಮೃತವನ್ನು ಎರಡೂ ಕೈಗಳ ಬೊಗಸೆಯಿಂದ ಕುಡಿಯುವಂತೆ ಶ್ರೀಮಧ್ವಾಚಾರ್ಯರ ದೇಹಕಾಂತಿಯನ್ನು ಬಹಳ ಪ್ರೀತಿಯಿಂದ ನೋಡಿದರು. ಮಗನ ಪ್ರವಚನವೆಂಬ ದೊಡ್ಡ ಕಲಶದಲ್ಲಿ ತುಂಬಿದ ಜ್ಞಾನಾಮೃತವನ್ನು ಕಿವಿಗಳೆಂಬ ದೊನ್ನೆಗಳಿಂದ ಕುಡಿದರು. ಬಹಳ ಪ್ರೀತಿಯಿಂದ ಶ್ರೀಮಧ್ವಾಚಾರ್ಯರ ಪ್ರವಚನವನ್ನು ಕೇಳಿದರು ಎಂದು ಭಾವ.

ವಿ.—ತೇಜ ಏವ ಅಮೃತಂ ತೇಜೋಽಮೃತಂ ತತ್, ತೇಜಃ=ಕಾಂತಿ, ತೇಜೋ ಧಾಮ ಮಹೋ ವಿಭಾ- ಅಮರ. ನಂದನಸ್ಯ ಗಾತ್ರಂ ನಂದನಗಾತ್ರಂ, ನಂದನಗಾತ್ರಮೇವ ಪಾತ್ರಂ ನಂದನಗಾತ್ರಪಾತ್ರಂ, ತತ್ ಗಚ್ಛತೀತಿ ನಂದನಗಾತ್ರಪಾತ್ರಗಂ ತತ್, ನೇತ್ರೇ ಏವ ಅಂಜಲೀ ನೇತ್ರಾಂಜಲೀ ತಾಭ್ಯಾಂ, ನ ವಿದ್ಯತೇ ವ್ಯಯಃ ಯಸ್ಯ ತತ್ ಅವ್ಯಯಂ ತತ್, ವಿದ್ಯೈವ ಸುಧಾ ವಿದ್ಯಾಸುಧಾ, ತಾಂ, ಮಹಾಂಶ್ಚ ಅಸೌ ಘಟಶ್ಚ ಮಹಾಘಟಃ, ವಚ ಏವ ಮಹಾಘಟಃ ವಚೋಮಹಾಘಟಃ, ತಸ್ಮಿನ್, ಕರ್ಣಯೋಃ ಪುಟಂ ಕರ್ಣಪುಟಂ ತೇನ,

ಕ್ರಿ.—ಆಪಿಬತ್ ಆ ಪಿ ಬ ತಾಂ ಅಪಿಬನ್ ಇತ್ಯಾದಿ, ಪಾ (ಪಿಬ್) ಪಾನೇ ಲಙ್.

ಅವ.—ಮಧ್ವಾಚಾರ್ಯರು ಪ್ರಚಲಿತವಾಗಿದ್ದ ಸೂತ್ರಭಾಷ್ಯದ ಅರ್ಥವು ಸಂಗತವಾಗಿಲ್ಲವೆಂದು ಹೇಳಿದಾಗ ಅಚ್ಯುತಪ್ರೇಕ್ಷರು ಶಿಷ್ಯನನ್ನು ಆಕ್ಷೇಪಿಸಿದರು.

ಲೀಲಾವಿವಾದೇ ಗುರುಣಾ ಜಗದ್ಗುರೋಃ
ಪ್ರಸಂಗತಸ್ತತ್ರ ಚ ತಾದೃಶೇ ಸತಿ ।
ಸೂತ್ರಾರ್ಥವಿಚ್ಛೇತ್ ಕುರುಭಾಷ್ಯಮಂಜಸೇ
ತ್ಯಾಕ್ಷೇಪಪೂರ್ವಂ ಗುರುರಭ್ಯಧಾದಿಮಂ ॥೨೫॥

ಅ.—ಜಗದ್ಗುರೋಃ ಗುರುಣಾ ಪ್ರಸಂಗತಃ ತತ್ರ ಚ ತಾದೃಶೇ ಲೀಲಾ-ವಿವಾದೇ ಸತಿ ಗುರುಃ ಇಮಂ 'ಸೂತ್ರಾರ್ಥವಿತ್ ಚೇತ್ ಭಾಷ್ಯಂ ಅಂಜಸಾ ಕುರು' ಇತಿ ಆಕ್ಷೇಪಪೂರ್ವಂ ಅಭ್ಯಧಾತ್.

ಅ.ಅ.—ಜಗದ್ಗುರೋಃ = ಲೋಕಗುರುಗಳಾದ ಶ್ರೀಮಧ್ವಾಚಾರ್ಯರಿಗೆ, ಗುರುಣಾ (ಸಹ)=ಗುರುಗಳಾದ ಅಚ್ಯುತಪ್ರೇಕ್ಷಾಚಾರ್ಯರೊಡನೆ, ಪ್ರಸಂಗತಃ = ತತ್ತ್ವವಿಚಾರಸಂದರ್ಭವಶದಿಂದ, ತತ್ರ ಚ = ಆ ಪ್ರಸಂಗದಲ್ಲಿ, ತಾದೃಶೇ = ಹಿಂದೆ ಹೇಳಿದಂತಹ, ಲೀಲಾವಿವಾದೇ ಸತಿ = ಅಸೂಯೆ ಇಲ್ಲದೆ ವಿನೋದದಿಂದ. ಭಾಷ್ಯವು ಸೂತ್ರಸಂಗತವಲ್ಲವೆಂಬ ವಿಪ್ರತಿಪತ್ತಿಯು ಒದಗಿದಾಗ, ಗುರುಃ = ಗುರುಗಳಾದ ಅಚ್ಯುತಪ್ರೇಕ್ಷರು, ಇಮಂ = ಈ ಮಧ್ವಾಚಾರ್ಯರನ್ನು ಕುರಿತು, '(ತ್ವಂ) ಸೂತ್ರಾರ್ಥವಿತ್ ಚೇತ್ = ನೀನು ಸೂತ್ರದ ಅರ್ಥವನ್ನು ಬಲ್ಲವ-ನಾಗಿದ್ದರೆ, ಭಾಷ್ಯಂ = ಬ್ರಹ್ಮಸೂತ್ರಭಾಷ್ಯವನ್ನು, ಅಂಜಸಾ = ಸರಿಯಾಗಿ, ಕುರು = ಮಾಡು' ಇತಿ = ಎಂದು, ಆಕ್ಷೇಪಪೂರ್ವಂ = ಧ್ವನಿವ್ಯತ್ಯಾಸಸಹಿತ ವಾದ ಕೋಪವಿಶೇಷದಿಂದ ಕೂಡಿಕೊಂಡು, ಅಭ್ಯಧಾತ್ = ಹೇಳಿದರು.

ತಾ.—ಜಗದ್ಗುರುಗಳಾದ ಶ್ರೀಮಧ್ವಾಚಾರ್ಯರು ಅಚ್ಯುತಪ್ರೇಕ್ಷಾ ಚಾರ್ಯರೊಡನೆ ಒಂದು ದಿನ ತತ್ತ್ವವಿಚಾರಮಾಡುತ್ತಿದ್ದಾಗ ಪ್ರಸಂಗದಿಂದ ಬ್ರಹ್ಮಸೂತ್ರತಾತ್ಪರ್ಯವಿಷಯದಲ್ಲಿ ವಿನೋದದ ವಿವಾದವು ಹುಟ್ಟಿತು. ಅಚ್ಯುತ ಪ್ರೇಕ್ಷರು 'ಆನಂದತೀರ್ಥನೇ! ನೀನು ಸೂತ್ರಾರ್ಥವನ್ನು ಚೆನ್ನಾಗಿ ತಿಳಿದಿರುವೆ ಯಾದರೆ ನೀನೇ ಪ್ರತ್ಯೇಕಭಾಷ್ಯವನ್ನೇ ಮಾಡು' ಎಂದು ಆಕ್ಷೇಪಯುಕ್ತಸ್ವರ ದಿಂದ ಶ್ರೀಮಧ್ವಾಚಾರ್ಯರಿಗೆ ಹೇಳಿದರು. ವಿನೋದದಿಂದ ಪ್ರಾರಂಭವಾದ ತತ್ತ್ವವಿಚಾರವದು. ಅಚ್ಯುತಪ್ರೇಕ್ಷರು ಶಾಂಕರಭಾಷ್ಯವನ್ನು ಸಮರ್ಥಿಸಲಾರದೆ ನಿರುತ್ತರರಾದರು. ಸಿಟ್ಟುಬಂದಿತು. ಈಗಿರುವ ಈ ಭಾಷ್ಯವು ಅಯುಕ್ತವಾದರೆ ಬೇರೆ ಭಾಷ್ಯವನ್ನು ನೀನೇ ಮಾಡು, ನೋಡೋಣ ಎಂದು ಘಟ್ಟಿಯಾದ ಸ್ವರ ದಿಂದ ಆಕ್ಷೇಪವನ್ನು ತೋರಿದರು ಎಂದು ಭಾವ.

ವಿ.—ಲೀಲಯಾ ವಿವಾದಃ ಲೀಲಾವಿವಾದಃ ತಸ್ಮಿನ್, ಲೀಲಾ = ವಿನೋದ, ಕ್ರೀಡಾ ಲೀಲಾ ಚ ನರ್ಮ ಚ — ಅಮರ. ಜಗತಾಂ ಗುರುಃ ಜಗದ್ಗುರುಃ ತಸ್ಯ, ಪ್ರಸಂಗೇನ ಇತಿ ಪ್ರಸಂಗತಃ, ಸಾರ್ವವಿಭಕ್ತಿಕತಸಿಪ್ರತ್ಯಯ.

Rarest Archiver

ಸೂತ್ರಾಣಾಂ ಅರ್ಥಃ, ಸೂತ್ರಾರ್ಥಂ ವೇತ್ತೀತಿ ಸೂತ್ರಾರ್ಥವಿತ್, ಆಕ್ಷೇಪಃ ಪೂರ್ವಃ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ಆಕ್ಷೇಪಪೂರ್ವಂ (ಕ್ರಿ.ವಿ.)

ಕ್ರಿ.—ಅಭಿ + ಅಧಾತ್ ಅಧಾತಾಂ ಅಧುಃ, ಅಧಾಃ ಅಧಾತಂ ಅಧಾತ, ಅಧಾಂ ಅಧಾವ ಅಧಾಮ. ಅಭಿ ಉಪ. ಡುಧಾಞ್ (ಧಾ) ಧಾರಣಪೋಷಣಯೋಃ ಪರ. ಲುಙ್. ಕರೋತು ಕುರುತಾತ್ ಕುರುತಾಂ ಕುರ್ವಂತು, ಕುರು ಕುರುತಾತ್ ಕುರುತಂ ಕುರುತ, ಕರವಾಣಿ ಕರವಾವ ಕರವಾಮ. ಡುಕೃಞ್ (ಕೃ) ಕರಣೇ, ಪರ. ಲೋಟ್.

ಅವ.—ಆಗ ಮಧ್ವಾಚಾರ್ಯರು ಗುರುಗಳ ಆಕ್ಷೇಪವಚನದಲ್ಲಿ ಕಾಣುವ 'ಭಾಷ್ಯವನ್ನು ಮಾಡು' ಎಂಬ ಅನುಜ್ಞೆಯನ್ನು ಮಾತ್ರ ಸ್ವೀಕರಿಸಿದರು—

ವಿಧಾನಮಾತ್ರಂ ತದುಪಾದದೇ ತದಾ
ಪಯೋ ಯಥಾಚ್ಛಂ ಪರಮಃ ಸ ಹಂಸರಾಟ್ ।
ತಲ್ಲೀನಮಾಕ್ಷೇಪಮುಪೈಕ್ಷತಾಫಲಂ
ವಾರೀವ ಸಂತೋ ಹಿ ಗುಣಾಂಶತೋಷಿಣಃ ॥೨೬॥

ಅ.—ಪರಮಃ ಹಂಸರಾಟ್ ಸಃ ತದಾ ಅಚ್ಛಂ ಪಯಃ ಯಥಾ ತತ್ ವಿಧಾನಮಾತ್ರಂ ಉಪಾದದೇ। ಅಫಲಂ ತಲ್ಲೀನಂ ಆಕ್ಷೇಪಂ ವಾರಿ ಇವ ಉಪೈಕ್ಷತ। ಹಿ ಸಂತಃ ಗುಣಾಂಶತೋಷಿಣಃ।

ಅ.ಅ.—ಪರಮಃ = ಉತ್ತಮರಾದ, ಹಂಸರಾಟ್ = ಯತಿಶ್ರೇಷ್ಠರಾದ, ಸಃ = ಆ ಮಧ್ವಾಚಾರ್ಯರು, ತದಾ = ಆಗ, ಪರಮಃ ಹಂಸರಾಟ್ = ಶ್ರೇಷ್ಠವಾದ ಹಂಸರಾಜನು, ಅಚ್ಛಂ = ನಿರ್ಮಲವಾದ, ಪಯಃ ಯಥಾ = ಹಾಲನ್ನು ಎಂಬಂತೆ, ವಿಧಾನಮಾತ್ರಂ = 'ಮಾಡು' ಎಂಬ ಆಜ್ಞೆಯನ್ನು ಮಾತ್ರ, ಉಪಾದದೇ = ತೆಗೆದುಕೊಂಡರು ; ಅಫಲಂ = ಪ್ರಯೋಜನವಿಲ್ಲದ, ತಲ್ಲೀನಂ = ಆ ಮಾತಿನಲ್ಲಿ ಅಡಗಿರುವ, ಆಕ್ಷೇಪಂ = ಆಗ್ರಹದ ಮಾತನ್ನು,(ಹಂಸರಾಟ್) ವಾರಿ ಇವ = (ಹಂಸವು)ನೀರನ್ನು ಎಂಬಂತೆ, ಉಪೈಕ್ಷತ = ಉಪೇಕ್ಷಿಸಿದರು. ಹಿ = ಏಕೆಂದರೆ, ಸಂತಃ = ಸಜ್ಜನರು, ಗುಣಾಂಶ=ಗುಣ ಎಂಬ ಭಾಗದಿಂದ, ತೋಷಿಣಃ = ಸಂತೋಷವುಳ್ಳವರು.

Rarest Archiver

ತಾ.—ಹಂಸಪಕ್ಷಿಯು ನೀರು ಬೆರಸಿದ ಹಾಲಿನಲ್ಲಿ ನಿರ್ಮಲವಾದ ಹಾಲನ್ನು ಮಾತ್ರವೇ ಕುಡಿದು, ಹಾಲಿನಲ್ಲಿ ಬೆರೆತಿರುವ ಪ್ರಯೋಜನವಿಲ್ಲದ ನೀರನ್ನು ಬಿಟ್ಟುಬಿಡುತ್ತದೆ. ಅದರಂತೆ ಪರಮಹಂಸಶ್ರೇಷ್ಠರಾದ ಆಚಾರ್ಯರು –'ನೀನು ಸೂತ್ರಾರ್ಥವನ್ನು ತಿಳಿದಿದ್ದರೆ ಭಾಷ್ಯವನ್ನು ಮಾಡು' ಎಂಬ ಗುರುಗಳ ಮಾತಿನಲ್ಲಿ ಧ್ವನಿಯಿಂದ ವ್ಯಂಗ್ಯವಾದ 'ನೀನು ಸೂತ್ರವನ್ನು ಚೆನ್ನಾಗಿ ಬಲ್ಲವನೋ ಹಾಗಾದರೆ' ಎಂಬ ಕೋಪದ ಆಕ್ಷೇಪವನ್ನು ಬಿಟ್ಟುಬಿಟ್ಟರು. 'ಭಾಷ್ಯವನ್ನು ಮಾಡು' ಎಂಬ ಗುರುಗಳ ಪ್ರೇರಣೆಯನ್ನು ಮಾತ್ರ ಸ್ವೀಕರಿಸಿದರು. ಅದು ಯುಕ್ತವೇ ಸರಿ. ಸಜ್ಜನರು ಇತರರಲ್ಲಿರುವ ಸ್ವಲ್ಪವೇ ಆಗಿದ್ದರೂ ಗುಣಭಾಗಮಾತ್ರದಿಂದ ಸಂತೋಷಪಡುತ್ತಾರೆ. ಅಲ್ಲಿರುವ ಕೆಟ್ಟ ಅಂಶಕ್ಕಾಗಿ ನೊಂದುಕೊಳ್ಳುವುದಿಲ್ಲ. (ಆಚಾರ್ಯರು ಗುರುಗಳ ಆಜ್ಞೆಯಂತೆ ಭಾಷ್ಯವನ್ನು ಮಾಡುವೆನೆಂದು ಸಂಕಲ್ಪಿಸಿದರು ಎಂದು ಭಾವ.)

ವಿ.—ವಿಧಾನಮೇವ ವಿಧಾನಮಾತ್ರಂ ತತ್, ಹಂಸಾನಾಂ ರಾಟ್ ಹಂಸರಾಟ್, ತಸ್ಮಿನ್ ಲೀನಃ ತಲ್ಲೀನಃ ತಂ, ನ ವಿದ್ಯತೇ ಫಲಂ ಯಸ್ಯ ಸಃ ಅಫಲಃ ತಂ, ಗುಣಃ ಇತಿ ಅಂಶಃ ಗುಣಾಂಶಃ, ಗುಣಾಂಶೇನ ತುಷ್ಯಂತಿ ಇತಿ ಗುಣಾಂಶತೋಷಿಣಃ ;

ಕ್ರಿ.—ಉಪ+ಆ+ದದೇ ದದಾತೇ ದದಿರೇ, ದದಿಷೇ ದದಾಥೇ, ದದಿಧ್ವೇ, ದದೇ ದದಿವಹೇ ದದಿಮಹೇ, ಡುದಾಞ್ (ದಾ) ದಾನೇ ಆತ್ಮನೇ. ಲಿಟ್. ಉಪ ಆ ಎರಡು ಉಪಸರ್ಗ. ಉಪ+ಐಕ್ಷತ ಐಕ್ಷೇತಾಂ ಐಕ್ಷಂತ, ಐಕ್ಷಥಾಃ ಐಕ್ಷೇಥಾಂ ಐಕ್ಷಧ್ವಂ, ಐಕ್ಷೇ ಐಕ್ಷಾವಹಿ ಐಕ್ಷಾಮಹಿ. ಉಪ. ಉಪಸರ್ಗ. ಈಕ್ಷ ದರ್ಶನೇ ಆತ್ಮನೇ. ಲಙ್.

ಅವ.—ಅಚ್ಯುತಪ್ರೇಕ್ಷರೇ ಮೊದಲಾದ ಅಲ್ಲಿರುವವರೆಲ್ಲ ಶಾಂಕರಭಾಷ್ಯ ಸಿದ್ಧಾಂತದಲ್ಲಿ ಪ್ರೇಮವುಳ್ಳವರಾದರೆ ಆಚಾರ್ಯರ ಪಕ್ಷದಲ್ಲಿ ಯಾರೂ ಇರಲಿಲ್ಲವೇ ? ಇದ್ದರು.

ವೈರಾಗ್ಯವೈಯಾತ್ಯಸುವ್ಯಾಕ್ತ್ಯಪೂರ್ವಕೈ-
ರ್ಯುಕ್ತೋ ಗುಣೈಃ ಪಾರಮಹಂಸ್ಯಭೂಷಣೈಃ ।

Rarest Archiver

ಜ್ಯೇಷ್ಠೋ ಯತಿರ್ಲಿಕುಚಾನ್ವಯೋದ್ಭವ-
ಸ್ತಂ ಭೂರಿಭಕ್ತಿಸ್ಸಕದಾಚಿದಬ್ರವೀತ್ ॥೨೭॥

ಅ.—ಪಾರಮಹಂಸ್ಯಭೂಷಣೈಃ ವೈರಾಗ್ಯವೈಯಾತ್ಯಸುವಾಕ್ತ್ವಪೂರ್ವಕೈಃ ಗುಣೈಃ ಯುಕ್ತಃ ಭೂರಿಭಕ್ತಿಃ ಲಿಕುಚಾನ್ವಯೋದ್ಭವಃ ಜ್ಯೇಷ್ಠಃ ಯಃ ಯತಿಃ ಸಃ ಕದಾಚಿತ್ ತಂ ಅಬ್ರವೀತ್।

ಅ.ಅ.—ಪಾರಮಹಂಸ್ಯ = ಪರಮಹಂಸಸಂನ್ಯಾಸಕ್ಕೆ, ಭೂಷಣೈಃ = ಅಲಂಕಾರವಾದ, ವೈರಾಗ್ಯ = ಐಹಿಕ ಆಮುಷ್ಮಿಕ ಫಲಭೋಗದಲ್ಲಿ ಆಸೆ ಇಲ್ಲದಿರುವಿಕೆ, ವೈಯಾತ್ಯ = ಇಂದ್ರಿಯಜಯದ ದಿಟ್ಟತನ, ಸುವಾಕ್ತ್ವ = ಒಳ್ಳೆಯ ಮಾತುಗಾರಿಕೆ, ಇವುಗಳೇ, ಪೂರ್ವಕೈಃ = ಮೊದಲಾಗಿ ಉಳ್ಳ, ಗುಣೈಃ = ಗುಣಗಳಿಂದ, ಯುಕ್ತಃ = ಕೂಡಿದ, ಭೂರಿಭಕ್ತಿಃ = ಹರಿಯಲ್ಲಿ ಅತಿಶಯವಾದ ಭಕ್ತಿಯುಳ್ಳ, ಲಿಕುಚಾನ್ವಯ = ಲಿಕುಚವಂಶದಲ್ಲಿ (ಪೆಜತಾಯಕುಲದಲ್ಲಿ), ಉದ್ಭವಃ = ಹುಟ್ಟಿದ್ದ, ಜ್ಯೇಷ್ಠಃ = ಆಶ್ರಮದಲ್ಲಿ ಹಿರಿಯವರಾದ, ಯಃ ಯತಿಃ = ಯಾವ ಸಂನ್ಯಾಸಿಗಳಿದ್ದರೋ, ಸಃ = ಅವರು, ಕದಾಚಿತ್ = ಒಂದಾನೊಂದು ದಿನ, ತಂ = ಆ ಮಧ್ವಾಚಾರ್ಯರನ್ನು ಕುರಿತು, ಅಬ್ರವೀತ್ = ಹೇಳಿದರು.

ತಾ.—ಪೆಜತಾಯವಂಶದಲ್ಲಿ (ಲಿಕುಚವಂಶದಲ್ಲಿ) ಹುಟ್ಟಿದ್ದ ಒಬ್ಬರು ಮಧ್ವಾಚಾರ್ಯರಿಗಿಂತ ಮೊದಲೇ ಅಚ್ಯುತಪ್ರೇಕ್ಷರಿಂದ ಸಂನ್ಯಾಸ ಪಡೆದಿದ್ದರು. ಅವರು ಪರಮಹಂಸಸಂನ್ಯಾಸಕ್ಕೆ ಅಲಂಕಾರವಾಗಿರುವ ವೈರಾಗ್ಯ, ಧೈರ್ಯ, ಪ್ರಶಸ್ತವಾದ ಮಾತು, ಮೊದಲಾದ ಗುಣಗಳಿಂದ ಕೂಡಿದ್ದರು. ಶ್ರೀಹರಿಯಲ್ಲಿ ಪರಮಭಕ್ತರಾಗಿದ್ದರು. ಆ ಯತಿಗಳು ಒಂದುದಿನ ಮಧ್ವಾಚಾರ್ಯರನ್ನು ಕುರಿತು ಹೀಗೆಂದರು.

ವಿ.—ಪರಮಹಂಸಾನಾಂ ಭಾವಃ ಪಾರಮಹಂಸ್ಯಂ, ತಸ್ಯ ಭೂಷಣಾನಿ ಪಾರಮಹಂಸ್ಯಭೂಷಣಾನಿ ತೈಃ, ವಿಗತಃ ರಾಗಃ ಯಸ್ಮಾತ್ ಸಃ ವಿರಾಗಃ ತಸ್ಯ ಭಾವಃ ವೈರಾಗ್ಯಂ, ವಿಯಾತಸ್ಯ ಭಾವಃ ವೈಯಾತ್ಯಂ, ಶೋಭನಾ ಚ ಸಾ ವಾಕ್ ಚ ಸುವಾಕ್, ಸುವಾಚಃ ಭಾವಃ ಸುವಾಕ್ತ್ವಂ, ವೈರಾಗ್ಯಂ ಚ ವೈಯಾತ್ಯಂ ಚ ಸುವಾಕ್ತ್ವಂ ಚ ವೈರಾಗ್ಯವೈಯಾತ್ಯಸುವಾಕ್ತ್ವಾನಿ, ತಾನಿ

Rarest Archiver

ಪೂರ್ವಾಣಿ ಯೇಷಾಂ ತೇ ತ್ರೈಃ, ವಿಯಾತ=ದಿಟ್ಟ, ಧೈರ್ಯಶಾಲಿ- ಧೃಷ್ಟೇ ಧೃಷ್ಣಗ್ ವಿಯಾತಶ್ಚ—ಅಮರ. ಲಿಕುಚಾನಾಂ ಅನ್ವಯಃ ಲಿಕುಚಾನ್ವಯಃ, ತಸ್ಮಿನ್ ಉದ್ಭವಃ ಯಸ್ಯ ಸಃ, ಭೂರಿಃ ಭಕ್ತಿಃ ಯಸ್ಯ ಸಃ ಭೂರಿಭಕ್ತಿಃ.

ಕ್ರಿ.—ಅಬ್ರವೀತ್ ಅಬ್ರೂತಾಂ ಅಬ್ರುವನ್, ಅಬ್ರವೀಃ, ಅಬ್ರೂತಂ ಅಬ್ರೂತ, ಅಬ್ರವಂ ಅಬ್ರೂವ ಅಬ್ರೂಮ. ಬ್ರೂಞ್ (ಬ್ರೂ) ವ್ಯಕ್ತಾಯಾಂ ವಾಚಿ ಪರ. ಲಙ್.

ಜ್ಯೇಷ್ಠಯತಿಗಳು ಏನು ಹೇಳಿದರು–

ವಿರೋಧಿ ವೇದಾಂತಕೃತಾಂತಸಂಪದಾಂ
ಭಾಷ್ಯಾದಿಕಂ ಚೇದಿದಮಸ್ತು ಕಾ ಕ್ಷತಿಃ ।
ಅಸ್ಮಭ್ಯಮಾಚಕ್ಷ್ವ ವಿಚಕ್ಷಣೋಚಿತಂ
ಭಾವಂ ತು ಸೂತ್ರೋಪನಿಷದ್ವಿವಕ್ಷಿತಂ. ॥೨೮॥

ಅ.—ಇದಂ ಭಾಷ್ಯಾದಿಕಂ ವೇದಾಂತಕೃತಾಂತಸಂಪದಾಂ ವಿರೋಧಿ ಚೇತ್ ಅಸ್ತು, ಕಾ ಕ್ಷತಿಃ ? ವಿಚಕ್ಷಣ ! ಅಸ್ಮಭ್ಯಂ ತು ಸೂತ್ರೋಪನಿಷದ್-ವಿವಕ್ಷಿತಂ ಉಚಿತಂ ಭಾವಂ ಆಚಕ್ಷ್ವ।

ಅ.ಅ. —ಇದಂ ಭಾಷ್ಯಾದಿಕಂ=ಈ ಭಾಷ್ಯಮೊದಲಾದುದು, ವೇದಾಂತ-ಕೃತಾಂತ = ಬ್ರಹ್ಮಸೂತ್ರಸಿದ್ಧಾಂತದ, ಸಂಪದಾಂ = ಉತ್ಕರ್ಷಗಳಿಗೆ, ವಿರೋಧಿ ಚೇತ್ = ವಿರುದ್ಧವಾಗಿರುವುದಾದರೆ, ಅಸ್ತು = ಇರಲಿ, ಕಾ ಕ್ಷತಿಃ= ಏನು ನಷ್ಟ ? ವಿಚಕ್ಷಣ ! = ಕುಶಲರಾದ ಮಧ್ವಾಚಾರ್ಯರೇ ! ಅಸ್ಮಭ್ಯಂ ತು =ನಮಗಾದರೋ, ಸೂತ್ರೋಪನಿಷದ್ = ಬ್ರಹ್ಮಸೂತ್ರಗಳು ಮತ್ತು ಉಪ-ನಿಷತ್ತುಗಳಿಗೆ, ವಿವಕ್ಷಿತಂ = ಒಪ್ಪಿಗೆಯಾಗಿರುವ, ಉಚಿತಂ= ಯೋಗ್ಯವಾದ, ಭಾವಂ= ಅಭಿಪ್ರಾಯವನ್ನು, ಆಚಕ್ಷ್ವ= ಹೇಳಿರಿ.

ತಾ.—ಶ್ರೀ ಮಧ್ವಾಚಾರ್ಯರೇ ! ಈಗ ಪ್ರಚಲಿತವಾಗಿರುವ ಶಾಂಕರ ಭಾಷ್ಯಮುಂತಾದಗ್ರಂಥಗಳು ವೇದಾಂತಸಿದ್ಧಾಂತದ ಸರ್ವೋತ್ಕರ್ಷಕ್ಕೆ ಅನು ಗುಣವಾಗಿಲ್ಲ., ಪ್ರತಿಕೂಲವಾಗಿವೆ ಎಂದು ನಿಮ್ಮ ಅಭಿಪ್ರಾಯವಷ್ಟೆ ! ಆಗಲಿ.

Rarest Archiver

ಆದರಿಂದ ನಮಗೇನು ಹಾನಿಯು ? ನೀವು ಬ್ರಹ್ಮಸೂತ್ರಗಳು ಮತ್ತು ಅವುಗಳಿಂದ ನಿರ್ಣಯಿಸಲ್ಪಡಬೇಕಾದ ಉಪನಿಷತ್ತುಗಳಿಗೆ ಸಂಮತವಾದ ಪೂರ್ವೋತ್ತರವಿರೋಧವಿಲ್ಲದ ಅಭಿಪ್ರಾಯವನ್ನು ನಮಗೆ ಹೇಳಿರಿ. ನಾವು ಸಂತೋಷದಿಂದ ಕೇಳುತ್ತೇವೆ (ಎಂದು ಜ್ಯೇಷ್ಠಯತಿಗಳು ಹೇಳಿದರು.)

ವಿ.—ವಿರೋಧಃ ಅಸ್ಮಿನ್ ಅಸ್ತೀತಿ ವಿರೋಧಿ. ವೇದಾನಾಂ ಅಂತಃ ನಿರ್ಣಯಃ ಯಸ್ಮಾತ್ ಸಃ ವೇದಾಂತಃ ತಸ್ಯ ಕೃತಾಂತಃ ವೇದಾಂತಕೃತಾಂತಃ, ತಸ್ಯ ಸಂಪದಃ ವೇದಾಂತಕೃತಾಂತಸಂಪದಃ ತಾಸಾಂ, ಭಾಷ್ಯಂ ಆದಿ ಯಸ್ಯ ತತ್ ಭಾಷ್ಯಾದಿಕಂ, ಸೂತ್ರಾಣಿ ಚ ಉಪನಿಷದಶ್ಚ ಸೂತ್ರೋಪನಿಷದಃ, ವಕ್ತುಮಿಷ್ಟಃ ವಿವಕ್ಷಿತಃ, ಸೂತ್ರೋಪನಿಷದ್ಭಿಃ ವಿವಕ್ಷಿತಃ ಸೂತ್ರೋಪನಿಷದ್ವಿವಕ್ಷಿತಃ ತಂ.

ಕ್ರಿ.—ಅಸ್ತು ಸ್ತಾತ್ ಸ್ತಾಂ ಸಂತು, ಏಧಿ ಸ್ತಾತ್ ಸ್ತಂ ಸ್ತ, ಅಸಾನಿ ಅಸಾವ ಅಸಾಮ. ಅಸ ಭುವಿ ಪರ. ಲೋಟ್. ಆ+ಚಕ್ಷ್ವ, ಚಷ್ಟಾಂ ಚಕ್ಷಾತಾಂ ಚಕ್ಷತಾಂ, ಚಕ್ಷ್ವ ಚಕ್ಷಾಥಾಂ ಚಡ್ಢ್ವಂ, ಚಕ್ಷೈ ಚಕ್ಷಾವಹೈ ಚಕ್ಷಾಮಹೈ. ಚಕ್ಷಿಙ್ ವ್ಯಕ್ತಾಯಾಂ ವಾಚಿ. ಆತ್ಮ. ಲೋಟ್.

ಅವ.—ಹಿರಿಯಯತಿಗಳ ಮಾತನ್ನು ಕೇಳಿ ಸಂತುಷ್ಟರಾದ ಆಚಾರ್ಯರು ಬ್ರಹ್ಮಸೂತ್ರಗಳ ಭಾವವನ್ನು ಪ್ರಕಟಿಸಿದರು—

ಇತ್ಯಸ್ಯ ವಾಚಾ ಶರದೇವ ಭಾಸಿತಾ
ಯದಾಖಿಲಾಶಾ ಶುಭಪೂರ್ಣಯಾ ಬಭೌ ।
ಪ್ರಮೋದತೀರ್ಥಾನನಚಂದ್ರಚಂದ್ರಿಕಾ
ವ್ಯಾಖ್ಯಾಭಿಧಾ ವಿಷ್ಣುಪದಪ್ರಕಾಶಿನೀ ॥೨೯॥

ಅ.—ಇತಿಶುಭಪೂರ್ಣಯಾ ಅಸ್ಯ ವಾಚಾ ಶರದಾ ಇವ ಅಖಿಲಾಶಾ ಯದಾ ಭಾಸಿತಾಃ ತದಾ ವ್ಯಾಖ್ಯಾಭಿಧಾ ವಿಷ್ಣುಪದಪ್ರಕಾಶಿನೀ ಪ್ರಮೋದತೀರ್ಥಾನನಚಂದ್ರಚಂದ್ರಿಕಾ ಬಭೌ.

ಅ.ಅ.—ಇತಿ = ಈರೀತಿಯಾಗಿ, ಶುಭಪೂರ್ಣಯಾ = ಮಂಗಲಕರವಾದ ವಿಷಯದಿಂದ ತುಂಬಿದ (ಸಜ್ಜನರಿಗೆ ಇಷ್ಟವಾದ) ಮಂಗಳಕರಹುಣ್ಣಿಮೆ

Rarest Archiver

ಯುಳ್ಳ, ಅಸ್ಯ = ಈ ಲಿಕುಚವಂಶದ ಯತಿಗಳ, ವಾಚಾ = ಮಾತಿನಿಂದ, ಶರದಾ ಇವ = ಶರತ್ಕಾಲದಿಂದ ಎಂಬಂತೆ, ಅಖಿಲಾಶಾ = ಎಲ್ಲಾ ಸಜ್ಜನರ ಅಭಿಲಾಷೆಯು, ಎಲ್ಲಾದಿಕ್ಕು, ಯದಾ = ಯಾವಾಗ, ಭಾಸಿತಾ = ಪ್ರಕಾಶ ಗೊಳಿಸಲ್ಪಟ್ಟಿತೋ, ತದಾ = ಆಗ, ವ್ಯಾಖ್ಯಾಭಿಧಾ = ವ್ಯಾಖ್ಯಾಎಂದು ಹೆಸರುಳ್ಳ, ವಿಷ್ಣುಪದ = ಆಕಾಶವನ್ನು, ಭಗವಂತನಸ್ವರೂಪವನ್ನು, ಪ್ರಕಾಶಿನೀ = ಪ್ರಕಾಶಗೊಳಿಸುವ, ಪ್ರಮೋದತೀರ್ಥ = ಶ್ರೀಮದಾನಂದತೀರ್ಥರ, ಆನನ-ಚಂದ್ರ = ಮುಖವೆಂಬ ಚಂದ್ರನ, ಚಂದ್ರಿಕಾ = ಬೆಳದಿಂಗಳು, ಬಭೌ = ಪ್ರಕಾಶಿಸಿತು.

ತಾ.—ಮಂಗಳಕರವಾದ ಹುಣ್ಣಿಮೆಯಿಂದ ಕೂಡಿದ ಶರದೃತುವಿನಿಂದ ಎಲ್ಲಾ ದಿಕ್ಕುಗಳೂ ಪ್ರಕಾಶಗೊಳ್ಳುತ್ತವೆ. ಅದರಂತೆ ಸಜ್ಜನರಿಗೆ ಮಂಗಳಕರ ವಾದ ಜ್ಯೇಷ್ಠಯತಿಗಳ ವಚನದಿಂದ ಎಲ್ಲಾ ಸಜ್ಜನರಿಗೂ ಬ್ರಹ್ಮಮೀಮಾಂಸಾ ಶಾಸ್ತ್ರದ ಸರಿಯಾದ ಅರ್ಥವನ್ನು ಅರಿಯಬೇಕೆಂಬ ಅಭಿಲಾಷೆಯು ಇದೆಯೆಂದು ಪ್ರಕಾಶವಾಯಿತು. ಆಗ ಆಕಾಶವನ್ನು ಬೆಳಗಿಸುವ ಚಂದ್ರನ ಬೆಳದಿಂಗಳಿನಂತೆ ಶ್ರೀಮಧ್ವಾಚಾರ್ಯರ ಮುಖದಿಂದ ಬ್ರಹ್ಮಸೂತ್ರಾದಿಗಳ ಅರ್ಥವು ಪ್ರಕಾಶಿತ ವಾಯಿತು. ಅದು ಶ್ರೀಮನ್ನಾರಾಯಣನ ಸತ್ಯವಾದ ಸ್ವರೂಪವನ್ನು ಪ್ರಕಾಶ ಗೊಳಿಸುತ್ತಾ ಚೆನ್ನಾಗಿ ಕಂಗೊಳಿಸಿತು. ಜ್ಯೇಷ್ಠಯತಿಗಳು ಸೂತ್ರಉಪನಿಷತ್ತು ಗಳ ಭಾವವನ್ನು ಸರಿಯಾಗಿ ಉಪದೇಶಿಸು ಎಂದು ಹೇಳಿದುದನ್ನು ಕೇಳಿ ಸಜ್ಜನ ರೆಲ್ಲರೂ ಬಹುಕಾಲದಿಂದ ತಮ್ಮಲ್ಲಿದ್ದ ಅಭಿಲಾಷೆಯು ಈಗ ಪೂರ್ಣವಾಗುವು ದೆಂದು ಸಂತೋಷಪಟ್ಟರು. ಶ್ರೀ ಮಧ್ವಾಚಾರ್ಯರು ಅವರ ಮಾತಿನಂತೆ ಸೂತ್ರಾದಿಗಳ ಭಾವವನ್ನು ಉಪದೇಶಿಸಿದರು. ಜ್ಯೇಷ್ಠಯತಿಗಳ ವಚನವು ಶರದೃತುಸದೃಶವಾದುದು. ಸಜ್ಜನರು ಹುಣ್ಣಿಮೆಗೆ ಸಮಾನರು. ಅಭಿಲಾಷೆಗಳು ದಿಕ್ಕುಗಳಿಗೆ ಸಮವಾದುವು ಎಂದು ಅಭಿಪ್ರಾಯ.

ವಿ.—ಅಖಿಲಾನಾಂ ಆಶಾ ಅಖಿಲಾಶಾ, ಅಖಿಲಾ ಚ ಸಾ ಆಶಾ ಚ ಅಖಿಲಾಶಾ, ಆಶಾ = ದಿಕ್ಕು, ಆಸೆ, ಆಶಾದಿಗಭಿಲಾಷಯೋಃ—ಅಮರ. ಶುಭೇನ ಪೂರ್ಣಾ ಶುಭಪೂರ್ಣಾ, ಶುಭಾ ಚ ಸಾ ಪೂರ್ಣಾ ಚ ಶುಭಪೂರ್ಣಾ ತಯಾ, ಶರತ್ = ಶರದೃತು, ಸ್ಯಾದೃತೌ ವತ್ಸರೇ ಶರತ್—ಅಮರ. ಪ್ರಮೋದತೀರ್ಥಸ್ಯ

Rarest Archiver

ಆನನಂ ಪ್ರಮೋದತೀರ್ಥಾನನಂ, ತದೇವ ಚಂದ್ರಃ ತಸ್ಯ ಚಂದ್ರಿಕಾ ಪ್ರಮೋದ-ತೀರ್ಥಾನನಚಂದ್ರಚಂದ್ರಿಕಾ, ವ್ಯಾಖ್ಯಾ ಇತಿ ಅಭಿಧಾ ಯಸ್ಯಾಃ ಸಾ ವ್ಯಾಖ್ಯಾ-ಭಿಧಾ, ವಿಷ್ಣೋಃ ಪದಂ ವಿಷ್ಣುಪದಂ ತತ್ ಪ್ರಕಾಶಯತೀತಿ ವಿಷ್ಣುಪದ ಪ್ರಕಾಶಿನೀ.

ಕ್ರಿ.—ಬಭೌ ಬಭತುಃ ಬಭುಃ ಇತ್ಯಾದಿ ಭಾ ದೀಪ್ತೌ ಲಿಟ್. ಪರ. ಯಯೌ ಎಂಬಂತೆ.

ಅವ.—ಆ ಚಾ ಯ ರ್ ರು ಗುರುಗಳೊಡನೆ ದಕ್ಷಿಣದಿಗ್ವಿಜಯಕ್ಕಾಗಿ ಹೊರಟರು—

ಜೇಷ್ಯನ್ ಕದಾಚಿತ್ ಕಿಲ ಕಾಲಪಾಲಿತಾಂ
ದಿಶಂ ಪ್ರಯಾತೋಽಚ್ಯುತಬುದ್ಧಿನಾ ಸಹ
ಸಮಗ್ರಧೀರ್ಮಂಡಿತವಿಷ್ಣುಮಂಗಲಂ
ವಿಷ್ಣುಂ ಜಗನ್ಮಂಗಲಮಾನನಾಮ ಸಃ ॥೩೦॥

ಅ.—ಸಮಗ್ರಧೀಃ ಸಃ ಕದಾಚಿತ್ ಜೇಷ್ಯನ್ ಅಚ್ಯುತಬುದ್ಧಿನಾ ಸಹ ಕಾಲಪಾಲಿತಾಂ ದಿಶಂ ಪ್ರಯಾತಃ ಮಂಡಿತವಿಷ್ಣುಮಂಗಲಂ ಜಗನ್ಮಂಗಲಂ ವಿಷ್ಣುಂ ಆನನಾಮ ಕಿಲ.

ಅ.ಅ.—ಸಮಗ್ರ= ಪೂರ್ಣವಾದ, ಧೀಃ= ಬುದ್ಧಿಯುಳ್ಳ, ಸಃ= ಆ ಮಧ್ವಾಚಾರ್ಯರು, ಕದಾಚಿತ್ = ಒಂದಾನೊಂದು ದಿನ, ಜೇಷ್ಯನ್ = ಜಯಿಸುವವರಾಗಿ, ಅಚ್ಯುತಬುದ್ಧಿನಾ ಸಹ= ಅಚ್ಯುತಪ್ರೇಕ್ಷಾಚಾರ್ಯರೊಡನೆ, ಕಾಲಪಾಲಿತಾಂ = ಯಮನಿಂದ ಕಾಪಾಡಲ್ಪಟ್ಟ, ದಿಶಂ = ದಕ್ಷಿಣದಿಕ್ಕನ್ನು ಕುರಿತು, ಪ್ರಯಾತಃ= ಹೊರಟವರಾಗಿ, ಮಂಡಿತ= ಅಲಂಕರಿಸಲ್ಪಟ್ಟ, ವಿಷ್ಣು-ಮಂಗಲಂ = ವಿಷ್ಣುಮಂಗಲವೆಂಬಸ್ಥಲವುಳ್ಳ, ಜಗನ್ಮಂಗಲಂ = ಪ್ರಪಂಚಕ್ಕೆ ಮಂಗಳಕರನಾದ, ವಿಷ್ಣುಂ= ಶ್ರೀಹರಿಯನ್ನು, ಆನನಾಮ ಕಿಲ= ನಮಸ್ಕರಿಸಿದರು.

ತಾ.—ಒಂದಾನೊಂದು ಸಮಯದಲ್ಲಿ ಶ್ರೀಮಧ್ವಾಚಾರ್ಯರು ದಕ್ಷಿಣ ದೇಶಕ್ಕೆ ಹೋಗಿ ಅಲ್ಲಿನ ಪಂಡಿತರನ್ನು ಜಯಿಸಬೇಕೆಂದು ಅಚ್ಯುತಪ್ರೇಕ್ಷಾ

Rarest Archiver

ಚಾರ್ಯರೊಡನೆ ಮೊದಲು ವಿಷ್ಣುಮಂಗಲ (ನಾರಾಯಣಮಂಗಲ) ವೆಂಬಲ್ಲಿಗೆ ಹೋಗಿ ಜಗತ್ತಿಗೆ ಮಂಗಳವನ್ನು ಕೊಡುವ ಶ್ರೀಮನ್ನಾರಾಯಣನನ್ನು ನಮಿಸಿದರು.

ವಿ.—ಕಾಲೇನ ಪಾಲಿತಾ ತಾಂ, ಸಮಗ್ರಾ ಧೀಃ ಯಸ್ಯ ಸಃ ಸಮಗ್ರಧೀಃ, ಮಂಡಿತಃ ವಿಷ್ಣುಮಂಗಲಃ ಯೇನ ಸಃ ತಂ, ಜಗತಃ ಮಂಗಲಂ ಯಸ್ಮಾತ್ ಸಃ ತಂ, ಜಗತಿ ಮಂಗಲಃ ಜಗನ್ಮಂಗಲಃ ತಂ ;

ಕ್ರಿ.—ಆ + ನನಾಮ ನೇಮತುಃ ನೇಮುಃ, ನೇಮಿಥ ನನಂಥ ನೇಮಥುಃ ನೇಮ, ನನಾಮ ನನಮ ನೇಮಿವ ನೇಮಿಮ. ಣಮು (ನಮ್) ಪ್ರಹ್ವತ್ವೇ ಶಬ್ದೇ ಚ ಪರ. ಲಿಟ್.

ಅವ.—ಈ ಸಂದರ್ಭದಲ್ಲಿ ಆಚಾರ್ಯರು ಅಮಾನುಷವಾದ ಒಂದು ಕಾರ್ಯವನ್ನು ಮಾಡಿದರು—

ಭಿಕ್ಷಾಪ್ರದಾತ್ರಾತ್ರ ಪರೀಕ್ಷಿತುಂ ಮುಹು
೩೦೭ **ರ್ದತ್ತೇ ಪ್ರಭುಕ್ತೇ ಕದಲೀಫಲೋಚ್ಚಯೇ ।**
ಅನೇನ ನಿರ್ಯತ್ನಮವಾರ್ಯವಿಸ್ಮಯ-
ಸ್ತಮಾರ್ಯವರ್ಯಂ ವಿಜನೇಽವದದ್ಗುರುಃ ॥೩೦॥

ಅ.—ಅತ್ರ ಭಿಕ್ಷಾಪ್ರದಾತ್ರಾ ಪರೀಕ್ಷಿತುಂ ಮುಹುಃ ಕದಲೀಫಲೋಚ್ಚಯೇ ದತ್ತೇ, ಅನೇನ ನಿರ್ಯತ್ನಂ ಪ್ರಭುಕ್ತೇ ಅವಾರ್ಯವಿಸ್ಮಯಃ ಗುರುಃ ಆರ್ಯವರ್ಯಂ ತಂ ವಿಜನೇ ಅವದತ್ ।

ಅ.ಅ.—ಅತ್ರ = ಈ ವಿಷ್ಣುಮಂಗಲದಲ್ಲಿ, ಭಿಕ್ಷಾಪ್ರದಾತ್ರಾ = ಭಿಕ್ಷೆಯನ್ನು ಮಾಡಿಸಿದ ಪುರುಷನಿಂದ, ಪರೀಕ್ಷಿತುಂ = ಪರೀಕ್ಷಿಸುವುದಕ್ಕೋಸ್ಕರ, ಮುಹುಃ = ಅನೇಕಬಾರಿ, ಕದಲೀಫಲೋಚ್ಚಯೇ = ಬಾಳೆಹಣ್ಣಿನ ರಾಶಿಯು, ದತ್ತೇ (ಸತಿ) = ಕೊಡಲ್ಪಟ್ಟಾಗ, ಅನೇನ = ಈ ಶ್ರೀಮಧ್ವಾಚಾರ್ಯರಿಂದ, ನಿರ್ಯತ್ನಂ = ಆಯಾಸವಿಲ್ಲದೆ, ಪ್ರಭುಕ್ತೇ (ಸತಿ) = ಭಕ್ಷಿಸಲ್ಪಟ್ಟಾಗ, ಅವಾರ್ಯವಿಸ್ಮಯಃ = ತಡೆಯಲಾಗದ ಆಶ್ಚರ್ಯವುಳ್ಳ, ಗುರುಃ = ಗುರುಗಳಾದ ಅಚ್ಯುತಪ್ರೇಕ್ಷರು, ಆರ್ಯವರ್ಯಂ = ಜ್ಞಾನಿಶ್ರೇಷ್ಠರಾದ, ತಂ = ಆ ಮಧ್ವಾಚಾರ್ಯರನ್ನು ಕುರಿತು, ವಿಜನೇ = ಏಕಾಂತದಲ್ಲಿ, ಅವದತ್ = ಹೇಳಿದರು.

Rarest Archive

ತಾ.—ಆ ವಿಷ್ಣುಮಂಗಲದಲ್ಲಿ ಭಿಕ್ಷೆಮಾಡಿಸಿದ ಯಜಮಾನನು. ಶ್ರೀಮಧ್ವಾಚಾರ್ಯರು ಅತಿಮಾನುಷವಾದ ಭೋಜನಶಕ್ತಿಯುಳ್ಳವರೆಂದು ಪ್ರಸಿದ್ಧಿಯನ್ನು ಕೇಳಿ ಅದನ್ನು ತಾನೇ ಕಣ್ಣಾರೆ ಪರೀಕ್ಷಿಸಿ ನೋಡಬೇಕೆಂದು ಬಯಸಿದನು. ಅವನು ಆಚಾರ್ಯರ ಭಿಕ್ಷಾಸ್ವೀಕಾರವಾದ ಮೇಲೆ ತಿರುಗಿ ತಿರುಗಿ ರಾಶಿರಾಶಿಯಾಗಿ ಬಾಳೆಹಣ್ಣುಗಳನ್ನು ತಂದುಕೊಟ್ಟನು. ಆಚಾರ್ಯರು ಆಯಾಸವಿಲ್ಲದೆ ಆ ಹಣ್ಣುಗಳನ್ನೆಲ್ಲಾ ತಿಂದು ಮುಗಿಸಿದರು. ಇದನ್ನು ಕಂಡು ಆಶ್ಚರ್ಯವನ್ನು ತಡೆಯಲಾರದೆ ಅಚ್ಯುತಪ್ರೇಕ್ಷರು ಜನರಿಲ್ಲದ ಸ್ಥಳದಲ್ಲಿ ಆಚಾರ್ಯರನ್ನು ಕುರಿತು ಹೀಗೆ ಹೇಳಿದರು.

ವಿ.—ಭಿಕ್ಷಾಯಾಃ ಪ್ರದಾತಾ ಭಿಕ್ಷಾಪ್ರದಾತಾ ತೇನ, ಕದಲೀಫಲಾನಾಂ ಉಚ್ಚಯಃ ಕದಲೀಫಲೋಚ್ಚಯಃ ತಸ್ಮಿನ್, ನಿರ್ಗತಃ ಯತ್ನಃ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ನಿರ್ಯತ್ನಂ, ಅವಾರ್ಯಃ ವಿಸ್ಮಯಃ ಯಸ್ಯ ಸಃ ಅವಾರ್ಯವಿಸ್ಮಯಃ, ಆರ್ಯಾಣಾಂ ವರ್ಯಃ ಆರ್ಯವರ್ಯಃ ತಂ, ವಿಜನಃ = ರಹಸ್ಯ, ವಿವಿಕ್ತವಿಜನಚ್ಛನ್ನನಿಶ್ಶಲಾಕಾಸ್ತಥಾರಹಃ—ಅಮರ.

ಕ್ರಿ.—ಅವದತ್ ಅವದತಾಂ ಅವದನ್ ಇತ್ಯಾದಿ ವದ ವ್ಯಕ್ತಾಯಾಂವಾಚಿ ಪರ. ಲಙ್.

ಅವ.—ಅಚ್ಯುತಪ್ರೇಕ್ಷರು ಏನು ಹೇಳಿದರು ?—

ಭಿಕ್ಷಾವಸಾನೇ ದ್ವಿಶತಾಧಿಕ್ಯೈಃ ಫಲ್ಯೈ-
ರ್ವ್ಯಾಢ್ಯೈಃ ಪ್ರಭುಕ್ತೈಃ ಪರಿಪೂರಿತೇಽಪಿ ತೇ ।
ತನೂದರೇ ನಾಸ್ತಿ ಗರಿಷ್ಠತಾ ಕಥಂ
ಸುಚಿತ್ತ ! ಸತ್ಯಂ ವದತಾದ್ ಭವಾನಿತಿ ॥೩೨॥

ಅ.—ಭಿಕ್ಷಾವಸಾನೇ ಪ್ರಭುಕ್ತೈಃ ವ್ಯಾಢ್ಯೈಃ ದ್ವಿಶತಾಧಿಕ್ಯೈಃ ಫಲ್ಯೈಃ ಪರಿಪೂರಿತೇ ಅಪಿ ತೇ ತನೂದರೇ ಕಥಂ ಗರಿಷ್ಠತಾ ನಾಸ್ತಿ ? ಹೇ ಸುಚಿತ್ತ ! ಭವಾನ್ ಸತ್ಯಂ ವದತಾತ್ ಇತಿ (ಅವದತ್)।

ಅ.ಅ.—ಭಿಕ್ಷಾವಸಾನೇ = ಭಿಕ್ಷೆಯ ಕೊನೆಯಲ್ಲಿ, ಪ್ರಭುಕ್ತೈಃ = ತಿನ್ನಲ್ಪಟ್ಟ, ವ್ಯಾಢ್ಯೈಃ = ದಪ್ಪವಾದ, ದ್ವಿಶತಾಧಿಕ್ಯೈಃ = ಇನ್ನೂರಕ್ಕಿಂತಲೂ

Rarest Archiver

ಅಧಿಕವಾದ, ಫಲೈಃ = ಬಾಳೆಹಣ್ಣುಗಳಿಂದ, ಪರಿಪೂರಿತೇ ಅಪಿ = ತುಂಬಿದ್ದರೂ, ತೇ = ನಿನ್ನ, ತನೂದರೇ = ಕೃಶವಾದ ಹೊಟ್ಟೆಯಲ್ಲಿ, ಕಥಂ = ಹೇಗೆ, ಗರಿಷ್ಠತಾ = ದಪ್ಪವಾಗಿರುವಿಕೆಯು, ನಾಸ್ತಿ = ಇಲ್ಲ ? ಹೇ ಸುಚಿತ್ತ! = ಎಲೈ ಒಳ್ಳೆಯ ಮನಸ್ಸುಳ್ಳ ಪೂರ್ಣಪ್ರಜ್ಞನೇ! ಭವಾನ್ = ನೀನು, ಸತ್ಯಂ = ನಿಜವನ್ನು, ವದತಾತ್ = ಹೇಳು, ಇತಿ = ಎಂದು (ಅವದತ್ = ಹೇಳಿದರು).

ತಾ.—'ಪರಿಶುದ್ಧಮನಸ್ಸಿನಪೂರ್ಣಪ್ರಜ್ಞನೇ। ಭಿಕ್ಷೆಯ ಕೊನೆಯಲ್ಲಿ ಇನ್ನೂರಕ್ಕಿಂತಲೂ ಹೆಚ್ಚು ದೊಡ್ಡ ಬಾಳೆಹಣ್ಣುಗಳನ್ನು ತಿಂದರೂ, ಮೊದಲೇ ಅನ್ನಭಕ್ಷ್ಯಪಾಯಸಮುಂತಾದವುಗಳಿಂದ ತುಂಬಿದ್ದ ನಿನ್ನ ಕೃಶವಾದ ಹೊಟ್ಟೆಯು ಅದೇಕೆ ದೊಡ್ಡದಾಗಿ ಕಾಣುವುದಿಲ್ಲ? ನಿಜವನ್ನು ಹೇಳು. ಮೊದಲೇ ಹೊಟ್ಟೆ ತುಂಬಿದ್ದರೂ ಪುನಃ ಇನ್ನೂರಕ್ಕಿಂತಲೂ ಹೆಚ್ಚು ರಸಬಾಳೆಹಣ್ಣುಗಳನ್ನು ತಿಂದರೂ ಹೊಟ್ಟೆನೋವು ಮುಂತಾದ ಕಷ್ಟಕರವಾದ ಬಾಧೆ ಅಥವಾ ಹೊಟ್ಟೆಯ ಉಬ್ಬರ (ದಪ್ಪವಾಗುವಿಕೆ) ನಿನಗೇಕೆ ಉಂಟಾಗಲಿಲ್ಲ ? ಇಷ್ಟು ತಿಂದರೂ ತಿನ್ನದಿದ್ದಂತೆಯೇ ಕಾಣುವುದಷ್ಟೆ ?' ಎಂದು ಕೇಳಿದರು ಎಂದು ಭಾವ.

ವಿ.—ಭಿಕ್ಷಾಯಾಃ ಅವಸಾನಂ ಭಿಕ್ಷಾವಸಾನಂ ತಸ್ಮಿನ್, ದ್ವೇ ಚ ತೇ ಶತೇ ಚ ದ್ವಿಶತೇ, ದ್ವಿಶತಾಭ್ಯಾಂ ಅಧಿಕಾನಿ ದ್ವಿಶತಾಧಿಕಾನಿ ತೈಃ, ತನು ಚ ತತ್ ಉದರಂ ಚ ತನೂದರಂ ತಸ್ಮಿನ್, ಅತಿಶಯೇನ ಗುರು ಗರಿಷ್ಠಂ ತಸ್ಯ ಭಾವಃ ಗರಿಷ್ಠತಾ, ಸು ಶೋಭನಂ ಚಿತ್ತಂ ಯಸ್ಯ ಸಃ ಸುಚಿತ್ತಃ ತಸ್ಯ ಸಂಬುದ್ಧಿಃ ಹೇ ಸುಚಿತ್ತ! ತನು = ಕೃಶ, ತನುಃ ಕಾಯೇ ಕೃಶೇಽಲ್ಪೇಽಪಿ—ವಿಶ್ವ ; ಉದರ = ಹೊಟ್ಟೆ, ಪಿಚಂಡಕುಕ್ಷೀ ಜಠರೋದರಂ—ಅಮರ.

ಕ್ರಿ.—ಅಸ್ತಿ ಸ್ತಃ ಸಂತಿ, ಅಸಿ ಸ್ಥಃ ಸ್ಥ, ಅಸ್ಮಿ ಸ್ವಃ ಸ್ಮಃ, ಅಸ ಭುವಿ ಪರ. ಲಟ್. ವದತು ವದತಾತ್ ವದತಾಂ ವದಂತು, ವದ ವದತಾತ್ ವದತಂ ವದತ, ವದಾನಿ ವದಾವ ವದಾಮ ವದ ವ್ಯಕ್ತಾಯಾಂ ವಾಚಿ ಆಜ್ಞಾಯಾಂ ಲೋಟ್. ಪರ. ಪ್ರ. ಪು. ಏ. ಭವದ್ಯೋಗೇ ನ ಮಧ್ಯಮಃ ಎಂಬ ನಿಷೇಧದಿಂದ ಪ್ರಥಮಪುರುಷ ಬಂದಿದೆ.

ಅವ.—ಆಗ ಶ್ರೀಮಧ್ವಾಚಾರ್ಯರು ಏನು ಉತ್ತರ ಕೊಟ್ಟರು ?—

Rarest Archiver

ಅಂಗುಷ್ಠಮಾತ್ರಂ ಜಠರೇ ಪ್ರತಿಷ್ಠಿತಂ
ಜಾಜ್ವಲ್ಯಮಾನಂ ಮಮ ಜಾತವೇದಸಂ
ನಿತ್ಯಂ ಹಿತಂ ವಿಶ್ವದಹಂ ಚ ವಿತ್ತ ತಂ
ವಿಶ್ವೇಶಚೇತಾ ಇತಿ ಸೋಽಬ್ರವೀತ್ತದಾ ॥೩೩॥

ಅ.—ತದಾ ವಿಶ್ವೇಶಚೇತಾಃ ಸಃ ಮಮ ಜಠರೇ ಪ್ರತಿಷ್ಠಿತಂ ಜಾಜ್ವಲ್ಯಮಾನಂ ತಂ ಜಾತವೇದಸಂ ಅಂಗುಷ್ಠಮಾತ್ರಂ ನಿತ್ಯಂ ಹಿತಂ ವಿಶ್ವದಹಂ ಚ ವಿತ್ತ ಇತ್ಯಬ್ರವೀತ್ ।

ಅ.ಅ.—ತದಾ=ಆಗ, ವಿಶ್ವೇಶಚೇತಾಃ=ಸರ್ವೇಶ್ವರನಾದ ಶ್ರೀಹರಿಯಲ್ಲಿ ಮನಸ್ಸನ್ನು ಇಟ್ಟಿರುವ, ಸಃ=ಆ ಶ್ರೀಮಧ್ವಾಚಾರ್ಯರು, 'ಮಮ=ನನ್ನ, ಜಠರೇ=ಹೊಟ್ಟೆಯಲ್ಲಿ, ಪ್ರತಿಷ್ಠಿತಂ=ಇರುವಂತಹ, ಜಾಜ್ವಲ್ಯಮಾನಂ=ಚೆನ್ನಾಗಿ ಪ್ರಜ್ವಲಿಸುತ್ತಿರುವ, ತಂ ಜಾತವೇದಸಂ = ಆ ಅಗ್ನಿಯನ್ನು, ಅಂಗುಷ್ಠಮಾತ್ರಂ = ಹೆಬ್ಬೆಟ್ಟಿನ ಪರಿಮಾಣಉಳ್ಳವನನ್ನಾಗಿಯೂ, ನಿತ್ಯಂ=ಯಾವಾಗಲೂ, ಹಿತಂ=ಅನುಕೂಲನನ್ನಾಗಿಯೂ, ವಿಶ್ವದಹಂ ಚ=ಪ್ರಳಯಕಾಲದಲ್ಲಿ ಪ್ರಪಂಚವನ್ನು ದಹಿಸುವವನನ್ನಾಗಿಯೂ, ವಿತ್ತ =ತಿಳಿಯಿರಿ', ಇತಿ =ಎಂದು, ಅಬ್ರವೀತ್=ಹೇಳಿದರು.

ತಾ.—'ಗುರುಗಳೇ! ನನ್ನ ಹೊಟ್ಟೆಯಲ್ಲಿ ನಿತ್ಯದಲ್ಲಿಯೂ ಹೆಬ್ಬೆರಳಿನ ಗಾತ್ರದ ಜಠರಾಗ್ನಿಯು ಪ್ರಜ್ವಲಿಸುತ್ತಾ ಇರುತ್ತದೆ. ಅದು ಯಾವಾಗಲೂ ನನಗೆ ಹಿತಕರವಾಗಿಯೇ ಇರುತ್ತದೆ. ಅದು ಪ್ರಳಯಕಾಲದಲ್ಲಿ ಪ್ರಪಂಚವನ್ನೇ ಸುಡುವ ಶಕ್ತಿಯುಳ್ಳದ್ದು. ಎಂದು ತಿಳಿಯಿರಿ.' ಎಂದು ಯಾವಾಗಲೂ ಪರಮಾತ್ಮನನ್ನೇ ಧ್ಯಾನಿಸುತ್ತಿರುವ ಶ್ರೀಮಧ್ವಾಚಾರ್ಯರು ತನ್ನ ಗುರುಗಳಿಗೆ ಹೇಳಿದರು. (ಇಂತಹ ಅಗ್ನಿಯು ಆಚಾರ್ಯರ ಹೊಟ್ಟೆಯಲ್ಲಿರಲು ಪರಮಾತ್ಮನ ಅನುಗ್ರವೇ ಕಾರಣವೆಂದು ಸೂಚಿಸುವುದಕ್ಕಾಗಿ ವಿಶ್ವೇಶಚೇತಾಃ=ಶ್ರೀಹರಿಯನ್ನು ಧ್ಯಾನಿಸುವವರು ಎಂದು ಹೇಳಿದ್ದಾರೆ.)

ವಿ.—ಅಂಗುಷ್ಠಃ ಮಾತ್ರಾ ಯಸ್ಯ ಸಃ ಅಂಗುಷ್ಠಮಾತ್ರಃ ತಂ, ಮಾತ್ರಾ =ಪರಿಮಾಣ, ಮಾತ್ರಾ ಪರಿಚ್ಛದೇ । ಅಲ್ಪೇ ಚ ಪರಿಮಾಣೇ ಚ—ಅಮರ.

Rarest Archiver

ಅತಿಶಯೇನ ಜ್ವಲತಿ ಜಾಜ್ವಲ್ಯಮಾನಃ ತಂ, ವಿಶ್ವಂ ದಹತೀತಿ ವಿಶ್ವಧಕ್ ತಂ, ಹಕಾರಾಂತ ವಿಶ್ವದಹ್ ಶಬ್ದ–ದುಹ್ ಶಬ್ದದಂತೆ, ವಿಶ್ವಸ್ಯ ಈಶಃ ವಿಶ್ವೇಶಃ, ವಿಶ್ವೇಶೇ ಚೇತಃ ಯಸ್ಯ ಸಃ ವಿಶ್ವೇಶಚೇತಾಃ ;

ಕ್ರಿ.—ವಿತ್ತ, ವೇತ್ತು ವಿತ್ತಾತ್ ವಿತ್ತಾಂ ವಿದಂತು, ವಿದ್ಧಿ ವಿತ್ತಾತ್ ವಿತ್ತಂ ವಿತ್ತ, ವೇದಾನಿ ವೇದಾವ ವೇದಾಮ. ವಿದ ಜ್ಞಾನೇ, ಪರ. ಲೋಟ್ ಅಬ್ರವೀತ್. (ಸ. ೫ ಶ್ಲೋಕ ೨೭ರಲ್ಲಿ ನೋಡಿರಿ.)

ಅವ.—ಅನಂತರ ಆಚಾರ್ಯರು ಅನೇಕ ದೇಶಗಳನ್ನು ದಾಟಿ ಮುಂದಕ್ಕೆ ಪ್ರಯಾಣಬೆಳೆಸಿದರು–

ಪರ್ಯಾಕುಲಾನೇಕಸರಸ್ವತೀತತೀನ್
ನ್ಯಾಯೋಪಪನ್ನಾನ್ ವಿವಿಧಾರ್ಥಸಂಯುತಾನ್ ।
ಅತೀತ್ಯ ದೇಶಾನ್ ಸಮಯಾಂಶ್ಚ ಚಾರುಧೀ
ರಸೌ ಜಗಾಮಾಭಿಮತೇನ ವರ್ತ್ಮನಾ ॥೩೪॥

ತಾ.—ಚಾರುಧೀಃ ಅಸೌ ಅಭಿಮತೇನ ವರ್ತ್ಮನಾ ಪರ್ಯಾಕುಲಾನೇಕ-ಸರಸ್ವತೀತತೀನ್ ನ್ಯಾಯೋಪಪನ್ನಾನ್, ವಿವಿಧಾರ್ಥಸಂಯುತಾನ್ ದೇಶಾನ್ ಸಮಯಾಂಶ್ಚ ಅತೀತ್ಯ ಜಗಾಮ ।

ಅ.ಅ.—ಚಾರುಧೀಃ = ಮನೋಹರವಾದ ಬುದ್ಧಿಯುಳ್ಳ, ಅಸೌ = ಶ್ರೀಮಧ್ವಾಚಾರ್ಯರು, ಅಭಿಮತೇನ = ಇಷ್ಟವಾದ, ಶ್ರೇಷ್ಠವಾದ, ವರ್ತ್ಮನಾ = ದಾರಿಯಿಂದ, ಸಿದ್ಧಾಂತದಿಂದ, ಪರ್ಯಾಕುಲ = ತುಂಬಿದ, ಅನೇಕ = ಬಹಳ, ಸರಸ್ವತೀ = ನದಿಗಳ, ತತೀನ್ = ಸಮೂಹವುಳ್ಳ, ವಾದಕ್ಕಾಗಿ ಎಲ್ಲಾ ಕಡೆಯಿಂದ ಬಂದು ಸೇರಿದ ಅನೇಕಪಂಡಿತರ ಆಯಾ ಶಾಸ್ತ್ರಸಿದ್ಧಾಂತಪೂರ್ಣ ವಾದ ಇತರಶಾಸ್ತ್ರಗಳಿಗೆ ವಿಪರೀತವಾದ ಮಾತುಗಳ ಸಮೂಹವುಳ್ಳ, ನ್ಯಾಯ = ಆಯಾ ದೇಶಧರ್ಮಗಳಿಂದ, ಉಪಪನ್ನಾನ್ = ಕೂಡಿದ, ಆಯಾಶಾಸ್ತ್ರಗಳ ಯುಕ್ತಿಗಳಿಂದ ಕೂಡಿದ, ವಿವಿಧ = ನಾನಾಬಗೆಯ, ಅರ್ಥ = ದವಸಧಾನ್ಯ ಹಣ್ಣುಹಂಪಲು ಮುಂತಾದ ಪದಾರ್ಥಗಳಿಂದ, ಸಂಯುತಾನ್ = ಕೂಡಿರುವ,

Rarest Archiver

ಆಯಾ ಶಾಸ್ತ್ರಪ್ರಮೇಯಗಳಿಂದ ಕೂಡಿದ, ದೇಶಾನ್ = ದೇಶಗಳನ್ನೂ, **ಸಮಯಾಂಶ್ಚ** — ಸಿದ್ಧಾಂತಗಳನ್ನೂ, ಅತೀತ್ಯ = ದಾಟಿ, ಖಂಡಿಸಿ, ಜಗಾಮ = **ಹೋದರು.**

ತಾ.—ಕುಶಲಮತಿಗಳಾದ ಶ್ರೀಮಧ್ವಾಚಾರ್ಯರು ಆ ವಿಷ್ಣುಮಂಗಲ **ಪ್ರದೇಶ**ದಿಂದ ಅನೇಕದೇಶಗಳನ್ನು ದಾಟಿ ತನಗೆ ಇಷ್ಟವಾದ ದಾರಿಯನ್ನು ಹಿಡಿದು ದಕ್ಷಿಣದಿಕ್ಕಿಗೆ ಸಾಗಿದರು. ಆ ದೇಶಗಳಲ್ಲಿ ತುಂಬಿ ಹರಿಯುವ ಅನೇಕ ನದಿಗಳಿದ್ದುವು, ಆಯಾ ದೇಶದ ಬೇರೆ ಬೇರೆ ಧರ್ಮಗಳಿದ್ದುವು. ಹಲವು ವಿಧವಾದ ದವಸಧಾನ್ಯಹಣ್ಣುಹಂಪಲು ಮುಂತಾದ ಪದಾರ್ಥಗಳಿದ್ದುವು. ಇಂತಹ ದೇಶಗಳನ್ನು ದಾಟಿ ಅವರುಮುಂದಕ್ಕೆ ಸಾಗಿದರು. ಹಾಗೆಯೇ ಅನೇಕಸಿದ್ಧಾಂತಗಳನ್ನು ಖಂಡಿಸಿ ತಮ್ಮ ಸಿದ್ಧಾಂತವನ್ನು ಪ್ರಕಟಿಸಿದರು. ಆ ಸಿದ್ಧಾಂತಗಳು ವಾದಕ್ಕಾಗಿ ಬಂದಿರುವ ಆಯಾ ವಾದಿಗಳ ಪರಸ್ಪರ ವಿರುದ್ಧವಾದ ವಿಪರೀತಾರ್ಥದ ಮಾತುಗಳಿಂದ ಕೂಡಿದ್ದುವು. ಆಯಾ ಸಿದ್ಧಾಂತಕ್ಕೆ ಅನುಗುಣವಾದ ನ್ಯಾಯಗಳು ಮತ್ತು ಪ್ರಮೇಯಗಳಿಂದ ಕೂಡಿದ ಇಂತಹ ಸಿದ್ಧಾಂತಗಳನ್ನು ಖಂಡಿಸಿ ಆಚಾರ್ಯರು ತನ್ನ ಸಿದ್ಧಾಂತವನ್ನು ಪ್ರಕಟಗೊಳಿಸಿದರು ಎಂದು ಭಾವ.

ವಿ.—ಪರ್ಯಾಕುಲಾಶ್ಚ ತಾಃ ಅನೇಕಾಶ್ಚ ತಾಃ ಸರಸ್ವತ್ಯಶ್ಚ ಪರ್ಯಾಕುಲಾನೇಕಸರಸ್ವತ್ಯಃ, ತಾಸಾಂ ತತಿಃ ಯೇಷು ತೇ ಪರ್ಯಾಕುಲಾನೇಕ–ಸರಸ್ವತೀತತಯಃ ತಾನ್, ಸರಸ್ವತೀ = ಮಾತು, ನದಿ, ಗೀರ್ವಾಗ್‌ವಾಣೀ ಸರಸ್ವತೀ, ರೋಧೋವಕ್ತ್ರಾ ಸರಸ್ವತೀ—ಅಮರ. ನ್ಯಾಯೈಃ ಉಪಪನ್ನಾಃ ತಾನ್, ವಿವಿಧಾಶ್ಚ ತೇ ಅರ್ಥಾಶ್ಚ ವಿವಿಧಾರ್ಥಾಃ ತೈಃ ಸಂಯುತಾಃ ತಾನ್, ಅರ್ಥ = ವಸ್ತು, ಅಭಿಧೇಯ (ಶಾಸ್ತ್ರಪ್ರಮೇಯ) ಅರ್ಥೋಽಭಿಧೇಯರೈವಸ್ತು-ಪ್ರಯೋಜನನಿವೃತ್ತಿಷು — ಅಮರ. ಸಮಯ = ಸಿದ್ಧಾಂತ, ಸಮಯಾಃ ಶಪಥಾಚಾರಕಾಲಸಿದ್ಧಾಂತಸಂವಿದಃ—ಅಮರ. ಚಾರುಃ ಧೀಃ ಯಸ್ಯ ಸಃ ಚಾರುಧೀಃ

ಕ್ರಿ.—ಜಗಾಮ (ಸ. ೫ ಶ್ಲೋ ೭ ನೋಡಿರಿ.)

ಅವ.—ಶ್ರೀಮಧ್ವಾಚಾರ್ಯರು ತನ್ನ ದಾರಿಯಲ್ಲಿ ಪಯಸ್ವಿನೀನದಿಯನ್ನು ಕಂಡು ದುರ್ಗೆಯನ್ನು ಸ್ಮರಿಸಿದರು—

ಸ್ವಹೇಲಯಾ ಪಾತಿತಪಾರ್ಥಿವವ್ರಜಾಂ
ಧೀಶುದ್ಧಿದಾಂ ಕೇರಲಭೂಷಣಾಯಿತಾಂ ।
ಪಯಸ್ವಿನೀಂ ಪ್ರೇಕ್ಷ್ಯ ಪಥಿ ದ್ವಿಜಾರ್ಚಿತಾಂ
ಸ ಭಾವಿನೀಮಸ್ಮರದತ್ರ ಚಂಡಿಕಾಂ ॥೩೭॥

ಅ.—ಸಃ ಪಥಿ ಸ್ವಹೇಲಯಾ ಪಾತಿತಪಾರ್ಥಿವವ್ರಜಾಂ ಧೀಶುದ್ಧಿದಾಂ ಕೇರಲಭೂಷಣಾಯಿತಾಂ ದ್ವಿಜಾರ್ಚಿತಾಂ ಪಯಸ್ವಿನೀಂ ಪ್ರೇಕ್ಷ್ಯ ಅತ್ರ ಭಾವಿನೀಂ ಚಂಡಿಕಾಂ ಅಸ್ಮರತ್ ।

ಅ.ಅ.—ಸಃ = ಆ ಮಧ್ವಾಚಾರ್ಯರು, ಪಥಿ=ದಾರಿಯಲ್ಲಿ, ಸ್ವಹೇಲಯಾ = ತನ್ನ ಪ್ರವಾಹದ ಲೀಲೆಯಿಂದ, ತನ್ನ ನಡಿಗೆಯ ವಿಲಾಸದಿಂದ, ಪಾತಿತ = ಕೆಡವಲ್ಪಟ್ಟ, ಪಾರ್ಥಿವ = ಮರಗಳ, ದುಷ್ಟರಾಜರ, ವ್ರಜಾಂ = ಸಮೂಹವುಳ್ಳ, ಧೀಶುದ್ಧಿದಾಂ = ಮನಸ್ಸಿಗೆ ಪವಿತ್ರತೆಯನ್ನುಂಟುಮಾಡುವ, ಕೇರಲ-ಭೂಷಣಾಯಿತಾಂ = ಕೇರಲದೇಶಕ್ಕೆ ಆಭರಣದಂತಿರುವ, ದ್ವಿಜಾರ್ಚಿತಾಂ= ಪಕ್ಷಿಗಳಿಂದ, ಬ್ರಾಹ್ಮಣರಿಂದ, ಪೂಜಿಸಲ್ಪಟ್ಟ, ಪಯಸ್ವಿನೀಂ = ಪಯಸ್ವಿನೀನದಿಯನ್ನು, ಪ್ರೇಕ್ಷ್ಯ=ನೋಡಿ, ಅತ್ರ=ಈ ನದಿಯ ದಡದಲ್ಲಿ, ಭಾವಿನೀಂ=ಮುಂದೆ ಬರಲಿರುವ, ಚಂಡಿಕಾಂ = ದುರ್ಗಾದೇವಿಯನ್ನು, ಅಸ್ಮರತ್ = ಸ್ಮರಿಸಿದರು.

ತಾ.—ಆ ಪಯಸ್ವಿನೀನದಿಯು ತನ್ನ ಪ್ರವಾಹದ ಲೀಲೆಯಿಂದ ಮರಗಳ ಗುಂಪುಗಳನ್ನೇ ಕೆಡವಿಹಾಕುತ್ತಲಿತ್ತು. ಸ್ನಾನಪಾನಾದಿಗಳಿಂದ ಮನಸ್ಸನ್ನು ಪವಿತ್ರಗೊಳಿಸುತ್ತಲಿತ್ತು. ಕೇರಳದೇಶಕ್ಕೆ ಅಲಂಕಾರವಾಗಿತ್ತು. ಎರಡು ದಡಗಳಲ್ಲಿಯೂ ಬ್ರಾಹ್ಮಣರಿಂದಲೂ ಪಕ್ಷಿಗಳಿಂದಲೂ ಸೇವಿತವಾದ ಇಂತಹ ಪಯಸ್ವಿನೀ ಎಂಬ ಪುಣ್ಯನದಿಯನ್ನು ಆಚಾರ್ಯರು ತನ್ನ ಪ್ರಯಾಣದ ದಾರಿಯಲ್ಲಿ ನೋಡಿ ಮುಂದೆ ಅಲ್ಲಿ ದುಷ್ಟಜನರನ್ನು ನಾಶಪಡಿಸುವುದಕ್ಕಾಗಿ ಅವತರಿಸಲಿರುವ ದುರ್ಗಾದೇವಿಯನ್ನು ನೆನೆಸಿದರು. ಆ ದುರ್ಗೆಯೂ ನದಿಯಂತೆ ಇರುವುದರಿಂದ ನದಿಯನ್ನು ಕಂಡಾಗ ಆಚಾರ್ಯರಿಗೆ ದುರ್ಗೆಯ ನೆನಪು ಬಂದಿತು. ತನ್ನ ಆಗಮನದ ವಿಲಾಸದಿಂದ ತುರುಕರೇ ಮೊದಲಾದ ರಾಜರನ್ನು ಆ ದೇವಿಯು ನಾಶಮಾಡುವಳು. ಸ್ತೋತ್ರಸ್ಮರಣಾದಿಗಳಿಂದ ಮನಸ್ಸನ್ನು ಪವಿತ್ರೀಕರಿಸುವಳು. ಕೇರಳದೇಶದಲ್ಲಿ ಅವತರಿಸಿ ಆ ದೇಶಕ್ಕೆ ಅಲಂಕಾರವಾಗಿರುವಳು. ಬ್ರಾಹ್ಮಣರಿಂದ

Rarest Archiver

ಪೂಜೆಯನ್ನು ಕೈಗೊಳ್ಳುವಳು. ಇಂತಹ ದುರ್ಗೆಯನ್ನು ಆಚಾರ್ಯರು ಪಯಸ್ವಿನೀನದಿಯನ್ನು ಕಂಡಾಗ ಸ್ಮರಿಸಿದರು.

ವಿ.—ಸ್ವಸ್ಯ ಹೇಲಾ ಸ್ವಹೇಲಾ ತಯಾ, ಪಾತಿತಃ ಪಾರ್ಥಿವಾನಾಂ ವ್ರಜಃ ಯಯಾ ಸಾ ಪಾತಿತಪಾರ್ಥಿವವ್ರಜಾ ತಾಂ, ಧಿಯಃ ಶುದ್ಧಿಂ ದದಾತೀತಿ ಧೀಶುದ್ಧಿದಾ ತಾಂ, ಭೂಷಣವತ್ ಆಚರತೀತಿ ಭೂಷಣಾಯಿತಾ ಕೇರಲಸ್ಯ ಭೂಷಣಾಯಿತಾ ಕೇರಲಭೂಷಣಾಯಿತಾ ತಾಂ, ದ್ವಿಜೈಃ ಅರ್ಚಿತಾ ದ್ವಿಜಾರ್ಚಿತಾ ತಾಂ,

ಕ್ರಿ.—ಅಸ್ಮರತ್ ಅಸ್ಮರತಾಂ ಅಸ್ಮರನ್, ಅಸ್ಮರಃ ಅಸ್ಮರತಂ ಅಸ್ಮರತ, ಅಸ್ಮರಂ ಅಸ್ಮರಾವ ಅಸ್ಮರಾಮ. ಸ್ಮೃ ಚಿಂತಾಯಾಂ ಪರ. ಲಙ್. to remember.

ಅವ.—ಆಚಾರ್ಯರು ಅಲ್ಲಿಂದ ಮುಂದಕ್ಕೆ ಪ್ರಯಾಣಮಾಡಿ ಅನಂತ ಶಯನಕ್ಕೆ ಹೋದರು.

ತತಃ ಕ್ರಮೇಣ ಪ್ರಚಲನ್ನುಪೇಯಿವಾನ್
ಅಮಂದತೇಂದೀವರಸುಂದರಚ್ಛವಿಮ್ ।
ಅಂಭೋಜನಾಭಂ ಸ ಭುಜಂಗಶಾಯಿನಂ
ಶ್ರೀವಲ್ಲಭಂ ಶ್ರೀಮದನಂತಸತ್ಪುರೇ ॥೩೬॥

ಅ.—ಸಃ ತತಃ ಕ್ರಮೇಣ ಪ್ರಚಲನ್ ಶ್ರೀಮದನಂತಸತ್ಪುರೇ ಇಂದೀವರಸುಂದರಚ್ಛವಿಂ ಅಂಭೋಜನಾಭಂ ಭುಜಂಗಶಾಯಿನಂ ಶ್ರೀವಲ್ಲಭಂ ಉಪೇಯಿವಾನ್ (ಸನ್) ಅಮಂದತ ।

ಅ.ಅ.—ಸಃ = ಆ ಮಧ್ವಾಚಾರ್ಯರು, ತತಃ = ಅಲ್ಲಿಂದ, ಕ್ರಮೇಣ = ಕ್ರಮವಾಗಿ, ಪ್ರಚಲನ್ = ಮುಂದುವರಿಯುತ್ತಾ, ಶ್ರೀಮದನಂತಸತ್ಪುರೇ = ಸಮೃದ್ಧವಾದ ಅನಂತಶಯನವೆಂಬ ಉತ್ತಮವಾದ ಪಟ್ಟಣದಲ್ಲಿ, ಇಂದೀವರ = ಕನ್ನೈದಿಲೆಯಂತೆ, ಸುಂದರಚ್ಛವಿಂ = ಮನೋಹರವಾದ ಕಾಂತಿಯುಳ್ಳ, ಅಂಭೋಜನಾಭಂ = ಹೊಕ್ಕಳಲ್ಲಿ ತಾವರೆಯುಳ್ಳ, ಭುಜಂಗಶಾಯಿನಂ = ಶೇಷನ

Rarest Archiver

ಮೇಲೆ ಮಲಗಿರುವ, ಶ್ರೀವಲ್ಲಭಂ = ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನನ್ನು, ಉಪೇಯಿವಾನ್ (ಸನ್) = ಸಮೀಪಿಸಿದವರಾಗಿ, ಅವಂದತ = ನಮಿಸಿದರು.

ತಾ.—ಶ್ರೀ ಮ ಧ್ವಾ ಚಾ ಯ ರ್ ರು ಪಯಸ್ವಿನೀತೀರದಿಂದ ಹೊರಟು ಮುಂದಕ್ಕೆ ಪ್ರಯಾಣಮಾಡುತ್ತಾ ಅನಂತಶಯನವೆಂಬ ಉತ್ತಮವಾದ ಪುರಕ್ಕೆ ಹೋದರು. ಅಲ್ಲಿ ನೈದಿಲೆಯಂತಹ ಸುಂದರಕಾಂತಿಯುಳ್ಳ ನಾಭಿಯಲ್ಲಿ ಪದ್ಮವುಳ್ಳ ಶೇಷಶಯನನಾದ ಲಕ್ಷ್ಮೀಪತಿಯನ್ನು ಕಂಡು ಆಚಾರ್ಯರು ನಮಸ್ಕರಿಸಿದರು.

ವಿ.—ಉಪೇಯಿವಾನ್ ಉಪೇಯಿವಾಂಸೌ ಉಪೇಯಿವಾಂಸಃ, ಹೇ ಉಪೇಯಿವನ್, ಉಪೇಯಿವಾಂಸಂ ಉಪೇಯಿವಾಂಸೌ ಉಪೇಯುಷಃ, ಸಕಾರಾಂತ ಉಪೇಯಿವಸ್‌ಶಬ್ದ. ಇಂದೀವರವತ್ ಸುಂದರೀ ಛವಿಃ ಯಸ್ಯ ಸಃ ಇಂದೀವರಸುಂದರಚ್ಛವಿಃ ತಂ, ಅಂಭೋಜಂ ನಾಭೌ ಯಸ್ಯ ಸಃ ಅಂಭೋಜನಾಭಃ ತಂ, ಭುಜಂಗೇ ಶೇತೇ ಇತಿ ಭುಜಂಗಶಾಯೀ ತಂ, ಶ್ರಿಯಃ ವಲ್ಲಭಃ ಶ್ರೀವಲ್ಲಭಃ ತಂ, ಶ್ರೀಃ ಅಸ್ಯಾಸ್ತೀತಿ ಶ್ರೀಮತ್, ಸಚ್ಚ ತತ್ ಪುರಂ ಚ ಸತ್‌ಪುರಂ ಅನಂತಾಖ್ಯಂ ಚ ತತ್ ಸತ್‌ಪುರಂ ಚ ಅನಂತಸತ್‌ಪುರಂ ಶ್ರೀಮಚ್ಚ ತತ್ ಅನಂತಸತ್ಪುರಂ ಚ ಶ್ರೀಮದನಂತಸತ್‌ಪುರಂ ತಸ್ಮಿನ್.

ಕ್ರಿ.—ಅವಂದತ ಕ್ರಿಯಾಪದ ಸ. ೫ ಶ್ಲೋ ೧೦ ನೋಡಿರಿ.

ಅವ.—ಆ ಕ್ಷೇತ್ರದಲ್ಲಿ ನಡೆದ ಸಭೆಯಲ್ಲಿ ಆಚಾರ್ಯರು ತನ್ನ ಶಿಷ್ಯರಿಗೆ ವೇದವ್ಯಾಸರ ಸಿದ್ಧಾಂತಕ್ಕೆ ಅನುಗುಣವಾಗಿ ಬ್ರಹ್ಮಸೂತ್ರಾರ್ಥವನ್ನು ಉಪದೇಶಿಸಿದರು—

ವೇದಾಂತಸೂತ್ರಾಣಿ ಕೃತಾಂತವಿತ್ತಮೋ
ವ್ಯಾಖ್ಯಾದಸೌ ಶಿಷ್ಯಗಣಾಯ ಸಂಸದಿ ।
ವಿಲಕ್ಷಣಂ ಜೀವಗಣಾದ್ಗುಣಾರ್ಣವಂ
ಬ್ರಹ್ಮಾಚ್ಯುತಾಖ್ಯಂ ಪ್ರತಿಪಾದಯನ್ಮುಹುಃ ॥೩೭॥

ಅ.—ಕೃತಾಂತವಿತ್ತಮಃ ಅಸೌ ಸಂಸದಿ ಶಿಷ್ಯಗಣಾಯ ವೇದಾಂತ-

Rarest Archiver

ಸೂತ್ರಾಣಿ 'ಅಚ್ಯುತಾಖ್ಯಂ ಬ್ರಹ್ಮ ಗುಣಾರ್ಣವಂ ಜೀವಗಣಾತ್ ವಿಲಕ್ಷಣಂ' ಮುಹುಃ ಪ್ರತಿಪಾದಯನ್ ವ್ಯಾಖ್ಯಾತ್ ।

ಅ.ಅ.—ಕೃತಾಂತವಿತ್ತಮಃ = ಬ್ರಹ್ಮಸೂತ್ರಸಿದ್ಧಾಂತವನ್ನು ಚೆನ್ನಾಗಿ ಅರಿತ, (ಸಿದ್ಧಾಂತಜ್ಞಾನಿಗಳಲ್ಲಿ ಶ್ರೇಷ್ಠರಾದ) ಅಸೌ = ಈ ಮಧ್ವಾಚಾರ್ಯರು, ಸಂಸದಿ = ವಿದ್ವಾಂಸರ ಸಭೆಯಲ್ಲಿ, ಶಿಷ್ಯಗಣಾಯ = ಶಿಷ್ಯರ ಸಮೂಹಕ್ಕೆ, ವೇದಾಂತಸೂತ್ರಾಣಿ = ಬ್ರಹ್ಮಸೂತ್ರಗಳನ್ನು, ಅಚ್ಯುತಾಖ್ಯಂ = ಅಚ್ಯುತನೆಂದು ಹೆಸರುಳ್ಳ, ಬ್ರಹ್ಮ = ಬ್ರಹ್ಮವನ್ನು, ಗುಣಾರ್ಣವಂ = ಗುಣಗಳಿಂದ ಸಮುದ್ರ ದಂತಿರುವವನನ್ನಾಗಿಯೂ, ಜೀವಗಣಾತ್ = ಜೀವಸಮೂಹದ ದೆಸೆಯಿಂದ, ವಿಲಕ್ಷಣಂ = ಬೇರೆಯವನನ್ನಾಗಿಯೂ', ಮುಹುಃ = ಮತ್ತೂ ಮತ್ತೂ, ಪ್ರತಿಪಾದಯನ್ (ಸನ್) = ಸಮರ್ಥಿಸುತ್ತಾ, ವ್ಯಾಖ್ಯಾತ್ = ಪ್ರವಚನ ಮಾಡಿದರು.

ತಾ.—ಶಾಸ್ತ್ರಸಿದ್ಧಾಂತವನ್ನು ತಿಳಿದವರಲ್ಲಿ ಶ್ರೀಮಧ್ವಾಚಾರ್ಯರು ಅತ್ಯಂತಶ್ರೇಷ್ಠರು. ಅವರು ಅನಂತಶಯನಕ್ಷೇತ್ರದಲ್ಲಿ ನಡೆದ ಸಭೆಯಲ್ಲಿ ತನ್ನ ಶಿಷ್ಯರ ಸಮೂಹಕ್ಕೆ ಈ ರೀತಿ ಪಾಠಹೇಳಿದರು. 'ಎಲ್ಲಾ ದೇಶಕಾಲಗಳಲ್ಲಿ ಚ್ಯುತಿ (ನಾಶ) ಯಿಲ್ಲದ್ದರಿಂದ ಪರಬ್ರಹ್ಮನಿಗೆ ಅಚ್ಯುತನೆಂದು ಹೆಸರು. ಅವನೇ ಶ್ರೀಮನ್ನಾರಾಯಣನು. ಅವನು ಜ್ಞಾನಾನಂದಾದಿಸರ್ವಶುಭಗುಣಗಳಿಂದ ಸಮುದ್ರದಂತಿದ್ದಾನೆ. ಆದುದರಿಂದಲೇ ಸರ್ವಜೀವರಿಂದಲೂ ಭಿನ್ನನಾಗಿದ್ದಾನೆ.' ಈ ವಿಷಯವನ್ನು ಮತ್ತೂ ಸಾಧಿಸುತ್ತಾ—'ಶ್ರೀಹರಿಯು ಅನಂತಗುಣಪರಿಪೂರ್ಣನು, ಜೀವರು ಅಲ್ಪಗುಣವುಳ್ಳವರು, ಇವರಿಬ್ಬರೂ ಒಂದೇ ಆಗಲು ಸಾಧ್ಯವಿಲ್ಲ. ಒಂದೇ ಆಗಿಲ್ಲ ಎಂದು. ಸಮರ್ಥಿಸಿ ದ್ವೈತಸಿದ್ಧಾಂತಕ್ಕೆ ಅನುಗುಣವಾಗಿ ಬ್ರಹ್ಮಸೂತ್ರಗಳಿಗೆ ಅರ್ಥವನ್ನು ಹೇಳಿದರು.

ವಿ.—ಕೃತಾಂತಂ ವೇತ್ತೀತಿ ಕೃತಾಂತವಿತ್ ಅತಿಶಯೇನ ಕೃತಾಂತವಿತ್ ಕೃತಾಂತವಿತ್ತಮಃ, ಕೃತಾಂತ = ಸಿದ್ಧಾಂತ, ಯಮ, ಕೃತಾಂತೌ ಯಮ-ಸಿದ್ಧಾಂತೌ — ಅಮರ. ವೇದಾಂತಸ್ಯ ಸೂತ್ರಾಣಿ ವೇದಾಂತಸೂತ್ರಾಣಿ, ಶಿಷ್ಯಾಣಾಂ ಗಣಃ ತಸ್ಮೈ, ಜೀವಾನಾಂ ಗಣಃ ಜೀವಗಣಃ ತಸ್ಮಾತ್, ಗುಣೈಃ

Rarest Archiver

ಅರ್ಣವಃ ಇವ ಗುಣಾರ್ಣವಃ ತಂ, ಅಚ್ಯುತ ಇತಿ ಆಖ್ಯಾ ಯಸ್ಯ ತತ್ ಅಚ್ಯುತಾಖ್ಯಂ ತತ್,

ಕ್ರಿ.—ವಿ+ಆ+ಅಖ್ಯಾತ್ ಅಖ್ಯಾತಾಂ ಅಖ್ಯುಃ ಅಖ್ಯಾನ್, ಅಖ್ಯಾಃ ಅಖ್ಯಾತಂ ಅಖ್ಯಾತ, ಅಖ್ಯಾಂ ಅಖ್ಯಾವ ಅಖ್ಯಾಮ. ಖ್ಯಾ ಪ್ರಕಥನೇ. ಪರ. to tell. ಲಜ್.

ಅವ.—ಆಗ ಅದ್ವೈತಭಾಷ್ಯಕಾರನಾದ ಸಂಕರನು ಅಲ್ಲಿ ಬಂದು ಜಗಳ-ಮಾಡಿದನು—

ಅಪ್ರಾಂಶುನೂತ್ನೋಪಪದಾಧಿವಾಸಜಃ
ಸ ಸಂಕರೋ ವೈರಪರಾಯಣಃ ಪುನಃ ।
ಅಸೂಯಯೋಚೇಽತ್ರ ಮಹಾನತಿಕ್ರಮಃ
ಸೂತ್ರಾರ್ಥವಾದೋಽಕೃತಭಾಷ್ಯಕೇಷ್ವಿತಿ ॥೩೮॥

ಅ.—ವೈರಪರಾಯಣಃ ಸಃ ಸಂಕರಃ ಪುನಃ ಅಪ್ರಾಂಶುನೂತ್ನೋಪ-ಪದಾಧಿವಾಸಜಃ ಅತ್ರ ಅಸೂಯಯಾ 'ಅಕೃತಭಾಷ್ಯಕೇಷು ಸೂತ್ರಾರ್ಥವಾದಃ ಮಹಾನ್ ಅತಿಕ್ರಮಃ' ಇತಿ ಊಚೇ ।

ಅ.ಅ.—ವೈರಪರಾಯಣಃ = ಶ್ರೀಮುಖ್ಯಪ್ರಾಣದ್ವೇಷಾನುಸಂಧಾನದಲ್ಲಿ ತತ್ಪರನಾದ, ಸಃ ಸಂಕರಃ = ಆ ಕಾಲಡಿಗ್ರಾಮದಲ್ಲಿ ಹುಟ್ಟಿದ ಸಂಕರಾಚಾರ್ಯನು, ಪುನಃ = ತಿರುಗಿ, ಅಪ್ರಾಂಶುನೂತ್ನೋಪಪದಾಧಿವಾಸಜಃ = ಕುದ್ಯಪುಸ್ತೂರು ಎಂಬ ವಂಶದಲ್ಲಿ ಜನಿಸಿದವನಾಗಿ, ಅತ್ರ = ಈ ಮಧ್ವಾಚಾರ್ಯರ ವಿಷಯದಲ್ಲಿ, ಅಸೂಯಯಾ = ಮತ್ಸರದಿಂದ, ಅಕೃತಭಾಷ್ಯಕೇಷು-ಭಾಷ್ಯವನ್ನು ಮಾಡದೇ ಇದ್ದವರಲ್ಲಿ, ಸೂತ್ರಾರ್ಥವಾದಃ = ಸೂತ್ರಾರ್ಥದ ಪ್ರವಚನವು, ಮಹಾನ್ = ದೊಡ್ಡದಾದ, ಅತಿಕ್ರಮಃ = ಮರ್ಯಾದೋಲ್ಲಂಘನೆಯು, ಇತಿ = ಹೀಗೆಂದು, ಊಚೇ = ಹೇಳಿದನು.

ತಾ.—ಹಿಂದೆ ಕಾಲಡಿಗ್ರಾಮದಲ್ಲಿ ಸಂಕರಾಚಾರ್ಯನಾಗಿ ಹುಟ್ಟಿ ಅದ್ವೈತಮತವನ್ನು ಸ್ಥಾಪಿಸಿದ ಮಣಿಮಂತದೈತ್ಯನು ಈಗ ಆ ದ್ವೇಷವನ್ನು

Rarest Archiver

ಮರಳಿಸಾಧಿಸಲು, ಪುನಃ ಕುಧ್ಯಪುಸ್ತೂರು ಎಂಬ ವಂಶದಲ್ಲಿ ಹುಟ್ಟಿದನು. ಅವನು ಶ್ರೀಮಧ್ವಾಚಾರ್ಯರ ಬ್ರಹ್ಮಸೂತ್ರಗಳ ವಿವರಣೆಯನ್ನು ಕೇಳಿದನು. ಮಧ್ವಾಚಾರ್ಯರ ಮೇಲಿನ ಮಾತ್ಸರ್ಯದಿಂದ ಅವನಿಗೆ ಈ ಪ್ರವಚನವನ್ನು ಕೇಳಲು ಸಾಧ್ಯವಾಗಲಿಲ್ಲ. 'ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದವರು ಆ ಭಾಷ್ಯದ ಆಧಾರದಿಂದ ಸೂತ್ರಾರ್ಥವನ್ನು ಪ್ರತಿಪಾದಿಸುವುದು ಉಚಿತ. ಭಾಷ್ಯವನ್ನು ಮಾಡದಿರುವ ಈ ಮಧ್ವಾಚಾರ್ಯರು ಹೀಗೆ ತನ್ನ ಮನಸ್ಸಿಗೆ ಬಂದಂತೆ ಸೂತ್ರಾರ್ಥವನ್ನು ಹೇಳುವುದು ಸಂಪ್ರದಾಯವಿರುದ್ಧ' ಎಂದನು.

ವಿ. —ಅಪ್ರಾಂಶುನೂತ್ನಂ ಉಪಪದಂ ಯಸ್ಯ ಸಃ ಅಪ್ರಾಂಶುನೂತ್ನೋಽಪಪದಃ ಸ ಚಾಸೌ ಅಧಿವಾಸಶ್ಚ ತಸ್ಮಿನ್ ಜಾಯತೇ ಇತಿ ಅಪ್ರಾಂಶುನೂತ್ನೋಽಪಪದಾಧಿವಾಸಜಃ, ವೈರೇ ಪರಾಯಣಃ ವೈರಪರಾಯಣಃ ಸೂತ್ರಾಣಾಂ ಅರ್ಥಸ್ಯ ವಾದಃ ಸೂತ್ರಾರ್ಥವಾದಃ, ನ ಕೃತಂ ಅಕೃತಂ, ಅಕೃತಂ ಭಾಷ್ಯಂ ಯೈಃ ತೇ ಅಕೃತಭಾಷ್ಯಕಾಃ ತೇಷು ;

ಕ್ರಿ.—ಊಚೇ ಊಚಾತೇ ಊಚಿರೇ, ಊಚಿಷೇ ಊಚಾಥೇ ಊಚಿಧ್ವೇ, ಊಚೇ ಊಚಿವಹೇ ಊಚಿಮಹೇ ; ಬ್ರೂಞ್ ವ್ಯಕ್ತಾಯಾಂ ವಾಚಿ ಆತ್ಮನೇ. ಲಿಟ್. ವಚ್ ಆದೇಶ.

ಅವ.—ಆಗ ಶ್ರೀಮಧ್ವಾಚಾರ್ಯರು ಉತ್ತರ ಹೇಳಿದರು—

ವದೋತ್ತರಂ ಭಾತಿ ಯದೀಹ ಕುರ್ಮಹೇ
ಭಾಷ್ಯಂ ಕೃತಿರ್ನಾಸ್ಯ ಹಿ ದಂಡವಾರಿತಾ ।
ಜಗದ್ಗುರೂಣಾಮಿತಿ ತಾಂ ಗುರೋರ್ಗಿರಂ
ಜನಃ ಸಮಸ್ತೋಽಭಿನನಂದ ಸಸ್ಮಿತಾಂ ॥೩೯॥

ಅ.—'ಇಹ ಉತ್ತರಂ ಯದಿ ಭಾತಿ ವದ। (ವಯಮಪಿ) ಭಾಷ್ಯಂ ಕುರ್ಮಹೇ। ಅಸ್ಯ ಕೃತಿಃ ದಂಡವಾರಿತಾ ನಹಿ' ಜಗದ್ಗುರೂಣಾಂ ಗುರೋಃ ಇತಿ ಸಸ್ಮಿತಾಂ ತಾಂ ಗಿರಂ ಸಮಸ್ತಃ ಜನಃ ಅಭಿನನಂದ ।

ಅ.ಅ.—ಇಹ=ನಾನು ಹೇಳಿದ ಈ ಸೂತ್ರಾರ್ಥದಲ್ಲಿ, ಉತ್ತರಂ=

Rarest Archiver

ಪ್ರತ್ಯುತ್ತರವು, ಯದಿ ಭಾತಿ = ಹೊಳೆದರೆ, ವದ = ಹೇಳು ; (ವಯಮಪಿ = ನಾವೂ ಕೂಡ), ಭಾಷ್ಯಂ = ಭಾಷ್ಯವನ್ನು, ಕುರ್ಮಹೇ = ಮಾಡುವೆವು. ಅಸ್ಯ = ಈ ಭಾಷ್ಯದ, ಕೃತಿಃ = ರಚನೆಯು, ದಂಡವಾರಿತಾ = ರಾಜದಂಡದಿಂದ ತಡೆಯಲ್ಪಟ್ಟದ್ದು ನ (ಭವತಿ) ಹಿ = ಆಗಿಲ್ಲವಷ್ಟೆ. ಜಗದ್ಗುರೂಣಾಂ = ಪ್ರಪಂಚದ ಗುರುಗಳಾದ ರುದ್ರಾದಿಗಳಿಗೆ, ಗುರೋಃ = ಗುರುಗಳಾದ ಮಧ್ವಾಚಾರ್ಯರ, ಇತಿ = ಈ ರೀತಿಯ, ಸಸ್ಮಿತಾಂ = ಮಂದಹಾಸದಿಂದ ಕೂಡಿದ, ತಾಂ = ಆ, ಗಿರಂ = ಮಾತನ್ನು, ಸಮಸ್ತಃ = ಎಲ್ಲಾ, ಜನಃ = ಜನರು, ಅಭಿನನಂದ = ಅಭಿನಂದಿಸಿದರು (ಪ್ರಶಂಸೆಮಾಡಿದರು).

ತಾ.—'ಎಲೈ ಪ್ರತಿವಾದಿಯೇ! ನಾನು ಈಗ ಈ ರೀತಿ ಸೂತ್ರಾರ್ಥವನ್ನು ಹೇಳಿರುತ್ತೇನೆ. ಈ ಸೂತ್ರಾರ್ಥವು ಸರಿಯಿಲ್ಲವೆಂದು ನಿನಗೆ ತೋರಿದರೆ ಅದನ್ನು ನಿರಾಕರಿಸುವ ಉತ್ತರವನ್ನು ಹೇಳು. ನಾವೂ ಮುಂದೆ ಭಾಷ್ಯವನ್ನು ಮಾಡಲಿದ್ದೇವೆ. ಇಂಥವರೇ ಭಾಷ್ಯವನ್ನು ಬರೆಯಬೇಕು. ಇಂಥವರು ಭಾಷ್ಯ ಮಾಡಿದರೆ ರಾಜನಿಂದ ಶಿಕ್ಷೆಯಾಗುವುದು ಎಂಬ ಶಾಸನವೇನೂ ಇಲ್ಲವಷ್ಟೆ!' ಜಗತ್ತಿಗೆ ಗುರುಗಳಾದ ರುದ್ರಾದಿಗಳಿಗೂ ಗುರುಗಳಾದ ಆಚಾರ್ಯರು ನಗುತ್ತಾ ಹೀಗೆ ಉತ್ತರಕೊಟ್ಟಾಗ ಅಲ್ಲಿ ಸೇರಿದ್ದ ಎಲ್ಲಾ ಜನರೂ ಆಚಾರ್ಯರ ಮಾತನ್ನು ಅಭಿನಂದಿಸಿದರು.

ವಿ —ದಂಡೇನ ವಾರಿತಾ ದಂಡವಾರಿತಾ, ಜಗತಃ ಗುರವಃ ಜಗದ್ಗುರವಃ ತೇಷಾಂ, ಸ್ಮಿತೇನ ಸಹ ವರ್ತತೇ ಇತಿ ಸಸ್ಮಿತಾ ತಾಂ,

ಕ್ರಿ.—ಭಾತಿ ಭಾತಃ ಭಾಂತಿ ಇತ್ಯಾದಿ ಭಾ ದೀಪ್ತೌ. ಅಕ. ಪರ. to shine ಲಟ್. ಕುರುತೇ ಕುರ್ವಾತೇ ಕುರ್ವತೇ, ಕುರುಷೇ ಕುರ್ವಾಥೇ ಕುರುಧ್ವೇ, ಕುರ್ವೇ ಕುರ್ವಹೇ ಕುರ್ಮಹೇ. ಡು (ಕೃ) ಞ್ ಕರಣೇ ಆತ್ಮನೇ. ಲಟ್. ಅಭಿ + ನನಂದ ನನಂದತುಃ ನನಂದುಃ, ನನಂದಿಥ ನನಂದಥುಃ ನನಂದ, ನನಂದ ನನಂದಿವ ನನಂದಿಮ. ಟುನದಿ (ನಂದ್) ಸಮೃದ್ಧೌ. ಅಕ. ಪರ. ಲಿಟ್. to be glad.

ಅವ.—ಇಂತಹ ವಾದಸಮಯದಲ್ಲಿ ಅಲ್ಲಿ ಸೇರಿದ ಪಂಡಿತರು ಆಚಾರ್ಯರಲ್ಲಿ ಮಹಾಪುರುಷರ ಲಕ್ಷಣಗಳನ್ನು ಕಂಡು ಅವರನ್ನು ಹೊಗಳಿದಾಗ ಅವರ

Rarest Archiver

ಪಕ್ಷದವರೂ ಸಂಕರನನ್ನು (ಕುದ್ಯಪುಸ್ತೂರಾಯ ವಂಶದಲ್ಲಿ ಹುಟ್ಟಿದ ವಿದ್ಯಾಶಂಕರನನ್ನು) ಹೊಗಳಿದರು.

ಪ್ರಾಜ್ಞೈರ್ಮಹಾಪೂರುಷಸರ್ವಲಕ್ಷಣೈಃ
ಸಂಪನ್ನದೇಹೋऽಯಮಿತೀರಿತೇ ಪ್ರಭೌ ।
ಪರೇ ಪರಸ್ಯಾತ್ಯತಿಪೀನತಾದೃಶಃ
ಸ್ಫಿಙ್ಮಾತ್ರಸಂಶಂಸನಮತ್ರ ಚಕ್ರಿರೇ ॥೪೦॥

ಅ.—ಅತ್ರ ಪ್ರಭೌ ಪ್ರಾಜ್ಞೈಃ 'ಅಯಂ ಮಹಾಪೂರುಷಸರ್ವಲಕ್ಷಣೈಃ ಸಂಪನ್ನದೇಹಃ' ಇತಿ ಈರಿತೇ ಪರೇ ಅಪಿ ಅತಿಪೀನತಾದೃಶಃ ಪರಸ್ಯ ಸ್ಫಿಙ್‌-ಮಾತ್ರಸಂಶಂಸನಂ ಚಕ್ರಿರೇ ।

ಆ.ಅ.—ಅತ್ರ = ಈ ಸಭೆಯಲ್ಲಿ, ಪ್ರಭೌ=ಸಮರ್ಥರಾದ, ಶ್ರೀಮಧ್ವಾ-ಚಾರ್ಯರು, ಪ್ರಾಜ್ಞೈಃ = ಸಾಮುದ್ರಿಕಲಕ್ಷಣಗಳನ್ನು ತಿಳಿದವರಿಂದ, 'ಅಯಂ = ಈ ಮಧ್ವಾಚಾರ್ಯರು, ಮಹಾಪೂರುಷ=ಮಹಾಪುರುಷರ, ಸರ್ವಲಕ್ಷಣೈಃ = ಎಲ್ಲಾ ಲಕ್ಷಣಗಳಿಂದ, ಸಂಪನ್ನದೇಹಃ = ಪರಿಪೂರ್ಣವಾದ ದೇಹವುಳ್ಳವರು' ಇತಿ = ಎಂದು, ಈರಿತೇ (ಸತಿ) = ಹೇಳಲ್ಪಟ್ಟಾಗ, ಪರೇ ಅಪಿ = ಸಂಕರನ ಕಡೆಯುವರೂ ಕೂಡ, ಅತಿಪೀನತಾದೃಶಃ = (ಸೊಂಟದ ಹಿಂಭಾಗದ) ಅತ್ಯಂತ ಪುಷ್ಟಿಯನ್ನು ನೋಡುವವರಾಗಿ, ಪರಸ್ಯ = ಸಂಕರನ, ಸ್ಫಿಙ್‌ಮಾತ್ರಸಂಶಂಸನಂ = ಸೊಂಟದ ಹಿಂಭಾಗದ (ಪಿರ್ರೆ) (ಮಾಂಸಖಂಡದ) ಸ್ತೋತ್ರವನ್ನು, ಚಕ್ರಿರೇ = ಮಾಡಿದರು.

ತಾ.—ಆ ಸಭೆಯಲ್ಲಿ ಪುರುಷಲಕ್ಷಣವನ್ನು ಬಲ್ಲ ಪಂಡಿತರು ಆಚಾರ್ಯರನ್ನು ನೋಡಿ—'ಈ ಮಧ್ವಾಚಾರ್ಯರಲ್ಲಿ ಮಹಾಪುರುಷರ ಲಕ್ಷಣಗಳಿವೆ' ಎಂದು ಹೊಗಳಿದರು. ಕುದ್ಯಪುಸ್ತೂರಾಯನ ಕಡೆಯುವರೂ ಕೂಡ, ಅವನ ಪಿರ್ರೆ (ಸೊಂಟದ ಹಿಂಭಾಗದ ಮಾಂಸಖಂಡ) ಪುಷ್ಟವಾಗಿರುವುದನ್ನು ಕಂಡು ಅದನ್ನು ಮಾತ್ರವೇ ಹೊಗಳಿದರು. ಶ್ರೀಮಧ್ವಾಚಾರ್ಯರ ಅದ್ಭುತಬುದ್ಧಿಶಕ್ತಿ, ಪಾಂಡಿತ್ಯಗಳಿಗೆ ತಕ್ಕದಾದ ದೇಹಲಕ್ಷಣವು ಇವರು ಮಹಾಪುರುಷರೆಂಬುದನ್ನು ಸೂಚಿಸುತ್ತದೆ ಎಂಬ ಅಭಿಪ್ರಾಯದಿಂದ ಪಂಡಿತರು ಆಚಾರ್ಯರನ್ನು ಹೊಗಳಿ

Rarest Archiver

ದ್ದನ್ನು ಸಹಿಸಲಾರದೆ ಸಂಕರನ ಪಕ್ಷದವರು ತಮ್ಮ ಗುರುವಿನ ಯಾವ ಅವಯವವನ್ನೂ ಹೊಗಳಲಾರದೆ ಬಹಳ ದೊಡ್ಡದಾಗಿ ಪುಷ್ಟವಾಗಿ ಬೆಳೆದಿದ್ದ ಸೊಂಟದ ಹಿಂಭಾಗದ ಪಿರ್ರೆಯನ್ನು (ಕೂತುಕೊಳ್ಳುವಾಗ ನೆಲಕ್ಕೆ ಸೋಕುವ ಸೊಂಟದ ಕೆಳಗಿನ ಹಿಂಭಾಗದ ಮಾಂಸಖಂಡ) ಮಾತ್ರವೇ ಹೊಗಳಿದರು.

ವಿ.—ಮಹಾಂತಶ್ಚ ತೇ ಪೂರುಷಾಶ್ಚ ಮಹಾಪೂರುಷಾಃ, ಸರ್ವಾಣಿ ಚ ತಾನಿ ಲಕ್ಷಣಾನಿ ಚ ಸರ್ವಲಕ್ಷಣಾನಿ, ಮಹಾಪೂರುಷಾಣಾಂ ಸರ್ವಲಕ್ಷಣಾನಿ ತೈಃ, ಸಂಪನ್ನಃ ದೇಹಃ ಯಸ್ಯ ಸಃ ಸಂಪನ್ನದೇಹಃ, ಅತ್ಯಂತಂ ಪೀನತಾ ಅತಿಪೀನತಾ, ತಾಂ ಪಶ್ಯಂತೀತಿ ಅತಿಪೀನತಾದೃಶಃ, ಸ್ಫಿಚಾವೇವ ಸ್ಫಿಙ್ಮಾತ್ರೇ ತಯೋಃ ಸಂಶಂಸನಂ ತತ್, ಸ್ಫಿಚ್ = ಪಿರ್ರೆ, (ಅಂಡು, ಸೊಂಟದ ಹಿಂಭಾಗದ ಎರಡು ಮಾಂಸಖಂಡಗಳು) ಸ್ತ್ರಿಯಾಂ ಸ್ಫಿಚೌ ಕಟಿಪ್ರೋಥೌ—ಅಮರ.

ಕ್ರಿ.—ಚಕ್ರೇ-ಚಕ್ರಾತೇ ಚಕ್ರಿರೇ ಚಕೃಷೇ ಚಕ್ರಾಥೇ ಚಕೃಢ್ವೇ ಚಕ್ರೇ ಚಕೃವಹೇ ಚಕೃಮಹೇ-ಕೃಧಾತು ಆತ್ಮನೇ. ಲಿಟ್.

ಅವ.—ಅನಂತರ ಅಲ್ಲಿ ನಡೆದ ಕಲಹವನ್ನು ವಿವರಿಸುತ್ತಾರೆ—

ಸ್ಫಿಗ್ದೂಷಣಾನಿ ಪ್ರತಿಪಾದಯತ್ಯಲಂ
ಸಂಪೂರ್ಣಸಂಖ್ಯೇಽಸ್ಯ ತು ಲಕ್ಷ್ಮಶಾಸ್ತ್ರತಃ ।
ತದ್ದಂಡಸಂಖಂಡನಸಂಶ್ರವಂ ವ್ಯಧಾತ್
ತದಕ್ಷಮೋಽಸೌ ಪ್ರಕೃತಿರ್ಹಿ ಸಾಽಸತಾಂ ॥೪೧॥

ಅ.—ಸಂಪೂರ್ಣಸಂಖ್ಯೇ ತು ಲಕ್ಷ್ಮಶಾಸ್ತ್ರತಃ ಅಸ್ಯ ಸ್ಫಿಗ್ದೂಷಣಾನಿ ಅಲಂ ಪ್ರತಿಪಾದಯತಿ ತದಕ್ಷಮಃ ಅಸೌ ತದ್ದಂಡಸಂಖಂಡನಸಂಶ್ರವಂ ವ್ಯಧಾತ್। ಸಾ ಅಸತಾಂ ಪ್ರಕೃತಿಃ ಹಿ।

ಅ.ಅ.—ಸಂಪೂರ್ಣಸಂಖ್ಯೇ=ಪೂರ್ಣವಾದ ಜ್ಞಾನವುಳ್ಳ ಶ್ರೀಮಧ್ವಾಚಾರ್ಯರಾದರೋ, ಲಕ್ಷ್ಮಶಾಸ್ತ್ರತಃ = ಲಕ್ಷಣಶಾಸ್ತ್ರದಿಂದ, ಅಸ್ಯ = ಈ ಸಂಕರನ, ಸ್ಫಿಗ್ದೂಷಣಾನಿ=ಪಿರ್ರೆಗಳ ದೋಷಗಳನ್ನು, ಅಲಂ=ಚೆನ್ನಾಗಿ, ಪ್ರತಿಪಾದಯತಿ ಸತಿ=ಪ್ರತಿಪಾದಿಸುತ್ತಿರಲು, ತದಕ್ಷಮಃ = ಆ ಕೆಲಸದಲ್ಲಿ

Rarest Archiver

(ದಂಡಖಂಡನದಲ್ಲಿ) ಅಸಮರ್ಥನಾದ, ಅಸೌ = ಈ ಸಂಕರನು, ತದ್ದಂಡ = ಆ ಮಧ್ವಾಚಾರ್ಯರ ದಂಡದ, ಸಂಖಂಡನ = ತುಂಡರಿಸುವಿಕೆಯ, ಸಂಶ್ರವಂ = ಪ್ರತಿಜ್ಞೆಯನ್ನು, ವ್ಯಧಾತ್ = ಮಾಡಿದನು. ಸಾ = ಅದು (ತನಗೆ ಸಾಧ್ಯವಿಲ್ಲದ ಕಾರ್ಯದ ವಿಷಯದಲ್ಲಿ ಪ್ರತಿಜ್ಞೆ ಮಾಡುವುದು.) ಅಸತಾಂ = ದುರ್ಜನರ, ಪ್ರಕೃತಿಃ ಹಿ = ಸ್ವಭಾವವಷ್ಟೆ.

ತಾ.—ಶ್ರೀಮಧ್ವಾಚಾರ್ಯರು ಆ ಸಂಕರನ ಪುಷ್ಟವಾಗಿ ಬೆಳೆದ ಎರಡು ಪಿರ್ರಿಗಳ ಅವಲಕ್ಷಣಗಳನ್ನು ತಿಳಿದು ಲಕ್ಷಣಶಾಸ್ತ್ರಪ್ರಕಾರವಾಗಿ ಆ ದೋಷಗಳನ್ನು ವಿವರಿಸಿದರು. ಆಗ ಸಿಟ್ಟಾದ ಸಂಕರನು ತನ್ನಿಂದ ಸಾಧ್ಯವಿಲ್ಲದಿದ್ದರೂ ಮಧ್ವಾಚಾರ್ಯರ ದಂಡವನ್ನು ಮುರಿಯುವೆನೆಂಬುದಾಗಿ ಪ್ರತಿಜ್ಞೆ ಮಾಡಿದನು. ಅದು ಅವನಿಗೆ ಯುಕ್ತವೇ ಸರಿ. ಏಕೆಂದರೆ ತನ್ನಿಂದ ಸಾಧ್ಯವಿಲ್ಲದ ಕಾರ್ಯವನ್ನೂ ಮಾಡುವೆನೆಂದು ಪ್ರತಿಜ್ಞೆಮಾಡುವುದು ದುರ್ಜನರ ಸ್ವಭಾವವು. ಯಾವುದು ದೋಷವೋ ಅದನ್ನೇ ಗುಣವೆಂದು ಆ ದುರಾಗ್ರಹಿಗಳು ಹೊಗಳಿದಾಗ ಶಾಸ್ತ್ರಾಧಾರದಿಂದ ಆಚಾರ್ಯರು ಅವರ ಮಾತನ್ನು ಖಂಡಿಸಿದರು. ಅದನ್ನು ನಿರಾಕರಿಸುವ ಶಕ್ತಿ ಇಲ್ಲದ ಪ್ರತಿವಾದಿಯೂ—'ಶೇಷಂ ಕೋಪೇನ ಪೂರಯೇತ್' ಎಂಬ ನ್ಯಾಯದಂತೆ ಸಿಟ್ಟಾಗಿ ದಂಡವನ್ನು ಮುರಿಯುವೆನೆಂದು ಪ್ರತಿಜ್ಞೆ ಮಾಡಿದನು ಎಂದು ಭಾವ.

ವಿ.—ಸ್ಫಿಚೋಃ ದೂಷಣಾನಿ ಸ್ಫಿಗ್‌ದೂಷಣಾನಿ ತಾನಿ, ಸಂಪೂರ್ಣಾ ಸಂಖ್ಯಾ (ಜ್ಞಾನಂ) ಯಸ್ಯ ಸಃ ಸಂಪೂರ್ಣಸಂಖ್ಯಃ ತಸ್ಮಿನ್, ಲಕ್ಷ್ಮಣಃ ಶಾಸ್ತ್ರಂ ಲಕ್ಷ್ಮಶಾಸ್ತ್ರಂ ತಸ್ಮಾತ್ ಇತಿ ಲಕ್ಷ್ಮಶಾಸ್ತ್ರತಃ, ತಸ್ಯ ದಂಡಃ ತದ್ದಂಡಃ ತದ್ದಂಡಸ್ಯ ಸಂಖಂಡನಂ ತದ್ದಂಡಸಂಖಂಡನಂ, ತಸ್ಯ ಸಂಶ್ರವಃ ತದ್ದಂಡ-ಸಂಖಂಡನಸಂಶ್ರವಃ ತಂ, ತಸ್ಮಿನ್ ಅಕ್ಷಮಃ ತದಕ್ಷಮಃ ;

ಕ್ರಿ.—ವಿ + ಅಧಾತ್ ಅಧಾತಾಂ ಅಧುಃ, ಅಧಾಃ ಅಧಾತಂ ಅಧಾತ, ಅಧಾಂ ಅಧಾವ ಅಧಾಮ. /ಡು(ಧಾ) ಞ್ ಧಾರಣಪೋಷಣಯೋಃ ಪರ. ಲುಙ್.

ಅವ.—ಈ ಕಥೆಯನ್ನು ಅಲ್ಲಿಯೇ ಬಿಟ್ಟು ಮಧ್ವಾಚಾರ್ಯರು ಅಲ್ಲಲ್ಲಿರುವ ತೀರ್ಥಗಳಲ್ಲಿ ಸ್ನಾನಮಾಡಿ ರಾಮಸೇತುವಿಗೆ ಹೋದರು ಎಂದು ವರ್ಣಿಸುತ್ತಾರೆ—

Rarest Archiver

ಸ್ನಾತ್ವಾತ್ರ ತೀರ್ಥೇಷ್ವಚಿರೇಣ ಕನ್ಯಕಾ
ತೀರ್ಥೇ ಸುತೀರ್ಥೇ ಸುಖತೀರ್ಥ ಆಪ್ಲುತಃ ।
ಸಮುದ್ರಸೇತೌ ಚ ನಿಮಜ್ಜ್ಯ ವಿಷ್ಣವೇ
ಶ್ರೀರಾಮನಾಥಾಯ ನಮಶ್ಚಕಾರ ಸಃ ॥೪೨॥

ಅ.—ಸಃ ಸುಖತೀರ್ಥಃ ಅತ್ರ ತೀರ್ಥೇಷು ಸ್ನಾತ್ವಾ ಅಚಿರೇಣ ಸುತೀರ್ಥೇ ಕನ್ಯಕಾತೀರ್ಥೇ ಆಪ್ಲುತಃ ಸಮುದ್ರಸೇತೌ ಚ ನಿಮಜ್ಜ್ಯ ಶ್ರೀರಾಮನಾಥಾಯ ವಿಷ್ಣವೇ ನಮಶ್ಚಕಾರ ।

ಅ.ಅ.—ಸಃ ಸುಖತೀರ್ಥಃ = ಆ ಆನಂದತೀರ್ಥರು, ಅತ್ರ = ಈ ಅನಂತಶಯನದಲ್ಲಿ, ತೀರ್ಥೇಷು = ತೀರ್ಥಗಳಲ್ಲಿ, ಸ್ನಾತ್ವಾ = ಸ್ನಾನಮಾಡಿ, ಅಚಿರೇಣ = ಬೇಗನೆ, ಸುತೀರ್ಥೇ = ಒಳ್ಳೆಯ ತೀರ್ಥವಾದ, ಕನ್ಯಕಾತೀರ್ಥೇ = ಕನ್ಯಾಕುಮಾರಿಯ ತೀರ್ಥದಲ್ಲಿ, ಆಪ್ಲುತಃ=ಸ್ನಾನ ಮಾಡಿದವರಾಗಿ, ಸಮುದ್ರಸೇತೌ ಚ = ದಕ್ಷಿಣಸಮುದ್ರದಲ್ಲಿ ಶ್ರೀ ರಾ ಮ ನು ಕ ಟ್ಟಿ ರು ವ ಸೇತುವಿನಲ್ಲಿಯೂ, ನಿಮಜ್ಜ್ಯ = ಸ್ನಾನಮಾಡಿ, ಶ್ರೀರಾಮನಾಥಾಯ = (ಶ್ರೀರಾಮನೆಂಬ ಸ್ವಾಮಿಯಾದ) ಶ್ರೀರಾಮನಾಥನೆಂಬ, ವಿಷ್ಣವೇ = ಶ್ರೀಮನ್ನಾರಾಯಣನಿಗೆ, ನಮಶ್ಚಕಾರ = ನಮಸ್ಕಾರ ಮಾಡಿದರು.

ತಾ.—ಶ್ರೀ ಮಧ್ವಾಚಾರ್ಯರು ಅನಂತಶಯನದಲ್ಲಿರುವ ಪದ್ಮತೀರ್ಥಾದಿಗಳಲ್ಲಿ ಸ್ನಾನಮಾಡಿ, ಅಲ್ಲಿಂದ ಬೇಗನೆ ಕನ್ಯಾಕುಮಾರೀ ಕ್ಷೇತ್ರಕ್ಕೆ ಬಂದು ಅಲ್ಲಿ ಕನ್ಯಾತೀರ್ಥದಲ್ಲಿ ಸ್ನಾನಮಾಡಿದರು. ಅಲ್ಲಿಂದ ಮುಂದೆ ಹೋಗಿ ಶ್ರೀರಾಮಚಂದ್ರದೇವರು ನಿರ್ಮಾಣ ಮಾಡಿಸಿದ ಸಮುದ್ರಸೇತುವಿನಲ್ಲಿ (ಧನುಷ್ಕೋಟಿಯಲ್ಲಿ) ಸ್ನಾನಮಾಡಿ, ಆ ರಾಮೇಶ್ವರಕ್ಷೇತ್ರದಲ್ಲಿರುವ, ಶ್ರೀರಾಮದೇವರು ಪ್ರತಿಷ್ಠೆ ಮಾಡಿರುವ ರಾಮೇಶ್ವರ ಲಿಂಗಾಂತರ್ಯಾಮಿಯಾದ ಶ್ರೀರಾಮನಾಥನೆಂಬ ಹೆಸರುಳ್ಳ ನಾರಾಯಣನಿಗೆ ನಮಸ್ಕಾರ ಮಾಡಿದರು.

ವಿ.—ಕನ್ಯಕಾಯಾಃ ತೀರ್ಥಂ ಕನ್ಯಕಾತೀರ್ಥಂ ತಸ್ಮಿನ್, ಶೋಭನಂ ಚ ತತ್ ತೀರ್ಥಂ ಚ ಸುತೀರ್ಥಂ ತಸ್ಮಿನ್, ಸುಖಂ ತೀರ್ಥಂ ಯಸ್ಯ ಸಃ ಸುಖತೀರ್ಥಃ, ಸಮುದ್ರಸ್ಯ ಸೇತುಃ ಸಮುದ್ರಸೇತುಃ ತಸ್ಮಿನ್, ಶ್ರೀರಾಮಶ್ಚಾಸೌ

Rarest Archiver

ನಾಥಶ್ಚ ಶ್ರೀರಾಮನಾಥಃ ತಸ್ಮೈ, ನಮಃ ಅವ್ಯಯ, ಚಕಾರ ಎಂಬ ಕ್ರಿಯಾ-ಪದವು ಸರ್ಗ ೫ ಶ್ಲೋಕ ೧೪ರಲ್ಲಿ ಬಂದಿದೆ.

ಅವ.—ಆಗ ಸೇತುವಿನಲ್ಲಿ ಇದಿರಾಗಿ ಬರುತ್ತಿರುವ ಆ ಸನ್ನ್ಯಾಸಿಯಾದ ಸಂಕರನನ್ನು ಕಂಡು ಆಚಾರ್ಯರು ಹೇಳಿದರು—

ತಮಾವ್ರಜಂತಂ ಯತಿವೇಷಧಾರಿಣಂ (ಮಾಸುರಂ)
ದಂಡಂ ಪ್ರಕಾಶ್ಯೈಷ ಹಸನ್ನಭಾಷತ।
ಖಂಡ್ಯೇತ ದಂಡೋ ಯದಿ ಚಂಡ ನ ತ್ವಯಾ
ತ್ವಂ ಷಂಢ(ಷಂಡ)ಕೋಽಪಂಡಿತ ವಂಧ್ಯವಾಗಿತಿ ॥೪೩॥

ಅ.—ಏಷಃ ಆವ್ರಜಂತಂ ಯತಿವೇಷಧಾರಿಣಂ (ಷಂ ಆಸುರಂ) ತಂ ದಂಡಂ ಪ್ರಕಾಶ್ಯ ಹಸನ್, 'ಚಂಡ! ಅಪಂಡಿತ! ತ್ವಯಾ ದಂಡಃ ಯದಿ ನ ಖಂಡ್ಯೇತ ವಂಧ್ಯವಾಕ್ ತ್ವಂ ಷಂಢಕಃ' ಇತಿ ಅಭಾಷತ।

ಅ.ಅ—ಏಷಃ = ಈ ಮಧ್ವಾಚಾರ್ಯರು, ಆವ್ರಜಂತಂ = ಎದುರಾಗಿ ಬರುತ್ತಿರುವ, ಯತಿವೇಷಧಾರಿಣಂ = ಸನ್ನ್ಯಾಸಿ ವೇಷವನ್ನು ಧರಿಸಿರುವ, (ಯತಿ-ವೇಷಂ = ಸನ್ಯಾಸಿ ವೇಷವುಳ್ಳ, ಆಸುರಂ = ದೈತ್ಯಸ್ವರೂಪದ) ತಂ = ಆ ಸಂಕರನನ್ನು ಕುರಿತು, ದಂಡಂ = ದಂಡವನ್ನು, ಪ್ರಕಾಶ್ಯ-ಪ್ರಕಾಶಗೊಳಿಸಿ (ತೋರಿಸಿ) ಹಸನ್ = ನಗುತ್ತಾ, ಚಂಡ = ಕೋಪಸ್ವಭಾವದವನೇ! ಅಪಂಡಿತ = ಮೂಢನೇ! ತ್ವಯಾ = ನಿನ್ನಿಂದ, ದಂಡಃ = ದಂಡವು, ಯದಿ = ಒಂದುವೇಳೆ, ನ ಖಂಡ್ಯೇತ = ತುಂಡು ಮಾಡಲ್ಪಡದಿದ್ದರೆ, ವಂಧ್ಯವಾಕ್ = ನಿಷ್ಫಲವಾದ ಮಾತುಳ್ಳ, ತ್ವಂ = ನೀನು, ಷಂಢಕಃ = ನಪುಂಸಕನು, ಇತಿ = ಎಂದು, ಅಭಾಷತ = ಹೇಳಿದರು.

ತಾ.—ಆ ಸೇತುವಿನ ಮಾರ್ಗದಲ್ಲಿ ಇದಿರಾಗಿ ಬರುತ್ತಿರುವ ಸನ್ನ್ಯಾಸಿ ವೇಷವನ್ನು ತಾಳಿದ ಅಸುರಸ್ವರೂಪನಾದ ಸಂಕರನನ್ನು ಕುರಿತು ಶ್ರೀಮಧ್ವಾಚಾರ್ಯರು ತನ್ನ ದಂಡವನ್ನು ತೋರಿಸಿ ನಗುತ್ತಾ 'ಎಲೈ ಕೋಪಸ್ವಭಾವದ ಮೂಢನೇ! ನನ್ನ ದಂಡವನ್ನು ನೀನು ಖಂಡಿಸದೆ ಹೋದರೆ, ನೀನು ಸುಳ್ಳಾಡುವವನು, ನಪುಂಸಕನು, ಹೇಡಿಯೂ ಆಗುವೆ' ಎಂದರು.

Rarest Archiver

ವಿ.—ಯತೇಃ ವೇಷಃ ಯತಿವೇಷಃ, ತಂ ಧರ್ತುಂ ಶೀಲಂ ಅಸ್ಯೇತಿ ಯತಿವೇಷಧಾರೀ ತಂ, ನ ಪಂಡಿತಃ ಅಪಂಡಿತಃ, ತಸ್ಯ ಸಂಬುದ್ಧಿಃ ಹೇ ಅಪಂಡಿತ! ವಂಧ್ಯಾವಾಕ್ ಯಸ್ಯ ಸಃ ವಂಧ್ಯವಾಕ್.

ಕ್ರಿ.—ಅಭಾಷತ ಅಭಾಷೇತಾಂ ಅಭಾಷಂತ, ಅಭಾಷಥಾಃ ಅಭಾಷೇಥಾಂ ಅಭಾಷಧ್ವಂ, ಅಭಾಷೇ ಅಭಾಷಾವಹಿ ಅಭಾಷಾಮಹಿ ; ಭಾಷ ವ್ಯಕ್ತಾಯಾಂ ವಾಚಿ to speak ಆತ್ಮನೇ. ಲಟ್. ಖಂಡ್ಯೇತ ಖಂಡ್ಯೇಯಾತಾಂ ಖಂಡ್ಯೇರನ್, ಖಂಡ್ಯೇಥಾಃ ಖಂಡ್ಯೇಯಾಥಾಂ, ಖಂಡ್ಯೇಧ್ವಂ, ಖಂಡ್ಯೇಯ ಖಂಡ್ಯೇವಹಿ ಖಂಡ್ಯೇಮಹಿ. ಖಡಿ ಭೇದನೇ ಕರ್ಮಣಿ ವಿಧಿಲಿಙ್.

ಅವ.—ಆಗ ಅಲ್ಲಿದ್ದ ಬ್ರಾಹ್ಮಣರನ್ನು ಕುರಿತು ಮಧ್ವಾಚಾರ್ಯರಿಗೆ ತೊಂದರೆ ಕೊಡಬೇಕೆಂದು ಸಂಕರನು ಕೇಳಿಕೊಂಡರೂ ಅವರು ಒಪ್ಪಲಿಲ್ಲ—

ಲಜ್ಜಾನತಃ ಸ್ವಾರ್ಥಮಥಾರ್ಥಯನ್ನಸನ್
 ಉಪೈಕ್ಷ್ಯತಾಸೌ ದ್ವಿಜನಾಯಕೈಸ್ತದಾ ।
ಆನಂದಯಂತಂ ವದನೇಂದುನಾ ಜಗತ್
 ತಂ ದ್ವೇಷ್ಟಿ ಕಃ ಪ್ರಾಜ್ಞಮಿಹೇತಿ ವಾದಿಭಿಃ ॥೪೪॥

ಅ.—ಅಥ ಲಜ್ಜಾನತಃ ಸ್ವಾರ್ಥಂ ಅರ್ಥಯನ್ ಅಸನ್ ಅಸೌ ತದಾ 'ವದನೇಂದುನಾ ಜಗತ್ ಆನಂದಯಂತಂ ಇಹ ಪ್ರಾಜ್ಞಂ ತಂ ಕಃ ದ್ವೇಷ್ಟಿ' ಇತಿ ವಾದಿಭಿಃ ದ್ವಿಜನಾಯಕೈಃ ಉಪೈಕ್ಷ್ಯತ ।

ಅ.ಅ.—ಅಥ = ಅನಂತರ, ಲಜ್ಜಾನತಃ = ನಾಚಿಕೆಯಿಂದ ತಲೆತಗ್ಗಿಸಿದ, ಸ್ವಾರ್ಥಂ = ತನ್ನ ಪ್ರಯೋಜನವಾದ ಆ ದಂಡಖಂಡನವನ್ನು ಕುರಿತು, ಅರ್ಥಯನ್ = ಬೇಡುತ್ತಿರುವ, ಅಸನ್ = ದುಷ್ಟನಾದ, ಅಸೌ = ಈ ಸಂಕರನು, ತದಾ = ಆಗ, 'ವದನೇಂದುನಾ = ಮುಖವೆಂಬ ಚಂದ್ರನಿಂದ, ಜಗತ್ = ಲೋಕವನ್ನು, ಆನಂದಯಂತಂ = ಸಂತೋಷಗೊಳಿಸುತ್ತಿರುವ, ಇಹ = ಈ ಭೂಮಿಯಲ್ಲಿ, ಪ್ರಾಜ್ಞಂ = ಜ್ಞಾನಿಗಳಾದ, ತಂ = ಆ ಮಧ್ವಾಚಾರ್ಯರನ್ನು, ಕಃ = ಯಾವನು, ದ್ವೇಷ್ಟಿ = ದ್ವೇಷಿಸುತ್ತಾನೆ.' ಇತಿ ವಾದಿಭಿಃ = ಹೀಗೆಂದು

Rarest Archiver

ಹೇಳುತ್ತಿರುವ, ದ್ವಿಜನಾಯಕೈಃ = ಬ್ರಾಹ್ಮಣಶ್ರೇಷ್ಠರಿಂದ, ಉಪೈಕ್ಷ್ಯತ= ಉಪೇಕ್ಷಿಸಲ್ಪಟ್ಟನು.

ತಾ.—ಸಂಕರನು ಆಚಾರ್ಯರ ದಂಡವನ್ನು ಖಂಡಿಸಲು ಅಸಮರ್ಥ ನಾಗಿದ್ದುದರಿಂದ ನಾಚಿಕೆಯಿಂದ ತಲೆತಗ್ಗಿಸಿದನು. ಮಧ್ವಾಚಾರ್ಯರ ದಂಡ ಖಂಡನವೇ ಮೊದಲಾದ ಉಪದ್ರವದ ಕಾರ್ಯಕ್ಕೆ ಸಹಾಯ ಮಾಡಬೇಕೆಂದು ಅಲ್ಲಿರುವ ಬ್ರಾಹ್ಮಣರನ್ನು ಬೇಡಿಕೊಂಡನು. ಆ ಬ್ರಾಹ್ಮಣಶ್ರೇಷ್ಠರಾದರೋ— 'ಎಲೈ ಸನ್ನ್ಯಾಸಿಯೇ! ಚಂದ್ರನಂತಿರುವ ಮುಖದಿಂದ ಲೋಕವನ್ನೇ ಸಂತೋಷ ಪಡಿಸುವ ಜ್ಞಾನಿಶ್ರೇಷ್ಠರಾದ ಈ ಮಧ್ವಾಚಾರ್ಯರನ್ನು ಇಲ್ಲಿ ಯಾವನು ದ್ವೇಷಿಸುವನು?' ಎಂದು ಹೇಳಿ ಆ ಸಂಕರನನ್ನು ಉಪೇಕ್ಷಿಸಿದರು. ಅವನ ಮಾತಿಗೆ ಲಕ್ಷ್ಯಕೊಡಲಿಲ್ಲ.

ವಿ.—ಲಜ್ಜಯಾ ಅನತಃ ಲಜ್ಜಾನತಃ, ನ ಸನ್ ಅಸನ್, ದ್ವಿಜಾನಾಂ ನಾಯಕಾಃ ದ್ವಿಜನಾಯಕಾಃ ತೈಃ, ವದನಮೇವ ಇಂದುಃ ವದನೇಂದುಃ ತೇನ,

ಕ್ರಿ.—ಉಪ+ಐಕ್ಷ್ಯತ ಐಕ್ಷ್ಯೇತಾಂ ಐಕ್ಷ್ಯಂತ ಇತ್ಯಾದಿ. ಈಕ್ಷ ದರ್ಶನೇ–ಉಪ ಉಪಸರ್ಗ ಕರ್ಮಣಿ ಲಟ್. ಆತ್ಮನೇ.

ಅವ.—ಮುಂದೆ ಅಲ್ಲಲ್ಲಿ ಸಭೆಗಳಲ್ಲಿ ಆಚಾರ್ಯರು ಮಹಾಪಂಡಿತ ರನ್ನೆಲ್ಲಾ ಜಯಿಸಿದರು—

ಯಾ ಯಾಃ ಪ್ರಸಕ್ತಾಃ ಪರಿಷತ್ಸು ಪೂರುಷೈ
ರ್ವಿದ್ಯಾವಿದಗ್ಧೈರ್ವಿವಿಧೈಃ ಸಮಾಗಮೇ ।
ಸ ತಾಸು ತಾಸು ಪ್ರತಿಭಾತಿಭಾಸುರೋ
ವಿದ್ಯಾಸು ವಿದ್ಯಾಧಿಪತಿರ್ಜಿಗಾಯ ತಾನ್ ॥೪೫॥

ಅ.—ಪರಿಷತ್ಸು ವಿವಿಧೈಃ ವಿದಗ್ಧೈಃ ಪೂರುಷೈಃ ಸಮಾಗಮೇ ಯಾಃ ಯಾಃ ವಿದ್ಯಾಃ ಪ್ರಸಕ್ತಾಃ ತಾಸು ತಾಸು ಪ್ರತಿಭಾತಿಭಾಸುರಃ ವಿದ್ಯಾಧಿಪತಿಃ ಸಃ ತಾನ್ ಜಿಗಾಯ ।

ಅ.ಅ.—ಪರಿಷತ್ಸು = ಪಂಡಿತರ ಸಭೆಗಳಲ್ಲಿ, ವಿವಿಧೈಃ=ನಾನಾಪ್ರಕಾರದ,

Rarest Archiver

ವಿದಗ್ಧೈಃ = ಬುದ್ಧಿವಂತರಾದ, ಪೂರುಷೈಃ = ಮನುಷ್ಯರೊಡನೆ, ಸಮಾಗಮೇ (ಸತಿ) = ಭೇಟಿಯಾಗಲು, ಯಾಃ ಯಾಃ = ಯಾವ ಯಾವ, ವಿದ್ಯಾಃ = ವಿದ್ಯೆಗಳು (ಶಾಸ್ತ್ರಗಳು), ಪ್ರಸಕ್ತಾಃ = ಪ್ರಸ್ತಾವಕ್ಕೆ ಬಂದುವೋ, ತಾಸು ತಾಸು = ಆಯಾ ವಿದ್ಯೆಗಳಲ್ಲಿ (ಶಾಸ್ತ್ರಗಳಲ್ಲಿ), ಪ್ರತಿಭಾ = ಹೊಸದಾದ ವಿಷಯಸ್ಫೂರ್ತಿಯುಳ್ಳ ಜ್ಞಾನದಿಂದ, ಅತಿಭಾಸುರಃ = ಅತ್ಯಂತಪ್ರಕಾಶಮಾನರಾದ, ವಿದ್ಯಾಧಿಪತಿಃ = ವಿದ್ಯೆಗಳಿಗೆ ಒಡೆಯರಾದ, ಸಃ = ಆ ಮಧ್ವಾಚಾರ್ಯರು, ತಾನ್ = ಆ ವಿದ್ವಾಂಸರನ್ನು, ಜಿಗಾಯ = ಗೆದ್ದರು.

ತಾ.—ಆಚಾರ್ಯರು ಅಲ್ಲಲ್ಲಿ ಪಂಡಿತರ ಸಭೆಗಳಿಗೆ ಹೋಗುತ್ತಿದ್ದರು. ಅಲ್ಲಿ ಆಯಾ ಶಾಸ್ತ್ರಗಳಲ್ಲಿ ಪಂಡಿತರಾದ ಜನರು ಕೂಡಿದಾಗ ಯಾವ ಯಾವ ವಿದ್ಯೆಗಳಲ್ಲಿ (ಶಾಸ್ತ್ರಗಳಲ್ಲಿ) ವಾದವು ಪ್ರಾರಂಭವಾಗುತ್ತಿತ್ತೋ ಎಲ್ಲಾ ವಿದ್ಯೆಗಳಿಗೂ ಅಧಿಪತಿಗಳಾದ ಆಚಾರ್ಯರು ಆಯಾ ಶಾಸ್ತ್ರದಲ್ಲಿ (ವಿದ್ಯೆಯಲ್ಲಿ) ಸ್ವಾಭಾವಿಕವಾದ ಪ್ರತಿಭೆಯಿಂದ ಪ್ರಕಾಶಮಾನರಾಗಿ ಆಪಂಡಿತರನ್ನೆಲ್ಲಾ ಜಯಿಸಿದರು.

ವಿ.—ವಿದ್ಯಾಸು ವಿದಗ್ಧಾಃ ವಿದ್ಯಾವಿದಗ್ಧಾಃ ತೈಃ, ಅತ್ಯಂತಂ ಭಾಸುರಃ ಅತಿಭಾಸುರಃ, ಪ್ರತಿಭಯಾ ಅತಿಭಾಸುರಃ ಪ್ರತಿಭಾತಿಭಾಸುರಃ, ವಿದ್ಯಾನಾಂ ಅಧಿಪತಿಃ ವಿದ್ಯಾಧಿಪತಿಃ.

ಕ್ರಿ.—ಜಿಗಾಯ ಸರ್ಗ ೫ ಶ್ಲೋಕ ೬ ರಲ್ಲಿ ಬಂದಿದೆ.

ಅವ.—ಆ ದುಷ್ಟರು ಎಷ್ಟು ತೊಂದರೆ ಕೊಡುತ್ತಿದ್ದರೂ ಆಚಾರ್ಯರು ಸ್ವಲ್ಪವೂ ಹೆದರದೆ ರಾಮೇಶ್ವರದಲ್ಲಿಯೇ ಚಾತುರ್ಮಾಸ್ಯ ಕುಳಿತರು—

ಅಚಾಲ್ಯಮಾನಃ ಸಗುರುಃ ಸಚಾಪಲ್ಯೈ-
ರಸಜ್ಜನಾನಾಮಬಲೀಯಸಾಮಿಹ ।
ಉವಾಸ ಮಾಸಾಂಶ್ಚತುರೋ ಮಹಾಮನಾಃ
ಸಿಂಹೋ ಗುಹಾಂತೋಪಗತಃ ಶುನಾಮಿವ ॥೪೬॥

ಅ.—ಸಗುರುಃ ಅಬಲೀಯಸಾಂ ಅಸಜ್ಜನಾನಾಂ ಚಾಪಲ್ಯೈಃ ಅಚಾಲ್ಯ-

Rarest Archiver

ಮಾನಃ ಮಹಾಮನಾಃ ಸಃ ಇಹ ಚತುರಃ ಮಾಸಾನ್ ಶುನಾಂ ಚಾಪಲ್ಯೈಃ ಅಚಾಲ್ಯಮಾನಃ ಗುಹಾಂತರೋಪಗತಃ ಸಿಂಹಃ ಇವ ಉವಾಸ ।

ಅ. ಅ.—ಸಗುರುಃ = ಗುರುಗಳಿಂದ ಸಹಿತರಾದ, ಅಬಲೀಯಸಾಂ = ಅಸಮರ್ಥರಾದ, ಅಸಜ್ಜನಾನಾಂ = ದುಷ್ಟಜನರ, ಚಾಪಲ್ಯೈಃ = ಕೆಟ್ಟವ್ಯಾಪಾರಗಳಿಂದ, ಅಚಾಲ್ಯಮಾನಃ = ವಿಚಲಿತರಾಗದ, ಮಹಾಮನಾಃ = ಗಂಭೀರವಾದ ಮನಸ್ಸುಳ್ಳ, ಸಃ = ಆ ಪೂರ್ಣಪ್ರಜ್ಞಾಚಾರ್ಯರು, ಇಹ = ಈ ರಾಮೇಶ್ವರದಲ್ಲಿ, ಚತುರಃ = ನಾಲ್ಕು, ಮಾಸಾನ್ = ತಿಂಗಳುಗಳಲ್ಲಿ (ಚಾತುರ್ಮಾಸ್ಯಕಾಲದಲ್ಲಿ) ಶುನಾಂ = ನಾಯಿಗಳ, ಚಾಪಲ್ಯೈಃ = ದುಶ್ಚೇಷ್ಟೆಗಳಿಂದ, ಅಚಾಲ್ಯಮಾನಃ = ಅಲ್ಲಾಡಿಸಲ್ಪಡದಿರುವ, ಗುಹಾಂತರೋಪಗತಃ = ಗುಹೆಯೊಳಗಿರುವ, ಸಿಂಹಃ ಇವ = ಸಿಂಹದಂತೆ, ಉವಾಸ = ವಾಸಮಾಡಿದರು.

ತಾ.—ನಾಯಿಗಳು ಕೂಗುತ್ತಿದ್ದರೂ ಹೆದರದೆ ಸಿಂಹವು ಪರ್ವತದ ಗುಹೆಯ ಬಳಿ ವಾಸಮಾಡುತ್ತದೆ. ಅದರಂತೆ ಶ್ರೀಮಧ್ವಾಚಾರ್ಯರು ಗುರುಗಳಾದ ಅಚ್ಯುತಪ್ರೇಕ್ಷಾಚಾರ್ಯರೊಡನೆ ಆ ರಾಮೇಶ್ವರಕ್ಷೇತ್ರದಲ್ಲಿಯೇ ಧೈರ್ಯದಿಂದ ಚಾತುರ್ಮಾಸ್ಯವನ್ನು ಆಚರಿಸಿದರು. ಆಗ ಅಲ್ಲಿಯ ಕೆಲವು ದುರ್ಜನರು ಕ್ಷುದ್ರೋಪದ್ರವಗಳನ್ನು ಮಾಡುತ್ತಿದ್ದರು. ಆಚಾರ್ಯರು ಸ್ವಲ್ಪವೂ ವಿಚಲಿತರಾಗದೆ ಅಲ್ಲಿಯೇ ನಾಲ್ಕು ತಿಂಗಳು ವಾಸಮಾಡಿದರು. (ಅಪ್ರಾಂಶ್ವಾದ್ಯಾಶ್ಚ-ತತ್ರೋಷುಶ್ಚಾತುರ್ಮಾಸ್ಯಂ ತತೋ ವಿಭೋಃ । ದೀಕ್ಷಾವಿಘ್ನಂ ಚಿಕೀರ್ಷಂತ-ಸ್ತಾಡನಾ ಚಾಭವತ್ ಖಲು ॥ ಎಂಬ ಭಾವಪ್ರಕಾಶಿಕೆಯ ವಚನದಂತೆ ಕುದಿಪುಸ್ತೂರಾಯಯತಿಯೂ ಸಂಗಡಿಗರೊಡನೆ ಅಲ್ಲೇ ಚಾತುರ್ಮಾಸ್ಯ ಕುಳಿತು ಮಧ್ವಾಚಾರ್ಯರಿಗೆ ಚಾತುರ್ಮಾಸ್ಯಕ್ಕೆ ತೊಂದರೆ ಕೊಡಲಾರಂಭಿಸಿದನು. ಆ ಸಂದರ್ಭದಲ್ಲಿ ಎರಡು ಕಡೆಯವರಿಗೆ ಬಡಿದಾಟವೂ ನಡೆಯಿತು ಎಂದು ತಿಳಿದು ಬರುತ್ತದೆ).

ವಿ.—ಚಾಲ್ಯತೇ ಇತಿ ಚಾಲ್ಯಮಾನಃ ನ ಚಾಲ್ಯಮಾನಃ ಅಚಾಲ್ಯ-ಮಾನಃ, ಗುರುಣಾ ಸಹ ವರ್ತತೇ ಇತಿ ಸಗುರುಃ, ಅತಿಶಯೇನ ಬಲವಂತಃ ಬಲೀಯಾಂಸಃ ನ ಬಲೀಯಾಂಸಃ ಅಬಲೀಯಾಂಸಃ ತೇಷಾಮ್, ಮಹತ್-

Rarest Archiver

ಮನಃ ಯಸ್ಯ ಸಃ ಮಹಾಮನಾಃ, ಗುಹಾಯಾಃ ಅಂತಃ ಗುಹಾಂತಃ। ಗುಹಾಂತಂ ಉಪಗತಃ ಗುಹಾಂತೋಽಪಗತಃ.

ಕ್ರಿ.—ಉವಾಸ ಊಷತುಃ ಊಷುಃ, ಉವಸಿಥ ಉವಸ್ಥ, ಊಷಥುಃ ಊಷ, ಉವಾಸ ಉವಸ ಊಷಿವ ಊಷಿಮ. ವಸ ನಿವಾಸೇ ಪರ. (to dwell) ಲಿಟ್.

ಅವ.—ಚಾತುರ್ಮಾಸ್ಯ ಮುಗಿದ ಮೇಲೆ ಆಚಾರ್ಯರು ಶ್ರೀರಂಗ ಕ್ಷೇತ್ರಕ್ಕೆ ಬಂದು ಕಾವೇರೀಮಧ್ಯದಲ್ಲಿರುವ ಶ್ರೀರಂಗನಾಥನನ್ನು ನಮಿಸಿದರು.

ಶೃಂಗಾರಸಿಂಧುಂ ಸ ಭುಜಂಗಶಾಯಿನಂ
ಶ್ರೀರಂಗವಾಸಂ ಕೃತಮಂಗಲಂ ಸತಾಂ।
ಅಮಂದಧೀರ್ದೇವಮವಂದತಾಗತಃ
ಕವೇರಕನ್ಯಾಹಿಮವಾಯುಸೇವಿತಂ ॥೪೭॥

ಅ.—ಆಗತಃ ಅಮಂದಧೀಃ ಸಃ ಶೃಂಗಾರಸಿಂಧುಂ ಭುಜಂಗಶಾಯಿನಂ ಶ್ರೀರಂಗವಾಸಂ ಸತಾಂ ಕೃತಮಂಗಲಂ ಕವೇರಕನ್ಯಾಹಿಮವಾಯುಸೇವಿತಂ ದೇವಂ ಅವಂದತ।

ಅ.ಅ.—ಆಗತಃ = ರಾಮೇಶ್ವರದಿಂದ ಬಂದ, ಅಮಂದಧೀಃ = ಪೂರ್ಣ ಜ್ಞಾನರಾದ, ಸಃ = ಆ ಶ್ರೀಮಧ್ವಾಚಾರ್ಯರು, ಶೃಂಗಾರಸಿಂಧುಂ = ಶೃಂಗಾರ ರಸದ ಸಮುದ್ರದಂತಿರುವ, ಭುಜಂಗ = ಆದಿಶೇಷನ ಮೇಲೆ, ಶಾಯಿನಂ = ಮಲಗಿರುವ, ಶ್ರೀರಂಗವಾಸಂ = ಶ್ರೀರಂಗಕ್ಷೇತ್ರದಲ್ಲಿ ವಾಸವಾಗಿರುವ, ಸತಾಂ = ಸಜ್ಜನರಿಗೆ, ಕೃತಮಂಗಲಂ = ಶ್ರೇಯಸ್ಸನ್ನು ಕೊಟ್ಟಿರುವ, ಕವೇರಕನ್ಯಾ = ಕವೇರಮುನಿಯ ಮಗಳಾದ ಕಾವೇರಿಯ, ಹಿಮವಾಯು = ತಂಗಾಳಿಯಿಂದ, ಸೇವಿತಂ = ಸೇವಿಸಲ್ಪಟ್ಟ, ದೇವಂ = ಕ್ರೀಡಾದಿಗುಣವಿಶಿಷ್ಟನಾದ ರಂಗನಾಥ ನಾಮಕನಾದ ಶ್ರೀಹರಿಯನ್ನು, ಅವಂದತ = ನಮಸ್ಕರಿಸಿದರು.

ತಾ.—ಶ್ರೀಮಧ್ವಾಚಾರ್ಯರು ಚಾತುರ್ಮಾಸ್ಯದ ಅನಂತರ ರಾಮೇಶ್ವರ ದಿಂದ ಶ್ರೀರಂಗಕ್ಕೆ ಬಂದರು. ಅಲ್ಲಿ ಸೌಂದರ್ಯಸಮುದ್ರನೂ, ಸಜ್ಜನರಿಗೆ

Rarest Archiver

ಶ್ರೇಯಸ್ಸನ್ನು ಕೊಡುವವನೂ, ಕಾವೇರೀ ನದಿಯ ತಂಗಾಳಿಯಿಂದ ಸೇವಿತನೂ ಆದ ಶ್ರೀರಂಗಕ್ಷೇತ್ರದಲ್ಲಿ ಸನ್ನಿಹಿತನಾದ ಶ್ರೀರಂಗನಾಥನೆಂಬ ಹೆಸರಿನ ಶ್ರೀ ಹರಿಯು ಆದಿಶೇಷನ ಮೇಲೆ ಶಯನ ಮಾಡಿಕೊಂಡು ವಿರಾಜಮಾನನಾಗಿದ್ದಾನೆ. ಅಂತಹ ಪರಮಾತ್ಮನನ್ನು ಆಚಾರ್ಯರು ವಂದಿಸಿದರು. ಎರಡು ಪಾರ್ಶ್ವಗಳಲ್ಲಿಯೂ ಕಾವೇರಿಯು ಹರಿಯುತ್ತಿದ್ದು ಅದರ ನಡುವೆ ದ್ವೀಪದಂತಿರುವ ಶ್ರೀರಂಗಕ್ಷೇತ್ರದಲ್ಲಿರುವ ಶ್ರೀರಂಗನಾಥಸ್ವಾಮಿಯನ್ನು ಪುಣ್ಯಭರಿತಳಾದ ಕಾವೇರಿಯ ತಂಗಾಳಿ ಸೇವಿಸುತ್ತದೆ. ಎಂದು ಭಾವ.

ವಿ.—ಶೃಂಗಾರೇಣ ಸಿಂಧುರಿವ ಶೃಂಗಾರಸಿಂಧುಃ ತಂ, ಭುಜಂಗೇ ಶೇತೇ ಇತಿ ಭುಜಂಗಶಾಯೀ ತಂ, ಶ್ರೀರಂಗೇ ವಾಸಃ ಯಸ್ಯ ಸಃ ಶ್ರೀರಂಗವಾಸಃ ತಂ, ಕೃತಂ ಮಂಗಲಂ ಯೇನ ಸಃ ಕೃತಮಂಗಲಃ ತಂ, ಅಮಂದಾ ಧೀಃ ಯಸ್ಯ ಸಃ ಅಮಂದಧೀಃ, ಕವೇರಸ್ಯ ಕನ್ಯಾ ಕವೇರಕನ್ಯಾ, ಹಿಮಶ್ಚಾಸೌ ವಾಯುಶ್ಚ ಹಿಮವಾಯುಃ, ತೇನ ಸೇವಿತಃ ಕವೇರ—ತಃ ತಂ,

ಕ್ರಿ.—ಅವಂದತ–ಸರ್ಗ ೫ ಶ್ಲೋಕ ೧೦ರಲ್ಲಿ ಬಂದಿದೆ.

ಅವ.—ಅಲ್ಲಿಂದ ಆಚಾರ್ಯರು ಉತ್ತರಮುಖವಾಗಿ ದಿಗ್ವಿಜಯ ಮಾಡುತ್ತಾ ಪ್ರಯಾಣ ಬೆಳೆಸಿದರು—

ತತೋ ನಿವೃತ್ತಃ ಪರಮೇವ ಪೂರುಷಂ
ಪ್ರಣಮ್ಯ ನಾನಾಯತನೇಷು ಸಂಚರನ್ ।
ಪ್ರಕಾಶಯನ್ ಸ್ವಾತಿಶಯಾನಮಾನುಷಾನ್
ಆಶಾಮುದೀಚೀಂ ಪ್ರಯಯಾವಸೌ ಕ್ರಮಾತ್ ॥೪೮॥

ಅ.—ಅಸೌ ತತಃ ನಿವೃತ್ತಃ ಸಂಚರನ್ ನಾನಾಯತನೇಷು ಪರಂ ಪೂರುಷಂ ಏವ ಪ್ರಣಮ್ಯ ಅಮಾನುಷಾನ್ ಸ್ವಾತಿಶಯಾನ್ ಪ್ರಕಾಶಯನ್ ಕ್ರಮಾತ್ ಉದೀಚೀಂ ಆಶಾಂ ಪ್ರಯಯೌ ।

ಅ.ಅ.—ಅಸೌ = ಈ ಮಧ್ವಾಚಾರ್ಯರು, ತತಃ = ಆ ಶ್ರೀರಂಗಕ್ಷೇತ್ರದಿಂದ, ನಿವೃತ್ತಃ = ಹಿಂತಿರುಗಿದವರಾಗಿ, ಸಂಚರನ್ = ಸಂಚರಿಸುತ್ತಾ, ನಾನಾಯತನೇಷು = ಬೇರೆ ಬೇರೆ ದೇವಾಲಯಗಳಲ್ಲಿ, ಪರಂ ಪೂರುಷಂ ಏವ =

Rarest Archiver

ಸರ್ವೋತ್ತಮನಾದ ವಿಷ್ಣುವನ್ನೇ, ಪ್ರಣಮ್ಯ = ವಂದಿಸಿ ಅಮಾನುಷಾನ್ = ಮನುಷ್ಯರಲ್ಲಿ ಇಲ್ಲದಿರುವ, ಸ್ವಾತಿಶಯಾನ್ = ತನ್ನ ಮಹಿಮೆಗಳನ್ನು, ಪ್ರಕಾಶಯನ್ = ಪ್ರಕಟಗೊಳಿಸುತ್ತಾ, ಕ್ರಮಾತ್ = ಕ್ರಮದಿಂದ, ಉದೀಚೀಂ ಆಶಾಂ = ಉತ್ತರದಿಕ್ಕನ್ನು ಕುರಿತು, ಪ್ರಯಯೌ = ಹೋದರು.

ತಾ.—ಶ್ರೀಮಧ್ವಾಚಾರ್ಯರು ಶ್ರೀರಂಗಕ್ಷೇತ್ರದಿಂದ ಹಿಂತಿರುಗಿದರು. ಸಂಚಾರಕ್ರಮದಿಂದ, ದುರ್ಗೆ, ಶಿವ, ಸುಬ್ರಹ್ಮಣ್ಯ, ಗಣಪತಿ ಮುಂತಾದ ದೇವತೆಗಳ ಪುರಾಣ ಪ್ರಸಿದ್ಧವಾದ ದೇವಾಲಯಗಳನ್ನು ಸಂದರ್ಶಿಸಿ ಅಲ್ಲಿ, ಆ ದೇವತೆಗಳಲ್ಲಿ ಅಂತರ್ಯಾಮಿಯಾದ ನಾರಾಯಣನನ್ನೇ ನಮಸ್ಕರಿಸಿದರು. ತಾವು ಸಂಚರಿಸಿದ ಸ್ಥಳಗಳಲ್ಲೆಲ್ಲಾ ಮನುಷ್ಯರಿಗೆ ಸಾಧ್ಯವಿಲ್ಲದ ಮಹಾಮಹಿಮೆಗಳನ್ನು ಜನರಿಗೆ ತೋರಿಸಿದರು. ಕ್ರಮವಾಗಿ ದಕ್ಷಿಣದಿಂದ ಉತ್ತರಕ್ಕೆ ಹಿಂತಿರುಗಿ ಬಂದರು. (ಯೋಗಿಯೊಬ್ಬನು ಮೂವತ್ತು ವಿಧವಾದ ವಾರಾಹ ಮಂತ್ರವನ್ನು ಅರಿತಿದ್ದನು. ಆಚಾರ್ಯರು ಅದಕ್ಕಿಂತಲೂ ಹೆಚ್ಚಾಗಿ ವಾರಾಹ ಮಂತ್ರಗಳನ್ನು ತೋರಿಸಿದಾಗ ಅವನು ಆಶ್ಚರ್ಯ ಪಟ್ಟನು. ಇದು ಒಂದು ಮಹಿಮೆ. ಭಾ. ಪ್ರ. ತ್ರಿಂಶದ್ವಾರಾಹಮನುವಿತ್ ಕಶ್ಚಿದ್‌ಯೋಗ್ಯಾಸ ವಿಸ್ಮಿತಃ। ಸೂಚಿತೇಷ್ವೇವ ಸರ್ವೇಷು ಮಧ್ವೇನಾಭ್ಯಧಿಕೇಷ್ವಪಿ ॥)

ವಿ.—ಸ್ವಸ್ಯ ಅತಿಶಯಾಃ ಸ್ವಾತಿಶಯಾಃ ತಾನ್, ಮಾನುಷಾಣಾಂ ಇಮೇ ಮಾನುಷಾಃ, ನ ಮಾನುಷಾಃ ಅಮಾನುಷಾಃ ತಾನ್ ;

ಕ್ರಿ.—ಪ್ರಯಯೌ ಸರ್ಗ ೫ ಶ್ಲೋ ೮ ನೋಡಿರಿ.

ಅವ.—ಪ್ರಯಾಣಕ್ರಮದಿಂದ ಆಚಾರ್ಯರು ತಿರುಗಿ ಪಯಸ್ವಿನೀ ತೀರಕ್ಕೆ ಬಂದರು–

ತತಸ್ತತೋ ವಿಸ್ಮಿತಲೋಚನೈರ್ನರೈ-
ರ್ನಿರೀಕ್ಷ್ಯಮಾಣೋऽತಿಸುಲಕ್ಷಣಾಕೃತಿಃ ।
ಗ್ರಾಮೋತ್ತಮಾನ್ ಪ್ರಾಪ್ಯ ಪಯಸ್ವಿನೀತಟೇ
ವಿವೇಶ ದೇವಾಯತನಂ ಸ ಕಿಂಚನ ॥೪೯॥

Rarest Archiver

ಅ.—ವಿಸ್ಮಿತಲೋಚನೈಃ ನರೈಃ ತತಸ್ತತಃ ನಿರೀಕ್ಷ್ಯಮಾಣಃ ಅತಿ - ಸುಲಕ್ಷಣಾಕೃತಿಃ ಸಃ ಗ್ರಾಮೋತ್ತಮಾನ್ ಪ್ರಾಪ್ಯ ಪಯಸ್ವಿನೀತಟೇ ಕಿಂಚನ ದೇವಾಯತನಂ ವಿವೇಶ.

ಅ.ಅ.—ವಿಸ್ಮಿತಲೋಚನೈಃ = ಆಶ್ಚರ್ಯಪಟ್ಟ ಕಣ್ಣುಗಳುಳ್ಳ, ನರೈಃ ಜನರಿಂದ, ತತಸ್ತತಃ = ಅಲ್ಲಲ್ಲಿ, ನಿರೀಕ್ಷ್ಯಮಾಣಃ = ನೋಡಲ್ಪಡುತ್ತಿರುವ, ಅತಿಸುಲಕ್ಷಣಾಕೃತಿಃ = ಅತ್ಯಂತ ಉತ್ತಮವಾದ ಲಕ್ಷಣಗಳಿಂದ ಕೂಡಿದ ದೇಹವುಳ್ಳ, ಸಃ = ಆ ಮಧ್ವಾಚಾರ್ಯರು, ಗ್ರಾಮೋತ್ತಮಾನ್ = ಶ್ರೇಷ್ಠವಾದ ಗ್ರಾಮಗಳನ್ನು, ಪ್ರಾಪ್ಯ = ತಲುಪಿ, ಪಯಸ್ವಿನೀತಟೇ = ಪಯಸ್ವಿನೀನದಿಯ ತೀರದಲ್ಲಿ, ಕಿಂಚನ = ಯಾವುದೋ ಒಂದು, ದೇವಾಯತನಂ = ದೇವಾಲಯವನ್ನು, ವಿವೇಶ = ಪ್ರವೇಶಿಸಿದರು.

ತಾ.—ಶ್ರೀಮಧ್ವಾಚಾರ್ಯರು ಉತ್ತಮವಾದ ಸಾಮುದ್ರಿಕಲಕ್ಷಣ ಭರಿತವಾದ ಸುಂದರದೇಹವುಳ್ಳವರು. ಆದುದರಿಂದ ಅಲ್ಲಲ್ಲಿ ಜನರು ಆಶ್ಚರ್ಯಪಟ್ಟು ಅವರನ್ನು ನೋಡುತ್ತಿದ್ದರು, ಮತ್ತು ಆನಂದ ಪಡುತ್ತಿದ್ದರು. ಅವರು ಸಂಚಾರಕ್ರಮದಿಂದ ಅನೇಕ ಒಳ್ಳೆಯ ಗ್ರಾಮಗಳನ್ನು ಪ್ರವೇಶಿಸಿ ಅಲ್ಲಿಂದ ಮುಂದೆ ಹೋಗುತ್ತಾ ಪಯಸ್ವಿನೀನದಿಯ ಬಳಿಯಲ್ಲಿರುವ ಒಂದು ದೇವಾಲಯವನ್ನು ಪ್ರವೇಶಿಸಿದರು.

ವಿ.—ವಿಸ್ಮಿತಾನಿ ಲೋಚನಾನಿ ಯೇಷಾಂ ತೇ ವಿಸ್ಮಿತಲೋಚನಾಃ ತೈಃ ಅತ್ಯಂತಂ ಸುಲಕ್ಷಣಾನಿ ಯಸ್ಯಾಃ ಸಾ ಅತಿಸುಲಕ್ಷಣಾ, ಅತಿಸುಲಕ್ಷಣಾ ಆಕೃತಿಃ ಯಸ್ಯ ಸಃ ಅತಿಸುಲಕ್ಷಣಾಕೃತಿಃ, ಗ್ರಾಮೇಷು ಉತ್ತಮಾಃ ಗ್ರಾಮೋತ್ತಮಾಃ ತಾನ್, ಪಯಸ್ವಿನ್ಯಾಃ ತಟಂ ಪಯಸ್ವಿನೀತಟಂ ತಸ್ಮಿನ್ ;

ಕ್ರಿ.—ವಿವೇಶ ವಿವಿಶತುಃ ವಿವಿಶುಃ, ವಿವೇಶಿಥ ವಿವಿಶಥುಃ ವಿವಿಶ, ವಿವೇಶ ವಿವಿಶಿವ ವಿವಿಶಿಮ ; ವಿಶ ಪ್ರವೇಶನೇ ಪರ. to enter.

ಅವ.—ಅಲ್ಲಿ ನಡೆದ ಒಂದು ವಿಶೇಷವನ್ನು ಹೇಳುವುದಕ್ಕಾಗಿ ವೇದವೇದಾರ್ಥಗಳನ್ನು ಬಲ್ಲ ಪಂಡಿತರು ಅಲ್ಲಿ ಬಂದು ಸೇರಿದರು ಎಂದು ಹೇಳುತ್ತಾರೆ–

Rarest Archiver

ಅಧೀತ್ಯ ಧರ್ಮೇಣ ಷಡಂಗಮಾಗಮಂ
ತದರ್ಥಸಂವರ್ಣನನಿರ್ಣಯಾನ್ವಿತಾಃ ।
ಪ್ರಾಪುರ್ದ್ವಿಜೇಂದ್ರಾಸ್ತಮಪೂರ್ವಪೂರುಷಂ
ಜಿಜ್ಞಾಸವಃ ಸುಪ್ರಥಿತಂ ಜಗತ್ತ್ರಯೇ ||೫೦||

ಅ.—ಧರ್ಮೇಣ ಷಡಂಗಂ ಆಗಮಂ ಅಧೀತ್ಯ ತದರ್ಥಸಂವರ್ಣನನಿರ್ಣಯಾನ್ವಿತಾಃ ದ್ವಿಜೇಂದ್ರಾಃ ಜಗತ್ತ್ರಯೇ ಸುಪ್ರಥಿತಂ ಅಪೂರ್ವಪೂರುಷಂ ತಂ ಜಿಜ್ಞಾಸವಃ ಆಲಂ ಪ್ರಾಪುಃ ।

ಅ.ಅ.—ಧರ್ಮೇಣ = ವೇದಾಧ್ಯಯನದ ನಿಯಮದಿಂದ, ಷಡಂಗಂ = ಆರು ಅಂಗಗಳುಳ್ಳ, ಆಗಮಂ = ವೇದವನ್ನು, ಅಧೀತ್ಯ-ಅಧ್ಯಯನ ಮಾಡಿ, ತದರ್ಥ = ಆ ವೇದಾರ್ಥಗಳ, ಸಂವರ್ಣನ = ಸರಿಯಾಗಿ ಹೇಳುವುದರಲ್ಲಿ, ನಿರ್ಣಯಾನ್ವಿತಾಃ = ನಿಶ್ಚಯದಿಂದ ಕೂಡಿದ, ದ್ವಿಜೇಂದ್ರಾಃ = ಬ್ರಾಹ್ಮಣ ಶ್ರೇಷ್ಠರು, ಜಗತ್ತ್ರಯೇ = ಮೂರು ಲೋಕಗಳಲ್ಲಿ, ಸುಪ್ರಥಿತಂ = ಅತ್ಯಂತ ಪ್ರಸಿದ್ಧರಾದ, ಅಪೂರ್ವಪೂರುಷಂ = ಹಿಂದೆ ನೋಡದೆ ಇದ್ದ ಪುರುಷರಾದ, ತಂ = ಆ ಮಧ್ವಾಚಾರ್ಯರನ್ನು, ಜಿಜ್ಞಾಸವಃ = ತಿಳಿಯುವ ಇಚ್ಛೆಯುಳ್ಳವರಾಗಿ, ಪ್ರಾಪುಃ = ಬಂದು ಸೇರಿದರು.

ತಾ.—ಆ ಪಯಸ್ವಿನೀತೀರದಲ್ಲಿ ಉತ್ತಮರಾದ ಬ್ರಾಹ್ಮಣರು ವಾಸ ಮಾಡಿಕೊಂಡಿದ್ದರು. ಅವರು ಬ್ರಹ್ಮಚರ್ಯವೇ ಮೊದಲಾದ ವೇದಾಧ್ಯಯನ ನಿಯಮದಿಂದ ಶಿಕ್ಷಾ ಮುಂತಾದ ಆರು ಅಂಗಗಳಿಂದ ಕೂಡಿದ ವೇದವನ್ನು ಅಧ್ಯಯನಮಾಡಿ, ತಾವು ಓದಿದ ವೇದದ ಅರ್ಥವನ್ನು ಸರಿಯಾಗಿ ಹೇಳಲು ಸಮರ್ಥರಾಗಿದ್ದರು. ಆಚಾರ್ಯರು ಮೂರು ಲೋಕಗಳಲ್ಲಿ ಪ್ರಸಿದ್ಧರಾಗಿದ್ದರೂ ತಮಗೆ ಹೊಸಬರಾಗಿದ್ದುದರಿಂದ ಕಿವಿಯಿಂದ ಕೇಳಿರುವ ಅವರನ್ನು ಕಣ್ಣಿಂದ ನೋಡಿ ಅವರ ಪಾಂಡಿತ್ಯವನ್ನು ಪರೀಕ್ಷಿಸಿ ತಿಳಿಯಬೇಕೆಂದು ಆ ಬ್ರಾಹ್ಮಣರು ಆಚಾರ್ಯರು ಇಳಿದುಕೊಂಡಿರುವ ದೇವಾಲಯದಲ್ಲಿ ಸಭೆ ಸೇರಿದರು ಎಂದು ಭಾವ. (ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ-ಇವೇ ವೇದದ ಆರು ಅಂಗಗಳು).

Rarest Archiver

ವಿ.—ಷಟ್ ಅಂಗಾನಿ ಯಸ್ಯ ಸಃ ಷಡಂಗಃ ತಂ, ತಸ್ಯ ಅರ್ಥಃ ತದರ್ಥಃ ತಸ್ಯ ಸಂವರ್ಣನಂ ತದರ್ಥಸಂವರ್ಣನಂ, ತದರ್ಥಸಂವರ್ಣನೇ ನಿರ್ಣಯಃ, ತೇನ ಅನ್ವಿತಾಃ, ನ ಪೂರ್ವಃ ಅಪೂರ್ವಃ ಅಪೂರ್ವಶ್ಚಾಸೌ ಪೂರುಷಶ್ಚ ಅಪೂರ್ವಪೂರುಷಃ ತಂ, ಜ್ಞಾತುಂ ಇಚ್ಛವಃ ಜಿಜ್ಞಾಸವಃ, ಜಗತಾಂ ತ್ರಯಂ-ಜಗತ್‌ತ್ರಯಂ ತಸ್ಮಿನ್ ;

ಕ್ರಿ.—ಪ್ರ+ಆಪುಃ, ಆಪ ಆಪತುಃ ಆಪುಃ, ಆಪಿಥ ಆಪಥುಃ ಆಪ, ಆಪ ಆಪಿವ ಆಪಿಮ. ಆಪ್ಲೃ(ಆಪ್)ವ್ಯಾಪ್ತೌ. ಪರ. to obtain. ಲಿಟ್.

ಅವ.—ಪಂಡಿತರು ಮಾತ್ರವೇ ಅಲ್ಲ, ಸಾಧಾರಣ ಜನರೂ ಬಂದು ಸೇರಿದರು —

ಸುಸ್ಮಿತೇಂದುಮರವಿಂದಲೋಚನಂ
ಸ್ವರ್ಣವರ್ಣಮತಿಭದ್ರಭಾಷಣಂ ।
ವೀತಭೂಷಮಪಿ ವಿಶ್ವಭೂಷಣಂ
ತಂ ದಿದೃಕ್ಷುರಲಮಾಪತಜ್ಜನಃ ॥೩೧॥

ಅ.—ಜನಃ ಸುಸ್ಮಿತೇಂದುಂ ಅರವಿಂದಲೋಚನಂ ಸ್ವರ್ಣವರ್ಣಂ, ಅತಿ ಭದ್ರಭಾಷಣಂ, ವೀತಭೂಷಂ ಅಪಿ ವಿಶ್ವಭೂಷಣಂ ತಂ ದಿದೃಕ್ಷುಃ ಅಲಂ ಆಪತತ್ ।

ಅ.ಅ.—ಜನಃ = ಜನರು, ಸುಸ್ಮಿತ = ಒಳ್ಳೆಯ ಮಂದಹಾಸವೆಂಬ, (ಮಂದಹಾಸದಿಂದ ಕೂಡಿದ ಮುಖವೆಂಬ) ಇಂದುಂ = ಚಂದ್ರನುಳ್ಳ, ಅರವಿಂದ ಲೋಚನಂ = ಕಮಲದಂತಹ ಕಣ್ಣುಗಳುಳ್ಳ, ಸ್ವರ್ಣವರ್ಣಂ = ಭಂಗಾರದ ಬಣ್ಣವುಳ್ಳ, ಅತಿಭದ್ರಭಾಷಣಂ = ಅತ್ಯಂತ ಮಂಗಳಕರವಾದ ಮಾತುಳ್ಳ, ವೀತಭೂಷಂ ಅಪಿ = ಅಲಂಕಾರವಿಲ್ಲದವರಾದಾಗ್ಯೂ, ವಿಶ್ವಭೂಷಣಂ = ಪ್ರಪಂಚಕ್ಕೆ ಅಲಂಕಾರಪ್ರಾಯರಾದ, ತಂ = ಆ ಮಧ್ವಾಚಾರ್ಯರನ್ನು, ದಿದೃಕ್ಷುಃ = ನೋಡುವ ಇಚ್ಛೆಯುಳ್ಳವರಾಗಿ, ಅಲಂ = ಹೆಚ್ಚಾಗಿ, ಆಪತತ್ = ಬಂದರು.

Rarest Archiver

ತಾ.—ಆಚಾರ್ಯರು ಕಿರುನಗೆಯುಳ್ಳ ಚಂದ್ರನಂತಹ ಮುಖವುಳ್ಳವರು. ತಾವರೆಯಂತಹ ಕಣ್ಣುಗಳುಳ್ಳವರು. ಬಂಗಾರದ ಮೈಬಣ್ಣವುಳ್ಳವರು. ಅವರ ಮಾತು ಅತ್ಯಂತ ಮಂಗಳಕರವಾದುದು. ಆಭರಣಗಳನ್ನು ಧರಿಸದಿದ್ದರೂ ಜಗತ್ತಿಗೇ ಅಲಂಕಾರವಾಗಿದ್ದ ಅವರನ್ನು ಚೆನ್ನಾಗಿ ನೋಡುವ ಅಪೇಕ್ಷೆಯಿಂದ ಸಾಧಾರಣ ಜನರೂ ಹೆಚ್ಚಿನ ಸಂಖ್ಯೆಯಿಂದ ಆ ದೇವಾಲಯದಲ್ಲಿ ಬಂದು ಸೇರಿದರು.

ವಿ.—ಸು ಶೋಭನಂ ಸ್ಮಿತಂ ಯಸ್ಯ ತತ್ ಸುಸ್ಮಿತಂ (ವದನಂ) ಏವ ಇಂದುಃ ಯಸ್ಯ ಸಃ ತಂ (ಅಥವಾ ಸು ಶೋಭನಂ ಸ್ಮಿತಂ ಏವ ಇಂದುಃ ಯಸ್ಯ ಸಃ ತಂ) ಅರವಿಂದೇ ಇವ ಲೋಚನೇ ಯಸ್ಯ ಸಃ ಅರವಿಂದಲೋಚನಃ ತಂ, ಸ್ವರ್ಣವತ್ ವರ್ಣಃ ಯಸ್ಯ ಸಃ ಸ್ವರ್ಣವರ್ಣಃ ತಂ, ಅತಿಭದ್ರಂ ಭಾಷಣಂ ಯಸ್ಯ ಸಃ ಅತಿಭದ್ರಭಾಷಣಃ ತಂ, ವೀತಾ ಭೂಷಾ ಯೇನ ಸಃ ವೀತಭೂಷಃ ತಂ, ಭೂಷಣವತ್ ಆಚರತೀತಿ ಭೂಷಣಃ ವಿಶ್ವಸ್ಯ ಭೂಷಣಃ ವಿಶ್ವಭೂಷಣಃ ತಂ, (ಅಥವಾ ವಿಶ್ವಸ್ಯ ಭೂಷಣಂ ವಿಶ್ವಭೂಷಣಂ ತಂ) ದ್ರಷ್ಟುಂ ಇಚ್ಛುಃ ದಿದೃಕ್ಷುಃ.

ಕ್ರಿ.—ಆ+ಅಪತತ್ ಅಪತತಾಂ ಅಪತನ್, ಅಪತಃ ಅಪತತಂ ಅಪತತ, ಅಪತಂ ಅಪತಾವ ಅಪತಾಮ. ಪತ್ಲೃ ಗತೌ to fall ಪರ. ಲಙ್. ರಥೋದ್ಧತಾವೃತ್ತ, ಲಕ್ಷಣ—ರಾನ್ನರಾವಿಹ ರಥೋದ್ಧತಾ ಲಗೌ.

ಅವ.—ಅಲ್ಲಿ ಸೇರಿದ ಪಂಡಿತರ ಸಭೆಯಲ್ಲಿ ಆಚಾರ್ಯರು ಹೇಗೆ ಪ್ರಕಾಶಿಸಿದರು—

ವಿದ್ಯೋರುದ್ಯುತಿಧೀರತಾರಕತಿರಸ್ಕಾರೇ ಪತಂಗಾಯಿತೋ
ದುರ್ವಾದೀಭಕುತರ್ಕಕುಂಭದಲನೇ ಸಿಂಹಪ್ರಬರ್ಹಾಯಿತಃ।
ಲೋಲಾಲೋಕಕಲೋಕದೃಕ್ಕುಮುದಿನೀಸಂಹ್ಲಾದನೇಽಬ್ಜಾಯಿತಃ
ಸಂಸನ್ಮಂಡಲಮಂಡನಾಯಿತವಪುಃಸ್ವಾನಂದತೀರ್ಥೋ ಬಭೌ ॥೫೨॥

ಅ.—ವಿದ್ಯೋರುದ್ಯುತಿಧೀರತಾರಕತಿರಸ್ಕಾರೇ ಪತಂಗಾಯಿತಃ ದುರ್ವಾದೀಭಕುತರ್ಕಕುಂಭದಲನೇ ಸಿಂಹಪ್ರಬರ್ಹಾಯಿತಃ ಲೋಲಾಲೋಕಕಲೋಕ-

Rarest Archiver

ದೃಕ್ಕುಮುದಿನೀಸಂಹ್ಲಾದನೇ ಅಬ್ಜಾಯಿತಃ ಸಂಸನ್ಮಂಡಲಮಂಡನಾಯಿತವಪುಃ ಸ್ವಾನಂದತೀರ್ಥಃ ಬಭೌ ।

ಅ.ಅ.—ವಿದ್ಯಾ = ವಿದ್ಯೆಯೆಂಬ, ಉರುದ್ಯುತಿ = ಹೆಚ್ಚು ಶೋಭೆಯುಳ್ಳ, ಧೀರ = ಪಂಡಿತರೆಂಬ, ತಾರಕ = ನಕ್ಷತ್ರಗಳ, ತಿರಸ್ಕಾರೇ = ಕಾಂತಿಹೀನತೆಯನ್ನುಂಟುಮಾಡುವ ವಿಷಯದಲ್ಲಿ, ಪತಂಗಾಯಿತಃ = ಸೂರ್ಯನಂತೆ ಆಚರಿಸುವ, ದುರ್ವಾದಿ = ದುಷ್ಟವಾದಿಗಳೆಂಬ, ಇಭ = ಆನೆಗಳ, ಕುತರ್ಕ = ಕೆಟ್ಟ ತರ್ಕಗಳೆಂಬ, ಕುಂಭ = ಕಪೋಲಗಳ, ದಲನೇ = ಸೀಳುವಿಕೆಯಲ್ಲಿ, ಸಿಂಹಪ್ರಬರ್ಹಾಯಿತಃ = ಶ್ರೇಷ್ಠವಾದ ಸಿಂಹದಂತಿರುವ, ಲೋಲಾಲೋಕಕ = ಚಂಚಲವಾದ ನೋಟವುಳ್ಳ, ಲೋಕ = ಜನರ, ದೃಕ್ = ಕಣ್ಣು ಎಂಬ, ಕುಮುದಿನೀ = ನೈದಿಲೆಯ, ಸಂಹ್ಲಾದನೇ = ಸಂತೋಷಪಡಿಸುವುದರಲ್ಲಿ, ಅಬ್ಜಾಯಿತಃ = ಚಂದ್ರನಂತಿರುವ, ಸಂಸನ್ಮಂಡಲ = ಸಭಾಮಂಡಲಕ್ಕೆ, ಮಂಡನಾಯಿತ = ಅಲಂಕಾರದಂತಿರುವ, ವಪುಃ = ದೇಹವುಳ್ಳ, ಸ್ವಾನಂದತೀರ್ಥಃ = ಮನೋಹರರಾದ ಶ್ರೀಮಧ್ವಾಚಾರ್ಯರು, ಬಭೌ = ಶೋಭಿಸಿದರು..

ತಾ.—ತುಂಬಾಕಾಂತಿಪೂರ್ಣವಾದ ನಕ್ಷತ್ರಗಳ ಶೋಭೆಯನ್ನು ಸೂರ್ಯನು ತಿರಸ್ಕರಿಸುವಂತೆ ವಿದ್ಯೆಗಳಿಂದ ಪ್ರಕಾಶಿಸುವ ಪಂಡಿತರನ್ನು ಆಚಾರ್ಯರು ಜಯಿಸಿದರು. ಬಲಿಷ್ಠವಾದ ಸಿಂಹವು ಮದ್ದಾನೆಗಳ ಕುಂಭಸ್ಥಳಗಳನ್ನು ಸೀಳುವಂತೆ, ಬ್ರಹ್ಮನು ನಿರ್ಗುಣ ನಿರಾಕಾರ, ಜೀವಾಭಿನ್ನ ಇವೇ ಮೊದಲಾದ ಕುವಾದಿಗಳ ಕುತರ್ಕಗಳನ್ನು ಅವರು ಖಂಡಿಸುತ್ತಿದ್ದರು. ನೈದಿಲೆಗಳನ್ನು ಚಂದ್ರನು ಅರಳಿಸುವಂತೆ ಜನರ ಚಂಚಲವಾದ ನೋಟವುಳ್ಳ ಕಣ್ಣುಗಳಿಗೆ ಆನಂದವನ್ನುಂಟುಮಾಡುತ್ತಿದ್ದರು. ಹೀಗೆ ಆ ಪಂಡಿತಸಭಾಮಂಡಲಕ್ಕೆ ಅಲಂಕಾರವಾಗಿ ಆಚಾರ್ಯರು ಶೋಭಿಸಿದರು.

ವಿ.—ವಿದ್ಯೈವ ಉರುದ್ಯುತಿಃ ಯೇಷಾಂ ತೇ ವಿದ್ಯೋರುದ್ಯುತಯಃ, ತೇ ಚ ತೇ ಧೀರಾಶ್ಚ ವಿದ್ಯೋರುದ್ಯುತಿಧೀರಾಃ ತೇ ಏವ ತಾರಕಾಣಿ, ತೇಷಾಂ ತಿರಸ್ಕಾರಃ ವಿದ್ಯೋ....ರಃ ತಸ್ಮಿನ್, ತಾರಕಂ = ನಕ್ಷತ್ರ, ನಕ್ಷತ್ರೇ ಚಾಕ್ಷಿಮಧ್ಯೇ ಚ ತಾರಕಂ ತಾರಕಾಪಿ ಚ–ಶಾಶ್ವತ. ಪತಂಗವತ್ ಆಚರತೀತಿ ಪತಂಗಾಯಿತಃ,

Rarest Archiver

ಪತಂಗ — ಸೂರ್ಯ, ಪತಂಗೌ ಪಕ್ಷಿಸೂರ್ಯೌ ಚ–ಅಮರ. ದುರ್ವಾದಿನ ಏವ ಇಭಾಃ ದುರ್ವಾದೀಭಾಃ ತೇಷಾಂ ಕುತರ್ಕಾಃ, ತೇ ಏವ ಕುಂಭಾಃ ತೇಷಾಂ ದಲನಂ ದುರ್ವಾದೀಭಕುತರ್ಕಕುಂಭದಲನಂ ತಸ್ಮಿನ್, ಸಿಂಹೇಷು ಪ್ರಬರ್ಹಃ ಸಿಂಹಪ್ರಬರ್ಹಃ ಸ ಇವ ಆಚರತೀತಿ ಸಿಂಹಪ್ರಬರ್ಹಾಯಿತಃ, ಲೋಲಃ ಆಲೋಕಃ ಯಸ್ಯ ಸಃ ಲೋಲಾಲೋಕಕಃ ಸಚಾಸೌ ಲೋಕಶ್ಚ, ತಸ್ಯ ದೃಕ್, ಸೈವ ಕುಮುದಿನೀ ತಸ್ಯಾಃ ಸಂಹ್ಲಾದನಂ ಲೋಲಾಲೋಕಕಲೋಕದೃಕ್ಕು-ಮುದಿನೀಸಂಹ್ಲಾದನಂ ತಸ್ಮಿನ್, ಅಬ್ಜವತ್ ಆಚರತೀತಿ ಅಬ್ಜಾಯಿತಃ, ಅಬ್ಜ — ಚಂದ್ರ, ಅಬ್ಜೋ ಜೈವಾತೃಕಃ ಸೋಮಃ–ಅಮರ. ಸಂಸದಾಂ ಮಂಡಲಂ ಸಂಸನ್ಮಂಡಲಂ, ತಸ್ಯ ಮಂಡನಂ, ಸಂಸನ್ಮಂಡಲಮಂಡನಂ, ತದ್ವದಾಚರತೀತಿ ಸಂಸನ್ಮಂಡಲಮಂಡನಾಯಿತಂ, ತಾದೃಶಂ ವಪುಃ ಯಸ್ಯ ಸಃ ಸಂಸನ್ಮಂಡಲ-ಮಂಡನಾಯಿತವಪುಃ, ಶೋಭನಶ್ಚಾಸೌ ಆನಂದತೀರ್ಥಶ್ಚ ಸ್ವಾನಂದತೀರ್ಥಃ.

ಕ್ರಿ.—ಬಭೌ ಸ. ೫ ಶ್ಲೋ ೨೯ ನೋಡಿ.

ಈ ಶ್ಲೋಕದಲ್ಲಿ ಶಾರ್ದೂಲವಿಕ್ರೀಡಿತವೃತ್ತ. ಲಕ್ಷಣ ಸೂರ್ಯಾ-ಶ್ವೈರ್ಮಸಜಾಸ್ತತಾಸ್ಸಗುರವಶ್ಶಾರ್ದೂಲವಿಕ್ರೀಡಿತಂ.

ಇಲ್ಲಿಗೆ ಶ್ರೀಕವಿಕುಲತಿಲಕಶ್ರೀಮನ್ನಾರಾಯಣಪಂಡಿತಾಚಾರ್ಯರಿಂದ ರಚಿತವಾದ ಶ್ರೀಸುಮಧ್ವವಿಜಯಮಹಾಕಾವ್ಯದ ಐದನೆಯ ಸರ್ಗದ ಕನ್ನಡಭಾಷಾನುವಾದವು ಸಮಾಪ್ತವಾಯಿತು.

Rarest Archive

ಶ್ರೀಗುರುಭ್ಯೋ ನಮಃ

ಆರನೆಯ ಸರ್ಗ

ಕಥಾಸಾರಾಂಶ

ಅನಂತರ ಆ ಸಭೆಯಲ್ಲಿ ನೆರೆದ ಜನರಲ್ಲಿ ಒಬ್ಬ ಪಂಡಿತನು ಐತರೇಯೋಪ-ನಿಷತ್ತಿನ ಒಂದು ಸೂಕ್ತವನ್ನು ಸೂಚಿಸಿ—'ಆಚಾರ್ಯರೇ! ತಮ್ಮಿಂದ ಈ ಸೂಕ್ತದ ಭಾವಾರ್ಥವಿವರಣೆಯಾಗಬೇಕು. ಸಭೆಯು ಅದನ್ನು ಕೇಳಲು ಬಯಸುತ್ತಿದೆ.' ಎಂದನು. ಆಚಾರ್ಯರು ಕೂಡಲೇ ಗಂಭೀರಧ್ವನಿಯಿಂದ ಸ್ಪಷ್ಟವಾಗಿ ಆ ಸೂಕ್ತಾರ್ಥವನ್ನು ಹೇಳಿದರು. ಆಚಾರ್ಯರ ವಾಗ್ವೈಖರಿಯಿಂದ ಬೆರಗಾದರೂ ಆ ಬ್ರಾಹ್ಮಣರು ಆ ಸೂಕ್ತಕ್ಕೆ ಬೇರೆಯೇ ಅರ್ಥವಿದೆ. ನೀವು ಹೇಳಿದ ಅರ್ಥವು ಸರಿಯಲ್ಲವೆಂದರು, ಬೇರೆ ಅರ್ಥವನ್ನು ಹೇಳಿದರು. ಆಚಾರ್ಯರು—'ವೇದಮಂತ್ರಕ್ಕೆ ಮೂರರ್ಥ, ಭಾರತಶ್ಲೋಕಕ್ಕೆ ಹತ್ತು ಅರ್ಥ, ವಿಷ್ಣುಸಹಸ್ರನಾಮದ ಒಂದೊಂದು ಶಬ್ದಕ್ಕೂ ನೂರುಅರ್ಥಗಳು ಇರುವುದರಿಂದ ನೀವು ಹೇಳಿದ ಮತ್ತು ನಾನು ಹೇಳಿದ್ದ ಅರ್ಥಗಳೆರಡೂ ಸರಿ' ಎಂದರು. ಆಗ ಆ ಬ್ರಾಹ್ಮಣರು ಈಗ ಆಚಾರ್ಯರನ್ನು ಸುಲಭವಾಗಿ ಜಯಿಸಬಹುದು ಎಂದು ಯೋಚಿಸಿ ನಗುತ್ತಾ ವಿಷ್ಣುಸಹಸ್ರನಾಮಕ್ಕೆ ನೂರು ಅರ್ಥವನ್ನು ಹೇಳಿರಿ ಎಂದರು. ಆಚಾರ್ಯರು—ಆಗಲಿ, ಆದರೆ ನಾನು ಹೇಳಿದ ಅರ್ಥಗಳನ್ನು ಕೊನೆಗೆ ನೀವು ಅನುವಾದಿಸಬೇಕೆಂದರು. ಆ ಪಂಡಿತರು ಒಪ್ಪಿದರು. ಕೂಡಲೇ ಆಚಾರ್ಯರು ವಿಷ್ಣುಸಹಸ್ರನಾಮದ ಮೊದಲಿನ 'ವಿಶ್ವ' ಎಂಬ ಶಬ್ದಕ್ಕೆ ಪ್ರಮಾಣಸಹಿತವಾಗಿ ಅರ್ಥವನ್ನು ಹೇಳತೊಡಗಿದರು. ಅವರು ನೂರು ಅರ್ಥಗಳನ್ನು ಹೇಳಿ ಪೂರೈಸುವುದರ ಮೊದಲೇ ಆ ಪಂಡಿತರು ವಿದ್ವಾಂಸರಾಗಿದ್ದರೂ ಆ ಅರ್ಥಗಳನ್ನೆಲ್ಲಾ ಸಂಪೂರ್ಣವಾಗಿ ಧಾರಣಮಾಡಲಾರದೆ ಭ್ರಾಂತರಾದರು. ಆಚಾರ್ಯರು ಸರ್ವಜ್ಞರೆಂದು ತಿಳಿದು ಅವರಲ್ಲಿ ಕ್ಷಮೆಬೇಡಿ ನಮಸ್ಕರಿಸಿದರು.

Rarest Archiver

ತರುವಾಯ ಆಚಾರ್ಯರು ಕೇರಳದೇಶದ ಬೇರೊಂದು ದೇವಾಲಯದಲ್ಲಿ ತಂಗಿದ್ದಾಗ ಅಲ್ಲಿಗೆ ವಿದ್ಯಾಪ್ರದರ್ಶನ ಮಾಡಿ ಸಂಭಾವನೆ ಸ್ವೀಕರಿಸಲು ಬಂದಿದ್ದ ಅನೇಕಪಂಡಿತರು ಆಚಾರ್ಯರನ್ನು ಜಯಿಸಬೇಕೆಂದು ಬಯಸಿದರು. ಅವರು 'ನಾವು ತರ್ಕಮೀಮಾಂಸಾದಿಪ್ರವೀಣರಾದ ಇವರ ಜತೆಗೆ ವಾದಕ್ಕಿಳಿದು ಸೋತರೆ ನಮ್ಮ ದೇಶಕ್ಕೆ ಅವಮಾನವಾಗುತ್ತದೆ' ಎಂದು ಆಲೋಚಿಸಿ ಪರದೇಶದವನ ಮೂಲಕ ಪ್ರಶ್ನೆ ಮಾಡಿಸಿದರು. ಅವರು ಆ ಬ್ರಾಹ್ಮಣನ ಮೂಲಕ-'ಸ ವಾ ಉದೇವಾಃ' ಇತ್ಯಾದಿ ಮಂತ್ರದ ಅರ್ಥವನ್ನು ಹೇಳುವಂತೆ ಕೇಳಿಸಿದರು. ಆಚಾರ್ಯರು ಆ ಮಂತ್ರಾರ್ಥವನ್ನು ಚೆನ್ನಾಗಿ ವಿವರಿಸಿದರು ಪೃಣೀಯಾತ್ ಎಂಬುದು ಪೃಣ ದಾನೇ ಎಂಬ ಧಾತುವಿನಿಂದ ಉಂಟಾದ ರೂಪವೆಂದರು. ಆ ಪಂಡಿತನು ಆಚಾರ್ಯರು ಹೇಳಿದ ಧಾತುವು ತಪ್ಪೆಂದನು. 'ಪೃಣೀಯಾತ್' ಎಂಬಲ್ಲಿ 'ಪ್ರೀಙ್' ಎಂಬ ಧಾತುವು, ಮೂಲವಾಗಿದೆ ಎಂದು ಹೇಳಿದನು. ಆಚಾರ್ಯರು ಆ ಪಂಡಿತನನ್ನು ಕುರಿತು ಪೃ ಮತ್ತು ಪ್ರೀಗಳಿಗೆ ವ್ಯತ್ಯಾಸ ತಿಳಿಯದ ನೀನು ಪ್ರ ಪ್ರಾ ಪ್ರಿ ಪ್ರೀ ಪೃ-ಇತ್ಯಾದಿಯಾಗಿ ಧೂಳಿನಲ್ಲಿ ಅಕ್ಷರಗಳನ್ನು ಬರೆದು ಆವೃತ್ತಿ ಮಾಡು, ತಿದ್ದು ಎಂದು ಗದರಿಸಿ ನಕ್ಕರು. ಆ ಪಂಡಿತರು ಆಚಾರ್ಯರ ಪಾಂಡಿತ್ಯಕ್ಕೆ ಬೆರಗಾಗಿ ವಂದಿಸಿದರು.

ಅನಂತರ ಮತ್ತೊಂದು ಸಭೆಯಲ್ಲಿ ಒಂದು ಸೂಕ್ತದಲ್ಲಿ ಬರುವ ಅಪಾಲಾ ಎಂಬ ಶಬ್ದದ ಅರ್ಥದ ವಿಷಯದಲ್ಲಿ ಆ ಸಭೆಯ ಪಂಡಿತರಿಗೂ ಆಚಾರ್ಯರಿಗೂ ವಿವಾದ ಒದಗಿತು. ಅಪಾಲಾ ಎಂದರೆ 'ಅತಿತರುಣೀ' ಎಂದು ಆಚಾರ್ಯರು ಅರ್ಥ ಹೇಳಿದರೆ ಆ ಪಂಡಿತರು ಅಪಾಲಾ ಎಂದರೆ 'ಕುಷ್ಠರೋಗಿಣಿ' ಎಂದು ಅರ್ಥವನ್ನು ಹೇಳಿ ತಮ್ಮ ಅರ್ಥವೇ ಸರಿಯೆಂದು ಹಠ ಹಿಡಿದರು. ಆಗ ಆಚಾರ್ಯರು ಸ್ವಲ್ಪ ಹೊತ್ತಿನಲ್ಲಿಯೇ ಇಲ್ಲಿಗೆ ಒಬ್ಬ ಪಂಡಿತನು ಬರುವನು. ಅವನನ್ನು ಈ ಶಬ್ದದ ಅರ್ಥವೇನೆಂದು ಕೇಳಿರಿ—ಎಂದು ಹೇಳಿ ಅಲ್ಲಿಂದ ಹೊರಟರು. ಆಚಾರ್ಯರು ಹೋದ ದಿಕ್ಕಿನ ವಿರುದ್ಧ ದಿಕ್ಕಿನಿಂದ ಸ್ವಲ್ಪಹೊತ್ತಿನಲ್ಲಿಯೇ ಒಬ್ಬ ಪಂಡಿತನು ಬಂದನು. ಅವನಲ್ಲಿ ಅಪಾಲಾ ಶಬ್ದದ ಅರ್ಥ ಕೇಳಿದಾಗ ಆಚಾರ್ಯರು ಹೇಳಿದ ಅರ್ಥವನ್ನೇ ಹೇಳಿದನು. ಇದರಿಂದ ಆ ಪಂಡಿತರು ಆಚಾರ್ಯರು ತ್ರಿಕಾಲಜ್ಞಾನಿಗಳೂ ಆಗಿದ್ದಾರೆಂದು ಅರಿತರು. ಇದೇ ರೀತಿ ಅವರು ಸಭೆಗಳಲ್ಲಿ ಪ್ರಸಕ್ತವಾದ

Rarest Archiver

ವಿಷಯಗಳನ್ನು ಸರಿಯಾಗಿ ಸಪ್ರಮಾಣವಾಗಿ ಉತ್ತರಿಸುತ್ತಿದ್ದುದರಿಂದ **ಸರ್ವಜ್ಞ ಯತಿ**ಗಳೆಂದು ಪ್ರಖ್ಯಾತರಾದರು. ಹೀಗೆ ಅವರ ಧವಳಕೀರ್ತಿಯು ಎಲ್ಲೆಡೆಯಲ್ಲಿಯೂ ಹಬ್ಬಿತು. ಮುಂದೆ ಅವರು ಉಡುಪಿಗೆ ಹೋದರು. ದುರ್ವಾದಿಗಳು ವೇದಗಳಿಗೆ ಅಪಾರ್ಥಮಾಡಿರುವುದನ್ನು ಕಂಡು ವ್ಯಥೆಗೊಂಡ ಅವರು ವೇದಾರ್ಥವನ್ನು ಸರಿಯಾಗಿ ವಿವರಿಸಿ ದುರ್ವಾದಿಗಳನ್ನು ಖಂಡಿಸುವೆನೆಂದು ಪ್ರತಿಜ್ಞೆಮಾಡಿದರು. ಮೊದಲು ಭಗವದ್ಗೀತಾಭಾಷ್ಯವನ್ನು ರಚಿಸಿ ಅದನ್ನು ಜ್ಯೇಷ್ಠಯತಿಗಳಿಗೆ ಕೊಟ್ಟು ಅಚ್ಯುತಪ್ರೇಕ್ಷರ ಅಪ್ಪಣೆಯನ್ನು ಪಡೆದು ಉತ್ತರದಿಕ್ಕಿಗೆ ಪ್ರಯಾಣ ಮಾಡಿದರು. ದಾರಿಯಲ್ಲಿರುವ ತೀರ್ಥಗಳಲ್ಲಿ ಸ್ನಾನ ಮಾಡಿ ಅವುಗಳನ್ನು ಪಾವನಗೊಳಿಸಿ ಮನುಷ್ಯರಿಗೆ ಹೋಗಲು ಸಾಧ್ಯವಾದ ಚಿಕ್ಕಬದರಿಕಾಶ್ರಮವನ್ನು ತಲುಪಿದರು.

ಅಲ್ಲಿ ಶ್ರೀಮನ್ನಾರಾಯಣಮುನಿಗೆ ತಾನು ರಚಿಸಿದ ಗೀತಾಭಾಷ್ಯವನ್ನು ಅರ್ಪಿಸಿ ಜನರನ್ನು ದೂರವಿರಲು ಹೇಳಿ ತಾನೊಬ್ಬನೇ ದೇವರ ಮುಂದೆ ಗೀತಾಭಾಷ್ಯದ ಪ್ರವಚನವನ್ನು ಪ್ರಾರಂಭಿಸಿದರು. ಭಾಷ್ಯದ ಮಂಗಳಶ್ಲೋಕದಲ್ಲಿ 'ಶಕ್ತಿತಃ ಗೀತಾರ್ಥಂ ವಕ್ಷ್ಯಾಮಿ' ಎಂದು ಆಚಾರ್ಯರು ಹೇಳಿದಾಗ ಶಕ್ತಿತಃ ಎಂಬ ಪದದ ಬದಲಾಗಿ ಲೇಶತಃ ಎಂಬ ಪದವನ್ನು ಸೇರಿಸಿರಿ ಎಂದು ನಾರಾಯಣ ಮುನಿಗಳು ಅಪ್ಪಣೆ ಮಾಡಿದರು. ಅನಂತರ ಆಚಾರ್ಯರು ಶಿಷ್ಯರಿಗೆ ಪಾಠ ಹೇಳುತ್ತಾ ಇದ್ದಾಗ ಶಿಷ್ಯರು ಆಯಾಸದಿಂದ ನಿದ್ದೆಮಾಡಲಾರಂಭಿಸಿದರು. ಪ್ರತಿಮಾಸನ್ನಿಹಿತನಾದ ಹರಿಯು ಭೂಮಿಯನ್ನು ತಟ್ಟಿ 'ಪಾಠಹೇಳಿರಿ, ನಾನೇ ಕೇಳುತ್ತಿದ್ದೇನೆ' ಎಂದು ಹೇಳಿದಾಗ ಶಿಷ್ಯರೂ ಆ ಶಬ್ದವನ್ನು ಕೇಳಿ ಎದ್ದು ಕುಳಿತರು. ಆಚಾರ್ಯರು ಬದರೀನಾರಾಯಣನ ಎದುರು ಪುನಃ ಶಿಷ್ಯರಿಗೆ ಗೀತಾಭಾಷ್ಯವನ್ನು ಪಾಠಹೇಳಿದರು. ಬದರಿಯಲ್ಲಿ ಅವರು ಶೀತಲಗಂಗೆಯಲ್ಲಿ ಅರುಣೋದಯದಲ್ಲಿ ಸ್ನಾನಮಾಡುತ್ತಿದ್ದರು. ಒಂದು-ಮಂಡಲ (ನಲವತ್ತು ದಿನಗಳು) ಪರ್ಯಂತವಾಗಿ ಕಾಷ್ಠಮೌನಸಹಿತಉಪವಾಸವ್ರತವನ್ನು ಆಚರಿಸುತ್ತಾ ಶ್ರೀಮನ್ನಾರಾಯಣನ ಧ್ಯಾನದಲ್ಲಿ ಮಗ್ನರಾದರು. ಒಂದುದಿನ ರಾತ್ರಿ ದೊಡ್ಡಬದರಿಯಲ್ಲಿರುವ ವೇದವ್ಯಾಸರು ತೇಜೋರೂಪದಿಂದ ಬಂದು ತಮ್ಮ ಆಶ್ರಮಕ್ಕೆ ಬರಲು ಹೇಳಿದರು. ಆಚಾರ್ಯರು ಮೌನವಾಗಿದ್ದುದರಿಂದ ತಮ್ಮ ಉಪದೇಶ

Rarest Archiver

ಮತ್ತು ತಾನು ಗುರುಗಳ ಬಳಿಗೆ ಹೋಗುವ ವಿಷಯವನ್ನು ಬರವಣಿಗೆಯು ಮೂಲಕ ಶಿಷ್ಯರಿಗೆ ತಿಳಿಸಿ ಅರುಣೋದಯಕ್ಕಿಂತ ಪೂರ್ವದಲ್ಲಿಯೇ ವ್ಯಾಸಾಶ್ರಮಕ್ಕೆ ಪ್ರಯಾಣ ಬೆಳೆಸಿದರು. 'ಬದರೀಸ್ಥಳ, ಈ ತೀರ್ಥ, ವಿಷ್ಣು, ನಮ್ಮ ಮಾತು ಇವುಗಳಿಗೆ ಸರಿಯಾದುದು ಮತ್ತೊಂದಿಲ್ಲ. ಗುರುಗಳನ್ನು ನೋಡಲು ಹೋಗುತ್ತಿರುವ ನಾವು ಎಂದು ಬರುತ್ತೇವೆ, ಬರುತ್ತೇವೆಯೋ ಇಲ್ಲವೋ ಎಲ್ಲವೂ ಅವರಿಗೇ ತಿಳಿದಿದೆ. ನಿಮಗೆ ಮಂಗಳವಾಗಲಿ' ಎಂದು ಬರೆದರು. ಶಿಷ್ಯರು ಅವರ ವಿರಹದಿಂದ ಕೊರಗಿದರು. ಸತ್ಯತೀರ್ಥರೆಂಬ ಒಬ್ಬರು ಅವರನ್ನು ಹಿಂಬಾಲಿಸಿದರು. ಸಾಯಂಕಾಲದವರೆಗೂ ಹಿಂಬಾಲಿಸಿ ಕೊನೆಗೆ ವೇಗವಾಗಿ ಹೋಗುತ್ತಿರುವ ಅವರನ್ನು ಅನುಸರಿಸಲಾರದೆ ಆಚಾರ್ಯರು ಕೈಬೀಸಿದ ಗಾಳಿಗೆ ಅವರು ಚಿಕ್ಕಬದರಿಗೆ ಬಂದು ಸೇರಿ ಜತೆಯವರಿಗೆ ತನಗೆ ತಿಳಿದ ಆಚಾರ್ಯರ ಪ್ರಯಾಣದ ಅದ್ಭುತವನ್ನು ಬಣ್ಣಿಸಿದರು. ಅತ್ತ ಆಚಾರ್ಯರು ವೇಗವಾಗಿ ಹೋಗುತ್ತಾ ನಾರಾಯಣನಂತೆಯೇ ಇರುವ ಹಿಮಾಲಯವನ್ನು ಕಂಡು ಭಕ್ತ್ಯುದ್ರೇಕದಿಂದ ಹಿಮಾಲಯವೆಂಬ ಹೆಸರಿನ ಶ್ರೀಹರಿಯನ್ನು ಧ್ಯಾನಿಸಿದರು.

ಅನುವಾದ

ಐತರೇಯಮಥ ಕಿಂಚನ ಸೂಕ್ತಂ
ಸೂಚಯನ್ ಸದಸಿ ತತ್ರ ಗರಿಷ್ಠಃ ।
ಶ್ರೋತುಮಿಚ್ಛತಿ ಸಭಾ ಭಗವದ್ಭ್ಯಃ
ಸೂಕ್ತಭಾವಮಿತಿ ತಾವದುವಾಚ ॥೧॥

ಅ.ಅ.—ಅಥ = ಶ್ರೀಮಧ್ವಾಚಾರ್ಯರನ್ನು ನೋಡಿದ ತರುವಾಯ, ತತ್ರ ಸದಸಿ = ಆ ಸಭೆಯಲ್ಲಿ, ಗರಿಷ್ಠಃ = ಶ್ರೇಷ್ಠನಾದ ಒಬ್ಬ ವಿದ್ವಾಂಸನು, ಐತರೇಯಂ = ಐತರೇಯಶಾಖೆಯ, ಕಿಂಚನ = ಯಾವುದೋ ಒಂದು, ಸೂಕ್ತಂ = ಮಂತ್ರಭಾಗವನ್ನು, ಸೂಚಯನ್ = ಸೂಚಿಸುತ್ತಾ, 'ಸಭಾ = ಈ ಸದಸ್ಸು (ಸಭೆಯಲ್ಲಿರುವ ಜನರು) ಭಗವದ್ಭ್ಯಃ = ಪೂಜ್ಯರಾದ ತಮ್ಮಿಂದ, ಸೂಕ್ತಭಾವಂ = ಈ ಸೂಕ್ತದ ಅಭಿಪ್ರಾಯವನ್ನು, ಶ್ರೋತುಂ ಇಚ್ಛತಿ ತಾವತ್ = ಕೇಳಲು

Rarest Archiver

ಅಪೇಕ್ಷಿಸುತ್ತಿದೆ. (ಕೇಳಲು ಬಯಸುತ್ತಾರೆ), ಇತಿ = ಹೀಗೆಂದು, ಉವಾಚ = ಹೇಳಿದನು.

ತಾ.—ಆಚಾರ್ಯರು ಪಯಸ್ವಿನೀತೀರದ ದೇವಾಲಯದಲ್ಲಿ ಸೇರಿದ ಪಂಡಿತರ ಸಭೆಯಲ್ಲಿ ಕುಳಿತರು. ಅನಂತರ ಅಲ್ಲಿ ಸೇರಿದ ಸಭೆಯಲ್ಲಿ ಒಬ್ಬ ಪಂಡಿತ ಶ್ರೇಷ್ಠನು ಐತರೇಯಶಾಖೆಯ ಒಂದು ಸೂಕ್ತವನ್ನು ಸೂಚಿಸಿ–'ಪರಮಪೂಜ್ಯರಾದ ಆಚಾರ್ಯರೇ! ಈ ಸಭೆಯಲ್ಲಿ ಸೇರಿದ ಜನರು ಈ ಸೂಕ್ತದ ಅಭಿಪ್ರಾಯವನ್ನು ತಮ್ಮ ಮೂಲಕ ತಿಳಿಯಲು ಬಯಸುತ್ತಿದ್ದಾರೆ. ದಯವಿಟ್ಟು ಇದರ ಅರ್ಥವನ್ನು ಹೇಳೋಣವಾಗಬೇಕು.' ಎಂದನು.

ವಿ.—ಅತಿಶಯೇನ ಗುರುಃ ಗರಿಷ್ಠಃ, ಭಗಃ ಏಷಾಂ ಅಸ್ತೀತಿ ಭಗವಂತಃ ತೇಭ್ಯಃ, ಸೂಕ್ತಸ್ಯ ಭಾವಃ ಸೂಕ್ತಭಾವಃ ತಂ.

ಕ್ರಿ.—ಇಚ್ಛತಿ ಇಚ್ಛತಃ ಇಚ್ಛಂತಿ ಇತ್ಯಾದಿ ಇಷ (ಇಚ್ಛ್) ಇಚ್ಛಾಯಾಂ to wish ಸಕ. ಪರ. ಲಟ್. ಉವಾಚ (ಸರ್ಗ ೫ ಶ್ಲೋ ೧೭ ನೋಡಿರಿ.)

ವೃತ್ತ—ಇಲ್ಲಿ ಸ್ವಾಗತಾ ವೃತ್ತ, ಸ್ವಾಗತೇತಿ ರನಭಾದ್ ಗುರುಯುಗ್ಮಂ–ಎಂದು ಅದರ ಲಕ್ಷಣ.

ಅವ.—ಆಗ ಆಚಾರ್ಯರ ವೇದೋಚ್ಚಾರಣೆಯ ವೈಖರಿ ಹೇಗಿತ್ತು—

ವರ್ಣಸೌಷ್ಠವಗರಿಷ್ಠಮತೂರ್ಣಂ
ತುಲ್ಯಮಾತ್ರಮತಿಮಾತ್ರಸುಲಕ್ಷ್ಮ।
ವ್ಯೂಢಹೃಜ್ಜಲದಘೋಷಮಮುಷ್ಯೋ
ಚ್ಚಾರಣಂ ವಿದಧದಭ್ಯಧಿತಾರ್ಥಮ್ ॥೨॥

ಅ.ಅ.—ವ್ಯೂಢಹೃತ್ = ಶ್ರೀಪೂರ್ಣಪ್ರಜ್ಞಾಚಾರ್ಯರು, ವರ್ಣ = ಅಕ್ಷರಗಳ, ಸೌಷ್ಠವ=ಸ್ಪಷ್ಟತೆಯಿಂದ, ಗರಿಷ್ಠಂ=ಅತ್ಯುತ್ತಮವಾಗಿ, ಅತೂರ್ಣಂ = ಅವಸರವಿಲ್ಲದಹಾಗೆ, ತುಲ್ಯಮಾತ್ರಂ=ಆಯಾ ಅಕ್ಷರಗಳ ಉಚ್ಚಾರಣೆಗೆ ಯೋಗ್ಯವಾದ ಮಾತ್ರೆಗಳುಳ್ಳ ಹಾಗೆ, ಅತಿಮಾತ್ರಸುಲಕ್ಷ್ಮ= ಅತಿಶಯವಾಗಿ ಒಳ್ಳೆಯ ಲಕ್ಷಣವುಳ್ಳದ್ದಾಗಿ, ಜಲದಘೋಷಂ = ಮೋಡದ ಶಬ್ದವುಳ್ಳಹಾಗೆ,

Rarest Archive

ಉಚ್ಚಾರಣಂ = ಉಚ್ಚಾರಣೆಯನ್ನು, ವಿದಧತ್ = ಮಾಡುತ್ತಾ, ಅಮುಷ್ಯ = ಈ ಐತರೇಯಸೂಕ್ತದ, ಅರ್ಥಂ = ಅರ್ಥವನ್ನು, ಅಭ್ಯಧಿತ = ಹೇಳಿದರು.

ತಾ.—ಆಚಾರ್ಯರು ಬಹಳ ಚೆನ್ನಾಗಿ ಸ್ಪಷ್ಟವಾಗಿ ಐತರೇಯಸೂಕ್ತದ ಅಕ್ಷರಗಳನ್ನು ಉಚ್ಚರಿಸಿದರು, ಅವಸರವಿಲ್ಲದ ಹಾಗೆ ಹ್ರಸ್ವದೀರ್ಘಪ್ಲುತಅಕ್ಷರಗಳ ಉಚ್ಚಾರಣೆಗೆ ಬೇಕಾದ ಮಾತ್ರೆಗಳನ್ನು ಅನುಸರಿಸಿ, ಸುಲಕ್ಷಣದಿಂದ ಮೇಘಗಂಭೀರಧ್ವನಿಯಿಂದ ಆ ಸೂಕ್ತವನ್ನು ಪೂರ್ತಿಯಾಗಿ ಹೇಳಿ ಅನಂತರ ಅದರ ಅರ್ಥವನ್ನು ವಿವರಿಸಿ ಹೇಳಿದರು.

ವಿ.—ಸುಷ್ಠು ಭಾವಃ ಸೌಷ್ಠವಂ, ವರ್ಣಾನಾಂ ಸೌಷ್ಠವಂ ವರ್ಣ-ಸೌಷ್ಠವಂ, ವರ್ಣಸೌಷ್ಠವೇನ ಗರಿಷ್ಠಂ ಯಥಾ ಭವತಿ ತಥಾ ವರ್ಣಸೌಷ್ಠವ-ಗರಿಷ್ಠಂ (ಕ್ರಿ.ವಿ.) ತೂರ್ಣಂ ಯಥಾ ನ ಭವತಿ ತಥಾ ಅತೂರ್ಣಂ (ಕ್ರಿ. ವಿ.) ತುಲ್ಯಾ ಮಾತ್ರಾ ಯಥಾ ಭವತಿ ತಥಾ ತುಲ್ಯಮಾತ್ರಂ, (ಕ್ರಿ.ವಿ). ಅತಿಮಾತ್ರಂ ಸುಲಕ್ಷ್ಮ ಯಥಾ ಭವತಿ ತಥಾ ಅತಿಮಾತ್ರಸುಲಕ್ಷ್ಮ (ಕ್ರಿ.ವಿ) ವ್ಯೂಢಂ ಹೃತ್ ಯಸ್ಯ ಸಃ ವ್ಯೂಢಹೃತ್, ಜಲದಸ್ಯ ಘೋಷ ಇವ ಘೋಷಃ ಯಥಾ ಭವತಿ ತಥಾ ಜಲದಘೋಷಂ; (ಏಕಮಾತ್ರೋ ಭವೇದ್ ಹ್ರಸ್ವಃ ದ್ವಿಮಾತ್ರೋ ದೀರ್ಘ ಉಚ್ಯತೇ। ತ್ರಿಮಾತ್ರಸ್ತು ಪ್ಲುತೋ ಜ್ಞೇಯಃ ವ್ಯಂಜನಂ ತ್ವರ್ಧ-ಮಾತ್ರಕಂ॥ ಅ ಇ ಉ ಋ ಲೃ ಹ್ರಸ್ವಗಳು ಇವುಗಳಿಗೆ ಒಂದು ಮಾತ್ರೆ ಉಚ್ಚಾರಣಕಾಲ, ಆ ಈ ಊ ಇತ್ಯಾದಿ ದೀರ್ಘಗಳಿಗೆ ಎರಡು ಮಾತ್ರೆಗಳು ಉಚ್ಚಾರಣಕಾಲ, ಪ್ಲುತಕ್ಕೆ ಅ ೩ ಇತ್ಯಾದಿ ಅಕ್ಷರಗಳಿಗೆ ಮೂರುಮಾತ್ರೆ-ಕ್ ಖ್ ಇತ್ಯಾದಿ ವ್ಯಂಜನಗಳಿಗೆ ಅರ್ಧಮಾತ್ರೆ. ಮಾತ್ರೆ = ಸೂಕ್ಷ್ಮವಾದ ಉಚ್ಚಾರಣಕಾಲ)

ಕ್ರಿ.—ಅಭಿ+ಅಧಿತ ಅಧಿಷಾತಾಂ ಅಧಿಷತ, ಅಧಿಥಾಃ ಅಧಿಷಾಥಾಂ ಅಧಿಢ್ವಂ, ಅಧಿಷಿ ಅಧಿಷ್ವಹಿ ಅಧಿಷ್ಮಹಿ. ಡುಧಾಞ್ (ಧಾ) ಧಾರಣಪೋಷಣ-ಯೋಃ ಸಕ. ಅನಿ. ಉಭ. to bear, to produce. ಲಙ್.

ಅವ.—ಆ ಪಂಡಿತರು ಆಚಾರ್ಯರು ಹೇಳಿದ ಸೂಕ್ತಾರ್ಥವು ಸರಿಯಲ್ಲ ಎಂದರು—

Rarest Archive

ಲಕ್ಷಣಾನ್ವಿತತಯಾ ವಚನೇಽಸ್ಮಿನ್
ದೇವತಾಗುರುಮಸಾವತಿಶೇತೇ ।
ಮಾನಮಿತ್ಯಪಿ ವಿಧಾಯ ಧಿಯಾ ತೇ
ತತ್ತು ಸೂಕ್ತಮಪರಾರ್ಥಮವೋಚನ್ ॥೩॥

ಅ. ಅ.—ತೇ = ಆ ಬ್ರಾಹ್ಮಣಶ್ರೇಷ್ಠರು 'ಅಸೌ=ಈ ಮಧ್ವಾಚಾರ್ಯರು, ಲಕ್ಷಣಾನ್ವಿತತಯಾ=ವೇದೋಚ್ಚಾರಣೆಯ ಲಕ್ಷಣಗಳಿಂದ ಕೂಡಿರುವುದರಿಂದ, ಅಸ್ಮಿನ್ ವಚನೇ = ಈ ಮಾತಿನಲ್ಲಿ, ದೇವತಾಗುರುಂ=ದೇವತೆಗಳ ಗುರುಗಳಾದ ಬೃಹಸ್ಪತ್ಯಾಚಾರ್ಯರನ್ನು, ಅತಿಶೇತೇ = ಮೀರಿಸುತ್ತಾರೆ.' ಇತಿ = ಹೀಗೆಂದು, ಧಿಯಾ = ಮನಸ್ಸಿನಿಂದ, ಮಾನಂ = ಗೌರವವನ್ನು, ವಿಧಾಯ ಅಪಿ = ಮಾಡಿದರೂ, ತತ್ ಸೂಕ್ತಂ ತು = ಆ ಸೂಕ್ತವನ್ನಾದರೋ, ಅಪರಾರ್ಥಂ = ಬೇರೆ ಅರ್ಥವುಳ್ಳದ್ದನ್ನಾಗಿ, ಅವೋಚನ್ = ಹೇಳಿದರು.

ತಾ.—'ಈ ಮಧ್ವಾಚಾರ್ಯರು ಲಕ್ಷಣಸಹಿತವಾಗಿ ವೇದೋಚ್ಚಾರಣ ಮಾಡಿ ಅದರ ಅರ್ಥವನ್ನು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಈ ವಿಷಯದಲ್ಲಿ ಇವರು ದೇವಗುರುವಾದ ಬೃಹಸ್ಪತ್ಯಾಚಾರ್ಯರನ್ನು ಮೀರಿಸುತ್ತಾರೆ.' ಆ ಬ್ರಾಹ್ಮಣರು ಮನಸ್ಸಿನಿಂದಲೇ ಶ್ರೀಮಧ್ವಾಚಾರ್ಯರನ್ನು ಈರೀತಿ ಗೌರವಿಸಿದರು. ಆದರೆ ಅಸೂಯೆಯಿಂದ ತಮ್ಮ ಪ್ರತಿಷ್ಠೆಯನ್ನು ಬಿಡಲಾರದೆ ಈ ಸೂಕ್ತಕ್ಕೆ ನೀವು ಹೇಳಿದ ಅರ್ಥವು ಸರಿಯಲ್ಲ, ಬೇರೊಂದು ಅರ್ಥವಿದೆ ಎಂದು ಹೇಳಿ ಆ ಸೂಕ್ತಕ್ಕೆ ತಮ್ಮ ಅರ್ಥವನ್ನು ಹೇಳಿದರು.

ವಿ.—ಲಕ್ಷಣೇನ ಅನ್ವಿತಂ ಲಕ್ಷಣಾನ್ವಿತಂ ಲಕ್ಷಣಾನ್ವಿತಸ್ಯ ಭಾವಃ ಲಕ್ಷಣಾನ್ವಿತತಾ ತಯಾ, ದೇವತಾನಾಂ ಗುರುಃ ದೇವತಾಗುರುಃ ತಂ, ಅಪರಃ ಅರ್ಥಃ ಯಸ್ಯ ತತ್ ಅಪರಾರ್ಥಂ ತತ್ ;

ಕ್ರಿ.—ಅತಿ + ಶೇತೇ ಶಯಾತೇ ಶೇರತೇ, ಶೇಷೇ ಶಯಾಥೇ ಶೇಧ್ವೇ, ಶಯೇ ಶೇವಹೇ ಶೇಮಹೇ ; ಅತಿ ಉಪಸರ್ಗ, ಶೀಙ್ ಸ್ವಪ್ನೇ, ಅಕ. ಸೇಟ್ । ಆತ್ಮ. to sleep ; to lie down ಲಟ್. ಅವೋಚತ್ ಅವೋಚತಾಂ ಅವೋಚನ್, ಅವೋಚಃ ಅವೋಚತಂ ಅವೋಚತ, ಅವೋಚಂ ಅವೋಚಾವ

Rarest Archiver

ಅವೋಚಾಮ ; ಬ್ರೂಞ್ ವ್ಯಕ್ತಾಯಾಂ ವಾಚಿ ಸಕ. ಸೇಟ್ ವಚಿ (ಚ್) ಆದೇಶ. ಅನಿಟ್. ಉಭ. to speak clearly ಲುಙ್.

ಅವ.—ವೇದಗಳಿಗೆ ಮೂರು, ಭಾರತದ ಒಂದೊಂದು ಶ್ಲೋಕಕ್ಕೆ ಹತ್ತು, ಸಹಸ್ರನಾಮದ ಒಂದೊಂದು ಶಬ್ದಕ್ಕೆ ನೂರು ಅರ್ಥಗಳಿವೆಯೆಂದು ಮಧ್ವಾಚಾರ್ಯರು ಹೇಳಿದರು.

ಸ್ಯಾತ್ತಥೇತ್ಥಮಪಿ ಸಂಭವಿತಾರ್ಥ
ಸ್ತ್ರ್ಯರ್ಥತಾಂ ಶ್ರುತಿಷು ವಿತ್ತ ದಶಾರ್ಥಂ।
ಭಾರತಂ ನನು ಶತಾರ್ಥಮಪಿ ಸ್ಯಾ-
ದ್ವೈಷ್ಣವಂ ಪದಸಹಸ್ರತಯಂ ಹಿ ॥೪॥

ಅ.ಅ—(ಹೇವಿದ್ವಾಂಸಃ)=ಎಲೈ ಪಂಡಿತರೇ! ಶ್ರುತಿಷು=ವೇದಗಳಲ್ಲಿ, ತ್ರ್ಯರ್ಥತಾಂ=ಮೂರು ಅರ್ಥವುಳ್ಳತನವನ್ನು, ಭಾರತಂ=ಮಹಾಭಾರತವನ್ನು, ದಶಾರ್ಥಂ=ಹತ್ತು ಅರ್ಥವುಳ್ಳದ್ದನ್ನಾಗಿ, ವಿತ್ತ=ತಿಳಿಯಿರಿ. ವೈಷ್ಣವಂ= ವಿಷ್ಣುವಿಗೆ ಸಂಬಂಧಪಟ್ಟಿರುವ, ಪದಸಹಸ್ರತಯಂ=ಪದಗಳ ಒಂದು ಸಾವಿರದ ರಾಶಿಯು, ಶತಾರ್ಥಂ ಅಪಿ=ನೂರುಅರ್ಥವುಳ್ಳದ್ದೂ, ಸ್ಯಾತ್ ನನು=ಆಗಿಯೇ ಇರುತ್ತದೆಯಷ್ಟೆ! ಹಿ=ಯಾವ ಕಾರಣದಿಂದ, ಅರ್ಥಃ=ನೀವು ಕೇಳಿದ ಈ ಸೂಕ್ತಾರ್ಥವು, ತಥಾ = ನಾವು ಹೇಳಿದ ಹಾಗೆ, ಸ್ಯಾತ್ = ಆಗಬಹುದು. ಇತ್ಥಂ ಅಪಿ=ನೀವು ಹೇಳಿದ ಹಾಗೆಯೂ, ಸಂಭವಿತಾ=ಆಗಬಹುದು.

ತಾ.—'ಪಂಡಿತರೇ! ವೇದಗಳಿಗೆ ಮೂರು ಅರ್ಥಗಳಿವೆ. ಭಾರತದ ಪ್ರತಿಯೊಂದು ಶ್ಲೋಕಕ್ಕೂ ಹತ್ತು ಅರ್ಥಗಳಿವೆ. ವಿಷ್ಣುವಿನ ಗುಣಗಳನ್ನು ಬೋಧಿಸುವ ವಿಷ್ಣುಸಹಸ್ರನಾಮದ ಒಂದೊಂದು ಪದಕ್ಕೂ ನೂರು ಅರ್ಥ ಗಳಿವೆ. ಆದುದರಿಂದ ನೀವು ಕೇಳಿದ ಸೂಕ್ತಕ್ಕೆ ನಾವು ಹೇಳಿದ ಅರ್ಥವೂ ಕೂಡುತ್ತದೆ'.

ವಿ.—ತ್ರಯಃ ಅರ್ಥಾಃ ಯಸ್ಯ ಸಃ ತ್ರ್ಯರ್ಥಃ, ತಸ್ಯ ಭಾವಃ ತ್ರ್ಯರ್ಥತಾ ತಾಂ, ದಶ ಅರ್ಥಾಃ ಯಸ್ಯ ತತ್ ದಶಾರ್ಥಂ ತತ್, ಶತಂ ಅರ್ಥಾಃ ಯಸ್ಯ ತತ್

ಶತಾರ್ಥಂ, ವಿಷ್ಣೋಃ ಇದಂ ವೈಷ್ಣವಂ, ಸಹಸ್ರಂ ಅವಯವಾಃ ಯಸ್ಯ ತತ್ ಸಹಸ್ರತಯಂ, ಪದಾನಾಂ ಸಹಸ್ರತಯಂ ಪದಸಹಸ್ರತಯಂ.

ಕ್ರಿ.—ಸ್ಯಾತ್ ಸ್ಯಾತಾಂ ಸ್ಯುಃ, ಸ್ಯಾಃ ಸ್ಯಾತಂ ಸ್ಯಾತ, ಸ್ಯಾಂ ಸ್ಯಾವ ಸ್ಯಾಮ. ಅಸ ಭುವಿ ಅಕ. । ಸೇಟ್. ಪರ. to be. ವಿಧಿಲಿಙ್. ಸಂ+ಭವಿತಾ ಭವಿತಾರೌ ಭವಿತಾರಃ, ಭವಿತಾಸಿ ಭವಿತಾಸ್ಥಃ ಭವಿತಾಸ್ಥ, ಭವಿತಾಸ್ಮಿ ಭವಿತಾಸ್ವಃ ಭವಿತಾಸ್ಮಃ, ಸಂ ಉಪ. ಭೂ ಸತ್ತಾಯಾಂ, ಅಕ. ಸೇಟ್. ಪರ. ಅನದ್ಯತನ ಭವಿಷ್ಯತಿ ಲುಟ್. ವೇತ್ತು ವಿತ್ತಾತ್ ವಿತ್ತಾಂ ವಿದಂತು, ವಿದ್ಧಿ ವಿತ್ತಾತ್ ವಿತ್ತಂ ವಿತ್ತ, ವೇದಾನಿ ವೇದಾವ, ವೇದಾಮ, ವಿದ ಜ್ಞಾನೇ ಸಕ. ಸೇಟ್ ಪರ. to know ; to regard. ಲೋಟ್.

ಅವ.—'ವಿಷ್ಣುಸಹಸ್ರನಾಮದ ಒಂದೊಂದು ಪದಕ್ಕೂ ನೂರು ಅರ್ಥಗಳಿವೆಯೇ ? ಹಾಗಾದರೆ ಹೇಳಿರಿ–' ಎಂದು ಆ ಪಂಡಿತರು ಹೇಳಿದರು.

ಇತ್ಯುದೀರಯತಿ ವಿಸ್ತೃತಚಿತ್ತೇ
 ಭೂಸುರಾ ಇಹ ಜಿಗೀಷವ ಏನಂ ।
ಊಚುರರ್ಥಶತಕಂ ಹರಿನಾಮ್ನಾಂ
 ವರ್ಣ್ಯತಾಮಿತಿ ಸಹಾಸಮುಖಾಸ್ತೇ ॥೫॥

ಅ.ಅ.—ವಿಸ್ತೃತಚಿತ್ತೇ = ವಿಸ್ತಾರವಾದ ಬುದ್ಧಿಯುಳ್ಳ ಶ್ರೀಮಧ್ವಾಚಾರ್ಯರು, ಇತಿ ಉದೀರಯತಿ (ಸತಿ) ಹೀಗೆ ಹೇಳುತ್ತಿರಲಾಗಿ, ತೇ ಭೂಸುರಾಃ = ಆ ಬ್ರಾಹ್ಮಣರು, ಇಹ = ಈ ವಿಷಯದಲ್ಲಿ, ಏನಂ = ಇವರನ್ನು, ಜಿಗೀಷವಃ = ಜಯಿಸಲು ಇಚ್ಛೆ ಉಳ್ಳವರಾಗಿ, ಸಹಾಸಮುಖಾಃ (ಸಂತಃ) = ನಗುಸಹಿತವಾದ ಮುಖವುಳ್ಳವರಾಗಿ, (ನಗುತ್ತಾ) ಹರಿನಾಮ್ನಾಂ = ವಿಷ್ಣುನಾಮಗಳಿಗೆ, ಅರ್ಥಶತಕಂ = ಅರ್ಥಗಳ ನೂರು (ನೂರು ಅರ್ಥಗಳು) ವರ್ಣ್ಯತಾಂ ಇತಿ = ವರ್ಣಿಸಲ್ಪಡಲಿ ಎಂದು, ಊಚುಃ = ಹೇಳಿದರು.

ತಾ.—ಶ್ರೀಮಧ್ವಾಚಾರ್ಯರು ವಿಷ್ಣುಸಹಸ್ರನಾಮದ ಒಂದೊಂದು ನಾಮಪದಕ್ಕೂ ನೂರು ನೂರು ಅರ್ಥಗಳಿವೆ ಎಂದು ಹೇಳಿದಾಗ–ಆ ಪಂಡಿತರು 'ಈ ಮಧ್ವಾಚಾರ್ಯರು ನೂರು ಅರ್ಥಗಳನ್ನು ಹೇಳಲಾರದೆ ಸೋತುಹೋಗುವರು'

Rarest Archive

ಎಂದು ಆಲೋಚಿಸಿ ಆಚಾರ್ಯರನ್ನು ಜಯಿಸಲು ಅಪೇಕ್ಷಿಸಿ, ನಗುತ್ತಾ 'ವಿಶ್ವ' ಮೊದಲಾದ ವಿಷ್ಣುನಾಮಗಳಿಗೆ ನೂರು ಅರ್ಥಗಳನ್ನು ತಾವು ಹೇಳಬೇಕು' ಎಂದು ಹೇಳಿದರು.

ವಿ.—ವಿಸ್ತೃತಂ ಚಿತ್ತಂ ಯಸ್ಯ ಸಃ ತಸ್ಮಿನ್, ಜೇತುಂ ಇಚ್ಛವಃ ಜಿಗೀಷವಃ, ಶತಸ್ಯ ಸಮೂಹಃ ಶತಕಂ, ಅರ್ಥಾನಾಂ ಶತಕಂ ಅರ್ಥಶತಕಂ ತತ್, ಹರೇಃ ನಾಮಾನಿ ಹರಿನಾಮಾನಿ ತೇಷಾಂ, ಹಾಸೇನ ಸಹಿತಂ ಸಹಾಸಂ, ಸಹಾಸಂ ಮುಖಂ ಯೇಷಾಂ ತೇ ಸಹಾಸಮುಖಾಃ.

ಕ್ರಿ.—ಊಚುಃ (ನೋಡಿರಿ ಸರ್ಗ ೫ ಶ್ಲೋ. ೨೦) ವರ್ಣ್ಯತಾಂ ವರ್ಣ್ಯೇತಾಂ ವರ್ಣ್ಯಂತಾಂ, ವರ್ಣ್ಯಸ್ವ ವರ್ಣ್ಯೇಥಾಂ ವರ್ಣ್ಯಧ್ವಂ, ವರ್ಣ್ಯೈ ವರ್ಣ್ಯಾವಹೈ ವರ್ಣ್ಯಾಮಹೈ. ವರ್ಣ ವರ್ಣಕ್ರಿಯಾವಿಸ್ತಾರಗುಣವಚನೇಷು, ಸಕ. ಸೇಟ್. ಉಭ. ಲೋಟ್. ಕರ್ಮಣಿ to paint ; to explain ; to extol.

ಅನ.—'ನಾನು ನೂರು ಅರ್ಥಗಳನ್ನು ಹೇಳುತ್ತೇನೆ, ನೀವು ಆ ಅರ್ಥಗಳನ್ನು ಸರಿಯಾಗಿ ಅನುವಾದಿಸಬೇಕು' ಎಂದು ಆಚಾರ್ಯರು ಹೇಳಿದರು—

ವರ್ಣಯಾಮಿ ತದಹಂ ಸಕಲಂ ವಃ
ಸೌಷ್ಠವಾದನುವದಂತು ಭವಂತಃ ।
ತಂ ವದಂತಮಿತಿ ತೇಽಥ ವದಂತೋ
ಬಾಢಮಿತ್ಯತಿದೃಢೋದ್ಯಮಮಾಪುಃ ॥೬॥

ಅ.ಅ.—ಅಹಂ = ನಾನು, ತತ್ ಸಕಲಂ = ಅದೆಲ್ಲವನ್ನೂ, ವಃ = ನಿಮಗೆ, ವರ್ಣಯಾಮಿ = ವರ್ಣಿಸುತ್ತೇನೆ, ಭವಂತಃ = ನೀವು, ಸೌಷ್ಠವಾತ್ = ಸ್ಪಷ್ಟತೆಯಿಂದ, ಅನುವದಂತು ಇತಿ = ಅನುವಾದ ಮಾಡಿರಿ ಎಂದು, ವದಂತಂ ತಂ = ಹೇಳುತ್ತಿರುವ ಆ ಆಚಾರ್ಯರನ್ನು ಕುರಿತು, ಅಥ = ಅನಂತರ, ತೇ = ಆ ಪಂಡಿತರು, ಬಾಢಂ ಇತಿ = ಹಾಗೆಯೇ ಆಗಲಿ ಎಂದು, ವದಂತಃ = ಹೇಳುತ್ತಾ, ಅತಿದೃಢ = ಅತ್ಯಂತ ಸ್ಥಿರವಾದ, ಉದ್ಯಮಂ = ಪ್ರಯತ್ನವನ್ನು, ಆಪುಃ = ಹೊಂದಿದರು.

Rarest Archiver

ತಾ.—'ನಾನು ಒಂದೊಂದು ವಿಷ್ಣುನಾಮದ ನೂರು ಅರ್ಥಗಳನ್ನು ವರ್ಣಿಸುತ್ತೇನೆ, ಅನಂತರ ನೀವು ನಾನು ಹೇಳಿದ ಅರ್ಥಗಳನ್ನು ಸ್ಪಷ್ಟವಾಗಿ ಹೇಳಬೇಕು'. ಆಚಾರ್ಯರು ಈ ರೀತಿ ಹೇಳಿದಾಗ ಆ ಪಂಡಿತರು—'ಹಾಗೆಯೇ ಆಗಲಿ' ಎಂದು ಹೇಳಿ ಆಚಾರ್ಯರು ಹೇಳಿದ ಅರ್ಥಗಳನ್ನೆಲ್ಲಾ ಅನುವಾದ ಮಾಡುವುದಕ್ಕಾಗಿ ಸಾವಧಾನವಾಗಿ ಕೂತುಕೊಂಡು ಕೇಳಿ, ಮನಸ್ಸಿನಲ್ಲಿ ಇಟ್ಟು ಕೊಂಡು ಪ್ರಬಲವಾದ ಪ್ರಯತ್ನವನ್ನು ಮಾಡಲಾರಂಭಿಸಿದರು.

ವಿ.—ಸುಷ್ಠು ಭಾವಃ ಸೌಷ್ಠವಂ ತಸ್ಮಾತ್, ಅತಿದೃಢಶ್ಚಾಸೌ ಉದ್ಯಮಶ್ಚ ಅತಿದೃಢೋದ್ಯಮಃ ತಂ.

ಕ್ರಿ.—ವರ್ಣಯತಿ ವರ್ಣಯತಃ ವರ್ಣಯಂತಿ ಇತ್ಯಾದಿ. ವರ್ಣ ವರ್ಣಕ್ರಿಯಾವಿಸ್ತಾರವಚನೇಷು ಧಾತು. ಲಟ್. ಅನು + ವದಂತು, ವದತು ವದತಾತ್, ವದತಾಂ ವದಂತು, ವದ ವದತಾತ್, ವದತಂ ವದತ, ವದಾನಿ ವದಾವ ವದಾಮ. ಅನು ಉಪಸರ್ಗ, ವದ ವ್ಯಕ್ತಾಯಾಂ ವಾಚಿ. ಸಕ. ಸೇಟ್. ಪರ. to speak ಲೋಟ್. ಅಪುಃ–ಸರ್ಗ ೬ ಶ್ಲೋ ೫೦ ನೋಡಿರಿ.

ಅವ.—ಆಚಾರ್ಯರು ಶಾಸ್ತ್ರಾನುಸಾರವಾಗಿ ವಿಶ್ವಶಬ್ದದ ನೂರು ಅರ್ಥಗಳನ್ನು ಹೇಳಿದರು—

ಪ್ರತ್ಯಯಪ್ರಕೃತಿಸಂಗಮಭಂಗೀಂ
ಶಬ್ದಶಾಸ್ತ್ರವಿಹಿತಾಂ ಪ್ರತಿದರ್ಶ್ಯ ।
ಶುದ್ಧಧೀಃ ಶ್ರುತಿಶಿರಃಶತಸಿದ್ಧಾ-
ನಭ್ಯಧಾತ್ ಸಪದಿ ವಿಶ್ವಪದಾರ್ಥಾನ್ ॥೭॥

ಅ. ಅ.—ಶುದ್ಧಧೀಃ = ಶುದ್ಧವಾದ ಮನಸ್ಸುಳ್ಳ ಶ್ರೀಮಧ್ವಾಚಾರ್ಯರು, ಸಪದಿ = ಕೂಡಲೇ, ಶ್ರುತಿಶಿರಶ್ಶತ = ನೂರಾರು ಉಪನಿಷತ್ತುಗಳಲ್ಲಿ, ಸಿದ್ಧಾನ್ = ನಿರ್ಣೀತವಾದ, ವಿಶ್ವಪದಾರ್ಥಾನ್ = ವಿಶ್ವ ಎಂಬ ವಿಷ್ಣುಸಹಸ್ರನಾಮದ ಮೊದಲನೆ ಶಬ್ದದ ಅರ್ಥಗಳನ್ನು, ಶಬ್ದಶಾಸ್ತ್ರವಿಹಿತಾಂ = ವ್ಯಾಕರಣಶಾಸ್ತ್ರದಿಂದ ವಿಧಿಸಲ್ಪಟ್ಟ, ಪ್ರತ್ಯಯ = ಪ್ರತ್ಯಯ, ಪ್ರಕೃತಿ = ಶಬ್ದದ ಮೂಲಸ್ವರೂಪ ಇವು

Rarest Archiver

ಗಳ, ಸಂಗಮಭಂಗೀಂ = ಸಂಬಂಧದ ರೀತಿಯನ್ನು, ಪ್ರತಿದರ್ಶ್ಯ = ತೋರಿಸಿ, ಅಭ್ಯಧಾತ್ = ಹೇಳಿದರು.

ತಾ.—ಶ್ರೀಪೂರ್ಣಪ್ರಜ್ಞರು ಕೂಡಲೇ ವಿ ಷ್ಣು ಸ ಹ ಸ್ರ ನಾ ಮ ದ ಮೊದಲನೆಯ ವಿಶ್ವ ಎಂಬ ಶಬ್ದವನ್ನು ತೆಗೆದುಕೊಂಡರು. ಅದರಲ್ಲಿರುವ ವಿಶ್ ಎಂಬ ಧಾತುಪ್ರಕೃತಿಯನ್ನೂ ವ ಎಂಬ ಪ್ರತ್ಯಯವನ್ನೂ ಬಿಡಿಸಿ ತೋರಿಸಿದರು. ಇನ್ನೂ ಅನೇಕರೀತಿಯಲ್ಲಿ ವಿ ಮತ್ತು ಶ್ವ ಎಂದು ಶಬ್ದಗಳನ್ನು ಬಿಡಿಸಿ, ಮತ್ತೂ ಅನೇಕ ರೀತಿಯಿಂದ ವ್ಯಾಕರಣವನ್ನು ಅನುಸರಿಸಿ ವ್ಯುತ್ಪತ್ತಿಯನ್ನು ಹೇಳಿ ಅನೇಕ ಉಪನಿಷತ್ತುಗಳ ಸ್ಮೃತಿಗಳ ಆಧಾರಗಳನ್ನು ಕೊಟ್ಟು ವಿಶ್ವಶಬ್ದಕ್ಕೆ ಅನೇಕ ಅರ್ಥಗಳನ್ನು ಹೇಳಿದರು.

೧) ವಿಶ ಪ್ರವೇಶನೇ ಎಂಬ ಧಾತು, ಅದಕ್ಕೆ ವ ಪ್ರತ್ಯಯ ಆಗ ವಿಶತಿ ಪ್ರವೇಶಿಸುತ್ತಾನೆ-ಎಂಬ ಅರ್ಥವನ್ನು ವಿಶ್ವಶಬ್ದವು ಕೊಡುತ್ತದೆ. ೨) ವಿಶ್ ಮತ್ತು ಪಾ ಎಂಬ ಎರಡು ಧಾತುಗಳು, ಇವುಗಳಿಂದ ಹುಟ್ಟಿದ ವಿಶ್ವಶಬ್ದಕ್ಕೆ ಜಗತ್ತಿನಲ್ಲಿ ಪ್ರವಿಷ್ಟನಾಗಿದ್ದು ಜ್ಞಾನರೂಪನಾಗಿರುವವನು ಎಂದು ಅರ್ಥವಾಗುತ್ತದೆ. ೩) ವಿನಾ ಗರುಡೇನ ಶ್ವಯತಿ ಗಚ್ಛತೀತಿ ವಿಶ್ವಂ ಗರುಡನ ಮೂಲಕ ಸಂಚರಿಸುವವನು ಎಂದು ಅರ್ಥ. ೪) ವಿಶೇಷೇಣ ಶ್ವಯತಿ ಪ್ರಾಪ್ನೋತಿ ಎಂಬ ವ್ಯುತ್ಪತ್ತಿಯಿಂದ ಎಲ್ಲಾ ವಸ್ತುಗಳನ್ನೂ ವಿಶೇಷವಾಗಿ ಹೊಂದುವವನು ವಿಶ್ವ. ೫) ವಿಶೇಷೇಣ ಶ್ವಯತಿ ವರ್ಧತೇ ಇತಿ ವಿಶ್ವಂ ವಿಶೇಷವಾಗಿ ವೃದ್ಧಿ ಹೊಂದುವವನು. ೬) ವಿಶ್ವಂ ವಾಯುಂ ಅಂತರ್ಯಾಮಿತಯಾ ವರ್ತಯತೀತಿ ವಿಶ್ವಂ. ವಾಯುವಿನಲ್ಲಿ ಅಂತರ್ಯಾಮಿಯಾಗಿರುವವನು. ೭) ವಿಶ್ವಂ ಜಗತ್ ವರ್ತಯತೀತಿ ವಿಶ್ವಂ, ಜಗತ್ತಿಗೆ ಪ್ರವರ್ತಕನು. ಹೀಗೆ ಐವತ್ತಕ್ಕೂ ಹೆಚ್ಚು ಅರ್ಥಗಳನ್ನು ಆಚಾರ್ಯರು-ಹೇಳಿದರು.

ವಿ.—ಪ್ರತ್ಯಯಶ್ಚ ಪ್ರಕೃತಿಶ್ಚ ಪ್ರತ್ಯಯಪ್ರಕೃತೀ, ಪ್ರತ್ಯಯಪ್ರಕೃತ್ಯೋಃ ಸಂಗಮಃ ಪ್ರತ್ಯಯಪ್ರಕೃತಿಸಂಗಮಃ, ತಸ್ಯ ಭಂಗೀ ತಾಂ, ಶಬ್ದಶಾಸ್ತ್ರೇ ವಿಹಿತಾ ಶಬ್ದಶಾಸ್ತ್ರವಿಹಿತಾ ತಾಂ, ಶುದ್ಧಾ ಧೀಃ ಯಸ್ಯ ಸಃ ಶುದ್ಧಧೀಃ, ಶ್ರುತೀನಾಂ ಶಿರಾಂಸಿ ಶ್ರುತಿಶಿರಾಂಸಿ, ಶ್ರುತಿಶಿರಸಾಂ ಶತಂ ಶ್ರುತಿಶಿರಃಶತಂ, ಶ್ರುತಿಶಿರಃಶತೇ

Rarest Archive

ಸಿದ್ಧಾಃ ಶ್ರುತಿಶಿರಃಶತಸಿದ್ಧಾಃ ತಾನ್, ವಿಶ್ವಂ ಇತಿ ಪದಂ ವಿಶ್ವಪದಂ, ವಿಶ್ವ ಪದಸ್ಯ ಅರ್ಥಾಃ ವಿಶ್ವಪದಾರ್ಥಾಃ ತಾನ್.

ಕ್ರಿ.—ಅಭಿ + ಅಧಾತ್–ಸರ್ಗ ೫ ಶ್ಲೋ ೪೧ ನೋಡಿರಿ.

ಅನ.—ಆಚಾರ್ಯರು ಐವತ್ತಕ್ಕೂ ಮೇಲ್ಪಟ್ಟು ವಿಶ್ವಶಬ್ದದ ಅರ್ಥ ವನ್ನು ಹೇಳುತ್ತಿರಲು, ಆ ಪಂಡಿತರು ಅದನ್ನೆಲ್ಲಾ ಮನಸ್ಸಿನಲ್ಲಿ ಧಾರಣೆ ಮಾಡು ವಷ್ಟು ಶಕ್ತಿ ಸಾಲದೆ ಕಂಗೆಟ್ಟರು—

ಯಾವದರ್ಥಶತಕಂ ನ ವಿಶಂಕಃ (ಕಂ)
ಸಂತತೋಕ್ತಿಕೃದಪೂಪುರ(ರಯು)ದೇಷಃ ।
ವರ್ಣಿತಾವಧೃತಿದುರ್ಬಲಚಿತ್ತಾ
ಸ್ತಾವದಾಕುಲಹೃದೋ ಹ್ಯಭವಂಸ್ತೇ ॥೮॥

ಅ.ಅ.—ವಿಶಂಕಃ = ಸಂದೇಹವಿಲ್ಲದ, (ವಿಶಂಕಂ = ಸಂದೇಹವಿಲ್ಲದ–ಹಾಗೆ) ಸಂತತೋಕ್ತಿಕೃತ್ = ಎಡೆಬಿಡದೆ ಅರ್ಥವನ್ನು ಹೇಳುತ್ತಿರುವ, ಏಷಃ = ಈ ಶ್ರೀಮಧ್ವಾಚಾರ್ಯರು, ಯಾವತ್ = ಎಷ್ಟರಲ್ಲಿ, ಅರ್ಥಶತಕಂ = ನೂರು ಅರ್ಥಗಳನ್ನು, ನ ಅಪೂಪು(ರಯು)ತ್ = ಪೂರ್ತಿಗೊಳಿಸಲಿಲ್ಲವೋ, ತಾವತ್ = ಅಷ್ಟರಲ್ಲಿ, ವರ್ಣಿತ = ವಿವರಿಸಲ್ಪಟ್ಟ ಅರ್ಥಗಳ, ಅವಧೃತಿ = ಧರಿಸುವುದರಲ್ಲಿ, ದುರ್ಬಲ = ಶಕ್ತಿ ಇಲ್ಲದ, ಚಿತ್ತಾಃ = ಮನಸ್ಸುಳ್ಳ, ತೇ = ಆ ಪಂಡಿತರು, ಆಕುಲ-ಹೃದಃ = ಗಾಬರಿಗೊಂಡ ಮನಸ್ಸುಳ್ಳವರು, ಅಭವನ್ = ಆದರು.

ತಾ.—ಆಚಾರ್ಯರಿಗೆ ಸಭೆಯಲ್ಲಿ, ಅಥವಾ ಎಲ್ಲೇ ಆಗಲಿ ಸ್ವಲ್ಪವೂ ಸಂಶಯ ಗಾಬರಿಗಳು ಇರುತ್ತಿರಲಿಲ್ಲ. ಅವರು ಸಂದೇಹವಿಲ್ಲದೆ ಎಡೆಬಿಡದೆ ಉಪನ್ಯಾಸರೂಪದಿಂದ ವಿಶ್ವಶಬ್ದದ ನೂರು ಅರ್ಥಗಳನ್ನು ಹೇಳಿ ಪೂರೈಸುವುದರ ಒಳಗಾಗಿಯೇ ಆ ಪಂಡಿತರಿಗೆ ಆಚಾರ್ಯರು ಹೇಳಿದ ಎಲ್ಲಾ ವಿಷಯಗಳನ್ನು ಮನಸ್ಸಿನಲ್ಲಿ ಧರಿಸುವ ಶಕ್ತಿಯು ಸಾಲದೆ ಹೋಯಿತು. ಅವರು ಮುಂದೇನು ಮಾಡಬೇಕೆಂದು ತಿಳಿಯದೆ ಗಾಬರಿಯಾದರು ಮತ್ತು ಭ್ರಾಂತರಾದರು. ಆಚಾರ್ಯರ ಮುಖದಿಂದ ತಡೆಯಿಲ್ಲದೆ ವಿಶ್ವಶಬ್ದಾರ್ಥಗಳು ಗಂಗಾಪ್ರವಾಹ ದಂತೆ ಹೊರಡುತ್ತಿರಲು ಅದನ್ನು ತಿಳಿದು ಮನಸ್ಸಿನಲ್ಲಿ, ಧರಿಸಿ ಅನುವಾದ

ಮಾಡಲು ಆ ಪಂಡಿತರು ಅಶಕ್ತರಾದರು. ಆದುದರಿಂದ ಗಾಬರಿಗೊಂಡರು ಎಂದು ಭಾವ.

ವಿ.—ವಿಗತಾ ಶಂಕಾ ಯಸ್ಮಾತ್ ಸಃ ವಿಶಂಕಃ, (ವಿಗತಾ ಶಂಕಾ ಯಥಾ ಭವತಿ ತಥಾ ವಿಶಂಕಂ ಕ್ರಿ. ವಿ.) ಅರ್ಥಾನಾಂ ಶತಕಂ ಅರ್ಥಶತಕಂ ತತ್, ಸಂತತಂ ಉಕ್ತಿಂ ಕರೋತೀತಿ ಸಂತತೋಕ್ತಿಕೃತ್, ವರ್ಣಿತಸ್ಯ ಅವಧೃತಿಃ ವರ್ಣಿತಾವಧೃತಿಃ, ವರ್ಣಿತಾವಧೃತೌ ದುರ್ಬಲಂ ಚಿತ್ತಂ ಯೇಷಾಂತೇ ವರ್ಣಿತಾವಧೃತಿದುರ್ಬಲಚಿತ್ತಾಃ, ಆಕುಲಂ ಹೃತ್ ಯೇಷಾಂ ತೇ ಆಕುಲಹೃದಃ ।

ಕ್ರಿ.—ಅಪೂಪುರತ್ ಅಪೂಪುರತಾಂ ಅಪೂಪುರನ್ ಇತ್ಯಾದಿ, ಅಥವಾ ಅಪೂರಯತ್ ಅಪೂರಯತಾಂ ಅಪೂರಯನ್ ಇತ್ಯಾದಿ. ಪೂರೀ ಆಪ್ಯಾಯನೇ, (ಪೂರ್) ಸಕ. ಸೇಟ್. ಉಭ. to fill, to flow, to cover. ಲುಙ್. ಲಙ್.

ಅವ.—ಅವರೆಲ್ಲರೂ ಪ್ರಕಾಂಡಪಂಡಿತರಾಗಿದ್ದರೂ ಆಚಾರ್ಯರು ಹೇಳಿದ ಅರ್ಥಗಳನ್ನು ತಿಳಿಯಲು ಮತ್ತು ಅವಧರಿಸಲು ಅಶಕ್ತರಾದರು ಎಂಬುದು ಯುಕ್ತವಾಗಿದೆ ಮತ್ತು ಆಶ್ಚರ್ಯಕರವೂ ಆಗಿದೆ—

ಸಾಂಗವೇದಚತುರಾ ಇತಿಹಾಸೇ
ಶಿಕ್ಷಿತಾಃ ಸುಬಹವೋಽಪ್ಯತಿಧೃಷ್ಟಾಃ ।
ನೈತದೀರಿತಮಹೋ ಜಗೃಹುಸ್ತೇ
ವಿಶ್ವಸಂಕ್ಷಯಪಯೋಽಂಧುಗಣಾ ವಾ ॥೯॥

ಅ. ಅ.—ಸಾಂಗವೇದಚತುರಾಃ = ಆರು ಅಂಗಗಳಿಂದ ಸಹಿತವಾದ ವೇದಗಳಲ್ಲಿ ಕುಶಲರಾದ, ಇತಿಹಾಸೇ = ಭಾರತಾದಿಇತಿಹಾಸಗಳಲ್ಲಿ, ಶಿಕ್ಷಿತಾಃ = ಪ್ರವೀಣರಾದ, ಸುಬಹವಃ = ಬಹುಸಂಖ್ಯಾಕರಾದ, ಅತಿಧೃಷ್ಟಾಃ ಅಪಿ = ಅತಿಶಯವಾಗಿ ಧೈರ್ಯವಂತರಾದಾಗ್ಯೂ, ತೇ = ಆ ಪಂಡಿತರು, ಅಂಧುಗಣಾಃ = ಭಾವಿಗಳ ಸಮೂಹಗಳು, ವಿಶ್ವಸಂಕ್ಷಯಪಯಃ ವಾ = ಪ್ರಳಯಕಾಲದ ನೀರನ್ನೋಪಾದಿಯಲ್ಲಿ, ಏತದೀರಿತಂ = ಶ್ರೀಮಧ್ವಾಚಾರ್ಯರಿಂದ ಉಕ್ತವಾದ ವಿಶ್ವಶಬ್ದಾರ್ಥವಿವರಣೆಯನ್ನು, ನ ಜಗೃಹುಃ = ಗ್ರಹಿಸಲಿಲ್ಲ. ಅಹೋ ! = ಆಶ್ಚರ್ಯ !

Rarest Archive

ತಾ.—ಆ ಸಭೆಯಲ್ಲಿ ಸೇರಿದ್ದ ಬ್ರಾಹ್ಮಣರೆಲ್ಲರೂ ಶಿಕ್ಷಾದಿಷಡಂಗಗಳಿಂದ ಸಹಿತವಾದ ವೇದಗಳಲ್ಲಿ ಪಂಡಿತರಾಗಿದ್ದರು. ಭಾರತಾದಿಇತಿಹಾಸಪುರಾಣಗಳನ್ನು ಬಲ್ಲವರಾಗಿದ್ದರು. ಹೆಚ್ಚೇನು ? ಸಕಲವಿದ್ಯೆಗಳಲ್ಲಿಯೂ ಪ್ರವೀಣರಾಗಿದ್ದರು. ತುಂಬಾ ಧೈರ್ಯವಂತರು, ಸಭಾಕಂಪಇಲ್ಲದವರು, ಇಂತಹವರು ಬಹಳ ಮಂದಿ ಕೂಡಿದ್ದರು. ಆದರೂ ಅವರು ಶ್ರೀಪೂರ್ಣಪ್ರಜ್ಞರು ಹೇಳಿದ ವಿಶ್ವಪದಾರ್ಥದ ಶಾಸ್ತ್ರಾನುಸಾರಿಯಾದ ಅರ್ಥವಿಸ್ತರವನ್ನು ಪೂರ್ಣವಾಗಿ ತಿಳಿಯಲು ಮತ್ತು ಅವಧರಿಸಲು ಅಸಮರ್ಥರಾದುದು ಆಶ್ಚರ್ಯವೇ ಸರಿ. ಆದರೆ ಇದು ಯುಕ್ತವೂ ಆಗಿದೆ. ಭಾವಿಗಳು ಲೆಕ್ಕವಿಲ್ಲದಷ್ಟಿದ್ದರೂ ಎಷ್ಟು ದೊಡ್ಡದಾಗಿದ್ದರೂ ಪ್ರಳಯ ಕಾಲದ ನೀರನ್ನು ತುಂಬಿಕೊಳ್ಳಲಾರವಷ್ಟೆ ! ಆದರಂತೆ ಆ ಪಂಡಿತರು ಎಷ್ಟು ಮಂದಿ ಇದ್ದರೂ ಎಷ್ಟು ಸಮರ್ಥರಾಗಿದ್ದರೂ ಆಚಾರ್ಯರು ಹೇಳಿದ್ದನ್ನೆಲ್ಲಾ ಗ್ರಹಿಸಲು ಮತ್ತು ಅವಧರಿಸಲು ಅಸಮರ್ಥರಾದರೆಂಬುದು ಯುಕ್ತವೇ ಸರಿ.

ವಿ.—ಅಂಗೈಃ ಸಹಿತಾಃ ಸಾಂಗಾಃ, ಸಾಂಗಾಶ್ಚ ತೇ ವೇದಾಶ್ಚ ಸಾಂಗವೇದಾಃ, ಸಾಂಗವೇದೇಷು ಚತುರಾಃ ಸಾಂಗವೇದಚತುರಾಃ, ಏತೇನ ಈರಿತಂ ಏತದೀರಿತಂ, ವಿಶ್ವಸ್ಯ ಸಂಕ್ಷಯಃ ಯಸ್ಮಿನ್ ಸಃ ವಿಶ್ವಸಂಕ್ಷಯಃ ತಸ್ಯ ಪಯಃ ವಿಶ್ವಸಂಕ್ಷಯಪಯಃ ತತ್, ಅಂಧೂನಾಂ ಗಣಾಃ ಅಂಧುಗಣಾಃ, ಅಂಧು = ಭಾವಿ, ಪುಂಸ್ಯೇವಾಂಧುಃ ಪ್ರಹಿಃ ಕೂಪಃ ಉದಪಾನಂ ತು ಪುಂಸಿ ವಾ— ಅಮರ.

ಕ್ರಿ.—ಜಗ್ರಾಹ ಜಗೃಹತುಃ ಜಗೃಹುಃ, ಜಗ್ರಹಿಥ ಜಗೃಹಥುಃ ಜಗೃಹ, ಜಗ್ರಾಹ ಜಗ್ರಹ ಜಗೃಹಿವ ಜಗೃಹಿಮ. ಗ್ರಹ ಉಪಾದಾನೇ (ಗೃಹ್) ಸಕ. ಸೇಟ್. ಉಭ. to take hold of, to seize, to understand. ಲಿಟ್.

ಅವ.—ಆ ಪಂಡಿತರು ಸೋತು ಆಚಾರ್ಯರಲ್ಲಿ ಕ್ಷಮೆಯನ್ನು ಪ್ರಾರ್ಥಿಸಿದರು—

ದೇವತಾಸ್ವಸುಲಭಾ ಪ್ರತಿಭಾ ತೇ
ಮಾನುಷೇಷು ಚಪಲೇಷು ಕಥಾ ಕಾ ।

Rarest Archiver

ಕ್ಷಾಮ್ಯ ಸೌಮ್ಯ ! ಸಕಲಜ್ಞ ! ನಮಸ್ತೇ
ತೇ ಬ್ರುವಂತ ಇತಿ ತಂ-ಕಿಲ ನೇಮುಃ ॥೧೦॥

ಅ.ಅ.—'ತೇ=ನಿಮ್ಮ, ಪ್ರತಿಭಾ = ಬುದ್ಧಿಪ್ರಕಾಶವು (ತತ್ಕಾಲದಲ್ಲಿ ಸ್ಫುರಿಸುವ ಜ್ಞಾನವು), ದೇವತಾಸು=ದೇವತೆಗಳಲ್ಲಿ, ಅಸುಲಭಾ = ದುರ್ಲಭವಾದುದು (ದೊರೆಯಲಾರದು) (ಏವಂ ಸತಿ = ಹೀಗಿರಲಾಗಿ) ಚಪಲೇಷು= ಚಂಚಲಚಿತ್ತರಾದ, ಮಾನುಷೇಷು=ಮನುಷ್ಯರಲ್ಲಿ, ಕಾ ಕಥಾ=ಏನು ಮಾತು? (ಏನು ಹೇಳತಕ್ಕದ್ದು, ಇಲ್ಲವೆಂತ ಹೇಳಬೇಕೆ?) ಹೇ ಸೌಮ್ಯ=ಎಲೈ ಸುಂದರ ಮೂರ್ತಿಯೇ!, ಹೇ ಸಕಲಜ್ಞ=ಓ ಸರ್ವಜ್ಞರೆ! ಕ್ಷಾಮ್ಯ=ಕ್ಷಮಿಸಿರಿ. ತೇ ನಮಃ=ನಿಮಗೆ (ಗೋಸ್ಕರ) ನಮಃ=ನಮಸ್ಕಾರವು' ಇತಿ=ಹೀಗೆಂದು, ಬ್ರುವಂತಃ = ಹೇಳುತ್ತಿರುವ, ತೇ = ಆ ಪಂಡಿತರು, ತಂ=ಆ ಶ್ರೀಮಧ್ವಾಚಾರ್ಯರನ್ನು, ನೇಮುಃ ಕಿಲ=ನಮಸ್ಕರಿಸಿದರಂತೆ.

ತಾ.—'ಶ್ರೀಪೂರ್ಣಪ್ರಜ್ಞಾಚಾರ್ಯರೇ! ನಿಮ್ಮ ಈ ಅದ್ಭುತವಾದ ಬುದ್ಧಿಶಕ್ತಿಯು ದೇವತೆಗಳಲ್ಲಿಯೂ ದುರ್ಲಭವು. ಹೀಗಿದ್ದ ಮೇಲೆ ಚಂಚಲ ಸ್ವಭಾವದ ಮಾನವರಲ್ಲಿ ದುರ್ಲಭವೆಂದು ಹೇಳಬೇಕಾದುದೇನಿದೆ? ನಮ್ಮ ತಪ್ಪನ್ನು ಕ್ಷಮಿಸಿರಿ. ಸೌಮ್ಯ ಮೂರ್ತಿಗಳೇ! ನಿಮಗೆ ನಮಸ್ಕಾರ.' ಎಂದು ಹೇಳುತ್ತಾ ಆ ಸಭೆಯಲ್ಲಿ ಸೇರಿದ್ದ ಎಲ್ಲಾ ಪಂಡಿತರೂ ಶ್ರೀಮಧ್ವಾಚಾರ್ಯರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು.

ವಿ.—ಸುಖೇನ ಲಬ್ಧುಂ ಶಕ್ಯಾ ಸುಲಭಾ, ನ ಸುಲಭಾ ಅಸುಲಭಾ, ಸಕಲಂ ಜಾನಾತೀತಿ ಸಕಲಜ್ಞಃ ತಸ್ಯ ಸಂಬುದ್ಧಿಃ ಹೇ ಸಕಲಜ್ಞ!

ಕ್ರಿ.—ಕ್ಷಾಮ್ಯತು ಕ್ಷಾಮ್ಯತಾತ್ ಕ್ಷಾಮ್ಯತಾಂ ಕ್ಷಾಮ್ಯಂತು, ಕ್ಷಾಮ್ಯ ಕ್ಷಾಮ್ಯತಾತ್ ಕ್ಷಾಮ್ಯತಂ ಕ್ಷಾಮ್ಯತ, ಕ್ಷಾಮ್ಯಾಣಿ ಕ್ಷಾಮ್ಯಾವ ಕ್ಷಾಮ್ಯಾಮ. ಕ್ಷಮೂಷ್ ಸಹನೇ (ಕ್ಷಮ್) ಸಕ. ವೇಟ್. ಪರ. to suffer, to forgive, to endure. ಲೋಟ್. ನೇಮುಃ ಸರ್ಗ ೫ ಶ್ಲೋ ೩೦ ನೋಡಿರಿ.

Rarest Archiver

ಅನ.—ಪಯಸ್ವಿನೀನದಿಯ ಬಳಿ ಇನ್ನೊಂದು ದೇವಾಲಯಕ್ಕೆ ಆಚಾರ್ಯರು ಹೋದರು.

ವೇದಶಾಸ್ತ್ರಚತುರ್ಯೈರಿಹವಿದ್ಯಾ
ವಿತ್ತಲಿಪ್ಸುಭಿರವಾಪ್ತಮಶೇಷೈಃ।
ಪ್ರಾಪ ಕೇರಲಸುಮಂಡಲಜಾತೈ
ರನ್ಯದಾಯತನಮಾಯತಚೇತಾಃ ॥೧೧॥

ಸಂಭಾವನಾ ಸಭೆ

ಅ.ಅ.—ಆಯತಚೇತಾಃ=ವಿಶಾಲಮತಿಗಳಾದ ಶ್ರೀಮಧ್ವಾಚಾರ್ಯರು, ವೇದಶಾಸ್ತ್ರಚತುರ್ಯೈಃ = ವೇದ ಮತ್ತು ಶಾಸ್ತ್ರಗಳಲ್ಲಿ ಕುಶಲರಾದ, ವಿದ್ಯಾ = ಪಾಂಡಿತ್ಯಕ್ಕೆ ಕೊಡತಕ್ಕ, (ಪಾಂಡಿತ್ಯದಿಂದ) ವಿತ್ತ=ಹಣವನ್ನು, ಲಿಪ್ಸುಭಿಃ= ಹೊಂದುವ ಅಪೇಕ್ಷೆಯುಳ್ಳ, ಅಶೇಷೈಃ=ಎಲ್ಲಾ, ಕೇರಲಸುಮಂಡಲ=ಕೇರಳ ವೆಂಬ ಒಳ್ಳೆಯ ದೇಶದಲ್ಲಿ, ಜಾತೈಃ=ಹುಟ್ಟಿದ ವಿದ್ವಾಂಸರಿಂದ, ಅವಾಪ್ತಂ= ಹೊಂದಲ್ಪಟ್ಟ, ಇಹ=ಈ ಪಯಸ್ವಿನೀನದೀತೀರದಲ್ಲಿರುವ, ಅನ್ಯತ್ ಆಯತನಂ =ಬೇರೊಂದು ದೇವಾಲಯವನ್ನು, ಪ್ರಾಪ=ಸೇರಿದರು.

ತಾ.—ಕೇರಳದೇಶದಲ್ಲಿ ವೇದಶಾಸ್ತ್ರಗಳನ್ನು ತಿಳಿದಿರುವ ಅನೇಕ ಪಂಡಿತರಿದ್ದರು. ಅವರೆಲ್ಲರೂ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿ ವಿದ್ಯೆಯಿಂದ ದ್ರವ್ಯವನ್ನು ಸಂಪಾದಿಸುವುದಕ್ಕಾಗಿ ಪಯಸ್ವಿನೀನದೀತೀರದ ಒಂದು ದೇವಾಲಯದಲ್ಲಿ ಪ್ರತಿವರ್ಷ ಸಭೆಸೇರುವಂತೆ ಶ್ರೀಮಧ್ವಾಚಾರ್ಯರು ಅಲ್ಲಿಗೆ ಬರುವ ಸಮಯದಲ್ಲಿಯೂ ಸಭೆ ಸೇರಿದ್ದರು. ದೇವಾಲಯದಲ್ಲಿ ನಡೆಯುವ ಆ ಸಭೆಗೆ ಶ್ರೀಮಧ್ವಾಚಾರ್ಯರೂ ಹೋದರು.

ವಿ.—ವೇದಾಶ್ಚ ಶಾಸ್ತ್ರಾಣಿ ಚ ವೇದಶಾಸ್ತ್ರಾಣಿ, ವೇದಶಾಸ್ತ್ರೇಷು ಚತುರಾಃ ವೇದಶಾಸ್ತ್ರಚತುರಾಃ ತೈಃ, ವಿದ್ಯಯಾ ಲಭ್ಯಂ ವಿತ್ತಂ ವಿದ್ಯಾವಿತ್ತಂ, ತತ್ ಲಿಪ್ಸವಃ ವಿದ್ಯಾವಿತ್ತಲಿಪ್ಸವಃ ತೈಃ, ಶೋಭನಂ ಚ ತತ್ ಮಂಡಲಂ ಚ ಸುಮಂಡಲಂ, ಕೇರಲಾಃ ಇತಿ ಸುಮಂಡಲಂ ಕೇರಲಸುಮಂಡಲಂ, ತಸ್ಮಿನ್ ಜಾತಾಃ ತೈಃ, ಆಯತಂ ಚೇತಃ ಯಸ್ಯ ಸಃ ಆಯತಚೇತಾಃ

ಕ್ರಿ.—ಪ್ರಾಪ, ಪ್ರ+ಆಪ, (ಸರ್ಗ ೫ ಶ್ಲೋ ೫೦ ನೋಡಿರಿ)

Rarest Archiver

ಅವ.—ಶ್ರೀಮಧ್ವಾಚಾರ್ಯರನ್ನು ಕಂಡು ಅಲ್ಲಿದ್ದ ಪಂಡಿತರು ಆಲೋಚಿಸಿದರು—

ತರ್ಕತಂತ್ರಕುಶಲಾನಪಿ ಪುಂಸ
ಶ್ಚರ್ಕರೀತಿ ಬತ ಸೋಽಯಮಮಾನಾನ್ ।
ಮಾನಮಾನಮಯತೀಹ ಕಥಂ ನೋ
ಕೇರಳ ದೇಶ **ನೈಷ ಮಂಡಲಭುವಾಂ ಸಮಿತಾನಾಂ** ॥೧೨॥

ಅ.ಅ.—ಸೋಽಯಂ = ಪ್ರಸಿದ್ಧರಾದ ಈ ಮಧ್ವಾಚಾರ್ಯರು, ತರ್ಕ=ನ್ಯಾಯಶಾಸ್ತ್ರ, ತಂತ್ರ=ಮೀಮಾಂಸಾಶಾಸ್ತ್ರ, ಇವುಗಳಲ್ಲಿ ಕುಶಲಾನ್ ಸಮರ್ಥರಾದ, ಪುಂಸಃ ಅಪಿ= ಮನುಷ್ಯರನ್ನೂ, ಅಮಾನಾನ್=ಗರ್ವರಹಿತರನ್ನಾಗಿ (ಅಹಂಕಾರವಿಲ್ಲದವರನ್ನಾಗಿ), ಚರ್ಕರೀತಿ=ಅತಿಶಯವಾಗಿ ಮಾಡುತ್ತಾರೆ. ಬತ!=ಅಯ್ಯೋ, ಏಷಃ = ಈ ಮಧ್ವಾಚಾರ್ಯರು, ಇಹ=ಇಲ್ಲಿ, ಸಮಿತಾನಾಂ = ಒಟ್ಟುಸೇರಿರುವ, ಮಂಡಲಭುವಾಂ = ಕೇರಳದೇಶದಲ್ಲಿ, ಹುಟ್ಟಿರುವ, ನಃ=ನಮ್ಮ, ಮಾನಂ=ಅಹಂಕಾರವನ್ನು, ಕಥಂ = ಹೇಗೆ, ನ ಆನಮಯತಿ=ಮೊಟಕು ಮಾಡುವುದಿಲ್ಲ, (ಹೋಗಲಾಡಿಸುವುದಿಲ್ಲ ?)

ತಾ.—ಈ ಮಧ್ವಾಚಾರ್ಯರು ತರ್ಕಶಾಸ್ತ್ರದಲ್ಲಿಯೂ, ವೇದಾಂತಶಾಸ್ತ್ರದಲ್ಲಿಯೂ ಪಂಡಿತರಾದ ಜನರ ಅಹಂಕಾರವನ್ನು ಬಹಳ ಬೇಗನೇ ಖಂಡಿಸುತ್ತಾರೆ. ಅಯ್ಯೋ ! ಹೀಗಿದ್ದ ಮೇಲೆ ಈ ದೇವಾಲಯದಲ್ಲಿ ಕೂಡಿರುವ ಕೇರಳದೇಶದಲ್ಲಿ ಹುಟ್ಟಿರುವ ವಿದ್ವಾಂಸರೆಂದು ಪ್ರಖ್ಯಾತರಾಗಿರುವ ನಮ್ಮ ಅಹಂಕಾರವನ್ನು ಖಂಡಿಸದೆ ಬಿಡುತ್ತಾರೆಯೇ ? ತರ್ಕಮೀಮಾಂಸಾದಿಸಮಸ್ತಶಾಸ್ತ್ರಪಾರಂಗತರನ್ನೂ ಸ್ವಲ್ಪಹೊತ್ತಿನಲ್ಲಿಯೇ ಜಯಿಸತಕ್ಕ ಇವರು ಒಂದೊಂದು ವೇದದಲ್ಲಿ ಮತ್ತು ಶಾಸ್ತ್ರದಲ್ಲಿ ಪ್ರವೀಣರಾದ ನಮ್ಮನ್ನು ಗೆಲ್ಲುವುದರಲ್ಲಿ ಸಂಶಯವಿಲ್ಲವೆಂದು ಆಲೋಚಿಸಿದರು ಎಂದು ಭಾವ.

ವಿ.—ತರ್ಕಶ್ಚ ತಂತ್ರಂ ಚ ತರ್ಕತಂತ್ರೇ ತಯೋಃ ಕುಶಲಾಃ ತರ್ಕತಂತ್ರಕುಶಲಾಃ ತಾನ್, ನ ವಿದ್ಯತೇ ಮಾನಃ ಯೇಷಾಂ ತೇ ಅಮಾನಾಃ, ಮಂಡಲೇ ಭವಂತೀತಿ ಮಂಡಲಭುವಃ ತೇಷಾಂ,

Rarest Archives

ಕ್ರಿ.—ಚರ್ಕರೀತಿ ಚರಿಕರೀತಿ, ಚರೀಕರೀತಿ, ಚರ್ಕರ್ತಿ, ಚರಿಕರ್ತಿ, ಚರೀಕರ್ತಿ, ಚರ್ಕೃತಃ ಚರಿಕೃತಃ ಚರೀಕೃತಃ ಚರ್ಕ್ರತಿ ಚರಿಕ್ರತಿ ಚರೀಕ್ರತಿ ಇತ್ಯಾದಿ. ಡು (ಕೃ) ಞ್ ಕರಣೇ ಸಕ. । ಅನಿಟ್ । ಉಭ. । to do, to make ಯಙ್ಲುಗಂತ ಲಟ್. ಆ+ನಮಯತಿ ನಮಯತಃ ನಮಯಂತಿ ಇತ್ಯಾದಿ; ಣಮ ಪ್ರಹ್ವತ್ವೇ ಶಬ್ದೇ ಚ (ನಮ್) ಸಕ. ಅನಿ. to salute; to bow to. ಣಿಜಂತಾತ್ ಲಟ್.

ಅವ.—ಆಲೋಚಿಸಿ ಅವರು ಮಾಡಿದ ಉಪಾಯವೇನು ?

ಮಂತ್ರಯಂತ ಇತಿ ತೇ ದ್ವಿಜವರ್ಯಾಃ
ಅನ್ಯದೇಶಜಮುಖಾಸ್ತಮಪೃಚ್ಛನ್ ।
ಸದ್ದದಾದದಸುಶಂಸನನಿಂದಾಕಾರಿ
ಸೂಕ್ತಗತಮರ್ಥಮುಪೇತ್ಯ ॥೧೩॥

ಅ.ಅ.— ಇತಿ = ಹೀಗೆ, ಮಂತ್ರಯಂತಃ = ಆಲೋಚಿಸುತ್ತಿರುವ, ತೇ ದ್ವಿಜವರ್ಯಾಃ = ಆ ಬ್ರಾಹ್ಮಣಶ್ರೇಷ್ಠರು, ಅನ್ಯದೇಶಜ = ಬೇರೆ ದೇಶದಲ್ಲಿ ಹುಟ್ಟಿದವನು, ಮುಖಾಃ = ಮುಂಭಾಗದಲ್ಲಿ ಉಳ್ಳವರಾಗಿ, ತಂ = ಆ ಮಧ್ವಾಚಾರ್ಯರನ್ನು, ಉಪೇತ್ಯ = ಸಮೀಪಿಸಿ, ಸದ್ದದ = ಸತ್ಪಾತ್ರದಲ್ಲಿ ದಾನ ಮಾಡುವವನ, ಅದದ = ದಾನಕೊಡದಿರುವವನ, ಸುಶಂಸನ = ಚೆನ್ನಾಗಿರುವ ಹೊಗಳಿಕೆ, ನಿಂದಾ = ನಿಂದೆ ಇವುಗಳನ್ನು, ಕಾರಿ = ಮಾಡುವ, ಸೂಕ್ತಗತಂ = ಸೂಕ್ತದಲ್ಲಿರುವ, ಅರ್ಥಂ = ಅರ್ಥವನ್ನು, ಅಪೃಚ್ಛನ್ = ಕೇಳಿದರು.

ತಾ.—ನ ವಾ ಉ ದೇವಾಃ ಕ್ಷುಧಮಿದ್ವಧಂ ದದುರುತಾಶಿತಮುಪಗಚ್ಛಂತಿ ಮೃತ್ಯವಃ। ಇತ್ಯಾದಿಯಾಗಿ ಋಗ್ವೇದದಲ್ಲಿ ೮ನೇ ಅಷ್ಟಕ ೬ನೇ ಅಧ್ಯಾಯ ೩೩ನೇ ವರ್ಗದಲ್ಲಿ 'ನ ವಾ ಉ ದೇವಾಃ' ಎಂಬ ಸೂಕ್ತವಿದೆ. 'ಉತಾಪೃಣನ್ ಮರ್ಡಿತಾರಂ ನ ವಿಂದತೇ' ಅಪೃಣನ್ = ಸತ್ಪಾತ್ರದಲ್ಲಿ ದಾನ ಮಾಡದೆ ಇದ್ದವನು ಪಾಲಕನಾದ ಪರಮಾತ್ಮನನ್ನು ಹೊಂದುವುದಿಲ್ಲ. ಸ ಇದ್ಭೋಜೋ ಯೋ ಗೃಹವೇ ದದಾತ್ಯನ್ನಕಾಮಾಯ ಚರತೇ ಕೃಶಾಯ= ಅನ್ನಾರ್ಥಿಯಾಗಿ ಅಲ್ಲಲ್ಲಿ ಓಡಾಡುತ್ತಿದ್ದು, ತನ್ನ ಮನೆಗೆ ಅತಿಥಿಯಾಗಿ

Rarest Archiver

ಬಂದಿರುವ ಬಡವನಿಗೆ ಯಾವನು ಅನ್ನಾದಿಗಳನ್ನು ಕೊಡುತ್ತಾನೋ ಅವನೇ ಭೋಕ್ತಾ, ಊಟಮಾಡುವವನು ಎಂದು. ಅನ್ನದಾನ ಮಾಡುವವನ ಪ್ರಶಂಸೆ ಮತ್ತು ಅನ್ನದಾನ ಮಾಡದಿರುವವನ ನಿಂದೆಯನ್ನು ಈ ಸೂಕ್ತದಲ್ಲಿ ಹೇಳಿದೆ. ಅಲ್ಲಿ ಪೃಣೀಯಾದಿನ್ನಾಧಮಾನಾಯ ಎಂಬ ಭಾಗವೂ ಬರುತ್ತದೆ. ಒಂಭತ್ತು ಋಕ್‌ಗಳುಳ್ಳ ಆ ಸೂಕ್ತದ ಅರ್ಥವನ್ನು ಆಚಾರ್ಯರಿಂದ ಹೇಳಿಸಬೇಕೆಂದು ಆ ಪಂಡಿತರು ನಿರ್ಧರಿಸಿದರು.

ಹಿಂದೆ ಹೇಳಿದಂತೆ ಆಲೋಚನೆ ಮಾಡಿ ಆ ಕೇರಳದೇಶದ ಪಂಡಿತರಾದ ಬ್ರಾಹ್ಮಣಶ್ರೇಷ್ಠರು ಬೇರೆ ದೇಶದ ಪಂಡಿತನನ್ನು ಮುಂದಿಟ್ಟುಕೊಂಡು ಶ್ರೀಮಧ್ವಾಚಾರ್ಯರನ್ನು ಸಮೀಪಿಸಿ ಸತ್ಪಾತ್ರದಲ್ಲಿ ದಾನಮಾಡಿದವನನ್ನು ಹೊಗಳತಕ್ಕ ಮತ್ತು ದಾನಮಾಡದೇ ಇದ್ದವನನ್ನು ನಿಂದಿಸತಕ್ಕ ವೇದಸೂಕ್ತದ ಅರ್ಥವನ್ನು ಪ್ರಶ್ನಿಸಿದರು. ತಾವೇ ಪ್ರಶ್ನೆಮಾಡಿದರೆ ತಮ್ಮಲ್ಲಿ ಯಾರಾದರೊಬ್ಬನು ಸೋತರೂ ತಮ್ಮ ದೇಶಕ್ಕೆ ಅಪಕೀರ್ತಿ ಬರುವುದೆಂದು ದೇಶಾಂತರದ ಪಂಡಿತನನ್ನು ಮುಂದಿಟ್ಟುಕೊಂಡರು ಎಂದು ಅಭಿಪ್ರಾಯ.

ವಿ.—ದ್ವಿಜೇಷು ವರ್ಯಾಃ ದ್ವಿಜವರ್ಯಾಃ, ಅನ್ಯಶ್ಚಾಸೌ ದೇಶಶ್ಚ ಅನ್ಯದೇಶಃ, ಅನ್ಯದೇಶೇ ಜಾಯತ ಇತಿ ಅನ್ಯದೇಶಜಃ, ಅನ್ಯದೇಶಜ ಏವ ಮುಖಂ ಯೇಷಾಂ ತೇ ಅನ್ಯದೇಶಜಮುಖಾಃ. ದದಾತೀತಿ ದದಃ, ನ ದದಾತೀತಿ ಅದದಃ, ಸತ್ಸು ದದಾದದೌ ಸದ್ದದಾದದೌ, ಸುಶಂಸನಂ ಚ ನಿಂದಾ ಚ ಸುಶಂಸನನಿಂದೇ, ಸದ್ದದಾದದಯೋಃ ಸುಶಂಸನನಿಂದೇ ಸದ್ದದಾದದಸುಶಂಸನನಿಂದೇ, ತೇ ಕರೋತೀತಿ ಸದ್ದ....ಕಾರಿ, ತಚ್ಚ ತತ್ ಸೂಕ್ತಂ ಚ ಸದ್ದದಾ....ಸೂಕ್ತಂ, ತಸ್ಮಿನ್ ಗತಃ ಸದ್ದದದಾದದಸುಶಂಸನನಿಂದಾಕಾರಿಸೂಕ್ತಗತಃ ತಂ,

ಕ್ರಿ.—ಅಪೃಚ್ಛನ್, ಅಪೃಚ್ಛತ್ ಅಪೃಚ್ಛತಾಂ ಅಪೃಚ್ಛನ್, ಅಪೃಚ್ಛಃ ಅಪೃಚ್ಛತಂ ಅಪೃಚ್ಛತ, ಅಪೃಚ್ಛಂ ಅಪೃಚ್ಛಾವ ಅಪೃಚ್ಛಾಮ. ಪ್ರಚ್ಛ ಜ್ಞೀಪ್ಸಾಯಾಂ (ಪೃಚ್ಛ್) ಸಕ. । ಅನಿ । to ask. ಲಙ್.

ಅವ.—ಆ ಸೂಕ್ತಾರ್ಥವನ್ನು ಹೇಳುವಾಗ ನಡೆದ ವಿವಾದವನ್ನು ವಿವರಿಸುತ್ತಾರೆ.

Rarest Archiver

ತಂ ಸ್ಫುಟಂ ಪ್ರಕ(ಥ)ಟಯನ್ ಸ ಪೃಣೀಯಾ
ಚ್ಛಬ್ದಮೂಲಮವದತ್ ಪೃಣಧಾತುಂ।
ತಂ ಜಿಗೀಷುಮಥ ವಿಪ್ರಮದಃಪ್ರೀಙ್
ಧಾತುಮೇಷ ನಿಗದಂತಮುವಾಚ ॥೧೪॥

ಅ.ಅ.—ತಂ=ಪ್ರಸ್ತುತವಾದ ಆ ಸೂಕ್ತದ ಅರ್ಥವನ್ನು, ಸ್ಫುಟಂ= ಸ್ಪಷ್ಟವಾಗಿ, ಪ್ರಕ(ಟ)ಥಯನ್=(ಪ್ರಕಟಿಸುತ್ತಿರುವ) ಹೇಳುತ್ತಿರುವ, ಸಃ= ಆ ಮಧ್ವಾಚಾರ್ಯರು, ಪೃಣೀಯಾತ್=ಪೃಣೀಯಾತ್ ಎಂಬ, ಶಬ್ದ= ಶಬ್ದದ, ಮೂಲ=ಪ್ರಕೃತಿಯನ್ನು, ಪೃಣಧಾತುಂ = ಪೃಣ ದಾನೇ ಎಂಬ ಧಾತುವನ್ನಾಗಿ, ಅವದತ್=ಹೇಳಿದರು. ಅಥ=ಅನಂತರ, ಏಷಃ=ಈ ಮಧ್ವಾಚಾರ್ಯರು, ಜಿಗೀಷುಂ=(ತನ್ನನ್ನು) ಜಯಿಸಲು ಇಚ್ಛಿಸುವ, ಅದಃ =ಪೃಣೀಯಾತ್ ಎಂಬ ಶಬ್ದದ ಮೂಲವನ್ನು, ಪ್ರೀಙ್‌ಧಾತುಂ=ಪ್ರೀಙ್ ಪ್ರೀಣನೇ ಎಂಬ ಧಾತುವನ್ನಾಗಿ, ನಿಗದಂತಂ=ಹೇಳುತ್ತಿರುವ, ತಂ=ಆಬ್ರಾಹ್ಮಣ ನನ್ನು ಕುರಿತು, ಉವಾಚ = ಹೇಳಿದರು.

ತಾ.—ಶ್ರೀಮಧ್ವಾಚಾರ್ಯರು 'ನ ವಾ ಉ ದೇವಾ' ಎಂಬ ಸೂಕ್ತದ ಅರ್ಥವನ್ನು ಸ್ಪಷ್ಟವಾಗಿ ಹೇಳಿದರು. ಆ ಸೂಕ್ತದಲ್ಲಿ ಬರುವ 'ಪೃಣೀಯಾದಿನ್ನಾ-ಧಮಾನಾಯ' ಎಂಬಲ್ಲಿರುವ ಪೃಣೀಯಾತ್ ಎಂಬ ಕ್ರಿಯಾಪದಕ್ಕೆ 'ಪೃಣ-ದಾನೇ' ದಾನ ಎಂಬ ಅರ್ಥದಲ್ಲಿ ಬರುವ ಪೃಣಧಾತುವು ಮೂಲವಾಗಿದೆ ಎಂದು ಹೇಳಿದರು. ಆಗ ಆ ಪಂಡಿತನು ಶ್ರೀಮಧ್ವಾಚಾರ್ಯರನ್ನು ಗೆಲ್ಲಬೇಕೆಂದು ಬಯಸಿ 'ಪೃಣೀಯಾತ್' ಎಂಬ ಶಬ್ದಕ್ಕೆ ಮೂಲಧಾತುವು 'ಪ್ರೀಙ್ ಪ್ರೀಣನೇ' ಪ್ರೀತಿ ಎಂಬ ಅರ್ಥದಲ್ಲಿರುವ 'ಪ್ರೀ' ಧಾತುವು ಎಂದನು. ಆಗ ಆಚಾರ್ಯರು ಆ ಪಂಡಿತನನ್ನು ಕುರಿತು ಹೀಗೆಂದರು.

ವಿ.—ಪೃಣೀಯಾತ್ ಇತಿ ಶಬ್ದಃ ಪೃಣೀಯಾಚ್ಛಬ್ದಃ, ಪೃಣೀಯಾ-ಚ್ಛಬ್ದಸ್ಯ ಮೂಲಂ ಪೃಣೀಯಾಚ್ಛಬ್ದಮೂಲಂ, ತತ್. ಪೃಣ ಇತಿ ಧಾತುಃ ಪೃಣಧಾತುಃ, ಜೇತುಂ ಇಚ್ಛುಃ ಜಿಗೀಷುಃ ತಂ.

ಕ್ರಿ.—ಅವದತ್, ಸರ್ಗ ೫ ಶ್ಲೋಕ ೩೧. ನೋಡಿರಿ. ಉವಾಚ ಸರ್ಗ ೫ ಶ್ಲೋ ೧೭. ನೋಡಿರಿ.

Rarest Archiver

ಅವ. — ಆಚಾರ್ಯರು ಆ ಪಂಡಿತನನ್ನು ಕುರಿತು ಏನು ಹೇಳಿದರು ?

ಪ್ರಾದಿಭೇದಮವಿದನ್ ಗುಣಯ ತ್ವಂ
ಮೂಢ! ಪಾಂಸುಷು ಲಿಖನ್ ಲಿಪಿಸಂಘಮ್ ।
ಭರ್ತ್ಸಯನ್ನಿತಿ ಜಹಾಸ ಸುಹಾಸೋ
ಮತ್ಸರಾಕುಲಧಿಯೋ ಜಡಯನ್ ಸಃ ॥೧೫॥

ಅ.ಅ.—ಪ್ರಾದಿ = ಪ್ರ ಪ್ರಾ ಪ್ರಿ ಪ್ರೀ ಪ್ರು ಪ್ರೂ ಪೃ ಮೊದಲಾದವುಗಳ, ಭೇದಂ = ವ್ಯತ್ಯಾಸವನ್ನು. ಅವಿದನ್ = ತಿಳಿಯದಿರುವ, ಹೇ ಮೂಢ = ಎಲೈ ದಡ್ಡನೆ! ತ್ವಂ = ನೀನು, ಪಾಂಸುಷು = ಧೂಳುಗಳಲ್ಲಿ, ಲಿಪಿಸಂಘಂ ಅಕ್ಷರಗಳ ಸಮೂಹವನ್ನು, ಲಿಖನ್ = ಬರೆಯುತ್ತ, ಗುಣಯ = ಅಭ್ಯಾಸ ಮಾಡು. (ಉರು ಹೊಡೆ), ಇತಿ = ಹೀಗೆಂದು, ಭರ್ತ್ಸಯನ್ = ಗದರಿಸುತ್ತಾ ಇರುವ, ಸುಹಾಸಃ = ಒಳ್ಳೆಯ ನಗುವುಳ್ಳ, ಸಃ = ಆ ಮಧ್ವಾಚಾರ್ಯರು, ಮತ್ಸರಾಕುಲ = ಹೊಟ್ಟೆಕಿಚ್ಚಿನಿಂದ ಕಲುಷಿತವಾದ, ಧಿಯಃ = ಬುದ್ಧಿಯುಳ್ಳ ಆ ಕೇರಳದ ವಿದ್ವಾಂಸರನ್ನು, ಜಡಯನ್ = ಸ್ತಬ್ಧರನ್ನಾಗಿ ಮಾಡುತ್ತಾ, ಜಹಾಸ = ಅಪಹಾಸ ಮಾಡಿದರು.

ತಾ.—'ಎಲೈ ಮೂಢನೇ! ಪೃ ಎಂಬ ಅಕ್ಷರವು ಯಾವುದು? ಪ್ರೀ ಎಂಬ ಅಕ್ಷರವು ಯಾವುದು? ಎಂದು ಅಕ್ಷರಗಳ ಭೇದವೇ ನಿನಗೆ ತಿಳಿದಿಲ್ಲ. ಆದ್ದರಿಂದ ನೀನು ಪ್ರ ಪ್ರಾ ಪ್ರಿ ಪ್ರೀ ಪ್ರು ಪ್ರೂ ಪೃ ಇತ್ಯಾದಿ ಕಾಗುಣಿತಾಕ್ಷರಗಳನ್ನು ಧೂಳಿನಲ್ಲಿ (ಮರಳಿನಲ್ಲಿ) ಬರೆದು ತಿದ್ದಿ ಅಭ್ಯಾಸಮಾಡು. ಪೃ, ಪ್ರೀ ಎಂಬಲ್ಲಿ ಅಕ್ಷರಗಳ ಭೇದವೇ ನಿನಗೆ ತಿಳಿಯದೇ ಹೋಯಿತಲ್ಲವೇ? ಎಂದು ಅಬ್ಬರಿಸಿ ಹೊಟ್ಟೆಕಿಚ್ಚಿನಿಂದ ಕಲುಷಿತವಾದ ಬುದ್ಧಿಯುಳ್ಳ ಆ ಕೇರಳದೇಶದ ಪಂಡಿತರನ್ನು ಸ್ತಂಭೀಭೂತರನ್ನಾಗಿ ಮಾಡುತ್ತಾ ಆಚಾರ್ಯರು ಗಟ್ಟಿಯಾಗಿ ಅಪಹಾಸಮಾಡಿ ನಕ್ಕರು.

ಪ್ರಹಸತಿ ಪಶ್ಯತಿ ತಿರ್ಯಕ್ ಸಮಧಿಕರಕ್ತೇನ ಲೋಚನೇನ ರುಷಾ ।
ಕರಕಿಸಲಯೇನ ಚೋರುಂ ಪ್ರಹರತಿ ಚ ತದಾ ಸಭಾ ಚಕಂಪೇ ಚ ॥

(ಭಾ. ಪ್ರ.)

Rarest Archive

'ಆಚಾರ್ಯರು ಗಟ್ಟಿಯಾಗಿ ನಗುತ್ತಾರೆ, ಸಿಟ್ಟಿನಿಂದ ಕೆಂಪಾದ ಕಣ್ಣಿನಿಂದ ಓರೆಯಾಗಿ ನೋಡುತ್ತಾರೆ. ತನ್ನ ಕೆಂಪಾದ ಕೈಯಿಂದ ತೊಡೆಯನ್ನು ತಟ್ಟುತ್ತಾರೆ. ಆಗ ಸಭೆಯೇ ಕಂಪಿಸಿತು.' ಆಚಾರ್ಯರ ವಿಶ್ವವನ್ನೇ ಅಲ್ಲಾಡಿಸುವ ವ್ಯಕ್ತಿತ್ವದ ಮುಂದೆ ಸಾಮಾನ್ಯ ವ್ಯಕ್ತಿಯೊಬ್ಬನು ಪಂಡಿತನಾದರೂ ತಬ್ಬಿಬ್ಬಾಗಿ ಏನೇನೋ ಅಬದ್ಧವನ್ನು ಹೇಳಿದನು. ಇದು ಆಚಾರ್ಯರ ಮಹತ್ತ್ವಕ್ಕೆ ಪೋಷಕವಾದ ಒಂದು ಮಾರ್ಮಿಕವಾದ ಘಟನೆಯು.

ವಿ.—ಪ್ರಃ ಆದಿಃ ಯೇಷಾಂ ತೇ ಪ್ರಾದಯಃ ಪ್ರಾದೀನಾಂ ಭೇದಃ ಪ್ರಾದಿಭೇದಃ ತಂ, ನ ವಿದನ್ ಅವಿದನ್, ಲಿಪೀನಾಂ ಸಂಘಃ ಲಿಪಿಸಂಘಃ ತಂ, ಮತ್ಸರೇಣ ಆಕುಲಾ ಧೀಃ ಯೇಷಾಂ ತೇ ಮತ್ಸರಾಕುಲಧಿಯಃ ತಾನ್,

ಕ್ರಿ.—ಗುಣಯ, ಗುಣಯತು ಗುಣಯತಾತ್ ಗುಣಯತಾಂ ಗುಣಯಂತು, ಗುಣಯ ಗುಣಯತಾತ್ ಗುಣಯತಂ ಗುಣಯತ, ಗುಣಯಾನಿ ಗುಣಯಾವ ಗುಣಯಾಮ. ಗುಣ ಆಮಂತ್ರಣೇ ೧೮೬೫ ಚುರಾದಿ. ಉಭಯಪದಿ. ಸಕ. ಲೋಟ್. ಜಹಾಸ ಜಹಸತುಃ ಜಹಸುಃ, ಜಹಸಿಥ ಜಹಸಥುಃ ಜಹಸ, ಜಹಾಸ ಜಹಸ ಜಹಸಿವ ಜಹಸಿಮ. ಹಸೇ (ಹಸ್) ಹಸನೇ ಅಕ. । ಸೇಟ್ । ಪರ. । to laugh, to joke. ಲಿಟ್.

ಅವ.—ಅನಂತರ ಅಲ್ಲಿದ್ದ ಪಂಡಿತರು ಪಾಂಡಿತ್ಯಗರ್ವವನ್ನು ಬಿಟ್ಟು ಆಚಾರ್ಯರನ್ನು ಗೌರವಿಸಿದರು-

ತತ್ಪ್ರಸಂಗಬಲತೋಽಖಿಲವಿದ್ಯಾ
ಪಾಟವಂ ಪೃಥುಹೃದಃ ಪ್ರತಿಬುಧ್ಯ ।
ಆನಮನ್ ಸಬಹುಮಾನಮಮೀ ತಂ
ಯಂ ನಮಂತಿ ಕಿಲ ನಾಕಿನಿಕಾಯಾಃ ॥೧೬॥

ಅ.ಅ.—ಅಮೀ = ಈ ಪಂಡಿತರು, ತತ್ಪ್ರಸಂಗಬಲತಃ = ಆ ಸೂಕ್ತಾರ್ಥವನ್ನು ಹೇಳುವ ಸಂದರ್ಭಬಲದಿಂದ, ಪೃಥುಹೃದಃ = ಶ್ರೀಪೂರ್ಣಪ್ರಜ್ಞಾಚಾರ್ಯರ, ಅಖಿಲವಿದ್ಯಾಪಾಟವಂ = ಎಲ್ಲಾ ವಿದ್ಯೆಗಳಲ್ಲಿರುವ ಕೌಶಲವನ್ನು, ಪ್ರತಿಬುಧ್ಯ = ತಿಳಿದು, ನಾಕಿನಿಕಾಯಾಃ = ದೇವತೆಗಳ

Rarest Archiver

ಸಮೂಹಗಳು, ಯಂ = ಯಾರನ್ನು, ನಮಂತಿ = ನಮಸ್ಕರಿಸುತ್ತಾರೋ, ತಂ = ಅಂತಹ ಶ್ರೀಮಧ್ವಾಚಾರ್ಯರನ್ನು, ಸಬಹುಮಾನಂ = ಗೌರವದಿಂದ ಸಹಿತವಾಗಿ, ಆನಮುಃ ಕಿಲ = ನಮಸ್ಕಾರಮಾಡಿದರು.

ತಾ.—ಕೇರಲದ ಆ ಪಂಡಿತಶ್ರೇಷ್ಠರಾದ ಬ್ರಾಹ್ಮಣರು, ಆ ಸೂಕ್ತದ ಅರ್ಥವನ್ನು ಹೇಳುವ ಸಂದರ್ಭದಲ್ಲಿ ಆಚಾರ್ಯರ ಸರ್ವವಿದ್ಯಾಪ್ರಾವೀಣ್ಯವನ್ನು ಚೆನ್ನಾಗಿ ತಿಳಿದರು. ಬಹಳ ಗೌರವದಿಂದ ಮಧ್ವಾಚಾರ್ಯರಿಗೆ ನಮಸ್ಕಾರ ಮಾಡಿದರು. ರುದ್ರಾದಿದೇವತೆಗಳೂ ಕೂಡ ಯಾರನ್ನು ನಮಸ್ಕರಿಸುತ್ತಾರೋ ಅಂತಹ ಶ್ರೀಮಧ್ವಾಚಾರ್ಯರಿಗೆ ಈ ಸಾಮಾನ್ಯ ಮಾನವರು ನಮಸ್ಕರಿಸಿದುದು ಅದೇನು ದೊಡ್ಡ ವಿಷಯವೆಂದು ಹೇಳೋಣ.

ವಿ.—ತಸ್ಯ ಪ್ರಸಂಗಃ ತತ್ಪ್ರಸಂಗಃ ತತ್ಪ್ರಸಂಗಸ್ಯ ಬಲಂ ತತ್ಪ್ರಸಂಗಬಲಂ ತತ್ಪ್ರಸಂಗಬಲಾತ್ ಇತಿ ತತ್ಪ್ರಸಂಗಬಲತಃ, ಪಟೋರ್ಭಾವಃ ಪಾಟವಂ ತತ್, ಅಖಿಲಾಶ್ಚ ತಾಃ ವಿದ್ಯಾಶ್ಚ ಅಖಿಲವಿದ್ಯಾಃ, ಅಖಿಲವಿದ್ಯಾಸು ಪಾಟವಂ ಅಖಿಲವಿದ್ಯಾಪಾಟವಂ ತತ್, ಪೃಥು ಹೃತ್ ಯಸ್ಯ ಸಃ ಪೃಥುಹೃತ್ ತಸ್ಯ, ಬಹುಮಾನೇನ ಸಹಿತಂ ಯಥಾ ಭವತಿ ತಥಾ ಸಬಹುಮಾನಂ, ನಾಕಃ ಏಷಾಂ ಅಸ್ತೀತಿ ನಾಕಿನಃ ನಾಕಿನಾಂ ನಿಕಾಯಾಃ ನಾಕಿನಿಕಾಯಾಃ,

ಕ್ರಿ.—ಆ + ಆನಮುಃ, ಅನಮತ್ ಅನಮತಾಂ ಅನಮುಃ ಇತ್ಯಾದಿ, ನಮತಿ ನಮತಃ ನಮಂತಿ ಇತ್ಯಾದಿ, ಣಮ ಪ್ರಹ್ವತ್ವೇ ಶಬ್ದೇ ಚ ಸಕ.। ಸೇಟ್। ಪರ. ಕ್ರಮವಾಗಿ ಲಙ್ ಮತ್ತು ಲಟ್.

ಅವ.—ಮತ್ತೊಂದು ಸಭೆಯಲ್ಲಿ ನಡೆದ ವೃತ್ತಾಂತವನ್ನು ನಿರೂಪಿಸುತ್ತಾರೆ—

ಕನ್ಯಕಾದ್ಯೃತಸುರೇಂದ್ರವಪುಃಶ್ರೀ-
ದಾನವಾಚಿವರಸೂಕ್ತಹೃದುಕ್ತೌ ।
ಕುತ್ರಚಿತ್ ಸದಸಿ ತಾವದಪಾಲಾ
ಕೀರ್ತಿತಾತಿತರುಣೇತ್ಯಯಮೂಚೇ ॥೧೭॥

ಅ. ಅ.—ಅಯಂ = ಈ ಮಧ್ವಾಚಾರ್ಯರು, ಕುತ್ರಚಿತ್ ಸದಸಿ = ಯಾವುದೋ ಒಂದು ಸಭೆಯಲ್ಲಿ, ಕನ್ಯಕಾದೃತ = ಒಬ್ಬಳು ಕುಮಾರಿಯಿಂದ, ಆದೃತ = ಸಂತೋಷಗೊಳಿಸಲ್ಪಟ್ಟ, ಸುರೇಂದ್ರ = ದೇವೇಂದ್ರನಿಂದ, ವಪುಃ = ದೇಹಕ್ಕೆ, ಶ್ರೀದಾನ = ಕಾಂತಿಪ್ರದಾನವನ್ನು, ವಾಚಿ = ಹೇಳುವ, ವರ = ಉತ್ತಮವಾದ, ಸೂಕ್ತ = ಸೂಕ್ತದ, ಹೃತ್ = ಅಭಿಪ್ರಾಯದ, ಉಕ್ತೌ = ಹೇಳುವಿಕೆಯಲ್ಲಿ, ತಾವತ್ = ಆಗಲೇ, ಕೀರ್ತಿತಾ = ಅದರಲ್ಲಿ ಹೇಳಲ್ಪಡುತ್ತಿರುವ, ಅಪಾಲಾ = ಅಪಾಲಾಶಬ್ದದಿಂದ ಹೇಳಲ್ಪಟ್ಟವಳು, ಅತಿತರುಣೀ ಇತಿ = ಅತ್ಯಂತ ಸುಂದರಯುವತಿಯೆಂದು, ಊಚೇ = ಹೇಳಿದರು.

ತಾ — ಕನ್ಯಾ3ವಾರವಾಯತೀ ಸೋಮಮಪಿಸ್ರುತಾ ವಿದತ್ । ಇಂದ್ರಾಯ-ಸುನವೈ ತ್ವಾ ಶಕ್ರಾಯ ಸುನವೈ ತ್ವಾ ॥ ಅಸೌ ಯ ಏಷಿ ವೀರಕಃ ....। ಅಪಾಲಾಮಿಂದ್ರ ತ್ರಿಷ್ಪೂತ್ವ್ಯಕೃಣೋಃ ಸೂರ್ಯತ್ವಚಂ (ಋಗ್ವೇದ ಅಷ್ಟಕ ೬ ಅಧ್ಯಾಯ ೬, ವರ್ಗ ೧೪) ಎಂಬುದಾಗಿ ಋಗ್ವೇದದಲ್ಲಿ ಒಂದು ಸೂಕ್ತವಿದೆ. ಒಬ್ಬಳು ಕನ್ಯೆಯು ಮದುವೆಯಾಗದೆ ವೃದ್ಧಳಂತಾಗಿದ್ದಳು. ಅವಳು ಇಂದ್ರನ ಪ್ರೀತ್ಯರ್ಥವಾಗಿ ಸೋಮರಸವನ್ನು ಸಮರ್ಪಿಸಬೇಕೆಂದು ನಿಶ್ಚಯಿಸಿ ಸೋಮಲತೆಯನ್ನು ತರಲು ಹೋದಳು. ಸೋಮಲತೆಯು ಸಿಕ್ಕಿತು. ಅದನ್ನು ಮನೆಗೆ ತರುತ್ತಾ ಅವಳು 'ಎಲೈ, ಸೋಮವೆ! ನಿನ್ನನ್ನು ಇಂದ್ರನಿಗಾಗಿ ಹಿಂಡಲಿದ್ದೇನೆ, ಶಕ್ರನಿಗಾಗಿ ಕುಟ್ಟಿ ಹಿಂಡುವೆನು. ಅತ್ಯಂತ ವೀರನಾದ ಎಲೈ ಈ ಇಂದ್ರನೇ! ನೀನು ಸೋಮಪಾನಕ್ಕಾಗಿ ಬರುವವನಿದ್ದೀ' ಎಂದು ಮುಂತಾಗಿ ಅವಳು ಆದರದಿಂದ ಇಂದ್ರನನ್ನು ಸಂತೋಷಪಡಿಸಿದಳು. ಸಂತೋಷಗೊಂಡ ಇಂದ್ರನು ಮೂರುಬಾರಿ ಅವಳನ್ನು ತನ್ನೆರಡೂ ಕೈಗಳಿಂದ ಒರಸಿ ಪರಿಮಾರ್ಜನ ಮಾಡಿ ಸೂರ್ಯನಂತಹಕಾಂತಿಯುಳ್ಳ ಚರ್ಮದಿಂದ ಕೂಡಿದ ಅತ್ಯಂತ ತರುಣಿಯನ್ನಾಗಿ ಮಾಡಿದನು-ಎಂದು ಆ ಸೂಕ್ತದ ತಾತ್ಪರ್ಯಾರ್ಥ. ಈ ವಿಷಯಕ್ಕೆ ಸಂಬಂಧಪಟ್ಟ ಚರ್ಚೆಯನ್ನು ಆಧರಿಸಿ ನಡೆದ ಕಥೆಯನ್ನು ವಿವರಿಸುತ್ತಾರೆ—

'ಒಂದಾನೊಂದು ಸಭೆಯಲ್ಲಿ ಶ್ರೀಮಧ್ವಾಚಾರ್ಯರು ಒಬ್ಬ ಕನ್ಯೆಯ ಪೂಜೆಯಿಂದ ಸಂತುಷ್ಟನಾದ ಇಂದ್ರನು ಅವಳಿಗೆ ಸೂರ್ಯನಂತಹ ದೇಹಕಾಂತಿ

Rarest Archiver

ಯನ್ನು ಕೊಟ್ಟನು ಎಂಬ ಅರ್ಥವುಳ್ಳ ಕನ್ಯಾ3ವಾರವಾಯತೀ-ಎಂಬ ಸೂಕ್ತದ ತಾತ್ಪರ್ಯ ವಿಚಾರಪ್ರಸಂಗದಲ್ಲಿ, ಆ ಸೂಕ್ತದಲ್ಲಿರುವ 'ಅಪಾಲಾಮಿಂದ್ರಃ' ಎಂಬಲ್ಲಿರುವ ಅಪಾಲಾಶಬ್ದಕ್ಕೆ ಅತ್ಯಂತ ತರುಣಿ (ಯೌವನವತಿ) ಎಂದು ಅರ್ಥ ಹೇಳಿದರು-ಎಂದು ಶ್ಲೋಕ ತಾತ್ಪರ್ಯ.

ವಿ.—ಕನ್ಯಕಯಾ ಆದೃತಃ ಕನ್ಯಕಾದೃತಃ, ಸುರಾಣಾಂ ಇಂದ್ರಃ ಸುರೇಂದ್ರಃ, ಕನ್ಯಕಾದೃತಶ್ಚಾಸೌ ಸುರೇಂದ್ರಶ್ಚ ಕನ್ಯಕಾದೃತಸುರೇಂದ್ರಃ, ವಪುಷಃ ಶ್ರೀಃ ವಪುಃಶ್ರೀಃ, ವಪುಃಶ್ರಿಯಃ ದಾನಂ ವಪುಃಶ್ರೀದಾನಂ ಕನ್ಯ-ಕಾದೃತಸುರೇಂದ್ರೇಣ ವಪುಃಶ್ರೀದಾನಂ ಕನ್ಯಕಾ....ದಾನಂ, ತತ್ ವಕ್ತೀತಿ ಕನ್ಯಕಾ....ವಾಚಿ, ತಾದೃಶಂ ವರಂ ಚ ತತ್‌ಸೂಕ್ತಂ ಚ ಕನ್ಯಕಾ....ಸೂಕ್ತಂ, ತಸ್ಯ ಹೃತ್, ಹೃದಃ ಉಕ್ತಿಃ ತಸ್ಯಾಂ ಕನ್ಯಕಾ .. ಹೃದುಕ್ತೌ ;

ಕ್ರಿ.—ಊಚೇ ಸರ್ಗ ೫ ಶ್ಲೋ ೩೮ ನೋಡಿರಿ.

ಅನ.—ಸಭೆಯಲ್ಲಿದ್ದ ಪಂಡಿತರು ಆಚಾರ್ಯರ ಮಾತಿಗೆ ಪ್ರತಿಕೂಲ ವಾಗಿ ಮಾತಾಡಿದರು—

ಶ್ವಿತ್ರಿಣೀ ಭವತಿ ತತ್ಪದವಾಚ್ಯೇ
ತ್ಯಾಗ್ರಹೇಣ ವದತೋಽವಿದುಷೋಽತ್ರ ।
ಕಶ್ಚಿದೇಷ್ಯತಿ ವಿಪಶ್ಚಿದಿಹೈನಂ
ಪೃಚ್ಛತೇತ್ಯಯಮಗಚ್ಛದಥೋಕ್ತ್ವಾ ॥೧೮॥

ಅ.ಅ.—ತತ್ಪದವಾಚ್ಯಾ = ಅಪಾಲಾಶಬ್ದದಿಂದ ಹೇಳಲ್ಪಡತಕ್ಕವಳು. (ಅಪಾಲಾಶಬ್ದಾರ್ಥವು) ಶ್ವಿತ್ರಿಣೀ = ಕುಷ್ಠರೋಗವುಳ್ಳವಳು, ಭವತಿ ಇತಿ = ಆಗುತ್ತಾಳೆ ಎಂದು. ಆಗ್ರಹೇಣ = ಹಠದಿಂದ, ವದತಃ = ಹೇಳುತ್ತಿರುವ, ಅವಿದುಷಃ = ಅಪಾಲಾಶಬ್ದದ ಸರಿಯಾದ ಅರ್ಥವನ್ನು ತಿಳಿಯದವರನ್ನು ಕುರಿತು, (ವಿದುಷಃ = ಪಂಡಿತರನ್ನು ಕುರಿತು) ಅತ್ರ = ಇಲ್ಲಿಗೆ, ಕಶ್ಚಿತ್ = = ಯಾವನೋ ಒಬ್ಬ, ವಿಪಶ್ಚಿತ್ = ವಿದ್ವಾಂಸನು, ಏಷ್ಯತಿ = ಬರುವನು, ಇಹ = ಈ ಶಬ್ದಾರ್ಥ ವಿಷಯದಲ್ಲಿ, ಏನಂ = ಇವನನ್ನು ಕುರಿತು, ಪೃಚ್ಛತ =

Rarest Archive

ಕೇಳಿರಿ, ಇತಿ = ಎಂದು, ಉಕ್ತ್ವಾ = ಹೇಳಿ, ಅಥ = ತತ್‍ಕ್ಷಣದಲ್ಲಿಯೇ, ಅಯಂ = ಶ್ರೀಮಧ್ವಾಚಾರ್ಯರು, ಅಗಚ್ಛತ್ = ಹೋದರು.

ತಾ.—ಅಲ್ಲಿ ಸೇರಿದ್ದ ವಿದ್ವಾಂಸರು ತಮಗೆ ಸರಿಯಾದ ಜ್ಞಾನವಿಲ್ಲದಿದ್ದರೂ, ಅಪಾಲಾ ಎಂಬ ಶಬ್ದಕ್ಕೆ ಕುಷ್ಠರೋಗವುಳ್ಳವಳು ಎಂದು ಅರ್ಥ ಎಂದು ಹೇಳಿ ಪ್ರಮಾಣವೇನೂ ಇಲ್ಲದಿದ್ದರೂ ಹಠದಿಂದ ಅದನ್ನೇ ಸಾಧಿಸುತ್ತಿದ್ದರು. "ಎಲೈ ಸಭಾಸದರೆ! ಸದ್ಯದಲ್ಲಿಯೇ ಯಾವನೋ ಒಬ್ಬ ಪಂಡಿತನು ಇಲ್ಲಿಗೆ ಬರುವನು. ಅವನನ್ನು ಕುರಿತು ಅಪಾಲಾಶಬ್ದದ ಅರ್ಥವೇನೆಂದು ಕೇಳಿರಿ' ಎಂದು ಹೇಳಿ ಶ್ರೀಮಧ್ವಾಚಾರ್ಯರು ಅಲ್ಲಿಂದ ಹೊರಟುಹೋದರು.

ವಿ.—ಶ್ವಿತ್ರಂ ಅಸ್ಯಾಃ ಅಸ್ತೀತಿ ಶ್ವಿತ್ರಿಣೀ, ನ ವಿದ್ವಾಂಸಃ ಅವಿದ್ವಾಂಸಃ ತಾನ್ ಅವಿದುಷಃ ;

ಕ್ರಿ.—ಭವತಿ ಭವತಃ ಭವಂತಿ ಇತ್ಯಾದಿ ಭೂಸತ್ತಾಯಾಂ ಅಕರ್ಮಕ. ಸೇಟ್. । ಪರ. । to be, to become. ಲಟ್. ಏಷ್ಯತಿ ಏಷ್ಯತಃ ಏಷ್ಯಂತಿ, ಏಷ್ಯಸಿ ಏಷ್ಯಥಃ ಏಷ್ಯಥ, ಏಷ್ಯಾಮಿ ಏಷ್ಯಾವಃ ಏಷ್ಯಾಮಃ ಇಣ್ (ಇ) ಗತೌ ಸಕ. । ಅನಿ. । ಪರ. । to go ಲೃಟ್; ಪೃಚ್ಛತ, ಪೃಚ್ಛತು ಪೃಚ್ಛ-ತಾತ್ ಪೃಚ್ಛತಾಂ ಪೃಚ್ಛಂತು, ಪೃಚ್ಛ ಪೃಚ್ಛತಾತ್ ಪೃಚ್ಛತಂ ಪೃಚ್ಛತ, ಪೃಚ್ಛಾನಿ ಪೃಚ್ಛಾವ ಪೃಚ್ಛಾಮ. ಪ್ರಚ್ಛ (ಪೃಚ್ಛ) ಜ್ಞೀಪ್ಸಾಯಾಂ ಸಕ. । ಅನಿ. । ಪರ. । to ask. ಲೋಟ್. ಅಗಚ್ಛತ್ ಅಗಚ್ಛತಾಂ ಅಗಚ್ಛನ್, ಅಗಚ್ಛಃ ಅಗಚ್ಛತಂ ಅಗಚ್ಛತ, ಅಗಚ್ಛಂ ಅಗಚ್ಛಾವ ಅಗಚ್ಛಾಮ. ಗಮ್-ಲೃಗತೌ (ಗಮ್‍ಗಚ್ಛ್) ಸಕ. । ಅನಿ. । ಪರ. । to go ಲಙ್.

ಅನ.—ಶ್ರೀಮಧ್ವಾಚಾರ್ಯರ ಮಾತಿನಂತೆ ಅಲ್ಲಿಗೆ ಅವರು ತಿಳಿಸಿದ ಲಕ್ಷಣವುಳ್ಳ ಪಂಡಿತನು ಬಂದನು—

ದೇಶಮೇನಮಚಿರಾದುಪಯಾತ
ಸ್ತಾದೃಶಾಕೃತಿರಹೋ ಕೃತಬುದ್ಧಿಃ ।
ತಾಂಸ್ತಥಾಭ್ಯಧಿತ ತತ್ಪದಭಾವಂ
ಸೂರಿಮೌಲಿಮಣಿನಾತ್ರ ಯಥೋಚೇ ॥೧೯॥

Rarest Archives

ಅ. ಅ.—ಏನಂ = ಆ ವಿದ್ವಾಂಸರು ಇದ್ದ, ದೇಶಂ = ದೇಶವನ್ನು ಕುರಿತು, ಅಚಿರಾತ್ = ಜಾಗ್ರತೆಯಾಗಿ, ಉಪಯಾತಃ = ಬಂದ, ತಾದೃಶಾ-ಕೃತಿಃ = ಆಚಾರ್ಯರು ಸೂಚಿಸಿದ ಆಕಾರವುಳ್ಳ, ಕೃತಬುದ್ಧಿಃ = ವಿದ್ವಾಂಸನು, ತಾನ್ = ಆ ಬ್ರಾಹ್ಮಣರನ್ನು ಕುರಿತು, ತತ್ಪದಭಾವಂ = ಆ ಅಪಾಲಾ ಎಂಬ ಪದದ ಅಭಿಪ್ರಾಯವನ್ನು, ಸೂರಿಮೌಲಿಮಣಿನಾ = ಪಂಡಿತಶ್ರೇಷ್ಠರಾದ ಶ್ರೀಮಧ್ವಾಚಾರ್ಯರಿಂದ, ಅತ್ರ = ಈ ಪದದ ಅರ್ಥದ ವಿಷಯದಲ್ಲಿ, ಯಥಾ = ಹೇಗೆ, ಊಚೇ = ಹೇಳಲ್ಪಟ್ಟಿತೋ, ತಥಾ = ಹಾಗೆ, ಅಭ್ಯಧಿತ = ಹೇಳಿದನು, ಅಹೋ = ಆಶ್ಚರ್ಯವು.

ತಾ.—ಆಪಂಡಿತರು ಸೇರಿರುವ ಸಭಾಪ್ರದೇಶಕ್ಕೆ ಶೀಘ್ರವಾಗಿ ಒಬ್ಬ ಪಂಡಿತನು ಬಂದನು. ಅವನ ಆಕಾರವು ಆಚಾರ್ಯರು ತಿಳಿಸಿದ್ದ ಆಕಾರದಂತೆಯೇ ಇತ್ತು. ಅಲ್ಲಿಯ ಪಂಡಿತರು ಅಪಾಲಾಶಬ್ದಾರ್ಥ ವಿಷಯದಲ್ಲಿ ಕೇಳಿದಾಗ ಆ ಪಂಡಿತನು ಶ್ರೀಮಧ್ವಾಚಾರ್ಯರು ಹೇಳಿದಂತೆಯೇ 'ಅಪಾಲಾ 'ಶಬ್ದಕ್ಕೆ 'ಅತಿ ತರುಣೀ' ಎಂದೇ ಅರ್ಥವನ್ನು ಹೇಳಿದನು. ಅಹಾ! ಇದೆಷ್ಟು ಆಶ್ಚರ್ಯಕರವಾಗಿದೆ!

ವಿ.—ತಾದೃಶೀ ಆಕೃತಿಃ ಯಸ್ಯ ಸಃ ತಾದೃಶಾಕೃತಿಃ, ಕೃತಾ ಬುದ್ಧಿಃ ಯಸ್ಯ ಸಃ ಕೃತಬುದ್ಧಿಃ, ತಚ್ಚ ತತ್ ಪದಂ ಚ ತತ್ಪದಂ, ತತ್ಪದಸ್ಯ ಭಾವಃ ತತ್ಪದಭಾವಃ ತಂ, ಮೌಲೇಃ ಮಣಿಃ ಮೌಲಿಮಣಿಃ ಸೂರೀಣಾಂ ಮೌಲಿ-ಮಣಿಃ ಸೂರಿಮೌಲಿಮಣಿಃ ತೇನ।

ಕ್ರಿ.—ಅಭಿ+ಅಧಿತ, ಸರ್ಗ೬ ಶ್ಲೋಕ ೨ ನೋಡಿರಿ. ಊಚೇ-ಸರ್ಗ ೫ ಶ್ಲೋಕ ೨೮. ಇಲ್ಲಿ ಕರ್ಮಪದವನ್ನು ಹೇಳದಿರುವುದರಿಂದ ಭಾವೇ ಪ್ರಯೋಗ-ಎಲ್ಲಾ ಪುರುಷವಚನಗಳಲ್ಲಿಯೂ 'ಊಚೇ' ಎಂದು ಒಂದೇ ರೂಪ.

ಅವ.—ಆ ಪಂಡಿತರು ಮತ್ತು ಎಲ್ಲಾ ಸಭ್ಯರು ಆಚಾರ್ಯರು ತ್ರಿಕಾಲ ಜ್ಞಾನಿಗಳೆಂದು ತಿಳಿದರು-

Rarest Archiver

ಕೇವಲಂ ನ ಸಕಲಾಃ ಶ್ರುತಿವಿದ್ಯಾಃ
ಮಾನಪೂರ್ವಕಸಮಸ್ತಗಿರೋಽಸ್ಯ ।
ಅಪ್ಯನಾಗತಗತಪ್ರತಿಪತ್ತಿಂ
ಶ್ರದ್ದಧುಃ ಪೃಥುಲಚೇತಸ ಏತೇ ॥೨೦॥

ಅ.ಅ.—ಏತೇ = ಈ ಬ್ರಾಹ್ಮಣರು, ಮಾನಪೂರ್ವಕ = ಪ್ರಮಾಣ ಸಹಿತವಾದ, ಸಮಸ್ತ = ಎಲ್ಲಾ, ಗಿರಃ = ಮಾತುಳ್ಳ, ಅಸ್ಯ = ಈ, ಪೃಥುಲ-ಚೇತಸಃ = ವಿಶಾಲಮನಸ್ಸುಳ್ಳ ಮಧ್ವಾಚಾರ್ಯರಿಗೆ, ಕೇವಲಂ = ಬರೇ, ಸಕಲಾಃ = ಎಲ್ಲಾ (ಕಲೆಗಳಿಂದ ಸಹಿತವಾದ), ಶ್ರುತಿವಿದ್ಯಾಃ = ವೇದವಿದ್ಯೆಗಳನ್ನು, ನ ಶ್ರದ್ದಧುಃ = ನಂಬಲಿಲ್ಲ, ಅನಾಗತ = ಭವಿಷ್ಯತ್ತಿನ, ಗತ = ಕಳೆದ ವಿಷಯಗಳ, ಪ್ರತಿಪತ್ತಿಂ ಅಪಿ = ಜ್ಞಾನವನ್ನೂ, ಶ್ರದ್ದಧುಃ = ನಂಬಿದರು.

ತಾ.—ಅಪಾಲಾಶಬ್ದಾರ್ಥ ವಿಷಯದಲ್ಲಿ ನಡೆದ ಪವಾಡವನ್ನು ಕಂಡು ಅಲ್ಲಿನ ಪಂಡಿತರು ಶ್ರೀಮಧ್ವಾಚಾರ್ಯರು ದಿವ್ಯಜ್ಞಾನಿಗಳೂ, ಯೋಗಿ ಶ್ರೇಷ್ಠರೂ ಆಗಿದ್ದಾರೆಂದು ನಂಬಿದರು. ಅವರು ತನ್ನ ಮಾತುಗಳನ್ನು ಪ್ರಮಾಣಗಳಿಂದ ಮತ್ತು ಯುಕ್ತಿಗಳಿಂದ ಸಮರ್ಥಿಸಿ ಹೇಳುವುದರಿಂದ ಇವರಿಗೆ ಎಲ್ಲಾ ವಿದ್ಯೆಗಳೂ ಕರತಲಾಮಲಕವಾಗಿವೆ, ಇವರು ಬಹಳ ದೊಡ್ಡಪಂಡಿತರು ಎಂದು ಆ ಸಭ್ಯರು ನಂಬಿದರು ಎಂದಷ್ಟೇ ಅಲ್ಲ, ಆ ಸಭೆಗೆ ಮುಂದೆ ಬರುವ ಬ್ರಾಹ್ಮಣನ ಲಕ್ಷಣಗಳನ್ನು ತಾನು ನೋಡಿಕೊಳ್ಳದಿದ್ದರೂ ಜ್ಞಾನದೃಷ್ಟಿಯಿಂದಲೇ ತಿಳಿದು ಮೊದಲೇ ಸೂಚಿಸಿದ್ದರಿಂದ ಇವರಿಗೆ ಭೂತಭವಿಷ್ಯದ್‌ವರ್ತಮಾನಕಾಲಗಳ ಜ್ಞಾನವಿದೆ, ಇವರು ತ್ರಿಕಾಲಜ್ಞಾನಿಗಳಾದ ಯೋಗಿಶ್ರೇಷ್ಠರು ಎಂದು ಅವರು ನಿಶ್ಚಯಿಸಿದರು.

ವಿ.—ಮಾನಂ ಪೂರ್ವಂ ಯಾಸಾಂ ತಾಃ ಮಾನಪೂರ್ವಿಕಾಃ, ಮಾನ-ಪೂರ್ವಿಕಾಃ ಸಮಸ್ತಾಃ ಗಿರಃ ಯಸ್ಯ ಸಃ ಮಾನಪೂರ್ವಕಸಮಸ್ತಗೀಃ ತಸ್ಯ, ಅನಾಗತಂ ಚ ಗತಂ ಚ ಅನಾಗತಗತೇ, ತಯೋಃ ಪ್ರತಿಪತ್ತಿಃ ಅನಾಗತಗತ-ಪ್ರತಿಪತ್ತಿಃ ತಾಂ, ಪೃಥುಲಂ ಚೇತಃ ಯಸ್ಯ ಸಃ ಪೃಥುಲಚೇತಾಃ ತಸ್ಯ:

ಕ್ರಿ.—ಶ್ರತ್ + ದಧುಃ, ದಧೌ ದಧತುಃ ದಧುಃ, ದಧಿಥ ದಧಾಥ,

Rarest Archiver

ದಧೆಥುಃ ದಧ, ದಧೌ ದಧಿವ ದಧಿಮ. ಡುಧಾಞ್ (ಧಾ) ಧಾರಣಪೋಷ-ಣಯೋಃ ಸಕ.। ಅನಿ.। ಉಭ.। to put, to grant, to produce, to bear ಲಿಟ್. ಶ್ರತ್ ಉಪಸರ್ಗದಂತಹ ಅವ್ಯಯ.

ಅವ.—ಈ ರೀತಿ ತನ್ನ ಪ್ರತಿಭಾಶಕ್ತಿಯಿಂದ ಶ್ರೀಮಧ್ವಾಚಾರ್ಯರು ಸರ್ವಜ್ಞಾಚಾರ್ಯರೆಂದು ಪ್ರಸಿದ್ಧರಾದರು—

ಯದ್ಯದೇವ ಸಪದಿ ಪ್ರಕೃತಂ ಸ್ಯಾ
ತ್ತತ್ತದೇಷ ಯದವೇದಖಿಲಂ ಚ।
ಸರ್ವದಾ ಸದಸಿ ಸರ್ವಬುಧಾನಾಂ
ಸರ್ವವಿದ್ಯತಿರಿತಿ ಪ್ರಥಿತೋಽಭೂತ್ ॥೨೧॥

ಅ.ಅ—ಯತ್ = ಯಾವ ಕಾರಣದಿಂದ, ಸಪದಿ = ಆ ಕ್ಷಣದಲ್ಲಿ, ಸರ್ವಬುಧಾನಾಂ = ಎಲ್ಲಾ ಪಂಡಿತರ, ಸದಸಿ = ಸಭೆಯಲ್ಲಿ, ಸರ್ವದಾ = ಯಾವಾಗಲೂ, ಯತ್ ಯತ್ ಏವ = ಯಾವ ಯಾವುದು, ಪ್ರಕೃತಂ = ಪ್ರಸಕ್ತವಾಗಿ, ಸ್ಯಾತ್ = ಆದೀತೋ, ತತ್ತತ್ ಅಖಿಲಂ ಚ = ಆ ಎಲ್ಲವನ್ನೂ, ಏಷಃ = ಈ ಮಧ್ವಾಚಾರ್ಯರು, ಅವೇತ್ = ತಿಳಿದಿದ್ದರು, (ತತ್ = ಆದುದರಿಂದ) ಸರ್ವವಿದ್ ಯತಿಃ ಇತಿಃ = ಸರ್ವಜ್ಞರಾದ ಸಂನ್ಯಾಸಿಗಳೆಂದು, ಪ್ರಥಿತಃ ಅಭೂತ್ = ಪ್ರಸಿದ್ಧರಾದರು.

ತಾ.—ಎಲ್ಲಾ ಸಮಯದಲ್ಲಿಯೂ ಎಲ್ಲಾ ಸಭೆಗಳಲ್ಲಿಯೂ ಯಾವ ಯಾವ ವೇದಪುರಾಣಾದಿಗಳ ಪ್ರಸಕ್ತಿಯು ಉಂಟಾಗುತ್ತಿತ್ತೋ ಆ ಎಲ್ಲಾ ವಿಷಯವನ್ನೂ ಕೂಡಲೇ (ಮೊದಲೇ) ಶ್ರೀಮಧ್ವಾಚಾರ್ಯರು ತಿಳಿದಿರುತ್ತಿದ್ದರು; ಆದುದರಿಂದ ಈಯತಿಗಳು ಎಲ್ಲವನ್ನೂ ತಿಳಿದವರು (ಸರ್ವಜ್ಞರು) ಎಂದು ಪಂಡಿತಸಭೆಗಳಲ್ಲಿ ಪ್ರಸಿದ್ಧಿಯುಂಟಾಯಿತು.

ವಿ.—ಸರ್ವೇ ಚ ತೇ ಬುಧಾಶ್ಚ ಸರ್ವಬುಧಾಃ ತೇಷಾಂ, ಸರ್ವಂ ವೇತ್ತೀತಿ ಸರ್ವವಿತ್.

ಕ್ರಿ.— ಅಭೂತ್ ಅಭೂತಾಂ ಅಭೂವನ್, ಅಭೂಃ ಅಭೂತಂ

Rarest Archiver

ಅಭೂತ, ಅಭೂವಂ ಅಭೂವ ಅಭೂಮ; ಭೂ ಸತ್ತಾಯಾಂ ಅಕರ್ಮಕ। ಸೇಟ್। ಪರ.। to be, to become, ಭೂತೇ ಲುಙ್. ಅವೇತ್ ಅವಿತ್ತಾಂ ಅವಿದುಃ, ಅವೇಃ ಅವೇತ್ ಅವಿತ್ತಂ, ಅವಿತ್ತ, ಅವೇದಂ ಅವಿದ್ವ ಅವಿದ್ಮ. ವಿದ ಜ್ಞಾನೇ, ಸಕ.। ಸೇಟ್.। ಪರ.। to know ಲಙ್.

ಅವ.—ಆಚಾರ್ಯರು ತಾನು ಪ್ರತ್ಯಕ್ಷವಾಗಿ ಸಂಚಾರ ಮಾಡದಿರುವ ದೇಶಗಳಲ್ಲಿಯೂ ತನ್ನ ಕೀರ್ತಿಯಿಂದ ಪ್ರಸಿದ್ಧರಾದರು—

ಅಪ್ರಯಾತಮಪಿ ದೇಶಮಶೇಷಂ
ವ್ಯಾನಶೇ ಸುಜನಕೈರವಬಂಧುಃ।
ಪೂರ್ಣದೃಕ್ ಪ್ರತತಯಾ ನಿಜಕೀರ್ತ್ಯಾ
ಪೂರ್ಣಚಂದ್ರ ಇವಚಂದ್ರಿಕಯಾಲಂ ॥೨೨॥

ಅ. ಅ—ಸುಜನ = ಸಜ್ಜನರೆಂಬ, ಕೈರವ = ನೈದಿಲೆಗಳಿಗೆ, ಬಂಧುಃ = ಪ್ರೀತಿವಿಷಯರಾದ, ಪೂರ್ಣದೃಕ್ = ಶ್ರೀಪೂರ್ಣಪ್ರಜ್ಞಾಚಾರ್ಯರು, ಪ್ರತತಯಾ = ಚೆನ್ನಾಗಿ ವ್ಯಾಪಿಸಿದ, ನಿಜಕೀರ್ತ್ಯಾ = ತನ್ನ ಕೀರ್ತಿಯಿಂದ, ಅಪ್ರಯಾತಂ = ತಾನು ಹೋಗದಿರುವ, ಅಶೇಷಂ ದೇಶಂ ಅಪಿ = ಎಲ್ಲಾ ದೇಶವನ್ನೂ, ಪೂರ್ಣಚಂದ್ರಃ = ಹುಣ್ಣಿಮೆಯ ಚಂದ್ರನು, ಚಂದ್ರಿಕಯಾ ಇವ = ಬೆಳದಿಂಗಳಿನಿಂದ ಎಂಬಂತೆ, ಅಲಂ = ಚೆನ್ನಾಗಿ, ವ್ಯಾನಶೇ = ವ್ಯಾಪಿಸಿದರು.

ತಾ.— ನೈದಿಲೆಗಳಿಗೆ ಚಂದ್ರನಂತೆ ಸಜ್ಜನರಿಗೆ ಪ್ರೀತಿವಿಷಯರಾದ ಶ್ರೀಮಧ್ವಾಚಾರ್ಯರು ತನ್ನ ಕೀರ್ತಿಯನ್ನು ಎಲ್ಲಾ ಕಡೆಯಲ್ಲಿಯೂ ಹರಡಿದ್ದರು. ಆದ್ದರಿಂದ ಹೋಗದಿರುವ ದೇಶಗಳಲ್ಲಿಯೂ ಅವರು ಪ್ರಸಿದ್ಧರಾದರು. ಚಂದ್ರನು ತಾನು ಆಯಾ ಸ್ಥಳಗಳಿಗೆ ಹೋಗದಿದ್ದರೂ ತನ್ನ ಬೆಳದಿಂಗಳನ್ನು ಎಲ್ಲಾ ಕಡೆ ಹರಡಿ ನೈದಿಲೆಹೂವುಗಳನ್ನು ಅರಳಿಸುವಂತೆ ಆಚಾರ್ಯರು ಕೀರ್ತಿಯಿಂದ ಎಲ್ಲಾ ಕಡೆ ವ್ಯಾಪಿಸಿ ಸಜ್ಜನರನ್ನು ಆನಂದಗೊಳಿಸಿದರು. ಆಚಾರ್ಯರ ಕೀರ್ತಿಯು ಜಗತ್ತಿನಲ್ಲೆಲ್ಲಾ ವ್ಯಾಪಿಸಿತು ಎಂದು ಭಾವ.

ವಿ. —ಸುಜನಾ ಏವ ಕೈರವಾಣಿ ಸುಜನಕೈರವಾಣಿ, ತೇಷಾಂ ಬಂಧುಃ,

Rarest Archiver

ಪೂರ್ಣಾ ದೃಕ್ ಯಸ್ಯ ಸಃ ಪೂರ್ಣದೃಕ್, ನಿಜಾ ಚ ಸಾ ಕೀರ್ತಿಶ್ಚ ನಿಜಕೀರ್ತಿಃ ತಯಾ, ಪೂರ್ಣಶ್ಚಾಸೌ ಚಂದ್ರಶ್ಚ ಪೂರ್ಣಚಂದ್ರಃ.

ಕ್ರಿ.—ವಿ+ಆನಶೇ, ಆನಶಾತೇ ಆನಶಿರೇ, ಆನಶಿಷೇ ಆನಕ್ಷೇ, ಆನಶಾಥೇ ಆನಶಿಧ್ವೇ, ಆನಡ್ಢ್ವೇ, ಆನಶೇ ಆನಶಿವಹೇ ಆನಶ್ವಹೇ ಆನಶಿಮಹೇ ಆನಶ್ಮಹೇ; 'ಅಶೂ ವ್ಯಾಪ್ತೌ ಸಂಘಾತೇ ಚ। ಸಕ.। ವೇಟ್। ಆತ್ಮನೇ.। to pervade, to accumulate ಲಿಟ್.

ಅವ.—ದಕ್ಷಿಣದಿಗ್ವಿಜಯವನ್ನು ಮುಗಿಸಿ ಆಚಾರ್ಯರು ರಜತಪೀಠಪುರಕ್ಕೆ ಬಂದರು—

ಸುಂದರೇಷು ಸುರಮಂದಿರವೃಂದೇ
ಷ್ವಿಂದಿರಾರಮಣವಂದನಕೃತ್ಯಮ್ ।
ಆಚರನ್ನಸುಚಿರಾತ್ ಸುವಿಚಾರೋ
ರೂಪ್ಯಪೀಠಪತಿಮಾಪ ಮುಕುಂದಮ್ ॥೨೩॥

ಅ.ಅ—ಸುಂದರೇಷು = ಮನೋಹರವಾದ, ಸುರಮಂದಿರವೃಂದೇಷು = ದೇವಾಲಯಗಳ ಸಮೂಹಗಳಲ್ಲಿ, ಇಂದಿರಾರಮಣ = ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ, ವಂದನಕೃತ್ಯಂ = ನಮಸ್ಕಾರದ ಕಾರ್ಯವನ್ನು, ಆಚರನ್ = ಮಾಡುತ್ತಾ, ಸುವಿಚಾರಃ = ತನ್ನ ಆಶ್ರಮೋಚಿತವಾದ ಸದಾಚಾರ ಮತ್ತು ವಿಚಾರವಿಮರ್ಶೆಯುಳ್ಳ ಶ್ರೀಮಧ್ವಾಚಾರ್ಯರು, ನಸುಚಿರಾತ್ = ಬೇಗನೆ, ರೂಪ್ಯಪೀಠಪತಿಂ = ರಜತಪೀಠಪುರಸ್ವಾಮಿಯಾದ, ಮುಕುಂದಂ = ಅನಂತಾಸನದೇವರನ್ನು, ಆಪ = ಹೊಂದಿದರು.

ತಾ.—ತನ್ನ ಆಶ್ರಮಕ್ಕೆ ಉಚಿತವಾದ ಸದಾಚಾರ ಮತ್ತು ಒಳ್ಳೆಯ ವಿಚಾರವುಳ್ಳ ಶ್ರೀಮಧ್ವಾಚಾರ್ಯರು ಸುಂದರವಾದ ದೇವಾಲಯಗಳಲ್ಲೆಲ್ಲಾ ಲಕ್ಷ್ಮೀಪತಿಯಾದ ನಾರಾಯಣದೇವರನ್ನೇ ನಮಸ್ಕರಿಸುತ್ತಾ ಬೇಗನೆ ರಜತಪೀಠಪುರಸ್ವಾಮಿಯಾದ ಅನಂತಾಸನದೇವರ ಬಳಿ ಬಂದು ಸೇರಿದರು. ರುದ್ರಾದಿ ದೇವಾಲಯಗಳಲ್ಲಿ ರುದ್ರಾದಿಗಳಲ್ಲಿ ಅಂತರ್ಯಾಮಿಯಾಗಿರುವ ನಾರಾಯಣ

Rarest Archive

ನನ್ನೇ ವಂದಿಸಿ ದಕ್ಷಿಣದಿಕ್ಕಿನ ತೀರ್ಥಯಾತ್ರೆಯನ್ನು ಮುಗಿಸಿ ತನ್ನ ಊರಿಗೆ ಬಂದರು ಎಂದು ಭಾವ.

ವಿ.—ಸುರಾಣಾಂ ಮಂದಿರಾಣಿ ಸುರಮಂದಿರಾಣಿ, ತೇಷಾಂ ವೃಂದಾನಿ ಸುರಮಂದಿರವೃಂದಾನಿ, ತೇಷು, ಇಂದಿರಾಯಾಃ ರಮಣಃ ಇಂದಿರಾರಮಣಃ, ವಂದನಮಿತಿ ಕೃತ್ಯಂ ವಂದನಕೃತ್ಯಂ, ಇಂದಿರಾರಮಣಸ್ಯ ವಂದನಕೃತ್ಯಂ ಇಂದಿರಾರಮಣವಂದನಕೃತ್ಯಂ ತತ್, ರೂಪ್ಯಪೀಠಸ್ಯ ಪತಿಃ ರೂಪ್ಯಪೀಠಪತಿಃ ತಂ;

ಕ್ರಿ.—ಅಪ–ಸರ್ಗ೫, ಶ್ಲೋ ೫೦ ನೋಡಿರಿ.

ಅವ.—ದುರ್ವಾದಿಗಳು ವೇದಗಳಿಗೆ ಅಪಾರ್ಥವನ್ನು ಮಾಡಿ ವೇದಗಳ ಮುಖ್ಯ ತಾತ್ಪರ್ಯವನ್ನು ಕೆಡಿಸಿದ್ದರು. ಅದನ್ನು ಕಂಡು ಆಚಾರ್ಯರು ದುರ್ವಾದಿಗಳನ್ನು ಗೆದ್ದು ವೇದತಾತ್ಪರ್ಯವನ್ನು ಪ್ರಕಟಿಸುವೆನೆಂದು ಪ್ರತಿಜ್ಞೆ ಮಾಡಿದರು—

ಭೂಸುರಪ್ರವರಬುದ್ಧಿಸಮೃದ್ಧಿ
ವ್ಯಕ್ತಯುಕ್ತವಪುಷಂ ರುಚಿರಾಂಗೀಂ ।
ಸೂತ್ರದೀಪ್ತಮಣಿಮಾಲಿಕಯಾಲಂ
ಭೂಷಿತಾಂ ಭುವನಭೂಷಣಭೂತಾಂ ॥೨೪॥

ಅ.ಅ—(ಈ ಶ್ಲೋಕದಿಂದ ಆರಂಭಿಸಿ ೭ಶ್ಲೋಕಗಳ ಅರ್ಥವು ೩೧ನೆಯ ಪದ್ಯದ ಅರ್ಥದೊಡನೆ ಸೇರಿ ಪೂರ್ಣವಾಗುತ್ತದೆ. ಇದು ಕುಲಕ. ೫ಕ್ಕಿಂತ ಹೆಚ್ಚು ಶ್ಲೋಕಗಳಿಗೆ ಏಕಾನ್ವಯವಿದ್ದರೆ ಅದನ್ನು ಕುಲಕವೆನ್ನುತ್ತಾರೆ. ವೇದಸಮೂಹಕ್ಕೂ ದ್ರೌಪದಿಗೂ ಈ ವಿಶೇಷಣಗಳನ್ನು ಅನ್ವಯಿಸಬೇಕಾಗಿರುವುದರಿಂದ ಮೊದಲು ವೇದಸಮೂಹಕ್ಕೂ ಅನಂತರ ದ್ರೌಪದಿಗೂ ಅನ್ವಯಿಸುವಂತೆ ಇಲ್ಲಿ ಅರ್ಥ ಕೊಡಲಾಗಿದೆ). ವೇದಪಕ್ಷದಲ್ಲಿ:—ಭೂಸುರಪ್ರವರ=ಬ್ರಾಹ್ಮಣಶ್ರೇಷ್ಠರಾದ ವಸಿಷ್ಠ ವಾಮದೇವಾದಿಗಳ, ಬುದ್ಧಿಸಮೃದ್ಧಿ=ಅತಿಶಯವಾದ ಬುದ್ಧಿಯಲ್ಲಿ, ವ್ಯಕ್ತ=ಪ್ರಕಟವಾದ, ಯುಕ್ತವಪುಷಂ=ಯೋಗ್ಯವಾದ ಶರೀರವುಳ್ಳ, ರುಚಿರಾಂಗೀಂ=ಮನೋಹರವಾದ ಶಿಕ್ಷಾ ಕಲ್ಪ ವ್ಯಾಕರಣಾದಿ

Rarest Archiver

ಷಡಂಗಗಳುಳ್ಳ, ಸೂತ್ರ = ಬ್ರಹ್ಮಸೂತ್ರಗಳೆಂಬ, ದೀಪ್ತ = ಪ್ರಕಾಶಮಾನ ವಾದ, ಮಣಿ = ರತ್ನಗಳ, ಮಾಲಿಕಯಾ = ಮಾಲೆಯಿಂದ, ಅಲಂ = ಚೆನ್ನಾಗಿ, ಭೂಷಿತಾಂ = ಅಲಂಕೃತವಾದ, (ಶ್ರುತಿತತಿಂ = ವೇದಸಮೂಹ ವನ್ನು) ದ್ರೌಪದೀಪಕ್ಷದಲ್ಲಿ:-ಭೂಸುರಪ್ರವರ = ಬ್ರಾಹ್ಮಣಶ್ರೇಷ್ಠರಾದ ಯಾಜ ಉಪಯಾಜ ಎಂಬ ಹೆಸರುಳ್ಳ ದ್ರುಪದನ ಪುರೋಹಿತರ, ಬುದ್ಧಿಸಮೃದ್ಧಿ = = ಬುದ್ಧಿಯ ಅತಿಶಯದಿಂದ, ವ್ಯಕ್ತ = ಸ್ಪಷ್ಟವಾದ, ಯುಕ್ತವಪುಷಂ = ಉಚಿತವಾದ ಸ್ವರೂಪವುಳ್ಳ, ರುಚಿರಾಂಗೀಂ = ಮನೋಹರವಾದ ಕೈಕಾಲು ಮೊದಲಾದ ಅವಯವಗಳುಳ್ಳ, ಸೂತ್ರ = (ಸುವರ್ಣ) ತಂತುಗಳಲ್ಲಿ, (ಭಂಗಾ ರದ ತಂತಿಯಲ್ಲಿ) ದೀಪ್ತಮಣಿ = ಪ್ರಕಾಶಿಸುವ ರತ್ನಗಳ, ಮಾಲಿಕಯಾ = ಹಾರದಿಂದ, ಅಲಂ = ಚೆನ್ನಾಗಿ, ಭೂಷಿತಾಂ = ಅಲಂಕೃತಳಾದ, ಭುವನ = ಲೋಕಗಳಿಗೆ, ಭೂಷಣಭೂತಾಂ = ಅಲಂಕಾರಸ್ವರೂಪಳಾದ (ವೇದಿಜಾಂ ಇವ = ದ್ರೌಪದಿಯನ್ನು ಎಂಬಂತೆ, ದೃಷ್ಟ್ವಾ = ನೋಡಿ. ಪುರಾ = ಹಿಂದೆ, ಭರತಾಗ್ರ್ಯ ಇವ = ಭೀಮಸೇನದೇವರಂತೆ, ಶ್ರೀಮಧ್ವಾಚಾರ್ಯರು, ದುಷ್ಟ-ಪಕ್ಷದಮನಸ್ಥಿರಸಂಧಾಮಕರೋತ್ = ದುಷ್ಟರ ಪಕ್ಷವನ್ನು ದಂಡಿಸುವ ವಿಷಯ ದಲ್ಲಿ ಸ್ಥಿರವಾದ ಪ್ರತಿಜ್ಞೆಯನ್ನು ಮಾಡಿದರು).

ತಾ.—ಯಾಜ ಉಪಯಾಜರೆಂಬ ಇಬ್ಬರು ದ್ರುಪದರಾಜನ ಪುರೋ ಹಿತರಿದ್ದರು. ಬ್ರಾಹ್ಮಣಶ್ರೇಷ್ಠರಾದ ಇವರ ಬುದ್ಧಿಯ ಅತಿಶಯದಿಂದ ತಾಯಿಯ ಗರ್ಭವಾಸವಿಲ್ಲದೆ ಅಗ್ನಿಕುಂಡದಿಂದಲೇ ದ್ರೌಪದಿಯು ಜನ್ಮವೆತ್ತಿ ದಳು. ಅವಳು ಸುಂದರವಾದ ಅಂಗಾಂಗಗಳುಳ್ಳವಳು. ಲೋಕಕ್ಕೆ ಅಲಂಕಾರ ಪ್ರಾಯಳಾಗಿರುವವಳು. ಸುವರ್ಣಮಯವಾದ ದಾರದಲ್ಲಿ ಪೋಣಿಸಿದ ರತ್ನ ಮಾಲೆಯಿಂದ ಬಹಳ ಚೆನ್ನಾಗಿ ಅಲಂಕೃತಳಾಗಿದ್ದಳು. ಅವಳನ್ನು ದುಶ್ಶಾಸನನು ಪೀಡಿಸಿದಾಗ ಭೀಮಸೇನದೇವರು ಆ ದುಷ್ಟನನ್ನೂ ಅವನ ಪಕ್ಷದವರನ್ನೂ ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದರು. ಬ್ರಾಹ್ಮಣಶ್ರೇಷ್ಠರಾದ ವಸಿಷ್ಠವಾಮ-ದೇವ ವಿಶ್ವಾಮಿತ್ರಾದಿಗಳು ತಮ್ಮ ಬುದ್ಧಿಯ ಅತಿಶಯದಿಂದ ತಪಸ್ಸುಮಾಡಿ ವೇದಸಮೂಹವನ್ನು ಪ್ರಕಟಗೊಳಿಸಿದ್ದರು. ನಿಯತವಾದ ಸ್ವರವರ್ಣಾದಿಗಳಿಂದ ಯುಕ್ತವಾದ ಒಳ್ಳೆಯ ಸ್ವರೂಪವುಳ್ಳ ವೇದದ ಅರ್ಥವನ್ನು ತಿಳಿಯಲು

Rarest Archiver

ಮನೋಹರವಾದ ಶಿಕ್ಷಾ ಕಲ್ಪ ವ್ಯಾಕರಣ ನಿರುಕ್ತ ಜ್ಯೋತಿಷ ಛಂದಸ್ಸು ಎಂಬ ಆರು ಅಂಗಗಳಿವೆ. ಬ್ರಹ್ಮಸೂತ್ರಗಳೆಂಬ ವೇದಾರ್ಥನಿರ್ಣಾಯಕವಾದ ರತ್ನ ಮಾಲೆಯಿಂದ ವೇದಸಮೂಹವು ಚೆನ್ನಾಗಿ ಪ್ರಕಾಶಗೊಂಡಿದೆ. ಇಂತಹ ವೇದ ಸಮೂಹವು ವೇದಾಧಿಕಾರಿಗಳಾದ ಜನರಿಗೆ ಅಲಂಕಾರವಾಗಿದೆ. ಈ ವೇದ ಸಮೂಹವನ್ನು ದುರ್ವಾದಿಗಳು ತಮ್ಮ ಮನಬಂದಂತೆ ಅರ್ಥ ಬರೆದು ಕೆಡಿಸಿ ದ್ದಾರೆ. ಆದುದರಿಂದ ಅವರನ್ನೆಲ್ಲಾ ಜಯಿಸುತ್ತೇನೆ ಮತ್ತು ವೇದಗಳಿಗೆ ಸರಿಯಾದ ಅರ್ಥ ಬರೆಯುತ್ತೇನೆ ಎಂದು ಶ್ರೀಮಧ್ವಾಚಾರ್ಯರು ಪ್ರತಿಜ್ಞೆ ಮಾಡಿ ದರು. (ಇಲ್ಲಿ ವಿಶೇಷಣಗಳ ಸಾಮ್ಯದಿಂದ ವೇದತತಿಯು (ಸಮೂಹವು) ದ್ರೌಪದಿಯಂತೆ ಇದೆ ಎಂದು ವರ್ಣಿಸಿದ್ದಾರೆ. ವೇದಾಭಿಮಾನಿಯಾದ ಭಾರತಿಯ ಅವತಾರವೇ ದ್ರೌಪದಿಯಾದುದರಿಂದ ಈ ವರ್ಣನೆಯು ಉಚಿತವಾಗಿದೆ).

ವಿ.— ವೇದಪಕ್ಷದಲ್ಲಿ :— ಭೂ ಸು ರೇ ಷು ಪ್ರವರಾಃ, ಬುದ್ಧೇಃ ಸಮೃದ್ಧಿಃ ಬುದ್ಧಿಸಮೃದ್ಧಿಃ ಭೂಸುರಪ್ರವರಾಣಾಂ ಬುದ್ಧಿಸಮೃದ್ಧಿಃ, ತಸ್ಯಾಂ ವ್ಯಕ್ತಂ ಯುಕ್ತಂ ವಪುಃ ಯಸ್ಯಾಃ ಸಾ ತಾಂ, ದ್ರೌಪದೀಪಕ್ಷದಲ್ಲಿ :— ಭೂಸುರೇಷು ಪ್ರವರೌ ಭೂಸುರಪ್ರವರೌ ತಯೋಃ ಬುದ್ಧೇಃ ಸಮೃದ್ಧ್ಯೈ ವ್ಯಕ್ತಂ ಯುಕ್ತಂ ವಪುಃ ಯಸ್ಯಾಃ ಸಾ ತಾಂ. ರುಚಿರಾಣಿ ಅಂಗಾನಿ ಯಸ್ಯಾಃ ಸಾ ತಾಂ, ದೀಪ್ತಾಶ್ಚ ತೇ ಮಣಯಶ್ಚ ದೀಪ್ತಮಣಯಃ ಸೂತ್ರಾಣ್ಯೇವ ದೀಪ್ತಮಣಯಃ, ಸೂತ್ರದೀಪ್ತಮಣಯಃ ಸೂತ್ರದೀಪ್ತಮಣೀನಾಂ ಮಾಲಿಕಾ ತಯಾ, ಸೂತ್ರೇಷು ದೀಪ್ತಮಣೀನಾಂ ಮಾಲಿಕಾ ತಯಾ, ಭುವನಸ್ಯ ಭೂಷಣ-ಭೂತಾ ತಾಂ ;

ಅವ.—ದ್ರೌಪದಿಯ ಉಪಮೆಯಿಂದಲೇ ವೇದಸಮೂಹದ ಗುಣ ಗಳನ್ನು ವರ್ಣಿಸುತ್ತಾರೆ—

ಪಾದಸುಂದರಪದಕ್ರಮಭಾವ್ಯೈಃ
ಭಾಸಿತಾಂ ಪ್ರಕಟವರ್ಣಗುಣಾಢ್ಯಾಂ ।
ಭಾರತೋತ್ತಮಭೃತಾಮನುರೂಪಾ-
ಚ್ಛಾದನಾಂ ಸಮಧಿಕಸ್ವರಶೋಭಾಂ ॥೨೫॥

Rarest Archiver

ಅ. ಅ.—ಪಾದ=ಋಕ್ಕಿನ ನಾಲ್ಕನೆಯ ಒಂದು ಭಾಗ, ಸುಂದರಪದ =ಚೆನ್ನಾಗಿರುವ ಪದಗಳು, ಕ್ರಮ=ಕ್ರಮ ಎಂಬ ವೇದಪಠನದ ರೀತಿಯು, ಭಾವೈಃ=ಮತ್ತು ಅಭಿಪ್ರಾಯ ಇವುಗಳಿಂದ, ಭಾಸಿತಾಂ=ಪ್ರಕಾಶಗೊಳಿಸಲ್ಪಟ್ಟ, ಪ್ರಕಟ=ಪ್ರಸಿದ್ಧವಾದ, ವರ್ಣಗುಣ=ಅಕ್ಷರಗಳ ಸ್ಪೃಷ್ಟಪ್ರಯತ್ನ ಮೊದಲಾದ ಗುಣಗಳಿಂದ, ಆಢ್ಯಾಂ=ಸಂಪನ್ನವಾದ, ಭಾರತ=ಮಹಾಭಾರತ, ಉತ್ತಮ=ಸಾತ್ವಿಕಪುರಾಣಗಳು ಇವುಗಳಿಂದ, ಭೃತಾಂ=ಉಪ-ಬೃಂಹಿತವಾದ (ವಿವರಿಸಲ್ಪಟ್ಟ ಅರ್ಥವುಳ್ಳ) ಅನುರೂಪಾಚ್ಛಾದನಾಂ= ಯೋಗ್ಯವಾದ ಶೂದ್ರಾದಿಗಳಿಗೆ ಉಪದೇಶಮಾಡದಿರುವುದು ಎಂಬ ಮರೆಮಾಚುವಿಕೆಯುಳ್ಳ, ಸಮಧಿಕಸ್ವರಶೋಭಾಂ=ಹೆಚ್ಚಾದ ಉದಾತ್ತಾದಿಸ್ವರಗಳ ಶೋಭೆಯುಳ್ಳ (ವೇದಸಮೂಹವನ್ನು), ದ್ರೌಪದಿಯ ಪಕ್ಷದಲ್ಲಿ:—ಪಾದ =ಎರಡು ಕಾಲುಗಳಿಂದ, ಸುಂದರ=ಚೆನ್ನಾಗಿ, ಪದಕ್ರಮ=ಹೆಜ್ಜೆಯಿಡುವ ರೀತಿ, ಭಾವೈಃ=ವಿಲಾಸ ಇವುಗಳಿಂದ, ಭಾಸಿತಾಂ=ಶೋಭಿತಳಾದ, ಪ್ರಕಟವರ್ಣ=ಪ್ರಸಿದ್ಧವಾದ ಕೃಷ್ಣವರ್ಣವೂ, ಗುಣ=ಶ್ರೀಹರಿಭಕ್ತ್ಯಾದಿ ಗುಣಗಳು ಇವುಗಳಿಂದ, ಆಢ್ಯಾಂ=ಸಂಪನ್ನಳಾದ, ಭಾರತೋತ್ತಮ= ಭರತವಂಶದಲ್ಲಿ ಶ್ರೇಷ್ಠರಾದ ಪಾಂಡವರಿಂದ, ಭೃತಾಂ=ವಿವಾಹಿತಳಾದ (ಮದುವೆ ಮಾಡಿಕೊಳ್ಳಲ್ಪಟ್ಟ), ಅನುರೂಪಾಚ್ಛಾದನಾಂ=ಯೋಗ್ಯವಾದ ವಸ್ತ್ರವುಳ್ಳ, ಸಮಧಿಕಸ್ವರಶೋಭಾಂ=ಬಹಳ ಉತ್ತಮವಾದ ಕಂಠಧ್ವನಿಯ ಶೋಭೆಯುಳ್ಳ, ದ್ರೌಪದಿಯನ್ನೂ,

ತಾ.—ದ್ರೌಪದಿಯು ಕಾಲುಗಳ ಮನೋಹರವಾದ ಹೆಜ್ಜೆಯಿಡುವ ಚಮತ್ಕಾರಗಳಿಂದಲೂ, ವಿಲಾಸಗಳಿಂದಲೂ ಕೂಡಿದ್ದಳು, ಆಕರ್ಷಕವಾದ ಕಪ್ಪಾದ ಮೈಬಣ್ಣ ಮತ್ತು ಹರಿಭಕ್ತ್ಯಾದಿಗುಣಗಳಿಂದ ಕೂಡಿದ್ದಳು. ಭರತವಂಶದಲ್ಲಿ ಹುಟ್ಟಿದವರಲ್ಲಿ ಶ್ರೇಷ್ಠರಾದ ಪಾಂಡವರಿಂದ ಪತ್ನಿಯಾಗಿ ವರಿಸಲ್ಪಟ್ಟಿದ್ದಳು. ಯೋಗ್ಯವಾದ ವಸ್ತ್ರವನ್ನುಟ್ಟು ಕಿವಿಗಿಂಪಾದ ಕಂಠಸ್ವರದಿಂದ ಪ್ರಕಾಶಿಸುತ್ತಿದ್ದಳು. ಅವಳಂತೆಯೇ ವೇದಸಮೂಹವು ಪಾದ (ಋಕ್ಕಿನ ನಾಲ್ಕನೆಯ ಒಂದಂಶ), ಸುಂದರವಾದ ಪದಗಳು, ವೇದಪಾಠದ ಕ್ರಮವೂ ಮತ್ತು ಒಳ್ಳೆಯ ಅಭಿಪ್ರಾಯ ಇವುಗಳಿಂದ ಅಲಂಕೃತವಾಗಿತ್ತು. ಅಕ್ಷರಗಳ ಸ್ಪೃಷ್ಟಮೊದಲಾದ

Rarest Archiver

ಗುಣಗಳಿಂದ ಕೂಡಿದ್ದಿತು. ಭಾರತವೂ ಉತ್ತಮವಾದ ಸಾತ್ತ್ವಿಕಪುರಾಣಗಳೂ ಇವುಗಳಿಂದ ತನ್ನ ತಾತ್ಪರ್ಯವನ್ನು ಪ್ರಕಟಗೊಳಿಸುತ್ತಿತ್ತು. ವೇದಾಧಿಕಾರಿಗಳಲ್ಲದ ಶೂದ್ರಾದಿಜನರಿಗೆ ಕಾಣದಂತೆ ಅಡಗಿರುತ್ತಿತ್ತು. ಉದಾತ್ತಾದಿಸ್ವರಗಳಿಂದ ಶೋಭಿಸುತ್ತಿತ್ತು.

ವಿ.—ಸುಂದರಾಣಿ ಚ ತಾನಿ ಪದಾನಿ ಚ ಸುಂದರಪದಾನಿ, ಪಾದಾಶ್ಚ ಸುಂದರಪದಾನಿ ಚ ಕ್ರಮಾಶ್ಚ ಭಾವಾಶ್ಚ ತೈಃ, ಸುಂದರಂ ಕ್ರಮಃ ಸುಂದರ-ಕ್ರಮಃ, ಪಾದಾಭ್ಯಾಂ ಸುಂದರಕ್ರಮಶ್ಚ ಭಾವಾಶ್ಚ ತೈಃ, ಪ್ರಕಟಾಶ್ಚ ತೇ ವರ್ಣಾನಾಂ ಗುಣಾಶ್ಚ ಪ್ರಕಟವರ್ಣಗುಣಾಃ ತೈಃ ಆಢ್ಯಾಂ, ವರ್ಣಶ್ಚ ಗುಣಾಶ್ಚ ವರ್ಣಗುಣಾಃ ಪ್ರಕಟಾಶ್ಚ ತೇ ವರ್ಣಗುಣಾಶ್ಚ ತೈಃ, ಆಢ್ಯಾಂ. ಭಾರತಂ ಚ ತತ್ ಉತ್ತಮಂ ಚ ಭಾರತೋತ್ತಮಂ ಅಥವಾ ಭಾರತಂ ಚ ಉತ್ತಮಾನಿ ಚ ಭಾರತೋತ್ತಮಾನಿ, ಭಾರತೋತ್ತಮೇನ (ಭಾರತೋತ್ತಮೈಃ) ಭೃತಾಂ, ಅನುರೂಪಂ ಆಚ್ಛಾದನಂ ಯಸ್ಯಾಃ ಸಾ ತಾಂ, ಸಮಧಿಕಾ ಸ್ವರಾಣಾಂ ಸ್ವರಸ್ಯ ಚ ಶೋಭಾ ಯಸ್ಯಾಃ ಸಾ ತಾಂ.

ರಾಜಸೂಯಮುಖಸನ್ಮಖವೃತ್ತಾಂ
ವಾಸುದೇವಗುಣನಿಷ್ಠಿತಭಾವಾಂ ।
ಸರ್ವಧರ್ಮಪರಿಶಿಕ್ಷಣದಕ್ಷಾಂ
ವಂದಿತಾಂ ಜನತಯಾ ಜನನೀವತ್ ॥೨೬॥

ಅ.ಅ—ರಾಜಸೂಯಮುಖ=ರಾಜಸೂಯಯಾಗವೇ ಮೊದಲಾದ, ಸನ್ಮಖ=ಒಳ್ಳೆಯಜ್ಞಗಳಲ್ಲಿ, ವೃತ್ತಾಂ=ಮಂತ್ರರೂಪದಿಂದ ಪರಿವರ್ತಿಸಿದ, ಪ್ರವೃತ್ತಿಯನ್ನು ಹೊಂದಿದ, ವಾಸುದೇವ=ಶ್ರೀಕೃಷ್ಣನ, ಗುಣ=ಜ್ಞಾನಾ-ನಂದಾದಿಶುಭಧರ್ಮಗಳಲ್ಲಿ, ನಿಷ್ಠಿತ=ಸ್ಥಿರವಾದ, ಭಾವಾಂ=ಅಭಿಪ್ರಾಯವುಳ್ಳ, ಶ್ರೀಕೃಷ್ಣನ ಗುಣಗಳಲ್ಲಿ ಸ್ಥಿರಚಿತ್ತವುಳ್ಳ, ಸರ್ವಧರ್ಮಪರಿಶಿಕ್ಷಣದಕ್ಷಾಂ = ಎಲ್ಲಾ ಧರ್ಮಗಳ ಬೋಧನೆಯಲ್ಲಿ ಚತುರವಾದ, ಎಲ್ಲರಿಗೂ ಧರ್ಮ ಬೋಧನೆ ಮಾಡುವುವರಲ್ಲಿ ಚತುರಳಾದ, ಜನತಯಾ=ಜನಸಮೂಹದಿಂದ, ಜನನೀವತ್ = ತಾಯಿಯೋಪಾದಿಯಲ್ಲಿ, ವಂದಿತಾಂ = ನಮಸ್ಕಾರಮಾಡಲ್ಪಟ್ಟ, ವೇದಸಮೂಹವನ್ನು ಮತ್ತು ದ್ರೌಪದಿಯನ್ನು,

Rarest Archiver

ತಾ.—ದ್ರೌಪದಿಯು ರಾಜಸೂಯವೊದಲಾದ ಯಾಗಗಳಲ್ಲಿ ಯಜಮಾನನ ಪತ್ನಿಯಾಗಿ ದೀಕ್ಷಿತಳಾಗಿದ್ದಳು. ಶ್ರೀಕೃಷ್ಣನ ಸರ್ವೋತ್ತಮತ್ವಾದಿಗುಣಗಳನ್ನು ಸ್ಥಿರಚಿತ್ತದಿಂದ ಧ್ಯಾನಿಸುತ್ತಿದ್ದಳು. ಶಾಸ್ತ್ರದಲ್ಲಿ ಹೇಳಿದಂತೆ ಸಜ್ಜನರಿಗೆ ಧರ್ಮವನ್ನು ಬೋಧಿಸುತಿದ್ದಳು. ತಾಯಿಯಂತೆ ಎಲ್ಲರಿಂದಲೂ ಪೂಜಿತಳಾಗಿದ್ದಳು. ಆದರಂತೆ ವೇದವಚನವೂ ರಾಜಸೂಯವೇ ವೊದಲಾದ ಸಜ್ಜನರು ಆಚರಿಸುವ ಯಜ್ಞಗಳಲ್ಲಿ ಉಪಯುಕ್ತವಾಗಿದೆ. ಹರಿಯೇ ಸರ್ವೋತ್ತಮನು, ಜ್ಞಾನಾನಂದಾದಿಗುಣಪೂರ್ಣನು ಇತ್ಯಾದಿಯಾಗಿ ನಾರಾಯಣನ ಗುಣಗಳನ್ನು ಸಾಧಿಸುವುದರಲ್ಲಿಯೇ ಮುಖ್ಯತಾತ್ಪರ್ಯವುಳ್ಳದ್ದು. ಬೆಳಿಗ್ಗೆ ಎದ್ದು ಸಂಧ್ಯಾವಂದನ ಮಾಡಬೇಕು. ದೇವರ ಪೂಜೆಮಾಡಬೇಕು. ಅಗ್ನಿಯಲ್ಲಿ ಹೋಮಮಾಡಬೇಕು. ಇತ್ಯಾದಿ ಧರ್ಮಗಳನ್ನು ಬೋಧಿಸುತ್ತದೆ. ಯಜ್ಞ ಮಾಡುವಾಗ ವೇದಮಂತ್ರವನ್ನೇ ಉಪಯೋಗಿಸುತ್ತಾರೆ. ವೇದಸಮೂಹಕ್ಕೆಲ್ಲಾ ಹರಿಯು ಸರ್ವೋತ್ತಮನು ಮತ್ತು ಸಕಲಗುಣಪರಿಪೂರ್ಣನು ಎಂಬ ವಿಷಯದಲ್ಲಿಯೇ ಮುಖ್ಯತಾತ್ಪರ್ಯವಿದೆ. ಬ್ರಾಹ್ಮಣಾದಿ ಎಲ್ಲಾ ವರ್ಣದವರೂ ಆಚರಿಸುವ ಧರ್ಮವನ್ನು ವೇದವೇ ಬೋಧಿಸುತ್ತದೆ. ತನ್ನ ತಾಯಿಯಲ್ಲಿ ಎಷ್ಟು ಗೌರವವಿದೆಯೋ ಅಷ್ಟೇ ಗೌರವವು ವೇದದಲ್ಲಿ ವೇದಾಧಿಕಾರಿಗಳಿಗೆ ಇದೆ ಎಂದು ಭಾವ.

ವಿ.—ರಾಜಸೂಯಃ ಮುಖಂ ಯೇಷಾಂ ತೇ ರಾಜಸೂಯಮುಖಾಃ, ಸಂತಶ್ಚ ತೇ ಮಖಾಶ್ಚ ಸನ್ಮಖಾಃ, ರಾಜಸೂಯಮುಖಾಶ್ಚ ತೇ ಸನ್ಮಖಾಶ್ಚ ರಾಜಸೂಯಮುಖಸನ್ಮಖಾಃ, ತೇಷು ವೃತ್ತಾ ರಾಜಸೂಯಮುಖಸನ್ಮಖವೃತ್ತಾ ತಾಂ, ವಾಸುದೇವಸ್ಯ ಗುಣಾಃ, ವಾಸುದೇವಗುಣೇಷು ನಿಷ್ಠಿತಃ ಭಾವಃ ಯಸ್ಯಾಃ ಸಾ ತಾಂ, ಸರ್ವೇ ಚ ತೇ ಧರ್ಮಾಶ್ಚ, ಸರ್ವಧರ್ಮಾಣಾಂ ಪರಿಶಿಕ್ಷಣಂ, ಸರ್ವಧರ್ಮಪರಿಶಿಕ್ಷಣೇ ದಕ್ಷಾ ತಾಂ, ಜನನ್ಯಾ ತುಲ್ಯಂ ಜನನೀವತ್.

ಮೌಲಿಸಂಗ್ರಹವಿಕರ್ಷಣದೂನಾಂ
ಮಾಯಿನಾ ಸದಸಿ ದುಷ್ಟಜನೇನ ।
ನ್ಯಾಯಮಾರ್ಗಮುಪಹಾಯ ಮಹಾಂತಂ
ಸ್ವೇಶ್ವರತ್ವಮಪಿ ಸಾಧಯತಾಲಂ ॥೨೭॥

ಅ. ಅ.—ಮಹಾಂತಂ = ದೊಡ್ಡದಾದ, ನ್ಯಾಯಮಾರ್ಗಂ = ವೇದಾಂತ ಸಿದ್ಧವಾದ ಯುಕ್ತಿಗಳ ದಾರಿಯನ್ನು, ಅಪಹಾಯ = ಬಿಟ್ಟು, ಅಲಂ=ಚೆನ್ನಾಗಿ, ಸ್ವೇಶ್ವರತ್ವಂ ಅಪಿ = ತಾನೇ ಬ್ರಹ್ಮನೆಂಬುದನ್ನೂ, ಸಾಧಯತಾ = ಸಾಧಿಸುವ, ದುಷ್ಟಜನೇನ = ದುರ್ಜನನಾದ, ಮಾಯಿನಾ = ಮಾಯೆಯನ್ನು ನಿರ್ವಾಹಕವಾಗಿ ಕಲ್ಪಿಸಿರುವ ಜೀವೇಶ್ವರಾಭೇದವಾದಿಯಿಂದ, ಸದಸಿ = ವಿದ್ವಾಂಸರ ಸಭೆಯಲ್ಲಿ, ಮೌಲಿ=ವೇದಗಳ ಶಿರೋರೂಪವಾದ ಉಪನಿಷತ್ತುಗಳನ್ನು, ಸಂಗ್ರಹ= ಪ್ರಮಾಣವಾಗಿ ಸ್ವೀಕರಿಸಿರುವುದರಿಂದ, ವಿಕರ್ಷಣ = ಬಲಾತ್ಕಾರವಾಗಿ ಯೋಜನೆಮಾಡುವುದರಿಂದ, ದೂನಾಂ = ದುಃಖಿತವಾದ (ವೇದಸಮೂಹವನ್ನು) ದ್ರೌಪದೀ ಪಕ್ಷದಲ್ಲಿ:- ಮಹಾಂತಂ ನ್ಯಾಯಮಾರ್ಗಂ = ಉತ್ತಮವಾದ ಧರ್ಮದ ದಾರಿಯನ್ನು, ಅಪಹಾಯ = ತೊರೆದು, ಅಲಂ = ಚೆನ್ನಾಗಿ, ಸ್ವೇಶ್ವರತ್ವಂ ಅಪಿ = ತನ್ನ ಒಡೆತನವನ್ನು, ಸಾಧಯತಾ=ಸಾಧಿಸುವ, ದುಷ್ಟಜನೇನ= ದುಷ್ಟಮನುಷ್ಯನಾದ, ಮಾಯಿನಾ = ಕಪಟಿಯಾದ ದುಶ್ಶಾಸನನಿಂದ, ಸದಸಿ= ಕೌರವರ ಸಭೆಯಲ್ಲಿ, ಮೌಲಿಸಂಗ್ರಹವಿಕರ್ಷಣ=ತಲೆಕೂದಲುಗಳನ್ನು ಹಿಡಿದು ಎಳೆಯುವುದರಿಂದ, ದೂನಾಂ = ದುಃಖಗೊಂಡ ದ್ರೌಪದಿಯನ್ನು–

ತಾ.—ಪಾಂಡವರಿಗೆ ಕೊಡಬೇಕಾದ ರಾಜ್ಯವನ್ನು ಕೊಡದೆ ಸಕಲ ರಾಜ್ಯಕ್ಕೂ ದುರ್ಯೋಧನ ಮತ್ತು ತಾನೇ ರಾಜರೆಂದು ಹೇಳುತ್ತಾ ಉತ್ತಮವಾದ ಧರ್ಮಮಾರ್ಗವನ್ನು ತ್ಯಜಿಸಿ ದುಶ್ಶಾಸನನು ಸಭೆಯಲ್ಲಿ ದ್ರೌಪದಿಯ ಜಡೆಯನ್ನು ಹಿಡಿದೆಳೆದನು. ಆದರಿಂದ ಅವಳು ತುಂಬಾ ದುಃಖಿತಳಾದಳು. ಆದರಂತೆ ಎಲ್ಲರಿಗೂ ಸಮ್ಮತವಾದ ಹರಿಯೇ ಸರ್ವೋತ್ತಮನೆಂದು ಸಾಧಿಸುವ ಬ್ರಹ್ಮಸೂತ್ರಗಳ ನ್ಯಾಯಮಾರ್ಗವನ್ನು ಬಿಟ್ಟು, ತಾನೇ ಪರಬ್ರಹ್ಮನು, ಈಶ್ವರನು, ಎಂದು ಮಾಯಾವಾದಿಜನರು ಸಾಧಿಸುತ್ತಾರೆ. ಸಭೆಗಳಲ್ಲಿ ವೇದಶಿರಸ್ಸುಗಳಾದ ಉಪನಿಷತ್ತುಗಳಿಗೆ ಸಮ್ಮತವಲ್ಲದ— "ಜೀವರೂ ಈಶ್ವರನೂ ಒಂದೇ ; ಈಶ್ವರನಿಗಿಂತ ಬೇರೆಯಾದ ಪ್ರಪಂಚವೇ ಇಲ್ಲ" ಇತ್ಯಾದಿ ವಿರುದ್ಧಾರ್ಥಗಳನ್ನು ಮಾಡಿದ ಪ್ರಯುಕ್ತ ವೇದಸಮೂಹವೂ ದುಃಖಿತವಾಗಿತ್ತು, ಶೋಭಾರಹಿತವಾಗಿತ್ತು.

ವಿ.—ಮೌಲೇಃ ಸಂಗ್ರಹಃ ಮೌಲಿಸಂಗ್ರಹಃ, ಮೌಲಿಸಂಗ್ರಹಸ್ಯ

Rarest Archiver

ವಿಕರ್ಷಣಂ ಮೌಲಿಸಂಗ್ರಹವಿಕರ್ಷಣಂ, ತೇನ ದೂನಾ ತಾಂ, ಮೌಲಿ=ಕಟ್ಟಿದ ತಲೆಕೂದಲು, ಜಡೆ, ಚೂಡಾ ಕಿರೀಟಂ ಕೇಶಾಶ್ಚ ಸಂಯತಾ ಮೌಲಯಸ್ತ್ರಯಃ-ಅಮರ. ಮಾಯಾ ಅಸ್ಯ ಅಸ್ತೀತಿ ಮಾಯೀ ತೇನ, ದುಷ್ಟಶ್ಚಾಸೌ ಜನಶ್ಚ ದುಷ್ಟಜನಃ ತೇನ, ನ್ಯಾಯಾನಾಂ (ನ್ಯಾಯಸ್ಯ) ಮಾರ್ಗಃ ನ್ಯಾಯಮಾರ್ಗಃ ತಂ, ಈಶ್ವರಸ್ಯ ಭಾವಃ ಈಶ್ವರತ್ವಂ ಸ್ವಸ್ಯ ಈಶ್ವರತ್ವಂ ತತ್,

ಸಜ್ಜನೈಃ ಕತಿಪಯೈರತಿದೀನೈ-
ಶ್ಚಾಲಿತೈಃ ಕಲಿಬಲಾಚ್ಛುಭಮಾರ್ಗಾತ್ ।
ಅಪ್ಯುಪೇಕ್ಷಿತವಿಕರ್ಷಣದುಃಖಾಂ
ಸಾತಿಶೋಕಮಪಿ ಕೈಶ್ಚನ ದೃಷ್ಟಾಂ ॥೨೮॥

ಅ. ಅ.—ಕಲಿಬಲಾತ್ = ಕಲಿಯೆಂಬ ದೈತ್ಯನ ಸಾಮರ್ಥ್ಯದಿಂದ, ಶುಭಮಾರ್ಗಾತ್ = ಒಳ್ಳೆಯ ದಾರಿಯಿಂದ, ಚಾಲಿತೈಃ = ತಪ್ಪುವಂತೆ ಮಾಡಲ್ಪಟ್ಟ, ಅತಿದೀನೈಃ = ಅತ್ಯಂತಅಲ್ಪಮತಿಗಳಾದ (ಅತ್ಯಂತಅಶಕ್ತರಾದ) ಕತಿಪಯೈಃ = ಕೆಲವು, ಸಜ್ಜನೈಃ ಅಪಿ = ಸಜ್ಜನರಿಂದಲೂ, ಭೀಷ್ಮ ಮೊದಲಾದವರಿಂದಲೂ, ಉಪೇಕ್ಷಿತ = ಉದಾಸೀನಮಾಡಲ್ಪಟ್ಟ, ವಿಕರ್ಷಣದುಃಖಾಂ = ಬಲಾತ್ಕಾರದಿಂದ ಬೇರೆ ಅರ್ಥಮಾಡುವುದರಿಂದ ಉಂಟಾದ ದುಃಖವುಳ್ಳ, ಕೂದಲನ್ನು ಹಿಡಿದು ಎಳೆಯುವುದನ್ನು ನೋಡಿದರೂ ಉದಾಸೀನಮಾಡಿದ್ದರಿಂದ ದುಃಖಿತಳಾದ, ಕೈಶ್ಚನ = ಋಷಿಮೊದಲಾದ ಕೆಲವರಿಂದ, ಧರ್ಮಸಾಕ್ಷಿಗಳಾದ ಸೂರ್ಯಾದಿಗಳಿಂದ ಮತ್ತು ವಿದುರಮೊದಲಾದ ಕೆಲವರಿಂದ, ಸಾತಿಶೋಕಂ ಅಪಿ = ಅತ್ಯಂತದುಃಖದಿಂದ ಸಹಿತವಾಗಿಯೂ ದೃಷ್ಟಾಂ = ನೋಡಲ್ಪಟ್ಟ—

ತಾ.—ಸಜ್ಜನರಾದ ಭೀಷ್ಮದ್ರೋಣಾದಿಗಳು ಕೆಲವರು ಕಲಿಯ ಆವೇಶಬಲದಿಂದ ನ್ಯಾಯಧರ್ಮದ ಮಾರ್ಗವನ್ನು ಬಿಟ್ಟು, ದುಷ್ಟನಾದ ದುಶ್ಶಾಸನನು ತನ್ನ ಜಡೆಯನ್ನು ಹಿಡಿದು ಎಳೆಯುವಾಗಲೂ ಉದಾಸೀನರಾಗಿ ಅವನನ್ನು ಶಿಕ್ಷಿಸದೆ ಇದ್ದಾರಲ್ಲಾ ಎಂದು ದ್ರೌಪದಿಯು ದುಃಖಿತಳಾಗಿದ್ದಳು. ವಿದುರನೇ ಮೊದಲಾದ ಕೆಲವರೂ, ಸೂರ್ಯಾದಿಧರ್ಮಸಾಕ್ಷಿದೇವತೆಗಳೂ ಕಲಿಯ ಆವೇಶವಿಲ್ಲದುದರಿಂದ ತನಗಾಗುವ ಪೀಡೆಯನ್ನು ಬಹುಕಷ್ಟದಿಂದ ನೋಡುತ್ತಿದ್ದರು.

Rarest Archive

ಕಲಿಯ ಸಾಮರ್ಥ್ಯದಿಂದ ಧರ್ಮಮಾರ್ಗವನ್ನು ಬಿಟ್ಟು ದುರ್ಬಲರಾದ ಕೆಲವು ಮಂದಿ ಸಜ್ಜನರು ಜೀವೇಶ್ವರರಿಗೆ ಐಕ್ಯವನ್ನು ಹೇಳುವ ಸಿದ್ಧಾಂತವನ್ನು ನಿರಾಕರಿಸದೆ, ವೇದಕ್ಕೆ ಮಾಡಿರುವ ಅಪಾರ್ಥವನ್ನು ನೋಡಿಯೂ ಉದಾಸೀನರಾಗಿದ್ದರು. ಕಲಿಬಾಧೆಗೆ ಒಳಗಾಗದ ಕೆಲವು ಮಹರ್ಷಿಗಳು ಮತ್ತು ಸಜ್ಜನರು ವೇದಮಾರ್ಗವು ಹಾಳಾಯಿತಲ್ಲಾ ಎಂದು ಮನಸ್ಸಿನಲ್ಲಿ ನೊಂದುಕೊಳ್ಳುತ್ತಿದ್ದರು; ವೇದದ ಸತ್ಯವಾದ ತಾತ್ಪರ್ಯವನ್ನು ಪ್ರಕಟಿಸುವವರು ಯಾರೂ ಇರಲಿಲ್ಲ. ಹೀಗೆ ವೇದ ಸಮೂಹವು ದ್ರೌಪದಿಯಂತಿತ್ತು.

ವಿ.—ಕಲೇಃ ಬಲಂ ಕಲಿಬಲಂ ತಸ್ಮಾತ್, ಶುಭಶ್ಚಾಸೌ ಮಾರ್ಗಶ್ಚ ಶುಭಮಾರ್ಗಃ ತ ಸ್ಮಾ ತ್, ವಿಕರ್ಷಣೇನ ದುಃಖಂ ವಿಕರ್ಷಣದುಃಖಂ, ಉಪೇಕ್ಷಿತಂ ವಿಕರ್ಷಣದುಃಖಂ ಯಸ್ಯಾಃ ಸಾ ಉಪೇಕ್ಷಿತವಿಕರ್ಷಣದುಃಖಾ ತಾಂ, ಅತಿಶೋಕೇನ ಸಹಿತಂ ಯಥಾ ಭವತಿ ತಥಾ ಸಾತಿಶೋಕಂ ;

ವಾಸುದೇವ ! ಧರಣೀಧರ ! ನಾಥೇ-
ತ್ಯುಚ್ಚಕೈರಪಿ ಮುಹುಃ ಪ್ರವದಂತೀಂ ।
ಪೂರ್ಣಸ(ಷಡ್ಗು)ದ್ಗುಣಮಜಂ ಗತದೋಷಂ
ಬಿಭ್ರತೀಂ ಹೃದಿ ವಿವಿಕ್ತಮಶೇಷಾತ್ ॥೨೯॥

ಅ.ಅ—ಹೇ ವಾಸುದೇವ ! = ವಾಸುದೇವನೆ, ಧರಣೀಧರ! = ಭೂಮಿಯನ್ನು ಧರಿಸಿದವನೇ !, ನಾಥ ! = ಸ್ವಾಮಿಯೇ !, ಇತಿ = ಹೀಗೆಂದು, ಮುಹುಃ = ಬಾರಿಬಾರಿಗೂ, ಉಚ್ಚಕೈಃ = ಬಹಳವಾಗಿ, ಘಟ್ಟಿಯಾಗಿ, ಪ್ರವದಂತೀಂ = ಪ್ರತಿಪಾದಿಸುವ, ಹೇಳುವ, ಹೃದಿ = ಅಭಿಪ್ರಾಯದಲ್ಲಿ, ಮನಸ್ಸಿನಲ್ಲಿ, ಪೂರ್ಣಸದ್ಗುಣಂ = ಸಂಪೂರ್ಣವಾದ ಒಳ್ಳೆಯ ಗುಣಗಳುಳ್ಳ, ಗತದೋಷಂ = ದೋಷವಿಲ್ಲದ, ಅಶೇಷಾತ್ = ಸಮಸ್ತಜಗತ್ತಿಗಿಂತ, ವಿವಿಕ್ತಂ = ವಿಲಕ್ಷಣನಾದ, ಅಜಂ = ಉತ್ಪತ್ತಿರಹಿತನಾದ ಭಗವಂತನನ್ನು, ಬಿಭ್ರತೀಂ = ಧರಿಸಿರುವ, ವೇದಸಮೂಹವನ್ನು, ದ್ರೌಪದಿಯನ್ನು,

ತಾ. —ದ್ರೌಪದಿಯು–'ಹಾ ವಾಸುದೇವ ! ಧರಣೀಧರ ! ಸ್ವಾಮಿ ! ಚಕ್ರಪಾಣಿಯೇ ! ನರಸಿಂಹ ! ಇವೇ ಮೊದಲಾದ ಶ್ರೀಕೃಷ್ಣನ ನಾಮಗಳನ್ನು,

Rarest Archiver

ಗಟ್ಟಿಯಾಗಿ ತಿರುಗಿ ತಿರುಗಿ ಉಚ್ಚರಿಸುತ್ತಿದ್ದಳು. ಸಕಲಪ್ರಪಂಚದಿಂದಲೂ ಅತ್ಯಂತಭಿನ್ನನಾದ, ಸಮಸ್ತಶುಭಗುಣಪರಿಪೂರ್ಣನಾದ, (ಐಶ್ವರ್ಯ, ವೀರ್ಯ, ಯಶಸ್ಸು, ಸಂಪತ್ತು, ಸಾಮಾನ್ಯಜ್ಞಾನ, ವಿಶೇಷಜ್ಞಾನ ಎಂಬ ಆರುಗುಣಗಳುಳ್ಳ) ಉತ್ಪತ್ತಿ ಇಲ್ಲದ, ಯಾವ ದೋಷಗಳೂ ಇಲ್ಲದ ಶ್ರೀಕೃಷ್ಣನನ್ನು ಮನಸ್ಸಿನಲ್ಲಿ ಧರಿಸಿದ್ದಳು.

ವಿ.— ಧರತೀತಿ ಧರಃ ಧರಣ್ಯಾಃ ಧರಃ ಧರಣೀಧರಃ ತಸ್ಯ ಸಂಬುದ್ಧಿಃ ಹೇ ಧರಣಿಧರ !, ಪೂರ್ಣಾಃ ಸಂತಃ ಗುಣಾಃ ಯಸ್ಯ ಸಃ ಪೂರ್ಣಸದ್ಗುಣಃ ತಂ, ಗತಾಃ ದೋಷಾಃ ಯಸ್ಮಾತ್ ಸಃ ಗತದೋಷಃ ತಂ,

ಅವ.—ಮತ್ತೂ ವೇದಸಮೂಹವನ್ನೂ ದ್ರೌಪದಿಯನ್ನೂ ವರ್ಣಿಸುತ್ತಾರೆ—

ವಾರ್ಯತಾಂ ಬುಧಜನೈರ್ನನು ಹಾಹಾ
ನೈಷ ಧರ್ಮ ಇತಿ ಚಾಭಿದಧಾನಾಂ ।
ಕೃಷ್ಣಲಾ(ಪಾ)ಲಿತತಮಾಮನವದ್ಯಾ
ಮಪ್ಯನನ್ಯಶರಣಾಂ ಶರಣೋತ್ಕಾಂ ॥೩೦॥

ಅ.ಅ—ಬುಧಜನೈಃ = ವಿದ್ವಾಂಸರಿಂದ, ವಾರ್ಯತಾಂ = ಜೀವೇಶ್ವರರಿಗೆ ಐಕ್ಯವನ್ನು ಹೇಳುವ ಮಾಯಾವಾದಿಮತವು ನಿರಾಕರಿಸಲ್ಪಡಲಿ; ಏಷಃ = ಈ ಅಭೇದವಾದವು, ಧರ್ಮಃ = ಶಾಸ್ತ್ರಸಂಮತವಾದುದು, ನ ನನು = ಅಲ್ಲವಷ್ಟೆ ! ಹಾ ಹಾ = ಅಯ್ಯೋ ! ಅಯ್ಯೋ !, ಇತಿ = ಹೀಗೆಂದು, ಅಭಿದಧಾನಾಂ ಚ = ಹೇಳುತ್ತಿರುವ, ಕೃಷ್ಣ = ಶ್ರೀವೇದವ್ಯಾಸರಿಂದ, ಲಾ(ಪಾ)-ಲಿತತಮಾಂ = ಅತಿಶಯವಾಗಿ ಸನ್ಮಾನಿಸಲ್ಪಟ್ಟ, (ಕಾಪಾಡಲ್ಪಟ್ಟ) ಅನವದ್ಯಾಂ = ದೋಷವಿಲ್ಲದ, ಅನನ್ಯಶರಣಾಂ ಅಪಿ = ಶ್ರೀಮಧ್ವಾಚಾರ್ಯರನ್ನು ಬಿಟ್ಟು ಬೇರೆ ರಕ್ಷಕರಿಲ್ಲದವಳಾದಾಗ್ಯೂ, ಶರಣೋತ್ಕಾಂ = ಮಧ್ವಾಚಾರ್ಯರಿಂದ ರಕ್ಷಣೆ ಪಡೆಯುವುದಲ್ಲಿ ಉತ್ಕಂಠಿತವಾದ (ವೇದಸಮೂಹನ್ನು) ದ್ರೌಪದೀ ಪಕ್ಷದಲ್ಲಿ :—ಬುಧಜನೈಃ = ಭೀಷ್ಮಾದಿಹಿರಿಯರಿಂದ, ವಾರ್ಯತಾಂ = ತಡೆಯಲ್ಪಡಲಿ, ಏಷಃ = ಈ ದ್ಯೂತವು, ಧರ್ಮಃ = ಧರ್ಮವು, ನ ನನು = ಅಲ್ಲ-

Rarest Archives

ವಷ್ಟೆ!, ಹಾ ಹಾ! = ಅಯ್ಯೋ ಅಯ್ಯೋ! ಇತಿ = ಹೀಗೆಂದು, ಅಭಿದಧಾನಾಂ ಚ = ಹೇಳುತ್ತಲಿರುವ, ಕೃಷ್ಣ = ಶ್ರೀವಾಸುದೇವನಿಂದ, ಲಾಲಿತತಮಾಂ = ಬಹಳವಾಗಿ ಸಂತೈಸಲ್ಪಟ್ಟ, ಅನವದ್ಯಾಂ = ದೋಷವಿಲ್ಲದ, ಅನನ್ಯಶರಣಾಂ ಅಪಿ = ಭೀಮಸೇನನ ಹೊರತು ಬೇರೆ ರಕ್ಷಕರಿಲ್ಲದಿದ್ದರೂ, ಶರಣೋತ್ಕಾಂ = ತನ್ನ ರಕ್ಷಣೆಯ ವಿಷಯದಲ್ಲಿ ಉತ್ಕಂಠಿತಳಾದ,

ತಾ.—ಮತ್ತೂ ದ್ರೌಪದಿಯು ಹೇಗಿದ್ದಳೆಂದರೆ–ದುಶ್ಶಾಸನನು ಸೀರೆಯನ್ನು ಸೆಳೆಯುತ್ತಿರುವಾಗ 'ಎಲೈ ಭೀಷ್ಮಾದಿಗಳಿರಾ! ನೀವು ಎಲ್ಲಾ ಧರ್ಮತತ್ತ್ವವನ್ನು ತಿಳಿದವರಾಗಿದ್ದೀರಿ. ಈ ದುಷ್ಟನಾದ ದುಶ್ಶಾಸನನು ನನ್ನ ಮಾನಭಂಗ ಮಾಡುತ್ತಾನೆ. ಇದನ್ನು ತಡೆಯಿರಿ. ಈ ಜೂಜು ಧರ್ಮವಲ್ಲ. ಪತಿವ್ರತೆಯ ಮಾನಭಂಗ ಧರ್ಮವಲ್ಲ. ಹಾ! ಅಯ್ಯೋ!' ಎಂದು ಕೂಗಿಹೇಳುತ್ತಿದ್ದಳು. ಅಂತಹ ಕಷ್ಟಕಾಲದಲ್ಲಿಯೂ ಧರ್ಮದ ವಿಷಯದಲ್ಲಿ ಅಜ್ಞಾನಾದಿದೋಷಗಳು ಆವಳಿಗಿರಲಿಲ್ಲ. ಶ್ರೀಕೃಷ್ಣನ ಆದರ ವಿಶ್ವಾಸಗಳಿಗೆ ಪಾತ್ರಳಾದ ಅವಳನ್ನು ಶ್ರೀಕೃಷ್ಣನು ಸಂತೈಸಿದನು. ಭೀಮಸೇನನೊಬ್ಬನಲ್ಲದೆ ತನಗೆ ಬೇರೆಯಾರೂ ರಕ್ಷಕರಿಲ್ಲವೆಂದು ಅವಳು ತಿಳಿದಿದ್ದಳು. ಅವಳು ಶತ್ರುವು ತನ್ನನ್ನು ಮಾನಭಂಗಮಾಡಲು ಎಳೆಯುತ್ತಿದ್ದಾಗ ಯಾರಾದರೂ ಕಾಪಾಡಬೇಕೆಂದು ರಕ್ಷಕರನ್ನು ಅಪೇಕ್ಷಿಸುತ್ತಿದ್ದಳು ಅದರಂತೆ ವೇದಸಮೂಹವು 'ಅಂಧಂತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ' ಇತ್ಯಾದಿ ತನ್ನ ವಚನಗಳಿಂದಲೇ ದುಷ್ಟಮತಗಳನ್ನು ನಿರಾಕರಿಸದೇ ಇದ್ದರೆ ಅಂಧತಮಸವೇ ಪ್ರಾಪ್ತವಾಗುವುದರಿಂದ ಜೀವೇಶ್ವರರಿಗೆ ಐಕ್ಯವನ್ನು ಸಾಧಿಸುವ ದುಷ್ಟಮತಗಳನ್ನು 'ಎಲೈ ಪಂಡಿತ ಶ್ರೇಷ್ಠರೇ! ನಿರಾಕರಿಸಿರಿ. ಈ ಐಕ್ಯವಾದವು ಧರ್ಮವಲ್ಲ. ಅಯ್ಯೋ! ಅಯ್ಯೋ! ಸತ್ಯಂ ಭಿದಾ ಸತ್ಯಂ ಭಿದಾ ಸತ್ಯಂ ಭಿದಾ ಎಂದು ನಾನೇ ಭೇದವು ಸತ್ಯವೆಂದು ಶಪಥಪೂರ್ವಕವಾಗಿ ಹೇಳುತ್ತಿದ್ದೇನೆ' ಎಂದು ಹೇಳುತ್ತಿತ್ತು. ಈ ವೇದಸಮೂಹವು ಶ್ರೀವೇದವ್ಯಾಸರಿಂದ ಆದರಿಸಲ್ಪಡತಕ್ಕದ್ದಾಗಿದೆ. ನಿತ್ಯವಾದುದು, ಯಾವ ಪುರುಷನೂ ನಿರ್ಮಿಸಿದ್ದಲ್ಲವಾದ್ದರಿಂದ ಯಾವ ದೋಷವೂ ಇಲ್ಲದ್ದು. ಶ್ರೀಮಧ್ವಾಚಾರ್ಯರನ್ನು ಬಿಟ್ಟು ಬೇರೆ ರಕ್ಷಕರಿಲ್ಲದ್ದು. ದುರ್ವಾದಿಗಳ ಉಪದ್ರವಗಳಿಂದ ತನ್ನನ್ನು ಯಾರಾದರೂ ಕಾಪಾಡಬೇಕೆಂದು ಅಪೇಕ್ಷಿಸುತ್ತಿತ್ತು.

Rarest Archiver

ವಿ.—ಬುಧಾಶ್ಚ ತೇ ಜನಾಶ್ಚ ಬುಧಜನಾಃ ತೈಃ, ಅತಿಶಯೇನ ಲಾಲಿತಾ ಲಾಲಿತತಮಾ ಕೃಷ್ಣೇನ ಲಾಲಿತತಮಾ ಕೃಷ್ಣಲಾಲಿತತಮಾ ತಾಂ, ನ ವಿದ್ಯತೇ ಅವದ್ಯಂ ಯಸ್ಯಾಃ ಸಾ ಅನವದ್ಯಾ ತಾಂ, ನ ವಿದ್ಯತೇ ಅನ್ಯತ್ ಶರಣಂ ಯಸ್ಯಾಃ ಸಾ ಅನನ್ಯಶರಣಾ ತಾಂ, ಶರಣೇ ಉತ್ಕಾ ಶರಣೋತ್ಕಾ ತಾಂ; ಶರಣಂ = ರಕ್ಷಣೆ, ರಕ್ಷಕ. protection, protector. ಸಂತಪ್ತಾನಾಂ ತ್ವಮಸಿ ಶರಣಂ—ಮೇಘದೂತ. ಶರಣಂ ಗೃಹರಕ್ಷಿತ್ರೋಃ–ಅಮರ.

ಕ್ರಿ.—ವಾರ್ಯತಾಂ ವಾರ್ಯೇತಾಂ ವಾರ್ಯಂತಾಂ, ವಾರ್ಯಸ್ವ ವಾರ್ಯೇಥಾಂ ವಾರ್ಯಧ್ವಂ, ವಾರ್ಯೈ ವಾರ್ಯಾವಹೈ ವಾರ್ಯಾಮಹೈ. ವೃಞ್ ಆವರಣೇ (೧೮೧೪) ಣಿಜಂತ ಚುರಾದಿ ಕರ್ಮಣಿ ಲೋಟ್. (ಬುಧಜನಾಃ ವಾರಯಂತು ಕರ್ತರಿ)

ಅವ.—ಭೀಮಸೇನನು ದ್ರೌಪದಿಯ ಅವಮಾನಕ್ಕೆ ಪ್ರತೀಕಾರಮಾಡುವೆನೆಂದು ಪ್ರತಿಜ್ಞೆ ಮಾಡಿದಂತೆ ಮಧ್ವಾಚಾರ್ಯರು ವೇದಾಭಿಮಾನಿದೇವತೆಗೆ ಆದ ಅಪಚಾರಕ್ಕೆ ಪ್ರತೀಕಾರ ಮಾಡುವೆನೆಂದು ಪ್ರತಿಜ್ಞೆಮಾಡಿದರು—

ವೇದಿಜಾಮಿವ ಪುರಾ ಭರತಾಗ್ರ್ಯಃ
 ಸ ಸ್ವಯಂ ಶ್ರುತಿತತಿಂ ಖಲು ದೃಷ್ಟ್ವಾ ।
ಪುಷ್ಟಬುದ್ಧಿರಕರೋತ್ ಕರುಣಾಬ್ಧಿಃ
 ದುಷ್ಟಪಕ್ಷದಮನಸ್ಥಿರಸಂಧಾಂ ॥೩೦॥

ಅ. ಅ—ಕರುಣಾಬ್ಧಿಃ = ಕೃಪಾಸಮುದ್ರರಾದ, ಪುಷ್ಟಬುದ್ಧಿಃ = ಪೂರ್ಣಜ್ಞಾನವುಳ್ಳ, ಸಃ = ಆ ಮಧ್ವಾಚಾರ್ಯರು, ಪುರಾ=ಹಿಂದೆ, ವೇದಿಜಾಂ = ದ್ರೌಪದಿಯನ್ನು, ಭರತಾಗ್ರ್ಯಃ ಇವ = ಭರತವಂಶಶ್ರೇಷ್ಠರಾದ ಭೀಮಸೇನ ದೇವರಂತೆ, ಸ್ವಯಂ = ತಾವು, ಶ್ರುತಿತತಿಂ = ವೇದಸಮೂಹವನ್ನು, ದೃಷ್ಟ್ವಾ = ನೋಡಿ, ದುಷ್ಟಪಕ್ಷ = ದುಷ್ಟರಾದ ಮಾಯಾವಾದಿಗಳ ಸಿದ್ಧಾಂತದ, ದಮನ = ನಿರಾಕರಿಸುವ ವಿಷಯದಲ್ಲಿ, ಸ್ಥಿರಸಂಧಾಂ = ದೃಢಪ್ರತಿಜ್ಞೆಯನ್ನು, ಅಕರೋತ್ ಖಲು = ಮಾಡಿದರಷ್ಟೆ.

ತಾ.—ಇಂತಹ ಕಷ್ಟಕ್ಕೆ ಪಾತ್ರಳಾದ ದ್ರೌಪದಿಯನ್ನು ಕಂಡು ಭರತ

Rarest Archiver

ವಂಶದ ಕ್ಷತ್ರಿಯಶ್ರೇಷ್ಠರಾದ ಭೀಮಸೇನದೇವರು ಹಿಂದಿನ ಜನ್ಮದಲ್ಲಿ ದುಷ್ಟರಾದ ಕೌರವಾದಿಗಳನ್ನೂ ಅವರ ಸಹಾಯಕರನ್ನೂ ಕೊಲ್ಲುವೆನೆಂದು ದೃಢಪ್ರತಿಜ್ಞೆ ಮಾಡಿದ್ದರು. ಅದರಂತೆ ಈಗ ಭೀಮಸೇನಾವತಾರರಾದ ದಯಾಸಮುದ್ರರಾದ ಶ್ರೀಮಧ್ವಾಚಾರ್ಯರು ಹಿಂದೆ ಹೇಳಿದಂತೆ ದುರ್ವಾದಿಗಳ ಉಪದ್ರವದಿಂದ ಹಾಳಾಗುತ್ತಿರುವ ವೇದಸಮೂಹವನ್ನು ಕಂಡು ದುರ್ವಾದಿಗಳ ಮತವನ್ನು ಖಂಡಿಸುವೆನೆಂದು ದೃಢಪ್ರತಿಜ್ಞೆ ಮಾಡಿದರು. ಪೂರ್ವಜನ್ಮದಲ್ಲಿ ತಾನೇ ಭೀಮರೂಪದಿಂದ ಇದ್ದಾಗ ಯಜ್ಞವೇದಿಯಿಂದ ಉತ್ಪನ್ನಳಾದ ಪವಿತ್ರಾತ್ಮಳಾದ ದ್ರೌಪದಿಯನ್ನು ಬಾಧಿಸುವ ದುಷ್ಟರನ್ನು ದಂಡಿಸುವೆನೆಂದು ಪ್ರತಿಜ್ಞೆ ಮಾಡಿದಂತೆ ಈಗ ಅದೇ ಭೀಮಸೇನದೇವರು ಮಧ್ವಾಚಾರ್ಯರಾಗಿ ವೇದದೂಷಕರಾದ ದುರ್ವಾದಿಗಳನ್ನು ಖಂಡಿಸುವೆನೆಂದು ಪ್ರತಿಜ್ಞೆ ಮಾಡಿದರು ಎಂದು ಭಾವ.

ವಿ.—ವೇದೇಃ ಜಾಯತೇ ಇತಿ ವೇದಿಜಾ ತಾಂ, ಭರತೇಷು ಅಗ್ರ್ಯಃ ಭರತಾಗ್ರ್ಯಃ, ಶ್ರುತೀನಾಂ ತತಿಃ ಶ್ರುತಿತತಿಃ ತಾಂ, ಪುಷ್ಟಾ ಬುದ್ಧಿಃ ಯಸ್ಯ ಸಃ ಪುಷ್ಟಬುದ್ಧಿಃ ; ಕರುಣಯಾ ಅಬ್ಧಿರಿವ ಕರುಣಾಬ್ಧಿಃ, ದುಷ್ಟಾನಾಂ ಪಕ್ಷಃ ದುಷ್ಟಪಕ್ಷಃ, ತಸ್ಯ ದಮನಂ ದುಷ್ಟಪಕ್ಷದಮನಂ, ಸ್ಥಿರಾ ಚ ಸಾ ಸಂಧಾ ಚ ಸ್ಥಿರಸಂಧಾ, ದುಷ್ಟಪಕ್ಷದಮನೇ ಸ್ಥಿರಸಂಧಾ ದುಷ್ಟಪಕ್ಷದಮನಸ್ಥಿರಸಂಧಾ ತಾಂ;

ಕ್ರಿ.—ಅಕರೋತ್ ಅಕುರುತಾಂ ಅಕುರ್ವನ್, ಅಕರೋಃ ಅಕುರುತಂ ಅಕುರುತ, ಅಕರವಂ ಅಕುರ್ವ ಅಕುರ್ಮ; ಡು (ಕೃ)ಞ್ ಕರಣೇ ಸಕ.। ಅನಿ.। ಉಭ.। to do, to make ಅನದ್ಯತನಭೂತೇ ಲಙ್. ಪ್ರ. ಪು. ಏಕ. (ಪುಷ್ಟಬುದ್ಧಿನಾ ಸ್ಥಿರಸಂಧಾ ಅಕ್ರಿಯತ, ಕರ್ಮಣಿ.)

ಅವ.—ಶ್ರೀಮಧ್ವಾಚಾರ್ಯರು ಉತ್ತರದಿಗ್ವಿಜಯವನ್ನು ಮಾಡಲು ನಿಶ್ಚಯಿಸಿ ಗುರುಗಳಿಗೆ ಗೀತಾಭಾಷ್ಯವನ್ನು ಮಾಡಿಕೊಟ್ಟರು—

ಅನ್ವಯಂ ಸತತಮುಪ್ಯುಪಭುಕ್ತ್ಯಾ
ವಿತ್ತಮುಗ್ರ್ಯಮಿವ ದೂರಯಿಯಾಸುಃ ।

Rarest Archiver

ಜ್ಯಾಯಸೇ ಸಗುರವೇ ಹರಿಗೀತಾ
ಭಾಷ್ಯಮೇಷ ವಿರಚಯ್ಯ ತದಾದಾತ್ ॥೩೨॥

ಅ.ಅ—ಏಷಃ = ಈ ಮಧ್ವಾಚಾರ್ಯರು, ಸಗುರವೇ = ತಮ್ಮ ಗುರುಗಳಾದ ಅಚ್ಯುತಪ್ರೇಕ್ಷಾಚಾರ್ಯರಿಂದ ಸಹಿತರಾದ, ಜ್ಯಾಯಸೇ = ಆಶ್ರಮ ಜ್ಯೇಷ್ಠಯತಿಗಳಿಗೆ, ಹರಿಗೀತಾಭಾಷ್ಯಂ = ಶ್ರೀಕೃಷ್ಣನಿಂದ ಹೇಳಲ್ಪಟ್ಟ ಭಗವದ್ಗೀತೆಯ ಭಾಷ್ಯವನ್ನು, ತದಾ = ಆಗ, ವಿರಚಯ್ಯ = ರಚಿಸಿ, ದೂರಯಿಯಾಸುಃ = ದೂರಕ್ಕೆ ಹೋಗಲು ಇಚ್ಛೆಯುಳ್ಳವನು, ಸತತಂ = ಯಾವಾಗಲೂ, ಉಪಭುಕ್ತ್ವಾ ಅಪಿ = ಅನುಭವಿಸುವುದರಿಂದಲೂ, ಅವ್ಯಯಂ = ಕಡಿಮೆಯಾಗದಿರುವ, ಅಗ್ರ್ಯಂ = ಶ್ರೇಷ್ಠವಾದ, ವಿತ್ತಂ ಇವ = ಹಣವನ್ನೆಂಬಂತೆ, ಅದಾತ್ ಕೊಟ್ಟರು.

ತಾ.—ದೂರದೇಶಕ್ಕೆ ಪ್ರಯಾಣಮಾಡಲಿಚ್ಛಿಸುವವನು ತನ್ನ ಬಂಧುಜನರಿಗೆ ಎಷ್ಟು ದಿನ ಉಪಯೋಗಿಸಿದರೂ ಕಡಿಮೆಯಾಗದ ಅತ್ಯುತ್ತಮವಾದ ಹಣವನ್ನು ಕೊಟ್ಟು ಪರಸ್ಥಳಕ್ಕೆ ಹೋಗುತ್ತಾನೆ. ಅದರಂತೆ ಶ್ರೀಮಧ್ವಾಚಾರ್ಯರು ಬಹುದೂರದ ಬದರಿಕಾಶ್ರಮಕ್ಕೆ ಪ್ರಯಾಣಮಾಡಲು ಇಚ್ಛಿಸಿ ಭಗವದ್ಗೀತೆಗೆ ಭಾಷ್ಯವನ್ನು ಬರೆದು ಅಚ್ಯುತಪ್ರೇಕ್ಷರಿಗೂ ಜ್ಯೇಷ್ಠಯತಿಗಳಿಗೂ ಕೊಟ್ಟರು. ಎಷ್ಟು ಬಾರಿ ಓದಿ ಕೇಳಿ ತಿಳಿದರೂ ಅರ್ಥವು ಕಡಿಮೆಯಾಗದ ಶ್ರೇಷ್ಠವಾದ ಗೀತಾಭಾಷ್ಯವನ್ನು ಕೊಟ್ಟು ಇದನ್ನೋದಿ ತಿಳಿದರೆ ಪರಮಾತ್ಮ ತತ್ತ್ವಜ್ಞಾನವು ಸಂಪೂರ್ಣವಾಗಿ ಬರುತ್ತದೆ ಎಂದು ಹೇಳಿದರು ಎಂದು ಭಾವವು. ಉಪಮಾಲಂಕಾರ.

ವಿ.—ನ ವಿದ್ಯತೇ ವ್ಯಯಃ ಯಸ್ಯ ತತ್ ಅವ್ಯಯಂ, ಯಾತುಂ ಇಚ್ಛುಃ ಯಿಯಾಸುಃ ದೂರಂ ಯಿಯಾಸುಃ ದೂರಯಿಯಾಸುಃ, ಗುರುಣಾ ಸಹ ವರ್ತತೇ ಇತಿ ಸಗುರುಃ ತಸ್ಮೈ, ಹರೇಃ ಗೀತಾ ಹರಿಗೀತಾ ಹರಿಗೀತಾಯಾಃ, ಭಾಷ್ಯಂ ಹರಿಗೀತಾಭಾಷ್ಯಂ, ಅತಿಶಯೇನ ವೃದ್ಧಃ ಜ್ಯಾಯಾನ್,

ಕ್ರಿ.—ಅದಾತ್ ಅದಾತಾಂ ಅದುಃ, ಅದಾಃ ಅದಾತಂ ಅದಾತ, ಅದಾಂ ಅದಾವ ಅದಾಮ ಡು(ದಾ)ಞ್ ದಾನೇ ಸಕ.। ಅನಿ.। ಉಭ.। to give ಭೂತೇ ಲುಙ್ (ಏತೇನ ಹರಿಗೀತಾಭಾಷ್ಯಂ ಅದಾಯಿ ಕರ್ಮಣಿ)

Rarest Archiver

ಅವ.—ಸಕಾರಣವಾಗಿ ಬದರಿಯಾತ್ರೆಗೆ ಅಪ್ಪಣೆಯನ್ನು ಕೇಳಿದಾಗ ಗುರುಗಳು ಅನುಜ್ಞೆಯನ್ನಿತ್ತರು—

ಹೇತುವಾದಿನಿ ವಿಶಂಕಟಬುದ್ಧೌ
ತೀರ್ಥಮರ್ಥಯತಿ ಗಂತುಮನುಜ್ಞಾಮ್ ।
ತಾಂ ದಿದೇಶ ಪುರುಷೋತ್ತಮತೀರ್ಥ
ಶ್ಚಿಂತಯನ್ ಸ ಪುರುಷೋತ್ತಮರಕ್ಷಾಂ ॥೩೩॥

ಅ. ಅ—ಹೇತುವಾದಿನಿ=(ಯಾತ್ರೆಯ) ಕಾರಣವನ್ನು ಹೇಳುತ್ತಿರುವ, ವಿಶಂಕಟಬುದ್ಧೌ =ವಿಶಾಲವಾದ ಜ್ಞಾನವುಳ್ಳ ಶ್ರೀಮಧ್ವಾಚಾರ್ಯರು, ತೀರ್ಥಂ =ಗಂಗಾದಿತೀರ್ಥವನ್ನು ಕುರಿತು, ಗಂತುಂ=ಹೋಗಲು, ಅನುಜ್ಞಾಂ= ಅಪ್ಪಣೆಯನ್ನು, ಅರ್ಥಯತಿ (ಸತಿ)=ಕೇಳುತ್ತಿರಲು, ಸಃ ಪುರುಷೋತ್ತಮ-ತೀರ್ಥಃ=ಆ ಅಚ್ಯುತಪ್ರೇಕ್ಷರು, ಪುರುಷೋತ್ತಮರಕ್ಷಾಂ = ಸರ್ವೋತ್ತಮನಾದ ಶ್ರೀಮನ್ನಾರಾಯಣನ ರಕ್ಷಣೆಯನ್ನು, ಚಿಂತಯನ್ (ಸನ್)=ಆಲೋ-ಚಿಸುತ್ತಾ (ಧ್ಯಾನದಿಂದ ಪ್ರಾರ್ಥಿಸಿ), ತಾಂ=ಆ ಅನುಜ್ಞೆಯನ್ನು, ದಿದೇಶ= ಕೊಟ್ಟರು.

ತಾ.—ಶ್ರೀಮಧ್ವಾಚಾರ್ಯರು ಸರಿಯಾದ ಕಾರಣವನ್ನು ಹೇಳಿ 'ನಾನು ಗಂಗಾದಿ ಪುಣ್ಯತೀರ್ಥಗಳ ಯಾತ್ರೆಯನ್ನು ಮಾಡಿಕೊಂಡು ಬರುವೆ'ನೆಂದು ಹೇಳಿ ಗುರುಗಳಾದ ಶ್ರೀಅಚ್ಯುತಪ್ರೇಕ್ಷಾಚಾರ್ಯರ ಅಪ್ಪಣೆಯನ್ನು ಕೇಳಿದರು. ಆಗ ಅವರು 'ಶ್ರೀಮನ್ನಾರಾಯಣನು ಈ ನನ್ನ ಶಿಷ್ಯನನ್ನು ರಕ್ಷಿಸಲಿ' ಎಂದು ದೇವರನ್ನು ಧ್ಯಾನಮಾಡುತ್ತಾ ಆಚಾರ್ಯರಿಗೆ ಬದರೀಯಾತ್ರೆಗೆ ಅಪ್ಪಣೆ ಕೊಟ್ಟರು.

ದೇಹೋಪಸಂಗ್ರಹಸ್ಯಾಸ್ಯ ಯತ್ಫಲಂ ದೇವಚೋದಿತಂ ।
ತತ್ ಸಿಷಾಧಯಿಷುರ್ಯಾಮಿ ದೇವಗುಹ್ಯೋಪಪಾದಿತಂ ॥

ನಾನು ಈ ದೇಹವನ್ನು ತಾಳಿದುದಕ್ಕೆ ದೇವರು ವಿಧಿಸಿದ ಫಲವೇನಿ-ದೆಯೋ ತೀರ್ಥಯಾತ್ರಾರೂಪವಾದ ಆ ಫಲವನ್ನು ಸಾಧಿಸಲು ಹೊರಟಿದ್ದೇನೆ. ಅಂತಹ ನನ್ನ ಪ್ರಯಾಣದಲ್ಲಿ ದೇವತೆಗಳ ಗೋಪ್ಯವಿಚಾರವೂ ಸಾಧಿಸಲಿಕ್ಕಿದೆ.

Rarest Archiver

ಆದುದರಿಂದ ನನಗೆ ಅಪ್ಪಣೆ ಕೊಡಬೇಕು. (ಭಾ.ಪ್ರ.) ಎಂದು ಆಚಾರ್ಯರು ಗುರುಗಳಿಗೆ ಕಾರಣವನ್ನು ಹೇಳಿದರು ಎಂದು ಭಾವ.

ವಿ.—ಹೇತುಂ ವದತೀತಿ ಹೇತುವಾದೀ ತಸ್ಮಿನ್, ವಿಶಂಕಟಾ ಬುದ್ಧಿಃ ಯಸ್ಯ ಸಃ ತಸ್ಮಿನ್, ವಿಶಂಕಟಂ ಪೃಥು ಬೃಹದ್ ವಿಶಾಲಂ–ಅಮರ. ಪುರುಷೋತ್ತಮಸ್ಯ ರಕ್ಷಾ ಪುರುಷೋತ್ತಮರಕ್ಷಾ ತಾಂ;

ಕ್ರಿ.—ದಿದೇಶ ದಿದಿಶತುಃ ದಿದಿಶುಃ, ದಿದೇಶಿಥ ದಿದಿಶಥುಃ ದಿದಿಶ, ದಿದೇಶ ದಿದಿಶಿವ ದಿದಿಶಿಮ. ದಿಶ ಅತಿಸರ್ಜನೇ (ದಾನೇ) ಸಕ.। ಅನಿ.। ಉಭ.। to grant, to allow. ಭೂತಾನದ್ಯತನಪರೋಕ್ಷೇ ಲಿಟ್.

ಅವ.—ಆಚಾರ್ಯರು ಉತ್ತರದೇಶದ ದಿಗ್ವಿಜಯವನ್ನು ಹೇಗೆ ಮಾಡಿದರು?—

ನೀರಜಾ ಮಲಯಮಂಡಲವೃತ್ತ್ಯಾ
ಶ್ಲಾಘಿತೋ ಭುವಿ ಸದಾಲ್ಯನುಯಾತಃ।
ಸಾಧುಪಾಂಥಪರಿತಾಪಮಪಾಸ್ಯ-
ನ್ನುತ್ತರಾಂ ದಿಶಮಯಾನ್ಮರುದಂಶಃ ॥೩೪॥

ಅ.ಅ.—ನೀರಜಾಃ=ರಜೋಗುಣವಿಲ್ಲದ, ಧೂಳಿಲ್ಲದ, ಮಲಯ= ಮಲಯ ಪರ್ವತದ, ಮಂಡಲ = ಸ್ಥಳದಲ್ಲಿ, ವೃತ್ತ್ಯಾ = ಇರುವುದರಿಂದ, ಮಲಯಪರ್ವತದ ಸಮೀಪದಲ್ಲಿ ಓಡಾಡುವುದರಿಂದ, ಭುವಿ=ಭೂಮಿಯಲ್ಲಿ, ಶ್ಲಾಘಿತಃ=ಹೊಗಳಲ್ಪಟ್ಟ, ಸತ್ = ಸಜ್ಜನರ, ಆಲಿ = ಸಮೂಹದಿಂದ, ಅನುಯಾತಃ=ಹಿಂಬಾಲಿಸಲ್ಪಟ್ಟ, (ಸದಾ=ಯಾವಾಗಲೂ, ಅಲಿ=ದುಂಬಿಗಳಿಂದ, ಅನುಯಾತಃ=ಅನುಸರಿಸಲ್ಪಟ್ಟ) ಮರುದಂಶಃ = ವಾಯುದೇವರ ಅವತಾರರಾದ ಶ್ರೀಮಧ್ವಾಚಾರ್ಯರು, ಗಾಳಿಯ ಒಂದು ಅಂಶವು, ಸಾಧು= ಸಜ್ಜನರೆಂಬ, ಪಾಂಥ=ಮಾರ್ಗಸ್ಥರ, ಪರಿತಾಪಂ=ದುಃಖವನ್ನು, (ಸಾಧು =ಚೆನ್ನಾಗಿ, (ಕ್ರಿ.ವಿ) ಪಾಂಥ=ಮಾರ್ಗಸ್ಥರ, ಪರಿತಾಪಂ=ಬಿಸಿಲಿನ ತಾಪವನ್ನು), ಅಪಾಸ್ಯನ್=ಹೋಗಲಾಡಿಸುತ್ತಾ, ಉತ್ತರಾಂ ದಿಶಂ = ಉತ್ತರ ದಿಕ್ಕನ್ನು ಕುರಿತು, ಅಯಾತ್=ಹೋದರು (ಹೋಯಿತು).

Rarest Archiver

ತಾ.—ಧೂಳಿಯ ಸಂಪರ್ಕವಿಲ್ಲದ ಪರಿಶುದ್ಧವಾದ ಗಾಳಿಯು ಮಲಯ ಪರ್ವತಪ್ರಾಂತದಲ್ಲಿ ಸಂಚರಿಸಿ ಅಲ್ಲಿರುವ ಚಂದನವೃಕ್ಷಗಳ ಗಂಧವನ್ನು ಹೊತ್ತು ತಂದು ಜನರ ಆದರಕ್ಕೆ ಪಾತ್ರವಾಗುತ್ತದೆ. ನಿತ್ಯದಲ್ಲೂ ಅದನ್ನು ಅನುಸರಿಸಿ ದುಂಬಿಗಳು ಬರುತ್ತಿರುತ್ತವೆ. ಅದು ಪ್ರಯಾಣಿಕರ ದೇಹತಾಪವನ್ನು ಪರಿಹರಿಸಿ ಉತ್ತರದಿಕ್ಕಿಗೆ ಪ್ರಯಾಣಮಾಡುವಂತೆ ಆಚಾರ್ಯರು ಉತ್ತರದಿಕ್ಕಿಗೆ ಪ್ರಯಾಣ ಮಾಡಿದರು.

ಆಚಾರ್ಯರು ರಜೋಗುಣ ಸಂಪರ್ಕವಿಲ್ಲದೆ ಶುದ್ಧಸತ್ತ್ವಗುಣಸಂಪನ್ನರಾದುದರಿಂದ ನೀರಜಸ್ಕರು, ಮುಖ್ಯಪ್ರಾಣನ ಅವತಾರರಾದುದರಿಂದ ಅವರೂ ಮರುದಂಶರು. ಅವರು ಮಲಯಪರ್ವತಸಮೀಪದಲ್ಲಿ ದಕ್ಷಿಣದೇಶದಲ್ಲಿ ವಾದಿಗಳನ್ನು ಜಯಿಸಿ ಸಜ್ಜನರ ಸ್ತೋತ್ರಕ್ಕೆ ಪಾತ್ರರಾದರು. ತನ್ನನ್ನು ಅನುಸರಿಸಿ ಬಂದ ಸಜ್ಜನರ ಸಮೂಹದಿಂದ ಕೂಡಿಕೊಂಡು ಸಜ್ಜನರಾದ ಮಾರ್ಗಸ್ಥರ ಸಂಸಾರತಾಪವನ್ನು ಚೆನ್ನಾಗಿ ಪರಿಹರಿಸಿದರು. ಹೀಗೆ ಮಾಡುತ್ತಾ ಮರುತನ ಅಂಶರಾದ ಅವರು ಮಾರುತನ (ಗಾಳಿಯ) ಅಂಶದಂತೆ ಮುಂದುವರಿದರು. ಇಲ್ಲಿ ಎರಡನೆಯ ಅರ್ಥವು ಧ್ವನಿತವಾಗುತ್ತದೆ.

ವಿ.— ನಿರ್ಗತಂ ರಜಃ ಯಸ್ಮಾತ್ ಸಃ ನೀರಜಾಃ, ಮಲಯಸ್ಯ ಮಂಡಲಂ ಮಲಯಮಂಡಲಂ, ಮಲಯಮಂಡಲೇ ವೃತ್ತಿಃ ಮಲಯಮಂಡಲ-ವೃತ್ತಿಃ ತಯಾ, ಸತಾಂ ಆಲಿಃ ಸದಾಲಿಃ ಸದಾಲ್ಯಾ ಅನುಯಾತಃ ಸದಾಲ್ಯನು-ಯಾತಃ, ಮರುದಂಶಃ ಎಂಬ ಪದಕ್ಕೆ ಗಾಳಿಯ ಒಂದಂಶ ಎಂಬ ಅರ್ಥ ಹೇಳುವಾಗ ಸದಾ, ಆಲಿಭಿಃ ಅನುಯಾತಃ ಅಲ್ಯನುಯಾಯತಃ, ಸಾಧವ ಏವ ಪಾಂಥಾಃ ಸಾಧುಪಾಂಥಾಃ ಸಾಧುಪಾಂಥಾನಾಂ ಪರಿತಾಪಃ ಸಾಧುಪಾಂಥಪರಿ-ತಾಪಃ ತಂ, ಮರುತಃ ಅಂಶಃ ಮರುದಂಶಃ,

ಕ್ರಿ.—ಅಯಾತ್ ಅಯಾತಾಂ ಅಯುಃ ಅಯಾನ್, ಅಯಾಃ ಅಯಾತಂ ಅಯಾತ, ಅಯಾಂ ಅಯಾವ ಅಯಾಮ, ಯಾ ಪ್ರಾಪಣೇ. ಅದಾದಿ ಸಕ. ಅನಿ.। ಪರ.। to go, ಅನದ್ಯತನಭೂತೇ ಲಙ್.

ಅನ.—ಆಚಾರ್ಯರು ಅಲ್ಲಲ್ಲಿರುವ ತೀರ್ಥಗಳನ್ನೂ ಪವಿತ್ರೀಕರಿಸಿದರು—

Rarest Archiver

ಬುದ್ಧಿಶುದ್ಧಿಕರಗೋನಿಕರಾಢ್ಯಂ
ತೀರ್ಥಜಾತಮುಭಯಂ ಚ ಧರಣ್ಯಾಂ ।
ಆತ್ಮಮಜ್ಜನತ ಏವ ನಿಕಾಮಂ
ಪರ್ಯಶೋಧಯದಮಂದಮುನೀಷಃ ॥೩೫॥

ಅ. ಅ.—ಅಮಂದಮುನೀಷಃ = ಶ್ರೀಪೂರ್ಣಪ್ರಜ್ಞಾಚಾರ್ಯರು, ಧರಣ್ಯಾಂ = ಭೂಮಿಯಲ್ಲಿ, ಬುದ್ಧಿಶುದ್ಧಿಕರ = ಮನಸ್ಸನ್ನು ಶುದ್ಧಿಗೊಳಿಸುವ, ಗೋ = ಮಾತಿನ, ನೀರಿನ, ನಿಕರ = ಸಮೂಹದಿಂದ, ಆಢ್ಯಂ = ಸಂಪನ್ನವಾದ, (ತುಂಬಿರುವ), ಉಭಯಂ = ಎರಡು ಪ್ರಕಾರವಾದ, ತೀರ್ಥಜಾತಂ ಚ = ಶಾಸ್ತ್ರಸಮೂಹವನ್ನೂ, ಪುಣ್ಯನದಿಮೊದಲಾದವುಗಳ ಸಮೂಹವನ್ನೂ, ಆತ್ಮ = ತನ್ನ, ಮಜ್ಜನತಃ ಏವ = ವಿಮರ್ಶೆಯಿಂದಲೇ, ಸ್ನಾನದಿಂದಲೇ, ನಿಕಾಮಂ = ಅತ್ಯಂತವಾಗಿ, ಪರ್ಯಶೋಧಯತ್ = ಪವಿತ್ರೀಕರಿಸಿದರು.

ತಾ.— 'ತೀರ್ಥೀಕುರ್ವಂತಿ ತೀರ್ಥಾನಿ ಸ್ವಾಂತಃಸ್ಥೇನ ಗದಾಭೃತಾ' ಎಂಬ ಭಾಗವತವಾಕ್ಯದಂತೆ ಭಗವದ್ಭಕ್ತರು ತಮ್ಮ ಸ್ನಾನಾದಿಗಳಿಂದ ತೀರ್ಥಗಳನ್ನು ಶುದ್ಧಿಗೊಳಿಸುತ್ತಾರೆ. ಆದರಂತೆ ಶ್ರೀಮಧ್ವಾಚಾರ್ಯರು ಭಾರತ ಭೂಮಿಯ ಉತ್ತರದಲ್ಲಿರುವ ಅಂತಃಕರಣವನ್ನು ಪರಿಶುದ್ಧಗೊಳಿಸುವ ಜಲ ಸಮೂಹದಿಂದ ತುಂಬಿರುವ ಅನೇಕ ತೀರ್ಥಗಳನ್ನು ತನ್ನ ಸ್ನಾನದಿಂದಲೇ ಮತ್ತಷ್ಟು ಪವಿತ್ರಗೊಳಿಸಿದರು. ನಮ್ಮ ಭಾರತಭೂಮಿಯಲ್ಲಿ ಸಾತ್ತ್ವಿಕನಾದ ಮಾನವನ ಅಂತಃಕರಣವನ್ನು ಪವಿತ್ರಗೊಳಿಸುವ ಉತ್ತಮವಚನಗಳಿಂದ ಕೂಡಿರುವ ಭಾಗವತ ಮಹಾಭಾರತ ಮೊದಲಾದ ಶಾಸ್ತ್ರಗಳಿವೆ. ಆಚಾರ್ಯರು ಆ ಶಾಸ್ತ್ರಗಳ ಪೂರ್ವೋತ್ತರ ವಿಚಾರಗಳನ್ನು ಮಾಡಿ, ಆ ಶಾಸ್ತ್ರಗಳ ಸರಿಯಿಲ್ಲದ ಟೀಕಾ, ವ್ಯಾಖ್ಯಾನಗಳನ್ನು ನಿರಾಕರಿಸಿದರು. ಅಲ್ಲಲ್ಲಿ ಪ್ರಕ್ಷಿಪ್ತವಾದ (ಸೇರಿಸಿರುವ) ಗ್ರಂಥಗಳನ್ನು ತೆಗೆದು ಹಾಕಿದರು. ವೇದವ್ಯಾಸರಿಗೆ ಸಂಮತವಾದ ಪಾಠವನ್ನು ಸ್ಥಿರಗೊಳಿಸಿದರು. ಹೀಗೆ ಜಲಭರಿತವಾದ ತೀರ್ಥ, ಶಾಸ್ತ್ರಗಳೆಂಬ ತೀರ್ಥ ಎರಡನ್ನೂ ಪರಿಶೋಧಿಸಿದರು. (ದೀಪಕಾಲಕಾಂರ).

ವಿ.—ಬುದ್ಧೇಃ ಶುದ್ಧಿಃ ಬುದ್ಧಿಶುದ್ಧಿಃ, ತಾಂ ಕರೋತೀತಿ ಬುದ್ಧಿಶುದ್ಧಿಕರಃ, ಗವಾಂ ನಿಕರಃ ಗೋನಿಕರಃ, ಬುದ್ಧಿಶುದ್ಧಿಕರಶ್ಚಾಸೌ ಗೋನಿಕರಶ್ಚ

Rarest Archiver

ಬುದ್ಧಿಶುದ್ಧಿಕರಗೋನಿಕರಃ, ತೇನ ಆಢ್ಯಂ, ಗೋ=ಮಾತು, ನೀರು, ತೀರ್ಥಾನಾಂ ಜಾತಂ ತೀರ್ಥಜಾತಂ ತತ್, ತೀರ್ಥ=ಶಾಸ್ತ್ರ, ಪವಿತ್ರಜಲ; ಆತ್ಮನಃ ಮಜ್ಜನಂ ಆತ್ಮಮಜ್ಜನಂ, ತಸ್ಮಾತ್ ಇತಿ ಆತ್ಮಮಜ್ಜನತಃ, ಅಮಂದಾ (ಪೂರ್ಣಾ) ಮನೀಷಾ ಯಸ್ಯ ಸಃ ಅಮಂದಮನೀಷಃ,

ಕ್ರಿ.—ಪರ್ಯಶೋಧಯತ್, ಪರಿ+ಅಶೋಧಯತ್ ಅಶೋಧಯತಾಂ ಅಶೋಧಯನ್, ಅಶೋಧಯಃ ಅಶೋಧಯತಂ ಅಶೋಧಯತ, ಅಶೋಧಯಂ ಅಶೋಧಯಾವ ಅಶೋಧಯಾಮ, ಶುಧ ಶೌಚೇ. ಅಕ.। ಅನಿ.। ಪರ.। to be pure, to have doubts removed. to purify. ಣಿಜಂತ. ಪರಿಉಪಸರ್ಗ ಅನದ್ಯತನಭೂತೇ ಲಙ್.

ಅವ.—ಆಚಾರ್ಯರು ಪ್ರಯಾಣಮಾಡುತ್ತಾ ಕ್ರಮವಾಗಿ ಗಂಗೆಯನ್ನು ದಾಟಿದರು—

ವಾಸುದೇವಪದಸಂತತಸಂಗೀ
ತೇಜಸಾಪ್ಯಲಮಧಃಕೃತಶರ್ವಃ ।
ಅತ್ಯವರ್ತತ ನಿತಾಂತಮಥಾಸೌ
ಗಾಂಗಮೋಘಮಘನಾಶನಕೀರ್ತಿಃ ॥೩೬॥

ಅ.ಅ.—ಅಥ=ಅನಂತರ, ವಾಸುದೇವ=ಶ್ರೀಹರಿಯ, ಪದ=ಪಾದಗಳ, ಸಂತತಸಂಗೀ=ನಿರಂತರಸಂಪರ್ಕವುಳ್ಳ, ತೇಜಸಾಪಿ=ಸಾಮರ್ಥ್ಯದಿಂದಲೂ, ಅಲಂ=ಚೆನ್ನಾಗಿ, ಅಧಃಕೃತಶರ್ವಃ=ಕಡಿಮೆಯಾಗಿ ಮಾಡಲ್ಪಟ್ಟ ಮಹೇಶ್ವರನುಳ್ಳ, ಅಘನಾಶನಕೀರ್ತಿಃ=ಪಾಪಪರಿಹಾರಕವಾದ ಕೀರ್ತಿಯುಳ್ಳ, ಅಸೌ= ಈ ಶ್ರೀಮಧ್ವಾಚಾರ್ಯರು, ಗಾಂಗಂ ಓಘಂ = ಗಂಗೆಯಸಂಬಂಧಿಯಾದ ಪ್ರವಾಹವನ್ನು, ನಿತಾಂತಂ = ಅತಿಶಯವಾಗಿ, ಅತ್ಯವರ್ತತ=ಮೀರಿಸಿದರು (ದಾಟಿದರು).

ತಾ.—ಈ ರೀತಿ ಉತ್ತರದೇಶದಲ್ಲಿ ಸಂಚರಿಸುತ್ತಾ, ಕೇಳಿದ ಮಾತ್ರದಿಂದ ಪಾಪವನ್ನು ಪರಿಹರಿಸತಕ್ಕಕೀರ್ತಿಸಂಪನ್ನರೂ, ವಾಸುದೇವರೂಪಿಯಾದ ಪರಮಾತ್ಮನ ಪಾದಗಳಲ್ಲಿ ನಿತ್ಯದಲ್ಲಿಯೂ ಆಸಕ್ತರೂ, ತನ್ನ ಸಾಮರ್ಥ್ಯದಿಂದ

Rarest Archiver

ಮಹಾರುದ್ರದೇವರನ್ನು ತಿರಸ್ಕರಿಸುವವರೂ ಆಗಿರುವ ಶ್ರೀಮಧ್ವಾಚಾರ್ಯರು ಗಂಗೆಯ ಪ್ರವಾಹವನ್ನು ಸುಲಭವಾಗಿಯೇ ದಾಟಿದರು. (ಗಂಗೆಯ ಪ್ರವಾಹ ವನ್ನು ಮೀರಿಸಿದರು).

ಗಂಗೆಯು ಶ್ರೀಹರಿಯಪಾದಗಳಿಂದ ಹುಟ್ಟಿದ್ದರೂ ಕೆಳಗೆ ಇಳಿದುಬಂದುದ ರಿಂದ ನಿತ್ಯದಲ್ಲಿ ತನ್ನ ತಂದೆಯ ಪಾದಸಂಗವಿಲ್ಲದವಳು, ರುದ್ರದೇವರ ತಲೆಯ ಮೇಲೆ ಕುಳಿತವಳು, ಪಾಪವನ್ನು ಪರಿಹರಿಸುವಕೀರ್ತಿಯುಳ್ಳವಳು, ಆಚಾರ್ಯ ರಾದರೋ ನಿತ್ಯವೂ ಶ್ರೀಹರಿಯ ಪಾದಸಂಗವುಳ್ಳವರು, ಗಂಗಾಧರನನ್ನು ಗದಾ ಧರನ ಅನುಗ್ರಹದಿಂದ ತನ್ನ ತೇಜಸ್ಸಿನಿಂದಲೇ ತಿರಸ್ಕರಿಸಿದವರು. ಶ್ರವಣಮಾತ್ರ ದಿಂದ ಗಂಗೆಗಿಂತಲೂ ಅತಿಶಯವಾಗಿ ಪಾಪನಾಶಕವಾದ ಕೀರ್ತಿಸಂಪನ್ನರು. ಹೀಗೆ ತನ್ನ ಗುಣಗಳಿಂದ ಗಂಗೆಯನ್ನು ಜಯಿಸಿದರು. ಗಂಗೆಯನ್ನು ದಾಟಿ ಆಚಾರ್ಯರು ಮುಂದೆ ಉತ್ತರದೇಶಕ್ಕೆ ಪ್ರಯಾಣಮಾಡಿದರು ಎಂದು ಭಾವ. (ವ್ಯತಿರೇಕಾಲಂಕಾರ).

ವಿ.—ವಾಸುದೇವಸ್ಯ ಪದೇ ವಾಸುದೇವಪದೇ, ಸಂತತಂ ಸಂಗಃ ಅಸ್ಯ ಅಸ್ತೀತಿ ಸಂತತಸಂಗೀ, ವಾಸುದೇವಪದಯೋಃ ಸಂತತಸಂಗೀ ವಾಸುದೇವಪದ-ಸಂತತಸಂಗೀ,ಅಧಃಕೃತಃ ಶರ್ವಃ ಯೇನ ಸಃ ಅಧಃಕೃತಶರ್ವಃ, ಗಂಗಾಯಾಃ ಅಯಂ ಗಾಂಗಃ ತಂ, ಅಘಾನಾಂ ನಾಶನಂ ಯಯಾ ಸಾ ಅಘನಾಶನಾ, ತಾದೃಶೀ ಕೀರ್ತಿಃ ಯಸ್ಯ ಸಃ ಅಘನಾಶನಕೀರ್ತಿಃ.

ಕ್ರಿ.—ಅತಿ + ಅವರ್ತತ, ಅವರ್ತೇತಾಂ ಅವರ್ತಂತ, ಅವರ್ತಥಾಃ ಅವರ್ತೇಥಾಂ ಅವರ್ತಧ್ವಂ, ಅವರ್ತೇ ಅವರ್ತಾವಹಿ ಅವರ್ತಾಮಹಿ, ವೃತು (ವೃತ್) ವರ್ತನೇ ಅಕ.। ಸೇಟ್.। ಆತ್ಮ.। to exist, to happen, to live on. ಅನದ್ಯತನಭೂತೇ ಲಙ್.

ಅವ.—ಆಚಾರ್ಯರು ಚಿಕ್ಕಬದರಿಕಾಶ್ರಮದ ಬಳಿಗೆ ಪ್ರಯಾಣ ಮಾಡಿದರು—

ತತ್ರ ತತ್ರ ಸ ಜಗತ್ತ್ರಯಚಿತ್ರಂ
ಕರ್ಮ ಶರ್ಮದಮನುಸ್ಮೃತಿಮಾತ್ರಾತ್ ।

Rarest Archiver

ಸಂಚರನ್ ವಿದಧದಾಪ ನರಾಣಾಂ
ಗೋಚರಂ ಬದರಿಕಾಶ್ರಮಪಾರ್ಶ್ವಮ್ ||೩೭||

ಅ.ಅ—ಸಃ = ಆ ಶ್ರೀಮಧ್ವಾಚಾರ್ಯರು, ತತ್ರ ತತ್ರ = ಆಯಾ ತೀರ್ಥ ಕ್ಷೇತ್ರಗಳಲ್ಲಿ, ಸಂಚರನ್ = ಸಂಚರಿಸುತ್ತಾ, ಅನುಸ್ಮೃತಿಮಾತ್ರಾತ್ = ಸ್ಮರಣ ಮಾತ್ರದಿಂದ, ಶರ್ಮದಂ = ಸುಖವನ್ನುಂಟುಮಾಡುವ, ಜಗತ್ತ್ರಯಚಿತ್ರಂ = ಮೂರುಲೋಕಗಳಲ್ಲಿಯೂ ಆಶ್ಚರ್ಯಕರವಾದ, ಕರ್ಮ = ವ್ಯಾಪಾರವನ್ನು, ವಿದಧತ್ = ಮಾಡುತ್ತಾ, ನರಾಣಾಂ = ಮನುಷ್ಯರಿಗೆ, ಗೋಚರಂ = ಹೋಗಲು ಯೋಗ್ಯವಾದ, ಬದರಿಕಾಶ್ರಮಪಾರ್ಶ್ವಂ = ಬದರಿಕಾಶ್ರಮದ ಸಮೀಪವನ್ನು, ಆಪ = ತಲುಪಿದರು.

ತಾ—ಶ್ರೀಮಧ್ವಾಚಾರ್ಯರು ಆಯಾಯ ತೀರ್ಥಕ್ಷೇತ್ರಗಳಲ್ಲಿ ಸಂಚರಿಸುತ್ತಾ, ಮೂರುಲೋಕಗಳಲ್ಲಿಯೂ ಆಶ್ಚರ್ಯಕರವಾದ ಮತ್ತು ನೆನೆಸಿದ ಮಾತ್ರದಿಂದಲೇ ಸಜ್ಜನರಿಗೆ ಸುಖವನ್ನು ಕೊಡುವ ಕಾರ್ಯಗಳನ್ನು ನಡೆಸುತ್ತಿದ್ದರು. ಹೀಗೆ ಸಂಚರಿಸುತ್ತಾ ಅವರು ಮನುಷ್ಯರು ಹೋಗಬಹುದಾದ ಬದರಿಕಾಶ್ರಮದ ಬಳಿಗೆ ಪ್ರಯಾಣಮಾಡಿದರು. ಹಿಮಾಲಯಪರ್ವತದ ದಕ್ಷಿಣ ಪಾರ್ಶ್ವದಲ್ಲಿ ಮನುಷ್ಯರು ಹೋಗಬಹುದಾದ ನರನಾರಾಯಣಾಶ್ರಮವೆಂದು ಪ್ರಸಿದ್ಧವಾದ ಚಿಕ್ಕಬದರಿಗೆ ಹೋದರು ಎಂದು ಭಾವ.

ವಿ.—ಜಗತಾಂ ತ್ರಯಂ ಜಗತ್ತ್ರಯಂ ಜಗತ್ತ್ರಯೇ ಚಿತ್ರಂ ಜಗತ್ತ್ರಯಚಿತ್ರಂ ತತ್, ಶರ್ಮ ದದಾತೀತಿ ಶರ್ಮದಂ ತತ್, ಕೇವಲಂ ಅನುಸ್ಮೃತಿಃ ಅನುಸ್ಮೃತಿಮಾತ್ರಂ ತಸ್ಮಾತ್, ಬದರಿಕಾಣಾಂ ಆಶ್ರಮಃ, ಬದರಿಕಾಶ್ರಮಸ್ಯ ಪಾರ್ಶ್ವಂ ಬದರಿಕಾಶ್ರಮಪಾರ್ಶ್ವಂ ತತ್.

ಕ್ರಿ.—ಆಪ, ಸರ್ಗ ೫ ಶ್ಲೋ ೫೦ ನೋಡಿರಿ.

ಅವ.—ಬದರಿಕಾಶ್ರಮದಲ್ಲಿ ಬದರೀನಾರಾಯಣದೇವರನ್ನು ವಂದಿಸಿ ತಾನು ಮಾಡಿದ ಗೀತಾಭಾಷ್ಯವನ್ನು ಸಮರ್ಪಿಸಿದರು—

ಮಂಡಯನ್ ಭರತಖಂಡಮಖಂಡಂ
ನಾದಿರಾಯಣಪದೋಽತ್ರ ಪರೋ ಯಃ |

Rarest Archives

ತಂ ನಮನ್ ಪ್ರಚುರಧೀರ್ಹರಿಗೀತಾ
ಭಾಷ್ಯಮಾರ್ಪಯದುಪಾಯನಮಸ್ಮೈ ॥೩೮॥

ಅ. ಅ.—ಅಖಂಡಂ = ಸಮಸ್ತವಾದ, ಭರತಖಂಡಂ=ಭರತಖಂಡವನ್ನು, ಮಂಡಯನ್ = ಅಲಂಕರಿಸುತ್ತಿರುವ, ಯಃ = ಯಾವ, ನಾದಿರಾಯಣಪದಃ = ನಾ ಎಂಬಅಕ್ಷರವು ಆದಿಯಲ್ಲಿ ಉಳ್ಳ ರಾಯಣ ಎಂಬ ನಾಮವುಳ್ಳ, ಪರಃ = ಪರಮಾತ್ಮನು, ಅತ್ರ = ಈ ಕ್ಷೇತ್ರದಲ್ಲಿ (ವರ್ತತೇ) ಸನ್ನಿಹಿತನಾಗಿದ್ದಾನೋ, ತಂ = ಅಂತಹ ಪರಮಾತ್ಮನನ್ನು, ನಮನ್ = ನಮಸ್ಕರಿಸುವವರಾಗಿ, ಪ್ರಚುರಧೀಃ = ಸರ್ವಜ್ಞಾಚಾರ್ಯರು, ಅಸ್ಮೈ = ಆ ನಾರಾಯಣದೇವರಿಗೆ, ಹರಿಗೀತಾ ಭಾಷ್ಯಂ = ತಾನು ಮಾಡಿದ್ದ ಭಗವದ್ಗೀತೆಯ ಭಾಷ್ಯವನ್ನು, ಉಪಾಯನಂ = ಕಾಣಿಕೆಯನ್ನಾಗಿ, ಆರ್ಪಯತ್ = ಸಮರ್ಪಿಸಿದರು.

ತಾ.—ಹಿಮವತ್‌ಪರ್ವತದಿಂದ ರಾಮಸೇತುಪರ್ಯಂತವಾಗಿ ಅನೇಕ ಸಹಸ್ರಯೋಜನಪರ್ಯಂತವಾಗಿ ಬಿಲ್ಲಿನ ಆಕಾರದಲ್ಲಿ ಭರತಖಂಡವಿದೆ. ಇಂತಹ ಭರತಖಂಡವನ್ನು. ನಾರಾಯಣದೇವರು ಉತ್ತರದ ತುದಿಯಲ್ಲಿ ಅಲಂಕರಿಸುತ್ತಿದ್ದಾರೆ. ಆ ದೇವರನ್ನು ಶ್ರೀಮಧ್ವಾಚಾರ್ಯರು ವಂದಿಸಿದರು. ಭಗವದ್ಗೀತೆಗೆ ತಾನು ಹೊಸದಾಗಿ ಮಾಡಿದ ಭಾಷ್ಯವನ್ನು ಪರಮಾತ್ಮನಿಗೆ ಕಾಣಿಕೆಯಾಗಿ ಅರ್ಪಿಸಿದರು. 'ರಿಕ್ತಹಸ್ತೇನ ನೋಪೇಯಾತ್ ರಾಜಾನಂ ದೈವತಂ ಗುರುಂ' ಬರಿಗೈಯಿಂದ, ರಾಜನ, ದೇವರ ಮತ್ತು ಗುರುಗಳ ಬಳಿಗೆ ಹೋಗಬಾರದು ಎಂಬುದಾಗಿ ಪ್ರಮಾಣವಿರುವುದರಿಂದ ಭಾಷ್ಯವೆಂಬ ಕಾಣಿಕೆಯನ್ನು ಶ್ರೀಮಧ್ವಾಚಾರ್ಯರು ಆರ್ಪಿಸಿದರು ಎಂದು ಭಾವ.

ವಿ.—ನಃ ಆದಿಃ ಯಸ್ಯ ತತ್ ನಾದಿ, ರಾಯಣ ಇತಿ ಪದಂ, ರಾಯಣಪದಂ, ನಾದಿರಾಯಣಪದಂ ಯಸ್ಯ ಸಃ ನಾದಿರಾಯಣಪದಃ, ಪ್ರಚುರಾ ಧೀಃ ಯಸ್ಯ ಸಃ ಪ್ರಚುರಧೀಃ, ಹರೇಃ ಗೀತಾ ಹರಿಗೀತಾ, ಹರಿಗೀತಾಯಾಃ ಭಾಷ್ಯಂ ಹರಿಗೀತಾಭಾಷ್ಯಂ ತತ್,

ಕ್ರಿ.—ಆರ್ಪಯತ್ ಆರ್ಪಯತಾಂ ಆರ್ಪಯನ್, ಆರ್ಪಯಃ ಆರ್ಪಯತಂ ಆರ್ಪಯತ, ಆರ್ಪಯಂ ಆರ್ಪಯಾವ ಆರ್ಪಯಾಮ; ಋ ಗತಿ-

Rarest Archiver

ಪ್ರಾಪಣಯೋಃ (ಋಚ್ಛ್) ಸಕ.। ಅನಿ.। ಪರ.। to acquire. ಣಿಜಂತ. ಅನದ್ಯತನಭೂತೇ ಲಙ್.

ಅವ.—ಆಚಾರ್ಯರು ಮುಂದೆ ಏನು ಮಾಡಿದರು ?—

ಪ್ರೀತಯೇಽಸ್ಯ ಪುರತೋ ವರಭಾಷ್ಯಂ
ವಾಚಯನ್ ಸ ಜನತಾಮಪಸಾರ್ಯ ।
ವಚ್ಮಿ ಶಕ್ತಿತ ಉರುಕ್ರಮಗೀತಾ
ಭಾವಮಿತ್ಯಕಥಯತ್ ಪುರುಸಂಖ್ಯಃ ॥೩೯॥

ಅ.ಅ.— ಸಃ ಪುರುಸಂಖ್ಯಃ = ಆ ಶ್ರೀಪೂರ್ಣಪ್ರಜ್ಞಾಚಾರ್ಯರು, ಜನತಾಂ = ಜನರ ಗುಂಪನ್ನು, ಅಪಸಾರ್ಯ = ದೂರಸರಿಸಿ, ಅಸ್ಯ = ಈ ಶ್ರೀನಾರಾಯಣದೇವರ, ಪ್ರೀತಯೇ = ಪ್ರೀತಿಗೋಸ್ಕರ, ಪುರತಃ = ಮುಂದೆ, ವರಭಾಷ್ಯಂ = ಉತ್ತಮವಾದ ಗೀತಾಭಾಷ್ಯವನ್ನು, ವಾಚಯನ್ (ಸನ್) = ಓದುವವರಾಗಿ, ಉರುಕ್ರಮ = ಶ್ರೀಪರಮಾತ್ಮನ, ಗೀತಾಭಾವಂ = ಗೀತಾ ಗ್ರಂಥದ ಅಭಿಪ್ರಾಯವನ್ನು, ಶಕ್ತಿತಃ = (ನನ್ನ) ಸಾಮರ್ಥ್ಯಾನುಸಾರವಾಗಿ, ವಚ್ಮಿ ಇತಿ = ಹೇಳುತ್ತೇನೆ ಎಂದು, ಅಕಥಯತ್ = ನುಡಿದರು.

ತಾ.—ಶ್ರೀಮಧ್ವಾಚಾರ್ಯರು ಬದರೀನಾರಾಯಣದೇವರ ಸನ್ನಿಧಿಯಲ್ಲಿ ಸೇರಿದ ಜನರ ಗುಂಪನ್ನು ದೂರಸರಿಸಿ, ಶ್ರೀಬದರೀನಾರಾಯಣದೇವರ ಪ್ರೀತಿಗಾಗಿ ದೇವರ ಎದುರಿನಲ್ಲಿ ತಾನು ರಚಿಸಿದ ಆ ಉತ್ತಮವಾದ ಗೀತಾಭಾಷ್ಯವನ್ನು ಓದಲು ಆರಂಭಿಸಿದರು. 'ನಾನು ಶ್ರೀಕೃಷ್ಣನು ರಚಿಸಿದ ಗೀತೆಯ ಅಭಿಪ್ರಾಯವನ್ನು ನನ್ನ ಶಕ್ತಿಯನ್ನು ಅನುಸರಿಸಿ ಹೇಳುವೆನು. ದೇವರ ಗಂಭೀರವಾದ ಗೀತಾವಚನಗಳಿಗೆ ಅನೇಕ ಅಭಿಪ್ರಾಯಗಳು ಇವೆ. ಆದರೂ ನನಗೆ ದೇವರು ಕೊಟ್ಟಿರುವ ಅಲ್ಪಶಕ್ತಿಯನ್ನು ಅನುಸರಿಸಿ, ನನ್ನ ಮನಸ್ಸಿನಲ್ಲಿ ಹೊಳೆದ ಅಭಿಪ್ರಾಯವನ್ನು ಹೇಳುವೆನು' ಎಂದು ಆಚಾರ್ಯರು ಗೀತಾಭಾಷ್ಯದ ಮಂಗಳ ಶ್ಲೋಕದಲ್ಲಿ ಹೇಳಿದರು. 'ತಾನು ಸರ್ವಜ್ಞನಾಗಿದ್ದರೂ ಯಥಾಶಕ್ತಿ ಹೇಳುತ್ತೇನೆ' ಎಂಬ ಗ್ರಂಥಾರಂಭದ ವಚನದಿಂದ ಸ್ವಾಹಂಕಾರಖಂಡನವನ್ನು ಮಾಡಿಕೊಂಡಿದ್ದರು ಎಂದು ತಾತ್ಪರ್ಯವು.

Rarest Archiver

ದೇವಂ ನಾರಾಯಣಂ ನತ್ವಾ ಸರ್ವದೋಷವಿವರ್ಜಿತಂ ।
ಪರಿಪೂರ್ಣಂ ಗುರೂಂಶ್ಚಾನ್ ಗೀತಾರ್ಥಂ ವಕ್ಷ್ಯಾಮಿ ಶಕ್ತಿತಃ ॥

ಇದು ಗೀತಾಭಾಷ್ಯದ ಪ್ರಥಮ ಶ್ಲೋಕವು. ಸರ್ವದೋಷದೂರನಾದ ಗುಣಪರಿಪೂರ್ಣನಾದ ಶ್ರೀಮನ್ನಾರಾಯಣನನ್ನೂ, ನನ್ನ ಗುರುವಾದ ಶ್ರೀವೇದವ್ಯಾಸರನ್ನೂ ವಂದಿಸಿ, ಅನಂತರ ಶಕ್ತಿಯನ್ನು ಅನುಸರಿಸಿ ಗೀತಾರ್ಥವನ್ನು ಹೇಳುತ್ತೇನೆ ಎಂದು ಅದರ ತಾತ್ಪರ್ಯವು.

ವಿ.—ವರಂ ಚ ತತ್ ಭಾಷ್ಯಂ ಚ ವರಭಾಷ್ಯಂ ತತ್, ಜನಾನಾಂ ಸಮೂಹಃ ಜನತಾ ತಾಂ, ಉರುಃ ಕ್ರಮಃ ಯಸ್ಯ ಸಃ ಉರುಕ್ರಮಃ, ಉರುಕ್ರಮಸ್ಯ ಗೀತಾ ಉರುಕ್ರಮಗೀತಾ, ತಸ್ಯಾಃ ಭಾವಃ ತಂ, ಪುರುಃ ಸಂಖ್ಯಾ (ಜ್ಞಾನಂ) ಯಸ್ಯ ಸಃ ಪುರುಸಂಖ್ಯಃ.

ಶ್ರಿ. — ವಚ್ಮಿ, ವಕ್ತಿ ವಕ್ತಃ, ವಕ್ಷಿ ವಕ್ಥಃ, ವಚ್ಮಿ ವಚ್ವಃ ವಚ ಪರಿಭಾಷಣೇ, ದ್ವಿಕ.। ಅನಿ.। ಪರ. to speak, ಲಟ್ ಉತ್ತಮ ಪುರುಷ ಏಕವಚನಂ. ಈ ಧಾತುವನ್ನು ಬಹುವಚನದಲ್ಲಿ ಪ್ರಯೋಗಿಸುವುದಿಲ್ಲವೆಂದು ಹೇಳುತ್ತಾರೆ.

ಅಕಥಯಯತ್ ಅಕಥಯತಾಂ ಅಕಥಯನ್, ಅಕಥಯಃ ಅಕಥಯತಂ ಅಕಥಯತ, ಅಕಥಯಂ ಅಕಥಯಾವ ಅಕಥಯಾಮ. ಕಥ ವಾಕ್ಯಪ್ರಬಂಧೇ ಸಕ.। ಸೇಟ್.। ಉಭ.। to tell ಅನದ್ಯತನಭೂತೇ ಲಙ್.

ಅವ.—ಆ ಶ್ರೀಬದರೀನಾರಾಯಣ ದೇವರು ಏನು ಆಜ್ಞಾ ಮಾಡಿದರು?

ಏತದರ್ಥಮತಿಸೂಕ್ಷ್ಮಮಪಿ ತ್ವಂ
ಶಕ್ತ ಏವ ನ ಯದಾತ್ಥ ಸಮಸ್ತಮ್ ।
ತೇನ ಲೇಶತ ಇತೀಹ ಪದಂ ಸ್ಯಾ
ದಿತ್ಯಗದ್ಯತ ಜಗಜ್ಜನಕೇನ ॥೪೦॥

ಅ.ಅ—ಅತಿಸೂಕ್ಷ್ಮಂ ಅಪಿ = ಅತ್ಯಂತ ಸೂಕ್ಷ್ಮವಾದಾಗ್ಯೂ, ಏತದರ್ಥಂ = ಈ ಗೀತೆಯ ಅರ್ಥವನ್ನು, ವಕ್ತುಂ = ಹೇಳುವುದಕ್ಕೆ, ಶಕ್ತಃ ಏವ =

Rarest Archiver

ಸಮರ್ಥನೇ ಆಗಿರುವ, ತ್ವಂ=ನೀನು, ಯತ್ = ಯಾವಕಾರಣದಿಂದ, ಸಮಸ್ತಂ = ಎಲ್ಲಾ ಅರ್ಥವನ್ನು, ನ ಆತ್ಥ = ಹೇಳುವುದಿಲ್ಲ, ತೇನ=ಆ ಕಾರಣದಿಂದ, ಇಹ=ಇಲ್ಲಿ ಶಕ್ತಿತಃ ಎಂಬ ಪದದ ಸ್ಥಳದಲ್ಲಿ, ಲೇಶತಃ ಇತಿ ಪದಂ=ಲೇಶತಃ ಎಂಬ ಶಬ್ದವು, ಸ್ಯಾತ್ ಇತಿ = ಇರಬೇಕೆಂದು, ಜಗಜ್ಜ-ನಕೇನ = ಲೋಕಗಳಿಗೆ ತಂದೆಯಾದ ನಾರಾಯಣದೇವರಿಂದ, ಆಗದ್ಯತ= ಹೇಳಲ್ಪಟ್ಟಿತು.

ತಾ.—ಎಲೈ ಮಧ್ವಾಚಾರ್ಯನೇ! ಈ ಭಗವದ್ಗೀತೆಯು ಅತ್ಯಂತ ಸೂಕ್ಷ್ಮವಾಗಿದ್ದು, ಇದರ ಅರ್ಥಗಳೆಲ್ಲವನ್ನೂ ಸಾಧಾರಣಜನರು ತಿಳಿಯು ಲಾರರು. ಆದರೂ ನೀನು ಎಲ್ಲಾ ಅರ್ಥವನ್ನೂ ತಿಳಿಯುಲು ಮತ್ತು ಹೇಳಲು ಸಮರ್ಥನಾಗಿದ್ದೀಯೆ. ಹಾಗಿದ್ದರೂ ಎಲ್ಲವನ್ನೂ ಹೇಳದೆ ಸ್ವಲ್ಪ ಅರ್ಥವನ್ನೇ ಹೇಳಿರುತ್ತೀ. ಆದ ಕಾರಣ ಈ ಮಂಗಳಾಚರಣಶ್ಲೋಕದಲ್ಲಿ 'ಶಕ್ತಿತಃ' ಎಂಬ ಪದವನ್ನು ತೆಗೆದು ಆ ಸ್ಥಳದಲ್ಲಿ 'ಲೇಶತಃ' (ಎಂದರೆ ಸ್ವಲ್ಪವಾಗಿ) ಎಂಬ ಅರ್ಥದ ಶಬ್ದವನ್ನು ಇಡು' ಈ ರೀತಿ ಜಗತ್ತಿಗೇ ತಂದೆಯಾದ ಶ್ರೀನಾರಾಯಣ ದೇವರು ಶ್ರೀಮಧ್ವಾಚಾರ್ಯರಿಗೆ ಅಪ್ಪಣೆಕೊಟ್ಟರು. 'ಗೀತಾರ್ಥಂ ವಕ್ಷ್ಯಾಮಿ ಲೇಶತಃ' ಎಂದು ಆ ಶ್ಲೋಕದ ಕೊನೆಯ ಪಾದವನ್ನು ಓದು' ಎಂದು ಅಪ್ಪಣೆ ಕೊಟ್ಟರು ಎಂದು ಅಭಿಪ್ರಾಯ.

ವಿ.—ಏತಸ್ಯ ಅರ್ಥಃ ಏತದರ್ಥಃ ತಂ, ಜಗತಾಂ ಜನಕಃ ಜಗಜ್ಜನಕಃ ತಂ;

ಕ್ರಿ.—ಆತ್ಥ, ಆಹ ಆಹತುಃ ಆಹುಃ, ಆತ್ಥ ಆಹಥುಃ, ಬ್ರೂಥ, ಬ್ರವೀಮಿ ಬ್ರೂವಃ ಬ್ರೂಮಃ, ಬ್ರೂಞ್ (ಬ್ರೂ) ವ್ಯಕ್ತಾಯಾಂ ವಾಚಿ.। ಸಕ.। ಸೇಟ್। ಉಭ.। to speak clearly. ವರ್ತಮಾನಕಾಲ ಲಟ್. ಬ್ರುವಃ ಪಂಚಾನಾಂ ಆದಿತ ಆಹೋ ಬ್ರುವಃ ಎಂಬ ಸೂತ್ರದಿಂದ ಮೊದಲಿನ ಐದುರೂಪಗಳಲ್ಲಿ ಆಹ್ ಆದೇಶ, ಲಿಟ್ ಲಕಾರದ ಪ್ರತ್ಯಯಗಳು. ಬ್ರವೀತಿ ಬ್ರೂತಃ ಬ್ರುವಂತಿ, ಬ್ರವೀಷಿ ಬ್ರೂಥಃ ಎಂಬ ರೂಪಗಳೂ ಇವೆ. ಸ್ಯಾತ್ ಸರ್ಗ ೭ ಶ್ಲೋಕ ೪ ನೋಡಿರಿ. ಆಗದ್ಯತ ಸರ್ಗ ೫ ಶ್ಲೋಕ ೫ ನೋಡಿರಿ. (ಜಗಜ್ಜನಕಃ ಆಗದತ್ ಕರ್ತರಿ).

Rarest Archiver

ಅವ.—ನಾರಾಯಣದೇವರು ಆಚಾರ್ಯರಿಗೆ ಅಪ್ಪಣೆ ಕೊಟ್ಟದ್ದನ್ನು ನಿದ್ರಿಸುತ್ತಿದ್ದ ಶಿಷ್ಯರೂ ಎಚ್ಚತ್ತು ಕೇಳಿದರು—

ತೇನ ತತ್ಪ್ರವಚನೇ ವಿಹಿತೇಽಲಂ
ಶುಶ್ರುವುಃ ಪ್ರಶಯಿತಾ ಅಪಿ ಶಿಷ್ಯಾಃ ।
ಉಚ್ಯತಾಮಿತಿ ಮುಹುಃ ಸಪೃಥಿವ್ಯಾ-
ಸ್ಫಾಲನಂ ಪದಮಹೋ ಹರಿಣೋಕ್ತಮ್ ॥೪೧॥

ಅ.ಅ—ತೇನ = ಆ ಮಧ್ವಾಚಾರ್ಯರಿಂದ, ತತ್‌ಪ್ರವಚನೇ = ಆ ಭಗವದ್ಗೀತೆಯ ಭಾಷ್ಯದ ಪ್ರವಚನವು, ವಿಹಿತೇ ಸತಿ = ಮಾಡಲ್ಪಡಲಾಗಿ, ಪ್ರಶಯಿತಾಃ = ನಿದ್ದೆ ಮಾಡುತ್ತಿದ್ದ, ಶಿಷ್ಯಾಃ ಅಪಿ = ಶಿಷ್ಯರೂ ಕೂಡ, ಮುಹುಃ = ಮತ್ತೂ ಮತ್ತೂ, ಉಚ್ಯತಾಂ ಇತಿ = ಹೇಳಲ್ಪಡಲಿ ಎಂದು, ಸಪೃಥಿವ್ಯಾ-ಸ್ಫಾಲನಂ = ನೆಲವನ್ನು ತಟ್ಟುವುದರ ಸಹಿತವಾಗಿ, ಹರಿಣಾ = ಶ್ರೀನಾರಾಯಣ ದೇವರಿಂದ, ಉಕ್ತಂ = ಹೇಳಲ್ಪಟ್ಟ, ಪದಂ = ಮಾತನ್ನು, ಅಲಂ = ಚೆನ್ನಾಗಿ, ಶುಶ್ರುವುಃ = ಕೇಳಿದರು, ಅಹೋ = ಆಶ್ಚರ್ಯ ! (ಅವರ ಭಾಗ್ಯವು!)

ತಾ.—ಶ್ರೀಮಧ್ವಾಚಾರ್ಯರು ಅಲ್ಲಿ ಶಿಷ್ಯರಿಗೆ ಚೆನ್ನಾಗಿ ಗೀತಾಭಾಷ್ಯವನ್ನು ಪಾಠ ಹೇಳಿದರು. ಅನಂತರ ರಾತ್ರಿಯಲ್ಲಿ ಶಿಷ್ಯರು ನಿದ್ರಿಸಿದರು. ವಿಶ್ರಾಂತಿಯಲ್ಲಿದ್ದ ಮಧ್ವಾಚಾರ್ಯರನ್ನು ಬದರೀನಾರಾಯಣನ ಪ್ರತಿಮೆಯಲ್ಲಿರುವ ಶ್ರೀನಾರಾಯಣದೇವರು ಅವರ ಬಳಿಯಲ್ಲಿ ನೆಲವನ್ನು ಕೈಯಿಂದ ಬಡಿದು ಸದ್ದು ಮಾಡಿ–'ಇನ್ನೂ ತಿರುಗಿ ಗೀತಾಭಾಷ್ಯಪಾಠವನ್ನು ಹೇಳು' ಎಂದು ಅಪ್ಪಣೆ ಕೊಟ್ಟರು. 'ಉಚ್ಯತಾಂ' 'ಹೇಳಲ್ಪಡಲಿ' ಎಂದು ದೇವರು ಹೇಳಿದ ಶಬ್ದವನ್ನು ನಿದ್ದೆಯಿಂದ ಎಚ್ಚತ್ತ ಶಿಷ್ಯರೂ ಕೇಳಿದರು. ಅಹಾ! ಆ ಶಿಷ್ಯರು ಎಷ್ಟು ಭಾಗ್ಯವಂತರು !

ವಿ.—ತಸ್ಯ ಪ್ರವಚನಂ ತತ್ಪ್ರವಚನಂ ತಸ್ಮಿನ್, ಪೃಥಿವ್ಯಾಃ ಆಸ್ಫಾಲನೇನ ಸಹಿತಂ ಯಥಾ ಭವತಿ ತಥಾ;

ಕ್ರಿ.—ಶುಶ್ರುವುಃ, ಶುಶ್ರಾವ ಶುಶ್ರುವತುಃ ಶುಶ್ರುವುಃ, ಶುಶ್ರೋಥ, ಶುಶ್ರುವಥುಃ ಶುಶ್ರುವ, ಶುಶ್ರಾವ ಶುಶ್ರವ ಶುಶ್ರುವ ಶುಶ್ರುಮ. ಶ್ರು ಶ್ರವಣೇ,

Rarest Archiver

ಸಕ.। ಅನಿ.। ಪರ. to hear. ಲಿಟ್. (ಶಿಷ್ಯೈಃ ಪದಂ ಶುಶ್ರುವೇ ಕರ್ಮಣಿ) ಉಚ್ಯತಾಂ ಸರ್ಗ ೫ ಶ್ಲೋಕ ೨೦ ನೋಡಿರಿ.

ಅವ.—ದೇವರ ಆಜ್ಞೆಯನ್ನು ತಿಳಿದು ಶ್ರೀಮಧ್ವಾಚಾರ್ಯರು ಶಿಷ್ಯರಿಗೆ ಪುನಃ ಗೀತಾಭಾಷ್ಯವನ್ನು ಉಪದೇಶಿಸಿದರು—

ಶಬ್ದಭೇದಮವಧಾರ್ಯ ತಮರ್ಚಾ-
ಸನ್ನಿಷಣ್ಣವಪುಷಃ ಪರಮಸ್ಯ ।
ತಸ್ಯ ಭಾವವಿದಮಂದಮನೀಷಃ
ಪ್ರೋತ್ಥಿತಃ ಪ್ರವಚನಂ ವ್ಯಧಿತೈಭ್ಯಃ ॥೪೨॥

ಅ.ಅ—ತಂ ಶಬ್ದಭೇದಂ = ಆ ಶಬ್ದವಿಶೇಷವನ್ನು, ಅವಧಾರ್ಯ= =ನಿಶ್ಚಯಿಸಿ, ಅರ್ಚಾ = ಪ್ರತಿಮೆಯಲ್ಲಿ, ಸಂನಿಷಣ್ಣ = ಸನ್ನಿಹಿತವಾದ, ವಪುಷಃ = ರೂಪವುಳ್ಳ, ಪರಮಸ್ಯ = ಸರ್ವೋತ್ತಮನಾದ, ತಸ್ಯ = ಆ ಶ್ರೀನಾರಾಯಣದೇವರ, ಭಾವವಿತ್=ಅಭಿಪ್ರಾಯವನ್ನು ತಿಳಿದ, ಅಮಂದ-ಮನೀಷಃ=ಪೂರ್ಣಬುದ್ಧಿವುಳ್ಳಂತಹ ಆಚಾರ್ಯರು, ಪ್ರೋತ್ಥಿತಃ=ಎದ್ದವರಾಗಿ, ಏಭ್ಯಃ=ಈ ಶಿಷ್ಯರಿಗೆ, ಪ್ರವಚನಂ = ಪ್ರವಚನವನ್ನು, ವ್ಯಧಿತ= ಮಾಡಿದರು. (ಪಾಠ ಹೇಳಿದರು).

ತಾ.—ಶ್ರೀಪೂರ್ಣಪ್ರಜ್ಞಾಚಾರ್ಯರು ಪ್ರತಿಮೆಯಲ್ಲಿ ಸನ್ನಿಹಿತನಾದ ಶ್ರೀನಾರಾಯಣದೇವರ ಆಜ್ಞಾರೂಪವಾದ ಶಬ್ದವಿದು ಎಂದು ನಿರ್ಧರಿಸಿದರು, ಪರಮಾತ್ಮನ ಅಭಿಪ್ರಾಯವನ್ನು ತಿಳಿದುಕೊಂಡು ಪ್ರವಚನಕ್ಕೆ ಸನ್ನದ್ಧರಾಗಿ ಶಿಷ್ಯರನ್ನು ಎಬ್ಬಿಸಿ ಗೀತಾಭಾಷ್ಯದ ಪ್ರವಚನವನ್ನು ಮಾಡಿದರು. ಶ್ರೀಮಧ್ವಾಚಾರ್ಯರ ಉಪದೇಶದ ಹಿರಿಮೆ ಸ್ವಾರಸ್ಯಗಳನ್ನು ಮೆಚ್ಚಿ ಪರಮಾತ್ಮನೇ ಪ್ರವಚನಕ್ಕೆ ಅಪ್ಪಣೆ ಕೊಟ್ಟಿದ್ದರಿಂದ ಆಚಾರ್ಯರ ಉಪ-ದೇಶವು ಅತಿಶ್ರೇಷ್ಠವಾದುದು, ಪರಮಾತ್ಮನಿಗೆ ಪ್ರೀತಿಕರವಾದುದು ಎಂದು ಈ ಕಥೆಯಿಂದ ತಿಳಿದು ಬರುತ್ತದೆ.

ವಿ.—ಶಬ್ದಸ್ಯ ಭೇದಃ ಶಬ್ದಭೇದಃ ತಾಂ, ಅರ್ಚಾಯಾಂ ಸನ್ನಿಷಣ್ಣಂ ಅರ್ಚಾಸನ್ನಿಷಣ್ಣಂ, ತಾದೃಶಂ ವಪುಃ ಯಸ್ಯ ಸಃ ಅರ್ಚಾಸನ್ನಿಷಣ್ಣವಪುಃ

Rarest Archiver

ತೆಸ್ಯ, ಭಾವಂ ವೇತ್ತೀತಿ ಭಾವವಿತ್, ಅಮಂದಾ ಮನೀಷಾ ಯಸ್ಯ ಸಃ ಅಮಂದಮನೀಷಃ.

ಕ್ರಿ.—ವಿ+ಅಧಿತ=ವ್ಯಧಿತ ಸರ್ಗ 6 ಶ್ಲೋ. 2. ನೋಡಿರಿ.

ಅವ.—ಬದರಿಯಲ್ಲಿ ಆಚಾರ್ಯರ ದಿನಚರ್ಯೆಯು ಹೇಗಿತ್ತು ?

ಮಜ್ಜನಂ ವ್ಯಧಿತ ಶೀತಲಗಂಗಾ
ವಾರಿ ನಿತ್ಯಮರುಣೋದಯಕಾಲೇ ।
ಯತ್ ಸ್ಪೃಶಂತಿ ನ ನರಾ ಹಿಮಭೀತಾ
ಅಂಶ ಏಷ ಪೃಷತಾಮಧಿಪಸ್ಯ ॥೪೩॥

ಅ.ಅ.—ಪೃಷತಾಂ = ನೀರಿನಹನಿಗಳ, ಅಧಿಪಸ್ಯ = ಸ್ವಾಮಿಯಾದ (ಮುಖ್ಯ)ವಾಯುದೇವರ, ಅಂಶಃ = ಅವತಾರರಾದ, ಏಷಃ = ಈ ಶ್ರೀಮಧ್ವಾ-ಚಾರ್ಯರು, ನರಾಃ = ಬದರಿಕಾಶ್ರಮದಲ್ಲಿರುವ ಇತರ ಜನರು, ಹಿಮಭೀತಾಃ (ಸಂತಃ)=ಚಳಿಯಿಂದ ಹೆದರಿದವರಾಗಿ, ಯತ್=ಯಾವ ನೀರನ್ನು, ನ ಸ್ಪೃಶಂತಿ = ಮುಟ್ಟುವುದಿಲ್ಲವೋ, ತಸ್ಮಿನ್ = ಅಂತಹ, ಶೀತಲಗಂಗಾವಾರಿ= ತಣ್ಣಗಿರುವ ಗಂಗೆಯ ಜಲದಲ್ಲಿ, ನಿತ್ಯಂ = ಪ್ರತಿದಿನವೂ, ಅರುಣೋದಯಕಾಲೇ = ಸೂರ್ಯೋದಯಕ್ಕಿಂತ ನಾಲ್ಕುಗಳಿಗೆ ಮೊದಲು (ಪ್ರಾತಃಕಾಲ ಸುಮಾರು 4-30 ಗಂಟೆಯಲ್ಲಿ) ಮಜ್ಜನಂ=ಸ್ನಾನವನ್ನು, ವ್ಯಧಿತ=ಮಾಡಿದರು.

ತಾ.—ಬದರಿಯಲ್ಲಿಯೇ ಇರುವ ಜನರೂ ಕೂಡ ಚಳಿಗೆ ಹೆದರಿ, 'ಅಲಕ ನಂದಾ' ಎಂದು ಪ್ರಸಿದ್ಧವಾದ ಗಂಗೆಯ ಶೀತಲಜಲವನ್ನು ಅರುಣೋದಯಕಾಲ ದಲ್ಲಿ ಮುಟ್ಟುವುದಕ್ಕೂ ಹೆದರುತ್ತಾರೆ. ಆದರೆ ಎಲ್ಲಾ ವಾಯುಗಳಿಗೂ ಅಧಿಪತಿಗಳಾದ ಮುಖ್ಯಪ್ರಾಣದೇವರ ಅವತಾರರಾದ ಶ್ರೀಮಧ್ವಾಚಾರ್ಯರು ನಿತ್ಯದಲ್ಲಿಯೂ ಅರುಣೋದಯಕಾಲದಲ್ಲಿಯೇ ಶೀತಲಗಂಗೆಯ ಜಲದಲ್ಲಿ ಅವಗಾಹನ ಸ್ನಾನಮಾಡುತ್ತಿದ್ದರು. 'ಚತಸ್ರೋ ಘಟಿಕಾಃ ಪ್ರಾತರರುಣೋ-ದಯ ಉಚ್ಯತೇ' ಸೂರ್ಯೋದಯಕ್ಕಿಂತ ನಾಲ್ಕು ಘಳಿಗೆ ಮೊದಲು ಅರುಣೋ ದಯವು ಎಂದು ಆಚಾರ್ಯರೇ ಶ್ರೀಕೃಷ್ಣಾಮೃತಮಹಾರ್ಣವದಲ್ಲಿ ಹೇಳಿದಂತೆ ಆ ಉಷಃಕಾಲದಲ್ಲಿಯೇ ಬೇರೆಯವರಿಗೆ ಮುಟ್ಟುವುದಕ್ಕೂ ಅಸಾಧ್ಯವಾದ ಶೀತ

Rarest Archiver

ಜಲದಲ್ಲಿ ಆಚಾರ್ಯರು ಮುಳುಗಿ ಸ್ನಾನಮಾಡುತ್ತಿದ್ದರು. ಮುಖ್ಯಪ್ರಾಣಾವತಾರರಾದ ಆಚಾರ್ಯರಿಗೆ ಮಾತ್ರವೇ ಇದು ಸಾಧ್ಯ ಎಂದು ಭಾವ.

ವಿ.—ಶೀತಲಾ ಚ ಸಾ ಗಂಗಾ ಚ ಶೀತಲಗಂಗಾ, ಶೀತಲಗಂಗಾಯಾಃ ವಾಃ ಶೀತಲಗಂಗಾವಾಃ ತಸ್ಮಿನ್. ವಾರ್ ಶಬ್ದ ನಪುಂ. ಸಪ್ತಮೀ ಏಕ.। ಆಪಃ ಸ್ತ್ರೀಭೂಮ್ನಿ ವಾಃ ವಾರಿ—ಅಮರ. ಅರುಣೋದಯಸ್ಯ ಕಾಲಃ ಅರುಣೋದಯಕಾಲಃ ತಸ್ಮಿನ್, ಹಿಮಾತ್ ಭೀತಾಃ ಹಿಮಭೀತಾಃ.

ಕ್ರಿ.—ವ್ಯಥಿತ. ಹಿಂದಿನ ಶ್ಲೋಕ ನೋಡಿರಿ. ಸ್ಪೃಶತಿ ಸ್ಪೃಶತಃ ಸ್ಪೃಶಂತಿ ಇತ್ಯಾದಿ, ಸ್ಪೃಶ ಸಂಸ್ಪರ್ಶೇ. ಸಕ.। ಅನಿ.। ಪರ.। to touch. ಲಟ್.

ಅವ.—ಆಚಾರ್ಯರು ಬದರಿಯಲ್ಲಿರುವ ಅನಂತಮಠದಲ್ಲಿ ಕಾಷ್ಠಮೌನ ವ್ರತವನ್ನು ಆಚರಿಸಿದರು.

ಕಾಷ್ಠಮೌನಮುದಧಾದುಪವಾಸಂ
ಶುದ್ಧಮಪ್ಯಕೃತ ಶುದ್ಧಹೃದಿಚ್ಛನ್ ।
ನಿತ್ಯತುಷ್ಟಹರಿತೋಷವಿಶೇಷಂ
ಚಿಂತಯನ್ ಪ್ರಭುಮನಂತಮಠಾಂತಃ ॥೪೪॥

ಅ.ಅ.—ಶುದ್ಧಹೃತ್ = ನಿರ್ಮಲವಾದ ಅಂತಃಕರಣವುಳ್ಳ ಶ್ರೀಪೂರ್ಣಪ್ರಜ್ಞಾಚಾರ್ಯರು, ನಿತ್ಯತುಷ್ಟ = ಯಾವಾಗಲೂ ತನ್ನಲ್ಲಿ ಪ್ರೀತನಾದ ಪರಮಾತ್ಮನ, ತೋಷವಿಶೇಷಂ = ಪ್ರೀತಿಯ ಅತಿಶಯವನ್ನು, ಇಚ್ಛನ್ = ಬಯಸತಕ್ಕವರಾಗಿ, ಅನಂತಮಠಾಂತಃ = ಅನಂತಮಠ ಎಂಬ ಹೆಸರುಳ್ಳ ಬದರೀನಾರಾಯಣದೇವಾಲಯಮಧ್ಯದಲ್ಲಿ, ಪ್ರಭುಂ = ಶ್ರೀನಾರಾಯಣನನ್ನು, ಚಿಂತಯನ್ = ಧ್ಯಾನಮಾಡುತ್ತಾ, ಕಾಷ್ಠಮೌನಂ = ಕಾಷ್ಠಮೌನವೆಂಬ ವ್ರತವನ್ನು, ಅದಧಾತ್ = ಮಾಡಿದರು. ಶುದ್ಧಂ = ಆಹಾರಾದಿರಹಿತವಾದ, ಉಪವಾಸಂ = ಉಪವಾಸವನ್ನೂ ಕೂಡ, ಅಕೃತ = ಮಾಡಿದರು.

ತಾ.—ಶ್ರೀಮಧ್ವಾಚಾರ್ಯರು ಸ್ವಭಾವದಿಂದಲೇ ಪರಿಶುದ್ಧವಾದ ಅಂತಃಕರಣವುಳ್ಳವರು. ನಿತ್ಯವೂ ಶ್ರೀನಾರಾಯಣದೇವರು ಅವರಲ್ಲಿ ವಿಶೇಷವಾದ

Rarest Archiver

ಅನುಗ್ರಹವನ್ನಿಟ್ಟು ಪ್ರೀತಿಮಾಡುತ್ತಾರೆ. ಆದರೂ ಅವರು ನಾರಾಯಣದೇವರ ಮತ್ತೂ ವಿಶೇಷವಾದ ಪ್ರೀತಿಯನ್ನು ಬಯಸಿ ಬದರೀದೇವಾಲಯದ ಒಳಗೆ ಅನಂತಮಠ ಎಂಬಲ್ಲಿ ಪರಮಾತ್ಮನನ್ನೇ ಧ್ಯಾನಿಸುತ್ತಾ ಕಾಷ್ಠಮೌನ ಎಂಬ ವ್ರತವನ್ನು ಆಚರಿಸಿದರು. ಕಾಷ್ಠಮೌನವೆಂದರೆ ಯಾವರೀತಿಯಿಂದಲೂ ಜನರೊಡನೆ ಮಾತನಾಡದಿರುವುದು). ಮತ್ತು ಆಚಮನದ ನೀರನ್ನು ಬಿಟ್ಟು ಬೇರೆ ನೀರನ್ನು ಕೂಡ ಸೇವಿಸದೆ ಮಾಡುವ ಶುದ್ಧವಾದ ಉಪವಾಸವನ್ನೂ ಆಚರಿಸಿದರು.

ವಿ.—ಶುದ್ಧಂ ಹೃತ್ ಯಸ್ಯ ಸಃ ಶುದ್ಧಹೃತ್, ನಿತ್ಯಂ ತುಷ್ಟಃ ನಿತ್ಯ-ತುಷ್ಟಃ, ನಿತ್ಯತುಷ್ಟಶ್ಚಾಸೌ ಹರಿಶ್ಚ, ತೋಷಸ್ಯ ವಿಶೇಷಃ ತೋಷವಿಶೇಷಃ, ನಿತ್ಯತುಷ್ಟಹರೇಃ ತೋಷವಿಶೇಷಃ ನಿತ್ಯತುಷ್ಟಹರಿತೋಷವಿಶೇಷಃ, ತಂ.

ಕ್ರಿ.—ಅದಧಾತ್ ಅಧತ್ತಾಂ ಅದಧುಃ, ಅದಧಾಃ ಅಧತ್ತಂ ಅಧತ್ತ, ಅದಧಾಂ. ಅದಧ್ವ ಅದಧ್ಮ. ಡು(ಧಾ)ಞ್ ಧಾರಣಪೋಷಣಯೋಃ ಸಕ.। ಅನಿ.। ಉಭ.। to put, to grant, to produce, to bear. ಅನದ್ಯತನಭೂತೇ ಲಙ್. ಅಕೃತ ಅಕೃಷಾತಾಂ ಅಕೃಷತ, ಅಕೃಥಾಃ ಅಕೃ-ಷಾಥಾಂ ಆಕೃಢ್ವಂ, ಅಕೃಷಿ ಅಕೃಷ್ವಹಿ ಅಕೃಷ್ಮಹಿ. ಡು(ಕೃ)ಞ್ ಕರಣೇ ಸಕ.। ಅನಿ.। ಉಭ.। to do, to make. ಭೂತೇ ಲುಙ್.

ಅವ.— ತನ್ನನ್ನೇ ಚಿಂತಿಸುತ್ತಲಿರುವ ಶ್ರೀಮಧ್ವಾಚಾರ್ಯರನ್ನು ಶ್ರೀವೇದವ್ಯಾಸರು ತನ್ನ ಬಳಿಗೆ ಬರಲು ಸೂಚಿಸಿದರು—

ಪ್ರೈರಯತ್ ಸ್ವಚರಣೇ ರತಚಿತ್ತಂ
ಮಧ್ವಮತ್ರ ದಿನಮಂಡಲಮೇನಂ ।
ಸ್ವಾಶ್ರಮೋಪಗಮನಾಯ ಮುಕುಂದೋ
ದೀಪ್ತಿದೃಷ್ಟಿವಿದಿತಾಗತಿರನ್ಯೈಃ ॥೪೫॥

ಅ.ಅ.—ಅನ್ಯೈಃ = ಅನ್ಯರಿಂದ (ಶಿಷ್ಯರಿಂದ), ದೀಪ್ತಿ = ದೇವರ ಪ್ರಕಾಶದ, ದೃಷ್ಟಿ = ದರ್ಶನದಿಂದ. ವಿದಿತ = ತಿಳಿಯಲ್ಪಟ್ಟ, ಆಗತಿಃ = ಆಗಮನವುಳ್ಳ, ಮುಕುಂದಃ = ಶ್ರೀವೇದವ್ಯಾಸದೇವರು, ಅತ್ರ = ಈ ಅನಂತ

Rarest Archive

ಮಠದಲ್ಲಿ, ದಿನಮಂಡಲಂ = ೪೮ ದಿನಗಳ ಸಮೂಹಪರ್ಯಂತವಾಗಿ, ಸ್ವಚರಣೇ = ತನ್ನ ಪಾದಗಳಲ್ಲಿ, ರತಚಿತ್ತಂ = ಆಸಕ್ತವಾದ ಮನಸ್ಸುಳ್ಳ, ಏನಂ = ಈ ಶ್ರೀಪೂರ್ಣಪ್ರಜ್ಞಾಚಾರ್ಯರನ್ನು, ಸ್ವಾಶ್ರಮೋಪಗಮನಾಯ = ಹಿಮವತ್ ಪರ್ವತದ ಉತ್ತರ ಭಾಗದಲ್ಲಿರುವ ತನ್ನ ಬದರಿಕಾಶ್ರಮಕ್ಕೆ ಬರುವುದಕ್ಕೋಸ್ಕರ, ಪ್ರೈರಯತ್ = ಪ್ರೇರಿಸಿದರು.

ತಾ.—ಮೋಕ್ಷವನ್ನು ಕೊಡುವವರು ಆದುದರಿಂದ 'ಮುಕುಂದ' ಎಂಬ ಹೆಸರುಳ್ಳ ಶ್ರೀವೇದವ್ಯಾಸರು ಅನಂತಮಠದಲ್ಲಿ ಮೌನ ಮತ್ತು ಉಪವಾಸಗಳನ್ನು ಮಾಡುತ್ತಿರುವ ತನ್ನ ಪಾದವನ್ನೇ ಚಿಂತಿಸುತ್ತಿರುವ ಶ್ರೀಮಧ್ವಾಚಾರ್ಯರನ್ನು ತನ್ನ ಆಶ್ರಮಕ್ಕೆ ಬರಲು ಪ್ರೇರಿಸಿದರು. ಆ ಸಮಯದಲ್ಲಿ ದೊಡ್ಡಪ್ರಕಾಶವು ಅಲ್ಲಿಗೆ ಬಂದಂತಾಯಿತು. ಅದರಿಂದ ಆಚಾರ್ಯರ ಶಿಷ್ಯರೂ ವೇದವ್ಯಾಸರು ಅಲ್ಲಿಗೆ ಬಂದರೆಂದು ತಿಳಿದರು. ಶ್ರೀಮಧ್ವಾಚಾರ್ಯರು ವೇದವ್ಯಾಸರ ದರ್ಶನಾಭಿಲಾಷೆಯಿಂದ ಕಾಷ್ಠಮೌನ ಮತ್ತು ಉಪವಾಸಗಳನ್ನು ಆಚರಿಸುತ್ತಾ ನಲವತ್ತೆಂಟು ದಿನಗಳನ್ನು ಕಳೆದರು. ಒಂದು ದಿನ ರಾತ್ರಿ ವ್ಯಾಸರು ಬಂದು ತನ್ನಲ್ಲಿಗೆ ಬರಲು ಅಪ್ಪಣೆ ಕೊಟ್ಟದ್ದನ್ನು ಶಿಷ್ಯರು ಪ್ರಕಾಶದಿಂದ ತಿಳಿದರು. ಅಕಸ್ಮಾತ್ತಾಗಿ ಆಚಾರ್ಯರ ಬಳಿಗೆ ಈ ಅದ್ಭುತಪ್ರಕಾಶವು ಬಂದಿದ್ದನ್ನು ನೋಡಿ ಶಿಷ್ಯರು–'ನಮ್ಮ ಆಚಾರ್ಯರನ್ನು ಕರೆಯಲು ವೇದವ್ಯಾಸರೇ ಬಂದಿದ್ದಾರೆಂದು' ಊಹಿಸಿದರು ಎಂದು ಭಾವ.

ವಿ.—ಸ್ವಸ್ಯ ಚರಣಃ ಸ್ವಚರಣಃ ತಸ್ಮಿನ್, ರತಂ ಚಿತ್ತಂ ಯಸ್ಯ ಸಃ ರತಚಿತ್ತಃ ತಂ, ದಿನಾನಾಂ ಮಂಡಲಂ ದಿನಮಂಡಲಂ ತತ್, ಸ್ವಸ್ಯ ಆಶ್ರಮಸ್ಯ ಉಪಗಮನಂ ತಸ್ಮೈ, ದೀಪ್ತೇಃ ದೃಷ್ಟ್ಯಾ ವಿದಿತಾ ಆಗತಿಃ ಯಸ್ಯ ಸಃ;

ಕ್ರಿ.—ಪ್ರ + ಐರಯತ್ ಐರಯತಾಂ ಐರಯನ್, ಐರಯಃ ಐರಯತಂ ಐರಯತ, ಐರಯಂ ಐರಯಾವ ಐರಯಾಮ. ಈರ ಕ್ಷೇಪೇ (ಪ್ರೇರಣೇ) ಚುರಾದಿಣಿಜಂತ. ಪರ. ಸಕ. ಲಙ್.

ಅವ.—ಆ ಮೇಲೆ ಆಚಾರ್ಯರು ಏನುಮಾಡಿದರು ?

ನಕ್ತಮೇವ ಭಗವತ್ಯುಪಯಾತೇ
ಪ್ರೋದಿತೇ ಸತಿ ಸಹಸ್ರಮರೀಚೌ ।

Rarest Archiver

ಮೌನವಾನಲಿಖದುತ್ತಮಚಿತ್ತಃ
　　　ಶಿಷ್ಯಶಿಕ್ಷಣಪರಃ ಕರುಣಾವಾನ್ ॥೪೬॥

ಅ. ಅ.—ಭಗವತಿ=ಶ್ರೀವೇದವ್ಯಾಸರು, ನಕ್ತಮೇವ=ರಾತ್ರಿಯಲ್ಲಿಯೇ, ಉಪಯಾತೇ (ಸತಿ) = ತನ್ನ ಆಶ್ರಮಕ್ಕೆ ಹೊರಟುಹೋಗಲಾಗಿ, ಸಹಸ್ರ-ಮರೀಚೌ=ಸೂರ್ಯನು, ಪ್ರೋದಿತೇ (ಸತಿ) = ಉದಯಿಸಲಾಗಿ, ಮೌನ-ವಾನ್ = ಮಾತಿನ ನಿಯಮವುಳ್ಳ, ಕರುಣಾವಾನ್ = (ಶಿಷ್ಯರಲ್ಲಿ) ದಯಾ ಪೂರ್ಣರಾದ, ಉತ್ತಮಚಿತ್ತಃ=ಪರಮಾತ್ಮನಲ್ಲಿಯೇ ಮನಸ್ಸುಳ್ಳ ಶ್ರೀಪೂರ್ಣ-ಪ್ರಜ್ಞಾಚಾರ್ಯರು, ಶಿಷ್ಯಶಿಕ್ಷಣಪರಃ (ಸನ್) = ಶಿಷ್ಯರಿಗೆ ಉಪದೇಶಮಾಡುವ ತಾತ್ಪರ್ಯವುಳ್ಳವರಾಗಿ, ಅಲಿಖತ್=ಬರೆದರು.

ತಾ.— ವೇದವ್ಯಾಸರು ಆಚಾರ್ಯರಿಗೆ ಅಪ್ಪಣೆಯನ್ನಿತ್ತು ರಾತ್ರಿಯಲ್ಲಿಯೇ ಹೊರಟುಹೋದರು. ಶ್ರೀಹರಿಯಲ್ಲಿಯೇ ನೆಟ್ಟಮನಸ್ಸುಳ್ಳ ಆಚಾರ್ಯರು ಮರುದಿನ ಸೂರ್ಯನು ಉದಯಿಸಿದ ಮೇಲೆ ತಾನು ಶ್ರೀವ್ಯಾಸರ ಬಳಿಗೆ ಹೋಗುವಾಗ ಶಿಷ್ಯರಿಗೆ ಯೋಗ್ಯವಾದ ಉಪದೇಶವನ್ನು ಕೊಡಬೇಕೆಂದು ನಿಶ್ಚಯಿಸಿ ಮೌನವ್ರತದಲ್ಲಿದ್ದುದರಿಂದ ತನ್ನ ಉಪದೇಶವನ್ನು ಬರೆದರು.

ವಿ.—ಸಹಸ್ರಂ ಮರೀಚಯಃ ಯಸ್ಯ ಸಃ ತಸ್ಮಿನ್, ಮೌನಂ ಅಸ್ಯ ಅಸ್ತೀತಿ ಮೌನವಾನ್, ಉತ್ತಮೋ (ಉತ್ತಮಂ) ಚಿತ್ತಂ ಯಸ್ಯ ಸಃ ಉತ್ತಮಚಿತ್ತಃ, ಶಿಷ್ಯಾಣಾಂ ಶಿಕ್ಷಣೇ ಪರಃ ಶಿಷ್ಯಶಿಕ್ಷಣಪರಃ, ಕರುಣಾ ಅಸ್ಯ ಅಸ್ತೀತಿ ಕರುಣಾವಾನ್,

ಕ್ರಿ.—ಅಲಿಖತ್ ಅಲಿಖತಾಂ ಅಲಿಖನ್, ಅಲಿಖಃ ಅಲಿಖತಂ ಅಲಿಖತ, ಅಲಿಖಂ ಅಲಿಖಾವ ಅಲಿಖಾಮ, ಲಿಖ ಅಕ್ಷರವಿನ್ಯಾಸೇ ಸಕ.। ಸೇಟ್.। ಪರ.। ಅನದ್ಯತನಭೂತೇ ಲಙ್.

ಅವ.—ಆಚಾರ್ಯರು ಏನನ್ನು ಬರೆದಿಟ್ಟರು?

ನೇದೃಶಂ ಸ್ಥಲಮಲಂ ಶಮಲಘ್ನಂ
　　　ನಾಸ್ಯ ತೀರ್ಥಸಲಿಲಸ್ಯ ಸಮಂ ವಾಃ ।

Rarest Archiver

ನಾಸ್ತಿವಿಷ್ಣುಸದೃಶಂ ನನು ದೈವಂ
ನಾಸ್ಮದುಕ್ತಿಸದೃಶಂ ಹಿತರೂಪಂ ||೪೭||

ಅ.ಅ.—ಅಲಂ=ಅತಿಶಯವಾಗಿ, ಶಮಲಘ್ನಂ=ಪಾಪನಾಶಕವಾದ, ಈದೃಶಂ=ಇಂತಹ, ಸ್ಥಲಂ ನ (ಅಸ್ತಿ)=ಸ್ಥಳವು ಇಲ್ಲ, ಅಸ್ಯ=ಈ, ತೀರ್ಥಸಲಿಲಸ್ಯ=ಗಂಗಾತೀರ್ಥಜಲಕ್ಕೆ ಸಮಾನವಾದ, ವಾಃ=ಜಲವು, ನ (ಅಸ್ತಿ)=ಇಲ್ಲ, ವಿಷ್ಣುಸದೃಶಂ=ಶ್ರೀಹರಿಗೆ ಸಮಾನವಾದ, ದೈವಂ=ದೇವತೆಯು, ನಾಸ್ತಿ ನನು=ಇಲ್ಲವಷ್ಟೆ! ಅಸ್ಮದುಕ್ತಿಸದೃಶಂ = ನಮ್ಮ ಮಾತಿಗೆ ಸಮಾನವಾದ, ಹಿತರೂಪಂ=ಪ್ರಶಸ್ತವಾದ ಹಿತವಚನವು, ನ (ಅಸ್ತಿ)=ಇಲ್ಲ.

ತಾ.—ಚೆನ್ನಾಗಿ ಪಾಪವನ್ನು ಪರಿಹರಿಸುವುದರಲ್ಲಿ ಈ ಬದರೀಕ್ಷೇತ್ರಕ್ಕೆ ಸಮಾನವಾದ ಮತ್ತೊಂದು ಕ್ಷೇತ್ರವಿಲ್ಲ. ಇಲ್ಲಿರುವ ಗಂಗಾತೀರ್ಥಕ್ಕೆ ಸಮಾನವಾದ ಪಾಪನಾಶಕರವಾದ ತೀರ್ಥಜಲವೂ ಬೇರೆಇಲ್ಲ. ಶ್ರೀನಾರಾಯಣದೇವರಿಗೆ ಸಮಾನರಾದ ಮತ್ತೊಬ್ಬ ದೇವರೂ ಕೂಡ ಇಲ್ಲವೇ ಇಲ್ಲ. ನಮ್ಮ ಉಪದೇಶ ವಚನಕ್ಕೆ ಸಮಾನವಾದ ಹಿತವಚನವೂ ಬೇರೆ ಇಲ್ಲ. 'ನಮ್ಮ ಹಿತವಚನದಲ್ಲಿ ನಂಬಿಕೆಯಿಟ್ಟು, ಈ ಕ್ಷೇತ್ರದಲ್ಲಿಯೇ ನಾರಾಯಣದೇವರನ್ನು ಸೇವಿಸುತ್ತಾ ಗಂಗಾಸ್ನಾನಮಾಡಿ ಪರಿಶುದ್ಧಾತ್ಮರಾಗಿ ಇಲ್ಲಿಯೇ ವಾಸಮಾಡಿರಿ' ಎಂದು ಹಿತೋಪದೇಶವನ್ನು ಆಚಾರ್ಯರು ಬರೆದಿಟ್ಟರು ಎಂದು ಭಾವವು.

ವಿ.—ಶಮಲಂ ಹಂತಿ ಇತಿ ಶಮಲಘ್ನಂ, ತೀರ್ಥರೂಪಂ ಸಲಿಲಂ ತೀರ್ಥಸಲಿಲಂ, ವಿಷ್ಣುನಾ ಸದೃಶಂ ವಿಷ್ಣುಸದೃಶಂ, ಉಕ್ತೇಃ ಸದೃಶಂ ಉಕ್ತಿಸದೃಶಂ, ಪ್ರಶಸ್ತಂ ಹಿತಂ ಹಿತರೂಪಂ.

ಕ್ರಿ.—ಅಸ್ತಿ–ಸರ್ಗ ೫ ಶ್ಲೋ. ೭೨ ನೋಡಿರಿ.

ಅವ.—ಆಚಾರ್ಯರು ಮತ್ತೂ ಕೆಲವು ವಿಷಯಗಳನ್ನು ಬರೆದಿಟ್ಟರು—

ಯಾತಿ ತಾವದಧುನೈವ ಜನೋಽಯಂ
ವ್ಯಾಸರೂಪಮಜಿತಂ ಪ್ರದಿದೃಕ್ಷುಃ ।
ಆವ್ರಜೇದಿಹ ನ ವ್ಯಾಸ ಹಿ ವೇದ
ಸ್ವಸ್ತಿವೋಽಸ್ತ್ವಿತಿ ಯಯಾವಥ ಮಧ್ವಃ ||೪೮||

Rarest Archiver

ಅ.ಅ.—ಅಯಂ ಜನಃ = ಈ ಮಧ್ವಾಚಾರ್ಯನೆಂಬ ವ್ಯಕ್ತಿಯು, ವ್ಯಾಸರೂಪಂ = ಶ್ರೀವೇದವ್ಯಾಸರೆಂಬ ರೂಪವುಳ್ಳ, ಅಜಿತಂ = ಶ್ರೀಹರಿಯನ್ನು, ಪ್ರದಿದೃಕ್ಷುಃ (ಸನ್) = ಚೆನ್ನಾಗಿ ನೋಡುವ ಇಚ್ಛಾವುಳ್ಳವನಾಗಿ, ಅಧುನೈವ = ಈಗಲೇ, ಯಾತಿತಾವತ್ = ಹೋಗುವನು. ಇಹ = ಇಲ್ಲಿಗೆ, ಆವ್ರಜೇತ್ ನ ವಾ = ಬರುತ್ತಾನೆಯೋ ಇಲ್ಲವೇ, (ಇತಿ) = ಎಂದು, ಸಃ = ಆ ವೇದವ್ಯಾಸರೇ, ವೇದ ಹಿ = ತಿಳಿಯುತ್ತಾರಷ್ಟೆ. ವಃ ಸ್ವಸ್ತಿ ಅಸ್ತು = ನಿಮಗೆ ಮಂಗಳವಾಗಲಿ, (ಇತಿ ಆಲಿಖತ್ = ಈ ರೀತಿ ಬರೆದರು) ಅಥ = ಬರೆದ ಮೇಲೆ, ಮಧ್ವಃ ಯಯೌ = ಶ್ರೀಮಧ್ವಾಚಾರ್ಯರು ಹೋದರು.

ತಾ.—'ನಾನು ಶ್ರೀವೇದವ್ಯಾಸರೂಪಿಯಾದ ಪರಮಾತ್ಮನನ್ನು ನೋಡಲು ಈಗಲೇ ಹೋಗುವೆನು. ಇಲ್ಲಿಗೆ ಹಿಂದಿರುಗಿ ಬರುವೆನೋ ಇಲ್ಲವೋ ಎಂಬುದನ್ನು ಆ ವೇದವ್ಯಾಸರೇ ತಿಳಿದಿರುವರು. ನಿಮಗೆ ಮಂಗಳವಾಗಲಿ' ಎಂದು ಬರೆದಿಟ್ಟು, ಅನಂತರ ಆಚಾರ್ಯರು ದೊಡ್ಡ ಬದರೀಕ್ಷೇತ್ರಕ್ಕೆ ಹೋದರು.

ವಿ.—ವ್ಯಾಸ ಇತಿ ರೂಪಂ ಯಸ್ಯ ಸಃ ವ್ಯಾಸರೂಪಃ ತಂ, ಪ್ರಕರ್ಷೇಣ ದ್ರಷ್ಟುಂ ಇಚ್ಛುಃ ಪ್ರದಿದೃಕ್ಷುಃ,

ಕ್ರಿ.—ಯಾತಿ ಯಾತಃ ಯಾಂತಿ ಇತ್ಯಾದಿ ಯಾ ಪ್ರಾಪಣೇ ಸಕ.। ಅನಿ.। to go. ಲಟ್. ಇಲ್ಲಿ 'ಯಾವತ್‌ಪುರಾನಿಪಾತಯೋರ್ಲಟ್' ಎಂಬ ಸೂತ್ರದಿಂದ (೩-೩-೪) ಭವಿಷ್ಯತ್‌ಕಾಲದ ಅರ್ಥದಲ್ಲಿ ಲಟ್ ಬಂದಿದೆ ಎಂದು ವ್ಯಾಖ್ಯಾನಕಾರರು ಬರೆಯುತ್ತಾರೆ. ಆದ್ದರಿಂದ ಯಾತಿಯಾವತ್ ಎಂಬ ಪಾಠವೇ ಇರಬೇಕೆಂದು ತೋರುತ್ತದೆ. ಆ + ವ್ರಜೇತ್ ವ್ರಜೇತಾಂ ವ್ರಜೇಯುಃ ವ್ರಜೇಃ ವ್ರಜೇತಂ ವ್ರಜೇತ, ವ್ರಜೇಯಂ ವ್ರಜೇವ ವ್ರಜೇಮ. ವ್ರಜ ಗತೌ ಸಕ.। ಸೇಟ್.। ಪರ.। to go. ವಿಧಿಲಿಙ್. ಅಸ್ತು ಸ. ೫ ಶ್ಲೋ. ೧೫ ನೋಡಿರಿ. ಯಯೌ ಸ. ೫ ಶ್ಲೋ. ೮ ನೋಡಿರಿ.

ಅವ.—ಆಗ ಶಿಷ್ಯರು ಏನು ಮಾಡಿದರೆಂದು ಹೇಳುತ್ತಾರೆ—

ನಾಥ ನಾಥ ಬತ ನೋಽತ್ರ ವಿನಾಥಾನ್
ಮಾ ತ್ಯಜೋರುಕರುಣೋ ಭಗವಂಸ್ತ್ವಮ್ ।

Rarest Archiver

ನೋದಿತಂ ಸ್ಮೃತಮಪೀತಿ ಹಿ ಶಿಷ್ಯೈಃ
ಸ್ವಾಮಿನೋಽಭಿಮತಭಂಗಭಯೇನ ॥೪೯॥

ಅ.ಅ—ನಾಥ ! ನಾಥ ! = ಸ್ವಾಮಿಯೇ ! ಸ್ವಾಮಿಯೇ !, ಭಗವನ್ ! = ಷಡ್ಗುಣೈಶ್ವರ್ಯಸಂಪನ್ನರಾದ ಪೂಜ್ಯರೇ !, ಉರುಕರುಣಃ = ತುಂಬಾ ದಯಾಶಾಲಿಗಳಾದ, ತ್ವಂ = ನೀವು, ವಿನಾಥಾನ್ = ರಕ್ಷಕರಿಲ್ಲದ, ನಃ= ನಮ್ಮನ್ನು, ಅತ್ರ = ಈ ಪರದೇಶದಲ್ಲಿ, ಮಾ ತ್ಯಜ = ಬಿಡಬೇಡಿರಿ. ಬತ= ಅಯ್ಯೋ ! (ಖೇದವು.) ಶಿಷ್ಯೈಃ = ಶಿಷ್ಯರಿಂದ, ಇತಿ ಸ್ಮೃತಂ ಅಪಿ = ಹೀಗೆ ಹೇಳಬೇಕೆಂದು ಸ್ಮರಿಸಲ್ಪಟ್ಟರೂ, ಸ್ವಾಮಿನಃ = ಗುರುಗಳಾದ ಶ್ರೀಮಧ್ವಾ-ಚಾರ್ಯರ, ಅಭಿಮತ= ಇಷ್ಟವಾದ ಗಮನದ, ಭಂಗ= ತಡೆಯು, ಭಯೇನ = ಭಯದಿಂದ, ನೋದಿತಂ ಹಿ = ಹೇಳಲ್ಪಡಲಿಲ್ಲವಷ್ಟೆ !

ತಾ.—'ಹೇ ಪ್ರಭೋ, ಸ್ವಾಮಿ ! ಭಗವತ್ಪಾದಾಚಾರ್ಯರೇ ! ಈ ಪರದೇಶದಲ್ಲಿ ಅನಾಥರಾದ ನಮ್ಮನ್ನು ಬಹಳ ಕರುಣಾಶಾಲಿಗಳಾದ ತಾವು ಬಿಟ್ಟುಹೋಗಬೇಡಿರಿ' ಎಂದು ಬೇಡಿಕೊಳ್ಳಬೇಕೆಂದು ಶಿಷ್ಯರು ನೆನೆಸಿದರು. ಆದರೂ ಗುರುಗಳಿಗೆ ಅತ್ಯಂತ ಇಷ್ಟವಾದ ಶ್ರೀವೇದವ್ಯಾಸರ ದರ್ಶನಕ್ಕೆ ತಾವು ಭಂಗತಂದಂತೆ ಆದೀತೆಂಬ ಹೆದರಿಕೆಯಿಂದ ಏನೂ ಹೇಳಲಿಲ್ಲ. 'ಪರಸ್ಥಳದಲ್ಲಿ ತಾವು ನಮ್ಮನ್ನು ಬಿಟ್ಟು ಹೋದರೆ ನಮಗೆ ಬೇರೆ ಗತಿಯಿಲ್ಲ' ಎಂದು ಹೇಳಿ ಬೇಡಿಕೊಂಡರೆ, ಶಿಷ್ಯರ ಮೇಲಿನ ದಯೆಯಿಂದ ತನ್ನ ಇಷ್ಟವನ್ನಾದರೂ ಬಿಟ್ಟು ಗುರುಗಳು ಅಲ್ಲಿಯೇ ನಿಂತರೆ, ಅವರ ಮಹತ್ತ್ವಮಕಾರ್ಯಕ್ಕೆ ಭಂಗತಂದಂತಾಗುತ್ತದೆ ಎಂದು ಬಾಯಿ ಬಿಟ್ಟು ಹೇಳಲು ಶಿಷ್ಯರು ಹೆದರಿದರು. ಸುಮ್ಮನಾಗಿದ್ದರು' ಎಂದು ಭಾವ.

ವಿ.—ವಿಗತಃ ನಾಥಃ ಯೇಷಾಂ ತೇ ವಿನಾಥಾಃ ತಾನ್, ಅಭಿಮತಸ್ಯ ಭಂಗಾತ್ ಭಯಂ ಅಭಿಮತಭಂಗಭಯಂ ತೇನ,

ಕ್ರಿ.—ತ್ಯಜತು ತ್ಯಜತಾತ್ ತ್ಯಜತಾಂ ತ್ಯಜಂತು, ತ್ಯಜ ತ್ಯಜತಾತ್ ತ್ಯಜತಂ ತ್ಯಜತ, ತ್ಯಜಾನಿ ತ್ಯಜಾವ ತ್ಯಜಾಮ. ತ್ಯಜ ಹಾನೌ.। ಸಕ.। ಅನಿ.। ಪರ.। to abondon. ಲೋಟ್. (ಇತಿ ಸ್ಮೃತವಂತಃ ಅಪಿ ಶಿಷ್ಯಾಃ ನೋದಿತವಂತಃ),

Rarest Archiver

ಅನ.—ಸತ್ಯತೀರ್ಥರೆಂಬ ಒಬ್ಬರು ಶಿಷ್ಯರು ಮಾತ್ರ ಆಚಾರ್ಯರನ್ನು ಹಿಂಬಾಲಿಸಿದರು—

ಸದ್ಗುರೋರ್ನ ವಿರಹಂ ಸಹಮಾನಃ
ಸತ್ಯತೀರ್ಥಯತಿರನ್ವಗಮತ್ತಂ ।
ಯಸ್ತ್ರಿವಾರಮಿತರಾಸುತಶಾಖಾ-
ಸ್ವರ್ಥಮಗ್ರ್ಯಮಶೃಣೋತ್ ಪುರುಸಂಖ್ಯಾತ್ ॥೫೦॥

ಅ.ಅ—ಯಃ = ಯಾವ ಸತ್ಯತೀರ್ಥರು, ಇತರಾಸುತಶಾಖಾಸು = ಇತರಾದೇವಿಯ ಮಗನಾದ ಮಹಿದಾಸನೆಂಬ ಪರಮಾತ್ಮನಿಂದ ದೃಷ್ಟವಾದ ಐತರೇಯೋಪನಿಷತ್ತುಗಳಲ್ಲಿರುವ, ಅಗ್ರ್ಯಂ = ಶ್ರೇಷ್ಠವಾದ, ಅರ್ಥಂ = ಪ್ರತಿಪಾದ್ಯವಾದ ವಿಷಯವನ್ನು, ಪುರುಸಂಖ್ಯಾತ್ = ಶ್ರೀಮಧ್ವಾಚಾರ್ಯರಿಂದ, ತ್ರಿವಾರಂ = ಮೂರುಬಾರಿ, ಅಶೃಣೋತ್ = ಕೇಳಿದ್ದರೋ, (ಸಃ) ಸತ್ಯತೀರ್ಥಯತಿಃ = ಆ ಸತ್ಯತೀರ್ಥರೆಂಬ ಸಂನ್ಯಾಸಿಗಳು, ಸದ್ಗುರೋಃ = ಶ್ರೇಷ್ಠಗುರುಗಳಾದ ಶ್ರೀಮಧ್ವಾಚಾರ್ಯರ, ವಿರಹಂ = ವಿಯೋಗವನ್ನು, ನ ಸಹಮಾನಃ (ಸನ್) = ಸಹಿಸಲಾರದವರಾಗಿ, ತಂ = ಶ್ರೀಮದಾಚಾರ್ಯರನ್ನು, ಅನ್ವಗಮತ್ = ಹಿಂಬಾಲಿಸಿದರು.

ತಾ.—ಶ್ರೀಮಧ್ವಾಚಾರ್ಯರಿಗೆ ಸತ್ಯತೀರ್ಥರೆಂಬ ಒಬ್ಬ ಪ್ರಿಯಶಿಷ್ಯರಿದ್ದರು. ಅವರು ಐತರೇಯಉಪನಿಷತ್ತಿನ ಶ್ರೇಷ್ಠವಾದ ಅರ್ಥವನ್ನು ಆಚಾರ್ಯರಿಂದ ಮೂರು ಬಾರಿ ಶ್ರವಣಮಾಡಿದ್ದರು. ಈ ಸತ್ಯತೀರ್ಥರು ತನ್ನ ಪೂಜ್ಯ ಗುರುಗಳಾದ ಆಚಾರ್ಯರ ವಿಯೋಗವನ್ನು ಸಹಿಸಲಾರದೆ ಆಚಾರ್ಯರನ್ನು ದೂರದಲ್ಲಿ ಅನುಸರಿಸಿ ಹೊರಟರು.

ವಿ.—ಸತಾಂ ಗುರುಃ (ಸನ್ ಚ ಅಸೌ ಗುರುಶ್ಚ) ಸದ್ಗುರುಃ ತಸ್ಯ, ಇತರಾಯಾಃ ಸುತಸ್ಯ ಶಾಖಾಃ ಇತರಾಸುತಶಾಖಾಃ ತಾಸು, ಪುರುಃ ಸಂಖ್ಯಾ (ಜ್ಞಾನಂ) ಯಸ್ಯ ಸಃ ತಸ್ಮಾತ್.

ಕ್ರಿ.—ಅನು + ಅಗಮತ್ ಅಗಮತಾಂ ಅಗಮನ್, ಅಗಮಃ ಅಗಮತಂ ಅಗಮತ, ಅಗಮಂ ಅಗಮಾವ ಅಗಮಾಮ. ಗಮ್ಲೃ ಗತೌ ಗಮ್ (ಗಚ್ಛ) ಸಕ.। ಅನಿ.। ಪರ.। to go. ಅನು ಉಪಸರ್ಗ. ಲುಜ್.

Rarest Archiver

ಆಶೃಣೋತ್ ಅಶೃಣುತಾಂ ಅಶೃಣ್ವನ್, ಅಶೃಣೋಃ ಅಶೃಣುತಂ ಆಶೃಣುತ, ಆಶೃಣವಂ ಆಶೃಣುವ ಆಶೃಣ್ವ ಅಶೃಣುಮ ಅಶೃಣ್ಮ. ಶ್ರು ಶ್ರವಣೇ. ಸಕ.। ಪರ.। to hear ಅನದ್ಯತನಭೂತೇ ಲಙ್.

ಅವ.—ಸಾಯಂಕಾಲದವರೆಗೆ ಹಿಂಬಾಲಿಸಿದರೂ ಸತ್ಯತೀರ್ಥರು ಆಚಾರ್ಯರನ್ನು ತಲುಪಲು ಸಾಧ್ಯವಾಗಲಿಲ್ಲ—

ದುರ್ಗಮಾರ್ಗಗತಮಪ್ಯನುಧಾವ-
ನ್ನಾಪ ಸೋಽಯಮರುಣೀಭವತೀನೇ ।
ಲೀಲಯಾ ಸಜವಮಾಕ್ರಮಮಾಣಂ
ವ್ಯಾಶ್ರಯಾಂತರಸುದೂರಶಿಲಾಸು ॥೩೧॥

ಅ. ಅ—ಸಃ ಅಯಂ = ಅಂತಹ ಈ ಸತ್ಯತೀರ್ಥರು, ದುರ್ಗಮಾರ್ಗಗತಂ ಅಪಿ = ದುರ್ಗಮವಾದ ಮಾರ್ಗದಲ್ಲಿ ಹೋಗುತ್ತಿದ್ದಾಗ್ಯೂ, (ಆ ಮಧ್ವಾಚಾರ್ಯರನ್ನು) ಅನುಧಾವನ್ = ಹಿಂಬಾಲಿಸುತ್ತಾ, ಇನೇ = ಸೂರ್ಯನು, ಅರುಣೀಭವತಿ (ಸತಿ) = ಕೆಂಪಾಗುತ್ತಿರಲು, (ಅಸ್ತಂಗತನಾಗುತ್ತಿರಲು) ವ್ಯಾಶ್ರಯಾಂತರ = ಮಧ್ಯದಲ್ಲಿ ಆಶ್ರಯವಿಲ್ಲದ, ಸುದೂರಶಿಲಾಸು = ಬಹು ದೂರದಲ್ಲಿರುವ ಬಂಡೆಕಲ್ಲುಗಳಲ್ಲಿ, ಲೀಲಯಾ = ಅನಾಯಾಸದಿಂದ, ಸಜವಂ = ವೇಗವಾಗಿ, ಆಕ್ರಮಮಾಣಂ = ಹಾರಿಕೊಂಡು ಹೋಗುತ್ತಿರುವ ಗುರುಗಳನ್ನು, ನಾಪ = ಹೊಂದಲಿಲ್ಲ.

ತಾ.—ಅಂತಹ ಈ ಸತ್ಯತೀರ್ಥರು ನಡೆಯಲು ಅಸಾಧ್ಯವಾದ ಬಹಳ ಕಷ್ಟಕರವಾದ ದಾರಿಯಲ್ಲಿಯೂ ಕೂಡ ಶ್ರೀಮಧ್ವಾಚಾರ್ಯರನ್ನು ಹಿಂಬಾಲಿಸುತ್ತಾ ಪ್ರಯಾಣಮಾಡುತ್ತಿದ್ದರು. ಸಾಯಂಕಾಲದ ಸೂರ್ಯನು ಕೆಂಪಾಗಿ ಕಾಣಿಸುತ್ತಿರುವಾಗ ಬಹಳ ದೂರ ದೂರದಲ್ಲಿರುವ ಬಂಡೆಕಲ್ಲುಗಳ ಮೇಲೆ ಒಂದರಿಂದ ಇನ್ನೊಂದರ ಮೇಲೆ ಅನಾಯಾಸವಾಗಿ ಹಾರುತ್ತಾ ಹಾರುತ್ತಾ ಆಚಾರ್ಯರು ಮುಂದೆ ಮುಂದೆ ಶೀಘ್ರವಾಗಿ ಹೋಗುತ್ತಿದ್ದರು. ಸತ್ಯತೀರ್ಥರು ಬಹಳದೂರದಲ್ಲಿ ಅವರನ್ನು ನೋಡುತ್ತಾ ಇದ್ದರೂ ಹಿಂಬಾಲಿಸಿ ಸಮೀಪಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಮುಂಜಾನೆ ಹೊರಟವರು ಸಾಯಂಕಾಲದವರೆಗೆ

Rarest Archiver

ಹಿಂದಿನಿಂದ ನಡೆದರೂ ದೂರ ದೂರವಾದ ಬಂಡೆಕಲ್ಲುಗಳಲ್ಲಿ ಹಾರಿಕೊಂಡು ಹೋಗುತ್ತಿರುವ ಗುರುಗಳನ್ನು ಮುಟ್ಟಲು ಸಾಧ್ಯವಾಗಲಿಲ್ಲ ಎಂದು ಹೇಳಿದ್ದರಿಂದ ಆ ದಾರಿಯು ಮನುಷ್ಯರಿಗೆ ಹೋಗಲು ಸಾಧ್ಯವಲ್ಲದ್ದು ಎಂದು ತಿಳಿಯುತ್ತದೆ.

ವಿ.—ದುಃಖೇನ ಗಂತುಂ ಶಕ್ಯಃ ದುರ್ಗಃ ದುರ್ಗಶ್ಚಾಸೌ ಮಾರ್ಗಶ್ಚ ದುರ್ಗಮಾರ್ಗಃ ದುರ್ಗಮಾರ್ಗಂ ಗತಃ ದುರ್ಗಮಾರ್ಗಗತಃ ತಂ, ಅನ-ರುಣಃ ಅರುಣಃ ಸಂಪದ್ಯಮಾನಃ ಆರುಣೀಭವನ್ ತಸ್ಮಿನ್, ಜವೇನ ಸಹಿತಂ ಯಥಾ ಭವತಿ ತಥಾ ಸಜವಂ, ವಿಗತಃ ಆಶ್ರಯಃ ಯಸ್ಯ ತತ್, ವ್ಯಾಶ್ರಯಂ ಅಂತರಂ ಯಾಸಾಂ ತಾಃ ವ್ಯಾಶ್ರಯಾಂತರಾಃ, ಸುದೂರೇ ಶಿಲಾಃ ಸುದೂರ-ಶಿಲಾಃ ವ್ಯಾಶ್ರಯಾಂತರಾಶ್ಚ ತಾಃ ಸುದೂರಶಿಲಾಶ್ಚ ತಾಸು.

ಕ್ರಿ.—ಆಪ-ಸರ್ಗ ೫ ಶ್ಲೋ. ೫೦ ನೋಡಿರಿ.

ಅವ.—ಮುಂದೆ ನಡೆದ ಅದ್ಭುತವಾದ ಘಟನೆಯೊಂದು ಹೀಗಿದೆ—

ಆನಿವೃತ್ತವಪುಷಾ ಗುರುಣಾರಾತ್
ಪಾಣಿನಾ ಹ್ಯಭಿನಯೇನ ಸುನುನ್ನಃ ।
ತ್ರಸ್ತಧೀರತಿಯಯೌ ಸ ಮುಹೂರ್ತಾತ್
ತದ್ದಿನೋಪಗತಮಾರ್ಗಮಶೇಷಮ್ ॥೫೨॥

ಅ.ಅ—ಆನಿವೃತ್ತ = ಸ್ವಲ್ಪ ಹಿಂದಕ್ಕೆ ತಿರುಗಿದ, ವಪುಷಾ = ದೇಹವುಳ್ಳ, ಗುರುಣಾ = ಶ್ರೀಮಧ್ವಾಚಾರ್ಯರಿಂದ, ಪಾಣಿನಾ = ಕೈಯಿಂದ, ಅಭಿನಯೇನ = ಹಿಂದಿರುಗಿ ಹೋಗು ಎಂಬ ವಿಷಯವನ್ನು ಸೂಚಿಸುವ ಸನ್ನೆಯಿಂದ, ಆರಾತ್ = ದೂರದಿಂದ, ಸುನುನ್ನಃ = ಚೆನ್ನಾಗಿ ತಳ್ಳಿದಂತೆ ಆದ, (ಪ್ರೇರಿತರಾದ) ಸಃ = ಆ ಸತ್ಯತೀರ್ಥರು, ತ್ರಸ್ತಧೀಃ = ಭಯಗ್ರಸ್ತವಾದ ಬುದ್ಧಿಯುಳ್ಳವರಾಗಿ, ಅಶೇಷಂ=ಸಂಪೂರ್ಣವಾದ, ತದ್ದಿನೋಪಗತಮಾರ್ಗಂ= ಆ ದಿನ ಸಾಗಿದ ದಾರಿಯನ್ನು, ಮುಹೂರ್ತಾತ್=ಸ್ವಲ್ಪ ಹೊತ್ತಿನಲ್ಲಿಯೇ (ಎರಡು ಗಳಿಗೆಯಲ್ಲಿಯೇ) ಅತಿಯಯೌ ಹಿ = ದಾಟಿದರಷ್ಟೆ !

Rarest Archiver

ತಾ.—ಆಗ ಆಚಾರ್ಯರು ತಲೆಯನ್ನೂ ದೇಹವನ್ನೂ ಸ್ವಲ್ಪ ಹಿಂದೆ ತಿರುಗಿಸಿ ದೂರದಲ್ಲಿ ಬರುತ್ತಿರುವ ಸತ್ಯತೀರ್ಥರಿಗೆ, ತನ್ನ ಕೈಯಿಂದ ಹಿಂತಿರುಗು ಎಂದು ಸನ್ನೆಮಾಡಿದರು. ಸತ್ಯತೀರ್ಥರಿಗೆ ತುಂಬಾ ಹೆದರಿಕೆಯಾಯಿತು. ಆದರೆ ಅವರು ಮುಂಜಾನೆಯಿಂದ ಸಂಜೆವರೆಗೆ ನಡೆದ ದಾರಿಯನ್ನೆಲ್ಲಾ ಎರಡು ಗಳಿಗೆಯಲ್ಲಿ ಆಚಾರ್ಯರ ಅನುಗ್ರಹದಿಂದ ಹಿಂದೆ ದಾಟಿ ಅನಂತಮಠಕ್ಕೆ ಬಂದು ಸೇರಿದರು.

ವಿ.—ಅನಿವೃತ್ತಂ ವಪುಃ ಯಸ್ಯ ಸಃ ಅನಿವೃತ್ತವಪುಃ ತೇನ, ತ್ರಸ್ತಾ ಧೀಃ ಯಸ್ಯ ಸಃ, ತಚ್ಚ ತತ್ ದಿನಂ ಚ, ತದ್ದಿನೇ ಉಪಗತಃ, ತದ್ದಿನೋಪ-ಗತಶ್ಚಾಸೌ ಮಾರ್ಗಶ್ಚ ತಂ,

ಕ್ರಿ.—ಅತಿ+ಯಯೌ ಸರ್ಗ ೫ ಶ್ಲೋ. ೩ ನೋಡಿರಿ.

ಅವ.—ಸತ್ಯತೀರ್ಥರು ಅನಂತಮಠಕ್ಕೆ ಬಂದು ಅಲ್ಲಿ ಎಲ್ಲರಿಗೂ ಆಚಾರ್ಯರ ಮಹಿಮೆಯನ್ನು ತಿಳಿಸಿದರು—

ಆಶ್ರಮೇ ನಿಜಜನಾನಿಹ ದೃಷ್ಟ್ವಾ
ತಂ ಪ್ರಸಾದಮಹಿಮಾನಮಮುಷ್ಯ ।
ಪ್ರೋಚ್ಯ ತತ್ಪ್ಲವನಮಪ್ಯತಿಚಿತ್ರಂ
ತಸ್ಯ ತೈಃ ಸಹಸದಾಸ್ಮರದೇಷಃ ॥೫೩॥

ಅ.ಅ.—ಏಷಃ=ಈ ಸತ್ಯತೀರ್ಥರು, ಇಹ ಆಶ್ರಮೇ=ಈ ಅನಂತಮಠದಲ್ಲಿ, ನಿಜಜನಾನ್=ತಮ್ಮ ಜನರನ್ನು, ದೃಷ್ಟ್ವಾ=ನೋಡಿ, (ಅವರಿಗೆ) ಅಮುಷ್ಯ = ಆಚಾರ್ಯರ, ತಂ = ಅಂತಹ, ಪ್ರಸಾದಮಹಿಮಾನಂ = ಅನುಗ್ರಹದ ಮಹತ್ತ್ವವನ್ನು, ಅಪಿ = ಮತ್ತು, ಅತಿಚಿತ್ರಂ = ಅತ್ಯಂತ ಆಶ್ಚರ್ಯಕರವಾದ, ತತ್ಪ್ಲವನಂ = ಆಚಾರ್ಯರ ಹಾರುವಿಕೆಯನ್ನು, ಪ್ರೋಚ್ಯ=ಹೇಳಿ, ತೈಃ ಸಹ=ಅವರೊಡನೆ, ಸದಾ=ಯಾವಾಗಲೂ, ತಸ್ಯ =ಆ ಮಧ್ವಾಚಾರ್ಯರನ್ನು, ಅಸ್ಮರತ್=ಸ್ಮರಿಸಿದರು.

ತಾ.—ಈ ಸತ್ಯತೀರ್ಥರು ಅನಂತಮಠಕ್ಕೆ ಬಂದು ಅಲ್ಲಿರುವ ತಮ್ಮ ಜನರನ್ನು ಕಂಡರು. ತಾನು ಆಚಾರ್ಯರನ್ನು ಹಿಂಬಾಲಿಸಿ ಹೋದ ವಿಷಯ-

Rarest Archiver

ವನ್ನೂ, ಆಚಾರ್ಯರು ಅನುಗ್ರಹಿಸಿ ತನ್ನನ್ನು ಸ್ವಲ್ಪಗೊತ್ತಿಲ್ಲದೆಯೇ ಹಿಂದೆ ಕಳುಹಿಸಿದ ಕ್ರಮವನ್ನೂ ಹೇಳಿದರು. ಆಚಾರ್ಯರು ಒಂದು ಬಂಡೆಯಿಂದ ದೂರದ ಮತ್ತೊಂದು ಬಂಡೆಗೆ ಹಾರುತ್ತಾ ಹೋಗುತ್ತಿದ್ದ ಅವರ ವಿಚಿತ್ರ ಮಹಿಮೆಯನ್ನೂ ವರ್ಣಿಸಿದರು. ಹಾಗೆಯೇ ತನ್ನ ಜತೆಗಾರನೆ ಯಾವಾಗಲೂ ಆಚಾರ್ಯರನ್ನು ಸ್ಮರಿಸುತ್ತಾ ಅನಂತಮಠದಲ್ಲಿ ಕಾಲಕಳೆಯುತ್ತಿದ್ದರು. ಯಾವಾಗ ಗುರುಗಳು ಬಂದು ದರ್ಶನಕೊಟ್ಟಾರೆಂದು ಎಣಿಸುತ್ತಾ ಶಿಷ್ಯರು ಅಲ್ಲಿ ವಾಸಿಸುತ್ತಿದ್ದರು.

ವಿ.—ನಿಜಾಶ್ಚ ತೇ ಜನಾಶ್ಚ ತಾನ್, ಪ್ರಸಾದಸ್ಯ ಮಹಿಮಾ ತಂ, ತಸ್ಯ ಪ್ಲವನಂ ತತ್,

ಕ್ರಿ.—ಅಸ್ಮರತ್ ಸರ್ಗ ೫, ಶ್ಲೋ. ೩೫ ನೋಡಿರಿ. ತಸ್ಯ ಅಸ್ಮರತ್ ಎಂಬಲ್ಲಿ ಸೂತ್ರ—ಅಧೀಗರ್ಥದಯೇಶಾಂ ಕರ್ಮಣಿ ಎಂಬ ನಿಯಮದಂತೆ ಕರ್ಮಕ್ಕೆ ಷಷ್ಠೀ ಬಂದಿದೆ.

ಅವ.—ಆಚಾರ್ಯರ ಮಹಾಬದರೀಪ್ರಯಾಣವು ಹೇಗಿತ್ತು ?

ವಾನರೇಂದ್ರ ಇವ ವಾಯುಜವೋಽಸೌ
ಭೀಮಸೇನ ಇವ ದಾನವಭೀಮಃ ।
ಉಲ್ಲಲಾಸ ಗಿರಿಪುಂಗವಶೃಂಗೇ-
ಸ ವ್ರಜನ್ ವೃಜಿನನಾಶನನಾಮಾ ॥೫೪॥

ಅ.ಅ—ಗಿರಿಪುಂಗವ = ಪರ್ವತಶ್ರೇಷ್ಠವಾದ ಹಿಮಾಲಯದ, ಶೃಂಗೇ = ಶಿಖರದಲ್ಲಿ, ವ್ರಜನ್ = ಹೋಗುತ್ತಿರುವ, ವೃಜಿನ = ಪಾಪವನ್ನು, ನಾಶನ = = ಪರಿಹರಿಸುವ, ನಾಮಾ = ಹೆಸರುಳ್ಳ, ಸಃ = ಪ್ರಸಿದ್ಧರಾದ, ಅಸೌ = ಈ ಮಧ್ವಾಚಾರ್ಯರು, ವಾಯುಜವಃ = ವಾಯುವಿನಂತೆ ವೇಗವುಳ್ಳ, ವಾನರೇಂದ್ರ ಇವ = ಕಪಿಶ್ರೇಷ್ಠನಾದ ಆಂಜನೇಯನಂತೆಯೂ, ದಾನವಭೀಮಃ = ದೈತ್ಯರಿಗೆ ಭಯಂಕರನಾದ, ಭೀಮಸೇನಃ ಇವ = ಭೀಮಸೇನನಂತೆಯೂ, ಉಲ್ಲಲಾಸ = ಕಂಗೊಳಿಸಿದರು.

ತಾ.—ವಾಯುಪುತ್ರನಾದ ಹನುಮಂತನು ವಾಯುವೇಗದಿಂದ ಆಕಾಶ

Rarest Archiver

ಮಾರ್ಗದಲ್ಲಿ ಹಾರಿಹೋಗುತ್ತಾ ಕಂಗೊಳಿಸುತ್ತಿದ್ದನು. ಭೀಮಸೇನನು ಸೌಗಂಧಿಕಾಪುಷ್ಪವನ್ನು ತರಲು ಹೋಗುತ್ತಿರುವಾಗ ದಾನವರಿಗೆ ಭಯಂಕರನಾಗಿ ಪ್ರಕಾಶಿಸುತ್ತಿದ್ದನು. ಪಾಪಪರಿಹಾರಕವಾದ ಪವಿತ್ರ ಹೆಸರುಳ್ಳ ಶ್ರೀಮಧ್ವಾಚಾರ್ಯರು ಪರ್ವತಗಳಲ್ಲಿ ಶ್ರೇಷ್ಠವಾದ ಹಿಮಾಲಯದ ಶಿಖರದಲ್ಲಿ ಪ್ರಯಾಣಮಾಡುತ್ತಿರುವಾಗ ಹನುಮಂತಭೀಮಸೇನರಂತೆ ಕಂಗೊಳಿಸಿದರು. ವಾಯುವೇಗದಿಂದ ಪ್ರಯಾಣಮಾಡುವಾಗ ಶ್ರೀಮಧ್ವಾಚಾರ್ಯರು ದೈತ್ಯರಿಗೆ ಭಯವನ್ನುಂಟುಮಾಡುತ್ತಿದ್ದರು ಎಂದು ಭಾವ.

ವಿ.—ವಾನರಾಣಾಂ ಇಂದ್ರಃ, ವಾಯೋರಿವ ಜವಃ ಯಸ್ಯ ಸಃ ವಾಯುಜವಃ, ದಾನವಾನಾಂ ಭೀಮಃ, ಗಿರಿಷು ಪುಂಗವಃ, ಗಿರಿಪುಂಗವಸ್ಯ ಶೃಂಗಂ ತಸ್ಮಿನ್, ವೃಜಿನಾನಾಂ ನಾಶನಂ ನಾಮ ಯಸ್ಯ ಸಃ.

ಕ್ರಿ.—ಲಲಾಸ ಲೇಸತುಃ ಲೇಸುಃ, ಲೇಸಿಥ ಲೇಸಥುಃ ಲೇಸ, ಲಲಾಸ ಲಲಸ ಲೇಸಿವ ಲೇಸಿಮ. ಉತ್ ಉಪಸರ್ಗ, ಲಸ ಕಾಂತೌ to shine, ಅಕ.। ಸೇಟ್.। ಪರ.। ಲಿಟ್.

ಅವ.—ಆಚಾರ್ಯರು ಪರ್ವತಚಕ್ರವರ್ತಿಯಾದ ಹಿಮಾಲಯನನ್ನು ಹೇಗೆ ಕಂಡರು ?

ಬಹುಸತ್ತ್ವಗಣಂ ಸವಿಕಂ ಸಮಹಾ
ವಿಷಮೋಕ್ಷಮಹಾಹಿಮವಂತಮಯಂ ।
ವಿಷಮೋಕ್ಷಮಹಾಹಿಮವಂತಮಯ-
ನ್ನಗಮೈಕ್ಷತ ಫುಲ್ಲದೃಗಸ್ತಭಯಃ ॥೫೫॥

ಅ.ಅ.—ಅಯನ್ = ಹೋಗುತ್ತಿರುವ, ವಿಷಮ = ಕೋಪಗೊಂಡ, ಉಕ್ಷ = ಗೂಳಿಯಂತೆ, ಮಹಾಃ = ತೇಜಸ್ಸುಳ್ಳ, ಫುಲ್ಲದೃಕ್ = ಅರಳಿದ ಕಣ್ಣುಗಳುಳ್ಳ (ಪೂರ್ಣಜ್ಞಾನರಾದ), ಅಸ್ತಭಯಃ = ಭಯವಿಲ್ಲದ, ಅಯಂ = ಈ ಮಧ್ವಾಚಾರ್ಯರು, ಸವಿಕಂ = ಪಕ್ಷಿಗಳಿಂದ ಕೂಡಿದ, ಸಮಹಾವಿಷಮೋಕ್ಷಮಹಾಹಿಂ = ಹೆಚ್ಚಾದ ವಿಷವನ್ನು ಕಾರುವ ದೊಡ್ಡ ಹಾವುಗಳಿಂದ ಸಹಿತವಾದ, ಬಹುಸತ್ತ್ವಗಣಂ = ಅನೇಕಪ್ರಾಣಿಗಳ ಸಮೂಹವನ್ನು, ಅವಂತಂ = ಕಾಪಾಡು

Rarest Archiver

ತ್ತಿರುವ, ಹಿಮವಂತಂ ನಗಂ — ಹಿಮಾಲಯವೆಂಬ ಪರ್ವತವನ್ನು, ಐಕ್ಷತ — ನೋಡಿದರು.

(ಬಹುಸತ್ತ್ವಗಣಂ, ಸವಿಕಂ, ಸಮಹಾವಿಷಮೋಕ್ಷಮಹಾಹಿಂ, ಅಮಂತಂ, ಅಯಂ, ವಿಷಮೋಕ್ಷಮಹಾಃ, ಹಿಮವಂತಂ, ಅಂಘ್ರಿಪ್, ನಗಂ, ಐಕ್ಷತ, ಫುಲ್ಲದೃಕ್, ಅಸ್ತಭಯಃ ಎಂದು ಪದಚ್ಛೇದ).

ತಾ. — ಪುಷ್ಟವಾದ ಗೂಳಿಯಂತೆ ಬಲಿಷ್ಠರಾದ, ಅರಳಿದ ಕಣ್ಣುಗಳುಳ್ಳ ಭಯರಹಿತರಾದ ಶ್ರೀಮಧ್ವಾಚಾರ್ಯರು, ಪ್ರಯಾಣಮಾಡುತ್ತಾ, ಸಿಂಹ, ಹುಲಿ, ಕರಡಿ ಮುಂತಾದ ಪ್ರಾಣಿಗಳ ಗುಂಪನ್ನು ಕಾಪಾಡುತ್ತಿರುವ, ಪಕ್ಷಿಗಳ ಸಮೂಹದಿಂದಲೂ ವಿಷಜ್ವಾಲೆಯಿಂದ ಭಯಂಕರವಾದ ಸರ್ಪಗಳಿಂದಲೂ ಕೂಡಿರುವ ಹಿಮವಂತನನ್ನು ಕಂಡರು. (ಇಲ್ಲಿ ಯಮಕವೆಂಬ ಶಬ್ದಾಲಂಕಾರವಿದೆ.)

ವಿ. — ಬಹವಶ್ಚ ತೇ ಸತ್ತ್ವಾಶ್ಚ, ಬಹುಸತ್ತ್ವಾನಾಂ ಗಣಃ ತಂ, ವಿಭಿಃ ಸಹಿತಃ ಸವಿಕಃ ತಂ, ಮಹತ್ ಚ ತತ್ ವಿಷಂ ಚ, ಮಹಾವಿಷಸ್ಯ ಮೋಕ್ಷಃ, ಮಹಾವಿಷಮೋಕ್ಷೇಣ ಸಹಿತಾಃ ಸಮಹಾವಿಷಮೋಕ್ಷಾಃ, ತೇ ಚ ತೇ ಮಹಾಂತಃ ಅಹಯಃ ಯಸ್ಮಿನ್ ಸಃ ತಂ, ವಿಷಮಶ್ಚಾಸೌ ಉಕ್ಷಾ ಚ, ವಿಷಮೋಕ್ಷ್ಣಃ ಮಹ ಇವ ಮಹಃ ಯಸ್ಯ ಸಃ ವಿಷಮೋಕ್ಷಮಹಾಃ, ಫುಲ್ಲೇ ದೃಶೌ ಯಸ್ಯ ಸಃ (ಫುಲ್ಲಾದೃಕ್ ಯಸ್ಯ ಸಃ) ಅಸ್ತಂ ಭಯಂ ಯಸ್ಮಾತ್ ಸಃ.

ಕ್ರಿ. — ಐಕ್ಷತ-ಸರ್ಗ ೫ ಶ್ಲೋಕ ೨೬ ನೋಡಿರಿ.

ವೃತ್ತ — ಇಹತೋಟಕಮಂಬುಧಿಸೈಃ ಕಥಿತಂ — ಎಂಬ ಲಕ್ಷಣದಂತೆ ಇಲ್ಲಿ ತೋಟಕವೃತ್ತವಿದೆ.

ಅವ. — ಶ್ರೀಮನ್ನಾರಾಯಣನಲ್ಲಿರುವ ಕೆಲವುಗುಣಗಳು ಆ ಹಿಮವಂತನಲ್ಲಿ ಕಾಣಿಸುವುದರಿಂದ ಪರ್ವತವನ್ನು ಕಂಡಾಗ ಆಚಾರ್ಯರಿಗೆ ಶ್ರೀನಾರಾಯಣನ ಸ್ಮರಣೆಯುಂಟಾಯಿತೆಂದು ಎರಡು ಶ್ಲೋಕಗಳಿಂದ ಹೇಳುತ್ತಾ ಹಿಮಾಲಯವನ್ನು ವರ್ಣಿಸುತ್ತಾ ಈ ಸರ್ಗವನ್ನು ಮುಗಿಸುತ್ತಾರೆ—

ಸುಹಸಿತಕಮಲಾಕರೋಪಗೂಢಂ
ಸುಜನಸುಖಾರ್ಥಮನಂತಭೋಗಶಯ್ಯಂ ।

Rarest Archiver

ವಿಕಸಿತಸುಮನೋಘಟಾಗಮುಚ್ಚಂ
ಮರಕತರತ್ನಮಯಸ್ಥಲಾಗ್ರ್ಯಶೋಭಂ ॥೫೬॥

ಅ.ಅ.—(ಈ ಪದ್ಯವನ್ನು ಮುಂದಿನ ಪದ್ಯದೊಡನೆ ಸೇರಿಸಿ ಅರ್ಥಹೇಳಬೇಕಾದುದರಿಂದ ಇದು ಅಂತ್ಯಯುಗ್ಮವೆನಿಸಿಕೊಳ್ಳುವುದು). ಹಿಮಾಲಯದ ಪಕ್ಷದಲ್ಲಿ :–ಸುಹಸಿತ=ಚೆನ್ನಾಗಿ ಅರಳಿದ, ಕಮಲಾಕರ=ತಾವರೆಕೊಳಗಳಿಂದ, ಉಪಗೂಢಂ = ಸುತ್ತುವರಿಯಲ್ಪಟ್ಟ, ನಾರಾಯಣನ ಪಕ್ಷದಲ್ಲಿ :—ಒಳ್ಳೆಯ ಮಂದಹಾಸವುಳ್ಳ ಲಕ್ಷ್ಮಿಯ ಕೈಗಳಿಂದ ಆಲಿಂಗಿತನಾದ, ಸುಜನಸುಖಾರ್ಥಂ= ಸಜ್ಜನರ ಸೌಖ್ಯಕ್ಕಾಗಿ, ಅನಂತ = ಲೆಕ್ಕವಿಲ್ಲದ, ಭೋಗಶಯ್ಯಂ = ಹೂವು ಮುಂತಾದ ಭೋಗಪದಾರ್ಥಗಳು ಮತ್ತು ಹಾಸಿಗೆಗಳುಳ್ಳ, ಶೇಷನ ಶರೀರದ ಹಾಸಿಗೆಯುಳ್ಳ, ವಿಕಸಿತ = ಅರಳಿದ, ಸುಮನೋ = ಹೂವುಗಳ, ಘಟ= ಸಮೂಹವುಳ್ಳ, ಅಗಂ = ಮರವುಳ್ಳ, ಸಂತುಷ್ಟರಾದ ದೇವತೆಗಳ ಸಮೂಹದಲ್ಲಿ ಅಂತರ್ಯಾಮಿಯಾಗಿರುವ, ಉಚ್ಚಂ = ಎತ್ತರವಾದ, ಸರ್ವೋತ್ತಮನಾದ, ಮರಕತರತ್ನಮಯ=ಗರುಡಪಚ್ಚೆಮಣಿಯೇ ಪ್ರಚುರವಾದ, ಸ್ಥಳ=ನೆಲದಿಂದ, ಅಗ್ರ್ಯ=ಶ್ರೇಷ್ಠವಾದ, ಶೋಭಂ=ಕಾಂತಿಯುಳ್ಳ, ಗರುಡಪಚ್ಚೆಮಣಿಯ ಸ್ಥಳದಂತೆ ಶ್ರೇಷ್ಠವಾದ ಕಾಂತಿಯುಳ್ಳ, (ತಂ ಧರಣೀಧರಂ ದೃಷ್ಟ್ವಾ ಮುರರಿಪುಂ ಅಸ್ಮರತ್ = ಆ ಹಿಮಾಲಯನನ್ನು ನೋಡಿ ವಿಷ್ಣುವನ್ನು ಸ್ಮರಿಸಿದರು.)

ತಾ.—ಶ್ರೀಮನ್ನಾರಾಯಣನು ನಗುತ್ತಿರುವ ಲಕ್ಷ್ಮೀದೇವಿಯ (ಕಮಲಾಕರಗಳಿಂದ) ಕೈಗಳಿಂದ ಆಲಿಂಗಿಸಲ್ಪಟ್ಟವನು. ಹಿಮಾಲಯನೂ ಅರಳಿದ ಕಮಲಾಕರಗಳಿಂದ (ಅರಳಿದ ತಾವರೆಗಳುಳ್ಳ ಕೊಳಗಳಿಂದ) ಕೂಡಿರುತ್ತಾನೆ. ಶ್ರೀಹರಿಯು ಭಕ್ತರಿಗೆ ಆನಂದವನ್ನುಂಟುಮಾಡುವುದಕ್ಕಾಗಿ ಚಾತುರ್ಮಾಸ್ಯದ ನಾಲ್ಕುತಿಂಗಳುಗಳಲ್ಲಿ ಅನಂತನ (ಶೇಷನ) ಭೋಗವೆಂಬ (ಶರೀರವೆಂಬ) ಹಾಸಿಗೆಯಲ್ಲಿ ಮಲಗಿರುತ್ತಾನೆ. ಹಿಮಾಲಯನು ಸಜ್ಜನರ ಭೋಗಕ್ಕಾಗಿ ಅಸಂಖ್ಯವಾದ ಹೂವಿನಸರ ಮುಂತಾದುದೂ, ಹಾಸಿಗೆಗಳೂ ಇವುಗಳಿಂದ ಕೂಡಿದ್ದಾನೆ. ಹರಿಯು ಸಂತುಷ್ಟರಾದ ದೇವತೆಗಳಲ್ಲಿ (ಸುಮನಸರಲ್ಲಿ) ಅಂತರ್ಯಾಮಿಯಾಗಿ ನೆಲೆಸಿರುವನು. ಹಿಮಾಲಯನು ಅರಳಿದ ಹೂವಿನ (ಸುಮನಸಗಳ) ಸಮೂಹವುಳ್ಳ ಮರಗಳಿಂದ ಕೂಡಿದ್ದಾನೆ. ಹರಿಯು ಸರ್ವೋತ್ತಮನು. ಹಿಮವಂತನು

Rarest Archiver

ಸರ್ವೋನ್ನತನು. ಹರಿಯು ಪಚ್ಚೆಮಣಿಯಸ್ಥಳದಂತೆ ಹೊಳೆಯುವ ನೀಲ-ದೇಹನು. ಹಿಮವಂತನೂ ಪಚ್ಚೆಮಣಿಗಳಿಂದ ಭರಿತವಾದ ಭೂಮಿಯಿಂದ ಹೊಳೆಯುತ್ತಿರುವವನು. ಶ್ರೀಮಧ್ವಾಚಾರ್ಯರು ಇಂತಹ ಹಿಮವಂತನನ್ನು ಕಂಡು, ಅದರಂತೆಯೇ ಮಹಿಮವಂತನಾದ ಶ್ರೀಮನ್ನಾರಾಯಣನನ್ನು ಯಾವಾಗ ಕಂಡೇನೆಂದು ಉತ್ಕಂಠೆಯಿಂದ ಸ್ಮರಿಸಿದರು. ಮೇಘಶ್ಯಾಮನಾದ ಶ್ರೀಹರಿಯು ಚಾತುರ್ಮಾಸ್ಯದಲ್ಲಿ ಲೋಕಕ್ಷೇಮಕ್ಕಾಗಿ ಶೇಷನ ಮೇಲೆ ಲಕ್ಷ್ಮಿ ಯೊಡನೆ ಶಯನ ಮಾಡುವನು. ಆಗ ದೇವತೆಗಳು ಅವನ ಬಳಿಗೆ ಹೋಗಿ ಸ್ತೋತ್ರಮಾಡುತ್ತಾರೆ ಎಂಬ ವಿಷಯವನ್ನು ವರ್ಣಿಸಿದಂತಾಯಿತು.

ವಿ.—ಕಮಲಾನಾಂ ಆಕರಾಃ ಕಮಲಾಕರಾಃ, ಸುಹಸಿತಾಶ್ಚ ತೇ ಕಮಲಾಕರಾಶ್ಚ, ಸುಹಸಿತಕಮಲಾಕರೈಃ ಉಪಗೂಢಂ, ಸು ಶೋಭನಂ ಹಸಿತಂ ಯಸ್ಯಾಃ ಸಾ ಸುಹಸಿತಾ, ಸುಹಸಿತಾ ಚ ಸಾ ಕಮಲಾ ಚ ಸುಹಸಿತ-ಕಮಲಾ, ಸುಹಸಿತಕಮಲಾಯಾಃ ಕರೌ, ಸುಹಸಿತಕಮಲಾಕರಾಭ್ಯಾಂ ಉಪ-ಗೂಢಃ ತಂ, ಸುಖಾಯ ಇತಿ ಸುಖಾರ್ಥಂ, ಸುಜನಾನಾಂ ಸುಖಾರ್ಥಂ ಸುಜನ-ಸುಖಾರ್ಥಂ, ಭೋಗಾಶ್ಚ ಶಯ್ಯಾಶ್ಚ ಭೋಗಶಯ್ಯಾಃ, ಅನಂತಾಃ ಭೋಗ-ಶಯ್ಯಾಃ ಯಸ್ಮಿನ್ ಸಃ ತಂ, ಅನಂತಸ್ಯ ಭೋಗ ಏವ ಶಯ್ಯಾ ಯಸ್ಯ ಸಃ ತಂ, ವಿಕಸಿತಾಶ್ಚ ತಾಃ ಸುಮನಸಶ್ಚ, ವಿಕಸಿತಸುಮನಸಾಂ ಘಟಾಃ ಯೇಷು ತೇ, ವಿಕಸಿತಸುಮನೋಘಟಾಃ ಅಗಾಃ ಯಸ್ಮಿನ್ ಸಃ ತಂ, ವಿಕಸಿತಾಶ್ಚ ತೇ ಸುಮನಸಶ್ಚ ವಿಕಸಿತಸುಮನಸಃ, ವಿಕಸಿತಸುಮನಸಾಂ ಘಟಾ, ವಿಕಸಿತ-ಸುಮನೋಘಟಾಯಾಂ ಗಚ್ಛತೀತಿ ವಿಕಸಿತಸುಮನೋಘಟಾಗಃ ತಂ, ಮರಕತ-ರತ್ನೈಃ ಪ್ರಚುರಾಣಿ ಮರಕತರತ್ನಮಯಾನಿ, ಮರಕತರತ್ನಮಯಾನಿ ಚ ತಾನಿ ಸ್ಥಲಾನಿ ಚ, ಮರಕತರತ್ನಮಯಸ್ಥಲೈಃ. ಅಗ್ರ್ಯಾ ಶೋಭಾ ಯಸ್ಯ ಸಃ ತಂ, ಮರಕತರತ್ನಮಯಸ್ಥಲವತ್ ಅಗ್ರ್ಯಾ ಶೋಭಾ ಯಸ್ಯ ಸಃ ತಂ, ಪದ್ಮಾಕರ=ತಾವರೆಕೊಳ, ಪದ್ಮಾಕರಸ್ತಡಾಗೋಽಸ್ತ್ರೀ – ಅಮರ. ಅನಂತ = ಶೇಷ, ಅವಧಿ ಇಲ್ಲದ್ದು, ಶೇಷೋಽನಂತಃ, ಅನಂತೋಽನವಧಾವಪಿ – ಅಮರ. ಸುಮನಸ್ = ಹೂವು, ದೇವತೆಗಳು, ಸ್ತ್ರಿಯಃ ಸುಮನಸಃ ಪುಷ್ಪಂ (ಹೂವು ಎಂಬ ಅರ್ಥದಲ್ಲಿ ನಿತ್ಯ ಬಹುವಚನ) ಸುಪರ್ವಾಣಸ್ಸುಮನಸಃ– ಅಮರ. ಭೋಗ=ಹಾವಿನ ಶರೀರ,

Rarest Archiver

ಸುಖಾನುಭವ, ಭೋಗಃ ಸುಖೇ ಸ್ತ್ರ್ಯಾದಿಭೃತಾವಹೇಶ್ಚ ಫಣಕಾಯಯೋಃ— ಅಮರ. ಶ್ರೀಹರಿಯು ಶ್ರಾವಣ, ಭಾದ್ರಪದ, ಆಶ್ವಯುಜ, ಕಾರ್ತಿಕ ಈ ನಾಲ್ಕು ತಿಂಗಳುಗಳಲ್ಲಿ ಲೋಕಹಿತಕ್ಕಾಗಿ ಶೇಷನ ಮೇಲೆ ಮಲಗಿರುತ್ತಾನೆ. ಪ್ರಮಾಣ:—ವಾರ್ಷಿಕಾಂಶ್ಚತುರೋ ಮಾಸಾನ್ ಸರ್ವಭೂತಹಿತಾಯ ವೈ । ಸ್ವಾಪಂ ಯಾಸ್ಯತಿ ಶೇಷಾಂಗೇ ಲಕ್ಷ್ಮ್ಯಾ ಸಹ ಜಗತ್ಪತಿಃ ॥

ವೃತ್ತ:—ಅಯುಜಿ ನಯುಗರೇಫತೋ ಯಕಾರೋ ಯುಜಿ ಚ ನಜೌ ಜರಗಾಶ್ಚ ಪುಷ್ಪಿತಾಗ್ರಾ–ಎಂಬ ಲಕ್ಷಣದಂತೆ ಇಲ್ಲಿ ಪುಷ್ಪಿತಾಗ್ರಾ ವೃತ್ತ.

ಅವ.—ಶ್ರೀಹರಿ ಮತ್ತು ಹಿಮಾಲಯರನ್ನು, ಸಾಧಾರಣವಿಶೇಷಣ ಗಳಿಂದ ಮತ್ತೂ ಸ್ತೋತ್ರಮಾಡುತ್ತಾರೆ—

ಪಾದೋಪಾಂತನಮನ್ಮಹಾಮುನಿಗಣಂ ಹೇಮಪ್ರದೀಪ್ತಾಂಬರಂ
ಶ್ರೀಮದ್ರತ್ನಕಲಾಪಮಗ್ರ್ಯಕಟಕೈರ್ವಿಭ್ರಾಜಿತಂ ಹಾಟಕೈಃ ।
ದೃಷ್ಟ್ವಾ ತಂ ಧರಣೀಧರಂ ಸುವನಮಾಲೋಲ್ಲಾಸಿನಂ ಸುಂದರಂ
ಸ್ವಾನಂದಾಕೃತಿಮಸ್ಮರನ್ಮುರರಿಪುಂ ಸ್ವಾನಂದತೀರ್ಥಸ್ತದಾ ॥೫೭॥

ಅ.ಅ—ಸ್ವಾನಂದತೀರ್ಥಃ = ಅತಿಶಯಾನಂದಪ್ರದವಾದ ಶಾಸ್ತ್ರವನ್ನು ರಚಿಸಿರುವ ಶ್ರೀಮಧ್ವಾಚಾರ್ಯರು, ತದಾ = ಆಗ, ಪಾದೋಪಾಂತ = ತಪ್ಪಲಿನ ಬಳಿ, ನಮತ್ = ನಮಿಸುವ, ಮಹಾಮುನಿ = ಮಹರ್ಷಿಗಳ, ಗಣಂ ಸಮೂಹವುಳ್ಳ, ಕಾಲುಗಳ ಸಮೀಪದಲ್ಲಿ ನಮಿಸುತ್ತಿರುವ ಮುನಿಗಳ ಸಮೂಹ ವುಳ್ಳ, ಹೇಮ = ಶಿಖರದಲ್ಲಿರುವ ಚಿನ್ನದಿಂದ, ಪ್ರದೀಪ್ತ = ಪ್ರಕಾಶಿತವಾದ, ಅಂಬರಂ = ಆಕಾಶವುಳ್ಳ, ಚಿನ್ನದಂತೆ ಹೊಳೆಯುವ ಪೀತಾಂಬರವುಳ್ಳ, ಶ್ರೀಮತ್ = ಕಾಂತಿಯುಳ್ಳ, ರತ್ನ = ರತ್ನಗಳ, ಕಲಾಪಂ = ಸಮೂಹವುಳ್ಳ, ಹೊಳೆಯುವ ರತ್ನಾಭರಣಗಳುಳ್ಳ, ಹಾಟಕೈಃ = ಚಿನ್ನದ, ಅಗ್ರ್ಯಕಟಕೈಃ = ಶ್ರೇಷ್ಠವಾದ ಮಧ್ಯಭಾಗಗಳಿಂದ, ಚಿನ್ನದ ಉತ್ತಮವಾದ ಕಡಗಗಳಿಂದ, ವಿಭ್ರಾಜಿತಂ = ಪ್ರಕಾಶಿಸುತ್ತಿರುವ, ಸುವನಮಾಲಾ = ಒಳ್ಳೆಯ ಕಾಡುಗಳ ಸಾಲುಗಳಿಂದ, ಉತ್ತಮವಾದ ವನಮಾಲೆಯೆಂಬ ಹಾರದಿಂದ ಪ್ರಕಾಶಿಸುವ, ಸುಂದರಂ = ಮನೋಹರನಾದ, ಸ್ವಾನಂದಾಕೃತಿಂ = ಉತ್ತಮವಾದ ಆನಂದ

Rarest Archiver

ಷೆನ್ನುಂಟುಮಾಡುವ ಆಕಾರವುಳ್ಳ, ದೋಷವಿಲ್ಲದ ಸ್ವರೂಪಾನಂದವೇ ಆಕಾರ ವಾಗಿ ಉಳ್ಳ, ತಂ ಧರಣೀಧರಂ = ಆ ಹಿಮಾಲಯನನ್ನು, ದೃಷ್ಟ್ವಾ = ನೋಡಿ, ಧರಣೀಧರಂ = ಭೂಧರನಾದ, (ಭೂರಮಣನಾದ) ಮುರರಿಪುಂ = ಮುರಶತ್ರು ವಾದ ಶ್ರೀಹರಿಯನ್ನು, ಅಸ್ಮರತ್ = ಉತ್ಕಂಠೆಯಿಂದ ಧ್ಯಾನಿಸಿದರು.

ತಾ.—ಶ್ರೀಹರಿಯ ಪಾದಗಳಿಗೆ ಮಹರ್ಷಿಗಳು ನಮಿಸುತ್ತಿರುವರು. ಹಿಮಾಲಯದ (ಪಾದಗಳಲ್ಲಿ) ತಪ್ಪಲುಗಳಲ್ಲಿ ಮಹರ್ಷಿಗಳು ತಪಸ್ಸುಮಾಡುತ್ತಾ ಪರಮಾತ್ಮನಿಗೆ ನಮನಮಾಡುತ್ತಿರುವರು. ಶ್ರೀಹರಿಯು ಚಿನ್ನದ ಬಣ್ಣದ ಪೀತಾಂಬರಧಾರಿಯು. ಹಿಮಾಲಯನು ಚಿನ್ನದ ಶಿಖರಗಳಿಂದ ಅಂಬರವನ್ನು (ಆಕಾಶವನ್ನು) ಪ್ರಕಾಶಗೊಳಿಸುತ್ತಿರುವನು. ಹರಿಯು ರತ್ನಾಭರಣಧಾರಿಯು, ಹಿಮಾಲಯನು ರತ್ನಸಮೂಹಧಾರಿಯು. ಪರಮಾತ್ಮನು ಚಿನ್ನದ ಕಡಗಗಳನ್ನು ಕೈಯಲ್ಲಿ ಧರಿಸಿರುವನು. ಹಿಮಾಲಯನು ಚಿನ್ನದ ಕಟಕಗಳಿಂದ (ಮಧ್ಯದ ಪ್ರದೇಶಗಳಿಂದ) ರಾಜಿಸುತ್ತಿರುವನು. ಶ್ರೀ ಹರಿಯು ಸುವನಮಾಲೆಯಿಂದ ಉಲ್ಲಸಿತನು. ಹಿಮಾಲಯನು ಒಳ್ಳೆಯ ವನಗಳ (ಕಾಡುಗಳ) ಸಾಲುಗಳಿಂದ ಪ್ರಕಾಶಿಸುತ್ತಿರುವನು. ಇಂತಹ ಆನಂದವನ್ನುಂಟುಮಾಡುವ ಆಕಾರವುಳ್ಳ, ಹಿಮವಂತನನ್ನು ಕಂಡು ಆನಂದಕರವಾದ ಶಾಸ್ತ್ರವನ್ನು ರಚಿಸಿರುವ ಶ್ರೀಮದಾ-ನಂದತೀರ್ಥರು ಶ್ರೀಮನ್ನಾರಾಯಣನನ್ನು ಯಾವಾಗ ನೋಡಿಯೇನು ಎಂದು ಉತ್ಕಂಠೆಯಿಂದ ಧ್ಯಾನಿಸಿದರು. ಇಲ್ಲಿ ಅರ್ಥವು ಶ್ರೀಹರಿಗೆ ಬೇರೆಯಾಗಿದ್ದರೂ ಎರಡು ಶ್ಲೋಕಗಳಲ್ಲಿ ಹೇಳಿದ ಶಬ್ದಸಾಮ್ಯಗಳಿಂದ ಪರ್ವತವು ಶ್ರೀಹರಿಗೆ ಸಮ ನಾಗಿ ಕಂಡದ್ದರಿಂದ ಹಿಮವಂತನನ್ನು ಕಂಡು ಆಚಾರ್ಯರು ಶ್ರೀಹರಿಯನ್ನು ನೆನೆಸಿದರು ಎಂದು ಕವಿಗಳು ಚಮತ್ಕಾರವಾಗಿ ವರ್ಣಿಸಿದ್ದಾರೆ.

ವಿ.—ಪಾದಾನಾಂ (ಪಾದಯೋಃ) ಉಪಾಂತಾಃ, ಪಾದೋಪಾಂತೇಷು ನಮಂತಃ, ಮಹಾಂತಶ್ಚ ತೇ ಮುನಯಶ್ಚ, ಪಾದೋಪಾಂತನಮಂತಶ್ಚ ತೇ ಮಹಾಮುನಯಶ್ಚ, ಪಾದೋಪಾಂತನಮನ್ಮಹಾಮುನೀನಾಂ ಗಣಃ ಯಸ್ಮಿನ್ ಸಃ ಪಾದೋಪಾಂತನಮನ್ಮಹಾಮುನಿಗಣಃ ತಂ, ಹೇಮ್ನಾ (ಹೇಮವತ್) ಪ್ರದೀಪ್ತಂ ಅಂಬರಂ ಯಸ್ಯ ಸಃ ತಂ, ಶ್ರೀಃ ಏಷು ಅಸ್ತೀತಿ ಶ್ರೀಮಂತಿ, ಶ್ರೀಮಂತಿ ಚ ತಾನಿ ರತ್ನಾನಿ ಚ, ಶ್ರೀಮದ್ರತ್ನಾನಾಂ ಕಲಾಪಃ ಯಸ್ಮಿನ್ ಸಃ ತಂ,

Rarest Archive

ಅಗ್ರ್ಯೈಶ್ಚ ತೇ ಕಟಕಾಶ್ಚ ತೈಃ, ಧರತೀತಿ ಧರಃ ಧರಣ್ಯಾಃ ಧರಃ ಧರಣೀಧರಃ ತಂ, ಉಲ್ಲಸತೀತಿ ಉಲ್ಲಾಸೀ ಶೋಭನಾನಿ ಚ ತಾನಿ ವನಾನಿ ಚ ಸುವನಾನಿ, ಸುವನಾನಾಂ ಮಾಲಾಃ, ತಾಭಿಃ ಉಲ್ಲಾಸೀ ತಂ, ಶೋಭನಾ ಚ ಸಾ ವನಮಾಲಾ ಚ ತಯಾ ಉಲ್ಲಾಸೀ ತಂ, ಆನಂದಪ್ರದಾ ಆಕೃತಿಃ ಆನಂದಾಕೃತಿಃ ಶೋಭನಾ ಆನಂದಾಕೃತಿಃ ಯಸ್ಯ ತಂ, ಶೋಭನಃ ಆನಂದಃ ಆಕೃತಿಃ ಯಸ್ಯ ಸಃ ತಂ, ಮುರಸ್ಯ ರಿಪುಃ ಮುರರಿಪುಃ ತಂ, ಆನಂದಃ ತೀರ್ಥಂ ಯಸ್ಮಾತ್ ಸಃ, ಶೋಭನಶ್ಚಾಸೌ ಆನಂದತೀರ್ಥಶ್ಚ ಸ್ವಾನಂದತೀರ್ಥಃ. ಪಾದ = ತಪ್ಪಲಿನ ಬೆಟ್ಟಗಳು, ಕಾಲು, ಪಾದಾಃ ಪ್ರತ್ಯಂತಪರ್ವತಾಃ, ಪಾದಃ ಪದಂಘ್ರಿಶ್ಚರಣೋಽಸ್ತ್ರಿಯಾಂ-ಅಮರ. ಕಲಾಪ = ಸಮೂಹ, ಅಲಂಕಾರ, ಕಲಾಪೋ ಭೂಷಣೇ ಬರ್ಹೇ ತೂಣೀರೇ ಸಂಹತಾವಪಿ-ಅಮರ. ಕಟಕ = ಪರ್ವತದ ಮಧ್ಯಭಾಗ, ಕಡಗ, ಭೂಭೃನ್ನಿತಂಬವಲಯಚಕ್ರೇಷು ಕಟಕೋಽಸ್ತ್ರಿಯಾಂ - ಅಮರ.

ಕ್ರಿಂ.—ಅಸ್ಮರತ್. ಸರ್ಗ ೫ ಶ್ಲೋಕ ೩೫ ನೋಡಿರಿ. ಸ್ವಾನಂದತೀರ್ಥೇನ ಮುರರಿಪುಃ ಅಸ್ಮರ್ಯತ ।.

ವೃತ್ತ :—ಈ ಶ್ಲೋಕದಲ್ಲಿ ಶಾರ್ದೂಲವಿಕ್ರೀಡಿತವೃತ್ತ. ಸರ್ಗ. ೫. ಶ್ಲೋ. ೫೨ ನೋಡಿರಿ.

ಇಲ್ಲಿಗೆ ಶ್ರೀಕವಿಕುಲತಿಲಕಶ್ರೀಮನ್ನಾರಾಯಣಪಂಡಿತಾಚಾರ್ಯರಿಂದ ರಚಿತವಾದ ಶ್ರೀಮತ್ಸುಮಧ್ವವಿಜಯಮಹಾಕಾವ್ಯದ ಆರನೆಯ ಸರ್ಗದ ಕನ್ನಡಭಾಷಾನುವಾದವು ಸಮಾಪ್ತವಾಯಿತು.

Rarest Archiver

Rarest Archiver

॥ ಶ್ರೀಗುರುಭ್ಯೋನಮಃ ॥

ಏಳನೆಯ ಸರ್ಗ

ಕಥಾಸಾರಾಂಶ

ಶ್ರೀಮಧ್ವಾಚಾರ್ಯರು ಹಿಮಾಲಯವನ್ನು ದಾಟಿ ಉತ್ತರಬದರಿಕಾಶ್ರಮವನ್ನು ತಲುಪಿದರು. ಅಲ್ಲಿ ಬದರೀವೃಕ್ಷಗಳ ಮಧ್ಯದಲ್ಲಿ ವೇದವ್ಯಾಸರ ಆಶ್ರಮವಿತ್ತು. ಅನೇಕ ಮಹನೀಯಮುನಿಗಳು ಅಲ್ಲಿದ್ದರು. ಶುಕಮುನಿಗಳೇ ಮೊದಲಾದವರು ಅಲ್ಲಿ ವಿಷ್ಣುವಿನ ಹಿರಿಮೆಯನ್ನು ಉಪದೇಶಿಸುತ್ತಿದ್ದರು. ಅದು ವೈಕುಂಠದಂತೆ ವಿರಾಜಿಸುತ್ತಿತ್ತು. ಅಲ್ಲಿಯೇ ಶ್ರೀವೇದವ್ಯಾಸರು ಸನ್ನಿಹಿತರಾಗಿದ್ದರು. ಅಲ್ಲಿರುವ ಮುನಿಗಳು ಮಹಾಪುರುಷರ ೩೨ ಲಕ್ಷಣಗಳಿಂದ ಕೂಡಿದ ಶ್ರೀಮಧ್ವಾಚಾರ್ಯರನ್ನು ಕಂಡು 'ಇವರು ಯಾರು? ಬ್ರಹ್ಮನೋ? ಮುಖ್ಯಪ್ರಾಣನೋ?' ಎಂದು ಶಂಕಿಸಿದರು. ಶ್ರೀಮಧ್ವಾಚಾರ್ಯರು ಬದರಿಕಾಶ್ರಮವನ್ನು ಪ್ರವೇಶಿಸುತ್ತಾ ಅಲ್ಲಿ ಒಂದು ಮರದ ಕೆಳಗೆ ಅನೇಕ ಮಂದಿ ಋಷಿಗಳನ್ನು ಕಂಡರು. ಅವರ ಮಧ್ಯದಲ್ಲಿ ಶ್ರೀವೇದವ್ಯಾಸರು ವಿರಾಜಮಾನರಾಗಿದ್ದರು. ಆಚಾರ್ಯರು ಶ್ರೀವೇದವ್ಯಾಸರನ್ನು ಕಾಲಿನ ಉಗುರಿನಿಂದ ಶಿರಸ್ಸಿನವರೆಗೆ ವರ್ಣಿಸಿ, ಪರಮಾತ್ಮನ ಮಹಿಮೆಯನ್ನು ಅನೇಕ ರೀತಿಗಳಿಂದ ಮನಸ್ಸಿನಲ್ಲಿಯೇ ಚಿಂತಿಸಿ, ಅನಂತರ ಹತ್ತಿರಕ್ಕೆ ಬಂದು, ಕೈಮುಗಿದು ಬಾಗಿ ಸ್ತುತಿಸುತ್ತಾ ಶ್ರೀವೇದವ್ಯಾಸರ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಕೂಡಲೇ ವ್ಯಾಸರು ಎರಡು ಕೈಗಳಿಂದ ಅವರನ್ನು ಮೇಲಕ್ಕೆತ್ತಿ ಅಪ್ಪಿಕೊಂಡರು. ಅಲ್ಲಿದ್ದ ಮಹಾತ್ಮರಾದ ಋಷಿಗಳು ಶ್ರೀಮಧ್ವಾಚಾರ್ಯರಿಗೆ ಭಗವಾನ್ ವೇದವ್ಯಾಸರು ಮಾಡಿದ ಗೌರವ ಮತ್ತು ಸನ್ಮಾನಗಳನ್ನು ಕಂಡು ಬೆರಗಾದರು. ಗುರುಗಳ ಅಭಿಪ್ರಾಯವನ್ನರಿತ ಅವರು ಬೇಗನೆ

ಶ್ರೀಮಧ್ವಾಚಾರ್ಯರಿಗೆ ಉಚಿತವಾದ ಆಸನವನ್ನಿತ್ತರು. ಶ್ರೀವ್ಯಾಸರು ಶ್ರೀಮಧ್ವಾಚಾರ್ಯರನ್ನು ಆಸನದಲ್ಲಿ ಕುಳಿತುಕೊಳ್ಳುವಂತೆ ಹೇಳಿ ತಾವೂ ಕುಳಿತರು ಮತ್ತು ಅಲ್ಲಿದ್ದ ಮುನಿಗಳಿಗೆ 'ಇವರು ಮುಖ್ಯಪ್ರಾಣನ ಅವತಾರ ರಾದ ಶ್ರೀಮಧ್ವಾಚಾರ್ಯರು' ಎಂದು ಹೇಳಿ ಅವರ ಪರಿಚಯ ಮಾಡಿಸಿದರು. ಶಾಸ್ತ್ರಜ್ಞರೂ ಉಚಿತಜ್ಞರೂ ಆದ ಆ ಮುನಿಗಳು ಆಚಾರ್ಯರನ್ನು ಯಥಾ ಯೋಗ್ಯವಾಗಿ ಸತ್ಕರಿಸಿದರು. ಅನಂತರ ಅಲ್ಲಿ ನಡೆದ ಶ್ರೀವ್ಯಾಸ ಮತ್ತು ಮಧ್ವರ ಸಂಭಾಷಣೆಯನ್ನು ಕೇಳಿ ಆನಂದಪಟ್ಟರು. ಹೀಗೆ ಸಜ್ಜನರಿಗೆ ತತ್ತ್ವಜ್ಞಾನೋ-ಪದೇಶ ಮಾಡಲು ಅವತರಿಸಿದ ಆ ವ್ಯಾಸಮಧ್ವರು ದೊಡ್ಡಬದರಿಕಾಶ್ರಮದಲ್ಲಿ ಮುನಿಗಳ ನಡುವೆ ವಿರಾಜಿಸಿದರು.

ಅನುವಾದ

(ಶ್ರೀವೇದವ್ಯಾಸಸಂದರ್ಶನ)

ಅವ.—ಶ್ರೀಮಧ್ವಾಚಾರ್ಯರು ಶ್ರೀವೇದವ್ಯಾಸರ ಬದರಿಕಾಶ್ರಮವನ್ನು ಕಂಡರು—

ಅಥ ಹೈಮವತೇ ತಟಾಂತರೇ
ಬದರೀಷಂಡವಿಶೇಷಮಂಡಿತಂ।
ಪರಮಾಶ್ರಮಮಾಶ್ರಯಂ ಶ್ರಿಯಃ
ಸಕಲಜ್ಞಃ ಸ ದದರ್ಶ ವಿಶ್ರುತಂ ॥೧॥

ಅ.ಅ—ಅಥ=ಹಿಮಾಲಯವನ್ನು ದಾಟಿದ ತರುವಾಯ, ಸಕಲಜ್ಞಃ =ಸರ್ವಜ್ಞರಾದ, ಸಃ=ಆ ಮಧ್ವಾಚಾರ್ಯರು, ಹೈಮವತೇ=ಹಿಮಾ-ಲಯದ, ತಟಾಂತರೇ=ಮತ್ತೊಂದು ತಪ್ಪಲಾದ ಉತ್ತರಭಾಗದಲ್ಲಿ, ಬದರೀ-ಷಂಡ=ಎಲಚೀಮರಗಳ ಸಮೂಹದಿಂದ, ವಿಶೇಷ=ಹೆಚ್ಚಾಗಿ, ಮಂಡಿತಂ= ಅಲಂಕರಿಸಲ್ಪಟ್ಟಿರುವ, ಶ್ರಿಯಃ=ಲಕ್ಷ್ಮಿಗೆ (ಕಾಂತಿಗೆ), ಆಶ್ರಯಂ=ಆಶ್ರಯ ವಾದ, ವಿಶ್ರುತಂ=ಪ್ರಸಿದ್ಧವಾದ, ಪರಮಾಶ್ರಮಂ=ಉತ್ತಮವಾದ ಉತ್ತರ ಬದರಿಕಾಶ್ರಮವನ್ನು, ದದರ್ಶ=ನೋಡಿದರು.

Rarest Archiver

ತಾ.—ಶ್ರೀಮಧ್ವಾಚಾರ್ಯರು ಹಿಮವತ್ಪರ್ವತದ ಉತ್ತರದ ತಪ್ಪಲಲ್ಲಿ ಬದರೀ (ಬೊಗರಿ, ಎಲಚಿ) ಮರಗಳಿಂದ ಅಲಂಕೃತವಾದ, ಲಕ್ಷ್ಮೀದೇವಿಯ ಸನ್ನಿಧಾನದಿಂದ ಕೂಡಿ ಕಂಗೊಳಿಸುತ್ತಿರುವ ಲೋಕಪ್ರಸಿದ್ಧವಾದ ಮತ್ತು ಅತ್ಯಂತಶ್ರೇಷ್ಠವಾದ ಶ್ರೀವೇದವ್ಯಾಸಮಹಾಮುನಿಗಳ ಆವಾಸಸ್ಥಳವಾದ ಬದರಿಕಾಶ್ರಮವನ್ನು ಕಂಡರು.

ವಿ.—ಹಿಮವತಃ ಇದಂ ಹೈಮವತಂ, ಅನ್ಯತ್ ತಟಂ ತಟಾಂತರಂ ತಸ್ಮಿನ್, ಬದರೀಣಾಂ ಷಂಡಾನಿ, ಷಂಡಂ ಅಸ್ತ್ರಿಯಾಂ–ಅಮರ. ಬದರೀಷಂಡೈಃ ವಿಶೇಷೇಣ ಮಂಡಿತಃ ತಂ, ಪರಮಶ್ಚಾಸೌ ಆಶ್ರಮಶ್ಚ ತಂ, ಸಕಲಂ ಜಾನಾತೀತಿ ಸಕಲಜ್ಞಃ.

ಕ್ರಿ.—ದದರ್ಶ ದದೃಶತುಃ ದದೃಶುಃ, ದದರ್ಶಿಥ ದದ್ರಷ್ಠ ದದೃಶಥುಃ ದದೃಶ, ದದರ್ಶ ದದೃಶಿವ ದದೃಶಿಮ, ದೃಶಿರ್ ಪ್ರೇಕ್ಷಣೇ (ದೃಶ್-ಪಶ್ಯ್) ಸಕ.। ಅನಿ.। ಪರ.। ಲಿಟ್.

ವೃತ್ತ—ಸುಂದರೀ–ಅಯುಜೋರ್ಯದಿ ಸೌ ಲಗೌ ಲಗೌ ಸಭರಾಃ ಸಂತಿ ಲಗೌ ಚ ಸುಂದರೀ ಎಂದು ಅದರ ಲಕ್ಷಣ.

ಅವ.—ಬದರಿಕಾಶ್ರಮದ ವಿಶೇಷಗುಣಗಳೇನು ?

ಹಿಮವರ್ಷರವಿಪ್ರಭಾಸಹಾಃ
ಪೃಥುಸತ್ರಪ್ರಥಿತಾ ದ್ವಿಜಾಶ್ರಯಾಃ ।
ಅಪಿ ವಿಷ್ಣುಪದಸ್ಪೃಶೋಽಲಸನ್
ಉಭಯೇ ಯತ್ರ ವಿಚಿತ್ರಶಾಖಿನಃ ॥೨॥

ಅ.ಅ.—ಯತ್ರ=ಯಾವ ಬದರಿಕಾಶ್ರಮದಲ್ಲಿ, ಹಿಮ=ಚಳಿಯು, ವರ್ಷ=ಮಳೆಯು, ರವಿಪ್ರಭಾ=ಬಿಸಿಲು ಇವುಗಳನ್ನು, ಸಹಾಃ=ಸಹಿಸುವ, ಪೃಥುಸತ್ರ = ದೊಡ್ಡ ಯಜ್ಞಗಳಲ್ಲಿ, ದೊಡ್ಡಕಾಡುಗಳಲ್ಲಿ, ಪ್ರಥಿತಾಃ= ಪ್ರಸಿದ್ಧರಾ(ವಾ)ದ, ದ್ವಿಜಾಶ್ರಯಾಃ = ಬ್ರಾಹ್ಮಣರಿಗೆ ಆಶ್ರಯರಾ(ವಾ)ದ, ಪಕ್ಷಿಗಳಿಗೆ ಆಶ್ರಯವಾದ, ವಿಷ್ಣುಪದ = ಶ್ರೀಹರಿಯ ಪಾದವನ್ನು, ಆಕಾಶ

Rarest Archiver

ವನ್ನು, ಸ್ಪೃಶಃ = ಮುಟ್ಟುವ, ಉಭಯೇ ಅಪಿ = ಎರಡೂ ವಿಧವಾದ, ವಿಚಿತ್ರಶಾಖಿನಃ = ಬೇರೆ ಬೇರೆ ವೇದಶಾಖಾಧ್ಯಯನ ಮಾಡಿರುವ ಮುನಿಗಳು, ಆಶ್ಚರ್ಯಕರವಾದ ಕೊಂಬೆಗಳುಳ್ಳ ಮರಗಳು, ಆಲಸನ್ = ಪ್ರಕಾಶಿಸಿದುವು.

ತಾ.—ಬದರಿಕಾಶ್ರಮದಲ್ಲಿ ಬಹಳ ಎತ್ತರವಾದ ಮರಗಳಿದ್ದುವು. ಅವುಗಳು ಛಳಿ, ಮಳೆ, ಬಿಸಿಲುಗಳನ್ನು ಸಹಿಸುತ್ತಿದ್ದುವು. ಆ ಮರಗಳೆಲ್ಲವೂ ದೊಡ್ಡ ಅರಣ್ಯಗಳಲ್ಲಿ ಪ್ರಸಿದ್ಧವಾಗಿದ್ದುವು. ಅನೇಕ ದ್ವಿಜ(ಪಕ್ಷಿ)ಗಳಿಗೆ ಆಶ್ರಯವಾಗಿದ್ದುವು. ಆ ಮರಗಳು ಆಕಾಶವನ್ನೇ ಮುಟ್ಟುತ್ತವೆಯೋ ಎಂಬಂತೆ ಬಹಳ ಎತ್ತರವಾಗಿದ್ದು ಆಶ್ಚರ್ಯವನ್ನುಂಟುಮಾಡುತ್ತಿದ್ದುವು. ಇಂತಹ ಶಾಖಿ(ಮರ)ಗಳಿಂದ ಆ ಬದರಿಕಾಶ್ರಮವು ಶೋಭಿಸುತ್ತಿತ್ತು. ಹಾಗೆಯೇ ಅಲ್ಲಿ ಛಳಿ, ಮಳೆ, ಬಿಸಿಲುಗಳನ್ನು ಸಹಿಸಿ ತಪಸ್ಸುಮಾಡುವ ಮುನಿಗಳಿದ್ದರು. ಅವರು ಮಹಾಯಾಗಗಳನ್ನು ಮಾಡಿ ಪ್ರಸಿದ್ಧಿಹೊಂದಿದ್ದರು. ಆ ಮುನಿಗಳು ಅನೇಕ ದ್ವಿಜರಿಗೆ (ಬ್ರಾಹ್ಮಣರಿಗೆ) ಆಶ್ರಯರಾಗಿದ್ದರು. ವಿಷ್ಣುವಿನ ಪಾದವನ್ನೇ ಸ್ಮರಿಸಿಕೊಂಡಿರುವ ಆ ಮುನಿಗಳು ಐತರೇಯ ಕೌಷೀತಕ ಬಾಷ್ಕಲ ಶಾಕಲ್ಯ ಪೈಂಗಿ ಕಾಠಕ ಮುಂತಾದ ಋಗ್, ಯಜುಸ್, ಸಾಮಶಾಖೆಗಳನ್ನು ಅಭ್ಯಾಸಮಾಡಿದ್ದರು. ಈ ರೀತಿ ಎರಡು ಪ್ರಕಾರದ ಶಾಖಿಗಳು ಅಂದರೆ ವೃಕ್ಷಗಳೂ ಮುನಿಗಳೂ ಕೂಡ ಎಲ್ಲಿ ಶೋಭಿಸುತ್ತಿದ್ದರೋ ಅಂತಹ ಬದರಿಕಾಶ್ರಮವನ್ನು ಆಚಾರ್ಯರು ಕಂಡರು.

ವಿ.—ಹಿಮಂ ಚ ವರ್ಷಂ ಚ ರವೇಃ ಪ್ರಭಾ ಚ ಹಿಮವರ್ಷರವಿಪ್ರಭಾಃ, ತಾಃ ಸಹಂತೇ ಇತಿ, ಹಿಮವರ್ಷರವಿಪ್ರಭಾಸಹಾಃ, ಪೃಥೂನಿ ಚ ತಾನಿ ಸತ್ರಾಣಿ ಚ, ಪೃಥುಸತ್ರೇಷು ಪ್ರಥಿತಾಃ ಪೃಥುಸತ್ರಪ್ರಥಿತಾಃ, ಸತ್ರ = ಯಜ್ಞ, ಕಾಡು, ಸತ್ರಮಾಚ್ಛಾದನೇ ಯಜ್ಞೇ ಸದಾದಾನೇ ವನೇಽಪಿ ಚ–ಅಮರ. ದ್ವಿಜಾನಾಂ ಆಶ್ರಯಾಃ, ದ್ವಿಜ = ಪಕ್ಷಿ, ಬ್ರಾಹ್ಮಣ, ದಂತವಿಪ್ರಾಂಡಜಾ ದ್ವಿಜಾಃ—ಅಮರ. ವಿಷ್ಣೋಃ ಪದಂ, ವಿಷ್ಣುಪದಂ ಸ್ಪೃಶಂತೀತಿ ವಿಷ್ಣುಪದಸ್ಪೃಶಃ, ವಿಷ್ಣುಪದ = ಆಕಾಶ, ಶ್ರೀಹರಿಯ ಪಾದ, ವಿಯದ್ ವಿಷ್ಣುಪದಂ–ಅಮರ. ಶಾಖಾಃ ಏಷಾಂ ಸಂತೀತಿ ಶಾಖಿನಃ, ವಿಚಿತ್ರಾಶ್ಚ ತೇ ಶಾಖಿನಶ್ಚ.

ಕ್ರಿ.—ಅಲಸತ್ ಅಲಸತಾಂ ಅಲಸನ್, ಅಲಸಃ ಅಲಸತಂ ಅಲಸತ, ಅಲಸಂ ಅಲಸಾವ ಅಲಸಾಮ ಲಸ ಕಾಂತೌ to shine ಅಕ.। ಪರ.। ಲಙ್.।

Rarest Archiver

ಶ್ರವಣಾಮೃತಗೀರ್ಗಣೈರ್ದ್ವಿಜೈಃ
ಶುಕಮುಖ್ಯೈಶ್ಶುಭಪಕ್ಷಿಭಿರ್ಯುತಂ।
ಕಮಲೇಷ್ಟತಮಸ್ಥಿರಾಂತರೈ-
ರಪಿ ಹಂಸೈಃ ಪರಮೈರಮೇಚಕೈಃ ॥೩॥

ಅ.ಅ—(ಸಃ=ಶ್ರೀಮಧ್ವಾಚಾರ್ಯರು) ಶ್ರವಣ=ಕಿವಿಗಳಿಗೆ, ಅಮೃತ =ಅಮೃತದಂತಿರುವ, ಗೀರ್ಗಣೈಃ = ಮಾತುಗಳ ಸಮೂಹವುಳ್ಳ, ಶುಕ-ಮುಖ್ಯೈಃ=ಗಿಣಿಯೇ ಮೊದಲಾಗಿ ಉಳ್ಳ, ಶುಕಾಚಾರ್ಯರೇ ಮೊದಲಾಗಿ ಉಳ್ಳ, ಶುಭಪಕ್ಷಿಭಿಃ = ಒಳ್ಳೆಯ ರೆಕ್ಕೆಗಳುಳ್ಳ, ಉತ್ತಮ ಸಿದ್ಧಾಂತವುಳ್ಳ, ದ್ವಿಜೈಃ=ಪಕ್ಷಿಗಳಿಂದ, ಬ್ರಾಹ್ಮಣರಿಂದ, ಕಮಲೇಷ್ಟತಮ = ಕಮಲವೆಂಬ ಇಷ್ಟವಾದ ವಸ್ತುವಿನಲ್ಲಿ, ಲಕ್ಷ್ಮೀದೇವಿಗೆ ಅತ್ಯಂತ ಪ್ರೀತಿಪಾತ್ರನಾದ ನಾರಾ-ಯಣನಲ್ಲಿ, ಸ್ಥಿರ=ದೃಢವಾದ, ಅಂತರೈಃ=ಮನಸ್ಸುಳ್ಳ, ಅಮೇಚಕೈಃ= ಶುಭ್ರವಾದ, ನಿರ್ಮಲರಾದ, ಪರಮೈಃ ಹಂಸೈಃ ಅಪಿ=ಶ್ರೇಷ್ಠವಾದ ಹಂಸ ಪಕ್ಷಿಗಳಿಂದಲೂ, ಪರಮಹಂಸಸಂನ್ಯಾಸಿಗಳಿಂದಲೂ, ಯುತಂ = ಸಹಿತವಾದ (ಪರಮಾಶ್ರಮಂ ದದರ್ಶ=ಶ್ರೇಷ್ಠವಾದ ಬದರಿಕಾಶ್ರಮವನ್ನು ನೋಡಿದರು).

ತಾ.—ಆ ಬದರಿಕಾಶ್ರಮದಲ್ಲಿ ಕಿವಿಗೆ ಇಂಪಾದ ಮಾತನ್ನಾಡುವ, ಮನೋಹರವಾದ ರೆಕ್ಕೆಗಳುಳ್ಳ, ಗಿಣಿ ಮುಂತಾದ ಪಕ್ಷಿಗಳಿದ್ದುವು. ಅಲ್ಲಿ ತಾವರೆ ಹೂವುಗಳಲ್ಲಿ ತುಂಬಾ ಪ್ರೀತಿಯನ್ನಿಟ್ಟಿರುವ, ಬಿಳಿಯ ಬಣ್ಣದ ಉತ್ತಮವಾದ ಹಂಸಗಳೂ ಇದ್ದವು. ಇದಲ್ಲದೆ ಆ ಆಶ್ರಮದಲ್ಲಿ ಕಿವಿಗೆ ಇಂಪಾಗಿರುವ ಭಗವಂತನ ಗುಣಗಳನ್ನು ಗಾನಮಾಡುವ ಶುಕಾಚಾರ್ಯರೇ ಮೊದಲಾದ ವೈಷ್ಣವಸಿದ್ಧಾಂತಾವಲಂಬಿಗಳಾದ ಬ್ರಾಹ್ಮಣರಿದ್ದರು. ಶ್ರೀಹರಿಯನ್ನು ತಮ್ಮ ಅಂತಃಕರಣದಲ್ಲಿ ಯಾವಾಗಲೂ ಧ್ಯಾನಿಸುತ್ತಿದ್ದ ಪರಮಹಂಸಸಂನ್ಯಾಸಿಗಳೂ ಅಲ್ಲಿದ್ದರು. ಇಂತಹ ಉತ್ತಮವಾದ ಬದರಿಕಾಶ್ರಮವನ್ನು ಶ್ರೀಮಧ್ವಾ-ಚಾರ್ಯರು ನೋಡಿದರು.

ವಿ.—ಶ್ರವಣಯೋಃ ಅಮೃತಾನಿ, ಶ್ರವಣಾಮೃತಾನಿ ಗಿರಾಂ ಗಣಾಃ ಯೇಷಾಂ ತೇ ಶ್ರವಣಾಮೃತಗೀರ್ಗಣಾಃ ತೈಃ, ಶುಕಃ ಮುಖ್ಯಃ ಯೇಷಾಂ ತೇ ತೈಃ, ಶುಭಶ್ಚಾಸೌ ಪಕ್ಷಶ್ಚ, ಶುಭಪಕ್ಷಃ ಏಷಾಂ ಅಸ್ತೀತಿ ಶುಭಪಕ್ಷಿಣಃ,

Rarest Archiver

ಶುಭಾಃ ಪಕ್ಷಾಃ ಏಷಾಂ ಸಂತೀತಿ ಶುಭಪಕ್ಷಿಣಃ ತೈಃ, ಅತಿಶಯೇನ ಇಷ್ಟಂ ಇಷ್ಟತಮಂ, ಕಮಲಂ ಚ ತತ್ ಇಷ್ಟತಮಂ ಚ ಕಮಲೇಷ್ಟತಮಂ, ಕಮಲಾಯಾಃ ಇಷ್ಟತಮಃ ಕಮಲೇಷ್ಟತಮಃ, ಕಮಲೇಷ್ಟತಮೇ ಸ್ಥಿರಂ ಅಂತರಂ ಯೇಷಾಂ ತೇ ಕಮಲೇಷ್ಟತಮಸ್ಥಿರಾಂತರಾಃ ತೈಃ, ನ ಮೇಚಕಾಃ ಅಮೇಚಕಾಃ ತೈಃ ;

ಅವ.—ಮತ್ತೂ ಆ ಬದರಿಕಾಶ್ರಮವನ್ನು ವರ್ಣಿಸುತ್ತಾರೆ—

ಸುಮನೋನಿಕರೇಣ ಪೂರಿತಂ
ಸ್ವಮನೋಽಭೀಷ್ಟದಮಲ್ಪದುರ್ಗಮಂ ।
ಅಪರಸ್ಪರಮತ್ಸರಪ್ರಜಂ
ನನು ವೈಕುಂಠಮಿವಾಚ್ಯುತಾಲಯಂ ॥೪॥

ಅ.ಅ.—(ಸಃ = ಶ್ರೀಮಧ್ವಾಚಾರ್ಯರು) ಸುಮನೋನಿಕರೇಣ = ಹೂವುಗಳ ಸಮೂಹದಿಂದ, ಮುನಿಗಳ ಸಮೂಹದಿಂದ, ದೇವತೆಗಳ ಸಮೂಹದಿಂದ, ಪೂರಿತಂ=ತುಂಬಿರುವ, ಸ್ವಮನೋಽಭೀಷ್ಟದಂ, ಸ್ವಮನಃ=ಭಗವಂತನ ಭಕ್ತರಾದವರ ಮನಸ್ಸಿನ, ಅಭೀಷ್ಟದಂ= ಇಷ್ಟಾರ್ಥವನ್ನು ಸಲ್ಲಿಸುವ, ಅಲ್ಪದುರ್ಗಮಂ = ಜ್ಞಾನಭಕ್ತ್ಯಾದಿಗಳು ಇಲ್ಲದವರಿಂದ ಹೊಂದಲು ಅಸಾಧ್ಯವಾದ, ಅಪರಸ್ಪರಮತ್ಸರಪ್ರಜಂ = ಒಬ್ಬರು ಇನ್ನೊಬ್ಬರಲ್ಲಿ ದ್ವೇಷವಿಲ್ಲದ ಜನರುಳ್ಳ, ವೈಕುಂಠಂ ಇವ ನನು = ವೈಕುಂಠದಂತೆಯೇ ಇರುವ, ಅಚ್ಯುತಾಲಯಂ = ಶ್ರೀಮನ್ನಾರಾಯಣನ ವಾಸಸ್ಥಾನವಾದ, (ಪರಮಾಶ್ರಮಂ ದದರ್ಶ = ಶ್ರೇಷ್ಠವಾದ ಬದರಿಕಾಶ್ರಮವನ್ನು ನೋಡಿದರು.)

ತಾ.—ಶ್ರೀಮನ್ನಾರಾಯಣನ ವಾಸಸ್ಥಾನವಾದ ವೈಕುಂಠವು ಸುಮನಸರಿಂದ (ದೇವತೆಗಳಿಂದ) ತುಂಬಿರುತ್ತದೆ. ಭಕ್ತ ಮುಕ್ತರ ಮನಸ್ಸಿನ ಅಭಿಲಾಷೆಗಳನ್ನೆಲ್ಲಾ ನೆರವೇರಿಸುತ್ತದೆ. ಜ್ಞಾನಭಕ್ತ್ಯಾದಿಗಳಿಲ್ಲದ ಅಲ್ಪರು ಅಲ್ಲಿ ಪ್ರವೇಶ ಮಾಡಲು ಸಾಧ್ಯವಿಲ್ಲ. ಅಲ್ಲಿರುವವರು ಒಬ್ಬರು ಇನ್ನೊಬ್ಬರನ್ನು ದ್ವೇಷಿಸುವುದಿಲ್ಲ. ಅದರಂತೆ ಈ ಬದರಿಕಾಶ್ರಮವೂ ಸುಮನಸಗಳಿಂದ (ಹೂವುಗಳಿಂದ) ಮತ್ತು ಸುಮನಸರಿಂದ (ಮುನಿಗಳಿಂದ) ತುಂಬಿರುತ್ತದೆ. ಭಕ್ತಿಜ್ಞಾನಾದಿಗಳಿಲ್ಲ

Rarest Archive

ದವರು ಅಲ್ಲಿಲ್ಲ. ಅಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಅಸೂಯೆ ಪಡುವುದಿಲ್ಲ. ಅದೂ ನಾರಾಯಣಾವತಾರರಾದ ವೇದವ್ಯಾಸರ ಆವಾಸಸ್ಥಾನವಾಗಿದೆ. ಇಂತಹ ವೈಕುಂಠದಂತಹ ಮಹಾಬದರಿಯನ್ನು ಆಚಾರ್ಯರು ಕಂಡರು.

ವಿ.—ಸುಮನಸಾಂ ನಿಕರಃ ತೇನ, ಸ್ವೇಷಾಂ ಮನಃ, ಸ್ವಮನಸಃ ಅಭೀಷ್ಟಂ, ಸ್ವಮನೋಽಭೀಷ್ಟಂ ದದಾತೀತಿ ಸ್ವಮನೋಽಭೀಷ್ಟದಃ ತಂ, ದುಃಖೇನ ಗಂತುಂ ಶಕ್ಯಃ ದುರ್ಗಮಃ, ಅಲ್ಪೈಃ ದುರ್ಗಮಃ ತಂ, ನ ವಿದ್ಯತೇ ಪರಸ್ಪರಂ ಮತ್ಸರಃ ಯಾಸಾಂ ತಾಃ, ಅಪರಸ್ಪರಮತ್ಸರಾಃ ಪ್ರಜಾಃ ಯಸ್ಮಿನ್ ಸಃ ತಂ, ಅಚ್ಯುತಸ್ಯ ಆಲಯಃ ತಂ.

ಅವ.—ಇಂತಹ ಆಶ್ರಮಕ್ಕೆ ಬರತಕ್ಕ ಆಚಾರ್ಯರನ್ನು ಕಂಡು ಅಲ್ಲಿರುವವರು ಏನು ಮಾಡಿದರು ?

ತಮಿಮಂ ಪ್ರವಿಶಂತಮಾಶ್ರಮಂ
ದ್ವ್ಯಧಿಕತ್ರಿಂಶದುದಾರಲಕ್ಷಣಂ।
ಗುಣಸಾರವಿದಃ ಕುತೂಹಲಾ-
ದವಲೋಕ್ಯರ್ಷಯ ಇತ್ಯಚಿಂತಯನ್ ॥೫॥

ಅ. ಅ—ಗುಣಸಾರವಿದಃ=ಶ್ರೇಷ್ಠವಾದ ಗುಣಗಳನ್ನು ತಿಳಿದ, ಋಷಯಃ =ಋಷಿಗಳು, ಆಶ್ರಮಂ=ಬದರಿಕಾಶ್ರಮವನ್ನು, ಪ್ರವಿಶಂತಂ=ಪ್ರವೇಶಿಸುತ್ತಿರುವ, ದ್ವ್ಯಧಿಕತ್ರಿಂಶತ್ =ಮೂವತ್ತೆರಡು, ಉದಾರಲಕ್ಷಣಂ=ಉತ್ತಮ ಲಕ್ಷಣಗಳುಳ್ಳ, ತಂ ಇಮಂ = ಪ್ರಸಿದ್ಧರಾದ ಈ ಮಧ್ವಾಚಾರ್ಯರನ್ನು, ಅವಲೋಕ್ಯ=ನೋಡಿ, ಕುತೂಹಲಾತ್ =ಕೌತುಕದಿಂದ, ಇತಿ= ಈ ರೀತಿ, ಅಚಿಂತಯನ್ =ಆಲೋಚಿಸಿದರು.

ತಾ.—ಆ ಬದರಿಕಾಶ್ರಮದಲ್ಲಿದ್ದ ಮುನಿಗಳು ೩೨ ಮಹಾಪುರುಷರ ಗುಣಗಳನ್ನು ತಿಳಿದಿದ್ದರು. ಅವರು ತಮ್ಮ ಆಶ್ರಮವನ್ನು ಪ್ರವೇಶಿಸುತ್ತಿದ್ದ ಶ್ರೀಮಧ್ವಾಚಾರ್ಯರಲ್ಲಿ ಉತ್ತಮವಾದ ಮಹಾಪುರುಷರ ೩೨ ಗುಣಗಳನ್ನೂ ಕಂಡು ಕೌತುಕದಿಂದ ಹೀಗೆ ಆಲೋಚಿಸಿದರು.

Rarest Archiver

ವಿ.—ದ್ವಾಭ್ಯಾಂ ಅಧಿಕಾ, ದ್ವ್ಯಧಿಕಾ ಚ ಸಾ ತ್ರಿಂಶಚ್ಚ, ದ್ವ್ಯಧಿಕ-ತ್ರಿಶಂತ್ ಉದಾರಾಣಿ ಲಕ್ಷಣಾನಿ ಯಸ್ಯ ಸಃ ದ್ವ್ಯಧಿಕತ್ರಿಂಶದುದಾರಲಕ್ಷಣಃ ತಂ, ಗುಣಾನಾಂ ಸಾರಂ ವಿದಂತಿ ಇತಿ, ಗುಣಾನ್ ಸಾರಾನ್ ವಿದಂತಿ ಇತಿ ವಾ ಗುಣಸಾರವಿದಃ,

ಕ್ರಿ.—ಅಚಿಂತಯತ್ ಅಚಿಂತಯತಾಂ ಅಚಿಂತಯನ್, ಅಚಿಂತಯಃ ಅಚಿಂತಯತಂ ಅಚಿಂತಯತ, ಅಚಿಂತಯಂ ಅಚಿಂತಯಾವ ಅಚಿಂತಯಾಮ, ಚಿತಿ (ಚಿಂತ್) ಸ್ಮೃತ್ಯಾಂ to think, to consider ಪರ. ಚುರಾದಿ-ಣಿಜಂತ, ಸಕ.। ಸೇಟ್.। ಲಙ್.।

ಅನ.—ಈ ಅಪೂರ್ವಪುರುಷನು ಯಾರು ಎಂದು ಅಲ್ಲಿಯ ಮುನಿಗಳು ಆಲೋಚಿಸಿದರು—

ಕನಕಾತುಲತಾಲಸನ್ನಿಭಃ
ಕಮಲಾಕ್ಷೋ ವಿಮಲೇಂದುಸನ್ಮುಖಃ ।
ಗಜರಾಜಗತಿರ್ಮಹಾಭುಜಃ
ಪ್ರತಿಯಾನ್ ಕೋಽಯಮಪೂರ್ವಪೂರುಷಃ ॥೬॥

ಅ.ಅ—ಕನಕ=ಚಿನ್ನದ, ಅತುಲ = ಎಣೆಯಿಲ್ಲದ, ತಾಲ=ತಾಳೆ ಮರಕ್ಕೆ, ಸನ್ನಿಭಃ=ಸಮಾನನಾದ, ಕಮಲಾಕ್ಷಃ=ತಾವರೆಯಂತಹ ಕಣ್ಣುಗಳುಳ್ಳ, ವಿಮಲೇಂದು = ಕಳಂಕವಿಲ್ಲದ ಚಂದ್ರನಂತಿರುವ, ಸನ್ಮುಖಃ= ಒಳ್ಳೆಯ ಮುಖವುಳ್ಳ, ಗಜರಾಜಗತಿಃ=ಆನೆಯಂತಹ ನಡಿಗೆಯುಳ್ಳ, ಮಹಾ-ಭುಜಃ=ಉದ್ದವಾದ ತೋಳುಗಳುಳ್ಳ, ಪ್ರತಿಯಾನ್ = (ಶ್ರೀವೇದವ್ಯಾಸರ ಕಡೆಗೆ) ಬರುತ್ತಲಿರುವ, ಅಯಂ=ಈ, ಅಪೂರ್ವಪೂರುಷಃ=ಹಿಂದೆಂದೂ ಕಾಣದ ಪುರುಷನು, ಕಃ=ಯಾವನು ?

ತಾ.—ಶ್ರೀವೇದವ್ಯಾಸರ ಕಡೆಗೆ ಒಬ್ಬ ಅಪೂರ್ವಪುರುಷನು ಬರುತ್ತಿದ್ದಾನೆ. ಇವನು ಚಿನ್ನದ ತಾಳೆಯ ಮರದಂತೆ ಎತ್ತರವಾಗಿ ಸುಂದರವಾಗಿ ಕಾಣಿಸುತ್ತಿದ್ದಾನೆ. ಇವನ ಕಣ್ಣುಗಳು ಅರಳಿದ ಕಮಲಗಳಂತಿವೆ. ಮುಖವು ಕಳಂಕವಿಲ್ಲದ ಚಂದ್ರನಂತಿದೆ. ತೋಳುಗಳು ಉದ್ದವಾಗಿವೆ. ಆಜಾನುಬಾಹು

Rarest Archiver

ವಾದ ಇವನ ನಡಿಗೆಯು ಗಜರಾಜನ ನಡಿಗೆಯಂತಿದೆ. ಲೋಕವಿಲಕ್ಷಣನಾದ ಈ ಮಹಾಪುರುಷನು ಯಾರಿರಬಹುದು ? ಎಂದು ಅಲ್ಲಿದ್ದ ಮುನಿಗಳು ಆಲೋಚಿಸಿದರು.

ವಿ.—ಕನಕಮಯಶ್ಚಾಸೌ ಅತುಲಶ್ಚಾಸೌ ತಾಲಶ್ಚ, ಕನಕಾತುಲತಾಲೇನ ಸದೃಶಃ ಕನಕಾತುಲತಾಲಸನ್ನಿಭಃ, ಕಮಲೇ ಇವ ಅಕ್ಷಿಣೀ ಯಸ್ಯ ಸಃ, ವಿಮಲಶ್ಚಾಸೌ ಇಂದುಶ್ಚ, ವಿಮಲೇಂದುವತ್ ಸತ್ ಮುಖಂ ಯಸ್ಯ ಸಃ, ಗಜಾನಾಂ ರಾಜಾ ಗಜರಾಜಃ, ಗಜರಾಜಸ್ಯ ಗತಿರಿವ ಗತಿಃ ಯಸ್ಯ ಸಃ, ಮಹಾಂತೌ ಭುಜೌ ಯಸ್ಯ ಸಃ ಮಹಾಭುಜಃ, ನ ಪೂರ್ವಃ ಅಪೂರ್ವಃ, ಅಪೂರ್ವಶ್ಚಾಸೌ ಪೂರುಷಶ್ಚ ಅಪೂರ್ವಪೂರುಷಃ ;

ಅವ.—ಈ ಮಹಾಪುರುಷನಿಗೆ ಉಪಮಾನವನ್ನು ಕೊಡಲು ಸಾಧ್ಯವಿಲ್ಲ-

ಅತಿಶಾಂತವಪುರ್ನಿಶಾಕರಃ
ಸ್ವಯಮೇಕಾಂತಖರೋ ದಿವಾಕರಃ ।
ಇತಿ ನಾಸ್ಯ ಗುಣಾರ್ಣವಾಕೃತೇ-
ರುಪಮಾನಂ ಭುವನೇಷು ಲಭ್ಯತೇ ॥೭॥

ಅ.ಅ—ನಿಶಾಕರಃ = ಚಂದ್ರನು, ಅತಿಶಾಂತವಪುಃ = ಅತ್ಯಂತಸೌಮ್ಯವಾದ ಸ್ವರೂಪವುಳ್ಳವನು, ದಿವಾಕರಃ = ಸೂರ್ಯನು, ಸ್ವಯಂ = ಸ್ವತಃ, ಏಕಾಂತಖರಃ = ನಿಯತವಾಗಿ ಯಾವಾಗಲೂ ತೀಕ್ಷ್ಣನು, ಇತಿ = ಆದುದರಿಂದ, ಗುಣಾರ್ಣವ = ಗುಣಗಳಿಂದ ಸಮುದ್ರದಂತಿರುವ, ಆಕೃತೇಃ = ಆಕಾರವುಳ್ಳ, (ಸಕಲಸಲ್ಲಕ್ಷಣಭರಿತನಾದ), ಅಸ್ಯ = ಈ ಪುರುಷನಿಗೆ, ಉಪಮಾನಂ = ದೃಷ್ಟಾಂತವು, ಭುವನೇಷು = ಲೋಕಗಳಲ್ಲಿ, ನ ಲಭ್ಯತೇ = ಹೊಂದಲ್ಪಡುವುದಿಲ್ಲ.

ತಾ.—ಚಂದ್ರನು ಶಾಂತ ಸ್ವರೂಪನು. ಸೂರ್ಯನು ಉಗ್ರಸ್ವರೂಪನು. ಈ ಬರುತ್ತಿರುವ ಮಹಾಪುರುಷನು ಎಲ್ಲಾ ಉತ್ತಮಲಕ್ಷಣಗಳಿಗೂ ಆಶ್ರಯನಾಗಿದ್ದಾನೆ. ಶಾಂತಿ ಮತ್ತು ಪ್ರಕಾಶಗಳೂ ಇವನಲ್ಲಿ ತುಂಬಿವೆ. ಆದುದರಿಂದ ಈ ಮಹಾಪುರುಷನಿಗೆ ಚಂದ್ರಸೂರ್ಯರೂ ಉಪಮಾನವಾಗಲು ಅರ್ಹರಲ್ಲ. ಲೋಕದಲ್ಲಿ ಈ ಮಹಾಪುರುಷನಿಗೆ ಸರಿದೂಗುವ ವಸ್ತುವೇ ದುರ್ಲಭವಾಗಿದೆ.

Rarest Archiver

ವಿ.— ಅತ್ಯಂತಂ ಶಾಂತಂ ಅತಿಶಾಂತಂ, ಅತಿಶಾಂತಂ ವಪುಃ ಯಸ್ಯ ಸಃ ಅತಿಶಾಂತವಪುಃ, ಕರೋತೀತಿ ಕರಃ, ನಿಶಾಯಾಃ ಕರಃ ನಿಶಾಕರಃ, ಏಕಾಂತೇನ ಖರಃ ಏಕಾಂತಖರಃ, ಗುಣೈಃ ಅರ್ಣವಃ ಇವ, ಗುಣಾರ್ಣವಃ ಆಕೃತಿಃ ಯಸ್ಯಃ ಸಃ ಗುಣಾರ್ಣವಾಕೃತಿಃ,

ಕ್ರಿ.—ಲಭ್ಯತೇ ಲಭ್ಯೇತೇ ಲಭ್ಯಂತೇ, ಲಭ್ಯಸೇ ಲಭ್ಯೇಥೇ ಲಭ್ಯಧ್ವೇ, ಲಭ್ಯೇ ಲಭ್ಯಾವಹೇ ಲಭ್ಯಾಮಹೇ, ಡುಲಭಷ್ ಪ್ರಾಪ್ತೌ (ಲಭ್) ಸಕ.। ಅನಿ.। ಆತ್ಮ.। to get, to obtain. ಕರ್ಮಣಿ ಲಟ್.

ಅವ.—ಆಚಾರ್ಯರ ಸಂನ್ಯಾಸಲಕ್ಷಣವನ್ನು ಕಂಡು ಮುನಿಗಳು ಬಹಳ ಆಶ್ಚರ್ಯಪಟ್ಟರು—

ಪರಮಾಶ್ರಮಿಣಾಂ ಗತಶ್ರಮೋ
ನನು ಚಿಹ್ನಾನಿ ಬಿಭರ್ತಿ ಧೀರಧೀಃ।
ಅಪಿ ಮಾನುಷಭಾವವಿಗ್ರಹೋ
ವಿಪುಲಂ ವಿಸ್ಮಯಮಾತನೋತಿ ನಃ ॥೮॥

ಅ.ಅ—ಗತಶ್ರಮಃ=ಆಯಾಸವಿಲ್ಲದಿರುವ, ಧೀರಧೀಃ = ಭಯರಹಿತವಾದ ಮನಸ್ಸುಳ್ಳ, (ಅಯಂ=ಈ ಮಹಾಪುರುಷನು) ಪರಮಾಶ್ರಮಿಣಾಂ= ಯತಿಗಳ, ಚಿಹ್ನಾನಿ=ಗುರುತುಗಳನ್ನು, ಬಿಭರ್ತಿ ನನು=ಧರಿಸಿದ್ದಾನಷ್ಟೆ! ಮಾನುಷಭಾವ = ಮನುಷ್ಯಸ್ವಭಾವವುಳ್ಳ, ವಿಗ್ರಹಃ ಅಪಿ = ದೇಹವುಳ್ಳವನಾಗಿದ್ದರೂ, ನಃ=ನಮಗೆ, ವಿಪುಲಂ=ಹೆಚ್ಚಾದ, ವಿಸ್ಮಯಂ=ಆಶ್ಚರ್ಯವನ್ನು, ಆತನೋತಿ=ಉಂಟುಮಾಡುತ್ತಿದ್ದಾನೆ.

ತಾ.—ಈ ಮಹನೀಯನು ಬಹಳ ದೂರ ನಡೆದು ಬಂದಿದ್ದರೂ ಆಯಾಸವಿಲ್ಲದವನಂತೆ ತೋರುತ್ತಾನೆ. ಮತ್ತು ಸಹಾಯಕರಿಲ್ಲದೆ ಒಬ್ಬನೇ ಹೊರಟಿದ್ದರೂ ಯಾವ ಗಾಬರಿಗೂ ಒಳಗಾಗದೆ ಇರುವುದರಿಂದ ಇವನಲ್ಲಿ ಭಯವು ಕಾಣಿಸುವುದಿಲ್ಲ. ಸಂನ್ಯಾಸಿಗಳ ಚಿನ್ಹೆಯಾದ ದಂಡಕಮಂಡಲು ಕಾಷಾಯವಸ್ತ್ರಾದಿಗಳನ್ನು ಇವನು ಧರಿಸಿದ್ದಾನೆ. ದೇಹವು ಮನುಷ್ಯರಂತೆ ಇದ್ದರೂ ಇವನು ನಮಗೆ ಬಹಳ ಆಶ್ಚರ್ಯವನ್ನುಂಟುಮಾಡುತ್ತಿದ್ದಾನೆ.

Rarest Archiver

ವಿ.—ಪರಮಶ್ಚಾಸೌ ಆಶ್ರಮಶ್ಚ, ಪರಮಾಶ್ರಮಃ ಏಷಾಂ ಅಸ್ತೀತಿ ಪರಮಾಶ್ರಮಿಣಃ ತೇಷಾಂ, ಗತಃ ಶ್ರಮಃ ಯಸ್ಮಾತ್ ಸಃ ಗತಶ್ರಮಃ, ಧೀರಾ ಧೀಃ ಯಸ್ಯ ಸಃ ಧೀರಧೀಃ, ಮಾನುಷಃ ಭಾವಃ ಯಸ್ಯ ಸಃ, ಮಾನುಷಭಾವಃ ವಿಗ್ರಹಃ ಯಸ್ಯ ಸಃ ಮಾನುಷಭಾವವಿಗ್ರಹಃ ;

ಕ್ರಿ.—ಬಿಭರ್ತಿ ಬಿಭೃತಃ ಬಿಭ್ರತಿ, ಬಿಭರ್ಷಿ ಬಿಭೃಥಃ ಬಿಭೃಥ, ಬಿಭರ್ಮಿ ಬಿಭೃವಃ ಬಿಭೃಮಃ. ಡುಭೃಞ್ (ಭೃ) ಧಾರಣ ಪೋಷಣಯೋಃ। ಸಕ.। ಉಭ.। to hold, to support ಲಟ್.।

ತನೋತಿ ತನುತಃ ತನ್ವಂತಿ, ತನೋಷಿ ತನುಥಃ ತನುಥ, ತನೋಮಿ ತನುವಃ ತನ್ವಃ ತನುಮಃ ತನ್ಮಃ, ತನು ವಿಸ್ತಾರೇ (ತನ್) ಸಕ.। ಸೇಟ್.। ಉಭ.। to spread. ಲಟ್. ಆ ಉಪಸರ್ಗ ।

ಅನ.—ಇವನು ಸಾಧಾರಣಮಾನವನು ಆಗಿರಲಾರನೆಂದು ಊಹಿಸಿದ ಮೇಲೆ ಮತ್ತು ಯಾರಾಗಿರಬಹುದು ಎಂದು ತರ್ಕಿಸಿದರು—

ಚತುರಶ್ಚತುರಾನನಃ ಸ್ವಯಂ
ಪವನೋ ವಾ ಪ್ರತಿರೂಪ ಆವ್ರಜನ್ ।
ಶ್ರುತಿನಾಥದಿದೃಕ್ಷಯಾನ್ಯಥಾ
ನ ಖಲು ಸ್ಯಾನ್ನಿಖಿಲಾಗ್ರ್ಯಲಕ್ಷ್ಮವಾನ್ ॥೯॥

ಅ.ಅ—ಶ್ರುತಿನಾಥ = ವೇದಗಳಿಗೆ ಸ್ವಾಮಿಯಾದ ವೇದವ್ಯಾಸರನ್ನು, ದಿದೃಕ್ಷಯಾ = ನೋಡುವ ಇಚ್ಛೆಯಿಂದ, ಪ್ರತಿರೂಪಃ = ಸಂನ್ಯಾಸಿವೇಷವುಳ್ಳವನಾಗಿ, ಆವ್ರಜನ್ = ಬರುತ್ತಿರುವ, (ಅಯಂ = ಇವನು) ಸ್ವಯಂ = ಸ್ವತಹ, ಚತುರಃ = ಎಲ್ಲಾ ವಿಷಯಗಳಲ್ಲಿ ಪ್ರವೀಣನಾದ, ಚತುರಾನನಃ = ಬ್ರಹ್ಮನೋ ? ವಾ = ಅಥವಾ, ಪವನಃ = ವಾಯುವೋ ? ಅನ್ಯಥಾ = ಹೀಗಿಲ್ಲದಿದ್ದರೆ, ನಿಖಿಲ = ಎಲ್ಲಾ, ಅಗ್ರ್ಯ = ಶ್ರೇಷ್ಠವಾದ, ಲಕ್ಷ್ಮವಾನ್ = ಲಕ್ಷಣಗಳುಳ್ಳವನು, ನ ಸ್ಯಾತ್ ಖಲು = ಆಗಿರಲಾರನಷ್ಟೆ !

ತಾ.—ಪರಮಹಂಸಸಂನ್ಯಾಸಿಗಳ ಲಕ್ಷಣಗಳನ್ನು ಧರಿಸಿ ಸಮಸ್ತವೇದಾಧಿಪತಿಯಾದ ಶ್ರೀವೇದವ್ಯಾಸರನ್ನು ನೋಡಲು ಬರುತ್ತಿರುವ ಇವನು ಸರ್ವ

Rarest Archiver

ಲಕ್ಷಣಸಂಪನ್ನನಾದ ಸಾಕ್ಷಾತ್ ಚತುರ್ಮುಖಬ್ರಹ್ಮನೋ ? ಅಥವಾ ಮುಖ್ಯ ಪ್ರಾಣನೋ ? ಇವರಿಬ್ಬರಲ್ಲಿ ಒಬ್ಬನಾಗಿರಬೇಕು. ಹಾಗಿಲ್ಲದಿದ್ದರೆ ಇವನಲ್ಲಿ ಮಹಾಪುರುಷರ ಮೂವತ್ತೆರಡು ಲಕ್ಷಣಗಳು ಇರಲು ಸಾಧ್ಯವಿಲ್ಲ.

ವಿ.—ಚತ್ವಾರಿ ಆನನಾನಿ ಯಸ್ಯ ಸಃ ಚತುರಾನನಃ, ವ್ರತಂ ಅಸ್ಯ ಅಸ್ತೀತಿ ವ್ರತೀ, ವ್ರತಿನಃ ರೂಪಂ ಯಸ್ಯ ಸಃ ವ್ರತಿರೂಪಃ, ಶ್ರುತೀನಾಂ ನಾಥಃ ಶ್ರುತಿನಾಥಃ, ದ್ರಷ್ಟುಂ ಇಚ್ಛಾ ದಿದೃಕ್ಷಾ, ಶ್ರುತಿನಾಥಸ್ಯ ದಿದೃಕ್ಷಾ ಶ್ರುತಿ-ನಾಥದಿದೃಕ್ಷಾ ತಯಾ, ಅಗ್ರ್ಯಾಣಿ ಚ ತಾನಿ ಲಕ್ಷ್ಮಾಣಿ ಚ, ನಿಖಿಲಾನಿ ಚ ತಾನಿ ಅಗ್ರ್ಯಲಕ್ಷ್ಮಾಣಿ ಚ, ನಿಖಿಲಾಗ್ರ್ಯಲಕ್ಷ್ಮಾಣಿ ಅಸ್ಯ ಸಂತೀತಿ ನಿಖಿಲಾಗ್ರ್ಯಲಕ್ಷ್ಮವಾನ್.

ಕ್ರಿ.—ಸ್ಯಾತ್. ಸರ್ಗ ೭ ಶ್ಲೋಕ ೪ ನೋಡಿರಿ.

ಅವ.—ಹೀಗೆ ಅವರು ಯೋಚಿಸುತ್ತಿರುವಾಗ ಆಚಾರ್ಯರು ಮುಂದೆ ಬರುತ್ತಾ ಅಲ್ಲಿ ಕಲ್ಪವೃಕ್ಷದಂತಹ ಒಂದು ಮರವನ್ನು ಕಂಡರು.

ಅವಲೋಕಿತಲಕ್ಷಣಃ ಸ ತೈ-
ರಿತಿ ಸಂಚಿಂತ್ಯ ಕುತೂಹಲಾಕುಲೈಃ ।
ಅವಿಲಂಬಗತಿರ್ನ್ಯಶಾಮಯತ್
ತರುಮಾರಾತ್ ಸುರಪಾದಪೋತ್ತಮಂ ॥೧೦॥

ಅ.ಅ—ಕುತೂಹಲಾಕುಲೈಃ = ಕೌತುಕದಿಂದ ತುಂಬಿರುವ, ತೈಃ = ಆಶ್ರಮದಲ್ಲಿರುವ ಆ ಮುನಿಗಳಿಂದ, ಇತಿ = ಹಿಂದೆ ಹೇಳಿರುವ ರೀತಿಯಿಂದ, ಅವಲೋಕಿತಲಕ್ಷಣಃ = ನಿರೀಕ್ಷಿಸಲ್ಪಟ್ಟ ಲಕ್ಷಣಗಳುಳ್ಳ, ಅವಿಲಂಬಗತಿಃ = ನಿಧಾನವಲ್ಲದ ನಡಿಗೆಯುಳ್ಳ, ಸಃ = ಆ ಶ್ರೀಮಧ್ವಾಚಾರ್ಯರು, ಆರಾತ್ = ದೂರದಲ್ಲಿ, ಸುರಪಾದಪ = ಕಲ್ಪವೃಕ್ಷದಂತೆ, ಉತ್ತಮಂ = ಶ್ರೇಷ್ಠವಾದ, ತರುಂ = ಬದರೀವೃಕ್ಷವನ್ನು, ನ್ಯಶಾಮಯತ್ = ನೋಡಿದರು.

ತಾ.—ಆ ಬದರಿಕಾಶ್ರಮದಲ್ಲಿದ್ದ ಮುನಿಗಳು ಹಿಂದೆ ಹೇಳಿದಂತೆ ಆಚಾರ್ಯರ ದೇಹಲಕ್ಷಣಗಳನ್ನು ಕಂಡರು. ಆಶ್ಚರ್ಯಭರಿತರಾದರು. ಈ ಮಹಾನುಭಾವರು ಬ್ರಹ್ಮದೇವರೋ ಅಥವಾ ವಾಯುದೇವರೋ ಇಬ್ಬರಲ್ಲಿ

Rarest Archive

ಒಬ್ಬರಾಗಿರಲೇ ಬೇಕೆಂದು ಅವರು ಆಲೋಚಿಸುತ್ತಿರುವಾಗಲೇ ಶ್ರೀಮಧ್ವರು ಬೇಗನೆ ಮುಂದೆ ನಡೆಯುತ್ತಾ, ಅಲ್ಲಿಯೇ ಸಮೀಪದಲ್ಲಿರುವ ಕಲ್ಪವೃಕ್ಷದಂತಿರುವ ಒಂದು ಬದರೀವೃಕ್ಷವನ್ನು ಕಂಡರು.

ವಿ.— ಅವಲೋಕಿತಾನಿ ಲಕ್ಷಣಾನಿ ಯಸ್ಯ ಸಃ ಕುತೂಹಲೇನ, ಆಕುಲಾಃ ತೈಃ, ನ ವಿದ್ಯತೇ ವಿಲಂಬಃ ಯಸ್ಯಾಃ ಸಾ, ಅವಿಲಂಬಾ ಗತಿಃ ಯಸ್ಯಃ ಸಃ, ಸುರಾಣಾಂ ಪಾದಪಃ, ಸುರಪಾದಪವತ್ ಉತ್ತಮಃ ತಂ,

ಕ್ರಿ.—ನಿ+ಅಶಾಮಯತ್ ಅಶಾಮಯತಾಂ ಅಶಾಮಯನ್, ಅಶಾಮಯಃ ಅಶಾಮಯತಂ ಅಶಾಮಯತ, ಅಶಾಮಯಂ ಅಶಾಮಯಾವ ಅಶಾಮಯಾಮ; ಶಮು ಆಲೋಚನೇ ಪರ.। ಸಕ.। ಲಙ್.।

ಅವ.—ಆ ವೃಕ್ಷವನ್ನು ಶೇಷದೇವರ ಸಾಮ್ಯದಿಂದ ವರ್ಣಿಸುತ್ತಾರೆ—

ಮಸೃಣತ್ವಚಮುನ್ನತಂ ತತಂ
ಬಹುಶಾಖಾಫಣಸೂನರತ್ನಕಂ।
ಭಗವಂತಮನಂತಮಂತಿಕೇ
ಸ್ಥಿತಮೀಶಸ್ಯ ನಿಷೇವಣಾಯ ವಾ ॥೧೧॥

ಅ.ಅ.—ಮಸೃಣ=ನುಣುಪಾದ, ತ್ವಚಂ=ತೊಗಟೆಯುಳ್ಳ, ಮೃಚರ್ಮವುಳ್ಳ, ಉನ್ನತಂ = ಎತ್ತರವಾದ, ಶ್ರೇಷ್ಠನಾದ, ತತಂ = ಕೊಂಬೆಗಳಿಂದ, ಹೆಡೆಗಳಿಂದ, ವ್ಯಾಪಿಸಿರುವ, ಬಹುಶಾಖಾಫಣ=ಬಹಳವಾದ ಹೆಡೆಗಳಂತಿರುವ ಕೊಂಬೆಗಳಲ್ಲಿ ರತ್ನಗಳಂತಿರುವ ಹೂವುಗಳುಳ್ಳ, ಬಹಳವಾದ ಕೊಂಬೆಗಳಂತಿರುವ ಹೆಡೆಗಳಲ್ಲಿ ಹೂವಿನಂತಿರುವ ಉಬ್ಬಿದ ರತ್ನಗಳುಳ್ಳ, ಈಶಸ್ಯ=ಶ್ರೀವೇದವ್ಯಾಸರ, ನಿಷೇವಣಾಯ=ಸೇವೆಗೋಸ್ಕರ, ಅಂತಿಕೇ= ಸಮೀಪದಲ್ಲಿ, ಸ್ಥಿತಂ=ಇರುವ, ಭಗವಂತಂ=ಪೂಜ್ಯನಾದ, ಅನಂತಂ ವಾ =ಶೇಷದೇವರಂತೆ ಇರುವ, (ತರುಂ ನ್ಯಶಾಮಯತ್=ಮರವನ್ನು ಕಂಡರು.) (ಇಲ್ಲಿ ೧೧ನೇ ಶ್ಲೋಕದಿಂದ ನಾಲ್ಕು ಶ್ಲೋಕಗಳಿಗೆ ಏಕಾನ್ವಯವಿರುವುದರಿಂದ ಕಲಾಪಕವಾಗುತ್ತದೆ).

ತಾ.—ಆ ಮರದ ತೊಗಟೆಯು ಮೃದುವಾಗಿದ್ದಿತು ಎತ್ತರವಾದ ಆ

Rarest Archiver

ಮರವು ಸುತ್ತಲೂ ಹರಡಿರುವ ಕೊಂಬೆಗಳಿಂದ ಛತ್ರಿಯಂತೆ ಶೋಭಿಸುತ್ತಿತ್ತು. ಆದರ ಕೊಂಬೆಗಳು ಹಾವಿನ ಹೆಡೆಯಂತಿದ್ದು ಅವುಗಳಲ್ಲಿ ರತ್ನದಂತಿರುವ ಹೂವು ಗಳೂ ಹಣ್ಣುಗಳೂ ಶೋಭಿಸುತ್ತಿದ್ದುವು. ಇಂತಹ ಮರವನ್ನು ನೋಡಿದರೆ ಮೃದುವಾದ ಮೈಚರ್ಮವುಳ್ಳ ವಿಷ್ಣುಭಕ್ತರಲ್ಲಿ ಶ್ರೇಷ್ಠನಾದ ಆದಿಶೇಷನು ಹೂವುಗಳಂತಿರುವ ರತ್ನಗಳಿಂದ ಸುತ್ತಲೂ ಅಲಂಕೃತವಾದ ಹೆಡೆಗಳನ್ನು ಗುಂಡಗೆ ಬಿಚ್ಚಿಕೊಂಡು ತನ್ನ ಸ್ವಾಮಿಯಾದ ವೇದವ್ಯಾಸದೇವರನ್ನು ಸೇವಿಸಲು ಹತ್ತಿರ ಬಂದು ನಿಂತಿರುವನೋ ಎಂಬಂತೆ ಕಾಣಿಸುತ್ತಿತ್ತು.

ವಿ.—ಮಸೃಣಾ ತ್ವಕ್ ಯಸ್ಯ ಸಃ ತಂ, ಬಹ್ವ್ಯಶ್ಚ ತಾಃ ಶಾಖಾಶ್ಚ, ಬಹುಶಾಖಾಃ ಫಣಾಃ ಇವ, ಸೂನಾನಿ ರತ್ನಾನೀವ, ಬಹುಶಾಖಾಫಣೇಷು ಸೂನರತ್ನಾನಿ ಯಸ್ಯ ಸಃ ಬಹುಶಾಖಾಫಣಸೂನರತ್ನಕಃ ತಂ, ಶೇಷಪಕ್ಷದಲ್ಲಿ:— ಬಹುಶಾಖಾ ಇವ ಫಣಾಃ ಬಹುಶಾಖಾಫಣಾಃ, ಸೂನಾನೀವ ರತ್ನಾನಿ ಸೂನ-ರತ್ನಾನಿ, ಬಹುಶಾಖಾಫಣೇಷು ಸೂನರತ್ನಾನಿ ಯಸ್ಯ ಸಃ ಬಹುಶಾಖಾ-ಫಣಸೂನರತ್ನಕಃ ತಂ, ಭಗಃ ಅಸ್ಯ ಅಸ್ತೀತಿ ಭಗವಾನ್ ತಂ.

ಅವ.—ಪುನಃ ಅದೇ ವೃಕ್ಷವನ್ನು ಗರುಡಸಾಮ್ಯದಿಂದ ವರ್ಣಿಸುತ್ತಾರೆ—

ಅತಿಚಿತ್ರವಿಚಿತ್ರಪತ್ರಿಣಂ
ಬಹುವರ್ಣಂ ಹರಿಗೋನಿವಾರಕಂ ।
ಮುನಿನಂದನಮಿಂದಿರಾಪತೇ
ರಧಿಕೇಷ್ಟಂ ಸತತಾಮಿವಾಧಿಪಂ ॥೧೨॥

ಅ.ಅ—ಅತಿಚಿತ್ರ=ಅತ್ಯಂತ ಆಶ್ಚರ್ಯಕರವಾದ, ವಿಚಿತ್ರ=ನಾನಾ ಬಣ್ಣದ, ಪತ್ರಿಣಂ=ಎಲೆಗಳುಳ್ಳ, ಹರಿಗೋನಿವಾರಕಂ=ಸೂರ್ಯನ ಕಿರಣ ಗಳನ್ನು ತಡೆಯುವ, ಮುನಿನಂದನಂ = ಮುನಿಗಳಿಗೆ ಸಂತೋಷವನ್ನುಂಟು ಮಾಡುವ, ಇಂದಿರಾಪತೇಃ = ಲಕ್ಷ್ಮೀಪತಿಯಾದ ಶ್ರೀವೇದವ್ಯಾಸರಿಗೆ, ಅಧಿ-ಕೇಷ್ಟಂ=ಅತ್ಯಂತಪ್ರಿಯವಾದ, ಗರುಡಪಕ್ಷದಲ್ಲಿ :—ಅತಿಚಿತ್ರವಿಚಿತ್ರಪತ್ರಿಣಂ = ವೇದಾತ್ಮಕನಾದುದರಿಂದ ಆಶ್ಚರ್ಯವನ್ನುಂಟುಮಾಡುವ ನಾನಾಬಣ್ಣದ ರೆಕ್ಕೆಗಳುಳ್ಳ, ಬಹುವರ್ಣಂ=ಅನೇಕ ಬಣ್ಣಗಳುಳ್ಳ, ಹರಿಗೋನಿವಾರಕಂ=

Rarest Archiver

ಇಂದ್ರನ ವಜ್ರಾಯುಧವನ್ನು ನಿವಾರಿಸಿದ, ಮುನಿನಂದನಂ=ಕಶ್ಯಪಮುನಿಗಳ ಪುತ್ರನಾದ, ಇಂದಿರಾಪತೇಃ=ಲಕ್ಷ್ಮೀಪತಿಯಾದ ಶ್ರೀಹರಿಗೆ, ಅಧಿಕೇಷ್ಟಂ= ಅತ್ಯಂತ ಪ್ರಿಯನಾದ, ಪತತಾಂ ಅಧಿಪಂ ಇವ=ಪಕ್ಷಿಗಳಿಗೆ ಒಡೆಯನಾದ ಗರುಡ ನಂತಿರುವ (ತರುಂ ನ್ಯಶಾಮಯತ್=ಬದರೀವೃಕ್ಷವನ್ನು ನೋಡಿದರು).

ತಾ.—'ಛಂದೋಮಯೇನ ಗರುಡೇನ ಸಮುಹ್ಯಮಾನಃ' ಎಂದು ಭಾಗವತದಲ್ಲಿ ಹೇಳಿದಂತೆ ಗರುಡನು ವೇದಾತ್ಮಕವಾದ ಬಗೆ ಬಗೆಯ ಬಣ್ಣದ ರೆಕ್ಕೆಗಳಿಂದ ಕೂಡಿರುತ್ತಾನೆ. 'ಆಜಾನುತಃ ಸ್ವರ್ಣವರ್ಣಃ ಆನಾಭೇಃ ಹಾರ-ಗೌರಭಾಃ। ಮಾಣಿಕ್ಯಶೋಣ ಆಕಂಠಾತ್ ಆಕೇಶಾತ್ ಹರಿತಪ್ರಭಃ॥ ನೀಲ-ಕೇಶೋಲ್ಲಸನ್ ಮಾಲ್ಯಃ' ಎಂಬ ಪ್ರಮಾಣಾನುಸಾರವಾಗಿ ಗರುಡನು ಮೊಣ ಗಂಟಿನವರೆಗೆ ಬಂಗಾರದ ಬಣ್ಣದಿಂದಲೂ, ನಾಭಿಯವರೆಗೆ ಮುತ್ತಿನಸರದಂತೆ ಬಿಳಿಯ ಬಣ್ಣದಿಂದಲೂ, ಕತ್ತಿನವರೆಗೆ ಮಾಣಿಕ್ಯದಂತೆ ಕೆಂಪುನೈದಿಲೆಯ ನಸು ಗೆಂಪು (ಶೋಣ) ವರ್ಣದಿಂದಲೂ, ತಲೆಕೂದಲಿನವರೆಗೆ ಹಸುರು ಬಣ್ಣ ದಿಂದಲೂ ಕೂಡಿದ್ದು, ಕಪ್ಪಾದ ಕೂದಲು, ಹೂವಿನ ಮಾಲೆಗಳಿಂದ ಶೋಭಿ ಸುತ್ತಾನೆ. ಹೀಗೆ ಗರುಡದೇವರಿಗೆ ಐದು ಬಣ್ಣಗಳು. ಅವರು ಅಮೃತಕಲಶ ವನ್ನು ತರಲು ಸ್ವರ್ಗಕ್ಕೆ ಹೋದಾಗ ಇಂದ್ರನ ವಜ್ರಾಯುಧಪ್ರಹಾರವನ್ನು ಲೆಕ್ಕಿಸಲಿಲ್ಲ. ತಂದೆಯಾದ ಕಶ್ಯಪರನ್ನು ಆನಂದಗೊಳಿಸುವ ಅವರು ಶ್ರೀಮನ್ನಾ-ರಾಯಣನ ವಾಹನವಾಗಿದ್ದು ಅವರಿಗೆ ಅತ್ಯಂತ ಪ್ರಿಯರು, ಹಾಗೆಯೇ ಈ ಬದರೀವೃಕ್ಷವೂ ಕೂಡ ಅತ್ಯಂತಾಶ್ಚರ್ಯವನ್ನುಂಟುಮಾಡುವ ನಾನಾಬಣ್ಣದ ಎಲೆಗಳಿಂದ ಕೂಡಿದೆ. ಬುಡದಿಂದ ತುದಿಯವರೆಗೆ ನಾನಾಬಣ್ಣಗಳಿಂದ ಕೂಡಿ ಸೂರ್ಯನ ಕಿರಣವನ್ನು ತಡೆಯುತ್ತದೆ. ಮುನಿಗಳಿಗೆ ಸಂತೋಷವನ್ನುಂಟು ಮಾಡುತ್ತದೆ. ಲಕ್ಷ್ಮೀಪತಿಯಾದ ಶ್ರೀವೇದವ್ಯಾಸರಿಗೆ ಅತ್ಯಂತಪ್ರೀತಿಪಾತ್ರ ವಾಗಿದೆ. ವಿಶೇಷಣಗಳಸಾಮ್ಯದಿಂದ ಗರುಡದೇವರಂತಿರುವ ಇಂತಹ ಬದರೀ ವೃಕ್ಷವನ್ನು ಆಚಾರ್ಯರು ನೋಡಿದರು.

ವಿ.—ವಿಚಿತ್ರಾಣಿ ಚ ತಾನಿ ಪತ್ರಾಣಿ ಚ, ಅತ್ಯಂತಂ ಚಿತ್ರಾಣಿ ಅತಿ-ಚಿತ್ರಾಣಿ ಚ ತಾನಿ ವಿಚಿತ್ರಪತ್ರಾಣಿ ಚ, ತಾನಿ ಅಸ್ಯ ಸಂತೀತಿ ಅತಿಚಿತ್ರವಿಚಿತ್ರ-ಪತ್ರೀ ತಂ, ಬಹವಃ ವರ್ಣಾಃ ಯಸ್ಯ ಸಃ ತಂ, ಹರೇಃ ಗಾವಃ, ಹರಿಗವಾಂ

Rarest Archiver

ನಿವಾರಕಃ ತಂ, ನಂದಯತೀತಿ ಸಂದನಃ ಮುನೇಃ (ಮುನೀನಾಂ) ನಂದನಃ ತಂ, ಇಂದಿರಾಯಾಃ ಪತಿಃ ತಸ್ಯ, ಅಧಿಕಂ ಇಷ್ಟಃ ತಂ;

ಅವ.—ಆ ವೃಕ್ಷವನ್ನು ವೇದಸಾಮ್ಯದಿಂದ ವರ್ಣಿಸುತ್ತಾರೆ—

ಅಮೃತಾತ್ಮಮಹಾಫಲಪ್ರದಂ
ದುರವಾಪಂ ಹರಿಭಕ್ತಿವರ್ಜಿತೈಃ ।
ಶ್ರಿತಸಾಧುಪುರಾಣಭಾರತಂ
ನಿಗಮಂ ಮೂರ್ತಮಿವೋರುಶಾಖಿನಂ ॥೧೩॥

ಅ.ಅ—ಅಮೃತಾತ್ಮ=ರುಚಿಯಾಗಿರುವುದರಿಂದ ಅಮೃತಸ್ವರೂಪವಾದ, (ವೇದಪಕ್ಷದಲ್ಲಿ:- ಮೋಕ್ಷರೂಪವಾದ), ಮಹಾಫಲ=ದೊಡ್ಡ ಹಣ್ಣುಗಳನ್ನು, ಉತ್ತಮವಾದ ಪ್ರಯೋಜನವನ್ನು, ಪ್ರದಂ=ಕೊಡುವ, ಹರಿಭಕ್ತಿವರ್ಜಿತೈಃ= ವಿಷ್ಣುಭಕ್ತಿಇಲ್ಲದವರಿಂದ, ದುರವಾಪಂ=ಹೊಂದಲು ಅಶಕ್ಯವಾದ, ಶ್ರಿತ= ಆಶ್ರಯಿಸಿದ, ಸಾಧು=ಉತ್ತಮವಾದ (ಸಾತ್ತ್ವಿಕವಾದ), ಪುರಾಣಭಾರತಂ= ಪುರಾಣಗಳು ಮತ್ತು ಭಾರತಗ್ರಂಥ ಇವುಗಳುಳ್ಳ, ಉಪಜೀವ್ಯವಾದ ವೇದವನ್ನು ಮೂಲಪ್ರಮಾಣವಾಗಿ ಆಶ್ರಯಿಸಿರುವ ಸಾತ್ತ್ವಿಕಪುರಾಣ ಮತ್ತು ಭಾರತ ಗಳುಳ್ಳ, ಉರುಶಾಖಿನಂ=ಬಹಳವಾದ ಕೊಂಬೆಗಳುಳ್ಳ, ಐತರೇಯ ತೈತ್ತಿರೀಯ ಮುಂತಾದ ಅನೇಕ ಶಾಖೆಗಳುಳ್ಳ, ಮೂರ್ತಂ=ದೇಹವನ್ನು ಧರಿಸಿದ, ನಿಗಮಂ ಇವ=ವೇದವನ್ನೋ ಎಂಬಂತೆ (ತರುಂ ನ್ಯಶಾಮಯತ್=ಬದರೀ ವೃಕ್ಷವನ್ನು ನೋಡಿದರು).

ತಾ.—ವೇದವು ಅರ್ಥಜ್ಞಾನಪೂರ್ವಕವಾಗಿ ಅಧ್ಯಯನ ಮಾಡುವವರಿಗೆ ಮೋಕ್ಷವೆಂಬ ಮಹಾಫಲವನ್ನು ಕೊಡುತ್ತದೆ. 'ಅವೈಷ್ಣವಸ್ಯ ವೇದೇಽಪಿ ಹ್ಯಧಿಕಾರೋ ನ ವಿದ್ಯತೇ' ವಿಷ್ಣುಭಕ್ತಿ ಇಲ್ಲದವನಿಗೆ ವೇದಾಧ್ಯಯನದಲ್ಲಿಯೂ ಅಧಿಕಾರವಿಲ್ಲ ಎಂಬ ಪ್ರಮಾಣಾನುಸಾರವಾಗಿ ವೇದವು ಹರಿಭಕ್ತಿಇಲ್ಲದವರಿಗೆ ಹೊಂದಲು ಅನರ್ಹವಾಗಿದೆ. ಎಲ್ಲಾ ಸಾತ್ತ್ವಿಕಪುರಾಣಗಳು ಮತ್ತು ಮಹಾ-ಭಾರತವು ತಮಗೆ ಮೂಲಪ್ರಮಾಣವಾಗಿ ವೇದವನ್ನೇ ಆಶ್ರಯಿಸಿವೆ. 'ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್' ಎಂಬ ಪ್ರಮಾಣಾನು

Rarest Archiver

ಸಾರವಾಗಿ ವೇದದ ಅರ್ಥವನ್ನು ವಿಸ್ತರಿಸಿ ಹೇಳುವ ಇತಿಹಾಸಪುರಾಣಗಳು ವೇದವನ್ನೇ ಮೂಲಪ್ರಮಾಣವನ್ನಾಗಿ ಇಟ್ಟುಕೊಂಡಿವೆ. ವೇದವು ಐತರೇಯ, ಕೌಷೀತಕ, ಬಾಷ್ಕಲ, ಶಾಕಲ ಮುಂತಾದ ಅನೇಕ ಶಾಖೆಗಳಿಂದ ಕೂಡಿದೆ. ಅಲ್ಲಿರುವ ಬದರೀವೃಕ್ಷವೂ ಶರೀರಧಾರಿಯಾದ ವೇದದಂತೆಯೇ ಇದೆ. ಆ ವೃಕ್ಷವೂ ಅಮೃತಾತ್ಮಮಹಾಫಲಪ್ರದವಾಗಿದೆ. ಅಮೃತದಂತೆ ರುಚಿಯಾದ ಮುಪ್ಪುಸಾವುಗಳನ್ನು ಪರಿಹರಿಸುವ ದೊಡ್ಡಹಣ್ಣುಗಳನ್ನು ಕೊಡುತ್ತದೆ. ಆ ಬದರೀವೃಕ್ಷವೂ ಹರಿಭಕ್ತಿವರ್ಜಿತರಿಗೆ ದುರವಾಪವಾಗಿದೆ. ವಿಷ್ಣುಭಕ್ತಿ ಇಲ್ಲದವರಿಗೆ ಹೊಂದಲು ಅಸಾಧ್ಯವಾಗಿದೆ. ಮುನಿಗಳು ದೇವರಪೂಜೆ, ಧ್ಯಾನ, ತಪಸ್ಸು, ಸಮಾಧಿ ಮುಂತಾದ ಸ್ಥಿತಿಗಳಲ್ಲಿ ತಮ್ಮ ಪಾರಾಯಣದ ಪುರಾಣ-ಭಾರತಾದಿಪುಸ್ತಕಗಳನ್ನು ಬದರೀವೃಕ್ಷದ ಶಾಖೆಗಳಲ್ಲಿ ತಗಲಿಹಾಕುತ್ತಿದ್ದರು. ಆದ್ದರಿಂದ ವೇದದಂತೆ ಅದೂ ಪುರಾಣಭಾರತಾದಿಗಳಿಗೆ ಆಶ್ರಯವಾಗಿದೆ. ವೇದಕ್ಕೆ ಅನೇಕ ಶಾಖೆಗಳಿದ್ದಂತೆ ಆ ಬದರೀವೃಕ್ಷಕ್ಕೂ ಅನೇಕಶಾಖೆಗಳಿದ್ದುವು. ಶ್ರೀಮಧ್ವಾಚಾರ್ಯರು ಹೀಗೆ ಮೂರ್ತಿಮತ್ತಾದ ವೇದದಂತಿರುವ ಆ ಬದರೀ ವೃಕ್ಷವನ್ನು ನೋಡಿದರು.

ವಿ.—ಅಮೃತಂ ಆತ್ಮಾ ಯೇಷಾಂ ತಾನಿ ಅಮೃತಾತ್ಮಾನಿ, ಮಹಾಂತಿ ಚ ತಾನಿ ಫಲಾನಿ ಚ ಮಹಾಫಲಾನಿ, ಅಮೃತಾತ್ಮಾನಿ ಚ ತಾನಿ ಮಹಾ-ಫಲಾನಿ ಚ ಅಮೃತಾತ್ಮಮಹಾಫಲಾನಿ, ತಾನಿ ಪ್ರದದಾತೀತಿ ಅಮೃತಾತ್ಮಮಹಾ ಫಲಪ್ರದಃ ತಂ, (ವೇದಪಕ್ಷದಲ್ಲಿ- ಅಮೃತಂ ಆತ್ಮಾ ಯಸ್ಯ ತತ್, ಮಹಚ್ಚ ತತ್ ಫಲಂ ಚ ಮಹಾಫಲಂ, ಅಮೃತಾತ್ಮ ಮಹಾಫಲಂ ಪ್ರದದಾತೀತಿ, ತಂ. ದುಃಖೇನ ಅವಾಪ್ತುಂ ಶಕ್ಯಃ ದುರವಾಪಃ ತಂ, ಹರೇಃ ಭಕ್ತಿಃ, ಹರಿಭಕ್ತ್ಯಾ ವರ್ಜಿತಾಃ ತೈಃ, ಪುರಾಣಾನಿ ಚ ಭಾರತಂ ಚ ಪುರಾಣಭಾರತಾನಿ, ಶ್ರಿತಾನಿ ಸಾಧೂನಿ ಪುರಾಣಭಾರತಾನಿ ಯಸ್ಮಿನ್ ಸಃ ತಂ, ಉರವಃ ಶಾಖಾಃ ಅಸ್ಯ ಸಂತೀತಿ ಉರುಶಾಖೀ ತಂ.

ಅವ.—ಆ ಮರದಸುತ್ತಲೂ ಇರುವ ಕಟ್ಟೆಯಲ್ಲಿ ಕುಳಿತಿರುವ ಮುನಿಗಳನ್ನು ಆಚಾರ್ಯರು ಕಂಡರು—

Rarest Archiver

ಅಥ ತಸ್ಯ ಸ ವೇದಿಕಾಂತರೇ
ಸುವಿಶಾಲೇ ವಿಮಲೇ ಮನೋಹರೇ ।
ಅವಲೋಕಿತವಾನನಂತಧೀಃ
ದಿವಿ ದೇವಾನಿವ ತಾಪಸೋತ್ತಮಾನ್ ॥೧೪॥

ಅ. ಅ—ಅಥ = ಅನಂತರ, ಅನಂತಧೀಃ = ಪೂರ್ಣಜ್ಞಾನವುಳ್ಳ, ಸಃ = ಆ ಪೂರ್ಣಪ್ರಜ್ಞಾಚಾರ್ಯರು, ತಸ್ಯ = ಆ ಬದರೀವೃಕ್ಷದ, ಸುವಿಶಾಲೇ = ಅತಿ ವಿಸ್ತಾರವುಳ್ಳ, ವಿಮಲೇ = ಪರಿಶುದ್ಧವಾದ, ಮನೋಹರೇ = ಸುಂದರವಾದ, ವೇದಿಕಾಂತರೇ = ಜಗಲಿಯ ಮೇಲೆ, ದಿವಿ = ಸ್ವರ್ಗದಲ್ಲಿರುವ, ದೇವಾನ್ ಇವ= ದೇವತೆಗಳಂತಿರುವ, ತಾಪಸೋತ್ತಮಾನ್=ಮುನಿಶ್ರೇಷ್ಠರನ್ನು, ಅವಲೋಕಿತ-ವಾನ್ = ನೋಡಿದರು.

ತಾ.—ಆ ಬದರೀವೃಕ್ಷದ ಸುತ್ತಲೂ ಬಹಳ ಅಗಲವಾದ ನಿರ್ಮಲವಾದ ಸುಂದರವಾದ ಜಗಲಿ ಇತ್ತು. ಅಲ್ಲಿ ದೇವಲೋಕದಲ್ಲಿರುವ ದೇವತೆಗಳಂತಿರುವ ಅನೇಕ ಮುನಿಶ್ರೇಷ್ಠರು ಕುಳಿತಿದ್ದರು. ಆಚಾರ್ಯರು ಆ ಬದರೀವೃಕ್ಷದ ಹತ್ತಿರ ಹೋಗುತ್ತಾ ಆ ಮುನಿಗಳನ್ನೂ ಕಂಡರು.

ವಿ.—ವೇದಿಕಾಯಾಃ ಅಂತರಂ ವೇದಿಕಾಂತರಂ ತಸ್ಮಿನ್, ಅನಂತಾ ಧೀಃ ಯಸ್ಯ ಸಃ ಅನಂತಧೀಃ, ತಾಪಸೇಷು ಉತ್ತಮಾಃ ತಾನ್.

ಅವ.—ಅಲ್ಲಿಯ ಮುನಿಗಳಲ್ಲಿ ಪರಸ್ಪರ ವಿರುದ್ಧವಾದ ಗುಣಗಳಿದ್ದು, ಅವರು ಆಶ್ಚರ್ಯವನ್ನುಂಟುಮಾಡುತ್ತಿದ್ದಾರೆ—

ಅಪಿ ಸಪ್ತತಯಾ ವಿರಾಜಿತಾನ್
ಗತಸಂಖ್ಯಾನ್ ಗುಣಿನೋ ಗುಣೋಜ್ಝಿತಾನ್ ।
ಅಪಿ ಮನ್ಯುಮದಾದಿವರ್ಜಿತಾನ್
ಗತಭೋಗಾನ್ ಪವನಾಶನಾನ್ ಸದಾ ॥೧೫॥

ಅ. ಅ—(ಸಃ = ಆ ಮಧ್ವಾಚಾರ್ಯರು) ಸಪ್ತತಯಾ = ಏಳು ಸಂಖ್ಯೆ ಯಿಂದ, ಜಟೆಯನ್ನು ಧರಿಸುವುದರಿಂದ, ವಿರಾಜಿತಾನ್ ಅಪಿ = ಪ್ರಕಾಶಮಾನ

Rarest Archiver

ರಾಗಿದ್ದಾಗ್ಯೂ, ಗತಸಂಖ್ಯಾನ್=ಸಂಖ್ಯೆಯಿಲ್ಲದ, ಬಹುಮಂದಿಯಾದ, ಗುಣಿನಃ ಅಪಿ = (ದಾರವುಳ್ಳವರಾದಾಗ್ಯೂ) ಜ್ಞಾನಭಕ್ತ್ಯಾದಿಗುಣವುಳ್ಳವರಾದಾಗ್ಯೂ, ಗುಣೋಜ್ಝಿತಾನ್ = ದಾರವಿಲ್ಲದ (ಸಂನ್ಯಾಸಿಗಳಾದುದರಿಂದ) ಯಜ್ಞೋಪವೀತ ಗುಣ (ದಾರ) ವಿಲ್ಲದ, ಮನ್ಯು=ಕೋಪವು, ಮದ=ಅಹಂಕಾರವು ಇವುಗಳೇ, ಆದಿ = ಮೊದಲಾದವುಗಳಿಂದ, ವರ್ಜಿತಾನ್ = ರಹಿತರಾದ, ಗತಭೋಗಾನ್ ಅಪಿ=ಸರ್ಪದ ಭೋಗ (ದೇಹ) ವಿಲ್ಲದವರಾದಾಗ್ಯೂ, ಸುಖ-ಭೋಗವಿಲ್ಲದವರಾದಾಗ್ಯೂ, ಸದಾ=ಯಾವಾಗಲೂ, ಪವನಾಶನಾನ್ = ಗಾಳಿಯೇ ಆಹಾರವಾಗಿ ಉಳ್ಳ, (ತಾಪಸೋತ್ತಮಾನ್ ಅವಲೋಕಿತವಾನ್ = ತಪಸ್ವಿಶ್ರೇಷ್ಠರನ್ನು ಕಂಡರು).

ತಾ.—ಅಲ್ಲಿ ಸಪ್ತತೆಯಿಂದ (ಏಳು ಸಂಖ್ಯೆಯಿಂದ) ವಿರಾಜಮಾನರಾಗಿದ್ದರೂ ಸಂಖ್ಯೆಯಿಲ್ಲದ ಋಷಿಗಳು ಇದ್ದರು. ಸಪ್ತತೆ ಇಂದ ಎಂದರೆ ಜಟಾಸಹಿತರಾಗಿದ್ದರೂ ಅಸಂಖ್ಯರಾದ ಋಷಿಗಳು ಅಲ್ಲಿದ್ದರು. ಅವರು ಗುಣಗಳಿಂದ ಕೂಡಿದ್ದರೂ ಗುಣರಹಿತರಾಗಿದ್ದರು. ಜ್ಞಾನಭಕ್ತ್ಯಾದಿಗುಣಗಳಿಂದ ಕೂಡಿದ್ದು ಸತ್ತ್ವಾದಿಗುಣರಹಿತರಾಗಿದ್ದರು. ಅವರಲ್ಲಿ ಗುಣ (ದಾರ) ದಿಂದ ಕೂಡಿದ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥರೂ, ಯಜ್ಞೋಪವೀತಗುಣವಿಲ್ಲದ ಸಂನ್ಯಾಸಿಗಳೂ ಇದ್ದರು. ಅವರು ಗತಭೋಗರಾಗಿದ್ದರೂ (ಹಾವಿನ ದೇಹವಿಲ್ಲದಿದ್ದರೂ) ಹಾವುಗಳಂತೆ ಯಾವಾಗಲೂ ಗಾಳಿಯೇ ಆಹಾರವಾಗಿ ಉಳ್ಳವರಾಗಿದ್ದರು. ಅವರು ಸರ್ಪಗಳಂತೆ ಗಾಳಿಯನ್ನೇ ಸೇವಿಸಿ ಜೀವಿಸುತ್ತಿದ್ದರೂ ಕೋಪ, ಅಹಂ-ಕಾರರಹಿತರಾಗಿ ಸ್ರಕ್‌ಚಂದನವನಿತಾದಿ ಭೋಗಗಳನ್ನು ಬಿಟ್ಟಿದ್ದರು. ಇಂತಹ ಮುನಿಗಳನ್ನು ಶ್ರೀಮಧ್ವಾಚಾರ್ಯರು ಅಲ್ಲಿ ಕಂಡರು. (ಇಲ್ಲಿ ಏಳು ಮಂದಿಯಾದಾಗ್ಯೂ ಸಂಖ್ಯೆಯಿಲ್ಲದ ಎಂದು ವಿರೋಧ, ಸಪ್ತತಾ ಎಂದರೆ ಜಟೆಯಿಂದ ಕೂಡಿರುವಿಕೆಯುಳ್ಳವರು ಮತ್ತು ಬಹಳ ಸಂಖ್ಯೆಯುಳ್ಳವರು ಎಂದು ವಿರೋಧ ಪರಿಹಾರ. ಮುಂದೆಯೂ ಹಾಗೆಯೇ. ಇಲ್ಲಿ ವಿರೋಧಾಭಾಸ ಅಲಂಕಾರ).

ವಿ.—ಸಪ್ತಾನಾಂ ಭಾವಃ ಸಪ್ತತಾ ತಯಾ, ಪ್ತಾ=ಜಟೆ, ಪ್ತಯಾ ಸಹ ವರ್ತಂತೇ ಇತಿ ಸಪ್ತಾಃ, ಸಪ್ತಾನಾಂ ಭಾವಃ ಸಪ್ತತಾ ತಯಾ, ಗತಾ ಸಂಖ್ಯಾ ಯೇಭ್ಯಃ ತೇ ಗತಸಂಖ್ಯಾಃ ತಾನ್, ಗುಣಾಃ ಏಷಾಂ (ಏಷು) ಸಂತೀತಿ

Rarest Archiver

ಗುಣಿನಃ ತಾನ್ ಗುಣ್ಯೈಃ (ಗುಣೇನ) ಉಜ್ಝಿತಾಃ ತಾನ್, ಮನ್ಯುಶ್ಚ ಮದಶ್ಚ ತೌ ಆದೀ ಯೇಷಾಂ ತೇ, ತೈಃ ಮನ್ಯುಮದಾದಿಭಿಃ ವರ್ಜಿತಾಃ ತಾನ್, ಗತಃ ಭೋಗಃ ಯೇಭ್ಯಃ ತೇ ತಾನ್, ಪವನಃ ಅಶನಂ ಯೇಷಾಂ ತೇ ತಾನ್ ;

ಅವ.— ಆ ಮುನಿವರ್ಯರ ಮಧ್ಯದಲ್ಲಿ ಪ್ರಕಾಶಿಸುತ್ತಿರುವ ಶ್ರೀವೇದ-ವ್ಯಾಸದೇವರನ್ನು ಆಚಾರ್ಯರು ಕಂಡರು—

ಮುನಿಮಂಡಲಮಧ್ಯವರ್ತಿನಂ
ತ್ರಿಜಗನ್ಮಂಡಲಮಂಡನಾಯಿತಂ ।
ಇಹ ಸತ್ಯವತೀಸುತಂ ಹರಿಂ
ಪರಿಪೂರ್ಣಪ್ರಮತಿಃ ಸಮೈಕ್ಷತ ॥೧೬॥

ಅ.ಅ—ಪರಿಪೂರ್ಣಪ್ರಮತಿಃ=ಶ್ರೀಪೂರ್ಣಪ್ರಜ್ಞಾಚಾರ್ಯರು, ಇಹ =ಈ ಜಗಲಿಯಲ್ಲಿ, ಮುನಿ = ಋಷಿಗಳ, ಮಂಡಲ = ಸಮುದಾಯದ, ಮಧ್ಯವರ್ತಿನಂ=ಮಧ್ಯದಲ್ಲಿರುವ, ತ್ರಿಜಗನ್ಮಂಡಲ = ಮೂರು ಲೋಕಗಳ ಪ್ರದೇಶಗಳಿಗೆ, ಮಂಡನಾಯಿತಂ = ಅಲಂಕಾರದಂತಿರುವ, ಸತ್ಯವತೀಸುತಂ ಹರಿಂ=ಸತ್ಯವತೀದೇವಿಯ ಪುತ್ರರಾದ ಶ್ರೀವೇದವ್ಯಾಸದೇವರನ್ನು, ಸಮೈಕ್ಷತ =ನೋಡಿದರು.

ತಾ.—ಬದರೀವೃಕ್ಷದ ಸುತ್ತಲೂ ಇರುವ ಜಗಲಿಯಲ್ಲಿ ಅನೇಕ ಮುನಿಗಳು ಕುಳಿತಿದ್ದರು. ಅವರ ಮಧ್ಯದಲ್ಲಿ ಮೂರು ಲೋಕಗಳಿಗೂ ಅಲಂಕಾರದಂತಿರುವ ನಾರಾಯಣಾವತಾರರಾದ ಶ್ರೀವೇದವ್ಯಾಸಮುನಿಗಳು ಕುಳಿತಿದ್ದರು. ಅವರನ್ನು ಶ್ರೀಮಧ್ವಾಚಾರ್ಯರು ಬಹಳ ಆದರದಿಂದ ನೋಡಿದರು.

ವಿ.—ಮುನೀನಾಂ ಮಂಡಲಂ, ಮುನಿಮಂಡಲಸ್ಯ ಮಧ್ಯಂ, ಮುನಿಮಂಡಲ-ಮಧ್ಯೇ ವರ್ತತೇ ಇತಿ ತಂ ಮುನಿಮಂಡಲಮಧ್ಯವರ್ತಿನಂ, ತ್ರೀಣಿ ಚ ತಾನಿ ಜಗಂತಿ ಚ, ತ್ರಿಜಗತಾಂ ಮಂಡಲಂ ತ್ರಿಜಗನ್ಮಂಡಲಂ, ಮಂಡನವತ್ ಆಚರಿ-ತವಾನ್ ಮಂಡನಾಯಿತಃ, ತ್ರಿಜಗನ್ಮಂಡಲಸ್ಯ ಮಂಡನಾಯಿತಃ ತ್ರಿಜಗನ್ಮಂಡಲ-ಮಂಡನಾಯಿತಃ ತಂ, ಸತ್ಯವತ್ಯಾಃ ಸುತಃ ತಂ, ಪರಿಪೂರ್ಣಾ ಪ್ರಮತಿಃ ಯಸ್ಯ ಸಃ ಪರಿಪೂರ್ಣಪ್ರಮತಿಃ,

Rarest Archiver

ಕ್ರಿ.—ಸಮ್+ಐಕ್ಷತ. ಸರ್ಗ ೫, ಶ್ಲೋ. ೨೬ ನೋಡಿರಿ.

ಅವ.—ನಿತ್ಯಾಪರೋಕ್ಷಿಗಳಾದ ಆಚಾರ್ಯರು ಧ್ಯಾನದೃಷ್ಟಿಯಿಂದಲೇ ದೇವರನ್ನು ನಿತ್ಯದಲ್ಲಿಯೂ ನೋಡುತ್ತಾರೆ. ಈಗ ಬಾಹ್ಯಸ್ವರೂಪದರ್ಶನದಿಂದ ವಿಶೇಷವೇನು ?

ನಿಜಹೃತ್ಕಮಲೇऽತಿನಿರ್ಮಲೇ
ಸತತಂ ಸಾಧು ನಿಶಾಮಯನ್ನಪಿ।
ಅವಲೋಕ್ಯ ಪುನಃಪುನರ್ನವಂ
ತಮಸೌ ವಿಸ್ಮಿತ ಇತ್ಯಚಿಂತಯತ್ ॥೧೭॥

ಅ.ಅ—ಅಸೌ = ಈ ಮಧ್ವಾಚಾರ್ಯರು, ಅತಿನಿರ್ಮಲೇ = ಅತ್ಯಂತ ಶುದ್ಧವಾದ, ನಿಜ = ತಮ್ಮ, ಹೃತ್ಕಮಲೇ = ಹೃದಯಕಮಲದಲ್ಲಿ, ಸತತಂ = ಯಾವಾಗಲೂ, ಸಾಧು = ಚೆನ್ನಾಗಿ, ನಿಶಾಮಯನ್ನಪಿ = ನೋಡುತ್ತಿದ್ದರೂ, ತಂ = ಆ ವೇದವ್ಯಾಸರನ್ನು, ಪುನಃ ಪುನಃ ನವಂ = ಮತ್ತೂ ಮತ್ತೂ ಹೊಸಬರನ್ನಾಗಿ, ಅವಲೋಕ್ಯ = ನೋಡಿ, ವಿಸ್ಮಿತಃ (ಸನ್) = ಆಶ್ಚರ್ಯಪಟ್ಟವರಾಗಿ, ಇತಿ = ಈರೀತಿ, ಅಚಿಂತಯತ್ = ಆಲೋಚಿಸಿದರು.

ತಾ.—ಶ್ರೀಮಧ್ವಾಚಾರ್ಯರು ರಾಗದ್ವೇಷಮೊದಲಾದ ದೋಷಗಳಿಲ್ಲದ ಅತ್ಯಂತಪವಿತ್ರವಾದ ತನ್ನ ಹೃದಯಕಮಲದಲ್ಲಿ ನಿತ್ಯದಲ್ಲಿಯೂ ಚೆನ್ನಾಗಿ ಶ್ರೀನಾರಾಯಣಾವತಾರರಾದ ವೇದವ್ಯಾಸರನ್ನೂ ಅವರ ಅನಂತರೂಪಗಳನ್ನೂ ಧ್ಯಾನದೃಷ್ಟಿಯಿಂದ ನೋಡುತ್ತಿದ್ದರು. ಈಗ ಹೊಸಹೊಸದಾಗಿ ತೋರುವ ಆ ವೇದವ್ಯಾಸದೇವರನ್ನೇ ಬಾಹ್ಯದೃಷ್ಟಿಯಿಂದಲೂ ಮತ್ತೂ ಮತ್ತೂ ಕಂಡು ಆಶ್ಚರ್ಯದಿಂದ ಈ ರೀತಿ ಆಲೋಚಿಸಿದರು. ನಿತ್ಯದಲ್ಲಿಯೂ ಮಾನಸದೃಷ್ಟಿಯಿಂದ ನೋಡುತ್ತಿದ್ದರೂ ಬಾಹ್ಯದೃಷ್ಟಿಯಿಂದ ನೋಡುವಾಗಲೂ ಭಕ್ತಿ ಮಹಿಮೆಯಿಂದ ಮತ್ತು ತಮ್ಮ ಸ್ವರೂಪಯೋಗ್ಯತೆಯಿಂದ ಕ್ಷಣಕ್ಷಣದಲ್ಲಿಯೂ ಹೊಸಹೊಸದಾದ ಅದ್ಭುತಗುಣಗಳಿಂದ ಅಲಂಕೃತರಾಗಿ ಕಾಣುತ್ತಿರುವ ಆ ವೇದವ್ಯಾಸದೇವರನ್ನು ಆಚಾರ್ಯರು ಬಹಳ ಆದರ ಗೌರವ ಕುತೂಹಲಗಳಿಂದ ಕಂಡರು ಎಂದು ಭಾವ.

Rarest Archiver

ವಿ.—ಹೃದೇವ ಕಮಲಂ, ನಿಜಂ ಚ ತತ್ ಹೃತ್ಕಮಲಂ ಚ ತಸ್ಮಿನ್, ನಿರ್ಗತಂ ಮಲಂ ಯಸ್ಮಾತ್ ತತ್, ಅತ್ಯಂತಂ ನಿರ್ಮಲಂ ಅತಿನಿರ್ಮಲಂ ತಸ್ಮಿನ್.

ಕ್ರಿ—ಅಚಿಂತಯತ್. ಸರ್ಗ ೭, ಶ್ಲೋಕ ೫. ನೋಡಿರಿ.

ಅವ.—ಶ್ರೀಮಧ್ವಾಚಾರ್ಯರು ಏನನ್ನು ಆಲೋಚಿಸಿದರು ?

ಅಗಣಯ್ಯ(ಣೇಯ)ಗುಣಾರ್ಣವೋಽಮಲಃ
ಸ ಹಿ ನಾರಾಯಣ ಏಷ ಕೇವಲಂ ।
ನು\ **ವಿಧಿನಾಮನುಸ್ಮೃತಂ ಪರಾಶರಾತ್**
ಸುಷುವೇ ಸತ್ಯವತೀ ಕಿಲಾತ್ರ ಯಮ್ ॥೧೮॥

ಅ.—ಸತ್ಯವತೀ = ವಸುರಾಜಪುತ್ರಿಯಾದ ಸತ್ಯವತೀದೇವಿಯು, ವಿಧಿನಾ= ಬ್ರಹ್ಮದೇವರಿಂದ, ಅನುಸ್ಮೃತಂ = ಬೇಡಲ್ಪಟ್ಟ, ಯಂ=ಯಾವ ವೇದವ್ಯಾಸ ರನ್ನು, ಅತ್ರ = ಈ ಭೂಮಿಯಲ್ಲಿ, ಪರಾಶರಾತ್ = ಪರಾಶರಮುನಿಯಿಂದ, ಸುಷುವೇ ಕಿಲ= ಹಡೆದಳಷ್ಟೆ, ಸಃ ಏಷಃ = ಆ ಸತ್ಯವತೀಪುತ್ರರಾದ ವ್ಯಾಸರು ಅಗಣಯ್ಯ(ಣೇಯ) = ಎಣಿಸಲಸಾಧ್ಯವಾದ, ಗುಣ = ಗುಣಗಳಿಗೆ, ಅರ್ಣವಃ ಸಮುದ್ರದಂತಿರುವ, ಅಮಲಃ = ದೋಷವಿಲ್ಲದ, ಕೇವಲಂ = ಸಾಕ್ಷಾತ್, ನಾರಾಯಣಃ ಹಿ = ನಾರಾಯಣನೇ.

ತಾ.—ಬ್ರಹ್ಮದೇವರು ಪ್ರಾರ್ಥನೆ ಮಾಡಿದಾಗ ಪರಾಶರಮಹರ್ಷಿಯ ಸಂಪರ್ಕದಿಂದ ಸತ್ಯವತೀದೇವಿಯಲ್ಲಿ ಈ ವೇದವ್ಯಾಸರು ಅವತರಿಸಿದರು. ಅಗಣಿತವಾದ ಜ್ಞಾನಾನಂದಾದಿಗುಣಗಳಿಂದ ಸಮುದ್ರದಂತಿರುವ ನಿರ್ದೋಷ ರಾದ ಸಾಕ್ಷಾತ್ ಶ್ರೀಮನ್ನಾರಾಯಣದೇವರೇ ಈ ವೇದವ್ಯಾಸರು. ನಾರಾಯಣ ನಿಗೂ ವೇದವ್ಯಾಸರಿಗೂ ಯಾವ ಭೇದವೂ ಇಲ್ಲ. ಗೌತಮರ ಶಾಪದಿಂದ ಲೋಕದಲ್ಲಿ ಜ್ಞಾನನಾಶವುಂಟಾದಾಗ ಬ್ರಹ್ಮಾದಿದೇವತೆಗಳ ಪ್ರಾರ್ಥನೆಯಿಂದ ಪುನಃ ಜ್ಞಾನಪ್ರತಿಷ್ಠಾಪನಕ್ಕಾಗಿ ದಾಶರಾಜನ ಮನೆಯಲ್ಲಿ ಬೆಳೆದ ವಸುರಾಜ ಪುತ್ರಿಯಾದ ಸತ್ಯವತಿಯಲ್ಲಿ ಪರಾಶರರ ಮಗನಾಗಿ ನಾರಾಯಣದೇವರೇ ವೇದ ವ್ಯಾಸರೆಂಬ ಹೆಸರಿನಿಂದ ಅವತರಿಸಿದರು. ಆ ವೇದವ್ಯಾಸದೇವರೇ ಇವರು.

Rarest Archiver

ವಿ.—ಗಣಯಿತುಂ ಅಶಕ್ಯಾಃ ಅಗಣಯ್ಯಾಃ (ಅಗಣೇಯಾಃ) ಅಗಣಯ್ಯಾಶ್ಚ ತೇ ಗುಣಾಶ್ಚ, ಅಗಣಯ್ಯಗುಣಾನಾಂ ಅರ್ಣವಃ ಇವ, ಅಗಣಯ್ಯಗುಣಾರ್ಣವಃ, ನ ವಿದ್ಯತೇ ಮಲಂ ಯಸ್ಯ ಸಃ ;

ಕ್ರಿ.—ಸುಷುವೇ ಸುಷುವಾತೇ ಸುಷುವಿರೇ, ಸುಷುವಿಷೇ ಸುಷುವಾಥೇ ಸುಷುವಿಢ್ವೇ ಸುಷುವಿಧ್ವೇ, ಸುಷುವೇ ಸುಷುವಿವಹೇ ಸುಷುವಿಮಹೇ, ಷೂಙ್ (ಸೂ)ಪ್ರಾಣಿಪ್ರಸವೇ, ಸಕ.। ವೇಟ್.। ಆತ್ಮನೇ.। to bring forth a child. ಲಿಟ್.

ಅವ.—ಶ್ರೀವೇದವ್ಯಾಸರು ಮಾಡಿದ ವೇದವಿಭಾಗವೆಂಬ ಮಹಿಮೆಯನ್ನು ವರ್ಣಿಸುತ್ತಾರೆ—

ಧವಲೇಽಸ್ಯ ಮನಃಪಯೋನಿಧೌ
ಸದನುಕ್ರೋಶಗಿರೀಂದ್ರಲೋಲಿತೇ ।
ಪ್ರಕಟೀಭವತಿ ಸ್ಮ ಸುಂದರೀ
ದಯಿತಾ ದೈತ್ಯರಿಪೋಸ್ತ್ರಯೀಮಯೀ ॥೧೯॥

ಅ.—ಧವಲೇ = ಪರಿಶುದ್ಧವಾದ, (ಬೆಳ್ಳಗಿರುವ) ಅಸ್ಯ = ಈ ವೇದವ್ಯಾಸರ, ಮನಃಪಯೋನಿಧೌ = ಮನಸ್ಸೆಂಬ ಕ್ಷೀರಸಮುದ್ರವು, ಸತ್ = ಸಜ್ಜನರಲ್ಲಿರುವ, ಅನುಕ್ರೋಶ = ದಯೆಯೆಂಬ, ಗಿರೀಂದ್ರ = ಮಂದರಪರ್ವತದಿಂದ, ಲೋಲಿತೇ (ಸತಿ) = ಕಡೆಯಲ್ಪಟ್ಟಾಗ, ದೈತ್ಯರಿಪೋಃ = ಕಲ್ಯಾದಿದೈತ್ಯರ ಶತ್ರುವಾದ, ವೇದವ್ಯಾಸರಿಗೆ, ದಯಿತಾ = ಪ್ರಿಯಳಾದ, ತ್ರಯೀಮಯೀ = ಋಗ್-ಯಜುಸ್‌ಸಾಮರೂಪಳಾದ, ಸುಂದರೀ=ಸುಂದರಿಯಾದ ಲಕ್ಷ್ಮಿಯು, ಪ್ರಕಟೀ-ಭವತಿ ಸ್ಮ = ಪ್ರಾದುರ್ಭವಿಸಿದಳು.

ತಾ.—ಶ್ರೀವೇದವ್ಯಾಸರು ಸಜ್ಜನರ ಮೇಲಿನ ದಯೆಯಿಂದ, ಅವರ ದುಃಖವನ್ನು ಪರಿಹರಿಸಲು ಬಯಸಿದರು. ಅವರು ತಮಗೆ ಅತ್ಯಂತಪ್ರಿಯವಾದ ವೇದಗಳನ್ನು ವಿಭಾಗಿಸಿ ಸಜ್ಜನರಿಗೆ ಉಪದೇಶ ಮಾಡಿದರು. ದೇವತೆಗಳೂ ದಾನವರೂ ಸೇರಿ ಮಂದರಪರ್ವತದಿಂದ ಕ್ಷೀರಸಮುದ್ರವನ್ನು ಕಡೆದಾಗ ಲಕ್ಷ್ಮೀದೇವಿಯು ಆವಿರ್ಭವಿಸಿದಂತೆ ವೇದವ್ಯಾಸರ ಮನಸ್ಸೆಂಬ ಕ್ಷೀರಸಮುದ್ರವು

Rarest Archiver

ಸಜ್ಜನರ ಮೇಲಿನ ದಯೆಯೆಂಬ ಮಂದರಪರ್ವತದಿಂದ ಕಡೆಯಲ್ಪಟ್ಟಾಗ ವೇದ ತ್ರಯಿಯು ಲಕ್ಷ್ಮಿಯಂತೆ ಆವಿರ್ಭಾವಹೊಂದಿತು. ಮರೆಯಾದ ಋಗಾದಿವೇದ ಗಳನ್ನು ವೇದವ್ಯಾಸರು ಪ್ರಕಟಗೊಳಿಸಿದರು ಎಂದು ಭಾವ.

ವಿ.—ಮನ ಏವ ಪಯೋನಿಧಿಃ ತಸ್ಮಿನ್, ಸತ್ಸು ಅನುಕ್ರೋಶಃ, ಸದನುಕ್ರೋಶ ಏವ ಗಿರೀಣಾಂ ಇಂದ್ರಃ, ಸದನುಕ್ರೋಶಗಿರೀಂದ್ರೇಣ ಲೋಲಿತಃ ತಸ್ಮಿನ್, ಅಪ್ರಕಟಾ ಪ್ರಕಟಾ ಸಂಪದ್ಯಮಾನಾ ಭವತಿ ಸ್ಮ ಪ್ರಕಟೀಭವತಿಸ್ಮ, ದೈತ್ಯಾನಾಂ ರಿಪುಃ ತಸ್ಯ, ತ್ರಯ್ಯೇವ ತ್ರಯೀಮಯೀ.

ಕ್ರಿ.—(ಪ್ರಕಟೀ) ಭವತಿ. ಸರ್ಗ ೬ ಶ್ಲೋ ೧೮ ನೋಡಿರಿ.

ಅನ.—ವೇದತ್ರಯೀ ಎಂಬ ಲಕ್ಷ್ಮಿಯಂತೆಯೇ ಪುರಾಣಭಾರತಬ್ರಹ್ಮ ಸೂತ್ರಗಳೂ ವೇದವ್ಯಾಸರ ಮನಸ್ಸೆಂಬ ಸಮುದ್ರದಿಂದ ಹುಟ್ಟಿದುವು—

ಇತ ಏವ ಪುರಾಣಗೌರಗೌ
ಸಮಹಾಭಾರತಪಾರಿಜಾತಕೇ ।
ಸತಿ ಜಾತವತಿ ವ್ಯಜಾಯತ
ಪ್ರವರಂ ಸೂತ್ರಗಣಾಮೃತಂ ಸ್ವಯಂ ॥೨೦॥

ಅ.—ಇತಃ ಏವ = ಈ ವೇದವ್ಯಾಸರ ಮನಸ್ಸಮುದ್ರದಿಂದಲೇ, ಸಮಹಾಭಾರತಪಾರಿಜಾತಕೇ = ಮಹಾಭಾರತವೆಂಬ ಪಾರಿಜಾತವೃಕ್ಷಸಹಿತ ವಾದ, ಪುರಾಣಗೌರಗೌ = ಹದಿನೆಂಟುಪುರಾಣಗಳೆಂಬ ಚಂದ್ರನು, ಜಾತವತಿ ಸತಿ = ಹುಟ್ಟಲಾಗಿ, ಪ್ರವರಂ = ಉತ್ತಮವಾದ, (ನಿರ್ಣಾಯಕಶಾಸ್ತ್ರಗಳಲ್ಲಿ ಶ್ರೇಷ್ಠವಾದ) ಸ್ವಯಂ = ಸಾಕ್ಷಾತ್ತಾದ, ಸೂತ್ರಗಣಾಮೃತಂ = ಬ್ರಹ್ಮಸೂತ್ರ ಗಳ ಸಮೂಹವೆಂಬ ಅಮೃತವು, ವ್ಯಜಾಯತ = ಹುಟ್ಟಿತು.

ತಾ.—ಕ್ಷೀರಸಮುದ್ರದಿಂದ ಪಾರಿಜಾತವೃಕ್ಷ ಮತ್ತು ಚಂದ್ರನು ಹುಟ್ಟಿದ ನಂತರ ಅಮೃತವು ಹುಟ್ಟಿದಂತೆ ಈ ವೇದವ್ಯಾಸರ ಮನಸ್ಸೆಂಬ ಕ್ಷೀರಸಮುದ್ರ ದಿಂದ ಮಹಾಭಾರತವೆಂಬ ಪಾರಿಜಾತವೃಕ್ಷವೂ, ಹದಿನೆಂಟು ಪುರಾಣಗಳೆಂಬ ಚಂದ್ರನೂ, ಬ್ರಹ್ಮಸೂತ್ರಸಮೂಹವೆಂಬ ಅಮೃತವೂ ಹುಟ್ಟಿದುವು. ವೇದ

Rarest Archiver

ವ್ಯಾಸರು ಮಹಾಭಾರತ ಅಷ್ಟಾದಶಪುರಾಣಗಳು ಮತ್ತು ಬ್ರಹ್ಮಮೀಮಾಂಸಾ ಶಾಸ್ತ್ರವನ್ನು ರಚಿಸಿದರು. ಎಲ್ಲಾ ಇಷ್ಟಗಳನ್ನು ಕೊಡುವುದರಿಂದ ಮಹಾ ಭಾರತಕ್ಕೆ ಪಾರಿಜಾತಸಾಮ್ಯವನ್ನೂ, ಪದಾರ್ಥಗಳನ್ನು ಚೆನ್ನಾಗಿ ತೋರಿಸುವುದ ರಿಂದ ಪುರಾಣಗಳಿಗೆ ಚಂದ್ರನ ಸಾಮ್ಯವನ್ನೂ, ಮುಪ್ಪುಮರಣಗಳನ್ನು ಪರಿಹರಿಸಿ ಮೋಕ್ಷವನ್ನು ಕೊಡುವುದರಿಂದ ಬ್ರಹ್ಮಸೂತ್ರಗಳಿಗೆ ಅಮೃತದ ಸಾಮ್ಯವನ್ನೂ ಕೊಟ್ಟಿದ್ದಾರೆಂದು ತಿಳಿಯಬೇಕು.

ವಿ.—ಗೌರಾಃ ಗಾವಃ ಯಸ್ಯ ಸಃ, ಪುರಾಣಾನ್ಯೇವ ಗೌರಗುಃ ತಸ್ಮಿನ್, ಮಹಾಭಾರತಮೇವ ಪಾರಿಜಾತಃ ಮಹಾಭಾರತಪಾರಿಜಾತಃ, ತೇನ ಸಹ ವರ್ತತೇ ಇತಿ ಸಮಹಾಭಾರತಪಾರಿಜಾತಕಃ ತಸ್ಮಿನ್, ಸೂತ್ರಾಣಾಂ ಗಣಃ, ಸೂತ್ರಗಣ ಏವ ಅಮೃತಂ.

ಕ್ರಿ.—ವಿ + ಅಜಾಯತ. ಸರ್ಗ ೫, ಶ್ಲೋಕ ೧೨. ನೋಡಿರಿ.

ಅವ.—ಈ ವೇದವ್ಯಾಸರು ಪಾಂಡವರೇ ಮೊದಲಾದ ಸಜ್ಜನರ ಉದ್ಧಾರಕ್ಕಾಗಿ ಬಹುಕಾಲ ಭೂಮಿಯಲ್ಲಿ ಸಂಚರಿಸುತ್ತಿದ್ದರು.

ನಿರವಗ್ರಹಮೂರ್ವನುಗ್ರಹಂ
ವಿದಧತ್ ಪಾಂಡುಸುತಾದಿಸಜ್ಜನೇ ।
ಅವನಾವವನಾಯ ಸಂವಿದಾಂ
ಸುಚಿರಾಯೈಷ ಚಚಾರ ಚಾರುಗೀಃ ॥೨೧॥

ಅ.—ಚಾರುಗೀಃ = ಮನೋಹರವಾದ ಮಾತುಳ್ಳ, ಏಷಃ = ಈ ವೇದ ವ್ಯಾಸರು, ಪಾಂಡುಸುತಾದಿಸಜ್ಜನೇ = ಪಾಂಡವರೇ ಮೊದಲಾದ ಸಾತ್ತ್ವಿಕ ಜನರಲ್ಲಿ, ನಿರವಗ್ರಹಂ = ತಡೆಯಿಲ್ಲದ (ಪೂರ್ಣವಾದ) ಉರ್ವನುಗ್ರಹಂ = ಹೆಚ್ಚಾದ ಅನುಗ್ರಹವನ್ನು, ವಿದಧತ್ = ಮಾಡುತ್ತಾ, ಸಂವಿದಾಂ = ತತ್ತ್ವ ಜ್ಞಾನಗಳ, ಅವನಾಯ = ರಕ್ಷಣೆಗೋಸ್ಕರ, ಅವನೌ = ಭೂಮಿಯಲ್ಲಿ, ಸುಚಿರಾಯ = ಬಹಳಕಾಲದವರೆಗೆ, ಚಚಾರ = ಸಂಚರಿಸಿದರು.

ತಾ.—ಈ ವೇದವ್ಯಾಸರು ಮನೋಹರವಾದ ಮಾತುಳ್ಳವರು, ಇವರು ಪಾಂಡವರೇ ಮೊದಲಾದ ಸಜ್ಜನರಲ್ಲಿ ಹೆಚ್ಚಾದ ಅನುಗ್ರಹವನ್ನು ಮಾಡುತ್ತಾ,

Rarest Archiver

ತತ್ತ್ವಜ್ಞಾನವನ್ನೂ, ತತ್ತ್ವಜ್ಞಾನಕ್ಕೆ ವಿಷಯವಾದ ಪ್ರಮೇಯಗಳನ್ನೂ, ತತ್ತ್ವಜ್ಞಾನಿಗಳನ್ನೂ ಕಾಪಾಡುತ್ತಾ ಬಹಳಕಾಲದವರೆಗೆ ಭರತಖಂಡದಲ್ಲಿ ಸಂಚರಿಸುತ್ತಿದ್ದರು.

ವಿ.—ನಿಷ್ಕ್ರಾಂತಃ ಅವಗ್ರಹಾತ್ ತಂ, ಉರುಶ್ಚಾಸೌ ಅನುಗ್ರಹಶ್ಚ ತಂ, ಪಾಂಡೋಃ ಸುತಾಃ, ಪಾಂಡುಸುತಾಃ ಆದಯಃ ಯಸ್ಯ ಸಃ ಪಾಂಡು-ಸುತಾದಿಶ್ಚಾಸೌ ಸಂಶ್ಚಾಸೌ ಜನಶ್ಚ ಪಾಂಡುಸುತಾದಿಸಜ್ಜನಃ, ತಸ್ಮಿನ್, ಚಾರುಃ ಗೀಃ ಯಸ್ಯ ಸಃ ಚಾರುಗೀಃ.

ಕ್ರಿ.—ಚಚಾರ ಚೇರತುಃ ಚೇರುಃ, ಚೇರಿಥ ಚೇರಥುಃ ಚೇರ, ಚಚಾರ ಚಚರ ಚೇರಿವ ಚೇರಿಮ. ಚರ ಗತೌ ಭಕ್ಷಣೇ ಚ। ಸೇಟ್ । ಪರ. । to go, to walk, to graze, to eat, ಲಿಟ್.

ಅವ.—ಈಗ ವೇದವ್ಯಾಸರು ಎಲ್ಲಾ ಜನರ ಕಣ್ಣಿಗೆ ಏಕೆ ಕಾಣಿಸುವುದಿಲ್ಲ?

ಅಧುನಾ ಕಲಿಕಾಲವೃತ್ತಯೇ
ಸವಿತೇವ ಕ್ಷಣದಾನುವೃತ್ತಯೇ।
ಜನದೃಗ್ವಿಷಯತ್ವಮತ್ಯಜದ್
ಭಗವಾನಾಶ್ರಮಮಾವಸನ್ನಿಮಮ್ ॥೨೨॥

ಅ. ಅ—ಅಧುನಾ = ಈಗ, ಇಮಂ ಆಶ್ರಮಂ = ಈ ಬದರಿಕಾಶ್ರಮದಲ್ಲಿ, ಆವಸನ್ = ವಾಸಮಾಡುತ್ತಿರುವ, ಭಗವಾನ್ = ಪೂರ್ಣಷಡ್ಗುಣೈಶ್ವರ್ಯ ಸಂಪನ್ನರಾದ ಶ್ರೀವೇದವ್ಯಾಸರು, ಕಲಿಕಾಲ = ಕಲಿಯುಗದ, ವೃತ್ತಯೇ = ಪ್ರವೃತ್ತಿಗೋಸ್ಕರ, ಕ್ಷಣದಾನುವೃತ್ತಯೇ = ರಾತ್ರಿಯ ನಿರಂತರವುಂದುವರಿಯುವಿಕೆಗಾಗಿ, ಸವಿತಾ ಇವ = ಸೂರ್ಯನಂತೆ, ಜನದೃಗ್ವಿಷಯತ್ವಂ = ಜನರ ಕಣ್ಣಿಗೆ ಗೋಚರವಾಗುವಿಕೆಯನ್ನು, ಅತ್ಯಜತ್ = ಬಿಟ್ಟರು.

ತಾ.—ದೇವತೆಗಳೂ, ಋಷಿಗಳೂ ಭೂಲೋಕದಲ್ಲಿ ಸಂಚರಿಸುತ್ತಿದ್ದರೆ ಇಲ್ಲಿ ಕಲಿಯುಗಧರ್ಮಗಳು ನಡೆಯಲಾರವು ಎಂದು ಶಾಸ್ತ್ರವಿದೆ. ಆದುದರಿಂದ ಈಗ ಈ ವೇದವ್ಯಾಸರು ಈ ಮಹಾಬದರಿಕಾಶ್ರಮದಲ್ಲಿ ಸಾಧಾರಣಜನರ

Rarest Archiver

ಕಣ್ಣಿಗೆ ಗೋಚರರಾಗದೇ ವಾಸಿಸುತ್ತಿದ್ದಾರೆ. ರಾತ್ರಿಯು ಬರುವುದರ ಸಲುವಾಗಿ ಸೂರ್ಯನು ಹೇಗೆ ಜನರಿಂದ ಕಣ್ಮರೆಯಾಗುತ್ತಾನೋ ಅದರಂತೆ ತಾನು ಭೂಮಿಯಲ್ಲಿದ್ದರೆ ಕಲಿಯುಗವು ಹೋಗಿ ಕೃತಯುಗವೇ ಆದೀತೆಂದು ಯುಗ ಪ್ರವರ್ತಕರಾದ ಜಗದ್ಗುರು ಶ್ರೀವೇದವ್ಯಾಸರು ಕಣ್ಮರೆಯಾಗಿ ಇಲ್ಲಿ ವಾಸಿಸುತ್ತಿದ್ದಾರೆ.

ವಿ.—ಕಲೇಃ ಕಾಲಃ, ಕಲಿಕಾಲಸ್ಯ ವೃತ್ತಿಃ ತಸ್ಯೈ, ಕ್ಷಣದಾಯಾಃ ಅನುವೃತ್ತಿಃ, ತಸ್ಯೈ, ಜನಾನಾಂ ದೃಶಃ, ವಿಷಯಸ್ಯ ಭಾವಃ ವಿಷಯತ್ವಂ ಜನದೃಶಾಂ ವಿಷಯತ್ವಂ ಜನದೃಗ್ವಿಷಯತ್ವಂ.

ಕ್ರಿ.—ಅತ್ಯಜತ್ ಅತ್ಯಜತಾಂ ಅತ್ಯಜನ್, ಅತ್ಯಜಃ ಅತ್ಯಜತಂ ಅತ್ಯಜತ, ಅತ್ಯಜಮ್ ಅತ್ಯಜಾವ ಅತ್ಯಜಾಮ. ತ್ಯಜ ಹಾನೌ, ಸಕ. । ಅನಿ. । ಪರ. । to abandon, to leave, to let go, ಭೂತೇ ಲಙ್.

ಅವ.—ಶ್ರೀವೇದವ್ಯಾಸದೇವರ ಸುಂದರಮೂರ್ತಿಯನ್ನು ಆಚಾರ್ಯರು ಮನಸ್ಸಿನಿಂದಲೇ ವರ್ಣಿಸಿ ಧ್ಯಾನಿಸಿದರು—

ತದಿದಂ ವಪುರಸ್ಯ ದೃಶ್ಯತೇ
ದಲಿತೇಂದೀವರಸುಂದರದ್ಯುತಿ ।
ಪರಮಾಜಿನಯೋಗಪೀಠಗಂ
ಮಮ ಚೇತೋನಯನಾಭಿನಂದನಮ್ ॥೨೩॥

ಅ.ಅ—ದಲಿತ = ಅರಳಿದ, ಇಂದೀವರ = ಕನ್ನೈದಿಲೆ ಹೂವಿನಂತೆ, ಸುಂದರ = ಮನೋಹರವಾದ, ದ್ಯುತಿ = ಕಾಂತಿಯುಳ್ಳ, ಪರಮಾಜಿನ = ಉತ್ತಮವಾದ ಕೃಷ್ಣಾಜಿನವೆಂಬ, ಯೋಗಪೀಠಗಂ = ಯೋಗಾಸನದಲ್ಲಿರುವ, ಮಮ = ನನ್ನ, ಚೇತಃ = ಮನಸ್ಸು, ನಯನ = ಕಣ್ಣುಗಳು, ಇವುಗಳನ್ನು, ಅಭಿನಂದನಂ = ಸಂತೋಷಗೊಳಿಸುವ, ಅಸ್ಯ = ಈ ವ್ಯಾಸರ, ತತ್ = ಆ ಸುಪ್ರಸಿದ್ಧವಾದ, ಇದಂ = ಎದುರಿನಲ್ಲಿರುವ, ವಪುಃ = ದೇಹವು, (ಮಯಾ = ನನ್ನಿಂದ) ದೃಶ್ಯತೇ = ನೋಡಲ್ಪಡುತ್ತದೆ.

ತಾ.—ಎದುರಿಗೆ ಕಾಣಿಸುತ್ತಿರುವ ಶ್ರೀವೇದವ್ಯಾಸದೇವರ ಈ ಅದ್ಭುತ

Rarest Archiver

ವಾದ ಮೂರ್ತಿಯು ಅರಳಿದ ಕನ್ನೈದಿಲೆ ಹೂವಿನಂತೆ ಸುಂದರಕಾಂತಿಯುಳ್ಳದ್ದಾಗಿದೆ. ನನ್ನ ಮನಸ್ಸಿಗೂ ಕಣ್ಣುಗಳಿಗೂ ತುಂಬಾ ಆನಂದವನ್ನುಂಟುಮಾಡುತ್ತಿದೆ. ಉತ್ತಮವಾದ ಕೃಷ್ಣಾಜಿನವೆಂಬ ಧ್ಯಾನಯೋಗ್ಯವಾದ ಪೀಠದಲ್ಲಿ ಕುಳಿತಿರುವ ಶ್ರೀವೇದವ್ಯಾಸದೇವರ ಪ್ರಸಿದ್ಧವಾದ ಈ ಜ್ಞಾನಾನಂದಮಯವಾದ ರೂಪವನ್ನು ನಾನು ನೋಡುತ್ತಿದ್ದೇನೆ. ಕಲಿದೋಷದಿಂದ ಇತರ ಜನರ ಕಣ್ಣಿಗೆ ಈ ರೂಪವು ಕಾಣಿಸಲಾರದಾದರೂ ನಾನು ಈ ದುರ್ಲಭರೂಪವನ್ನು ಮನದಣಿಯುವಂತೆ ನೋಡುತ್ತಿದ್ದೇನೆ. ಈ ದುರ್ಲಭದರ್ಶನದಿಂದ ನಾನು ಧನ್ಯನಾದೆನೆಂದು ಆಚಾರ್ಯರು ಆನಂದಮಗ್ನರಾದರು.

ವಿ.—ದಲಿತಂ ಚ ತತ್ ಇಂದೀವರಂ ಚ, ದಲಿತೇಂದೀವರವತ್ ಸುಂದರೀ, ದಲಿತೇಂದೀವರಸುಂದರೀ ದ್ಯುತಿಃ ಯಸ್ಯ ತತ್, ಪರಮಂ ಚ ತತ್ ಅಜಿನಂ ಚ, ಯೋಗಸ್ಯ ಪೀಠಂ, ಪರಮಾಜಿನಂ ಚ ತತ್ ಯೋಗಪೀಠಂ ಚ, ಪರಮಾಜಿನಯೋಗಪೀಠಂ ಗಚ್ಛತೀತಿ ಪರಮಾಜಿನಯೋಗಪೀಠಗಂ, ಚೇತಶ್ಚ ನಯನೇ ಚ, ಚೇತೋನಯನಾನಿ ಅಭಿನಂದಯತೀತಿ ಚೇತೋನಯನಾಭಿನಂದನಂ,

ಕ್ರಿ.—ದೃಶ್ಯತೇ, ಸರ್ಗ ೫, ಶ್ಲೋಕ ೧೮ ನೋಡಿರಿ.

ಅವ.—ಮತ್ತೂ ಆಚಾರ್ಯರು ಮನಸ್ಸಿನಲ್ಲಿಯೇ ಶ್ರೀವೇದವ್ಯಾಸರನ್ನು ವರ್ಣಿಸಿದರು—

ಅಗಣಯ್ಯ (ಅಗಣೇಯ) ಗುಣೈಃ ಸುಪೂರಿತಂ
ಪರಿಪೂರ್ಣಾಗಣಿತಾತ್ಮಸದ್ಗುಣೈಃ ।
ಇದಮಸ್ತಸಮಸ್ತದೂಷಣಂ
ಸಚಿದಾನಂದಮಯಂ ಹಿ ಕೇವಲಂ ॥೨೪॥

ಅ.ಅ—ಇದಂ (ವಪುಃ)=ಎದುರಿಗೆ ಕಾಣಿಸುತ್ತಿರುವ ಶ್ರೀವೇದವ್ಯಾಸರ ಈ ದೇಹವು, ಅಗಣಯ್ಯ (ಅಗಣೇಯ)=ಎಣಿಸಲುಸಾಧ್ಯವಾಗದ, ಗುಣೈಃ=ಗುಣಗಳುಳ್ಳ, ಪರಿಪೂರ್ಣ=ಪ್ರತ್ಯೇಕವಾಗಿ ಪೂರ್ಣವಾದ, ಅಗಣಿತ=ಲೆಕ್ಕವಿಲ್ಲದ, ಆತ್ಮ=ಸ್ವರೂಪಭೂತವಾದ, ಸತ್ = ಉತ್ಪತ್ತಿನಾಶಾದಿದೋಷರಹಿತವಾದ,

Rarest Archiver

ಗುಣೈಃ = ಜ್ಞಾನ, ಆನಂದ ಮೊದಲಾದ ಕಲ್ಯಾಣಧರ್ಮಗಳಿಂದ, ಸುಪೂರಿತಂ = ಚೆನ್ನಾಗಿ ತುಂಬಿದ, ಅಸ್ತ = ನಿರಸ್ತವಾದ, ಸಮಸ್ತದೂಷಣಂ = ಎಲ್ಲಾ ಶರೀರದೋಷಗಳುಳ್ಳ, ಕೇವಲಂ = ಜಡಾವಿಶ್ರವಾಗಿ, ಸಚಿದಾನಂದಮಯಂ = ಜ್ಞಾನದಿಂದ ಸಹಿತವಾದ ಆನಂದವೇ ಸ್ವರೂಪವಾಗಿ ಉಳ್ಳದ್ದಾಗಿ, ಹಿ = ಪ್ರಸಿದ್ಧವಾಗಿ (ಮಯಾ ದೃಶ್ಯತೇ = ನನ್ನಿಂದ ನೋಡಲ್ಪಡುತ್ತದೆ.)

ತಾ.—ನಾನು ಶ್ರೀವೇದವ್ಯಾಸದೇವರ ಸ್ವರೂಪವೇ ಆಗಿರುವ ದೇಹವನ್ನು ಎದುರಿನಲ್ಲಿಯೇ ನೋಡುತ್ತಿದ್ದೇನೆ. ಇದು ಪ್ರತ್ಯೇಕವಾಗಿಯೂ ಸತ್ಯವಾದ, ಉತ್ಪತ್ತಿನಾಶಾದಿದೋಷಗಳಿಲ್ಲದ, ಅನಂತವಾದ ನಿರತಿಶಯವಾದ ಜ್ಞಾನ ಆನಂದ ಮುಂತಾದ ಕಲ್ಯಾಣಧರ್ಮಗಳಿಂದ ಎಲ್ಲಾ ರೀತಿಯಿಂದಲೂ ಅತ್ಯಂತ ಪೂರ್ಣವಾಗಿದೆ. ಈ ಒಂದೊಂದು ಗುಣಗಳೂ ಲೆಕ್ಕಮಾಡಲು ಸಾಧ್ಯವಾಗದ ಗುಣಗಳಿಂದ ಕೂಡಿಕೊಂಡಿವೆ. ಜ್ಞಾನವು ಭೂತಭವಿಷ್ಯತ್‌ವರ್ತಮಾನಕಾಲದ ವಿಷಯಗಳನ್ನು ಒಳಗೊಂಡಿದೆ. ಆನಂದವು ದುಃಖಾವಿಶ್ರಿತವಾಗಿ ಅತ್ಯಂತ ಉತ್ಕೃಷ್ಟವಾಗಿದೆ. ಶಕ್ತಿಯು ನಿರತಿಶಯವಾಗಿದೆ. ಪರಮಾತ್ಮನ ಸ್ವರೂಪವೇ ಆಗಿರುವ ಈ ಶರೀರದಲ್ಲಿ ಸಾಮುದ್ರಿಕಶಾಸ್ತ್ರೋಕ್ತವಾದ ಉತ್ತಮೋತ್ತಮವಾದ ಶ್ರೀಲಕ್ಷಣಗಳೂ ಇವೆ. ದೋಷಲೇಶವೂ ಇಲ್ಲ. ಸಮೀಚೀನವಾದ ಜ್ಞಾನ ಆನಂದಗಳೇ ಈ ದೇಹವು. ಇಂತಹ ಜಡಸಂಪರ್ಕಲೇಶವೂ ಇಲ್ಲದ ಅದ್ಭುತ ಚಿನ್ಮಯದೇಹವನ್ನು ನಾನು ಎದುರಿನಲ್ಲಿಯೇ ನೋಡುತ್ತಿದ್ದೇನೆ.

ವಿ.—ಗಣಯಿತುಮಶಕ್ಯಾಃ, ಅಗಣಯ್ಯಾಃ ಗುಣಾಃ ಯೇಷಾಂ ತೇ, ಅಗಣಯ್ಯಗುಣೈಃ ಸುಷ್ಠು ಪೂರಿತಂ, ಸಂತಶ್ಚ ತೇ ಗುಣಾಶ್ಚ, ಆತ್ಮಾನಶ್ಚ ತೇ ಸದ್ಗುಣಾಶ್ಚ, ಅಗಣಿತಾಶ್ಚ ತೇ ಆತ್ಮಸದ್ಗುಣಾಶ್ಚ, ಪರಿಪೂರ್ಣಾಶ್ಚ ತೇ ಆತ್ಮ-ಸದ್ಗುಣಾಶ್ಚ ತೈಃ, ಅಸ್ತಾನಿ ಸಮಸ್ತಾನಿ ದೂಷಣಾನಿ ಯಸ್ಮಾತ್ ತತ್, ಚಿತಾ ಸಹ ವರ್ತತೇ ಇತಿ, ಸಚಿಚ್ಚಾಸೌ ಆನಂದಶ್ಚ ಸಚಿದಾನಂದ ಏವ ಸಚಿದಾನಂದ-ಮಯಂ, (ಇದಂ ವಪುಃ ಅಹಂ ಪಶ್ಯಾಮಿ ಕರ್ತರಿ)

ಅವ.—ಈ ರೀತಿ ಶ್ರೀಮಧ್ವಾಚಾರ್ಯರು ಸಾಮಾನ್ಯವಾಗಿ ವ್ಯಾಸರ ದೇಹವನ್ನು ವರ್ಣಿಸಿದ ಮೇಲೆ ಪಾದವನ್ನಾರಂಭಿಸಿ ಶಿರಸ್ಸಿನವರೆಗೂ ವರ್ಣಿಸುತ್ತಾರೆ—

Rarest Archiver

ಕಮಲಾಕಮಲಾಸನಾನಿಲೈ
ರ್ವಿಹಗಾಹೀಂದ್ರಶಿವೇಂದ್ರಪೂರ್ವಕೈಃ।
ಪದಪದ್ಮರಜೋಽಸ್ಯ ಧಾರಿತಂ
ಶಿರಸಾ ಹಂತ ವಹಾಮ್ಯಹಂ ಮುಹುಃ ॥೨೫॥

ಅ.ಅ.—ವಿಹಗ=ಪಕ್ಷಿಗಳು, ಅಹಿ=ನಾಗಗಳು, ಇವುಗಳ, ಇಂದ್ರ= ಒಡೆಯರಾದ ಗರುಡಶೇಷರು, ಶಿವ=ರುದ್ರದೇವರು, ಇಂದ್ರ=ದೇವೇಂದ್ರನು, ಇವರೇ, ಪೂರ್ವಕೈಃ=ಮೊದಲಾಗಿ ಉಳ್ಳ, ಕಮಲಾ=ಲಕ್ಷ್ಮೀದೇವಿಯು, ಕಮಲಾಸನ = ಬ್ರಹ್ಮದೇವರು, ಅನಿಲೈಃ=ಮುಖ್ಯಪ್ರಾಣದೇವರು ಇವರು ಗಳಿಂದ, ಶಿರಸಾ=ತಲೆಯಿಂದ, ಧಾರಿತಂ=ಧರಿಸಲ್ಪಟ್ಟ, ಅಸ್ಯ=ವೇದವ್ಯಾಸರ, ಪದಪದ್ಮರಜಃ=ತಾವರೆಯಂತಿರುವ ಪಾದಗಳ ಧೂಳಿಯನ್ನು, ಅಹಂ=ನಾನು, (ಶಿರಸಾ=ತಲೆಯಿಂದ) ಮುಹುಃ=ಮತ್ತೂ ಮತ್ತೂ, ವಹಾಮಿ=ಧರಿಸು ತ್ತೇನೆ. ಹಂತ !=ಸಂತೋಷವು !

ತಾ.—ಲಕ್ಷ್ಮೀದೇವಿಯು ಬ್ರಹ್ಮದೇವರು ಮುಖ್ಯಪ್ರಾಣದೇವರು ಗರುಡ ಶೇಷ ರುದ್ರ ಇಂದ್ರನೇ ಮೊದಲಾದ ಸಮಸ್ತ ದೇವತೆಗಳೂ ಈ ವೇದವ್ಯಾಸ ದೇವರ ಪಾದಕಮಲದ ಧೂಳಿಯನ್ನು ಶಿರಸ್ಸಿನಲ್ಲಿ ಧರಿಸುತ್ತಾರೆ, ಅಂತಹ ಈ ಪಾದಧೂಳಿಯನ್ನು, ನಾನು ಈ ಮರುಕ್ಷಣದಲ್ಲಿ ಮತ್ತೂ ಮತ್ತೂ ಶಿರಸ್ಸಿನಲ್ಲಿ ಧರಿಸಲಿರುವೆನು. ಆಹಾ ! ಇದೆಂತಹ ಭಾಗ್ಯ ! ಈ ವ್ಯಾಸದೇವರ ಪಾದಧೂಳಿ ಯನ್ನು ಲಕ್ಷ್ಮೀಮೊದಲಾದವರೆಲ್ಲರೂ ಶಿರಸ್ಸಿನಲ್ಲಿ ಧರಿಸುತ್ತಾರೆಂದು ಹೇಳಿದುದ ರಿಂದ ಶ್ರೀವೇದವ್ಯಾಸದೇವರು ಸರ್ವೋತ್ತಮರೆಂದು ವರ್ಣಿಸಿದಂತಾಯಿತು. ಈ ಶ್ಲೋಕದಿಂದ ಪಾದಧೂಳಿಯನ್ನು ವರ್ಣಿಸಿದ್ದಾರೆ.

ವಿ.—ಕಮಲಂ ಆಸನಂ ಯಸ್ಯ ಸಃ, ಕಮಲಾ ಚ ಕಮಲಾಸನಶ್ಚ ಅನಿಲಶ್ಚ ತೈಃ, ಇಂದ್ರಶ್ಚ ಇಂದ್ರಶ್ಚ ಇಂದ್ರೌ, ವಿಹಗಾಶ್ಚ ಅಹಯಶ್ಚ ವಿಹಗಾಹಯಃ, ವಿಹಗಾಹೀನಾಂ ಇಂದ್ರೌ, ವಿಹಗಾಹೀಂದ್ರೌ ಚ ಶಿವಶ್ಚ ಇಂದ್ರಶ್ಚ, ವಿಹಗಾಹೀಂದ್ರಶಿವೇಂದ್ರಾಃ ಪೂರ್ವೇ ಯೇಷಾಂ ತೇ ವಿಹಗಾ-ಹೀಂದ್ರ ಶಿವೇಂದ್ರಪೂರ್ವಕಾಃ ತೈಃ, ಪದೇ ಪದ್ಮೇ ಇವ, ಪದಪದ್ಮಯೋಃ ರಜಃ, ತತ್,

Rarest Archiver

ಕ್ರಿ.—ವಹಾಮಿ, ವಹತಿ ವಹತಃ ವಹಂತಿ, ವಹಸಿ ವಹಥಃ ವಹಥ, ವಹಾಮಿ ವಹಾವಃ ವಹಾಮಃ, ವಹ (ವಹ್) ಪ್ರಾಪಣೇ। ಸಕ.। ಅನಿ.। ಉಭ.। to bear, to carry, to flow. ವರ್ತಮಾನೇ ಲಟ್.

ಅವ.—ಶ್ರೀವೇದವ್ಯಾಸರ ರಕ್ತವರ್ಣದ ಪಾದತಲಗಳನ್ನು ವರ್ಣಿಸುತ್ತಾರೆ—

ಪ್ರಣಮಾಮಿ ಪದದ್ವಯಂ ವಿಭೋ
ರ್ಧ್ವಜವಜ್ರಾಂಕುಶಪದ್ಮಚಿಹ್ನವತ್ ।
ನಿಜಮಾನಸರಾಗಪೀಡನಾ-
ದರುಣೀಭೂತಮಿವಾರುಣಂ ಸ್ವಯಂ ॥೨೬॥

ಅ.ಅ.—ಧ್ವಜ = ಪತಾಕೆಯು, ವಜ್ರ = ವಜ್ರಾಯುಧವು, ಅಂಕುಶ = ಅಂಕುಶವು, ಪದ್ಮ = ತಾವರೆ ಹೂವು, ಇವುಗಳ, ಚಿಹ್ನವತ್ = ಗುರುತುಳ್ಳ, ಸ್ವಯಂ = ತಾನಾಗಿಯೇ, ಅರುಣಂ = ಕೆಂಪಾದ, ನಿಜ = ತನ್ನವರಾದ ಭಕ್ತರ, ಮಾನಸ = ಮನಸ್ಸಿನಲ್ಲಿರುವ, ರಾಗ = ಕೆಂಪುಬಣ್ಣದ, (ವಿಷಯಾಭಿಲಾಷೆಗಳ) ಮರ್ದನಾತ್ = ತುಳಿಯುವುದರಿಂದ (ಮರ್ದಿಸುವುದರಿಂದ), ಅರುಣೀಭೂತಂ ಇವ = ಕೆಂಪಾಗಿದೆಯೋ ಎಂಬಂತಿರುವ, ವಿಭೋಃ = ಶ್ರೀವೇದವ್ಯಾಸದೇವರ, ಪದದ್ವಯಂ = ಎರಡು ಪಾದಗಳನ್ನು, ಪ್ರಣಮಾಮಿ = ನಮಸ್ಕರಿಸುತ್ತೇನೆ.

ತಾ.—ಶ್ರೀವೇದವ್ಯಾಸರ ಪಾದತಲಗಳು ಸ್ವಭಾವದಿಂದಲೇ ಕೆಂಪಾಗಿವೆ. ಭಕ್ತರ ಮನಸ್ಸಿನಲ್ಲಿರುವ ರಾಗವನ್ನು, ವಿಷಯಾಭಿಲಾಷೆಯೆಂಬ ಕೆಂಪುಬಣ್ಣವನ್ನು ತುಳಿದುಹಾಕಿದ್ದರಿಂದ (ನಾಶಮಾಡಿದ್ದರಿಂದ) ಕೆಂಪುಬಣ್ಣವುಳ್ಳದ್ದಾಯಿತೋ ಎಂದು ಈ ಪಾದತಲಗಳು ತೋರುತ್ತಿವೆ. ಇಲ್ಲಿ ಧ್ವಜ, ವಜ್ರ, ಅಂಕುಶ, ಕಮಲ ಮೊದಲಾದ ರೇಖಾಚಿಹ್ನೆಗಳು ಕಾಣಿಸುತ್ತಿವೆ. ನನ್ನ ಸ್ವಾಮಿಯಾದ ಶ್ರೀವೇದವ್ಯಾಸದೇವರ ಇಂತಹ ಪಾದತಲಗಳನ್ನು ವಂದಿಸುತ್ತೇನೆ. ವ್ಯಾಸದೇವರ ಪಾದಗಳನ್ನು ನಂಬಿದವರಿಗೆ ವಿಷಯಾಭಿಲಾಷೆಗಳು ನಾಶವಾಗುವುವು. ಭಕ್ತರ ರಾಗವನ್ನು ಪಾದಗಳಿಂದ ತುಳಿದು ಹಾಕಿದ್ದರಿಂದ ಕೆಂಪಾದ ಪಾದಗಳು ಮತ್ತಷ್ಟು ಕೆಂಪಾದಂತೆ ಕಾಣಿಸುತ್ತಿವೆ ಎಂದು ಉತ್ಪ್ರೇಕ್ಷಿಸಿದ್ದಾರೆ.

Rarest Archiver

ವಿ.—ಪದಯೋಃ ದ್ವಯಂ ತತ್, ಧ್ವಜಂ ಚ ವಜ್ರಂ ಚ ಅಂಕುಶಂ ಚ ಪದ್ಮಂ ಚ ಧ್ವಜವಜ್ರಾಂಕುಶಪದ್ಮಾನಾಂ ಚಿಹ್ನಂ, ಧ್ವಜವಜ್ರಾಂಕುಶಪದ್ಮ-ಚಿಹ್ನಮಸ್ಯಾಸ್ತೀತಿ, ನಿಜಾನಾಂ ಮಾನಸಾನಾಂ ರಾಗಸ್ಯ ಪೀಡನಂ ತಸ್ಮಾತ್, ಅನರುಣಂ ಅರುಣಂ ಸಂಪದ್ಯಮಾನಂ ಅರುಣೀಭೂತಂ.

ತಾ.—ಪ್ರ+ನಮಾಮಿ. ನಮತಿ ನಮತಃ ನಮಂತಿ, ನಮಸಿ ನಮಥಃ ನಮಥ, ನಮಾಮಿ ನಮಾವಃ ನಮಾಮಃ, ಣಮ (ನಮ್) ಪ್ರಹ್ವತ್ವೇ ಶಬ್ದೇ ಚ, to salute, to bend, to sound ಲಟ್ (ಮಯಾ ಪದ-ದ್ವಯಂ ಪ್ರಣಮ್ಯತೇ)

ಅವ.—ಶ್ರೀವೇದವ್ಯಾಸದೇವರ ಪಾದಗಳ ಉಗುರುಗಳನ್ನು ವರ್ಣಿಸುತ್ತಾರೆ—

ನನು ಕೇವಲಮೇವ ವೈಷ್ಣವಂ
ಶ್ರಿತವಂತಃ ಪದಮಾತ್ಮರೋಚಿಷಾ ।
ತಮಸೋऽಪ್ಯುಭಯಸ್ಯ ನಾಶಕಾ
ವಿಜಯಂತೇ ನಖರಾ ನವಂ ರವಿಂ ॥೨೭॥

ಅ.ಆ—ಕೇವಲಂ ಏವ = ಮುಖ್ಯವಾಗಿಯೇ, ವೈಷ್ಣವಂ = ವಿಷ್ಣು ಸಂಬಂಧಿಯಾದ, ಪದಂ = ಪಾದವನ್ನು, ಶ್ರಿತವಂತಃ = ಆಶ್ರಯಿಸಿದ, ಆತ್ಮ-ರೋಚಿಷಾ = ತಮ್ಮ ಕಾಂತಿಯಿಂದ, ಉಭಯಸ್ಯ ಅಪಿ = ಎರಡೂ ವಿಧವಾದ, ತಮಸಃ = ಕತ್ತಲೆಯ, ಅಜ್ಞಾನದ, ನಾಶಕಾಃ = ಪರಿಹಾರಕವಾದ, ನಖರಾಃ = ಉಗುರುಗಳು, ನವಂ ರವಿಂ = ಹೊಸ (ಉದಯಿಸುತ್ತಿರುವ), ರವಿಂ = ಸೂರ್ಯನನ್ನು, ವಿಜಯಂತೇ ನನು = ಜಯಿಸುತ್ತವೆಯಷ್ಟೆ !

ತಾ.—ವಿಷ್ಣುಪದ ಎನಿಸಿದ ಶ್ರೀವೇದವ್ಯಾಸರ ಪಾದವನ್ನು ಮುಖ್ಯವಾಗಿಯೇ ಆಶ್ರಯಿಸಿರುವ, ತಮ್ಮ ಕಾಂತಿಯಿಂದ ಹೊರಗಿನ ಕತ್ತಲೆಯನ್ನೂ, ಒಳಗಿನ ಅಜ್ಞಾನವೆಂಬ ಕತ್ತಲೆಯನ್ನೂ, ನಾಶಮಾಡುವ ಶ್ರೀವೇದವ್ಯಾಸ ದೇವರ ಪಾದದ ಈ ಉಗುರುಗಳು, ಉದಯಿಸುವ ಸೂರ್ಯನನ್ನೂ ಜಯಿಸುತ್ತವೆ. ಉದಯಿಸುವ ಸೂರ್ಯನು ಹೆಸರಿನಿಂದ ಮಾತ್ರ ವಿಷ್ಣುಪದ ಎಂಬು

Rarest Archiver

ಹೆಸರುಳ್ಳ ಆಕಾಶವನ್ನು ಆಶ್ರಯಿಸಿರುತ್ತಾನೆ. ಮತ್ತು ಹೊರಗಿನ ಕತ್ತಲೆಯನ್ನು ಮಾತ್ರವೇ ನಾಶಮಾಡುತ್ತಾನೆ. ಈ ಉಗುರುಗಳಾದರೋ ವಿಷ್ಣುಪದವೆಂದರೆ ವಿಷ್ಣುಸ್ವರೂಪವಾದ ವ್ಯಾಸರ ಪಾದವನ್ನು ಆಶ್ರಯಿಸಿದ್ದು, ಹೊರಗಿನ ಕತ್ತಲೆ ಮತ್ತು ಜೀವರ ಅಂತಃಕರಣದಲ್ಲಿರುವ ಅಜ್ಞಾನವೆಂಬ ಕತ್ತಲೆ ಎರಡನ್ನೂ ನಾಶಮಾಡುತ್ತವೆ. ಆದುದರಿಂದ ಸೂರ್ಯನಿಗಿಂತಲೂ ಮಿಗಿಲಾಗಿ ಶೋಭಿಸುತ್ತವೆ. ಶ್ರೀವ್ಯಾಸರ ಉಗುರುಗಳು ಉದಯಿಸುವ ಸೂರ್ಯನಂತೆ ಕೆಂಪಾಗಿ ಕಂಗೊಳಿಸುತ್ತವೆ ಎಂದು ಭಾವ.

ವಿ.—ವಿಷ್ಣೋಃ ಇದಂ ವೈಷ್ಣವಂ ತತ್, ಆತ್ಮನಾಂ ರೋಚಿಃ ತೇನ,

ಕ್ರಿ.—ವಿ+ಜಯಂತೇ, ಜಯತೇ ಜಯೇತೇ, ಜಯಂತೇ, ಜಯಸೇ ಜಯೇಥೇ ಜಯಧ್ವೇ, ಜಯೇ ಜಯಾವಹೇ ಜಯಾಮಹೇ, ಜಿ ಜಯೇ ಅಭಿಭವೇ ಚ. ಸಕ. ಪರ. ಲಟ್. ವಿ ಮತ್ತು ಪರಾ ಉಪಸರ್ಗಪೂರ್ವದಲ್ಲಿದ್ದರೆ ಈ ಧಾತುವನ್ನು ಆತ್ಮನೇಪದಿಯಾಗಿಯೇ ಹೇಳಬೇಕು. ಸೂ—ವಿಪರಾಭ್ಯಾಂ ಜೇಃ (ನಕ್ಷತ್ರೈಃ ನವಃ ರವಿಃ ವಿಜೀಯತೇ)

ಅವ.—ಪುನಃ ಪಾದಗಳನ್ನೇ ವರ್ಣಿಸುತ್ತಾರೆ—

ಸುಕುಮಾರತಲಾಂಗುಲೀಮತೋಃ
ಪದಯೋರಸ್ಯ ನಿಗೂಢಗುಲ್ಫಯೋಃ ।
ಉಪಮಾನಮಹೋ ನ ದೃಶ್ಯತೇ
ಕವಿವರ್ಯೈರಿತರೇತರಂ ವಿನಾ ॥೨೮॥

ಅ.ಅ—ಸುಕುಮಾರ=ಅತ್ಯಂತಮೃದುವಾದ, ತಲ=ಬುಡ ಮತ್ತು, ಅಂಗುಲೀಮತೋಃ=ಬೆರಳುಗಳುಳ್ಳ, ನಿಗೂಢ=ಒಳಗೆ ಸೇರಿರುವ, ಗುಲ್ಫಯೋಃ =ಕಾಲುಗಂಟುಗಳುಳ್ಳ, ಅಸ್ಯ=ಈ ವ್ಯಾಸರ, ಪದಯೋಃ=ಎರಡು ಪಾದಗಳಿಗೆ, ಇತರೇತರಂ ವಿನಾ=ಒಂದಕ್ಕೆ ಇನ್ನೊಂದನ್ನು ಬಿಟ್ಟು, ಉಪಮಾನಂ= ದೃಷ್ಟಾಂತವು, ಕವಿವರ್ಯೈಃ=ಶ್ರೇಷ್ಠಕವಿಗಳಿಂದ ನ ದೃಶ್ಯತೇ=ಕಾಣಲ್ಪಡುವುದಿಲ್ಲ. ಅಹೋ=ಆಶ್ಚರ್ಯವು.

Rarest Archiver

ತಾ.—ಅತ್ಯಂತಕೋಮಲವಾದ ತಲಭಾಗ ಮತ್ತು ಬೆರಳುಗಳನ್ನು ಹೊಂದಿರುವ, ಹೆಚ್ಚು ಹೊರಗೆ ಕಾಣದೆ ಒಳಹೊಕ್ಕಿರುವ ಕಾಲಿನ ಗಿಣ್ಣುಗಳುಳ್ಳ ಶ್ರೀವೇದವ್ಯಾಸದೇವರ ಈ ಪಾದಗಳಿಗೆ, ಈ ಪಾದಕ್ಕೆ ಆ ಪಾದವು, ಆ ಪಾದಕ್ಕೆ ಈ ಪಾದವೂ ಉಪಮಾನವಾಗುತ್ತದೆಯೆಂದು ಹೇಳಬೇಕಲ್ಲದೆ ಬೇರೆ ಸದೃಶವಸ್ತುವು ಯಾವುದೂ ಕಾಣುವುದಿಲ್ಲವೆಂದು ಕವಿಗಳು ತಿಳಿಯುತ್ತಾರೆ. ಇದು ಅತ್ಯಂತ ಆಶ್ಚರ್ಯಕರವು. ಇಂತಹ ವಸ್ತುವು ಲೋಕದಲ್ಲಿ ಮತ್ತೊಂದಿಲ್ಲ.

ವಿ.—ತಲೇ ಚ ಅಂಗುಲ್ಯಶ್ಚ, ಸುಕುಮಾರ್ಯಶ್ಚ ತಾಃ ತಲಾಂಗುಲ್ಯಶ್ಚ, ಸುಕುಮಾರತಲಾಂಗುಲ್ಯಃ ಅನಯೋಃ ಸಂತಿ ಇತಿ ಸುಕುಮಾರತಲಾಂಗುಲೀಮತೀ, ನಿಗೂಢೌ ಗುಲ್ಫೌ ಯಯೋಸ್ತೇ ತಯೋಃ, ಕವಿಷು ಮರ್ಯಾಃ ತೈಃ,

ಕ್ರಿ.—ದೃಶ್ಯತೇ ಸರ್ಗ ೫ ಶ್ಲೋಕ ೧೮ ನೋಡಿರಿ.

ಅವ.—ಶ್ರೀವೇದವ್ಯಾಸರ ಮೊಣಕಾಲುಗಳನ್ನು (ಮೀನಖಂಡಗಳನ್ನು) ವರ್ಣಿಸುತ್ತಾರೆ—

ಉಚಿತಾಂ ಗುರುತಾಂ ದಧತ್ ಕ್ರಮಾತ್
ಶುಚಿ ತೇಜಸ್ವಿ ಸುವೃತ್ತಮುತ್ತಮಂ ।
ಭಜತೋಽತ್ರ ಚ ಭಾಜಯತ್ಯದೋ
ವಿಭುಜಂಘಾಯುಗಲಂ ಸರೂಪತಾಂ ॥೨೯॥

ಅ.ಅ—ಕ್ರಮಾತ್ = ಕ್ರಮವಾಗಿ, ಉಚಿತಾಂ = ಯೋಗ್ಯವಾದ, ಗುರುತಾಂ = ದಪ್ಪವಾಗುವಿಕೆಯನ್ನು, ದಧತ್ = ಧರಿಸಿರುವಂತಹ, ಶುಚಿ = ದೋಷವಿಲ್ಲದ, ತೇಜಸ್ವಿ = ಕಾಂತಿಯುಳ್ಳ, ಸುವೃತ್ತಂ = ತುಂಬಾ ಗುಂಡಗಿರುವ, ಉತ್ತಮಂ = ಶ್ರೇಷ್ಠವಾದ, ಅದಃ = ಈ, ವಿಭುಜಂಘಾಯುಗಲಂ = ಶ್ರೀವೇದವ್ಯಾಸದೇವರ ಮೊಣಕಾಲುಗಳ ಜೋಡಿಯು, ಭಜತಃ = ಸೇವಿಸುವವರನ್ನು, ಅತ್ರ ಚ = ಈ ಲೋಕದಲ್ಲಿಯೇ, ಸರೂಪತಾಂ = ಸಮಾನರೂಪವುಳ್ಳತನವನ್ನು, ಭಾಜಯತಿ = ಹೊಂದಿಸುತ್ತದೆ.

ತಾ.—ಈ ವೇದವ್ಯಾಸದೇವರ ಎರಡುಮೊಣಕಾಲುಗಳು ಪಾದದಿಂದ ಮೇಲೆ ಕ್ರಮವಾಗಿ ಯೋಗ್ಯರೀತಿಯಿಂದ ದಪ್ಪವಾಗಿವೆ. ಇವುಗಳಲ್ಲಿ ಯಾವ

Rarest Archive

ದೋಷವೂ ಇಲ್ಲ. ಇವು ತುಂಬಾ ಪ್ರಕಾಶಮಾನವಾಗಿವೆ. ದುಂಡಗಿವೆ. ಶ್ರೇಷ್ಠ ವಾದ ಶ್ರೀವೇದವ್ಯಾಸದೇವರ ಕಣಕಾಲುಗಳೆರಡೂ ತನ್ನನ್ನು ಸೇವಿಸುವ ಭಕ್ತರಿಗೆ ತನ್ನ ಸಾಮ್ಯವನ್ನೇ ಕೊಡುತ್ತವೆ. ಶ್ರೀವೇದವ್ಯಾಸರ ಸೇವಕರಾದ ಭಕ್ತರೂ ಕೂಡ ನಿರ್ದೋಷರಾಗುತ್ತಾರೆ. ಸಂಸಾರದಲ್ಲಿಯೂ ಮುಕ್ತಿಯಲ್ಲಿಯೂ ತಮಗಿಂತ ಕೆಳಗಿನವರಿಗೆ ಜ್ಞಾನೋಪದೇಶಕರಾಗುವುದರಿಂದ ಯೋಗ್ಯವಾದ ಗುರುಗಳಾಗುತ್ತಾರೆ. ಬ್ರಹ್ಮವರ್ಚಸ್ಸುಳ್ಳವರೂ ಉತ್ತಮವಾದ ಆಚಾರ ಸಂಪನ್ನರೂ ಜ್ಞಾನಭಕ್ತ್ಯಾದಿಗುಣಗಳಿಂದ ಶ್ರೇಷ್ಠರೂ ಆಗುತ್ತಾರೆ. ಹೀಗೆ ವೇದ ವ್ಯಾಸರ ಕಣಕಾಲುಗಳನ್ನು ಸೇವಿಸತಕ್ಕ ಭಕ್ತರಲ್ಲಿ ಆ ಕಣಕಾಲುಗಳಲ್ಲಿರುವ ಗುಣಗಳು ತೋರಿದ ಪ್ರಯುಕ್ತ ಶ್ರೀವೇದವ್ಯಾಸರ ಎರಡು ಕಣಕಾಲುಗಳೂ ಭಕ್ತರಿಗೆ ತಮ್ಮ ಸಾರೂಪ್ಯವನ್ನು ಕೊಡುತ್ತವೆ ಎಂದು ತಿಳಿದುಬರುತ್ತದೆ. ಹಾಗೂ ಶ್ರೀವ್ಯಾಸರ ಮೊಣಕಾಲುಗಳೆರಡೂ ಭಕ್ತರಿಗೆ ಈ ಲೋಕದಲ್ಲಿಯೇ ತಮ್ಮ ಸಾರೂಪ್ಯವನ್ನು ಕೊಡುತ್ತವೆಯೆಂಬ ಮೇಲೆ, ಸಂಸಾರದಿಂದ ಮುಕ್ತರಿಗೆ ಸಾರೂಪ್ಯಮೋಕ್ಷವನ್ನು ಕೊಡುತ್ತವೆಯೆಂದು ಹೇಳಬೇಕಾಗಿಯೇ ಇಲ್ಲ. (ಇಲ್ಲಿ ಮೊಣಕಾಲುಗಳು ಮತ್ತು ಭಕ್ತರಿಗೆ ಶ್ಲೇಷದಿಂದ ವಿಶೇಷಣಸಾಮ್ಯವನ್ನು ಹೇಳಿದ್ದಾರೆ.)

ವಿ.—ಗುರೋಃ ಭಾವಃ ಗುರುತಾ ತಾಂ, ತೇಜಃ ಅಸ್ಯ ಅಸ್ತೀತಿ ತೇಜಸ್ವಿ, ಶೋಭನಂ ಚ ತತ್ ವೃತ್ತಂ ಚ ಸುವೃತ್ತಂ, ಜಂಘಯೋಃ ಯುಗಲಂ, ವಿಭೋಃ ಜಂಘಾಯುಗಲಂ, ಸಮಾನಂ ರೂಪಂ ಯಸ್ಯ ಸಃ ಸರೂಪಃ ತಸ್ಯ ಭಾವಃ ಸರೂಪತಾ ತಾಂ;

ಕ್ರಿ.—ಭಾಜಯತಿ ಭಾಜಯತಃ ಭಾಜಯಂತಿ. ಇತ್ಯಾದಿ. ಭಜ ಸೇವಾಯಾಂ. ಸಕ.। ಅನಿ.। ಪರ.। ಣಿಜಂತ ಲಟ್.

ಅವ.—ವೇದವ್ಯಾಸರ ಮಂಡಿಯ ಸುತ್ತಲೂ ಇರುವ ಯೋಗಪಟ್ಟಿಕೆ ಯನ್ನು ವರ್ಣಿಸುತ್ತಾರೆ—

ಅಚಲಾಸನಯೋಗಪಟ್ಟಿಕಾ

ವರಕಕ್ಷ್ಯಾಸಕೃದಾಪ್ತವಿಷ್ಟದಂ ।

Rarest Archiver

ಪರಿತೋऽಪಿ ಹರಿಂ ಸ್ಫುರಂತ್ಯಹೋ
ಅನಿಶಂ ಧನ್ಯತಮೇತಿ ಮೇ ಮತಿಃ ॥೩೦॥

ಅ. ಅ.—ವರಕಕ್ಷ್ಯಾ = ಉತ್ತಮವುದಟ್ಟಿಯಾದ, ಅಚಲಾಸನ-ಸ್ಥಿರವಾದ ಆಸನದ, ಯೋಗಪಟ್ಟಿಕಾ = ಯೋಗಪಟ್ಟಿಕೆಯು, ಸಕೃತ್ = ಒಂದೇಬಾರಿ, ಆಪ್ತಂ = ಹೊಂದಲ್ಪಟ್ಟ, ಇಷ್ಟದಂ = ಅಭೀಷ್ಟವನ್ನು ಕೊಡುವ, ಹರಿಂ ಪರಿತಃ = ಶ್ರೀವೇದವ್ಯಾಸರ ಸುತ್ತಲೂ, ಅನಿಶಂ = ಯಾವಾಗಲೂ, ಸ್ಫುರಂತೀ (ಸತೀ) = ಪ್ರಕಾಶಿಸುತ್ತಾ, ಧನ್ಯತಮಾ = ಅತ್ಯಂತಕೃತಾರ್ಥವಾದುದು, ಇತಿ = ಹೀಗೆಂದು, ಮೇ = ನನ್ನ, ಮತಿಃ = ಬುದ್ಧಿಯು, ಅಹೋ = ಆಶ್ಚರ್ಯವು.

ತಾ.—ಕೇವಲ ಒಂದು ಬಾರಿ ತನ್ನ ದರ್ಶನಮಾಡಿದ ಭಕ್ತರ ಅಭೀಷ್ಟ ವನ್ನು ಈ ವೇದವ್ಯಾಸದೇವರು ಕೊಡುತ್ತಾರೆ. ಅವರು ತಪಸ್ಸಿಗೋಸ್ಕರ ದೃಢವಾದ ಆಸನದಲ್ಲಿ ಕುಳಿತುಕೊಳ್ಳಲು ಅನುಕೂಲವಾಗುವಂತೆ ತನ್ನ ದೇಹದ ಮಧ್ಯಪ್ರದೇಶದಲ್ಲಿ ಧ್ಯಾನಯೋಗ್ಯವಾದ ಯೋಗಪಟ್ಟಿಕೆಯನ್ನು ಕಟ್ಟಿಕೊಂಡಿ ದ್ದಾರೆ. ಇದು ನಿತ್ಯದಲ್ಲಿಯೂ ಶ್ರೀವೇದವ್ಯಾಸದೇವರ ಸುತ್ತಲೂ ಇದ್ದು ಹೊಳೆಯುತ್ತಾ ಇದೆ, ಅತ್ಯಂತ ಧನ್ಯವಾಗಿದೆ-ಎಂದು ನನ್ನ ಬುದ್ಧಿಯು.

ವಿ.—ಅಚಲಂ ಚ ತತ್ ಆಸನಂ ಚ, ಅಚಲಾಸನಾರ್ಥಂ ಯೋಗ-ಪಟ್ಟಿಕಾ, ವರಾ ಚ ಸಾ ಕಕ್ಷ್ಯಾ ಚ ವರಕಕ್ಷ್ಯಾ, ಇಷ್ಟಂ ದದಾತೀತಿ ಇಷ್ಟದಃ ತಂ, ಅತಿಶಯೇನ ಧನ್ಯಾ ಧನ್ಯತಮಾ;

ಅವ.—ಶ್ರೀವೇದವ್ಯಾಸರು ಉಟ್ಟುಕೊಂಡಿರುವ ಕೃಷ್ಣಾಜಿನವನ್ನು ವರ್ಣಿಸುತ್ತಾರೆ—

ರುಚಿರೇಣ ವರ್ಣ್ಯೆಣಚರ್ಮಣಾ
ರುಚಿರಾಜದ್ಯುತಿಚಾರುರೋಚಿಷಾ ।
ಪರಮೋರುನಿತಂಬಸಂಗಿನಾ
ಪರಮಾಶ್ಚರ್ಯತಯಾ ವಿರಾಜ್ಯತೇ ॥೩೧॥

ಅ. ಅ.—ಪರಮ = ಸರ್ವೋತ್ತಮರಾದ ಶ್ರೀವೇದವ್ಯಾಸರ, ಉರು = ಉತ್ಕೃಷ್ಟವಾದ, ನಿತಂಬಸಂಗಿನಾ = ಸೊಂಟದ ಸಂಬಂಧವುಳ್ಳ, (ಅಥವಾ

Rarest Archiver

ಪರಮ - ಊರು - ನಿತಂಬಸಂಗಿನಾ = ಶ್ರೇಷ್ಠರಾದ ಶ್ರೀವೇದವ್ಯಾಸರ ತೊಡೆ ಮತ್ತು ಸೊಂಟಗಳ ಸಂಬಂಧವುಳ್ಳ), ರುಚಿರಾಜ = ಸೂರ್ಯನ, ದ್ಯುತಿ= ಕಾಂತಿಯಂತೆ, ಚಾರು = ಮನೋಹರವಾದ, ರೋಚಿಷಾ = ಕಾಂತಿಯುಳ್ಳ, ರುಚಿರೇಣ = ಮನೋಹರವಾದ, ವರ = ಉತ್ತಮವಾದ, ಏಣಚರ್ಮಣಾ = = ಕೃಷ್ಣಾಜಿನದಿಂದ, ಪರಮಾಶ್ಚರ್ಯತಯಾ = ಅತಿಶಯವಾದ ಆಶ್ಚರ್ಯ ರೂಪದಿಂದ, ವಿರಾಜ್ಯತೇ = ಪ್ರಕಾಶಿಸೋಣವಾಗುತ್ತದೆ.

ತಾ.—ಸೂರ್ಯನ ಕಾಂತಿಯಂತಹ ಮನೋಹರವಾದ ಕಾಂತಿಯುಳ್ಳ ಸುಂದರವೂ ಉತ್ತಮವೂ ಆದ ಕೃಷ್ಣಾಜಿನವು ಶ್ರೀವೇದವ್ಯಾಸರ ತೊಡೆ ಮತ್ತು ಸೊಂಟದ ಪ್ರದೇಶಗಳಲ್ಲಿ ಬಹಳ ಆಶ್ಚರ್ಯಕರವಾಗಿ ಶೋಭಿಸುತ್ತದೆ. (ಅಥವಾ ಶ್ರೀವೇದವ್ಯಾಸದೇವರು ಕುಳಿತಿರುವ ಆಸನವಾಗಿರುವ ಕೃಷ್ಣಾಜಿನವು ಶೋಭಿಸುತ್ತದೆ.) ಎಂದು ಭಾವವು.

ವಿ.—ಏಣಸ್ಯ ಚರ್ಮ, ವರಂ ಚ ತತ್ ಏಣಚರ್ಮ ಚ ತೇನ, ರುಚೀನಾಂ ರಾಜಾ ರುಚಿರಾಜಃ, ತಸ್ಯ ದ್ಯುತಿವತ್ ಚಾರು ರೋಚಿಃ ಯಸ್ಯ ತತ್ ರುಚಿರಾಜದ್ಯುತಿಚಾರುರೋಚಿಃ ತೇನ, ಉರುಶ್ಚಾಸೌ ನಿತಂಬಶ್ಚ, ಪರಮಸ್ಯ ಉರುನಿತಂಬಃ ಪರಮೋರುನಿತಂಬೇನ ಸಂಗಃ, ಪರಮೋರುನಿತಂಬ-ಸಂಗಃ ಅಸ್ಯ ಅಸ್ತೀತಿ ಪರಮೋರುನಿತಂಬಸಂಗಿ ತೇನ, (ಊರೂ ಚ ನಿತಂಬಶ್ಚ, ಪರಮಸ್ಯ ಊರುನಿತಂಬಾಃ ತೈಃ ಸಂಗಃ ಅಸ್ಯ ಅಸ್ತೀತಿ). ಪರಮಂ ಚ ತತ್ ಆಶ್ಚರ್ಯಂ ಚ ಪರಮಾಶ್ಚರ್ಯಸ್ಯ ಭಾವಃ ತಯಾ;

ಕ್ರಿ.—ವಿ+ರಾಜ್ಯತೇ ರಾಜೃ (ರಾಜ್) ದೀಪ್ತೌ to shine. ಉಭ, ಅಕ. ಸೇಟ್. ಭಾವೇ. ಲಟ್. ಭಾವೇ ಪ್ರಯೋಗದಲ್ಲಿ ಒಂದೇ ರೂಪವು.

ಅವ.—ಶ್ರೀವೇದವ್ಯಾಸದೇವರ ಉದರವನ್ನು ವರ್ಣಿಸುತ್ತಾರೆ—

ತನುನಿಮ್ನಸುನಾಭಿಶೋಭಿತೇ
ವಲಿಭೇ ವಾರಿಜನಾಭ ಆದಧೇ ।
ಪ್ರತನಾವತಿಸುಂದರೇ ಮೃದಾ-
ವುದರೇಽಸ್ಮಿನ್ ಜಗದಂಡಮಂಡಲಂ ॥೩೨॥

Rarest Archiver

ಅ.ಅ—ವಾರಿಜನಾಭಃ = ನಾಭಿಯಲ್ಲಿ ಪದ್ಮವನ್ನು ಧರಿಸಿದ ಈ ವೇದ ವ್ಯಾಸದೇವರು, ತನು = ಸಣ್ಣದಾದ, ನಿಮ್ನ = ಆಳವಾದ, ಸುನಾಭಿ = ಸುಂದರವಾದ ಹೊಕ್ಕಳಿನಿಂದ, ಶೋಭಿತೇ = ಪ್ರಕಾಶಿಸುತ್ತಿರುವ, ವಲಿಭೇ = ಮೂರು ನೆರಿಗೆಯುಳ್ಳ, ಪ್ರತನೌ = ಬಹಳ ಸಣ್ಣದಾದ, ಅತಿಸುಂದರೇ = ಅತ್ಯಂತಮನೋಹರವಾದ, ಮೃದೌ = ಮೃದುವಾದ, ಅಸ್ಮಿನ್ = ಈ, ಉದರೇ = ಹೊಟ್ಟೆಯಲ್ಲಿ, ಜಗದಂಡಮಂಡಲಂ = ಬ್ರಹ್ಮಾಂಡಗಳ ಸಮೂಹವನ್ನು, ಆದಧೇ = ಧರಿಸಿದ್ದಾರೆ.

ತಾ.—ಪದ್ಮನಾಭರಾದ ಈ ವೇದವ್ಯಾಸದೇವರ ಹೊಟ್ಟೆಯಲ್ಲಿ ಚಿಕ್ಕ ದಾದ ಆಳವಾದ ಹೊಕ್ಕಳಿದೆ. ಆ ಹೊಟ್ಟೆಯಲ್ಲಿ ಮೂರು ಮಡಿಕೆಗಳು (ತ್ರಿವಳಿ) ಇವೆ. ಅತಿಸೂಕ್ಷ್ಮವಾದ ಅತ್ಯಂತಮನೋಹರವಾದ ಕೋಮಲವಾದ ಈ ಹೊಟ್ಟೆಯಲ್ಲಿ ಶ್ರೀವ್ಯಾಸರು ಬ್ರಹ್ಮಾಂಡಗಳ ಸಮೂಹವನ್ನೇ ಧರಿಸಿರು ತ್ತಾರೆ. ಇಷ್ಟು ಚಿಕ್ಕಹೊಟ್ಟೆಯಲ್ಲಿ ಬ್ರಹ್ಮಾಂಡರಾಶಿಯನ್ನು ಧರಿಸಿರುವುದು ಅತ್ಯಂತ ಆಶ್ಚರ್ಯಕರ ಎಂದು ಭಾವ.

ವಿ.—ತನುಶ್ಚಾಸೌ ನಿಮ್ನಶ್ಚಾಸೌ ಶೋಭನಶ್ಚಾಸೌ ನಾಭಿಶ್ಚ ತೇನ-ಶೋಭಿತಂ, ವಲಿಭಿಃ ಭಾತೀತಿ ವಲಿಭಂ, ವಾರಿಜಂ ನಾಭೌ ಯಸ್ಯ ಸಃ ವಾರಿಜ-ನಾಭಃ, ಜಗತಾಂ ಅಂಡಂ, ಜಗದಂಡಸ್ಯ ಮಂಡಲಂ ತತ್,

ಕ್ರಿ.—ಆ + ದಧೇ ದಧಾತೇ ದಧಿರೇ, ದಧಿಷೇ ದಧಾಥೇ ದಧಿಧ್ವೇ, ದಧೇ ದಧಿವಹೇ ದಧಿಮಹೇ, ಡುಧಾಞ್ (ಧಾ) ಧಾರಣಪೋಷಣಯೋಃ ಸಕ.। ಅನಿ.। ಉಭ.। to put, to grant, to bear. ಲಿಟ್.

ಅವ.—ಶ್ರೀವೇದವ್ಯಾಸರ ಎದೆಯ ಮೇಲಿರುವ ಯಜ್ಞೋಪವೀತ ವನ್ನು ವರ್ಣಿಸುತ್ತಾರೆ—

ಹೃದಯೇ ಕೃತಸಜ್ಜನೋದಯೇ
ಸುವಿಶಾಲೇ ಮುನಿವಂಶಶೇಖರಃ ।
ಉಭಯಂ ವಹತಿ ತ್ರಯೀಮಯಂ
ವಿಮಲಂ ಬ್ರಹ್ಮಸುಸೂತ್ರಮುತ್ತಮಂ ॥೩೩॥

Rarest Archiver

ಅ. ಆ.—ಮುನಿವಂಶಶೇಖರಃ = ವಸಿಷ್ಠರ ಕುಲದಲ್ಲಿ ಶ್ರೇಷ್ಠರಾದ ಈ ವ್ಯಾಸರು, ಕೃತಸಜ್ಜನೋದಯೇ = ಮಾಡಲ್ಪಟ್ಟ ಸಜ್ಜನರ ಅಭಿವೃದ್ಧಿಯುಳ್ಳ, ಸುವಿಶಾಲೇ = ಅತ್ಯಂತ ವಿಸ್ತಾರವಾದ, ಹೃದಯೇ = ಎದೆಯಲ್ಲಿ, ಮನಸ್ಸಿನಲ್ಲಿ, ತ್ರಯೀಮಯಂ = ಮೂರುವೇದಗಳ ರೂಪವಾದ, ಉತ್ತಮಂ = ಶ್ರೇಷ್ಠವಾದ, ವಿಮಲಂ = ದೋಷವಿಲ್ಲದ, ಬಿಳಿದಾದ, ಉಭಯಂ = ಎರಡು ಬಗೆಯ, ಬ್ರಹ್ಮ-ಸುಸೂತ್ರಂ = ಒಳ್ಳೆಯ ಜನಿವಾರವನ್ನು, ಉತ್ತಮವಾದ ಬ್ರಹ್ಮಸೂತ್ರವನ್ನು, ವಹತಿ = ಧರಿಸಿದ್ದಾರೆ.

ತಾ.—ಈ ಶ್ರೇಷ್ಠರಾದ ವೇದವ್ಯಾಸದೇವರು ವಸಿಷ್ಠಮಹರ್ಷಿಗಳ ವಂಶದಲ್ಲಿ ಅವತರಿಸಿದ್ದಾರೆ. ಅವರು ಸಜ್ಜನರಿಗೆ ಕಲ್ಯಾಣವನ್ನುಂಟುಮಾಡುವ ಅತಿವಿಶಾಲವಾದ ಎದೆಯಲ್ಲಿ ಮತ್ತು ಮನಸ್ಸಿನಲ್ಲಿ ಮೂರುವೇದಗಳ ಸ್ವರೂಪವಾದ ನಿರ್ಮಲವಾದ ಎರಡುಪ್ರಕಾರವಾದ ಬ್ರಹ್ಮಸೂತ್ರವನ್ನು ಧರಿಸಿದ್ದಾರೆ. ಎರಡುವಿಧದ ಬ್ರಹ್ಮಸೂತ್ರವು ಯಾವುದು ಎಂದರೆ ಒಂದು ಯಜ್ಞೋಪವೀತ, ಅದು ಎದೆಯಮೇಲಿದೆ ಮತ್ತೊಂದು ವೇದದ ಅರ್ಥವನ್ನು ನಿರ್ಣಯಿಸುವ ಯುಕ್ತಿಗಳ ಸಂಗ್ರಹರೂಪವಾದ ಬ್ರಹ್ಮಸೂತ್ರ, ಬ್ರಹ್ಮಮೀಮಾಂಸಾಶಾಸ್ತ್ರವೆಂಬ ಗ್ರಂಥವು. ಅದನ್ನು ಅವರು ಮನಸ್ಸಿನಲ್ಲಿ ಧರಿಸಿದ್ದಾರೆ. ವೇದವ್ಯಾಸರ ಉಪವೀತವೂ ಮೂರುವೇದಸ್ವರೂಪವಾದ ಮೂರು ಸುತ್ತುಗಳಿಂದ ಕೂಡಿದೆ, ಬ್ರಹ್ಮ ಸೂತ್ರವೂ ವೇದಾರ್ಥನಿರ್ಣಾಯಕವಾದುದರಿಂದ ವೇದಪ್ರಚುರ, ವೇದತ್ರಯ ಸ್ವರೂಪವಾದುದು ಎಂದು ಭಾವ.

ವಿ.—ಸಜ್ಜನಾನಾಂ ಉದಯಃ, ಕೃತಃ ಸಜ್ಜನೋದಯಃ ಯೇನ ತತ್ ತಸ್ಮಿನ್, ಮುನೇಃ ವಂಶಃ, ಮುನಿವಂಶೇ ಶೇಖರಃ, ಶೋಭನಂ ಚ ತತ್ ಸೂತ್ರಂ ಚ ಸುಸೂತ್ರಂ, ಬ್ರಹ್ಮಣಾಂ (ವೇದಾನಾಂ) ಸುಸೂತ್ರಂ ಬ್ರಹ್ಮ ಸುಸೂತ್ರಂ ತತ್,

ಕ್ರಿ.—ವಹತಿ, ಸರ್ಗ ೭ ಶ್ಲೋಕ ೨೫ ನೋಡಿರಿ. (ಮುನಿವಂಶಶೇಖರೇಣ ಬ್ರಹ್ಮಸುಸೂತ್ರಂ ಉಹ್ಯತೇ)

ಅವ.—ಶ್ರೀವೇದವ್ಯಾಸದೇವರ ಎದೆಯಲ್ಲಿ ಶೋಭಿಸುವ ಕೌಸ್ತುಭ

Rarest Archiver

ಮಣಿಯನ್ನು ವರ್ಣಿಸುತ್ತಾ, ಅದು ವೇದವ್ಯಾಸರ ಕಂಠದಲ್ಲಿ ಅಲಂಕಾರವಾಗಿ ಶೋಭಿಸುವುದಕ್ಕೆ ಕಾರಣವನ್ನು ಹೇಳುತ್ತಾರೆ—

ಅಸಮೇಽನಧಿಕೇ ಸುಸಾಧಿತೇ
ನಿಜತಾತೇ ರವಿರಾಶಿದೀಧಿತಿ ।
ಪ್ರದದೌ ತ್ರಿಜಗಜ್ಜಯಧ್ವಜಂ
ವಿಧಿರೇತದ್ಗಲಸಂಗಿ ಭೂಷಣಂ ॥೩೪॥

ಅ.ಅ—ವಿಧಿಃ = ಬ್ರಹ್ಮದೇವರು, ನಿಜತಾತೇ = ತನ್ನ ತಂದೆಯಾದ ನಾರಾಯಣನು, ಅಸಮೇ = ಸಮಾನರಿಲ್ಲದವನು, ಅನಧಿಕೇ = ಉತ್ತಮರಿಲ್ಲ ದವನು, ಎಂದು, ಸುಸಾಧಿತೇ (ಸತಿ)= ಚೆನ್ನಾಗಿ ಸಾಧಿಸಲ್ಪಟ್ಟಾಗ, ರವಿರಾಶಿ = ಸೂರ್ಯರ ಸಮೂಹದ, ದೀಧಿತಿ = ಕಿರಣಗಳಂತೆ ಕಿರಣಗಳುಳ್ಳ, ತ್ರಿಜಗಜ್ಜಯ = ಮೂರುಲೋಕಗಳ ಜಯದ, ಧ್ವಜಂ = ಬಾವುಟದಂತಿರುವ, ಏತತ್ = ಈ, ಗಲಸಂಗಿ = ಕಂಠದ ಸಂಬಂಧವುಳ್ಳ, ಭೂಷಣಂ = ಕೌಸ್ತುಭಮಣಿ ಎಂಬ ಅಲಂಕಾರವನ್ನು, ಪ್ರದದೌ = ಕೊಟ್ಟರು.

ತಾ.—ಶ್ರೀವೇದವ್ಯಾಸದೇವರು ಬ್ರಹ್ಮದೇವರ ಸಭೆಗೆ ಹೋದರು, ಅಲ್ಲಿ ಸೇರಿದ್ದ ದೊಡ್ಡಸಭೆಯಲ್ಲಿ ಶ್ರೀಹರಿಯು ಸರ್ವೋತ್ತಮನೆಂದು ಸಾಧಿಸಿದರು. 'ತನ್ನ ತಂದೆಯಾದ ನಾರಾಯಣನಿಗೆ ಸಮಾನರೂ, ಅವನಿಗಿಂತ ಉತ್ತಮರೂ ಯಾರೂ ಇಲ್ಲ'ವೆಂದು ವೇದವ್ಯಾಸರು ಚೆನ್ನಾಗಿ ಸಾಧಿಸಿದ್ದಕ್ಕಾಗಿ ಸಂತೋಷಪಟ್ಟ ಬ್ರಹ್ಮದೇವರು, ಈ ಕೌಸ್ತುಭಮಣಿಯನ್ನು ಶ್ರೀವ್ಯಾಸರಿಗೆ ಅರ್ಪಿಸಿದರು. ಅಲ್ಲಿ ಮೂರುಲೋಕದ ವಾದಿಗಳನ್ನು ಜಯಿಸಿದ್ದರ ಚಿಹ್ನೆಯಾಗಿ ಅನೇಕ ಸೂರ್ಯರ ಪ್ರಭೆಯುಳ್ಳ ಈ ಕೌಸ್ತುಭವು ಈ ಶ್ರೀವ್ಯಾಸರಿಗೆ ಇವರೇ ಸರ್ವೋತ್ತಮಜ್ಞಾನಿಗಳು ಎಂಬುದಕ್ಕೆ ಸೂಚಕವಾದ ಪದಕವಾಯಿತು.

ಬ್ರಹ್ಮದೇವರಸಭೆಯಲ್ಲಿ "ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ। ಏತೇನ ಸತ್ಯವಾಕ್ಯೇನ ಸರ್ವಾರ್ಥಾನ್ ಸಾಧಯಾಮ್ಯಹಂ ॥ ಎಂದು ಬರೆದ ಪತ್ರವನ್ನು ತೂಗುಹಾಕಿದ್ದರು. 'ಸಹಸ್ರಾರ್ಥಾನ್ ಋಷೀನೇಕಃ ಯೌಗಪದ್ಯೇನ ಪೃಚ್ಛತಃ। ಸಹಸ್ರೋತ್ತರದಾನೇನ ಯುಗಪತ್ ಪರ್ಯ-

Rarest Archiver

ತೋಷಯತ್'॥ ಎಂಬ ಪ್ರಮಾಣದಂತೆ ಒಂದುಬಾರಿ ವೇದವ್ಯಾಸರು ಬ್ರಹ್ಮದೇವರ ಸಭೆಗೆ ಹೋದಾಗ ಒಂದುಸಾವಿರ ಮುನಿಗಳು, ಒಂದುಸಾವಿರ ಅರ್ಥವುಳ್ಳ ಸಾವಿರಪ್ರಶ್ನೆಗಳನ್ನು ಮಾಡಿದಾಗ ಸಹಸ್ರಾವಧಾನಿಗಳಾದ (ಅನಂತಾವಧಾನಿಗಳೂ ಆದ) ಶ್ರೀವೇದವ್ಯಾಸರು ಒಂದೇ ಸಲ ಸಾವಿರ ಉತ್ತರಗಳನ್ನು ಕೊಟ್ಟು ಎಲ್ಲರನ್ನೂ ಸಂತೋಷಪಡಿಸಿದರು ಮತ್ತು ಜಯಿಸಿದರು. ಆಗ ಅಧ್ಯಕ್ಷರಾದ ಬ್ರಹ್ಮದೇವರು ಶ್ರೀವೇದವ್ಯಾಸರು ವಾದಿಗಳನ್ನು ಜಯಿಸಿದ್ದಕ್ಕಾಗಿ ಬಹುಮಾನರೂಪವಾಗಿ ಕೌಸ್ತುಭರತ್ನವನ್ನು ಶ್ರೀವ್ಯಾಸರ ಕಂಠಕ್ಕೆ ಕಟ್ಟಿದರು ಎಂದು ಆಚಾರ್ಯರು ವರ್ಣಿಸುತ್ತಿದ್ದಾರೆ. ಕೌಸ್ತುಭರತ್ನಕ್ಕೆ ಬ್ರಹ್ಮದೇವರೇ ಅಭಿಮಾನಿದೇವತೆಯು. ಹರಿಯೇ ಸರ್ವೋತ್ತಮನೆಂದು ವೇದವ್ಯಾಸರೇ ಸಾಧಿಸಿರುವುದರಿಂದ ಶ್ರೀವ್ಯಾಸಸಂಮತವಾದ ಆ ಸಿದ್ಧಾಂತವನ್ನು ಆಚಾರ್ಯರು ಅಭಿವೃದ್ಧಿಗೊಳಿಸಿದರು. ತಾವು ಹೊಸದಾಗಿ ಕಲ್ಪಿಸಿಲ್ಲ ಎಂದು ಈ ಶ್ಲೋಕದಿಂದ ತಿಳಿದು ಬರುತ್ತದೆ.

ವಿ.—ನ ವಿದ್ಯತೇ ಸಮಃ ಯಸ್ಯ ತಸ್ಮಿನ್, ನ ವಿದ್ಯತೇ ಅಧಿಕಃ ಯಸ್ಮಾತ್ ಸಃ ಅನಧಿಕಃ ತಸ್ಮಿನ್, ನಿಜಶ್ಚಾಸೌ ತಾತಶ್ಚ ತಸ್ಮಿನ್, ರವೀಣಾಂ ರಾಶೇಃ ದೀಧಿತಯಃ ಇವ ದೀಧಿತಯಃ ಯಸ್ಯ ತತ್, ತ್ರಯಾಣಾಂ ಜಗತಾಂ ಸಮಾಹಾರಃ ತ್ರಿಜಗತ್, ತ್ರಿಜಗತಃ ಜಯಃ, ತ್ರಿಜಗಜ್ಜಯಸ್ಯ ಧ್ವಜಂ ಇವ ತ್ರಿಜಗಜ್ಜಯಧ್ವಜಂ ತತ್, ಗಲೇ ಸಂಗಃ, ಗಲಸಂಗಃ ಅಸ್ಯ ಅಸ್ತೀತಿ,

ಕಿ.—ಪ್ರ+ದದೌ. ಪ್ರ. ಉಪಸರ್ಗ. ದದೌ ದದತುಃ ದದುಃ, ದದಿಥ ದದಾಥ ದದಥುಃ ದದ, ದದೌ ದದಿವ ದದಿಮ. ಡುದಾಞ್ (ದಾ) ದಾನೇ to give. ಸಕ.। ಉಭ.। ಅನಿ.। ಲಿಟ್.

ಅವ.—ಶ್ರೀವ್ಯಾಸರ ಎರಡು ಬಾಹುಗಳನ್ನು ವರ್ಣಿಸುತ್ತಾರೆ—

ಅರಿವಾರಿಜಲಕ್ಷಣೋಲ್ಲಸತ್
 ಸುಕುಮಾರಾರುಣಪಾಣಿಪದ್ಮಯೋಃ ।
ಪೃಥುಪೀವರವೃತ್ತಹಸ್ತಯೋ-
 ರುಪಮಾಂ ನೈವ ಲಭಾಮಹೇಽನಯೋಃ ॥೩೫॥

Rarest Archiver

ಅ.ಅ.—ಅರಿ=ಚಕ್ರವು, ವಾರಿಜ = ಶಂಖವು ಇವುಗಳ, ಲಕ್ಷಣ= ರೇಖಾರೂಪವಾದ ಗುರುತುಗಳಿಂದ, ಉಲ್ಲಸತ್=ಪ್ರಕಾಶಿಸುವ, ಸುಕುಮಾರ= ಮೃದುವಾದ, ಅರುಣ=ನಸುಗೆಂಪಾದ, ಪಾಣಿಪದ್ಮಯೋಃ=ಕಮಲದಂತಿರುವ ಕೈಗಳುಳ್ಳ, ಅನಯೋಃ= ಈ, ಪೃಥು=ವಿಶಾಲವಾದ, ಪೀವರ=ಪುಷ್ಟವಾದ, ವೃತ್ತ = ಗುಂಡಗಿರುವ, ಹಸ್ತಯೋಃ = ಕೈಗಳಿಗೆ, ಉಪಮಾಂ=ಹೋಲಿಕೆ ಯನ್ನು, (ದೃಷ್ಟಾಂತವನ್ನು) ನೈವ (ನ ಏವ) ಲಭಾಮಹೇ = ಹೊಂದುವುದೇ ಇಲ್ಲ.

ತಾ.—ಈ ವೇದವ್ಯಾಸದೇವರ ಅಂಗೈಯಲ್ಲಿ ಚಕ್ರಶಂಖಗಳ ರೇಖಾ ರೂಪವಾದ ಚಿಹ್ನೆಗಳು ಶೋಭಿಸುತ್ತಿವೆ. ಕೈಗಳಬೆರಳುಗಳೂ ಅಂಗೈಯೂ ಬಹಳ ಕೋಮಲವಾಗಿಯೂ, ನಸುಗೆಂಪಾಗಿಯೂ ಕಮಲದಂತೆಯೂ ಇವೆ. ತೋಳುಗಳು ದೊಡ್ಡದಾಗಿಯೂ ಪುಷ್ಟವಾಗಿಯೂ ಗುಂಡಗೆಯಾಗಿಯೂ ಇವೆ. ಇಂತಹ ಶ್ರೀವೇದವ್ಯಾಸದೇವರ ತೋಳುಗಳಿಗೆ ತಾವು ದೃಷ್ಟಾಂತವನ್ನೇ ಕಾಣೆವು ಎಂದು ಆಚಾರ್ಯರು ಆಲೋಚಿಸಿದರು ಎಂದು ಭಾವ.

ವಿ.—ಅರಾಣಿ ಅಸ್ಯ ಸಂತೀತಿ ಅರಿ, ವಾರಿಣಃ ಜಾಯತೇ ಇತಿ ವಾರಿಜಃ, ಅರಿ ಚ ವಾರಿಜಶ್ಚ, ತಯೋಃ ಲಕ್ಷಣೇ, ಪಾಣೀ ಪದ್ಮೇ ಇವ, ಸುಕುಮಾರೇ ಚ ಅರುಣೇ ಚ ತೇ ಪಾಣಿಪದ್ಮೇ ಚ, ಅರಿವಾರಿಜಲಕ್ಷಣಾಭ್ಯಾಂ ಉಲ್ಲಸಂತೀ ಸುಕುಮಾರಾರುಣಪಾಣಿಪದ್ಮೇ ಯಯೋಸ್ತೌ, ತಯೋಃ, ಪೃಥೂ ಚ ತೌ ಪೀವರೌ ಚ ತೌ ಹಸ್ತೌ ಚ ತಯೋಃ;

ಕ್ರಿ.—ಲಭಾಮಹೇ, ಲಭತೇ ಲಭೇತೇ ಲಭಂತೇ, ಲಭಸೇ ಲಭೇಥೇ ಲಭಧ್ವೇ, ಲಭೇ ಲಭಾವಹೇ ಲಭಾಮಹೇ ಡು(ಲಭ)ಷ್ ಪ್ರಾಪ್ತೌ ಸಕ. ಅನಿ. ಆತ್ಮ. to get, to obtain. ಲಟ್.

ಅವ.—ಶ್ರೀವೇದವ್ಯಾಸರು ಮೊಣಕಾಲಿನ ಮೇಲೆ, ಇಟ್ಟಿದ್ದ ಎರಡು ಕೈಗಳನ್ನು ವರ್ಣಿಸುತ್ತಾರೆ—

ಭಜತಾಂ ವರತರ್ಕಮುದ್ರಯಾ
ದ್ಯತಿ ಹಸ್ತಾಗ್ರಮಬೋಧಮಾಶಿತುಃ ।

Rarest Archiver

ಅಧಿಜಾನು ಸಮರ್ಪಿತಂ ಪರಂ
ಕೃತಭೂಯೋಭಯಭಂಗಮಂಗಲಂ ॥೩೭॥

ಅ.ಅ—ಈಶಿತುಃ=ಪ್ರಭುವಾದ ಶ್ರೀವೇದವ್ಯಾಸದೇವರ, ಹಸ್ತಾಗ್ರಂ=ಬಲಗೈಯ ತುದಿಯು, ವರ = ಉತ್ತಮವಾದ, ತರ್ಕಮುದ್ರಯಾ = ಜ್ಞಾನ ಮುದ್ರೆಯಿಂದ, ಭಜತಾಂ=ಸೇವಿಸುವ ಭಕ್ತರ, ಅಬೋಧಂ=ಅಜ್ಞಾನವನ್ನು, ದ್ಯತಿ = ಖಂಡಿಸುತ್ತದೆ. (ಪರಿಹರಿಸುತ್ತದೆ.) ಅಧಿಜಾನು = ಮೊಣಕಾಲಿನ ಮೇಲೆ, ಸಮರ್ಪಿತಂ=ಇಡಲ್ಪಟ್ಟ, ಪರಂ=ಮತ್ತೊಂದು (ಎಡ)ಕೈಯು, ಕೃತ =ಮಾಡಲ್ಪಟ್ಟ, ಭೂಯಃ=ಬಹಳವಾದ, ಭಯ=ಸಂಸಾರಭಯದ, ಭಂಗ =ನಾಶವುಳ್ಳ, ಮಂಗಲಂ=ಕಲ್ಯಾಣವುಳ್ಳದ್ದು.

ತಾ.—ನನ್ನ ಸ್ವಾಮಿಯಾದ ಈ ವೇದವ್ಯಾಸರು ಬಲಗೈಯ ತುದಿಯಲ್ಲಿ ತರ್ಕ (ಜ್ಞಾನ) ಮುದ್ರೆಯನ್ನು ಧರಿಸಿ ತನ್ನ ಭಕ್ತರ ಅಜ್ಞಾನವನ್ನು ನಾಶ ಮಾಡುತ್ತಿದ್ದಾರೆ. ಎಡಮೊಣಗಂಟಿನಮೇಲೆ ಇಟ್ಟಿರುವ ಎಡಗೈಯಿಂದ ಅಭಯ ಮುದ್ರೆಯನ್ನು ತೋರಿಸುತ್ತಾ ಶ್ರೀವೇದವ್ಯಾಸರು ಸಂಸಾರಭಯವನ್ನು ದೂರ ಮಾಡಿ ಮೋಕ್ಷರೂಪವಾದ ಮಂಗಳಫಲವನ್ನು ಕೊಡುತ್ತಿದ್ದಾರೆ. ಈ ಶ್ಲೋಕ ದಿಂದ ಶ್ರೀವೇದವ್ಯಾಸರ ಕೈಗಳ ಸಂನಿವೇಶವನ್ನು ವರ್ಣಿಸಿದ್ದಾರೆ. ಬಲಗೈತುದಿ ಯಲ್ಲಿ ತರ್ಕಮುದ್ರೆಯನ್ನು, (ಹೆಬ್ಬೆರಳು ಮತ್ತು ತೋರುಬೆರಳನ್ನು ಸೇರಿಸಿದರೆ ತರ್ಕಮುದ್ರೆಯಾಗುತ್ತದೆ.) ಎಡಗೈಯಲ್ಲಿ ಅಭಯಮುದ್ರೆಯನ್ನು ಧರಿಸಿದ್ದಾರೆ ಎಂದು ಭಾವ.

ವಿ.—ತರ್ಕಸ್ಯ ಮುದ್ರಾ, ವರಾ ಚ ಸಾ ತರ್ಕಮುದ್ರಾ ಚ, ತಯಾ, ಹಸ್ತಸ್ಯ ಅಗ್ರಂ, ನ ಬೋಧಃ ಅಬೋಧಃ, (ಬೋಧಸ್ಯ ಅಭಾವಃ ಅಬೋಧಃ) ತಂ, ಜಾನುನಿ ಇತಿ ಅಧಿಜಾನು (ಅವ್ಯಯ), ಭೂಯಶ್ಚ ತತ್ ಭಯಂ ಚ, ಭೂಯೋಭಯಸ್ಯ ಭಂಗಃ, ಕೃತಃ ಭೂಯೋಭಯಭಂಗಃ ಯೇನ ತತ್, ಕೃತಭೂಯೋಭಯಭಂಗಂ ಚ ತತ್ ಮಂಗಲಂ ಚ ಕೃತಭೂಯೋಭಯ-ಭಂಗಮಂಗಲಂ.

ಕ್ರಿ.—ದ್ಯತಿ ದ್ಯತಃ ದ್ಯಂತಿ, ದ್ಯಸಿ ದ್ಯಥಃ ದ್ಯಥ, ದ್ಯಾಮಿ ದ್ಯಾವಃ ದ್ಯಾಮಃ, ದೋ ಅವಖಂಡನೇ, ಸಕ.। ಅನಿ.। ಪರ.। to cut, to

Rarest Archiver

devide, ದಿವಾದಿ, ಲಟ್. (ಹಸ್ತಾಗ್ರೇಣ ಅಬೋಧಃ ದಾಯತೇ = ಖಂಡಿಸಲ್ಪಡುತ್ತದೆ.)

ಅವ.—ಶ್ರೀವೇದವ್ಯಾಸರ ಕಂಠವು ಹೇಗಿದೆ ?

ಸತತಂ ಗಲತಾ ಸ್ವತಃ ಶ್ರುತಿ-
ತ್ರಿತಯೇನೇ(ನೈ)ವ ನಿಕಾಮಮಂಕಿತಃ ।
ಸುವಿಡಂಬಿತಕಂಬುರೀಕ್ಷ್ಯತೇ
ವರರೇಖಾತ್ರಯವಾನ್ ಗುರೋರ್ಗಲಃ ॥೩೭॥

ಅ.ಅ—ಸ್ವತಃ = ತನ್ನಿಂದ, ಸತತಂ = ಯಾವಾಗಲೂ, ಗಲತಾ = ಹೊರಡುತ್ತಿರುವ, ಶ್ರುತಿತ್ರಿತಯೇನ = ಋಕ್, ಯಜುಸ್, ಸಾಮವೆಂಬ ಮೂರು ವೇದಗಳಿಂದ, ನಿಕಾಮಂ = ಚೆನ್ನಾಗಿ, ಅಂಕಿತಃ ಇವ = ಗುರುತು ಮಾಡಲ್ಪಟ್ಟಿದೆಯೋ ಎಂಬಂತಿರುವ, ವರ = ಉತ್ತಮವಾದ, ರೇಖಾತ್ರಯ-ವಾನ್ = ಮೂರುಗೆರೆಗಳುಳ್ಳ, ಸುವಿಡಂಬಿತ = ಚೆನ್ನಾಗಿ ಹೋಲುತ್ತಿರುವ, ಕಂಬುಃ = ಶಂಖವುಳ್ಳ, ಗುರೋಃ = ಶ್ರೀವೇದವ್ಯಾಸರ, ಗಲಃ = ಕಂಠವು, ಈಕ್ಷ್ಯತೇ = ನೋಡಲ್ಪಡುತ್ತಿದೆ.

ತಾ.—ಈ ವೇದವ್ಯಾಸರ ಕಂಠದಿಂದ ಋಕ್, ಯಜುಸ್, ಸಾಮ ಎಂಬ ಮೂರು ವೇದಗಳ ಧ್ವನಿಗಳು ಯಾವಾಗಲೂ ಹೊರಹೊರಡುತ್ತಿರುತ್ತವೆ. ಈ ಮೂರು ವೇದಗಳಿಂದ ಮೂರು ರೇಖೆಗಳಾಗಿವೆಯೋ ಎಂಬಂತೆ ಈ ವೇದ ವ್ಯಾಸರ ಕಂಠದಲ್ಲಿಯೂ ಮೂರು ರೇಖೆಗಳಿವೆ. ಇದರಿಂದ ಕುತ್ತಿಗೆಯನ್ನು ನೋಡುವಾಗ ಶಂಖವನ್ನು ನೋಡಿದಂತಾಗುತ್ತದೆ. ಕತ್ತಿನಲ್ಲಿ ಮೂರು ರೇಖೆ ಗಳಿವೆ ಎಂದು ಭಾವ.

ವಿ.—ತ್ರಯಾಣಾಂ ಸಮೂಹಃ ತ್ರಿತಯಂ, ಶ್ರುತೀನಾಂ ತ್ರಿತಯಂ ಶ್ರುತಿ ತ್ರಿತಯಂ ತೇನ, ಸುವಿಡಂಬಿತಃ ಕಂಬುಃ ಯೇನ ಸಃ, ವರಾಶ್ಚ ತಾಃ ರೇಖಾಶ್ಚ, ವರರೇಖಾಣಾಂ ತ್ರಯಂ, ತತ್ ಅಸ್ಯ ಅಸ್ತೀತಿ ವರರೇಖಾತ್ರಯ-ವಾನ್.

Rarest Archiver

ಕ್ರಿ.—ಈಕ್ಷ್ಯತೇ ಈಕ್ಷ್ಯೇತೇ ಈಕ್ಷ್ಯಂತೇ, ಈಕ್ಷ್ಯಸೇ ಈಕ್ಷ್ಯೇಥೇ ಈಕ್ಷ್ಯಧ್ವೇ, ಈಕ್ಷ್ಯೇ ಈಕ್ಷ್ಯಾವಹೇ ಈಕ್ಷ್ಯಾಮಹೇ, ಈಕ್ಷ ದರ್ಶನೇ ಸಕ.। ಸೇಟ್.। to see. ಕರ್ಮಣಿ ಲಟ್. (ಅಹಂ ಗುರೋಃ ಗಲಂ ಈಕ್ಷೇ.)

ಅವ.—ಶ್ರೀವೇದವ್ಯಾಸರ ಮುಖವು ಹೇಗಿದೆ ?

ಸಕಲಾಸ್ತಕಲಂಕಕಾಲಿಮ
ಸ್ಫುರದಿಂದುಪ್ರಕರೋರುವಿಭ್ರಮಮ್ ।
ಅಧರೀಕುರುತೇ ಸ್ವಶೋಭಯಾ
ವದನಂ ದೇವಶಿಖಾಮಣೇರಿದಂ ॥೩೮॥

ಅ.ಅ—ದೇವಶಿಖಾಮಣೇಃ = ದೇವೋತ್ತಮರಾದ ಈ ವೇದವ್ಯಾಸರ, ಇದಂ ವದನಂ = ಈ ಮುಖವು, ಸ್ವಶೋಭಯಾ = ತನ್ನ ಕಾಂತಿಯಿಂದ, ಸಕಲ = ಹದಿನಾರು ಕಲೆಗಳಿಂದ ಕೂಡಿದ, ಅಸ್ತಕಲಂಕಕಾಲಿಮ = ಕಲಂಕದ ಕಪ್ಪಿಲ್ಲದ, ಸ್ಫುರತ್ = ಪ್ರಕಾಶಮಾನರಾದ, ಇಂದು = ಚಂದ್ರರ, ಪ್ರಕರ = ಸಮೂಹದ, ಉರುವಿಭ್ರಮಂ = ಅತಿಶಯವಾದ ಕಾಂತಿವಿಲಾಸವನ್ನು, ಅಧರೀಕುರುತೇ = ತಿರಸ್ಕರಿಸುತ್ತದೆ.

ತಾ.—ಕಲಂಕದ ಕಪ್ಪಿಲ್ಲದೆ ಹದಿನಾರು ಕಲೆಗಳಿಂದ ಪೂರ್ಣರಾಗಿ ಪ್ರಕಾಶಿಸುವ ಚಂದ್ರರ ಸಮೂಹದ ಅತಿಶಯವಾದ ಕಾಂತಿವಿಲಾಸವನ್ನು ದೇವೋತ್ತಮರಾದ ಈ ವೇದವ್ಯಾಸರ ಮುಖವು ಕಡಿಮೆಮಾಡುತ್ತದೆ, ತಿರಸ್ಕರಿಸುತ್ತದೆ. ಸಮಸ್ತಕಲಾಪೂರ್ಣರಾದ ನಿಷ್ಕಲಂಕರಾದ ಸಾವಿರಾರು ಚಂದ್ರರ ಕಾಂತಿಯನ್ನು ಮೀರಿಸುವ ಕಾಂತಿಯು ಶ್ರೀವೇದವ್ಯಾಸರ ಮುಖದಲ್ಲಿದೆ ಎಂದು ಭಾವ.

ವಿ.—ಕಲಾಭಿಃ ಸಹಿತಾಃ ಸಕಲಾಃ, ಅಸ್ತಃ ಕಲಂಕಸ್ಯ ಕಾಲಿಮಾ ಯೇಷಾಂ ತೇ ಅಸ್ತಕಲಂಕಕಾಲಿಮಾನಃ, ಸಕಲಾಶ್ಚ ಅಸ್ತಕಲಂಕಕಾಲಿಮಾನಶ್ಚ ಸ್ಫುರಂತಶ್ಚ ತೇ ಇಂದವಶ್ಚ, ತೇಷಾಂ ಪ್ರಕರಃ, ಉರುಶ್ಚಾಸೌ ವಿಭ್ರಮಶ್ಚ, ಸಕಲಾಸ್ತಕಲಂಕಕಾಲಿಮಸ್ಫುರದಿಂದುಪ್ರಕರಸ್ಯ ಉರುವಿಭ್ರಮಃ ತಂ, ಸ್ವಸ್ಯ ಶೋಭಾ ತಯಾ, ದೇವಾನಾಂ ಶಿಖಾಮಣಿಃ ತಸ್ಯ,

Rarest Archiver

ಕ್ರಿ.—ಅನಧರಂ ಅಧರಂ ಸಂಪದ್ಯಮಾನಂ ಕುರುತೇ ಅಧರೀಕುರುತೇ, ಕುರುತೇ ಸರ್ಗ ೫ ಶ್ಲೋಕ ೩೯ ನೋಡಿರಿ.

ಅವ.—ಶ್ರೀವೇದವ್ಯಾಸರ ತುಟಿ ಮತ್ತು ಹಲ್ಲುಗಳು ಹೇಗಿವೆ ?

ಅರುಣಾಶ್ಮದಲಾಂತರೋಲ್ಲಸ-
ನ್ನವಮುಕ್ತಾವಲಿಮಸ್ಯ ಲಜ್ಜಯೇತ್ ।
ಹಸತಃ ಸಿತದಂತಸಂತತಿಃ
ಪರಮಶ್ರೀರರುಣೋಷ್ಠರೋಚಿಷಃ ॥೩೯॥

ಅ.ಅ—ಅರುಣ = ಕೆಂಪಾದ, ಓಷ್ಠ = ತುಟಿಯ, ರೋಚಿಷಃ = ಕಾಂತಿಯುಳ್ಳ, ಹಸತಃ = ನಗುತ್ತಿರುವ, ಅಸ್ಯ = ಈ ವ್ಯಾಸರ, ಪರಮಶ್ರೀಃ = ಶ್ರೇಷ್ಠವಾದ ಕಾಂತಿಯುಳ್ಳ, ಸಿತದಂತಸಂತತಿಃ = ಬಿಳಿಯಾಗಿರುವ ಹಲ್ಲುಗಳ ಸಾಲು, ಅರುಣಾಶ್ಮ = ಪದ್ಮರಾಗಮಣಿಯ, ದಲ = ಎರಡು ಸೀಳುಗಳ, ಅಂತರ = ಮಧ್ಯದಲ್ಲಿ, ಉಲ್ಲಸತ್ = ಪ್ರಕಾಶಿಸುವ, ನವಮುಕ್ತಾವಲಿಂ = ಹೊಸದಾದ ಮುತ್ತುಗಳ ಸಾಲನ್ನು, ಲಜ್ಜಯೇತ್ = ನಾಚಿಕೆಗೊಳಿಸೀತು.

ತಾ.—ಶ್ರೀವೇದವ್ಯಾಸರ ಎರಡು ತುಟಿಗಳೂ ಕೆಂಪಗಿವೆ. ಆ ಎರಡು ತುಟಿಗಳ ಮಧ್ಯದಲ್ಲಿ ಶ್ರೇಷ್ಠವಾದ ಕಾಂತಿಯುಳ್ಳ ಶುಭ್ರವಾದ ಹಲ್ಲುಗಳ ಸಾಲು ಬಾಯಿಯಲ್ಲಿ ಕಂಗೊಳಿಸುತ್ತದೆ. ಶ್ರೀವೇದವ್ಯಾಸರು ನಗುವಾಗ ಈ ಹಲ್ಲುಗಳ ಸಾಲು ಕೆಂಪುರತ್ನಗಳ ಎರಡು ತುಂಡುಗಳ ನಡುವೆ ಕಂಗೊಳಿಸುವ ಹೊಸ ಮುತ್ತುಗಳ ಸಾಲನ್ನೂ ನಾಚಿಸುತ್ತದೆ. ಕೆಂಪುರತ್ನದ ಎರಡು ಹೋಳುಗಳ ನಡುವೆ ಇಟ್ಟಿರುವ ಎರಡು ಮುತ್ತಿನ ಸಾಲುಗಳಂತೆ ಕೆಂಪಾದ ತುಟಿಗಳ ನಡುವೆ ಇರುವ ಶ್ರೀವ್ಯಾಸರ ಹಲ್ಲುಗಳು ನಗುವಾಗ ಪ್ರಕಾಶಿಸುತ್ತವೆ ಎಂದು ಭಾವ.

ವಿ.—ಅರುಣಶ್ಚಾಸೌ ಅಶ್ಮಾ ಚ, ಅರುಣಾಶ್ಮನಃ ದಲೇ, ಅರುಣಾಶ್ಮದಲಯೋಃ ಅಂತರಂ, ಮುಕ್ತಾನಾಂ ಆವಲಿಃ ನವಾ ಚ ಸಾ ಮುಕ್ತಾವಲಿಶ್ಚ, ಅರುಣಾಶ್ಮದಲಾಂತರೇ ಉಲ್ಲಸಂತೀ ಚ ಸಾ ನವಮುಕ್ತಾವಲಿಶ್ಚ ತಾಂ, ಸಿತಾಶ್ಚ ತೇ ದಂತಾಶ್ಚ, ಸಿತದಂತಾನಾಂ ಸಂತತಿಃ, ಪರಮಾ ಶ್ರೀಃ ಯಸ್ಯಾಃ ಸಾ, ಅರುಣೌ ಚ ತೌ ಓಷ್ಠೌ ಚ, ಅರುಣೋಷ್ಠಯೋಃ ರೋಚಿಃ ಯಸ್ಯ ಸಃ;

Rarest Archives

ಕ್ರಿ.—ಲಜ್ಜಯೇತ್ ಲಜ್ಜಯೇತಾಂ ಲಜ್ಜಯೇಯುಃ, ಲಜ್ಜಯೇಃ ಲಜ್ಜಯೇತಂ ಲಜ್ಜಯೇತ; ಲಜ್ಜಯೇಯಂ ಲಜ್ಜಯೇವ ಲಜ್ಜಯೇಮ; ಓಲಸ್ಜೀ (ಲಜ್ಜ್)ವ್ರೀಡಾಯಾಂ ತುದಾದಿ.। ಅಕ.। ಸೇಟ್.। ಆತ್ಮ.। to be ashamed ಣಿಜಂತ, ವಿಧಿಲಿಙ್.

ಅವ.—ಶ್ರೀವೇದವ್ಯಾಸರ ಮಾತಿನ ಚಾತುರ್ಯವು ಹೇಗಿದೆ ?

ದ್ವಿಜವೃಂದಕೃತಂ ಮಹಾದರಾತ್(ಕುತೂಹಲಾ)
ದನುಯೋಗಾಂಧುಸಹಸ್ರಮುತ್ತಮಮ್ ।
ಇಯಮೇಕಪದೇ ಸರಸ್ವತೀ
ಶ್ರುತಿಭರ್ತುಃ ಪರಿಪೂರಯತ್ಯಹೋ ॥೪೦॥

ಅ.ಅ—ಶ್ರುತಿಭರ್ತುಃ=ವೇದಗಳಿಗೆ ಪ್ರಭುವಾದ ಶ್ರೀವ್ಯಾಸರ, ಇಯಂ =ಈ, ಸರಸ್ವತೀ=ಮಾತು, ಸರಸ್ವತೀನದಿಯು, ಮಹಾದರಾತ್=ಅತಿಶಯವಾದ ಪ್ರೀತಿಯಿಂದ, (ಕುತೂಹಲಾತ್=ಕೌತುಕದಿಂದ) ದ್ವಿಜವೃಂದಕೃತಂ= ಬ್ರಾಹ್ಮಣರ ಸಮೂಹದಿಂದ ಮಾಡಲ್ಪಟ್ಟ, ಉತ್ತಮಂ=ಶ್ರೇಷ್ಠವಾದ, ಅನುಯೋಗಾಂಧು=ಪ್ರಶ್ನೆಗಳೆಂಬ ಭಾವಿಗಳ, ಸಹಸ್ರಂ=ಸಾವಿರವನ್ನು, ಏಕಪದೇ =ಒಂದೇ ಕ್ಷಣದಲ್ಲಿ, ಒಂದೇ ಮಾತಿನಲ್ಲಿ, ಪರಿಪೂರಯತಿ = ತುಂಬಿಸುತ್ತದೆ. ಅಹೋ=ಆಶ್ಚರ್ಯವು !

ತಾ.—ನದಿಯಲ್ಲಿ ಪ್ರವಾಹಬಂದಾಗ ದಡದಲ್ಲಿರುವ ಸಾವಿರಾರು ಭಾವಿಗಳೂ ಒಂದೇ ಬಾರಿ ತುಂಬಿಬಿಡುತ್ತವೆ. ಆದರಂತೆ ವೇದಗಳಿಗೆ ಸ್ವಾಮಿಯಾದ ಈ ವೇದವ್ಯಾಸರ ವಾಣಿಯು ಅತಿವಿಶ್ವಾಸದಿಂದ (ಕುತೂಹಲದಿಂದ) ಬ್ರಾಹ್ಮಣರ ಸಮೂಹವು ಮಾಡಿದ ಸಾವಿರ ಪ್ರಶ್ನೆಗಳಿಗೆ ಒಂದೇಬಾರಿ ಸಾವಿರ ಉತ್ತರಗಳನ್ನು ಕೊಟ್ಟು ಆ ಪ್ರಶ್ನೆಗಳನ್ನು ಉತ್ತರಿಸಿತು ಎಂಬುದು ಅತ್ಯಾಶ್ಚರ್ಯಕರವಾಗಿದೆ. ಒಂದೇ ಸಲ ಸಾವಿರಪ್ರಶ್ನೆಗಳಿಗೆ ಉತ್ತರಕೊಟ್ಟು ಸಾವಿರಮುನಿಗಳ ಮನಸ್ಸನ್ನು ಸಂತೋಷಪಡಿಸಿದ ಈ ವೇದವ್ಯಾಸರ ಮಾತಿನ ಚಮತ್ಕಾರವು ಆಶ್ಚರ್ಯಕರವಾಗಿದೆ ಎಂದು ಭಾವವು.

ವಿ.—ದ್ವಿಜಾನಾಂ ವೃಂದಂ, ದ್ವಿಜವೃಂದೇನ ಕೃತಂ ತತ್, ಮಹಾಂಶ್ಚ

Rarest Archiver

ಅಸೌ ಆದರಶ್ಚ ತಸ್ಮಾತ್, ಅನುಯೋಗಾ ಏವ ಅಂಥವಃ, ಅನುಯೋಗಾಂಥೂನಾಂ ಸಹಸ್ರಂ, ತತ್; ಶ್ರುತೀನಾಂ ಭರ್ತಾ ತಸ್ಯ.

ಕ್ರಿ.—ಪರಿ+ಪೂರಯತಿ ಪೂರಯತಃ ಪೂರಯಂತಿ ಇತ್ಯಾದಿ, ಪೂರೀ ಆಪ್ಯಾಯನೇ (ಪೂರ್) ಸಕ. ಸೇಟ್. ಉಭ. to fill, ಲಟ್.

ಅವ.—ಶ್ರೀವ್ಯಾಸರ ಕಣ್ಣುಗಳ ನೋಟವು ಹೇಗಿದೆ ?

ಜಲಜಾಯತಲೋಚನಸ್ಯ ಮಾ-
ಮವಲೋಕೋಽಯಮುಪೇತ್ಯ ಲಾಲಯನ್ ।
ಕುರುತೇ ಪರಿರಭ್ಯ ಪೂರಿತಂ
ಭುವನಾನಂದಕರಸ್ಮಿತಾನ್ವಿತಃ ॥೪೧॥

ಅ.ಅ—ಜಲಜಾಯತಲೋಚನಸ್ಯ=ಕಮಲದಂತೆ ವಿಶಾಲವಾದ ಕಣ್ಣುಗಳುಳ್ಳ ವ್ಯಾಸರ, ಭುವನಾನಂದಕರ = ಲೋಕಗಳಿಗೆ ಸಂತೋಷವನ್ನುಂಟು ಮಾಡುವ, ಸ್ಮಿತ=ಮಂದಹಾಸದಿಂದ, ಅನ್ವಿತಃ=ಕೂಡಿದ, ಅಯಂ ಅವಲೋಕಃ = ಈ ನೋಟವು, ಲಾಲಯನ್ = ಮುದ್ದಿಸುತ್ತಾ, ಮಾಂ ಉಪೇತ್ಯ = ನನ್ನನ್ನು ಸಮೀಪಿಸಿ, ಪರಿರಭ್ಯ = ಆಲಿಂಗಿಸಿ, ಪೂರಿತಂ = ಪೂರ್ಣನನ್ನಾಗಿ (ಕೃತಾರ್ಥನನ್ನಾಗಿ), ಕುರುತೇ = ಮಾಡುತ್ತದೆ.

ತಾ.—ಶ್ರೀವೇದವ್ಯಾಸರ ಕಣ್ಣುಗಳು ತಾವರೆ ಹೂವುಗಳಂತೆ ವಿಶಾಲವಾಗಿವೆ. ಅವರು ಲೋಕಾನಂದಕರವಾದ ಮಂದಹಾಸದಿಂದ ಸಹಿತವಾಗಿ ನನ್ನ ಮೇಲೆ ಕಣ್ಣುನೋಟವನ್ನು ಬೀರುತ್ತಿದ್ದಾರೆ. ಅದು ನನ್ನ ಮೇಲೆ ಮಮತೆಯನ್ನು ಬೀರಿ, ನನ್ನ ಬಳಿಗೆ ಬಂದು ನನ್ನನ್ನು ಅಪ್ಪಿಕೊಂಡು ನನ್ನ ಅಭಿಲಾಷೆಯನ್ನೇ ಪೂರ್ತಿಗೊಳಿಸುತ್ತದೆ. ಶ್ರೀ ಮಧ್ವಾಚಾರ್ಯರು ತನ್ನ ಹತ್ತಿರಕ್ಕೆ ಬರುತ್ತಾ ಇರುವುದನ್ನು ಸ್ನೇಹ ಮತ್ತು ಮಮತೆಗಳಿಂದ ನೋಡುತ್ತಾ ಕಣ್ಣುನೋಟಗಳಿಂದಲೇ ತಬ್ಬಿಕೊಳ್ಳುವಂತೆ ಶ್ರೀವ್ಯಾಸರು ನೋಡುತ್ತಿದ್ದಾರೆ ಎಂದು ಭಾವ.

ವಿ.—ಜಲಜೇ ಇವ ಆಯತೇ ಲೋಚನೇ ಯಸ್ಯ, ತಸ್ಯ, ಭುವನಸ್ಯ

Rarest Archive

ಆನಂದಕರಂ, ಭುವನಾನಂದಕರಂ ಚ ತತ್ ಸ್ಮಿತಂ ಚ, ಭುವನಾನಂದಕರಸ್ಮಿತೇನ ಅನ್ವಿತಃ ।

ಕ್ರಿ.—ಕುರುತೇ. ಸರ್ಗ ೫ ಶ್ಲೋಕ ೩೯ ನೋಡಿರಿ.

ಅವ.—ಶ್ರೀವೇದವ್ಯಾಸರು ಕಿವಿಗಳಲ್ಲಿ ಧರಿಸಿರುವ ತುಳಸೀದೇವಿಯು ಏನು ಹೇಳುತ್ತಿದ್ದಾಳೆ?

ಉಪಕರ್ಣಮಮುಷ್ಯ ಭಾಸಿತಾ
ತುಲಸೀ ಮಂತ್ರಯತೀವ ಲಾಲಿತಾ ।
ಮಮ ನಾಥ ಪದಂ ನ ಮತ್ಸರಾ
ಜ್ಜಲಜಾದ್ಯಾನಿ ಹರೇಯುರಿತ್ಯಲಂ ॥೪೨॥

ಅ.ಅ—ಅಮುಷ್ಯ = ಈ ವ್ಯಾಸರ, ಉಪಕರ್ಣಂ = ಕಿವಿಯ ಸಮೀಪದಲ್ಲಿ, ಭಾಸಿತಾ = ಅಲಂಕಾರಗೊಂಡ, ತುಲಸೀ = ತುಲಸಿಯು, ಲಾಲಿತಾ = ಆದರಿಸಲ್ಪಟ್ಟದ್ದಾಗಿ, 'ನಾಥ! = ಸ್ವಾಮಿಯೇ!, ಜಲಜಾದ್ಯಾನಿ = ತಾವರೆಯೇ ಮೊದಲಾದ ಹೂವುಗಳು, ಮತ್ಸರಾತ್ = ಅಸೂಯೆಯಿಂದ, ಮಮ = ನನ್ನ, ಪದಂ = ಸ್ಥಾನವನ್ನು, ನ ಹರೇಯುಃ = ಅಪಹರಿಸದಿರಲಿ', ಇತಿ = ಹೀಗೆಂದು, ಅಲಂ = ಚೆನ್ನಾಗಿ, ಮಂತ್ರಯತಿ ಇವ=ಗುಟ್ಟಾಗಿ ಹೇಳುತ್ತಿದೆಯೋ ಎಂಬಂತಿದೆ.

ತಾ.—ಶ್ರೀವೇದವ್ಯಾಸರ ಕಿವಿಗಳಲ್ಲಿ ಕಂಗೊಳಿಸುವ ತುಳಸಿಯು 'ಸ್ವಾಮಿಯೇ! ತಾವರೆಯೇ ಮೊದಲಾದ ಹೂವುಗಳು ನನ್ನ ಸ್ಥಾನವಾದ ಈ ಕಿವಿಯ ಪ್ರದೇಶವನ್ನು, ಮತ್ಸರದಿಂದ ಅಪಹರಿಸಬಾರದು. ತಾವು ಅಪಹರಿಸದಂತೆ ನೋಡಿಕೊಳ್ಳಬೇಕು' ಎಂದು ವಿಜ್ಞಾಪಿಸಿಕೊಳ್ಳುತ್ತಿದೆಯೋ ಎಂಬಂತಿದೆ. ಬ್ರಾಹ್ಮಣೋತ್ತಮರು ಕಿವಿಯಲ್ಲಿ ತುಳಸೀದಳವನ್ನು ಮಾತ್ರವೇ ಧರಿಸುವರಲ್ಲದೆ ಬೇರೆ ಯಾವ ಪುಷ್ಪವನ್ನೂ ಧರಿಸುವುದಿಲ್ಲ. ಮುನೀಶ್ವರರಾದ ಶ್ರೀವ್ಯಾಸರೂ ತನ್ನ ಅವತಾರರೂಪಕ್ಕೆ ಅನುರೂಪವಾಗಿ ಕಿವಿಗಳಲ್ಲಿ ತುಳಸಿಯನ್ನು ಧರಿಸಿರುವುದನ್ನು ನೋಡುವಾಗ ಈ ತುಳಸಿಯು ವೇದವ್ಯಾಸರ ಕಿವಿಯಲ್ಲಿ ತನ್ನ ಇಷ್ಟವನ್ನು ಬೇಡಿಕೊಳ್ಳುತ್ತದೆಯೋ ಎಂದು ಕಾಣುತ್ತಿತ್ತು ಎಂದು ಉತ್ಪ್ರೇಕ್ಷಿಸಿದ್ದಾರೆ.

Rarest Archiver

ವಿ.—ಕರ್ಣಯೋಃ ಸಮೀಪಂ ಉಪಕರ್ಣಂ (ಅವ್ಯಯ) ಆದೌ ಭವಂ ಆದ್ಯಂ, ಜಲಜಂ ಆದ್ಯಂ ಯೇಷಾಂ ತಾನಿ ಜಲಜಾದ್ಯಾನಿ,

ಕ್ರಿ.—ಹರೇಯುಃ, ಹರೇತ್ ಹರೇತಾಂ ಹರೇಯುಃ, ಹರೇಃ ಹರೇತಂ ಹರೇತ, ಹರೇಯಂ ಹರೇವ ಹರೇಮ, ಹೃಞ್ ಹರಣೇ, ಸಕ.। ಅನಿ.। ಉಭ.। to take, to deprive of, to obtain. ವಿಧಿಲಿಙ್.

ಅವ.—ಶ್ರೀವೇದವ್ಯಾಸರ ಎರಡು ಹುಬ್ಬುಗಳ ಮಹಿಮೆಯು ಅಗಾಧ ವಾಗಿದೆ—

ವಿಭವಾಭಿಭವೋದ್ಭವಾದಿಕಂ
ಭುವನಾನಾಂ ಭುವನಪ್ರಭೋರ್ಭ್ರುವೋಃ।
ಅನಯೋರಪಿ ದಭ್ರವಿಭ್ರಮಾತ್
ಸಭವಾಂಭೋಜಭವಾತ್ಮನಾಂ ಭವೇತ್ ॥೪೩॥

ಅ.ಅ—ಭುವನಪ್ರಭೋಃ = ಲೋಕಸ್ವಾಮಿಯಾದ ಈ ವ್ಯಾಸರ, ಅನಯೋಃ ಭ್ರುವೋಃ = ಈ ಹುಬ್ಬುಗಳ, ದಭ್ರವಿಭ್ರಮಾತ್ ಅಪಿ = ಅಲ್ಪ ವಾದ ವಿಲಾಸದ ದೆಸೆಯಿಂದಲೂ, ಸಭವಾಂಭೋಜಭವಾತ್ಮನಾಂ = ಲೋಕ ಸ್ವಾಮಿಗಳಾದ ಶಂಕರ, ಬ್ರಹ್ಮರಿಂದ ಸಹಿತವಾದ, ಭುವನಾನಾಂ = ಲೋಕ ಗಳ, ವಿಭವ = ಐಶ್ವರ್ಯವೂ, ಅಭಿಭವ = ಸಂಹಾರವು, ಉದ್ಭವ = ಸೃಷ್ಟಿಯು, ಆದಿಕಂ = ಮೊದಲಾಗಿ ಉಳ್ಳದ್ದು, ಭವೇತ್ = ಆಗಿಯೇ ತೀರುತ್ತದೆ.

ತಾ.—ಈ ಶ್ರೀವೇದವ್ಯಾಸರು ಲೋಕಗಳಿಗೆಲ್ಲಾ ಸ್ವಾಮಿಯಾಗಿದ್ದಾರೆ. ಇವರ ಹುಬ್ಬುಗಳ ಅತ್ಯಲ್ಪವಾದ ಚಲನದಿಂದಲೇ ಲೋಕನಾಯಕರಾದ ಬ್ರಹ್ಮ ರುದ್ರರೇ ಮೊದಲಾದವರಿಗೂ, ಸಮಸ್ತಲೋಕಗಳೂ, ಲೋಕದ ಎಲ್ಲಾ ಪ್ರಾಣಿಗಳಿಗೂ ರಕ್ಷಣೆ ಎಂಬ ಸಂಪತ್ತು, ಮರಣ (ನಾಶ), ಉತ್ಪತ್ತಿ ಮೊದ-ಲಾದ ಎಲ್ಲಾ ವ್ಯಾಪಾರಗಳೂ ನಡೆಯುತ್ತವೆ. ಮೆಲ್ಲನೆ ಹುಬ್ಬಿನ ಅತ್ಯಲ್ಪವಾದ ಚಲನದಿಂದಲೇ ಜಗತ್ತಿನ ಸೃಷ್ಟಿಸ್ಥಿತಿಸಂಹಾರಾದಿಗಳನ್ನು ಈ ಶ್ರೀವೇದವ್ಯಾಸರು ಮಾಡುತ್ತಾರೆ, ಇವರ ಮಹಿಮೆಯು ಅತ್ಯದ್ಭುತವಾಗಿದೆ ಎಂದು ಭಾವ.

Rarest Archiver

ವಿ.—ವಿಭವಶ್ಚ ಅಭಿಭವಶ್ಚ ಉದ್ಭವಶ್ಚ, ವಿಭವಾಭಿಭವೋದ್ಭವಾಃ ಆದಯಃ ಯಸ್ಯ ತತ್ ವಿಭವಾಭಿಭವೋದ್ಭವಾದಿಕಂ, ಬಹುವ್ರೀಹಿಯಲ್ಲಿ ಕ ಪ್ರತ್ಯಯ. ಭುವನಾನಾಂ ಪ್ರಭುಃ ತಸ್ಯ, ದಭ್ರಶ್ಚಾಸೌ ವಿಭ್ರಮಶ್ಚ ತಸ್ಮಾತ್, ಅಂಭೋಜಾತ್ ಭವಃ ಯಸ್ಯ, ಭವಶ್ಚ ಅಂಭೋಜಭವಶ್ಚ, ಭವಾಂಭೋಜ-ಭವೌ ಚ ತೌ ಆತ್ಮಾನೌ ಚ, ತಾಭ್ಯಾಂ ಸಹಿತಾನಿ ಸಭವಾಂಭೋಜಭವಾತ್ಮಾನಿ ತೇಷಾಂ (ಭುವನಾನಾಂ).

ಕ್ರಿ.—ಭವೇತ್ ಭವೇತಾಂ ಭವೇಯುಃ, ಭವೇಃ ಭವೇತಂ ಭವೇತ, ಭವೇಯಂ ಭವೇವ ಭವೇಮ. ಭೂ ಸತ್ತಾಯಾಂ ಅಕರ್ಮಕ, ಸೇಟ್.। ಪರ.। to be, to become ವಿಧಿಲಿಙ್.

ಅವ.—ಶ್ರೀವೇದವ್ಯಾಸರ ಹಣೆಯ ತಿಲಕ (ನಾಮ, ಬೊಟ್ಟು) ವನ್ನು ವರ್ಣಿಸುತ್ತಾರೆ—

ತ್ರಿಜಗತ್ತಿಲಕಾಲಿಕಾಂತರೇ
ತಿಲಕೋಽಯಂ ಪರಭಾಗಮಾಪ್ತವಾನ್।
ಹರಿನೀಲಗಿರೀಂದ್ರಮಸ್ತಕ
ಸ್ಫುಟಶೋಣೋಪಲಪಂಕ್ತಿಸನ್ನಿಭಃ ॥೪೪॥

ಅ.ಅ—ತ್ರಿಜಗತ್=ಮೂರುಲೋಕಗಳಿಗೆ, ತಿಲಕ=ತಿಲಕದಂತಿರುವ (ಬೊಟ್ಟಿನಂತಿರುವ) (ಅಲಂಕಾರವಾಗಿರುವ) ಶ್ರೀವ್ಯಾಸರ, ಅಲಿಕ=ಹಣೆಯ, ಅಂತರೇ=ಮಧ್ಯದಲ್ಲಿ, ಪರಭಾಗಂ = ಬೇರೊಂದು ವರ್ಣದ ಸಂಬಂಧದಿಂದ ಉತ್ಕರ್ಷವನ್ನು, ಆಪ್ತವಾನ್=ಹೊಂದಿರುವ, ಅಯಂ=ಈ, ತಿಲಕಃ= ಕೆಂಪಾದ ವಸ್ತುವಿಶೇಷದಿಂದ ರಚಿತವಾದ ಹಣೆಯ ನಾಮವು (ಬೊಟ್ಟು), ಹರಿನೀಲ=ಇಂದ್ರನೀಲಮಣಿಯ, ಗಿರೀಂದ್ರ=ಶ್ರೇಷ್ಠವಾದ ಬೆಟ್ಟದ, ಮಸ್ತಕ =ಶಿಖರದಲ್ಲಿ, ಸ್ಫುಟ=ಸ್ಪಷ್ಟವಾಗಿರುವ (ಹೊಳೆಯುತ್ತಿರುವ), ಶೋಣೋ-ಪಲ=ಪದ್ಮರಾಗಮಣಿಗಳ, ಪಂಕ್ತಿಸನ್ನಿಭಃ = ಸಾಲುಗಳಿಗೆ ಸಮಾನವಾಗಿ (ವಿರಾಜತೇ=ವಿರಾಜಿಸುತ್ತದೆ).

ತಾ.—ಈ ವ್ಯಾಸರು ಮೂರುಲೋಕಗಳಿಗೆ ತಿಲಕಪ್ರಾಯರಾಗಿದ್ದಾರೆ,

Rarest Archiver

ಅಲಂಕಾರಪ್ರಾಯರಾಗಿದ್ದಾರೆ. ಇವರು ತಮ್ಮ ಹಣೆಯಲ್ಲಿ ಕೆಂಪಾದ ತಿಲಕವನ್ನೂ, ನಾಮವನ್ನೂ ಇಟ್ಟುಕೊಂಡಿರುವರು. ಅದು ನೀಲವರ್ಣದ ಅವರ ಹಣೆಯಲ್ಲಿ ಚೆನ್ನಾಗಿ ಹೊಳೆಯುತ್ತದೆ. ಅದು ಇಂದ್ರನೀಲಮಣಿಯ ಬೆಟ್ಟದ ತುದಿಯಲ್ಲಿರುವ ಪದ್ಮರಾಗಮಣಿಯ ಎರಡು ಸಾಲುಗಳಂತೆ (ಪದ್ಮರಾಗಮಣಿಯ ರಾಶಿಯಂತೆ) ಶೋಭಿಸುತ್ತಿದೆ. ಹೇಗೆ ಇಂದ್ರನೀಲಮಣಿಮಯವಾದ ಪರ್ವತವು ಮೇಲ್ಭಾಗದಲ್ಲಿ ಕೆಂಪಾದ ಪದ್ಮರಾಗಮಣಿಯ ಒಣ್ಣದಿಂದ ಉತ್ಕರ್ಷಹೊಂದಿ ಪ್ರಕಾಶಿಸುತ್ತದೆಯೋ ಅದರಂತೆ ಇಂದ್ರನೀಲಮಣಿಪರ್ವತದಂತಿರುವ ಶ್ರೀವೇದ-ವ್ಯಾಸರ ಹಣೆಯಲ್ಲಿ ಕೆಂಪಾದ ಶ್ರೀಗಂಧಾದಿವಸ್ತುಗಳಿಂದ ಮಾಡಿದ ಊರ್ಧ್ವಪುಂಡ್ರವು ನೀಲಕಾಂತಿಯ ಸಂಬಂಧದಿಂದ ಉತ್ಕೃಷ್ಟವಾಗಿ ಶೋಭಿಸುತ್ತಿದೆ. ಹೀಗೆ ವೇದವ್ಯಾಸರ ಸಂಬಂಧದಿಂದಲೇ (ತಿಲಕ) ನಾಮಗಳಿಗೆ ಅಲಂಕಾರ ಉಂಟಾಗಿದೆ. ತಿಲಕಸಂಬಂಧದಿಂದ ಶ್ರೀವೇದವ್ಯಾಸರಿಗೆ ಅಲಂಕಾರವಲ್ಲ. ವೇದ-ವ್ಯಾಸರೇ ಸ್ವತಃ ಸುಂದರರಾದ್ದರಿಂದ ಅವರಿಗೆ ಅಲಂಕಾರದ ಅಪೇಕ್ಷೆಯಿಲ್ಲ.

ವಿ.—ತ್ರೀಣಿ ಚ ತಾನಿ ಜಗಂತಿ ಚ, ತ್ರಿಜಗತಾಂ ತಿಲಕಃ, ತ್ರಿಜಗತ್ತಿ-ಲಕಸ್ಯ ಅಲಿಕಂ, ತ್ರಿಜಗತ್ತಿಲಕಾಲಿಕಸ್ಯ ಅಂತರಂ ತಸ್ಮಿನ್, ಅಲಿಕಂ = ಹಣೆ, ಲಲಾಟಮಲಿಕಂ ಗೋಧಿಃ—ಅಮರ. ಹರಿನೀಲಸ್ಯ ಗಿರೀಂದ್ರಃ, ಹರಿನೀಲ-ಗಿರೀಂದ್ರಸ್ಯ ಮಸ್ತಕಃ, ಹರಿನೀಲಗಿರೀಂದ್ರಮಸ್ತಕೇ ಸ್ಫುಟಾಃ ಶೋಣೋಪಲಾಃ, ಹರಿನೀಲಗಿರೀಂದ್ರಮಸ್ತಕಸ್ಫುಟಶೋಣೋಪಲಾನಾಂ ಪಂಕ್ತಿಃ, ಹರಿ... ಪಂಕ್ತ್ಯಾ ಸದೃಶಃ, ಹರಿ....ಸನ್ನಿಭಃ.

ಅವ.—ಶ್ರೀವೇದವ್ಯಾಸರ ಜಟಾಭಾರಸಹಿತವಾದ ದೇಹವು ಹೇಗಿದೆ ?

ನವಮಂಬುಧರಂ ವಿಡಂಬಯದ್
ವರವಿದ್ಯುದ್ವಲಯಂ ಜಗದ್ಗುರೋಃ ।
ಅವಲೋಕ್ಯ ಕೃತಾರ್ಥತಾಮಗಾಂ
ಸಜಟಾಮಂಡಲಮಂಡನಂ ವಪುಃ ॥೪೫॥

ಅ. ಅ—ವರವಿದ್ಯುದ್ವಲಯಂ = ಉತ್ತಮವಾದ ಮಿಂಚುಗಳ (ಮಂಡಲ) ಸಮೂಹವುಳ್ಳ, ನವಂ = ಹೊಸದಾದ, ಅಂಬುಧರಂ = ಮೋಡವನ್ನು, ವಿಡಂಬ-

Rarest Archiver

ಯತ್ = ಅನುಕರಿಸುವ, ಸಜಟಾಮಂಡಲಮಂಡನಂ = ಜಟೆಗಳ ಸಮೂಹ ವೆಂಬ ಅಲಂಕಾರವುಳ್ಳ, ಜಗದ್ಗುರೋಃ = ಜಗತ್ತಿಗೆ ಗುರುಗಳಾದ ಶ್ರೀವ್ಯಾಸರ, ವಪುಃ = ಶರೀರವನ್ನು, ಅವಲೋಕ್ಯ = ನೋಡಿ, ಕೃತಾರ್ಥತಾಂ = ಧನ್ಯತೆ ಯನ್ನು, ಅಗಾಂ = ಹೊಂದಿದೆನು.

ತಾ.—ಶ್ರೀವ್ಯಾಸರ ದೇಹವು ಹೊಸದಾದ ಮೋಡದಂತೆ ನೀಲವರ್ಣ ದ್ದಾಗಿದೆ. ತಲೆಯ ಮೇಲೆ ಮಿಂಚಿನಂತೆ ಹೊಂಬಣ್ಣದ ಜಟೆಗಳು ಶೋಭಿಸು ತ್ತವೆ. ಶ್ರೀವ್ಯಾಸರ ಇಂತಹ ದೇಹವು ಮಿಂಚಿನ ಸಮೂಹದಿಂದ ಕೂಡಿದ ಹೊಸಮೋಡವನ್ನು ಹೋಲುತ್ತದೆ. ಇಂತಹ ದಿವ್ಯಶರೀರವನ್ನು ಕಂಡು ನಾನು ಧನ್ಯನಾದೆನು. (ಇಲ್ಲಿಗೆ ಪಾದದಿಂದ ಆರಂಭಿಸಿ ಕೇಶದವರೆಗೆ ವರ್ಣಿಸಿದ್ದಾ ಯಿತು).

ವಿ.—ವರಾ ಚ ಸಾ ವಿದ್ಯುತ್ ಚ, ವರವಿದ್ಯುತಃ ವಲಯಃ ಯಸ್ಯ ಸಃ ತಂ, ಜಗತಾಂ ಗುರುಃ ತಸ್ಯ, ಜಟಾನಾಂ ಮಂಡಲಂ ಜಟಾಮಂಡಲಂ ಜಟಾ-ಮಂಡಲಮೇವ ಮಂಡನಂ, ಜಟಾಮಂಡಲಮಂಡನೇನ ಸಹ ವರ್ತತೇ ಇತಿ.

ಕ್ರಿ.—ಅಗಾಂ, ಅಗಾತ್ ಅಗಾತಾಂ ಅಗುಃ, ಅಗಾಃ ಅಗಾತಂ ಅಗಾತ, ಅಗಾಂ ಆಗಾವ ಆಗಾಮ. ಇಣ್ (ಇ) ಗತೌ to go ಸಕ. ಅನಿ. ಪರ. ಲುಜ್. 'ಇಣೋ ಗಾ ಲುಜಿ' ಗಾ ಆದೇಶ.

ಅವ.—ಸಾಕ್ಷಾತ್ ಲಕ್ಷ್ಮೀದೇವಿಗೂ ವರ್ಣಿಸಲು ಸಾಧ್ಯವಿಲ್ಲದ ಈ ಪರಮಾತ್ಮನ ಗುಣಗಳನ್ನು ಇತರರು ವರ್ಣಿಸಬಲ್ಲರೇ ? —

ನ ರಮಾಪಿ ಪದಾಂಗುಲೀಲಸ-
ನ್ನಖಧೂರಾಜದನಂತಸದ್ಗುಣಾನ್ ।
ಗಣಯೇತ್ ಗಣಯಂತ್ಯನಾರತಂ
ಪರಮಾನ್ ಕೋಽಸ್ಯ ಪರೋ ಗುಣಾನ್ ವದೇತ್ ॥೪೬॥

ಅ.ಅ—ರಮಾ ಅಪಿ = ಲಕ್ಷ್ಮೀದೇವಿಯೂ ಕೂಡ, ಅಸ್ಯ = ಈ ವ್ಯಾಸರ, ಪದ = ಕಾಲಿನ, ಅಂಗುಲೀ = ಕಿರುಬೆರಳಿನಲ್ಲಿ, ಲಸತ್ = ಪ್ರಕಾಶಿ

Rarest Archiver

ಸುವ, ನಖ = ಉಗುರಿನ, ಧೂಃ = ಅಗ್ರಭಾಗದಲ್ಲಿ, ರಾಜತ್ = ಪ್ರಕಾಶಿಸುವ, ಅನಂತಸದ್ಗುಣಾನ್ = ಅಸಂಖ್ಯಾತವಾದ ಒಳ್ಳೆಯ ಗುಣಗಳನ್ನು, ಅನಾರತಂ = ಯಾವಾಗಲೂ, ಗಣಯಂತೀ ಅಪಿ = ಎಣಿಸುತ್ತಿರುವವಳಾದರೂ, ನ ಗಣಯೇತ್ = (ಪೂರ್ತಿ) ಎಣಿಸಲಾರಳು. ಪರಃ ಕಃ = ಬೇರೆ ಯಾವನು, ಪರಮಾನ್ = ಉತ್ತಮವಾದ, ಗುಣಾನ್ = ಗುಣಗಳನ್ನು, ವದೇತ್ = ಹೇಳಿಯಾನು ?

ತಾ.—ಬ್ರಹ್ಮದೇವರಿಗಿಂತಲೂ ಲಕ್ಷ್ಮೀದೇವಿಯು ಶ್ರೇಷ್ಠಳು. ಅವಳೂ ಕೂಡ ಈ ವೇದವ್ಯಾಸರ ಕಾಲಿನ ಕಿರಿಯ ಬೆರಳಿನ ಉಗುರಿನ ತುದಿಯಲ್ಲಿರುವ ಅನಂತಸದ್ಗುಣಗಳನ್ನು ನಿತ್ಯದಲ್ಲಿಯೂ ಲೆಕ್ಕಮಾಡುತ್ತಿದ್ದರೂ ಅವುಗಳ ಕೊನೆಯನ್ನು ಕಾಣಲಾರಳು. ಹೀಗಿರುವಾಗ ಈ ಮಹಾತ್ಮರ ಗುಣಗಳನ್ನು ಇತರರು ಯಾರು ತಾನೇ ಹೇಳಲು ಸಮರ್ಥರಾಗುತ್ತಾರೆ. ಲಕ್ಷ್ಮೀದೇವಿಯೂ ಲೆಕ್ಕ ಮಾಡಲು ಶಕ್ತಳಲ್ಲವೆಂದಮೇಲೆ ಮಿಕ್ಕುಳಿದವರಿಗೆ ಎಂದಿಗೂ ಸಾಧ್ಯವಿಲ್ಲ. ದೇವರು ಅನಂತಾನಂತಗುಣಪರಿಪೂರ್ಣರು ಎಂದು ಭಾವ.

ವಿ.—ಪದಸ್ಯ ಅಂಗುಲಿಃ, ಪದಾಂಗುಲ್ಯಾಂ ಲಸನ್, ಪದಾಂಗುಲೀಲಸಂಶ್ಚಾಸೌ ನಖಶ್ಚ, ಪದಾಂಗುಲೀಲಸನ್ನಖಸ್ಯ ಧೂಃ, ಪದಾಂಗುಲೀಲಸನ್ನಖಧುರಿ ರಾಜಂತಶ್ಚ ತೇ ಅನಂತಾಶ್ಚ ಸಂತಶ್ಚ ತೇ ಗುಣಾಶ್ಚ, ತಾನ್,

ಕ್ರಿ.—ಗಣಯೇತ್ ಗಣಯೇತಾಂ ಗಣಯೇಯುಃ, ಗಣಯೇಃ ಗಣಯೇತಂ ಗಣಯೇತ, ಗಣಯೇಯಂ ಗಣಯೇವ ಗಣಯೇಮ, ಗಣ ಸಂಖ್ಯಾನೇ, ಸಕ.। ಸೇಟ್.। ಉಭ.। to count, to enumerate. ವಿಧಿಲಿಙ್.

ಅವ.—ಪರಮಾತ್ಮನ ಸ್ಥೂಲದೇಹವಾದ ಬ್ರಹ್ಮಾಂಡವನ್ನು ನೋಡುವಾಗ ಆಶ್ಚರ್ಯವಾಗದಿದ್ದರೂ ಪ್ರಕೃತ ಶ್ರೀವೇದವ್ಯಾಸರ ದೇಹದರ್ಶನಮಾಡಿದಾಗ ನನಗೆ ಆಶ್ಚರ್ಯವಾಗುತ್ತಿದೆ—

ನ ಕುತೂಹಲಿತಾ ಕುತೂಹಲಂ
ತನುಮೇನಾಮವಲೋಕ್ಯ ಸದ್ಗುರೋಃ।
ಸನವಾವರಣಾಂಡದರ್ಶಿನೋ
ಗೃಹಬುದ್ಧ್ಯಾ ಮಮ ನಿಷ್ಕುತೂಹಲಂ ॥೪೭॥

ಅ. ಆ —ಸದ್ಗುರೋಃ=ಸಜ್ಜನರಿಗೆ ತತ್ತ್ವೋಪದೇಶಕರಾದ ಶ್ರೀವ್ಯಾಸರ, ಏನಾಂ= ಈ ಮುಂದೆ ಇರುವ, ತನುಂ=ಶರೀರವನ್ನು, ಅವಲೋಕ್ಯ=ನೋಡಿ, ನಿಷ್ಕುತೂಹಲಂ = ಆಶ್ಚರ್ಯವಿಲ್ಲದೆ, ಗೃಹಬುದ್ಧ್ಯಾ=ಮನೆಯೆಂಬ ಜ್ಞಾನ ದಿಂದ, ಸನವಾವರಣ = ಜಲವೊದಲಾದ ಒಂಭತ್ತು ಆವರಣಗಳಿಂದ ಕೂಡಿದ, ಅಂಡ=ಬ್ರಹ್ಮಾಂಡವನ್ನು, ದರ್ಶಿನಃ = ನೋಡುತ್ತಿರುವ, ಮಮ=ನನಗೆ, ಕುತೂಹಲಿತಾ=ಆಶ್ಚರ್ಯಉಳ್ಳತನವು, ಕುತೂಹಲಂ ನ = ಆಶ್ಚರ್ಯವಲ್ಲ.

ತಾ.—ಈ ಬ್ರಹ್ಮಾಂಡಕ್ಕೆ ನೀರು ಅಗ್ನಿ ವಾಯು ಆಕಾಶ ಅಹಂಕಾರ ತತ್ತ್ವ, ಮಹತ್ತತ್ತ್ವ, ಸತ್ತ್ವ, ರಜಸ್ಸು, ತಮಸ್ಸುಗಳೆಂಬ ಒಂಭತ್ತು ಆವರಣ ಗಳಿವೆ. ಇದು ಮನೆಯಂತೆ ದೇವರಿಗೆ ಸ್ಥೂಲವಾದ ಬಾಹ್ಯದೇಹವು, ನಾನು ಇದನ್ನು ಆಶ್ಚರ್ಯವಿಲ್ಲದೆ ಚೆನ್ನಾಗಿ ನೋಡುತ್ತೇನೆ. ಆದರೆ ಸಜ್ಜನರಿಗೆ ಗುರು ಗಳಾದ ಶ್ರೀ ವೇದವ್ಯಾಸದೇವರ ಕಣ್ಣೆದುರಿಗೆ ಇರುವ ಈ ದೇಹವನ್ನು ನೋಡಿ ಆಶ್ಚರ್ಯವಾಗುತ್ತಿದೆ ಎಂಬುದು ಆಶ್ಚರ್ಯವಲ್ಲ. ಏಕೆಂದರೆ ಬಹುದೊಡ್ಡದಾದ ಬ್ರಹ್ಮಾಂಡವನ್ನು ನಾನು ಭಗವಂತನ ಅನುಗ್ರಹದಿಂದ ಸರಿಯಾಗಿ ಪೂರ್ತಿಯಾಗಿ ನೋಡಬಲ್ಲೆನು. ಆದುದರಿಂದ ನನಗೆ ಆಶ್ಚರ್ಯವಾಗುವುದಿಲ್ಲ. ಆದರೆ ಶ್ರೀ ವ್ಯಾಸರ ಈ ಜ್ಞಾನಾನಂದಾತ್ಮಕವಾದ ಬಹುಸುಂದರವಾದ ದೇಹವನ್ನು ನೋಡಿ ಅಲ್ಲಿ ಪ್ರತಿಕ್ಷಣದಲ್ಲಿಯೂ ಕಾಣುವ ಹೊಸಹೊಸದಾದ ಗುಣಗಳನ್ನು ಕಂಡು ನನಗೆ ಆಶ್ಚರ್ಯವಾಗುವುದರಲ್ಲಿ ಏನು ಆಶ್ಚರ್ಯ? ರಮಾದೇವಿಯೂ ದೇವರ ಕಾಲಿನ ಕಿರುಬೆರಳಿನ ಉಗುರಿನ ತುದಿಯ ಧೂಳಿನ ಕಣದ ಗುಣಗಳನ್ನೂ ಎಣಿಸ ಲಾರದೆ ಆಶ್ಚರ್ಯಪಡುವಳೆಂದ ಮೇಲೆ ನನಗೆ ಆಶ್ಚರ್ಯವಾಗುವುದರಲ್ಲಿ ಆಶ್ಚರ್ಯ ವಿಲ್ಲ. ಪರಂತು ಈ ಶುದ್ಧಾನಂದಾದಿಸ್ವರೂಪದೇಹವನ್ನು ನೋಡುವಾಗ ಆಶ್ಚರ್ಯ ವಾಗದಿದ್ದರೆ ಆಶ್ಚರ್ಯ.

ವಿ.—ಕುತೂಹಲಂ ಅಸ್ಯ ಅಸ್ತೀತಿ ಕುತೂಹಲೀ, ಕುತೂಹಲಿನಃ ಭಾವಃ ಕುತೂಹಲಿತಾ, ಸತಾಂ ಗುರುಃ ತಸ್ಯ, ನವ ಚ ತಾನಿ ಆವರಣಾನಿ ಚ ನವಾ-ವರಣಾನಿ, ತೈಃ ಸಹಿತಂ ಸನವಾವರಣಂ, ತಚ್ಚ ತತ್ ಅಂಡಂ ಚ, ಸನವಾ-ವರಣಾಂಡಂ ಪಶ್ಯತೀತಿ ಸನವಾವರಣಾಂಡದರ್ಶೀ ತಸ್ಯ, ಗೃಹಂ ಇತಿ ಬುದ್ಧಿಃ

Rarest Archiver

ಗೃಹಬುದ್ಧಿಃ ತಯಾ, ನ ವಿದ್ಯತೇ ಕುತೂಹಲಂ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ನಿಷ್ಕುತೂಹಲಂ (ಕ್ರಿ. ವಿ. ಅ.)

ಅವ.—ಆಚಾರ್ಯರ ಮನಸ್ಸು ಕಣ್ಣುಗಳೆರಡು ಮೊದಲೇ ಶ್ರೀವ್ಯಾಸರ ಬಳಿಗೆ ಓಡಿದ್ದುವು, ಅವರು ದೇಹದಿಂದಲೂ ಗುರುಗಳನ್ನು ಸಮೀಪಿಸಿದರು—

ಇತಿ ಚಿಂತಯತಾ ಮಹಾಧಿಯಾ
ಪದವೀಂ ಬಾಹ್ಯಗತಾಮತೀಯುಷಾ ।
ಸ ಮನೋನಯನೈಃ ಪುರಾಗತಃ
ತತ ಆಪೇ ವಪುಷಾಪಿ ವೇದರಾಟ್ ॥೪೮॥

ಅ.ಅ—ಇತಿ ಚಿಂತಯತಾ = ಈ ರೀತಿ ಆಲೋಚಿಸುತ್ತಿರುವ, ಬಾಹ್ಯಗತಾಂ = ಹೊರಗಿನ, ಪದವೀಂ = ದಾರಿಯನ್ನು, ಅತೀಯುಷಾ = ದಾಟಿಹೋಗಿರುವ, ಮಹಾಧಿಯಾ = ಶ್ರೀಮಧ್ವಾಚಾರ್ಯರಿಂದ, ಮನೋನಯನೈಃ = ಮನಸ್ಸು ಮತ್ತು ಕಣ್ಣುಗಳಿಂದ, ಪುರಾ = ಮೊದಲು, ಗತಃ = ಪ್ರಾಪ್ತರಾದ, **ಸಃ ವೇದರಾಟ್** = ಆ ವೇದಪ್ರಭುಗಳಾದ ವ್ಯಾಸರು, ತತಃ = ಅನಂತರ, **ವಪುಷಾಪಿ** = ಶರೀರದಿಂದಲೂ, ಆಪೇ = ಹೊಂದಲ್ಪಟ್ಟರು.

ತಾ.—ಈ ರೀತಿ ಪಾದಾದಿಕೇಶಪರ್ಯಂತವಾಗಿ ಶ್ರೀವ್ಯಾಸರ ದಿವ್ಯಗುಣಗಳನ್ನು ಧ್ಯಾನಿಸುತ್ತಾ ಆಚಾರ್ಯರು ಹೊರಗಿನ ದಾರಿಯನ್ನು ದಾಟಿದರು. ಅವರು ಶ್ರೀವೇದವ್ಯಾಸರನ್ನು ಮನಸ್ಸು ಮತ್ತು ಕಣ್ಣುಗಳ ಮೂಲಕ ಮೊದಲೇ ತಲುಪಿದ್ದರು. ಅನಂತರ ಈಗ ದೇಹದಿಂದಲೂ ಸಮೀಪಿಸಿದರು. ಮೊಟ್ಟ ಮೊದಲೇ ಆಚಾರ್ಯರ ಮನಸ್ಸು ವ್ಯಾಸರಲ್ಲಿ ಕೌತುಕದಿಂದ ನೆಟ್ಟಿತ್ತು. ಕಣ್ಣಿಗೆ ಅವರ ಮೂರ್ತಿಯು ಗೋಚರಿಸಿದಾಗ ಮನಸ್ಸನ್ನು ಕಣ್ಣುಗಳೂ ಹಿಂಬಾಲಿಸಿದುವು. ಆ ಮೇಲೆ ಅವರ ದೇಹವು ವ್ಯಾಸರ ಬಳಿಗೆ ಓಡಿಬಂದಿತು, ಎಂದು ಹೇಳಿದ್ದರಿಂದ ಆಚಾರ್ಯರಿಗೆ ವ್ಯಾಸದರ್ಶನದಲ್ಲಿ ಭಕ್ತಿಕೌತೂಹಲಗಳು ಬಹಳ ಅಧಿಕವಾಗಿದ್ದುವು ಎಂದು ಸೂಚಿತವಾಗಿದೆ.

ವಿ.—ಮಹತೀ ಧೀಃ ಯಸ್ಯ ಸಃ ತೇನ, ಬಾಹ್ಯೇ ಗತಾ ತಾಂ, ಅತೀ-

Rarest Archiver

ಯುಷಾ ಅತೀಯಿವದ್ಭ್ಯಾಂ ಅತೀಯಿವದ್ಭಿಃ, ಅತೀಯಿವಸ್ ಸಾಂತ. ತೃ. ಏ. ಮನಶ್ಚ ನಯನೇ ಚ ತೈಃ, ವೇದಾನಾಂ ರಾಟ್ ;

ಕ್ರಿ.—ಆಪೇ ಆಪಾತೇ ಆಪಿರೇ, ಆಪಿಷೇ ಆಪಾಥೇ ಆಪಿಧ್ವೇ, ಆಪೇ ಆಪಿವಹೇ ಆಪಿಮಹೇ; ಆಪ್ಲೃ ವ್ಯಾಪ್ತೌ (ಆಪ್) ಸಕ.। ಅನಿ.। ಪರ.। to obtain, to pervade. ಕರ್ಮಣಿ ಲಿಟ್. ಆತ್ಮ.

ಅವ.—ಮೊದಲು ಆಚಾರ್ಯರು ಭಕ್ತಿಯಿಂದ ಬಾಗಿ ಆನಂದರಸಮಗ್ನರಾಗಿ ಸ್ತೋತ್ರವನ್ನು ಮಾತ್ರವೇ ಮಾಡಿದರು—

ಗುರುಭಕ್ತಿಭರಾನತಾಕೃತಿಃ
ವಿರಚಯ್ಯಾಂಜಲಿಬಂಧಮಂಜಸಾ ।
ಕ್ಷಣಮಾಮುಕುಲೀಕೃತೇಕ್ಷಣಃ
ಸ ಗುರುಂ ಕೇವಲಮಭ್ಯವಂದತ ॥೪೯॥

ಅ.ಅ—ಗರುಭಕ್ತಿಭರ= ಅತಿಶಯವಾದ ಭಕ್ತಿಯ ಭಾರದಿಂದ, ಆನತಾಕೃತಿಃ= ಬಾಗಿದ ಆಕಾರವುಳ್ಳ, ಕ್ಷಣಂ= ಸ್ವಲ್ಪಕಾಲ, ಆಮುಕುಲೀಕೃತೇಕ್ಷಣಃ = ಸ್ವಲ್ಪಮುಚ್ಚಿದ ಕಣ್ಣುಗಳುಳ್ಳ, ಸಃ = ಆ ಮಧ್ವಾಚಾರ್ಯರು, ಅಂಜಲಿಬಂಧಂ = ಕೈಗಳ ಜೋಡಿಸುವಿಕೆಯನ್ನು, ಅಂಜಸಾ = ತಾತ್ತ್ವಿಕವಾಗಿ, ವಿರಚಯ್ಯ= ಮಾಡಿ, ಕೇವಲಂ = ಮುಖ್ಯರಾದ, ಗುರುಂ = ಗುರುಗಳಾದ ಶ್ರೀವೇದವ್ಯಾಸರನ್ನು, ಅಭ್ಯವಂದತ= ಸ್ತುತಿಸಿದರು.

ತಾ.—ಆಚಾರ್ಯರ ದೇಹವು ಅತಿಶಯವಾದ ಭಕ್ತಿಯ ಭಾರದಿಂದ ಬಾಗಿತು. ಅವರು ಸರಿಯಾಗಿ ಕೈಜೋಡಿಸಿ ಕ್ಷಣಕಾಲ ಕಣ್ಣುಗಳನ್ನು ಮುಚ್ಚಿ ತನ್ನ ಗುರುಗಳಾದ ಶ್ರೀವ್ಯಾಸರ ಸ್ತೋತ್ರವನ್ನೇ ಮಾಡಿದರು. ಕಣ್ಣುಗಳಲ್ಲಿ ಆನಂದಬಾಷ್ಪವು ತುಂಬಿ ಕಣ್ಣುಗಳು ಅರ್ಧಮುಚ್ಚಿದುವು. ಗುರುಭಕ್ತಿಯ ಅತಿಶಯದಿಂದ ದೇಹ ಬಾಗಿತು. ಕೈಗಳು ಹೂವಿನಮೊಗ್ಗಾದವು. ತನಗೇ ಮುಖ್ಯ ಗುರುಗಳನ್ನು ಆಚಾರ್ಯರು ಸ್ತುತಿಸಿದರು.

ವಿ.—ಭಕ್ತೇಃ ಭರಃ, ಗುರುಶ್ಚಾಸೌ ಭಕ್ತಿಭರಶ್ಚ, ಗುರುಭಕ್ತಿಭರೇಣ

Rarest Archiver

ಆನತಾ ಆಕೃತಿಃ ಯಸ್ಯ ಸಃ, ಅಮುಕುಲೇ ಮುಕುಲೇ ಸಂಪದ್ಯಮಾನೇ ಕೃತೇ ಮುಕುಲೀಕೃತೇ, ಆ ಮುಕುಲೀಕೃತೇ ಈಕ್ಷಣೇ ಯಸ್ಯ ಸಃ,

ಕ್ರಿ.—ಅಭಿ+ಅವೆಂದತ, ಸರ್ಗ ೫ ಶ್ಲೋಕ ೧೦ನೋಡಿರಿ.

ಅವ.—ಆಚಾರ್ಯರು ಶ್ರೀವೇದವ್ಯಾಸರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು—

ವಿನಯಾಭರಣೇನ ಭೂಷಿತಃ
ಸ್ಫುಟಮಷ್ಟಾಂಗವಿಶಿಷ್ಟಚೇಷ್ಟಿತಃ ।
ಭಗವತ್ತಮಪಾದಪಂಕಜೇ
ಭಗವಾನ್ ಸ ಪ್ರಣನಾಮ ಭಾಗ್ಯವಾನ್ ॥೫೦॥

ಅ.ಅ—ವಿನಯಾಭರಣೇನ = ವಿಧೇಯತೆಯೆಂಬ ಒಡವೆಯಿಂದ, ಭೂಷಿತಃ = ಅಲಂಕೃತರಾದ, ಅಷ್ಟಾಂಗ = ಎದೆ, ತಲೆ, ದೃಷ್ಟಿ, ಮನಸ್ಸು, ಮಾತು, ಪಾದಗಳು, ಕೈಗಳು, ಮೊಣಕಾಲುಗಳೆಂಬ ಎಂಟು ಅಂಗಗಳ, ವಿಶಿಷ್ಟ = ಉತ್ತಮವಾದ, ಚೇಷ್ಟಿತಃ = ನಮಸ್ಕಾರ ವ್ಯಾಪಾರವುಳ್ಳ, ಭಾಗ್ಯವಾನ್ = ಪುಣ್ಯಶಾಲಿಗಳಾದ, ಭಗವಾನ್ = ಷಡ್ಗುಣೈಶ್ವರ್ಯವುಳ್ಳ, ಸಃ = ಆ ಮಧ್ವಾಚಾರ್ಯರು, ಭಗವತ್ತಮ = ಷಡ್ಗುಣೈಶ್ವರ್ಯವುಳ್ಳವರಲ್ಲಿ ಶ್ರೇಷ್ಠರಾದ ವ್ಯಾಸರ, ಪಾದಪಂಕಜೇ = ಕಮಲದಂತಿರುವ ಎರಡು ಪಾದಗಳನ್ನು, ಸ್ಫುಟಂ = ಸ್ಪಷ್ಟವಾಗಿ, ಪ್ರಣನಾಮ = ನಮಸ್ಕರಿಸಿದರು.

ತಾ.—ವಿನಯವೆಂಬ ಆಭರಣದಿಂದ ಭೂಷಿತರಾದ ಪುಣ್ಯಶಾಲಿಗಳಾದ ಷಡ್ಗುಣಪೂರ್ಣರಾದ ಆಚಾರ್ಯರು ನಮಸ್ಕಾರದ ಎಂಟು ಅಂಗಗಳಿಂದ ಮಾಡಬೇಕಾದ ಎಲ್ಲಾ ವ್ಯಾಪಾರವನ್ನೂ ನಡೆಸಿದರು. ಐಶ್ವರ್ಯಾದಿ ಷಡ್ಗುಣಪೂರ್ಣರಲ್ಲಿ ಅತಿಶ್ರೇಷ್ಠರಾದ ಶ್ರೀವೇದವ್ಯಾಸದೇವರ ಅಡಿದಾವರೆಗಳಿಗೆ ನಮಸ್ಕರಿಸಿದರು. ಉರಸಾ ಶಿರಸಾ ದೃಷ್ಟ್ಯಾ ಮನಸಾ ವಚಸಾ ತಥಾ । ಪದ್ಭ್ಯಾಂ ಕರಾಭ್ಯಾಂ ಜಾನುಭ್ಯಾಂ ಪ್ರಣಾಮೋಽಷ್ಟಾಂಗ ಈರಿತಃ ॥ ಎದೆ, ತಲೆ, ಕಾಲುಗಳು, ಕೈಗಳು, ಮೊಣಕಾಲುಗಳನ್ನು ಸರಿಯಾಗಿ ನೆಲಕ್ಕೆ ತಗುಲಿಸಿ ಮನಸ್ಸನ್ನು ದೇವರಲ್ಲೇ ಇಟ್ಟು ಕಣ್ಣುಗಳಿಂದ ದೇವರನ್ನು ನೋಡುತ್ತಾ

Rarest Archiver

ಬಾಯಿಯಿಂದ ಸ್ತೋತ್ರಗಳನ್ನು ಉಚ್ಚರಿಸುತ್ತಾ ನಮಸ್ಕರಿಸುವುದೇ ಸಾಷ್ಟಾಂಗ ನಮಸ್ಕಾರವು.

ವಿ.—ವಿನಯ ಏವ ಆಭರಣಂ ತೇನ, ಅಷ್ಟ ಚ ತಾನಿ ಅಂಗಾನಿ ಚ, ಅಷ್ಟಾಂಗಾನಾಂ ವಿಶಿಷ್ಟಾನಿ ಚೇಷ್ಟಿತಾನಿ ಯಸ್ಯ ಸಃ, ಭಗಃ ಅಸ್ಯ ಅಸ್ತೀತಿ ಭಗವಾನ್, ಅತಿಶಯೇನ ಭಗವಾನ್ ಭಗವತ್ತಮಃ, ಪಾದೌ ಪಂಕಜೇ ಇವ ಪಾದಪಂಕಜೇ ಭಗವತ್ತಮಸ್ಯ ಪಾದಪಂಕಜೇ, ತೇ. ಭಾಗ್ಯಂ ಅಸ್ಯ ಅಸ್ತೀತಿ ಭಾಗ್ಯವಾನ್,

ಕ್ರಿ.—ಪ್ರ+ನನಾಮ. ಸರ್ಗ ೫ ಶ್ಲೋಕ ೩೦ ನೋಡಿರಿ.

ಅವ.—ಆಗ ಶ್ರೀವೇದವ್ಯಾಸರು ಏನು ಮಾಡಿದರು ?

ಸ ನಿರೀಕ್ಷ್ಯ ಪರಾಶರಾತ್ಮಜಃ
ಪ್ರಣತಂ ಪ್ರೇಷ್ಠಮಶೇಷಸದ್ಗುಣೈಃ ।
ಕರಯೋರ್ಯುಗಲೇನ ವಲ್ಗುನಾ
ತಮುದಸ್ಥಾಪಯದಾಶುಪಾತಿನಾ ॥೫೦॥

ಅ. ಅ—ಪರಾಶರಾತ್ಮಜಃ ಸಃ = ಪರಾಶರಪುತ್ರರಾದ ಆ ವ್ಯಾಸರು, ಅಶೇಷಸದ್ಗುಣೈಃ=ಎಲ್ಲಾ ಒಳ್ಳೆಯಗುಣಗಳಿಂದ, ಪ್ರೇಷ್ಠಂ=ಅತ್ಯಂತ ಪ್ರಿಯ ರಾದ, ಪ್ರಣತಂ=ನಮಿಸಿದ, ತಂ=ಆ ಮಧ್ವಾಚಾರ್ಯರನ್ನು, ನಿರೀಕ್ಷ್ಯ= ನೋಡಿ, ವಲ್ಗುನಾ=ಸುಂದರವಾದ, ಆಶುಪಾತಿನಾ = ಬೇಗನೇ ಚಾಚಿದ, ಕರಯೋಃ ಯುಗಲೇನ = ಕೈಗಳ ಜೋಡಿಯಿಂದ, ಉದಸ್ಥಾಪಯತ್ = ಮೇಲಕ್ಕೆತ್ತಿದರು.

ತಾ.—ಜ್ಞಾನಭಕ್ತಿವೈರಾಗ್ಯಾದಿ ಸದ್ಗುಣಗಳಿಂದ ತನಗೆ ಅತ್ಯಂತಪ್ರಿಯ ರಾದ ಮಧ್ವಾಚಾರ್ಯರು ತನ್ನ ಪಾದಗಳಲ್ಲಿ ವಂದಿಸಿದ್ದನ್ನು ಕಂಡು ಪರಾಶರ ಮಹರ್ಷಿಗಳ ಮಕ್ಕಳಾದ ಶ್ರೀವೇದವ್ಯಾಸಮಹರ್ಷಿಗಳು, ಕೂಡಲೇ ಮೃದು ಸುಂದರವಾದ ತನ್ನೆರಡು ಕೈಗಳನ್ನು ಮುಂದಕ್ಕೆ ಚಾಚಿ ನಮಸ್ಕರಿಸಿದ್ದ ಆಚಾರ್ಯರನ್ನು ಮೇಲಕ್ಕೆಬ್ಬಿಸಿದರು.

Rarest Archiver

ವಿ—ಪರಾಶರಸ್ಯ ಆತ್ಮಜಃ, ಅತಿಶಯೇನ ಪ್ರಿಯಃ ಪ್ರೇಷ್ಠಃ ತಂ, ಆಶೇಷಾಶ್ಚ ತೇ ಸಂತಶ್ಚ ತೇ ಗುಣಾಶ್ಚ ತೈಃ, ಆಶು ಪತಿತುಂ ಶೀಲಂ ಅಸ್ಯೇತಿ ಆಶುಪಾತಿ ತೇನ।

ಕ್ರಿ.—ಉದ್+ಅಸ್ಥಾಪಯತ್ ಅಸ್ಥಾಪಯತಾಂ, ಅಸ್ಥಾಪಯನ್, ಅಸ್ಥಾಪಯಃ ಅಸ್ಥಾಪಯತಂ ಅಸ್ಥಾಪಯತ, ಅಸ್ಥಾಪಯಂ ಅಸ್ಥಾಪಯಾವ ಅಸ್ಥಾಪಯಾಮ, ಷ್ಠಾ (ಸ್ಥಾ) ಗತಿನಿವೃತ್ತೌ. ಅಕ.। ಅನಿ.। ಪರ.। ಣಿಜಂತ.। ಲಙ್.

ಅವ.—ಆಮೇಲೆ ಶ್ರೀವೇದವ್ಯಾಸರು ಏನು ಮಾಡಿದರು ?

ಅಮಿತಪ್ರಮತಿಂ ಶ್ರುತೀಶ್ವರಃ
ಪರಿರೇಭೇ ಪರಿಗೃಹ್ಯ ತಂ ದ್ರುತಂ।
ಪ್ರಣಯಾಮೃತಪೂರ್ಣಮಾನಸಃ
ಸ್ಮಿತವಕ್ತ್ರಃ ಪರಿಫುಲ್ಲಲೋಚನಃ ॥೫೨॥

ಅ.ಅ—ಪ್ರಣಯಾಮೃತ = ಸ್ನೇಹವೆಂಬ ಅಮೃತದಿಂದ, ಪೂರ್ಣ-ಮಾನಸಃ = ತುಂಬಿದ ಮನಸ್ಸುಳ್ಳ, ಸ್ಮಿತವಕ್ತ್ರಃ = ಮುಗುಳ್ನಗೆಯ ಮುಖವುಳ್ಳ, ಪರಿಫುಲ್ಲಲೋಚನಃ = ಅರಳಿದ ಕಣ್ಣುಗಳುಳ್ಳ, ಶ್ರುತೀಶ್ವರಃ = ವೇದನಾಯಕರಾದ ವ್ಯಾಸರು, ಅಮಿತಪ್ರಮತಿಂ ತಂ = ಪೂರ್ಣಜ್ಞಾನವುಳ್ಳ ಶ್ರೀಮಧ್ವಾಚಾರ್ಯರನ್ನು, ದ್ರುತಂ = ಬೇಗನೇ, ಪರಿಗೃಹ್ಯ = ಸ್ವೀಕರಿಸಿ (ಹಿಡಿದುಕೊಂಡು) ಪರಿರೇಭೇ = ಆಲಿಂಗಿಸಿದರು.

ತಾ.—ಮಮತೆಯೆಂಬ ಅಮೃತರಸದಿಂದ ತುಂಬಿದ ಮನಸ್ಸುಳ್ಳ ಶ್ರೀವೇದವ್ಯಾಸರು ಮಂದಹಾಸಮಾಡುತ್ತಾ ಅರಳಿದ ಕಣ್ಣುಗಳುಳ್ಳವರಾಗಿ ಬೇಗನೇ ಶ್ರೀಮಧ್ವಾಚಾರ್ಯರನ್ನು ಹಿಡಿದು ಎತ್ತಿ ಆಲಿಂಗಿಸಿದರು. ಇದರಿಂದ ಶ್ರೀವ್ಯಾಸರಿಗೆ ತನ್ನ ಮಗನಾದ ಆಚಾರ್ಯರಲ್ಲಿ ಅತ್ಯಂತ ಪ್ರೀತಿಯಿದೆ ಎಂದು ಸ್ಪಷ್ಟವಾಗಿ ತೋರಿಸಿದಂತಾಯಿತು.

ವಿ.—ಅಮಿತಾ ಪ್ರಮತಿಃ ಯಸ್ಯ ಸಃ, ಶ್ರುತೀನಾಂ ಈಶ್ವರಃ, ಪ್ರಣಯ

Rarest Archiver

ಏವ ಅಮೃತಂ, ಪ್ರಣಯಾಮೃತೇನ ಪೂರ್ಣಂ ಮಾನಸಂ ಯಸ್ಯ ಸಃ, ಸ್ಮಿತಂ ವಕ್ತ್ರಂ ಯಸ್ಯ ಸಃ, ಪರಿಫುಲ್ಲೇ ಲೋಚನೇ ಯಸ್ಯ ಸಃ,

ಕ್ರಿ.— ಪರಿ + ರೇಭೇ ರೇಭಾತೇ ರೇಭಿರೇ, ರೇಭಿಷೇ ರೇಭಾಥೇ ರೇಭಿಧ್ವೇ, ರೇಭೇ ರೇಭಿವಹೇ ರೇಭಿಮಹೇ; ರಭ ರಾಭಸ್ಯೇ, ಸಕ.। ಅನಿ.। ಆತ್ಮ.। to begin, to desire, to act rashly. ಲಿಟ್.

ಅವ.—ಪರಸ್ಪರ ಆಲಿಂಗಿಸಿಕೊಂಡಿರುವ ಶ್ರೀವ್ಯಾಸಮಧ್ವರಿಗೆ ಸೃಷ್ಟಿಯಾದ ಉಪಮಾನವಾದ ವಸ್ತುವೇ ಇಲ್ಲವೆಂದೂ, ಮುಂದೆ ಸೃಷ್ಟಿಯಾದರೆ ಅಂತಹ ವಸ್ತುವಿನೊಡನೆ ಹೋಲಿಸಿ ವರ್ಣಿಸಬಹುದೆಂದೂ ಅಭೂತೋಪಮೆಯಿಂದ ವರ್ಣಿಸುತ್ತಾರೆ—

ಯಮುಜಾಮ್ಯುದವಾಹ ಊರ್ಜಿತೋ
ಯದಿ ಜಾಂಬೂನದವಾರಿ ಸಂವ್ರಜೇತ್ ।
ಕನಕದ್ಯುತಿಮಧ್ವಸಂಗವಾನ್
ಉಪಮೀಯೇತ ಸ ತೇನ ನೀಲಭಾಃ ॥೩೩॥

ಅ.ಆ—ಊರ್ಜಿತಃ = ಉತ್ತಮವಾದ, ಯಮ = ಯಮುನ, ಜಾಮಿ = ಸಹೋದರಿಯಾದ ಯಮುನೆಯ, ಉದವಾಹಃ = ನೀರಿನ ಪ್ರವಾಹವು, ಜಾಂಬೂನದ = ಚಿನ್ನದ ನದಿಯ, ವಾರಿ = ನೀರನ್ನು, ಸಂವ್ರಜೇತ್ ಯದಿ = ಸೇರಿದ್ದೇ ಆದರೆ, ಕನಕದ್ಯುತಿ = ಭಂಗಾರದ ಕಾಂತಿಯುಳ್ಳ, ಮಧ್ವ = ಶ್ರೀಮಧ್ವಾಚಾರ್ಯರ, ಸಂಗವಾನ್ = ಆಲಿಂಗನವೆಂಬ ಸೇರುವಿಕೆಯುಳ್ಳ, ನೀಲಭಾಃ = ನೀಲಕಾಂತಿಯುಳ್ಳ, ಸಃ = ಆ ವ್ಯಾಸರು, ತೇನ (ಸಹ) = ಈ ಯಮುನಾನದಿಯ ನೀರಿನಿಂದ ಕೂಡಿದ ಚಿನ್ನದ ನದಿಯ ನೀರಿನೊಡನೆ, ಉಪಮೀಯೇತ = ಹೋಲಿಸಲ್ಪಡಬಹುದು.

ತಾ.— ಶ್ರೀವ್ಯಾಸರು ನೀಲವರ್ಣದವರು. ಶ್ರೀಮಧ್ವಾಚಾರ್ಯರು ಭಂಗಾರದ ಬಣ್ಣದವರು. ಶ್ರೀವ್ಯಾಸರು ಮಧ್ವಾಚಾರ್ಯರನ್ನು ಆಲಿಂಗಿಸಿದಾಗ ಅವರಿಗೆ ಹೋಲಿಕೆಯಾಗಿ ಕೊಡಲು ಯಾವ ವಸ್ತುವೂ ಇಲ್ಲ. ಒಂದು ವೇಳೆ ಯಮುನಾನದಿಯ ಕಪ್ಪಾದ ನೀರು ಉಕ್ಕಿ ಹರಿದು ಚಿನ್ನದ ನದಿಯ ನೀರಿ

Rarest Archiver

ನೊಡನೆ ಸೇರಿದರೆ ಅದನ್ನು ಉಪಮಾನವಾಗಿ ಕೊಡಬಹುದು. ಆದರೆ ಚಿನ್ನದ ನೀರು, ಚಿನ್ನದ ನದಿ ಅಸಂಭಾವಿತವಾದುದರಿಂದ ಇಲ್ಲಿ ಯಾವ ಹೋಲಿಕೆಯನ್ನೂ ಕೊಡಲು ಸಾಧ್ಯವಿಲ್ಲ.

ವಿ.—ಯಮಸ್ಯ ಜಾಮಿಃ, ಉದಕಸ್ಯವಾಹಃ, ಯಮಜಾಮೇಃ ಉದವಾಹಃ, ಜಂಬೂನದ್ಯಾಃ ಇದಂ ಜಾಂಬೂನದಂ, ಜಾಂಬೂನದಂ ಚ ತತ್ ವಾರಿ ಚ ಜಾಂಬೂನದವಾರಿ ತತ್, ಕನಕವತ್ ದ್ಯುತಿಃ ಯಸ್ಯ ಸಃ, ಕನಕದ್ಯುತಿಶ್ಚಾಸೌ ಮಧ್ವಶ್ಚ, ಕನಕದ್ಯುತಿಮಧ್ವಸ್ಯ ಸಂಗಃ, ಕನಕದ್ಯುತಿಮಧ್ವಸಂಗಃ ಅಸ್ಯ ಅಸ್ತೀತಿ ಕನಕದ್ಯುತಿಮಧ್ವಸಂಗವಾನ್, ನೀಲಾ ಭಾಃ ಯಸ್ಯ ಸಃ,

ಕ್ರಿ.—ಸಂ+ವ್ರಜೇತ್ ಸರ್ಗ ೬ ಶ್ಲೋಕ ೪೮ ನೋಡಿರಿ. ಉಪ+ ಮಿಮೀತ ಮಿಮೀಯಾತಾಂ ಮಿಮೀರನ್, ಮಿಮೀಥಾಃ; ಮಿಮೀಯಾಥಾಂ ಮಿಮೀಧ್ವಂ, ಮಿಮೀಯ ಮಿಮೀವಹಿ ಮಿಮೀಮಹಿ, ಉಪ ಉಪಸರ್ಗ ಮಾ ಮಾನೇ ಶಬ್ದೇ ಚ. ಸಕ.। ಅನಿ.। ಆತ್ಮನೇ.। ಕರ್ಮಣಿ to measure, to sound. ವಿಧಿಲಿಙ್.

ಅವ.—ಇವರಿಗೆ ಏನಾದರೊಂದು ಉಪಮಾನವನ್ನು ಕೊಡಬೇಕಾಗಿದ್ದರೆ ಶ್ರೀವೇದವ್ಯಾಸರ ಮತ್ತು ಮಧ್ವಾಚಾರ್ಯರ ಹಿಂದಿನರೂಪಾಂತರಗಳನ್ನೇ ಇವರಿಗೆ ಹೋಲಿಕೆಗಾಗಿ ಕೊಡಬಹುದೆನ್ನುತ್ತಾರೆ—

ಯದಿ ರಾಜವಿಭೂಷಣೈರ್ಯುತೌ
ದ್ವಿಜವರ್ಯಾನ್ವಯಜಾವಿಮೌ ಹರೀ ।
ನೃಪಗೋತ್ರಭುವೋಃ ಪುರಾತ್ಮನೋಃ
ಸ್ಫುಟತುಲ್ಯಾವುಪಗೂಢಯೋರ್ಮಿಥಃ ॥೫೪॥

ಅ.ಅ—ದ್ವಿಜವರ್ಯ=ವಸಿಷ್ಠ ಮತ್ತು ಮಧ್ಯಗೇಹಭಟ್ಟರ, ಅನ್ವಯಜೌ =ವಂಶದಲ್ಲಿ ಜನಿಸಿದ, ಇಮೌ ಹರೀ=ಈ ಶ್ರೀವ್ಯಾಸ ಮತ್ತು ಮಧ್ವರು, ರಾಜವಿಭೂಷಣೈಃ = ರಾಜರ ಆಭರಣಗಳಾದ ಕಿರೀಟ, ಬಳೆ, ಕುಂಡಲ ಇವುಗಳಿಂದ, ಯುತೌ ಯದಿ=ಕೂಡಿಕೊಂಡಿದ್ದರೆ, ಪುರಾ=ಹಿಂದೆ, ನೃಪ=ರಾಜರಾದ ಯದುಕುರುಗಳ ವಂಶದಲ್ಲಿ, ಭುವೋಃ=ಹುಟ್ಟಿದ, ಮಿಥಃ=ಅನ್ಯೋನ್ಯ

Rarest Archive

ವಾಗಿ, ಉಪಗೂಢಯೋಃ = ಆಲಿಂಗಿಸಿಕೊಂಡಿರುವ, ಆತ್ಮನೋಃ = ತಮಗೆ, ಸ್ಫುಟತುಲ್ಯೌ = ಸ್ಪಷ್ಟವಾಗಿ ಸಮರು (ಸ್ಯಾತಾಂ = ಆದಾರು.)

ತಾ.—ಶ್ರೀವ್ಯಾಸರು ವಸಿಷ್ಠಗೋತ್ರದಲ್ಲಿ ಜನಿಸಿದವರು. ಶ್ರೀಮಧ್ವಾಚಾರ್ಯರು ಮಧ್ಯಗೇಹಭಟ್ಟರ ಮಕ್ಕಳು. ಹರಿವಾಯುಸ್ವರೂಪರಾದ ಇವರು ರಾಜರಿಗೆ ಯೋಗ್ಯವಾದ ಆಭರಣಗಳನ್ನು ಧರಿಸಿದ ಪಕ್ಷದಲ್ಲಿ ತಮ್ಮ ಪೂರ್ವಾವತಾರದಲ್ಲಿ ಯದುವಂಶಸಂಜಾತನಾದ ಶ್ರೀಕೃಷ್ಣನೂ, ಪುರುವಂಶದಲ್ಲಿ ಅವತರಿಸಿದ ಭೀಮನೂ ಇಬ್ಬರೂ ಆಲಿಂಗನಮಾಡಿಕೊಂಡಾಗ ಆ ಶ್ರೀಕೃಷ್ಣಭೀಮರು ಈ ವ್ಯಾಸಮಧ್ವರಿಗೆ ಸರಿಯಾಗಿ ಸದೃಶರು ಆದಾರು. ಆದರೆ ಈಗ ರಾಜಭೂಷಣಗಳು ಇಲ್ಲದ್ದರಿಂದ ಹೋಲಿಸಲು ಬರುವುದಿಲ್ಲ. ಹೀಗೆ ಅಲಂಕಾರಗಳಿಲ್ಲದಿದ್ದರೂ ಆಕಾರಗುಣಾದಿಗಳಲ್ಲಿ ಸರಿಹೋಲಿಸಬಹುದಾದುದರಿಂದ ಈ ಮಹನೀಯರಿಬ್ಬರೂ ತಮಗೆ ತಾವೇ ಸದೃಶರಲ್ಲದೆ ಇವರಿಗೆ ಬೇರೆ ಸದೃಶವಸ್ತುವಿಲ್ಲ ಎಂದು ಭಾವವು.

ವಿ.—ರಾಜ್ಞಾಂ ವಿಭೂಷಣಾನಿ ತೈಃ, ದ್ವಿಜಾನಾಂ ವರ್ಯೌ (ವಸಿಷ್ಠರು ಮತ್ತು ಮಧ್ಯಗೇಹಭಟ್ಟರು), ದ್ವಿಜವರ್ಯಯೋಃ ಅನ್ವಯಃ, ದ್ವಿಜವರ್ಯಾನ್ವಯೇ ಜಾಯೇತೇ ಇತಿ ದ್ವಿಜವರ್ಯಾನ್ವಯಜೌ, ಹರಿಶ್ಚ ಹರಿಶ್ಚ ಹರೀ, ಒಂದು ಹರಿಶಬ್ದಕ್ಕೆ ವಿಷ್ಣು ಎಂದೂ ಮತ್ತೊಂದು ಹರಿಶಬ್ದಕ್ಕೆ ವಾಯು ಎಂದೂ ಅರ್ಥ, ಚಂದ್ರೇ ಸೂರ್ಯೇ ಯಮೇ ವಿಷ್ಣೌ ವಾಸವೇ ದರ್ದುರೇ ಹಯೇ। ವೃಗೇಂದ್ರೇ ವಾನರೇ ವಾಯೌ ದಶಸ್ವಪಿ ಹರಿಃ ಸ್ಮೃತಃ—ಧನಂಜಯ. ನೃಪಯೋಃ ಗೋತ್ರೇ ಭವತಃ ಇತಿ ನೃಪಗೋತ್ರಭುವೌ ತಯೋಃ, ಸ್ಫುಟಂ ತುಲ್ಯೌ;

ಅವ.—ಶ್ರೀವ್ಯಾಸರು ಶ್ರೀಮಧ್ವಾಚಾರ್ಯರಲ್ಲಿ ತೋರಿಸಿದ ಮಮತೆಯನ್ನು ಶುಕಾಚಾರ್ಯರಲ್ಲಿಯೂ ತೋರಿಸಿಲ್ಲವೆಂದು ಅಲ್ಲಿದ್ದ ಋಷಿಗಳು ಆಶ್ಚರ್ಯಪಟ್ಟರು.

ಇದಮಾಪ ಶುಕೋಽಪಿ ಲಾಲನಂ
ನ ಸಮಗ್ರಂ ಜಗತಾಂ ಪಿತುಃ ಪಿತುಃ।
ಅಲಭಿಷ್ಟ ಯದೇಷ ಧನ್ಯ ಇ-
ತ್ಯತಿಕೌತೂಹಲಮಾಪಿ ತಾಪಸೈಃ ॥೩೩॥

Rarest Archiver

ಅ.ಅ.—ಧನ್ಯಃ ಏಷಃ = ಕೃತಾರ್ಥನಾದ ಈ ಮಹಾಪುರುಷನು, ಯತ್ ಲಾಲನಂ = ಯಾವ ಸಂಮಾನವನ್ನು, ಅಲಭಿಷ್ಟ = ಪಡೆದನೋ, ಸಮಗ್ರಂ ಇದಂ = ಪೂರ್ಣವಾದ ಈ ಸಂಮಾನವನ್ನು, ಶುಕಃ ಅಪಿ = ಶುಕಾಚಾರ್ಯರೂ, ಜಗತಾಂ ಪಿತುಃ = ಲೋಕಗಳಿಗೆ ತಂದೆಯಾದ, ಪಿತುಃ = ತನ್ನ ತಂದೆಯಾದ ಶ್ರೀವ್ಯಾಸರಿಂದ, ನ ಆಪ = ಹೊಂದಲಿಲ್ಲ, ಇತಿ = ಎಂದು, ತಾಪಸ್ಯೈಃ = ಮುನಿಗಳಿಂದ, ಅತಿಕೌತೂಹಲಂ = ಅತಿಶಯವಾದ ಕೌತುಕವು, ಆಪಿ = ಹೊಂದಲ್ಪಟ್ಟಿತು.

ತಾ.—'ಈ ಮಹನೀಯನು ಧನ್ಯನು. ಈತನು ಶ್ರೀವ್ಯಾಸರಿಂದ ಯಾವ ಪ್ರೀತ್ಯಾದರಗಳನ್ನು ಪಡೆದನೋ, ಅಂತಹ ಪ್ರೀತ್ಯಾದರವನ್ನು ಜಗತ್ತಿಗೇ ತಂದೆಯಾದ ತನಗೆ ತಂದೆಯಾದ ವ್ಯಾಸರಿಂದ ಶುಕಾಚಾರ್ಯರೂ ಪಡೆಯಲಿಲ್ಲ ಎಂದು ಬದರಿಯಲ್ಲಿರುವ ಮುನಿಗಳು ಬಹಳ ಆಶ್ಚರ್ಯಪಟ್ಟರು. ತನ್ನ ಸ್ವಂತ ಮಗನಲ್ಲಿ ತೋರಿಸುವ ಮಮತೆಗಿಂತಲೂ ಹೆಚ್ಚು ಮಮತೆಯನ್ನು ತೋರಿದರು ಎಂದು ಹೇಳಿದ್ದರಿಂದ ಮುಖ್ಯಪ್ರಾಣಾವತಾರರಾದ ಶ್ರೀಮಧ್ವಾಚಾರ್ಯರ ಯೋಗ್ಯತೆಯು ರುದ್ರಾವತಾರರಾದ ಶುಕಾಚಾರ್ಯರ ಯೋಗ್ಯತೆಗಿಂತಲೂ ಮಿಗಿಲಾದುದು ಎಂದು ಹೇಳಿದಂತಾಯಿತು.

ಕ್ರಿ.—ಆಪ—ಸರ್ಗ ೫ ಶ್ಲೋಕ ೫೦ ನೋಡಿರಿ. ಅಲಭಿಷ್ಟ ಅಲಭಿಷಾತಾಂ ಅಲಭಿಷತ, ಡುಲಭಷ್ (ಲಭ್) ಪ್ರಾಪ್ತೌ, ಸಕ.। ಅನಿ.। ಆತ್ಮ.। ಭೂತೇ ಲುಙ್. ಈ ಧಾತುವು ಅನಿಟ್ ಆದುದರಿಂದ ಅಲಬ್ಧ ಅಲಪ್ಸಾತಾಂ ಅಲಪ್ಸತ, ಅಲಬ್ಧಾಃ ಅಲಪ್ಸಾಥಾಂ ಅಲಬ್‌ಧ್ವಂ, ಅಲಪ್ಸಿ ಅಲಪ್ಸ್ವಹಿ ಅಲಪ್ಸ್ಮಹಿ ಎಂದು ರೂಪಗಳು ಆಗುತ್ತವೆ. ಆದರೆ 'ಆಗಮಶಾಸ್ತ್ರಮನಿತ್ಯಂ' ಎಂಬ ವಚನದಂತೆ ಇಟ್ ಎಂಬ ಆಗಮವು ಅನಿತ್ಯ ಎಂದಿಟ್ಟುಕೊಂಡು ಇಲ್ಲಿ 'ಇಟ್' ಆಗಮಮಾಡಿದ್ದಾರೆ ಎಂದು ಇಟ್ಟುಕೊಳ್ಳಬೇಕು. ಆಪಿ ಆಪಿಷಾತಾಂ ಆಪಿಷತ, ಆಪ್ಲೃ ವ್ಯಾಪ್ತೌ ಕರ್ಮಣಿ ಲುಙ್.

ಅವ.—ಶ್ರೀವ್ಯಾಸರ ಶಿಷ್ಯರು ಗುರುಗಳ ಅಭಿಪ್ರಾಯವನ್ನು ತಿಳಿದು ಆಚಾರ್ಯರಿಗೆ ಉಚಿತವಾದ ಆಸನವನ್ನು ಕೊಟ್ಟರು.

Rarest Archiver

ಅಮುಷ್ಯ ಶಿಷ್ಯಾ ವಿನಯೇನ ತಸ್ಮೈ
ಗುರೋರಭಿಪ್ರಾಯವಿದೋ ವಿದಗ್ಧಾಃ ।
ತದಾನುರೂಪಂ ದದುರಾಸನಂ ತೇ
ಚತುರ್ಮುಖಾಯೇವ ಮುಕುಂದದಾಸಾಃ ॥೫೭॥

ಅ.ಅ—ತದಾ = ಆಗ, ಗುರೋಃ = ಶ್ರೀವ್ಯಾಸರ, ಅಭಿಪ್ರಾಯವಿದಃ = ಅಭಿಪ್ರಾಯವನ್ನು ತಿಳಿದ, ವಿದಗ್ಧಾಃ = ಕುಶಲರಾದ, ಅಮುಷ್ಯ ತೇ ಶಿಷ್ಯಾಃ = ಈ ವ್ಯಾಸರ ಆ ಶಿಷ್ಯರು, ವಿನಯೇನ = ವಿಧೇಯತೆಯಿಂದ, ಮುಕುಂದದಾಸಾಃ = ಶ್ರೀಹರಿಯ ಸೇವಕರು, ಚತುರ್ಮುಖಾಯ ಇವ = ಬ್ರಹ್ಮದೇವರಿಗೆ ಎಂಬಂತೆ, ತಸ್ಮೈ = ಆ ಮಧ್ವಾಚಾರ್ಯರಿಗೆ, ಅನುರೂಪಂ ಆಸನಂ = ಯೋಗ್ಯವಾದ ಪೀಠವನ್ನು, ದದುಃ = ಕೊಟ್ಟರು.

ತಾ.—ಶ್ರೀಮನ್ನಾರಾಯಣನ ಕಿಂಕರರು ಬ್ರಹ್ಮದೇವರು ವೈಕುಂಠಕ್ಕೆ ಬಂದಾಗ, ಉಚಿತವಾದ ಆಸನವನ್ನು ಕೊಡುತ್ತಾರೆ. ಅದರಂತೆ ಆಚಾರ್ಯರು ಬದರಿಕಾಶ್ರಮಕ್ಕೆ ಹೋದಾಗ ವೇದವ್ಯಾಸರ ಅಭಿಪ್ರಾಯವನ್ನು ತಿಳಿದ ಶಿಷ್ಯರು ವಿನಯದಿಂದ ಆಚಾರ್ಯರಿಗೆ ಯೋಗ್ಯವಾದ ಆಸನವನ್ನು ಕೊಟ್ಟರು.

ವಿ.—ಅಭಿಪ್ರಾಯಂ ವಿದಂತೀತಿ ಅಭಿಪ್ರಾಯವಿದಃ, ಚತ್ವಾರಿ ಮುಖಾನಿ ಯಸ್ಯ ಸಃ ತಸ್ಮೈ, ಮುಕುಂದಸ್ಯ ದಾಸಾಃ ;

ಕ್ರಿ.—ದದುಃ, ದದೌ ದದತುಃ ದದುಃ, ದದಿಥ ದದಾಥ ದದಥುಃ ದದ, ದದೌ ದದಿವ ದದಿಮ. ಡುದಾಞ್ (ದಾ) ದಾನೇ ಸಕ.। ಅನಿ.। ಉಭ.। ಲಿಟ್.

ವೃತ್ತ—ಉಪೇಂದ್ರವಜ್ರಾ ಜತಜಾಸ್ತತೋಗೌ ಎಂಬ ಲಕ್ಷಣದಂತೆ ಈ ಶ್ಲೋಕದಲ್ಲಿ ಉಪೇಂದ್ರವಜ್ರಾವೃತ್ತವಿದೆ.

ಅವ.—ಗುರುಭಕ್ತಿಸಂಪನ್ನರಾದ ಆಚಾರ್ಯರು ವ್ಯಾಸರು ಆಸನವನ್ನು ಅಲಂಕರಿಸಿದ ಮೇಲೆ ಅವರ ಅಪ್ಪಣೆಯಿಂದ ಆಸನದಲ್ಲಿ ಕುಳಿತರು—

ಆಸ್ಯತಾಮಿತ್ಯುದೀರ್ಯೋಪವಿಷ್ಟೇ
ಸತ್ಯವತ್ಯಾಃ ಸುತೇ ಸತ್ಯವಾಚಿ ।

Rarest Archiver

ಮಾನಯನ್ ಮಂದಹಾಸಾವಲೋಕೈಃ
ತಾನ್ ಮುನೀಂದ್ರಾನಿಹೋಪಾವಿಶತ್ ಸಃ ||೩೭||

ಅ.ಅ—ಸತ್ಯವಾಚಿ = ಸತ್ಯವಾದ ಮಾತುಳ್ಳ, ಸತ್ಯವತ್ಯಾಃ ಸುತೇ = ಸತ್ಯವತೀದೇವಿಯ ಮಗನಾದ ಶ್ರೀವ್ಯಾಸರು, ಆಸ್ಯತಾಂ = ಕುಳಿತುಕೊಳ್ಳೋಣ ವಾಗಲಿ, ಇತಿ ಉದೀರ್ಯ = ಎಂದು ಹೇಳಿ, ಉಪವಿಷ್ಟೇ ಸತಿ = ಕುಳಿತು ಕೊಳ್ಳಲಾಗಿ, ಮಂದಹಾಸಾವಲೋಕೈಃ = ಮುಗುಳ್ನಗೆಯ ನೋಟಗಳಿಂದ, ತಾನ್ ಮುನೀಂದ್ರಾನ್ = ಆ ಮುನಿಶ್ರೇಷ್ಠರನ್ನು, ಮಾನಯನ್ = ಸಂತೋಷ ಪಡಿಸುತ್ತಿರುವ, ಸಃ = ಆ ಮಧ್ವಾಚಾರ್ಯರು, ಇಹ = ಇಲ್ಲಿ, ಉಪಾವಿಶತ್ = ಕುಳಿತುಕೊಂಡರು.

ತಾ.—ಶ್ರೀವೇದವ್ಯಾಸರು ಸಜ್ಜನರಿಗೆ ಹಿತಕರವಾದ ಸತ್ಯವಾದ ಮಾತನ್ನೇ ಆಡುವವರು. ಅವರು ಶ್ರೀಮಧ್ವಾಚಾರ್ಯರನ್ನು ಕುರಿತು 'ನೀವು ಕುಳಿತುಕೊಳ್ಳಬಹುದು' ಎಂದು ಹೇಳಿ ತಾನು ಆಸನವನ್ನು ಅಲಂಕರಿಸಿದರು. ಆಗ ಆಚಾರ್ಯರು ಮುಗುಳ್ನಗೆಯ ನೋಟದಿಂದ ವ್ಯಾಸರ ಶಿಷ್ಯರಾದ ಮುನೀಂದ್ರರನ್ನು ಸಂಮಾನಿಸುತ್ತಾ ತನಗೆ ಕೊಟ್ಟಿದ್ದ ಆಸನದಲ್ಲಿ ಕುಳಿತು ಕೊಂಡರು.

ವಿ.—ಸತ್ಯಾ ವಾಕ್ ಯಸ್ಯ ಸಃ ತಸ್ಮಿನ್, ಮಂದಃ ಹಾಸಃ ಯೇಷು ತೇ, ಮಂದಹಾಸಾಶ್ಚ ತೇ ಅವಲೋಕಾಶ್ಚ ತೈಃ,

ಕ್ರಿ.—ಉಪ + ಅವಿಶತ್ ಆವಿಶತಾಂ ಅವಿಶನ್, ಅವಿಶಃ ಅವಿಶತಂ ಅವಿಶತ, ಅವಿಶಂ ಅವಿಶಾವ ಅವಿಶಾಮ. ವಿಶ ಪ್ರವೇಶನೇ, ಸಕ.। ಅನಿ.। ಪರ.। to enter, ಭೂತೇ ಲಙ್. ಆಸ್ಯತಾಂ ಆಸ್ಯೇತಾಂ ಆಸ್ಯಂತಾಂ, ಆಸ್ಯಸ್ವ ಆಸ್ಯೇಥಾಂ ಆಸ್ಯಧ್ವಂ, ಆಸ್ಯೈ ಆಸ್ಯಾವಹೈ ಆಸ್ಯಾಮಹೈ. ಆಸ ಉಪವೇಶನೇ ಅಕ.। ಸೇಟ್.। ಆತ್ಮ.। ಕರ್ಮಣಿ ಲೋಟ್.

ಅವ.—ಆಚಾರ್ಯರು ಇಂತಹವರೇ ಎಂದು ತಿಳಿದುಕೊಂಡು ಮುನಿ ಗಳು ಅವರನ್ನು ಶಾಸ್ತ್ರವಿಧಿಯಂತೆ ಉಪಚರಿಸಿದರು—

Rarest Archiver

ಅವಗಮ್ಯ ತಂ ಮುನಿಗಣಾ ವರಿಷ್ಠತೋ
ವಿಧಿವದ್ ವ್ಯಧುರ್ವಿಧಿವಿದೋಽಸ್ಯ ಮಾನನಾಂ।
ಅಪಿ ಸತ್ (ಸಂ) ಕಥಾಃ ಶ್ರುತಿಸುಖಾಃ ಕವೀಂದ್ರಯೋ
ರನಯೋರ್ನಿಶಮ್ಯ ಪರಮಾಂ ಮುದಂ ಯಯುಃ ॥೫೮॥

ಅ.ಅ—ವಿಧಿವಿದಃ = ಶಾಸ್ತ್ರಕ್ರಮವನ್ನು ಅರಿತ, ಮುನಿಗಣಾಃ = ಗುಂಪುಗುಂಪಾಗಿದ್ದ ಮುನಿಗಳು, ವರಿಷ್ಠತಃ = ಶ್ರೇಷ್ಠರಾದ ಶ್ರೀವ್ಯಾಸರಿಂದ, ತಂ = ಆ ಮಧ್ವಾಚಾರ್ಯರನ್ನು, ಅವಗಮ್ಯ = ಮುಖ್ಯಪ್ರಾಣನ ಅವತಾರವೆಂದು ತಿಳಿದು, ಅಸ್ಯ = ಈ ಆಚಾರ್ಯ್ಯರಿಗೆ, ವಿಧಿವತ್ = ಶಾಸ್ತ್ರರೀತಿಯಂತೆ, ಮಾನನಾಂ = ಸಂಮಾನವನ್ನು, ವ್ಯಧುಃ = ಮಾಡಿದರು. ಕವೀಂದ್ರಯೋಃ = = ಜ್ಞಾನಿಶ್ರೇಷ್ಠರಾದ, ಅನಯೋಃ = ಈ ವ್ಯಾಸ ಮತ್ತು ಮಧ್ವರ, ಶ್ರುತಿ-ಸುಖಾಃ = ಕಿವಿಗಳಿಗೆ ಆನಂದಕರವಾದ, ಸತ್ಕಥಾಃ ಅಪಿ = ಒಳ್ಳೆಯ ಸಂಭಾಷಣೆಗಳನ್ನು, ನಿಶಮ್ಯ = ಕೇಳಿ, ಪರಮಾಂ ಮುದಂ = ಅತಿಶಯವಾದ ಸಂತೋಷವನ್ನು, ಯಯುಃ = ಹೊಂದಿದರು.

ತಾ.—ಹಿರಿಯರನ್ನು ಹೇಗೆ ಉಪಚರಿಸಬೇಕೆಂದು ಶಾಸ್ತ್ರೋಕ್ತವಾಗಿ ತಿಳಿದಿರುವ ಅಲ್ಲಿಯ ತಾಪಸರು ಸರ್ವೋತ್ತಮರಾದ ಶ್ರೀವೇದವ್ಯಾಸರಿಂದಲೇ ಶ್ರೀಮಧ್ವಾಚಾರ್ಯರು ವಾಯುದೇವರ ಅವತಾರವೆಂದು ತಿಳಿದು ಅರ್ಘ್ಯ-ಪಾದ್ಯಾದಿ ಉಪಚಾರಗಳನ್ನೆಲ್ಲಾ ಮಾಡಿದರು. ಜ್ಞಾನಿಶ್ರೇಷ್ಠರಾದ ಅವರಿಬ್ಬರೂ ಕಿವಿಗಳಿಗೆ ಹಿತಕರವಾದ ಸಂಭಾಷಣೆ ನಡೆಸುತ್ತಿರುವುದನ್ನು ಕೇಳಿ ಬಹಳ ಸಂತೋಷಪಟ್ಟರು.

ವಿ.—ಮುನೀನಾಂ ಗಣಾಃ, ವಿಧಿಂ ವಿದಂತೀತಿ ವಿಧಿವಿದಃ, ಸತ್ಯಶ್ಚ ತಾಃ ಕಥಾಶ್ಚ, ಶ್ರುತೀನಾಂ ಸುಖಾಃ ತಾಃ, ಕವೀನಾಂ ಇಂದ್ರೌ ತಯೋಃ,

ಕ್ರಿ.—ವಿ+ಅಧುಃ ಸರ್ಗ ೫. ಶ್ಲೋಕ ೨೫ ನೋಡಿರಿ. ಯಯುಃ, ಸರ್ಗ ೫ ಶ್ಲೋಕ ೩ ನೋಡಿರಿ.

ವೃತ್ತ—ಇಲ್ಲಿ ಸಜಸಾ ಜಗೌ ಭವತಿ ಮಂಜುಭಾಷಿಣೀ ಲಕ್ಷಣದಂತೆ ಮಂಜುಭಾಷಿಣೀ ವೃತ್ತ.

Rarest Archiver

ಅವ.—ಈ ರೀತಿ ಈ ಮಹನೀಯರಿಬ್ಬರೂ ಸೇರಿದ ಕಾರಣವನ್ನು ಹೇಳುತ್ತಾ ಈ ಸರ್ಗವನ್ನು ಸಮಾಪ್ತಗೊಳಿಸುತ್ತಾರೆ—

ಸಜ್ಜ್ಞಾನಾಯಾನಂದವಿಜ್ಞಾನಮೂರ್ತೀ
ಪ್ರಾಪ್ತೌ ಪೃಥ್ವೀಮಾಶ್ರಮೇ ತತ್ರ ತಾವತ್ ।
ಜಾಜ್ವಲ್ಯೇತೇ ವಿಷ್ಣುವಾಯೂ ಸ್ಮ ದೇವೌ
ವೇದವ್ಯಾಸಾನಂದತೀರ್ಥಾಭಿಧಾನೌ ॥೫೯॥

ಅ.ಅ—ಸಜ್ಜ್ಞಾನಾಯ = ಸಜ್ಜನರಿಗೆ ತತ್ವಜ್ಞಾನಕ್ಕಾಗಿ, ಪೃಥ್ವೀಂ =ಭೂಮಿಯನ್ನು, ಪ್ರಾಪ್ತೌ = ಹೊಂದಿದ, ವೇದವ್ಯಾಸ ಆನಂದತೀರ್ಥಾಭಿಧಾನೌ = ವೇದವ್ಯಾಸರು ಮತ್ತು ಆನಂದತೀರ್ಥರೆಂಬ ಹೆಸರುಳ್ಳ, ಆನಂದ-ವಿಜ್ಞಾನಮೂರ್ತೀ = ಆನಂದ ಮತ್ತು ಜ್ಞಾನಸ್ವರೂಪರಾದ, ವಿಷ್ಣುವಾಯೂ ದೇವೌ = ಶ್ರೀಮನ್ನಾರಾಯಣ ಮತ್ತು ಶ್ರೀಮುಖ್ಯಪ್ರಾಣದೇವರು, ತತ್ರ= ಆ ಆಶ್ರಮದಲ್ಲಿ, ತಾವತ್ = ಸಂಪೂರ್ಣವಾಗಿ, ಜಾಜ್ವಲ್ಯೇತೇ ಸ್ಮ=ಪ್ರಕಾಶಿಸಿದರು.

ತಾ.—ಶ್ರೀಮನ್ನಾರಾಯಣ ಮತ್ತು ಶ್ರೀಮುಖ್ಯಪ್ರಾಣದೇವರು ಇವರಿಬ್ಬರೂ, ಆನಂದಜ್ಞಾನಸ್ವರೂಪವಾದ ದೇಹವುಳ್ಳವರು. ಅವರು ಸಾತ್ತ್ವಿಕರಿಗೆ ಮೋಕ್ಷವನ್ನು ಕೊಡುವ ಉತ್ತಮತತ್ತ್ವಜ್ಞಾನೋಪದೇಶಮಾಡಲು ಶ್ರೀವೇದವ್ಯಾಸ, ಮತ್ತು ಶ್ರೀಮದಾನಂದತೀರ್ಥ (ಮಧ್ವ) ಎಂಬಹೆಸರಿನಿಂದ ಭೂಮಿಯಲ್ಲಿ ಅವತರಿಸಿ ಆ ಬದರಿಕಾಶ್ರಮದಲ್ಲಿ ಬಹಳಚೆನ್ನಾಗಿ ಪ್ರಕಾಶಿಸುತ್ತಿದ್ದರು. ದ್ವಾಪರದಲ್ಲಿ ಗೌತಮರ ಶಾಪದಿಂದಲೂ, ಕಾಲಬಲದಿಂದಲೂ ಜ್ಞಾನವು ನಷ್ಟವಾದಾಗ ಸಜ್ಜನರಿಗೆ ತತ್ತ್ವೋಪದೇಶಮಾಡಲು ನಾರಾಯಣದೇವರೇ ವೇದವ್ಯಾಸರೂಪದಿಂದ ಅವತರಿಸಿದರು. ಕಲಿಯುಗದಲ್ಲಿ ಸಜ್ಜನರು ವೇದಾಂತಮಾರ್ಗವನ್ನು ತಿಳಿಯದೆ ಕಷ್ಟಪಡುತ್ತಿದ್ದಾಗ ಅವರಿಗೆ ಸುಜ್ಞಾನವನ್ನು ಸಂಪಾದಿಸಿ ಕೊಡಲು ಹರಿಯ ಅಪ್ಪಣೆಯಿಂದ ವಾಯುದೇವರೇ ಮಧ್ವರೂಪದಿಂದ ಅವತರಿಸಿದರು. ಹೀಗೆ ಕಾಲವ್ಯತ್ಯಾಸದಿಂದ ಅವತರಿಸಿದ್ದರೂ ಒಂದೇ ಕಾರ್ಯಕ್ಕಾಗಿ ಭೂಮಿಗೆ ಇಳಿದ ಈ ದೇವೋತ್ತಮಜೀವೋತ್ತಮರು ಬದರಿಯಲ್ಲಿ ಪರಸ್ಪರಮಿಳಿತರಾಗಿ ಕಂಗೊಳಿಸಿದರು ಎಂದು ಭಾವ.

Rarest Archiver

ವಿ.—ಸತಾಂ ಜ್ಞಾನಂ ತಸ್ಮೈ, ಆನಂದಶ್ಚ ವಿಜ್ಞಾನಂ ಚ, ಆನಂದ-ವಿಜ್ಞಾನೇ ಮೂರ್ತಿಃ ಯಯೋಸ್ತೌ, ವಿಷ್ಣುಶ್ಚ ವಾಯುಶ್ಚ, ವೇದವ್ಯಾಸಶ್ಚ ಆನಂದತೀರ್ಥಶ್ಚ, ವೇದವ್ಯಾಸಾನಂದತೀರ್ಥೌ ಇತಿ ಅಭಿಧಾನಂ ಯಯೋಸ್ತೌ;

ಕಿ.—ಜಾಜ್ವಲ್ಯೇತೇ, ಜಾಜ್ವಲ್ಯತೇ ಜಾಜ್ವಲ್ಯೇತೇ ಜಾಜ್ವಲ್ಯಂತೇ ಇತ್ಯಾದಿ. ಜ್ವಲದೀಪ್ತೌ ಅಕ.। ಸೇಟ್.। ಪರ.। to shine ಪುನಃ ಪುನಃ ಅಥವಾ ಅತಿಶಯವಾಗಿ ಜ್ವಲಿಸುತ್ತಾರೆ ಎಂಬ ಅರ್ಥದಲ್ಲಿ ಯಙ್ ಪ್ರತ್ಯಯ ಬಂದಿದೆ. ಸೂ—ಧಾತೋರೇಕಾಚೋ ಹಲಾದೇಃ ಕ್ರಿಯಾಸಮಭಿಹಾರೇ ಯಙ್ (೩-೧-೨೨).

ವೃತ್ತ—ಶಾಲಿನೀ, ಶಾಲಿನ್ಯುಕ್ತಾ ಮ್ತೌ ತಗೌ ಗೋಽಬ್ಧಿಲೋಕೈಃ ಲಕ್ಷಣ.

ಇಲ್ಲಿಗೆ ಶ್ರೀಕವಿಕುಲತಿಲಕಶ್ರೀಮನ್ನಾರಾಯಣಪಂಡಿತಾಚಾರ್ಯರಿಂದ
ರಚಿತವಾದ ಶ್ರೀಮತ್ಸುಮಧ್ವವಿಜಯಮಹಾಕಾವ್ಯದ
ಏಳನೆಯ ಸರ್ಗದ ಕನ್ನಡಭಾಷಾನುವಾದವು
ಸಮಾಪ್ತವಾಯಿತು.

Rarest Archiver

Rarest Archiver

॥ ಶ್ರೀಗುರುಭ್ಯೋ ನಮಃ ॥

ಎಂಟನೆಯ ಸರ್ಗ

ಕಥಾಸಾರಾಂಶ

ಆ ಬದರಿಕಾಶ್ರಮದಲ್ಲಿರುವ ಮುನಿಗಳು ಶ್ರೀಪೂರ್ಣಪ್ರಜ್ಞರ ಪ್ರತಿಭೆ, ಪ್ರಭಾವ ಮುಂತಾದುವುಗಳನ್ನು ತಿಳಿದು ಆಶ್ಚರ್ಯಪಟ್ಟರು. ಒಂದು ದಿನ ಆಚಾರ್ಯರು ವಿಶೇಷವಾದ ವಿಚಾರಗಳನ್ನು ತಿಳಿದುಕೊಳ್ಳಲು ಏಕಾಂತದಲ್ಲಿ ಶ್ರೀವ್ಯಾಸರ ಬಳಿಗೆ ಬಂದರು. ದೇವತೆಗಳು ಇವರಿಬ್ಬರ ಗುರುಶಿಷ್ಯಭಾವವು ಅತ್ಯಂತ ಉಚಿತವೆಂದು ಗೌರವಿಸಿದರು. ಆಚಾರ್ಯರು ತತ್ತ್ವಜ್ಞಾನವನ್ನು ಗ್ರಹಿಸಲು ಅತ್ಯಂತ ಸಮರ್ಥರೆಂದು ತಿಳಿದು ವ್ಯಾಸರು ಆವರಿಗೆ ವೇದಾದಿಗಳ ರಹಸ್ಯವನ್ನು ಉಪದೇಶಿಸಿ, ಅವರ ಬುದ್ಧಿಯನ್ನು ವೃದ್ಧಿಗೊಳಿಸಿದರು. ತರುವಾಯ ಮಧ್ವರು ಗುರುಗಳೊಡನೆ ಅಲ್ಲಿಯೇ ಮತ್ತೊಂದು ಆಶ್ರಮದಲ್ಲಿ ನೆಲೆಸಿರುವ ನಾರಾಯಣ ಮುನಿಗಳನ್ನು ನೋಡಲು ಹೋದರು. ಅಲ್ಲಿ ಹೊಗೆಯಿಲ್ಲದ ಬೆಂಕಿಯಂತೆ ವಿರಾಜಿಸುತ್ತಾ, ನಿರಂತರಸ್ವರೂಪಾನಂದವನ್ನು ಅನುಭವಿಸುತ್ತಿದ್ದರೂ ಮುನಿಗಳಂತೆ ತಪಸ್ಸುಮಾಡುತ್ತಿರುವ ನಾರಾಯಣಮುನಿಗಳನ್ನು ಕಂಡರು. ಅವರು ಧರ್ಮಪ್ರಜಾಪತಿಯ ಮಗನಾಗಿ ಅವತರಿಸಿದ್ದರು. ಅವರನ್ನು ಕಂಡು ಆಚಾರ್ಯರು ಈ ರೀತಿ ಸ್ಮರಿಸಲು ಆರಂಭಿಸಿದರು.

ಹದಿನಾಲ್ಕು ಲೋಕಗಳನ್ನು ಸಂಹರಿಸುವ ನಾರಾಯಣನೇ ಯಮಧರ್ಮನ ಮಗನಾಗಿ ಅವತರಿಸಿದ್ದಾನೆ. ಇವನೇ ಬ್ರಹ್ಮಾದಿಗಳಿಗೂ ಸೃಷ್ಟಿಕರ್ತನು. ಇವನು ಅವರಿಗೆಲ್ಲಾ ಪ್ರಭುವಾಗಿ ಅವರವರ ಯೋಗ್ಯತೆಯನ್ನು ಅನುಸರಿಸಿ ಮೋಕ್ಷನರಕಸಂಸಾರಗಳನ್ನು ಕೊಡುವನು. ಭಕ್ತರು ತನ್ನನ್ನು ವಂದಿಸಿ ಸ್ಮರಿಸಿ ಧ್ಯಾನಿಸಿ ಮೋಕ್ಷಪಡೆಯಲೆಂದು ವಾಸುದೇವಾದಿ ಅನಂತ ಅವತಾರ

Rarest Archiver

ಗಳನ್ನು ಮಾಡುವನು. ಇವನು ಮತ್ಸ್ಯನಾಗಿ, ವೇದವನ್ನು ಕದ್ದ ಹಯಗ್ರೀವಾ-ಸುರನನ್ನು ಕೊಂದನು. ಹಯಗ್ರೀವನಾಗಿ ಮಧು ಎಂಬ ದೈತ್ಯನನ್ನು ಸಂಹರಿಸಿದ್ದಾನೆ. ಮಹಾವರಾಹನಾಗಿ ಹಿರಣ್ಯಾಕ್ಷನನ್ನು ಕೊಂದಿದ್ದಾನೆ. ಕೂರ್ಮನಾಗಿ ಮಂದರಪರ್ವತವನ್ನು ಬೆನ್ನಿಂದ ಎತ್ತಿ, ನರಸಿಂಹನಾಗಿ ಭಕ್ತಪ್ರಹ್ಲಾದನನ್ನು ರಕ್ಷಿಸಿದ್ದಾನೆ. ಗಜೇಂದ್ರನ ಮೊರೆಯನ್ನು ಕೇಳಿ ತಾಪಸ ಎಂಬ ರೂಪದಿಂದ ಬಂದು ಚಕ್ರಾಯುಧದಿಂದ ಮೊಸಳೆಯನ್ನು ಸೀಳಿದ್ದಾನೆ. ವಾಮನನಾಗಿ ಬಲಿಯನ್ನು ಪಾತಾಳಕ್ಕೆ ತಳ್ಳಿದ್ದಾನೆ. ಸುಂದರಬಾಲರೂಪದಿಂದ ಬುದ್ಧನಾಗಿ ಶುದ್ಧೋದನ, ಜಿನ, ಮುಂತಾದ ಅಸುರರನ್ನು ಮೋಹಗೊಳಿಸಿದ್ದಾನೆ. ಜಮದಗ್ನಿಪುತ್ರ ಪರಶುರಾಮನಾಗಿ ಇಪ್ಪತ್ತ ಒಂದು ಬಾರಿ ದುಷ್ಟಕ್ಷತ್ರಿಯರನ್ನು ಸಂಹಾರ ಮಾಡಿರುತ್ತಾನೆ. ವೇದವ್ಯಾಸನಾಗಿ ಬ್ರಹ್ಮಸೂತ್ರಾದಿವಚನಗಳಿಂದ ದೇವತೆಗಳ ಮತ್ತು ಮಾನವರ ಅಜ್ಞಾನವನ್ನು ಪರಿಹರಿಸಿದ್ದಾನೆ.

ತ್ರೇತಾಯುಗದಲ್ಲಿ ದಶರಥರಾಜನ ಮಗ ರಾಮನಾಗಿ ಅವತರಿಸಿ ದುಷ್ಟ ದಶಕಂಠರಾವಣನನ್ನು ಸದೆಬಡಿದಿರುವನು. ಆಗ ಅವನಿಗೆ ಲಕ್ಷ್ಮಣ, ಭರತ, ಶತ್ರುಘ್ನರು ತಮ್ಮಂದಿರಾಗಿದ್ದರು. ಒಂದಾನೊಂದು ದಿನ ವಿಶ್ವಾಮಿತ್ರಮುನಿಯು ಶ್ರೀರಾಮನನ್ನು ತನ್ನ ಸಿದ್ಧಾಶ್ರಮಕ್ಕೆ ಕರೆದುಕೊಂಡು ಹೋದನು. ಅಲ್ಲಿ ರಾಮನು ತಾಟಕೆಯನ್ನು ಸಂಹರಿಸಿ, ಹಾಗೆಯೇ ವಿಶ್ವಾಮಿತ್ರನ ಯಜ್ಞಕ್ಕೆ ತೊಂದರೆ ಕೊಡುತ್ತಿದ್ದ ಸುಬಾಹುವನ್ನು ಕೊಂದನು. ತರುವಾಯ ವಿಶ್ವಾಮಿತ್ರರೊಡನೆ ಮಿಥಿಲಾಪಟ್ಟಣಕ್ಕೆ ತೆರಳಿ ಅಲ್ಲಿ ಸೀತಾಸ್ವಯಂವರಕ್ಕೆ ಪಣವಾಗಿಟ್ಟಿದ್ದ ಶಿವಧನುಸ್ಸನ್ನು ಮುರಿದನು. ಸೀತೆಯನ್ನು ವಿವಾಹವಾಗಿ ತಂದೆಯೊಡನೆ ಅಯೋಧ್ಯೆಗೆ ಹೋಗುತ್ತಿರಲು ದಾರಿಯಲ್ಲಿ ಯುದ್ಧಕ್ಕೆ ಸಿದ್ಧನಾದ ಪರಶುರಾಮನನ್ನು ಸೋಲಿಸಿ ಅಯೋಧ್ಯೆಯನ್ನು ಸೇರಿದನು. ಅನಂತರ ಚಿಕ್ಕಮ್ಮನಾದ ಕೈಕೇಯಿಯ ಸಂತೋಷಕ್ಕೋಸ್ಕರ ಸೀತಾಲಕ್ಷ್ಮಣರೊಡನೆ ಕಾಡಿಗೆ ತೆರಳಿ ಚಿತ್ರ-ಕೂಟಾದಿಪರ್ವತಗಳನ್ನು ದಾಟಿ ಖರದೂಷಣಾದಿರಾಕ್ಷಸರನ್ನು ಕೊಂದನು. ಶ್ರೀರಾಮನು ಪಂಚವಟಿಯಲ್ಲಿ ಸೀತೆಯೊಡನೆ ವಾಸಿಸುತ್ತಿದ್ದಾಗ ದುಷ್ಟ ರಾವಣನು ಸೀತೆಯನ್ನು ಕದ್ದೊಯ್ದನು. ಶ್ರೀರಾಮನು ಸಮರ್ಥನಾದರೂ ಬೇರೆ ಪ್ರಯೋಜನದ ದೃಷ್ಟಿಯಿಂದ ಅವನನ್ನು ಕೂಡಲೇ ಕೊಲ್ಲಲಿಲ್ಲ. ಅನಂತರ

Rarest Archiver

ಶ್ರೀರಾಮನು ಋಷ್ಯಮೂಕಪರ್ವತಕ್ಕೆ ತೆರಳಿ, ಅಲ್ಲಿ ಸುಗ್ರೀವನೊಡನೆ ಸ್ನೇಹವನ್ನು ಬೆಳೆಸಿ ಆಂಜನೇಯ ಮೊದಲಾದ ವಾನರರನ್ನು ಆನಂದಪಡಿಸಿದನು. ಸುಗ್ರೀವನಿಗೆ ಅಪಕಾರವನ್ನು ಮಾಡಿದ್ದ ಅವನ ಅಣ್ಣನಾದ ವಾಲಿಯನ್ನು ಕೊಂದು ನಿಷ್ಕಂಟಕವಾದ ಕಿಷ್ಕಿಂಧಾರಾಜ್ಯವನ್ನು ಸುಗ್ರೀವನಿಗೆ ಕೊಟ್ಟನು. ಅನಂತರ ಹನುಮಂತನಿಂದ ಸೀತಾವೃತ್ತಾಂತವನ್ನು ತಿಳಿದು ಕಪಿಸೇನೆಯೊಡನೆ ಲಂಕೆಯನ್ನು ಪ್ರವೇಶಿಸಿ ರಾವಣಕುಂಭಕರ್ಣಮೊದಲಾದವರನ್ನು ಸಂಹರಿಸಿದನು. ಅಗ್ನಿಪ್ರವೇಶದಿಂದ ಶುದ್ಧಳಾದ ಸೀತೆಯೊಡನೆ ಅಯೋಧ್ಯೆಯನ್ನು ಸೇರಿ, ಅಲ್ಲಿ ಅನೇಕ ವರ್ಷಗಳವರೆಗೆ ಸಜ್ಜನರನ್ನು ಕಾಪಾಡುತ್ತಾ, ಕೊನೆಗೆ ವೈಕುಂಠವನ್ನು ಸೇರಿ ತನ್ನ ಮೂಲರೂಪದೊಡನೆ ಐಕ್ಯಹೊಂದಿದನು.

ಈ ಶ್ರೀಮನ್ನಾರಾಯಣನೇ ದ್ವಾಪರಯುಗದಲ್ಲಿ ಚಂದ್ರವಂಶದ ವಸುದೇವನಿಗೆ ಮಗನಾದ ಶ್ರೀಕೃಷ್ಣನಾಗಿ ಜನಿಸಿ ತಂದೆಗೆ ಆನಂದವನ್ನುಂಟು ಮಾಡಿದನು. ಇವನಿಗೆ ಬಲರಾಮನು ಅಣ್ಣನು. ಇವನು ನಂದಗೋಪನ ಮನೆಯಲ್ಲಿರುತ್ತಾ ವಿಷದ ಎದೆಹಾಲನ್ನುಣಿಸಿ ಕೊಲ್ಲಲು ಬಂದ ಪೂತನೆಯನ್ನು ಕೊಂದಿರುವನು. ಕೇಶಿ ಮತ್ತು ಅರಿಷ್ಟ ಎಂಬ ಇಬ್ಬರು ದಾನವರನ್ನು ಕೊಂದಿರುವನು. ವೃಂದಾವನದಲ್ಲಿ ಗೋಪಿಕಾಸ್ತ್ರೀಯರೊಡನೆ ವಿಹರಿಸಿದನು. ಅನಂತರ ಬಲರಾಮಾದಿಗಳೊಡನೆ ಮಧುರಾಪಟ್ಟಣಕ್ಕೆ ಹೋದಾಗ ಅಲ್ಲಿರುವ ಜನರು ಇವನನ್ನು ನೋಡಿ ಆನಂದಪಟ್ಟರು. ಅಲ್ಲಿ ಶ್ರೀಕೃಷ್ಣನು ಮಾವ ಕಂಸನನ್ನು ಕೊಂದು, ಗುರುವಾದ ಸಾಂದೀಪಿನಿಯನ್ನು ಸೇವಿಸಿ ವಸುದೇವ ಮೊದಲಾದ ಬಂಧುಗಳಿಗೆ ಸಂತೋಷವನ್ನುಂಟುಮಾಡಿದನು. ಭೀಷ್ಮಕನ ಮಗಳಾದ ರುಕ್ಮಿಣಿಯನ್ನು ವರಿಸಿ, ಯುದ್ಧಕ್ಕೆ ಬಂದ ಅವಳ ಅಣ್ಣ ರುಕ್ಮಿಯನ್ನು ಗೆದ್ದು ದ್ವಾರಕೆಗೆ ತೆರಳಿದನು. ತಾಯಿ ಅದಿತಿಯ ಕುಂಡಲವನ್ನು ಅಪಹರಿಸಿದ ನರಕಾಸುರನನ್ನೂ, ಮುರನನ್ನೂ ಕೊಂದು ನರಕಕ್ಕೆ ಕಳುಹಿಸಿದನು. ಅಸುರಾವೇಶದಿಂದ ಗರ್ವಿತನಾದ ಇಂದ್ರನನ್ನು ಜಯಿಸಿ ಪಾರಿಜಾತವೃಕ್ಷವನ್ನು ಭೂಮಿಗೆ ತಂದು ಸತ್ಯ-ಭಾಮೆಯೊಡನೆ ದ್ವಾರಕೆಗೆ ತೆರಳಿದನು. ತನಗೆ ಪ್ರಿಯರಾದ ಪಾಂಡವರ ಸಂಪತ್ತನ್ನು ದುರ್ಯೋಧನನು ಅಪಹರಿಸಿದಾಗ ಉದಾಸೀನನಾಗಿದ್ದನು. ಅನಂತರ ಕುರುಪಾಂಡವರ ಯುದ್ಧದಲ್ಲಿ, ತಾನು ಪಾಂಡವರ ಪಕ್ಷದಲ್ಲಿದ್ದು

Rarest Archiver

ಅವರಿಗೆ ಜಯವನ್ನು ಸಂಪಾದಿಸಿ ಕೊಟ್ಟು ಕುರುರಾಜ್ಯವನ್ನು ಪಾಂಡವಜ್ಯೇಷ್ಠನಾದ ಧರ್ಮರಾಜನಿಗಿತ್ತನು. ಸ್ವರ್ಗಾರೋಹಣಕಾಲದಲ್ಲಿ ಅಗ್ನಿಯನ್ನು ಪ್ರವೇಶಿಸಿದ ರುಕ್ಮಿಣಿಯೊಡನೆಯೂ, ತನ್ನ ಮೂಲರೂಪವನ್ನು ಸ್ವೀಕರಿಸಿದ ಆದಿಶೇಷನಾದ ಬಲರಾಮನೊಡನೆಯೂ, ವೈಕುಂಠಕ್ಕೆ ತೆರಳಿ ತನ್ನ ಮೂಲರೂಪದಲ್ಲಿ ಐಕ್ಯಹೊಂದಿದನು.

ಹೀಗೆಯೇ ಈ ನಾರಾಯಣನು ಇತರಾದೇವಿಯ ಮಗನಾದ ಮಹಿದಾಸನಾಗಿ ಅವತರಿಸಿ ವೈಷ್ಣವತಂತ್ರಶಾಸ್ತ್ರವನ್ನು ರಚಿಸಿದನು. ವಿಷ್ಣುಯಶನೆಂಬ ಬ್ರಾಹ್ಮಣನಿಂದ ಕಲ್ಕಿಯಾಗಿ ಹುಟ್ಟಿ ಹರಿತವಾದ ಆಯುಧಗಳಿಂದ ಕಲಿಯುಗದ ಕಳ್ಳರನ್ನು ಕೊಂದನು. ರುಚಿಪ್ರಜಾಪತಿಯ ಪತ್ನಿಯಾದ ಆಕೂತಿಯಲ್ಲಿ ಯಜ್ಞನೆಂಬ ಹೆಸರಿನಿಂದ ಅವತರಿಸಿ ಪತ್ನಿಯಾದ ದಕ್ಷಿಣಾದೇವಿಯಲ್ಲಿ ದೇವತೆಗಳನ್ನು ಮಕ್ಕಳನ್ನಾಗಿ ಪಡೆದನು. ಕರ್ದಮಪ್ರಜಾಪತಿಯ ಹೆಂಡತಿ ದೇವಹೂತಿಯಲ್ಲಿ ಕಪಿಲನಾಗಿ ಅವತರಿಸಿ ಸಾಂಖ್ಯಯೋಗವನ್ನು ಇವನೇ ರಚಿಸಿರುತ್ತಾನೆ. ಸಮುದ್ರಮಥನ ಕಾಲದಲ್ಲಿ ಧನ್ವಂತರಿ ಮತ್ತು ಮೋಹಿನೀರೂಪಗಳನ್ನು ತಾಳಿ ದೇವತೆಗಳಿಗೆ ಮಾತ್ರ ಅಮೃತವನ್ನು ಹಂಚಿದನು. ಅತ್ರಿಮುನಿಯ ಪತ್ನಿ ಅನಸೂಯೆಯಲ್ಲಿ ದತ್ತಾತ್ರೇಯನಾಗಿ ಜನಿಸಿದ ಇವನೇ ಸನತ್ಕುಮಾರನಾಗಿಯೂ ಅವತರಿಸಿದ್ದಾನೆ. ಋಷಭನೆಂಬ ರಾಜನಾಗಿಯೂ, ಹಂಸನಾಗಿಯೂ ಅವತರಿಸಿ ಸನಕಾದಿಗಳಿಗೆ ಪರತತ್ತ್ವವನ್ನು ಬೋಧಿಸಿದನು. ನಾರಾಯಣ, ಹರಿ, ಕೃಷ್ಣ ರೂಪಗಳಿಂದ ಯಮಧರ್ಮನಿಗೆ ಮಗನಾಗಿ ಶೇಷಾವತಾರನಾದ ನರನಿಗೆ ಸಹೋದರನಾಗಿದ್ದಾನೆ. ಇಂತಹ ಅನೇಕಾವತಾರಗಳನ್ನು ಮಾಡಿ ದುಷ್ಟನಿಗ್ರಹ ಶಿಷ್ಟಾನುಗ್ರಹ ಮಾಡಿದ ನಾರಾಯಣನೇ ! ಇದೋ ನಿನಗೆ ಸಾಷ್ಟಾಂಗನಮಸ್ಕಾರಗಳು'. ಈ ರೀತಿ ಪೂರ್ಣಪ್ರಜ್ಞರು ಶ್ರೀನಾರಾಯಣನನ್ನು ಧ್ಯಾನಿಸಿ ಎದುರಲ್ಲಿ ಕಂಡು ವಂದಿಸಿ, ಆ ವ್ಯಾಸನಾರಾಯಣರ ಹತ್ತಿರದಲ್ಲಿಯೇ ಕುಳಿತರು.

ಅನಂತರ ನಾರಾಯಣಮುನಿಯು ಶ್ರೀಮಧ್ವಾಚಾರ್ಯರಿಗೆ ಇಂತೆಂದನು. 'ಶ್ರೀಮಧ್ವನೇ ! ಕೇಳು. ನಾನೀಗ ಹೇಳುತ್ತಿರುವ ಕಾರ್ಯವು ದೇವತೆಗಳದು. ಇದನ್ನು ನೀನು ನೆರವೇರಿಸಿ ನಿನ್ನ ಈ ಮೂರನೆಯ ಅವತಾರವನ್ನು ಸಫಲಗೊಳಿಸು. ಈಗ ಮಾಯಾವಾದಿಗಳ ದುರ್ಭಾಷ್ಯದಿಂದ ತತ್ತ್ವಜ್ಞಾನವು ಅಡಗಿ

Rarest Archiver

ಹೋಗುತ್ತಿದೆ. ಆದುದರಿಂದ ನೀನು ಆ ಭಾಷ್ಯವನ್ನು ಖಂಡಿಸಿ, ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ರಚಿಸಿ ಶ್ರುತಿಸ್ಮೃತಿಗಳ ಸರಿಯಾದ ಅರ್ಥವನ್ನು ಸ್ಪಷ್ಟಪಡಿಸು', ಎಂದು ಶ್ರೀನಾರಾಯಣಮುನಿಗಳು ಆಡಿದ ಮಾತನ್ನು ಕೇಳಿ, ಶ್ರೀಪೂರ್ಣಪ್ರಜ್ಞ ಮುನಿಗಳು ಆ ವ್ಯಾಸಮುನಿನಾರಾಯಣಮುನಿಗಳ ಅಗಲಿಕೆಯನ್ನು ಸಹಿಸದೆ 'ಸ್ವಾಮಿನ್! ನಾನು ಇಲ್ಲೇ ಇದ್ದು ನಿಮ್ಮಿಬ್ಬರನ್ನು ಸೇವಿಸಲು ಅನುಗ್ರಹಿಸಿರಿ. ಈಗ ಪ್ರಪಂಚದಲ್ಲಿ ತತ್ತ್ವಜ್ಞಾನಕ್ಕೆ ಯೋಗ್ಯರಾದ ಜನರೇ ಇಲ್ಲ. ಅಯೋಗ್ಯರಿಗೆ ಮಾಡಿದ ತತ್ತ್ವೋಪದೇಶವು ನಾಯಿಗೆ ಪವಿತ್ರವಾದ ಹವಿಸ್ಸನ್ನು ಕೊಟ್ಟಂತೆ ಆಗುತ್ತದೆ' ಎಂದರು. ಆಗ ನಾರಾಯಣಮುನಿಗಳು 'ಆನಂದ ತೀರ್ಥನೇ! ಭೂಮಿಯಲ್ಲಿ ಕೆಲವು ಸಜ್ಜನರಿದ್ದಾರೆ. ಅವರು ದುಷ್ಟರ ಸಹವಾಸ ದಿಂದ ಅಯೋಗ್ಯರಾಗಿ ತೋರುತ್ತಾರೆ. ಅವರಿಗೆ ತತ್ತ್ವೋಪದೇಶವನ್ನು ಮಾಡಿ ಅವರ ದೋಷಗಳನ್ನು ಹೋಗಲಾಡಿಸಿ, ಅವರನ್ನೇ ಜ್ಞಾನಿಗಳನ್ನಾಗಿ ಮಾಡು' ಎಂದರು. ಶ್ರೀಮಧ್ವರು ನಾರಾಯಣನ ಆಜ್ಞೆಯನ್ನು ಮೀರಲಾದೆ ಶಿರಸಾ ವಹಿಸಿ ಅವನಿಗೆ ವಂದಿಸಿದರು. ಆ ಬದರಿಕಾಶ್ರಮದಲ್ಲಿ ಆಗ ವ್ಯಾಸನಾರಾಯಣ ಮಧ್ವರು ದಕ್ಷಿಣಾಗ್ನಿಗಾರ್ಹಪತ್ಯಆಹವನೀಯವೆಂಬ ಮೂರು ಅಗ್ನಿಗಳಂತೆ ಪ್ರಕಾಶಮಾನರಾಗಿ ಆನಂದದಿಂದ ಮೆರೆದರು.

ಅನುವಾದ

ಶ್ರೀಮಧ್ವವ್ಯಾಸನಾರಾಯಣಸಮಾಗಮ

ಅನ.—ಆನಂದತೀರ್ಥರು ಮಹಾಬದರಿಯಲ್ಲಿ ಒಂದುದಿನ ಏಕಾಂತದಲ್ಲಿ ತತ್ತ್ವವನ್ನು ತಿಳಿಯಲು ಶ್ರೀವೇದವ್ಯಾಸದೇವರ ಬಳಿಗೆ ಬಂದರು—

ಪ್ರತಿಭಾಪ್ರಭಾವ(ಭಾಪ್ರ)ಮುಖಸದ್ಗುಣೈರ್ನಿಜೈ
ರತಿವಿಸ್ಮಯಂ ನಿಯಮಿನಾಂ ಮನೋ ನಯನ್ ।
ಪುರುಧೀಃ ಕದಾಚಿದಥ ವೇದನಾಯಕಂ
ವಿಜನೇ ಶನೈರುಪಸಸಾದ ತಂ ವನೇ ॥೧॥

ಅ.ಅ—ಅಥ = ಅನಂತರ, ನಿಜೈಃ = ತನ್ನದಾದ, ಪ್ರತಿಭಾ = ನೂತನ ಉನ್ಮೇಷದಿಂದ ಕೂಡಿದ ಪ್ರಜ್ಞೆ, ಪ್ರಭಾವ = ಬ್ರಹ್ಮತೇಜಸ್ಸು (ಪ್ರಭಾ=ಕಾಂತಿ) (ಪ್ರ)ಮುಖ = ಮುಖ್ಯವಾಗಿಉಳ್ಳ, ಸದ್ಗುಣೈಃ=ಒಳ್ಳೆಯಗುಣಗಳಿಂದ, ನಿಯಮಿನಾಂ = ಮುನಿಗಳ, ಮನಃ = ಮನಸ್ಸಿಗೆ, ಅತಿವಿಸ್ಮಯಂ = ಹೆಚ್ಚು ಆಶ್ಚರ್ಯವನ್ನು, ನಯನ್ = ಹೊಂದಿಸುವ, ಪುರುಧೀಃ = ಶ್ರೀಪೂರ್ಣಪ್ರಜ್ಞರು, ಕದಾಚಿತ್ = ಒಂದಾನೊಂದುಸಮಯದಲ್ಲಿ, ವೇದನಾಯಕಂ=ವೇದಸ್ವಾಮಿಯಾದ, ತಂ = ಆ ವೇದವ್ಯಾಸರನ್ನು, ವನೇ = ಕಾಡಿನಲ್ಲಿ, ವಿಜನೇ = ಏಕಾಂತದಲ್ಲಿ, ಶನೈಃ = ಮೆಲ್ಲನೆ, ಉಪಸಸಾದ = ಸಮೀಪಿಸಿದರು.

ತಾ.—ಸೂಕ್ಷ್ಮವಾದ ಬುದ್ಧಿಚಮತ್ಕಾರ, ಬ್ರಹ್ಮತೇಜಸ್ಸು, ಕಾಂತಿ ಮೊದಲಾದ ತಮ್ಮಲ್ಲಿರುವ ಉತ್ತಮಗುಣಗಳಿಂದ ಅಲ್ಲಿರುವ ತಾಪಸರ ಮನಸ್ಸಿಗೆ ಆಶ್ಚರ್ಯವನ್ನುಂಟುಮಾಡುವ ಶ್ರೀಮಧ್ವಾಚಾರ್ಯರು ಒಂದುದಿನ ಜನರಿಲ್ಲದ ಸ್ಥಳದಲ್ಲಿ ಕುಳಿತಿರುವ ಶ್ರೀವೇದವ್ಯಾಸರಬಳಿಗೆ ಮೆಲ್ಲನೆ ಬಂದರು.

ವಿ.—ಸಸಾದ ಸೇದತುಃ ಸೇದುಃ, ಸೇದಿಥ ಸಸತ್ಥ ಸೇದಥುಃ ಸೇದ, ಸಸಾದ ಸಸದ ಸೇದಿವ ಸೇದಿಮ ; ಷದ್ಲೃ (ಸೀದ್, ಸದ್) ವಿಶರಣಗತ್ಯವಸಾದನೇಷು, ಗತೌ ಸಕ.। ಅನಿ.। ಪರ.। to divide, to break, to go, to despond, to be weary. ಲಿಟ್.

ವೃತ್ತ—ಸಜಸಾ ಜಗೌ ಭವತಿ ಮಂಜುಭಾಷಿಣೀ-ಎಂಬ ಲಕ್ಷಣದಂತೆ ೩೨ನೇ ಪದ್ಯಪೂರ್ತಿ ಮಂಜುಭಾಷಿಣೀ ವೃತ್ತ.

ಅವ.—ಶ್ರೀವ್ಯಾಸರು ಮಧ್ವರ ಗುರುಗಳಾಗಿರುವುದೂ, ಶ್ರೀಮಧ್ವರು ವ್ಯಾಸರ ಶಿಷ್ಯರಾಗಿರುವುದೂ ಅತ್ಯಂತ ಉಚಿತವಾಗಿದೆ.

ಸುವಿಶೇಷಶೇಷವದಶೇಷವರ್ಣಿತ-
ಪ್ರತಿಬೋದ್ಧುರಸ್ಯ ನನು ಶಿಷ್ಯತೋಚಿತಾ ।
ಗುರುಮಾನಸಸ್ಯ ಗುರುತಾಪಿ ಸತ್ಪತೇ-
ರಿತಿ ಸೋಪಸತ್ತಿರಮುರೈರಮಾನ್ಯತ ॥೨॥

Rarest Archiver

ಅ.ಅ.—ಸುವಿಶೇಷ=ಅತ್ಯಂತರಹಸ್ಯವಾದ ತತ್ತ್ವಗಳ, ಶೇಷವತ್=ಉಳಿದಭಾಗವುಳ್ಳ, ಅಶೇಷವರ್ಣಿತ = ಪೂರ್ತಿಯಾಗಿ ಹೇಳಲ್ಪಟ್ಟ ಪ್ರಮೇಯವನ್ನು, ಪ್ರತಿಬೋದ್ಧುಃ=ತಿಳಿಯುವ, ಗುರುಮಾನಸಸ್ಯ=ಶ್ರೇಷ್ಠಮನಸ್ಸುಳ್ಳ ಶ್ರೀಪೂರ್ಣಪ್ರಜ್ಞರಿಗೆ, ಸತ್ಪತೇಃ = ಸಜ್ಜನರಿಗೆ ಸ್ವಾಮಿಯಾದ ಶ್ರೀವ್ಯಾಸರ, ಶಿಷ್ಯತಾ=ಶಿಷ್ಯತನವು, ಉಚಿತಾ ನನು = ಯೋಗ್ಯವಾಗಿದೆಯಷ್ಟೆ. ಅಸ್ಯ=ಈ ವ್ಯಾಸರಿಗೆ, ಗುರುತಾ ಅಪಿ=ಗುರುತ್ವವೂ (ಉಚಿತಾ ನನು) ಉಚಿತವಾಗಿದೆ, ಇತಿ = ಹೀಗೆಂದು, ಸಾ ಉಪಸತ್ತಿಃ = ಆ ಗುರುವನ್ನು ಸಮೀಪಿಸುವಿಕೆಯು, ಅಮರೈಃ=ದೇವತೆಗಳಿಂದ, ಅಮಾನ್ಯತ=ಗೌರವಿಸಲ್ಪಟ್ಟಿತು.

ತಾ.—ಶ್ರೀವೇದವ್ಯಾಸರು ಬ್ರಹ್ಮಾದಿಗಳೆಲ್ಲರಿಗೂ ಗುರುಗಳು. ಆದರೆ ಅವರು ಬ್ರಹ್ಮವಾಯುಗಳಿಗೆ ಹೇಗೆ ತತ್ತ್ವೋಪದೇಶಮಾಡುತ್ತಾರೋ ಅದರಂತೆ ರುದ್ರಾದಿಗಳಿಗೆ ಉಪದೇಶಮಾಡುವುದಿಲ್ಲ. ಕೆಲವು ತತ್ತ್ವರಹಸ್ಯಗಳನ್ನು ಉಳಿಸಿಕೊಂಡೇ ಉಪದೇಶಮಾಡುತ್ತಾರೆ. ಅಂತಹ ರಹಸ್ಯವಾದ ಅನೇಕಾನೇಕವಿಶೇಷಗಳನ್ನು ತಿಳಿಯುವ ಬುದ್ಧಿವಿಶೇಷವುಳ್ಳ ಶ್ರೀಮಧ್ವಾಚಾರ್ಯರು ವ್ಯಾಸರ ಶಿಷ್ಯರಾಗಿರುವುದು ಅತ್ಯಂತಯೋಗ್ಯವಾಗಿದೆ. ಸಜ್ಜನರಿಗೆ ಸ್ವಾಮಿಯಾದ ವೇದವ್ಯಾಸದೇವರಿಗೆ ಶ್ರೀಮಧ್ವರ ಗುರುತ್ವವೂ ಅತಿಯೋಗ್ಯವಾಗಿದೆ ಎಂದು ದೇವತೆಗಳೂ ಈ ಗುರುಗಳ ಬಳಿಗೆ ಶಿಷ್ಯನು ಬರುವುದನ್ನು ಗೌರವಿಸಿದರು. ಶ್ರೀವ್ಯಾಸರು ರುದ್ರಾದಿಗಳಿಗೆ ಉಪದೇಶಮಾಡುವಾಗ ತಿಳಿಸದೆ ಇರುವ ವಿಶೇಷವನ್ನು ಮುಖ್ಯಪ್ರಾಣಸ್ವರೂಪರಾದ ಶ್ರೀಮಧ್ವಾಚಾರ್ಯರಿಗೆ ಉಪದೇಶಿಸಿದರು ಎಂದು ಭಾವವು.

ವಿ.—ಶೋಭನಾಶ್ಚ ತೇ ವಿಶೇಷಾಶ್ಚ, ಸುವಿಶೇಷಾಣಾಂ ಶೇಷಾಃ, ಸುವಿಶೇಷಶೇಷಾಃ ಅಸ್ಯ ಸಂತೀತಿ, ಅಶೇಷಂ ಚ ತತ್ ವರ್ಣಿತಂ ಚ, ಸುವಿಶೇಷಶೇಷವಚ್ಚ ತತ್ ಅಶೇಷವರ್ಣಿತಂ ಚ, ಸುವಿಶೇಷಶೇಷವದಶೇಷವರ್ಣಿತಸ್ಯ ಪ್ರತಿಬೋದ್ಧಾ ತಸ್ಯ, ಶಿಷ್ಯಸ್ಯ ಭಾವಃ ಶಿಷ್ಯತಾ, ಗುರು ಮಾನಸಂ ಯಸ್ಯ ತಸ್ಯ, ಗುರೋಃ ಭಾವಃ ಗುರುತಾ, ಸತಾಂ ಪತಿಃ ತಸ್ಯ ;

ಕ್ರಿ.—ಅಮಾನ್ಯತ ಅಮಾನ್ಯೇತಾಂ ಅಮಾನ್ಯಂತ, ಅಮಾನ್ಯಥಾಃ

Rarest Archiver

ಅಮಾನ್ಯೇಥಾಂ ಅಮಾನ್ಯಧ್ವಂ, ಅಮಾನ್ಯೇ ಅಮಾನ್ಯಾವಹಿ ಅಮಾನ್ಯಾಮಹಿ. ಮಾನ ಪೂಜಾಯಾಂ ಚುರಾದಿ, ಕರ್ಮಣಿ ಲಙ್.

ಅವ.—ಮೊದಲೇ ಜ್ಞಾನಪೂರ್ಣವಾದ ಶ್ರೀಮಧ್ವಾಚಾರ್ಯರ ಹೃದಯ ದಲ್ಲಿ ಶ್ರೀವ್ಯಾಸರು ಮತ್ತಷ್ಟು ಹೆಚ್ಚಾಗಿ ಜ್ಞಾನವನ್ನು ತುಂಬಿದರು —

ಪುರ ಏವ ಪೂರಿತಮಪೂರಯತ್ ಪುನ-
ರ್ನನು ಕೃಷ್ಣ ಏಷ ಪರಮಾರ್ಥಸಂಖ್ಯಯಾ ।
ಭಗವನ್ಮನಃ ಪುರಮಿವಾಯತಂ ಪುರಾ
ನಿಜಧಾಮ ತಾಂ ಚ ಜಗೃಹೇ ತದದ್ಭುತಂ ॥೩॥

ಅ.ಅ—ಏಷಃ = ಈ ವ್ಯಾಸರೂಪಿಯಾದ ಕೃಷ್ಣನು, ಪುರ ಏವ = ಮೊದಲೇ, ಪರಮಾರ್ಥಸಂಖ್ಯಯಾ = ತತ್ತ್ವಜ್ಞಾನದಿಂದ, ಪೂರಿತಂ=ತುಂಬಿದ, ನಿಜಧಾಮ = ತನ್ನ ಮನೆಯಾದ, ಆಯತಂ = ವಿಶಾಲವಾದ, ಭಗವನ್ಮನಃ = ಷಡ್ಗುಣೈಶ್ವರ್ಯಸಂಪನ್ನರಾದ ಶ್ರೀಮಧ್ವರ ಮನಸ್ಸನ್ನು, ಪುರಾ = ಹಿಂದೆ, ಪೂರಿತಂ = ತುಂಬಿದ್ದ, ನಿಜಧಾಮ = ತನ್ನ ಮನೆಯಾದ, ಪುರಂ = ದ್ವಾರಕಾ ಪುರವನ್ನು, ಪರಮ ಅರ್ಥಸಂಖ್ಯಯಾ ಇವ = ಹೆಚ್ಚಾದ ಹಣದ ಕೋಟಿಸಂಖ್ಯೆ ಯಿಂದ ಎಂಬಂತೆ, ಪುನಃ = ತಿರುಗಿ, ಅಪೂರಯತ್ = ತುಂಬಿಸಿದನು. ತತ್ ಚ = ಆ ಮಧ್ವರ ಮನಸ್ಸು ಮತ್ತು ದ್ವಾರಕಾಪಟ್ಟಣವು, ತಾಂ = ಆ ತತ್ತ್ವಜ್ಞಾನ ವನ್ನು, ಬಹುಸಂಪತ್ತನ್ನು, ಜಗೃಹೇ = ಸ್ವೀಕರಿಸಿತು, (ಇತಿ = ಎಂಬುದು) ಅದ್ಭುತಂ = ಆಶ್ಚರ್ಯವು.

ತಾ.—ಹಿಂದೆ ಶ್ರೀಕೃಷ್ಣನು ಅನೇಕಕೋಟಿಸಂಖ್ಯೆಯ ಹಣದಿಂದ ಮೊದಲೇ ತುಂಬಿದ್ದ ದ್ವಾರಕಾಪಟ್ಟಣಕ್ಕೆ, ಜರಾಸಂಧ ಕಾಲಯವನ, ಬಾಣಾಸುರ, ನರಕಾಸುರ ಮುಂತಾದವರನ್ನು ಕೊಂದು ಅಲ್ಲಿದ್ದ ಅಸಂಖ್ಯಾತವಾದ ಧನವನ್ನು ತಂದು ತುಂಬಿದ್ದನು. ಹಾಗೆಯೇ ಈಗ ವ್ಯಾಸರೂಪಿಯಾದ ಕೃಷ್ಣನು ತನ್ನ ವಾಸಸ್ಥಳವಾದ ಶ್ರೀಮಧ್ವರ ಮನಸ್ಸು ಮೊದಲೇ ತತ್ತ್ವಜ್ಞಾನದಿಂದ ತುಂಬಿ ದ್ದರೂ ಪುನಃ ರುದ್ರಾದಿಗಳಿಗೆ ತಿಳಿಸದೆ ಉಳಿಸಿದ ವಿಶೇಷತತ್ತ್ವಜ್ಞಾನವನ್ನು ಅಲ್ಲಿ ತುಂಬಿದನು. ಈರೀತಿ ಮೊದಲೇ ತುಂಬಿಕೊಂಡಿದ್ದರೂ ದ್ವಾರಕಾಪಟ್ಟಣ

Rarest Archiver

ಮತ್ತು ಆಚಾರ್ಯರ ಮನಸ್ಸು ಮರಳಿ ತುಂಬಲು ಅವಕಾಶವಿರುವಷ್ಟು ವಿಶಾಲ ವಾಗಿರುವುದು ಆಶ್ಚರ್ಯಕರವು.

ವಿ.—ಪರಮಾರ್ಥಾ ಚ ಸಾ ಸಂಖ್ಯಾ ಚ ತಯಾ, ಪರಮಾಶ್ಚ ತೇ ಅರ್ಥಾಶ್ಚ, ಪರಮಾರ್ಥಾನಾಂ ಸಂಖ್ಯಾ ತಯಾ, ಭಗವತಃ ಮನಃ ತತ್, ನಿಜಂ ಚ ತತ್ ಧಾಮ ಚ ತತ್ ;

ಕ್ರಿ.—ಅಪೂರಯತ್, ಸರ್ಗ ೬ ಶ್ಲೋಕ ೮ ನೋಡಿರಿ. ಜಗೃಹೇ ಜಗೃ-ಹಾತೇ ಜಗೃಹಿರೇ, ಜಗೃಹಿಷೇ ಜಗೃಹಾಥೇ ಜಗೃಹಿಧ್ವೇ, ಢ್ವೇ, ಜಗೃಹೇ ಜಗೃಹಿವಹೇ ಜಗೃಹಿಮಹೇ, ಗ್ರಹ ಉಪಾದಾನೇ ಸಕ.। ಸೇಟ್.। ಉಭ.। to take hold of, to seize, to understand. ಲಿಟ್.

ಅವ.—ವೇದ, ಭಾರತ, ಪುರಾಣ, ಪಂಚರಾತ್ರಗಳ ತತ್ತ್ವವನ್ನು ಆಚಾರ್ಯರು ಶ್ರೀವ್ಯಾಸರ ಮುಖದಿಂದ ತಿಳಿದರು—

ಇತಿಹಾಸಸುಂದರಪುರಾಣಸೂತ್ರಸ-
ತ್ಪ್ರಿಯಪಂಚರಾತ್ರನಿಜಭಾವಸಂಯುತಂ ।
ಅಶೃಣೋದನಂತಹೃದನಂತತೋಽಚಿರಾತ್
ಪರಮಾರ್ಥಮಪ್ಯಗಣಿತಾಗಮಾವಲೇಃ ॥೪॥

ಅ.ಅ—ಅನಂತಹೃತ್ = ಅಪರಿಮಿತಜ್ಞಾನವುಳ್ಳ ಶ್ರೀಮಧ್ವರು, ಅನಂತತಃ = ಅನಂತನೆಂಬ ಹೆಸರುಳ್ಳ ಶ್ರೀವೇದವ್ಯಾಸರಿಂದ, ಇತಿಹಾಸ = ಭಾರತ, ಮೂಲರಾಮಾಯಣವೆಂಬ ಇತಿಹಾಸಗಳ, ಸುಂದರ = ಸಾತ್ತ್ವಿಕವಾದ, ಪುರಾಣ = ಪುರಾಣಗಳ, ಸೂತ್ರ = ಬ್ರಹ್ಮಸೂತ್ರಗಳ, ಸತ್‌ಪ್ರಿಯ = ವಿಷ್ಣುಭಕ್ತರಿಗೆ ಸಂತೋಷಪ್ರದವಾದ, ಪಂಚರಾತ್ರ = ಪಂಚರಾತ್ರಾಗಮದ, ನಿಜಭಾವ = ಸ್ವಾಭಾವಿಕವಾದ ಅಭಿಪ್ರಾಯದಿಂದ, ಸಂಯುತಂ = ಕೂಡಿರುವ, ಅಗಣಿತಾ-ಗಮಾವಲೇಃ = ಅಸಂಖ್ಯಾಕವಾದ ವೇದಗಳ ಸಮೂಹದ, ಪರಮಾರ್ಥಂ ಅಪಿ = ಉತ್ತಮವಾದ ಪ್ರತಿಪಾದ್ಯಾರ್ಥವನ್ನೂ, ಅಚಿರಾತ್ = ಬೇಗನೇ, ಅಶೃಣೋತ್ = ಕೇಳಿದರು.

Rarest Archiver

ತಾ.—ಮಹಾಭಾರತ ಮತ್ತು ಮೂಲರಾಮಾಯಣವೆಂಬ ಇತಿಹಾಸ ಗಳು, ಸಾತ್ತ್ವಿಕಪುರಾಣಗಳು, ಮತ್ತು ಸಾತ್ತ್ವಿಕವಾದ ಇತರ ಪುರಾಣಭಾಗ ಗಳು, ಬ್ರಹ್ಮಮೀಮಾಂಸಾಶಾಸ್ತ್ರ, ಮತ್ತು ಸಜ್ಜನರಿಗೆ ಪ್ರಿಯವಾದ ಪಂಚ ರಾತ್ರಾಗಮ, ಇವುಗಳ ಅಭಿಪ್ರಾಯವನ್ನೂ, ಅನಂತವೇದಗಳ ತಾತ್ಪರ್ಯವನ್ನೂ, ಶ್ರೀವೇದವ್ಯಾಸರು ಆನಂದತೀರ್ಥರಿಗೆ ಬಹಳ ಬೇಗನೆ ಉಪದೇಶಿಸಿದರು. ಆಚಾರ್ಯರೂ ಅದನ್ನೆಲ್ಲಾ ಬಹಳ ಬೇಗನೆ ಕೇಳಿ ತಿಳಿದರು. ಇದರಿಂದ ಶ್ರೀ ಮಧ್ವಾಚಾರ್ಯರ ಭಾಷ್ಯಾದಿ ಗ್ರಂಥಗಳಲ್ಲಿ ಪ್ರಮಾಣವಾಗಿ ಉದಾಹರಿಸಿದ ಶ್ರುತಿಸ್ಮೃತಿಗಳೆಲ್ಲವೂ ವ್ಯಾಸೋಪದೇಶದಿಂದ ಬಂದವುಗಳಾದ್ದರಿಂದ ನಿಶ್ಚಯ ವಾಗಿ ಪ್ರಮಾಣಗಳಾಗಿವೆಯೆಂದು ತಿಳಿಸಿದಂತಾಯಿತು.

ವಿ.—ಇತಿಹಾಸಶ್ಚ ಸುಂದರಾಣಿ ಪುರಾಣಾನಿ ಚ ಸೂತ್ರಂ ಚ ಸತಾಂ ಪ್ರಿಯಂ ಪಂಚರಾತ್ರಂ ಚ ಇತಿಹಾಸಸುಂದರಪುರಾಣಸೂತ್ರಸತ್‌ಪ್ರಿಯಪಂಚ-ರಾತ್ರಾಣಿ, ತೇಷಾಂ ನಿಜಃ ಭಾವಃ, ಇತಿಹಾಸ ...ಭಾವೇನ ಸಂಯುತಃ ತಂ, ಅನಂತಂ ಹೃತ್ ಯಸ್ಯ ಸಃ, ಅನಂತಾತ್ ಇತಿ ಅನಂತತಃ, ಪರಮಶ್ಚಾಸೌ ಅರ್ಥಶ್ಚ ಪರಮಾರ್ಥಃ ತಂ, ಅಗಣಿತಾಶ್ಚ ತೇ ಆಗಮಾಶ್ಚ ಅಗಣಿತಾಗಮಾನಾಂ ಆವಲಿಃ ತಸ್ಯಾಃ ;

ಕ್ರಿ.—ಅಶೃಣೋತ್, ಸರ್ಗ ೬ ಶ್ಲೋಕ ೫೦ ನೋಡಿರಿ. (ಅನಂತಹೃದಾ ಪರಮಾರ್ಥಃ ಅಪಿ ಅಶ್ರೂಯತ—ಕರ್ಮಣಿ)

ಅವ.—ಅನೇಕ ಜನ್ಮಗಳಲ್ಲಿ ತತ್ತ್ವೋಪದೇಶವನ್ನು ಪಡೆದ ಆಚಾರ್ಯರು ವ್ಯಾಸರ ಉಪದೇಶವನ್ನು ಚೆನ್ನಾಗಿ ಗ್ರಹಿಸಿ ಮತ್ತಷ್ಟು ಚೆನ್ನಾಗಿ ತತ್ತ್ವವನ್ನು ತಿಳಿದರು—

ಋಜುಪುಂಗವಸ್ಯ ಪರಿಜಾನತಃ ಸ್ವಯಂ
ಸಕಲಂ ತದಪ್ಯಲಮನಂತಜನ್ಮಸು ।
ಸ್ವಕೃತೋರ್ವನುಗ್ರಹಬಲಾದಮುಷ್ಯ ತಾಂ
ವಿಶಿಶೇಷ ಶೇಷಶಯನಃ ಪುನರ್ಧಿಯಂ ॥೫॥

ಅ.ಅ—ಶೇಷಶಯನಃ = ಶೇಷಶಾಯಿಯಾದ ಪದ್ಮನಾಭಾಭಿನ್ನರಾದ ಶ್ರೀ

Rarest Archiver

ವ್ಯಾಸರು, ಅನಂತಜನ್ಮಸು = ಬಹುಜನ್ಮಗಳಲ್ಲಿ, ಸ್ವಕೃತ=ತನ್ನಿಂದ ಮಾಡಲ್ಪಟ್ಟ, ಉರ್ವನುಗ್ರಹ ಬಲಾತ್ = ಹೆಚ್ಚಾದ ಅನುಗ್ರಹವೆಂಬ ಸಾಮರ್ಥ್ಯದಿಂದ, ತತ್ ಸಕಲಂ ಅಪಿ= ಉಪದೇಶಪಡೆದಿದ್ದ ಆ ಎಲ್ಲವನ್ನೂ, ಸ್ವಯಂ = ತಾವೇ, ಪರಿ-ಜಾನತಃ= ತಿಳಿಯುತ್ತಿರುವ, ಋಜುಪುಂಗವಸ್ಯ = ಋಜುಗಳೂ ಶ್ರೇಷ್ಠರೂ ಆದ, ಅಮುಷ್ಯ = ಈ ಮಧ್ವಾಚಾರ್ಯರ, ತಾಂ ಧಿಯಂ= ಆ ಬುದ್ಧಿಯನ್ನು, ಅಲಂ= ಚೆನ್ನಾಗಿ, ಪುನಃ= ತಿರುಗಿ, ವಿಶಿಶೇಷ = ಅತಿಶಯಗೊಳಿಸಿದರು.

ತಾ.—ನಾರಾಯಣಸ್ವರೂಪರೇ ಆದ ಶ್ರೀವೇದವ್ಯಾಸದೇವರೇ ಅನೇಕ ಜನ್ಮಗಳಲ್ಲಿ ಆಚಾರ್ಯರಿಗೆ ಉಪದೇಶಮಾಡಿರುವ ತತ್ತ್ವಗಳನ್ನು ಅವರು ತಮ್ಮ ಪ್ರತಿಭಾಶಕ್ತಿಯಿಂದ ಚೆನ್ನಾಗಿ ತಿಳಿದಿದ್ದರು. ಋಜುಶ್ರೇಷ್ಠರಾದ ಆಚಾರ್ಯರ ಅಂತಹ ಬುದ್ಧಿಯನ್ನು, ವ್ಯಾಸರು ಉತ್ಕೃಷ್ಟವಾದ ಅನುಗ್ರಹಬಲದಿಂದ ಮತ್ತಷ್ಟು ಹೆಚ್ಚಿಸಿದರು. ಋಜುಗಳೆಂದರೆ ಮನಸ್ಸು, ಮಾತು, ಕರ್ಮಗಳಿಂದ ಶ್ರೀಹರಿಯಲ್ಲಿ ವಿರೋಧವನ್ನು ಮಾಡದೆ, ಹರಿಪ್ರೀತಿಕರವಾದ ವ್ಯಾಪಾರವನ್ನೇ ಮಾಡುತ್ತಿರುವ ವಾಯು ಮತ್ತು ಬ್ರಹ್ಮಪದವಿಗೆ ಯೋಗ್ಯರಾದ ನೂರುಮಂದಿ ದೇವಶ್ರೇಷ್ಠರು. ಇವರು ನೂರುಮಂದಿ ಒಂದು ಗಣರೂಪದಲ್ಲಿ ಇರುತ್ತಾರೆ.

ವಿ.—ಋಜುಶ್ಚಾಸೌ ಪುಂಗವಶ್ಚ ತಸ್ಯ, ಅನಂತಾನಿ ಚ ತಾನಿ ಜನ್ಮಾನಿ ಚ ತೇಷು, ಸ್ವೇನ ಕೃತಃ, ಸ್ವಕೃತಶ್ಚಾಸೌ ಉರುಶ್ಚಾಸೌ ಅನುಗ್ರಹಶ್ಚ, ಸ್ವಕೃ-ತೋರ್ವನುಗ್ರಹ ಏವ ಬಲಂ ತಸ್ಮಾತ್, ಶೇಷಃ ಶಯನಂ ಯಸ್ಯ ;

ಕ್ರಿ.—ವಿ + ಶಿಶೇಷ ಶಿಶಿಷತುಃ, ಶಿಶಿಷುಃ, ಶಿಶೇಷಿಥ, ಶಿಶಿಷಥುಃ, ಶಿಶಿಷ ಶಿಶೇಷ ಶಿಶಿಷಿವ ಶಿಶಿಷಿಮ. ಶಿಷ್ಲೃ (ಶಿಷ್) ವಿಶೇಷಣೇ, ಸಕ.। ಅನಿ.। ಪರ.। ಪ್ರಾಯಃ ವಿ ಉಪಸರ್ಗಪೂರ್ವಕ.। to distiguish from others ರುಧಾದಿ. ಲಿಟ್.

ಅವ.—ಅನಂತರ ಆಚಾರ್ಯರು ವ್ಯಾಸರ ಸಹಾಯದಿಂದ ನಾರಾಯಣ ಮುನಿಗಳನ್ನು ನೋಡಲು ಹೋದರು—

ಅಥ ಬಾದರಾಯಣಸಹಾಯಸಂಪದಾ

ಪ್ರಯಯೌ ಪ್ರಣಂ(ಣೇ)ತುಮಮಿತಾಂತರೋ ಯತಃ ।

Rarest Archiver

ಅಪಿ ನಾದಿರಾಯಣಪದೋದಿತಂ ಹರೇ-
ರ್ವಪುರಂತರಂ ಲಸಿತಮಾಶ್ರಮಾಂತರೇ ॥೬॥

ಆ.ಅ—ಅಥ = ಅನಂತರ, ಬಾದರಾಯಣ = ಶ್ರೀವ್ಯಾಸರ, ಸಹಾಯ ಸಂಪದಾ = ಸಹಾಯವೆಂಬ ಸಂಪತ್ತಿನಿಂದ, ಯುತಃ = ಕೂಡಿದ, ಅಮಿತಾಂತರಃ = ಶ್ರೀಪೂರ್ಣಪ್ರಜ್ಞರು, ಆಶ್ರಮಾಂತರೇ = ಮತ್ತೊಂದು ಆಶ್ರಮದಲ್ಲಿ, ಲಸಿತಂ = ಪ್ರಕಾಶಿತವಾದ, ನಾದಿರಾಯಣಪದ = ನಕಾರವು ಆದಿಯಲ್ಲಿಉಳ್ಳ ರಾಯಣ ಪದದಿಂದ, (ನಾರಾಯಣಪದದಿಂದ) ಉದಿತಂ = ಹೇಳಲ್ಪಟ್ಟ, ಹರೇಃ = ಶ್ರೀಮನ್ನಾರಾಯಣನ, ವಪುರಂತರಂ ಅಪಿ = ಮತ್ತೊಂದುರೂಪವನ್ನೂ, ಪ್ರಣಂತು(ಪ್ರಣೇತುಂ) = ನಮಸ್ಕರಿಸುವುದಕ್ಕೆ, ಪ್ರಯಯೌ = ಹೋದರು.

ತಾ.—ಸರ್ವಶಾಸ್ತ್ರಗಳನ್ನು ಶ್ರವಣಮಾಡಿದ ಮೇಲೆ ಶ್ರೀಮಧ್ವಾಚಾರ್ಯರು, ವೇದವ್ಯಾಸರ ಸಹಾಯಸಂಪತ್ತಿನಿಂದ ಕೂಡಿದವರಾಗಿ ಬದರಿಕಾಶ್ರಮದಲ್ಲಿಯೇ, ಮತ್ತೊಂದು ಸ್ಥಳದಲ್ಲಿ ಕಂಗೊಳಿಸುವ ನಾರಾಯಣಮುನಿ ಎಂಬ ಹೆಸರಿನ ವಿಷ್ಣುವಿನ ಮತ್ತೊಂದು ಅವತಾರವನ್ನು ವಂದಿಸುವುದಕ್ಕಾಗಿ ಹೋದರು.

ವಿ.—ಬಾದರಾಯಣಸ್ಯ ಸಹಾಯ ಏವ ಸಂಪತ್ ತಯಾ, ಅಮಿತಂ ಅಂತರಂ ಯಸ್ಯ ಸಃ, ನಃ ಆದಿಃ ಯಸ್ಯ ತತ್, ರಾಯಣ ಇತಿ ಪದಂ, ನಾದಿ ಚ ತತ್ ರಾಯಣ ಪದಂ ಚ, ನಾದಿರಾಯಣಪದೇನ ಉದಿತಂ ತತ್, ಅನ್ಯತ್ ವಪುಃ ವಪುರಂತರಂ ತತ್, ಅನ್ಯಃ ಆಶ್ರಮಃ ಆಶ್ರಮಾಂತರಂ ತಸ್ಮಿನ್;

ಕ್ರಿ.—ಪ್ರ + ಯಯೌ. ಸರ್ಗ ೫ ಶ್ಲೋಕ ೮. ನೋಡಿರಿ.

ಅವ.—ಅಲ್ಲಿಗೆ ಹೋಗಿ ಆ ಮುನಿರೂಪರಾದ ನಾರಾಯಣದೇವರನ್ನು ಆಚಾರ್ಯರು ಕಂಡರು—

ತಮಪಶ್ಯದಾಶ್ರಮವರೇ ಪ್ರಭೂತಧೀ-
ರ್ಜ್ವಲನಂ ಜ್ವಲಂತಮಿವ ಧೂಮವರ್ಜಿತಂ ।
ವರವಲ್ಕಲಾಕಲಿತಮೌಂಜಿಮೇಖಲಂ
ವಿಲಸಜ್ಜಟಾವಲಯಮಾದಿಪೂರುಷಂ ॥೭॥

Rarest Archiver

ಅ.ಅ—ಪ್ರಭೂತಧೀಃ=ಶ್ರೀಪೂರ್ಣಪ್ರಜ್ಞರು, ಆಶ್ರಮವರೇ=ಉತ್ತಮವಾದ ಆಶ್ರಮದಲ್ಲಿ, ವರವಲ್ಕಲ=ಶ್ರೇಷ್ಠವಾದ ನಾರುಮಡಿಯಿಂದ, ಆಕಲಿತ=ಕೂಡಿದ, ಮೌಂಜಿಮೇಖಲಂ=ಮುಂಜದ (ನೊಸೆ) ಹುಲ್ಲಿನ ಸೊಂಟದ ಪಟ್ಟಿಯುಳ್ಳ, ವಿಲಸತ್ = ಪ್ರಕಾಶಿಸುವ, ಜಟಾವಲಯಂ= ಜಟೆಗಳ ಸುತ್ತುಳ್ಳ, ಧೂಮವರ್ಜಿತಂ= ಹೊಗೆಯಿಲ್ಲದ, ಜ್ವಲಂತಂ=ಉರಿಯುತ್ತಿರುವ, ಜ್ವಲನಂ ಇವ=ಬೆಂಕಿಯೋಪಾದಿಯಲ್ಲಿರುವ, ಆದಿಪೂರುಷಂ ತಂ=ಪುರಾಣಪುರುಷನಾದ ಆ ನಾರಾಯಣನನ್ನು, ಅಪಶ್ಯತ್=ನೋಡಿದರು.

ತಾ.—ಅಲ್ಲಿ ಶ್ರೇಷ್ಠವಾದ ಪರ್ಣಶಾಲೆಯಲ್ಲಿ ನಾರಾಯಣಮುನಿಗಳು ಹೊಗೆಯಿಲ್ಲದೆ ಜ್ವಲಿಸುವ ಅಗ್ನಿಯಂತೆ ಪ್ರಕಾಶಿಸುತ್ತಾ, ಉತ್ತಮವಾದ ನಾರುಬಟ್ಟೆಯ ಕೌಪೀನವನ್ನು ಧರಿಸಿ, ಮೌಂಜಿ ಎಂಬ ನಡುಪಟ್ಟಿಯನ್ನು ಧರಿಸಿ ಶೋಭಿಸುತ್ತಿದ್ದರು. ಅವರು ಪ್ರಕಾಶಿಸುವ ಜಡೆಗಳ ರಾಶಿಗಳನ್ನು ಧರಿಸಿದ್ದರು. ಪುರಾತನಪುರುಷರಾದ ಅವರನ್ನು ಆಚಾರ್ಯರು ಕಂಡರು. ಮುನಿಗಳ ರೂಪಕ್ಕೆ ತಕ್ಕದಾದ ದರ್ಭೆಯ ಹಗ್ಗದ ಮೇಲೆ ನಾರುಬಟ್ಟೆಯ ಕೌಪೀನವನ್ನುಟ್ಟು ಜಟಾಧಾರಿಯಾದ ಶ್ರೀಮನ್ನಾರಾಯಣಮುನಿಗಳನ್ನು ಆಚಾರ್ಯರು ಕಂಡರು ಎಂದು ಭಾವ.

ವಿ.—ಆಶ್ರಮಾಣಾಂ ವರಃ ತಸ್ಮಿನ್, ಪ್ರಭೂತಾ ಧೀಃ ಯಸ್ಯ ಸಃ, ಧೂಮೇನ ವರ್ಜಿತಃ ತಂ, ವರಂ ಚ ತತ್ ವಲ್ಕಲಂ ಚ, ವರವಲ್ಕಲೇನ ಆಕಲಿತಾ ಮೌಂಜ್ಯಾಃ ಮೇಖಲಾ ಯಸ್ಯ ಸಃ ತಂ, ವಿಲಸನ್ ಜಟಾನಾಂ ವಲಯಃ ಯಸ್ಯ ಸಃ ತಂ, ಆದಿಶ್ಚಾಸೌ ಪೂರುಷಶ್ಚ ತಂ ;

ಕ್ರಿ.—ಅಪಶ್ಯತ್ ಅಪಶ್ಯತಾಂ ಅಪಶ್ಯನ್, ಅಪಶ್ಯಃ ಅಪಶ್ಯತಂ ಅಪಶ್ಯತ, ಅಪಶ್ಯಂ ಅಪಶ್ಯಾವ ಅಪಶ್ಯಾಮ. ದೃಶಿರ್ (ದೃಶ್, ಪಶ್ಯ) ಪ್ರೇಕ್ಷಣೇ. ಸಕ.। ಅನಿ.। ಪರ.। ಭೂತೇ ಲಙ್. to see.

ಅವ.—ಆ ನಾರಾಯಣಮುನಿಗಳ ಗುಣಗಳನ್ನು ವರ್ಣಿಸುತ್ತಾರೆ—

ಅತಿದುರ್ಜಯೇಂದ್ರಿಯಜಯಾದಿರೂಪಿಣಾ
ತಪಸಾ ವಸಂತಮಿವ ಸಂತತಂ ವನೇ ।

Rarest Archiver

ನಿಜರೂಪಭೂತನಿರಪೇಕ್ಷನಿರ್ಮಲ
ಪ್ರಚುರಾತ್ಮಸೌಖ್ಯರತಮಪ್ಯನಾರತಂ ||೮||

ಅ.ಅ—ಅನಾರತಂ = ಯಾವಾಗಲೂ, ನಿಜ = ಶಾಶ್ವತವಾದ, ರೂಪಭೂತ = ಸ್ವರೂಪಾತ್ಮಕವಾದ, ನಿರಪೇಕ್ಷ = ವಿಷಯಾಪೇಕ್ಷೆಇಲ್ಲದ, ನಿರ್ಮಲ = ದೋಷವಿಲ್ಲದ, ಪ್ರಚುರ = ಬಹಳವಾದ, ಆತ್ಮಸೌಖ್ಯ = ಸ್ವರೂಪಾನಂದದಲ್ಲಿ, ರತಂ ಅಪಿ = ಆಸಕ್ತನಾಗಿದ್ದರೂ, ಸಂತತಂ = ಯಾವಾಗಲೂ, ಅತಿದುರ್ಜಯ = ಅತ್ಯಂತವಾಗಿ ಜಯಿಸಲು ಅಶಕ್ಯವಾದ, ಇಂದ್ರಿಯಜಯಾದಿ = ಇಂದ್ರಿಯ ನಿಗ್ರಹವೇ ಮೊದಲಾಗಿ ಉಳ್ಳ, ರೂಪಿಣಾ = ಸ್ವರೂಪವುಳ್ಳ, ತಪಸಾ = ತಪಸ್ಸಿನಿಂದ, ವನೇ = ಕಾಡಿನಲ್ಲಿ, ವಸಂತಂ ಇವ = ವಾಸಮಾಡುತ್ತಿರುವನೋ ಎಂಬಂತಿರುವ, (ತಂ=ಆ ನಾರಾಯಣದೇವರನ್ನು, ಅಪಶ್ಯತ್ = ನೋಡಿದರು.)

ತಾ.—ಆ ನಾರಾಯಣನು ಹೇಗಿದ್ದನು ಎಂದರೆ-ಅವನು ಹುಟ್ಟುಸಾವುಗಳಿಲ್ಲದ ಪ್ರಯುಕ್ತ ನಿತ್ಯನು, ಯಾವ ವಿಷಯವನ್ನೂ ಅಪೇಕ್ಷಿಸದ ದುಃಖಾಮಿಶ್ರಿತವಾಗಿ ನಿರ್ಮಲವಾಗಿರುವ, ಸ್ವರೂಪವೇ ಆಗಿರುವ ಪರಿಪೂರ್ಣವಾದ ಸುಖವನ್ನು ಅನುಭವಿಸುತ್ತಾ ಇರುವವನು. ಆದರೂ ಸ್ವಾಧೀನಪಡಿಸಿಕೊಳ್ಳಲು ಅಸಾಧ್ಯವಾದ ಇಂದ್ರಿಯಗಳನ್ನು ಜಯಿಸುವುದು ಮೊದಲಾದ ತಪಸ್ಸನ್ನು ಆಚರಿಸುವುದಕ್ಕಾಗಿ ಆ ಬದರೀವನದಲ್ಲಿ ವಾಸಮಾಡುತ್ತಾನೋ ಎಂಬಂತೆ ಇರುವ ಮುನಿರೂಪನಾದ ಆ ನಾರಾಯಣದೇವರನ್ನು ಆಚಾರ್ಯರು ನೋಡಿದರು. ನಿತ್ಯಸುಖಾನುಭವಾತ್ಮಕನಾದರೂ ತಪಸ್ಸಿನಿಂದ ದುಃಖವನ್ನು ಅನುಭವಿಸುವವನಂತೆ ತೋರಿಸುತ್ತಾ ಇರುವ ನಾರಾಯಣದೇವರನ್ನು ಕಂಡರು ಎಂದು ಭಾವ.

ವಿ.—ದುಃಖೇನ ಜೇತುಂ ಶಕ್ಯಾನಿ ದುರ್ಜಯಾನಿ, ಅತ್ಯಂತಂ ದುರ್ಜಯಾನಿ ಅತಿದುರ್ಜಯಾನಿ, ಅತಿದುರ್ಜಯಾನಿ ಚ ತಾನಿ ಇಂದ್ರಿಯಾಣಿ ಚ, ಅತಿದುರ್ಜಯೇಂದ್ರಿಯಾಣಾಂ ಜಯಃ, ಅತಿದುರ್ಜಯೇಂದ್ರಿಯಜಯಃ ಆದಿಃ ಯಸ್ಯ ತತ್, ಅತಿದುರ್ಜಯೇಂದ್ರಿಯಜಯಾದಿ ಚ ತತ್ ರೂಪಂ ಚ, ಅತಿದುರ್ಜಯೇಂದ್ರಿಯಜಯಾದಿರೂಪಂ ಅಸ್ಯ ಅಸ್ತೀತಿ ತೇನ, ನಿರ್ಗತಾ ಅಪೇಕ್ಷಾ ಯಸ್ಯ ತತ್, ನಿಜಂ ಚ ತತ್ ರೂಪಭೂತಂ ಚ ತತ್, ನಿರಪೇಕ್ಷಂ ಚ ತತ್,

Rarest Archive

ನಿರ್ಮಲಂ ಚ ತತ್, ಪ್ರಚುರಂ ಚ ತತ್ ಆತ್ಮನಃ ಸೌಖ್ಯಂ, ನಿಜ....ಸೌಖ್ಯಂ, ...ಸೌಖ್ಯೇ ರತಃ ತಂ ;

ಕ್ರಿ.—ಇಲ್ಲಿ ಹಿಂದಿನ ಶ್ಲೋಕದ ಅಪಶ್ಯತ್ ಎಂಬ ಕ್ರಿಯಾಪದದ ಜೊತೆಗೆ ಅನ್ವಯವು.

ಅವ.—ಆಚಾರ್ಯರು ನಾರಾಯಣದೇವರನ್ನು ಕಂಡು ಮನಸ್ಸಿನಲ್ಲಿಯೇ ಅವರ ಮಹಿಮೆಯನ್ನು ಚಿಂತಿಸಿದರು—

ನಯನದ್ವಯೇನ ನಲಿನಪ್ರಭಾಮುಷಾ
ಪರಿಫುಲ್ಲತಾವಿಲಸಿತೇನ ವಿಸ್ಮಯಾತ್ ।
ತಮವೇಕ್ಷ್ಯ ಧರ್ಮಜಮಧರ್ಮದುರ್ಲಭಂ
ಮನಸೇತಿ ಭೂರಿತರಮಾನಸೋಽಸ್ಮರತ್ ॥೯॥

ಅ.ಅ—ಭೂರಿತರಮಾನಸಃ = ಶ್ರೀಪೂರ್ಣಪ್ರಜ್ಞರು, ಪರಿಫುಲ್ಲತಾ = ಅರಳಿರುವುದರಿಂದ, ವಿಲಸಿತೇನ = ಪ್ರಕಾಶಮಾನವಾದ, ನಲಿನಪ್ರಭಾ = ಕಮಲದ ಕಾಂತಿಯನ್ನು, ಮುಷಾ = ಅಪಹರಿಸುವ, ನಯನದ್ವಯೇನ = ಎರಡುಕಣ್ಣು ಗಳಿಂದ, ಅಧರ್ಮ = ಪುಣ್ಯಮಾಡದವನಿಂದ, ದುರ್ಲಭಂ = ಹೊಂದಲು ಅಶಕ್ಯ ನಾದ, ತಂ = ಆ ನಾರಾಯಣನನ್ನು, ಅವೇಕ್ಷ್ಯ = ನೋಡಿ, ವಿಸ್ಮಯಾತ್ = ಆಶ್ಚರ್ಯದಿಂದ, ಮನಸಾ = ಮನಸ್ಸಿನಿಂದ, ಇತಿ = ಈ ರೀತಿ, ಅಸ್ಮರತ್ = ಸ್ಮರಿಸಿದರು.

ತಾ.—ಆ ನಾರಾಯಣನು ಯಮಧರ್ಮನ ಮಗನು. ಪುಣ್ಯವಂತರಲ್ಲ ದವರಿಗೆ ಅವನನ್ನು ನೋಡಲು ಸಾಧ್ಯವಿಲ್ಲ. ಅವನನ್ನು ಶ್ರೀಪೂರ್ಣಪ್ರಜ್ಞರು ತಾವರೆಹೂವುಗಳಿಗಿಂತಲೂ ಸುಂದರವಾದ, ಆಶ್ಚರ್ಯಭಕ್ತಿಗಳಿಂದ ತೆರೆದ ಕಣ್ಣು ಗಳಿಂದ ಮನದಣಿಯಾಗಿ ಕಂಡು ಅವನ ಮಹಿಮೆಗಳನ್ನು ಹೀಗೆ ಸ್ಮರಿಸಿದರು.

ವಿ.—ನಯನಯೋಃ ದ್ವಯಂ ತೇನ, ನಲಿನಸ್ಯ ಪ್ರಭಾಂ ಮುಷ್ಣಾತೀತಿ ತೇನ, (ಮುಷ್ ಶಬ್ದ. ನಪುಂ. ಮುಟ್ ಮುಷೀ ಮುಂಷಿ) ಪರಿಫುಲ್ಲಸ್ಯ ಭಾವಃ, ಪರಿಫುಲ್ಲತಯಾ ವಿಲಸಿತಂ ತೇನ, ನ ವಿದ್ಯತೇ ಧರ್ಮಃ ಯಸ್ಯ, ಅಧರ್ಮೇಣ ದುರ್ಲಭಃ ತಂ, ಭೂರಿತರಂ ಮಾನಸಂ ಯಸ್ಯ ಸಃ ;

Rarest Archiver

ಕ್ರಿ.—ಅಸ್ಮರತ್ ಸರ್ಗ ೫ ಶ್ಲೋಕ ೩೫ ನೋಡಿರಿ.

ಅವ.—ಶ್ರೀಮಧ್ವಾಚಾರ್ಯರು ಏನನ್ನು ಸ್ಮರಿಸಿದರು?—

ಜಗತಾಂ ಚತುರ್ದಶತಯಂ ಚತುರ್ಮುಖ-
ಪ್ರಮುಖೈರ್ಯುತಂ ಪ್ರಲಯಮಾನಿನಾಯ ಯಃ।
ಸಮಮುಲ್ಲಸನ್ ಕಮಲಯೈವ ಕೇವಲಂ
ಪರಮಃ ಸ ಏಷ ಹಿ ಪುರಾಣಪೂರುಷಃ ॥೧೦॥

ಅ. ಅ.—ಯಃ=ಯಾವ ಪರಮಾತ್ಮನು, ಚತುರ್ಮುಖಪ್ರಮುಖೈಃ ಯುತಂ =ಬ್ರಹ್ಮದೇವರು ಮೊದಲಾದವರಿಂದ ಸಹಿತವಾದ, ಜಗತಾಂ=ಲೋಕಗಳ, ಚತುರ್ದಶತಯಂ=ಹದಿನಾಲ್ಕರ ಸಮುದಾಯವನ್ನು, ಪ್ರಲಯಂ ಆನಿನಾಯ = ಪ್ರಳಯಹೊಂದಿಸಿದನೋ, ಕೇವಲಂ = ಪ್ರತ್ಯೇಕವಾಗಿ, ಕಮಲಯಾ ಏವ ಸಮಂ =ಲಕ್ಷ್ಮೀದೇವಿಯಿಂದ ಮಾತ್ರ ಕೂಡಿಕೊಂಡು, ಉಲ್ಲಸನ್ =ಪ್ರಕಾಶಿಸುತ್ತಿರುವವನು, ಪರಮಃ ಸಃ = ಪೂರ್ಣನಾದ ಅಂತಹ, ಪುರಾಣಪೂರುಷಃ = ಪುರಾತನಪುರುಷನು, ಏಷಃ ಹಿ = ಈ ನಾರಾಯಣಮೂರ್ತಿಯೇ ನಿಶ್ಚಯವು.

ತಾ.—ಕೇವಲ ಲಕ್ಷ್ಮಿಯಿಂದ ಮಾತ್ರ ಕೂಡಿಕೊಂಡು ಯಾವನು ಬ್ರಹ್ಮದೇವರೇ ಮೊದಲಾದ ಸಮಸ್ತದೇವತೆಗಳಿಂದ ಕೂಡಿದ ಈ ಹದಿನಾಲ್ಕುಲೋಕಗಳನ್ನೇ ಪ್ರಲಯಕಾಲದಲ್ಲಿ ಸಂಹರಿಸುವನೋ ಆ ಸರ್ವೋತ್ತಮನಾದ ಪುರಾಣಪುರುಷನೆನಿಸಿದ ಶ್ರೀಮಹಾವಿಷ್ಣುವೇ ಈ ಯಮದೇವರ ಪುತ್ರನಾಗಿ ಅವತರಿಸಿದ ನಾರಾಯಣಮುನಿವರನು ನನ್ನ ಕಣ್ಣೆದುರಿಗೆ ಕಾಣಿಸುತ್ತಿದ್ದಾನೆ ಎಂದು ಸ್ಮರಿಸಿದರು.

ವಿ.—ಚತುರಧಿಕಾಃ ದಶ, ಚತುರ್ದಶ ಅವಯವಾಃ ಅಸ್ಯೇತಿ ಚತುರ್ದಶತಯಂ, ಚತುರ್ಮುಖಃ ಪ್ರಮುಖಃ ಯೇಷಾಂ ತೇ ತೈಃ, ಪುರಾಣಶ್ಚಾಸೌ ಪೂರುಷಶ್ಚ ;

ಕ್ರಿ.—ಆ+ನಿನಾಯ. ನಿನ್ಯತುಃ ನಿನ್ಯುಃ, ನಿನಯಿಥ ನಿನೇಥ, ನಿನ್ಯಥುಃ, ನಿನ್ಯ, ನಿನಾಯ ನಿನಯ. ನಿನ್ಯಿವ ನಿನ್ಯಿಮ. ಣೀಞ್ (ನೀ) ಪ್ರಾಪಣೇ। ದ್ವಿಕ.। ಅನಿ.। ಉಭ.। to lead; to carry; to bring; to pass. ಲಿಟ್.

Rarest Archive

ಅವ.—ಇವನು ಸಂಹಾರವನ್ನು ಮಾತ್ರ ಮಾಡುವವನಲ್ಲ, ಸೃಷ್ಟಿ ಮಾಡುವ ಮಹನೀಯನೂ ಈತನೇ—

ತ್ರಿಗುಣಾಕೃತಿಪ್ರಕೃತಿತೋ ಗುರುಂ ತತ(ಮಹತ್ತತ)
ಸ್ತ್ರಿವಿಧಾಮಹಂಕೃತಿಮಮರ್ತ್ಯಖಾನ್ಯತಃ ।
ಅಪಿ ಭೂತಪಂಚಕಮಿತೋಽಂಡಮಂಡಲಂ
ಭಗವಾನಸಾವಿಹ ಜಗಂತಿ ಚಾಸೃಜತ್ ॥೧೧॥

ಅ.ಅ—ಭಗವಾನ್ = ಷಡ್ಗುಣೈಶ್ವರ್ಯಸಂಪನ್ನನಾದ, ಅಸೌ = ಈ ನಾರಾಯಣನು, ತ್ರಿಗುಣಾಕೃತಿ = ಸತ್ತ್ವ, ರಜಸ್ಸು, ತಮಸ್ಸು, ಎಂಬ ಮೂರು ಗುಣಗಳೇ ಆಕಾರವಾಗಿ ಉಳ್ಳ, ಪ್ರಕೃತಿತಃ = ಪ್ರಧಾನದಿಂದ, ಮಹತ್ = ಮಹತ್ತತ್ವ ಮತ್ತು ಅದಕ್ಕೆ ಅಭಿಮಾನಿಯಾದ ಬ್ರಹ್ಮನನ್ನೂ, ತತಃ = ಆ ಬ್ರಹ್ಮನಿಂದ, ತ್ರಿವಿಧಾಂ = ವೈಕಾರಿಕ ತೈಜಸ ತಾಮಸವೆಂಬ ಮೂರುವಿಧ ವಾದ, ಅಹಂಕೃತಿಂ = ಅಹಂಕಾರತತ್ತ್ವ ಮತ್ತು ಅದಕ್ಕೆ ಅಭಿಮಾನಿಯಾದ ರುದ್ರದೇವರನ್ನು, ಅತಃ = ಮೂರುವಿಧವಾದ ಅಹಂಕಾರತತ್ತ್ವಗಳಿಂದ, ಅಮರ್ತ್ಯ = ದೇವತೆಗಳು, ಖಾನಿ = ಇಂದ್ರಿಯಗಳು, ಭೂತಪಂಚಕಂ ಅಪಿ = ಭೂಮಿ ಮುಂತಾದ ಐದು ಭೂತಗಳನ್ನೂ, ಇತಃ = ಈ ಪಂಚಮಹಾಭೂತ ಗಳಿಂದ, ಅಂಡಮಂಡಲಂ = ಬ್ರಹ್ಮಾಂಡವನ್ನು, ಇಹ = ಈ ಬ್ರಹ್ಮಾಂಡದಲ್ಲಿ, **ಜಗಂತಿ ಚ** = ಹದಿನಾಲ್ಕು ಲೋಕಗಳನ್ನೂ, ಅಸೃಜತ್ = ಸೃಜಿಸಿದನು.

ತಾ.—ಷಡ್ಗುಣೈಶ್ವರ್ಯಪರಿಪೂರ್ಣನಾದ ಈ ನಾರಾಯಣನೇ ಸತ್ತ್ವ ರಜಸ್ಸು ತಮಸ್ಸು ಎಂಬ ಮೂರುಗುಣರೂಪವಾದ ಪ್ರಕೃತಿಯಿಂದ, ಅತಿದೊಡ್ಡ ದಾದ ಮಹತ್ತತ್ವವನ್ನು, ಅದಕ್ಕೆ ಅಭಿಮಾನಿಯಾದ ಚತುರ್ಮುಖಬ್ರಹ್ಮನನ್ನೂ, ಆ ಮಹತ್ತತ್ವ ಮತ್ತು ಅದರ ಅಭಿಮಾನಿಯಾದ ಬ್ರಹ್ಮನಿಂದ ವೈಕಾರಿಕ ತೈಜಸ ತಾಮಸವೆಂದು ಮೂರುವಿಧವಾದ ಅಹಂಕಾರತತ್ತ್ವವನ್ನೂ, ಅದಕ್ಕೆ ಅಭಿಮಾನಿ ಯಾದ ರುದ್ರದೇವರನ್ನೂ, ಸೃಷ್ಟಿಮಾಡಿದನು. ಆ ಮೂರುವಿಧವಾದ ಅಹಂಕಾರ ತತ್ತ್ವಗಳಿಂದ ದೇವತೆಗಳನ್ನೂ, ಇಂದ್ರಿಯಗಳನ್ನೂ, ಪಂಚಮಹಾಭೂತ ಗಳನ್ನೂ ಸೃಷ್ಟಿಮಾಡಿದನು. ಹೀಗೆ ಸೃಷ್ಟಿಮಾಡಿದ ಮಹತ್ತತ್ವವೇ ಮೊದಲಾದ

Rarest Archiver

ಪಂಚಭೂತಗಳ ವರೆಗಿನ ತತ್ತ್ವಗಳಿಂದ ಬ್ರಹ್ಮಾಂಡವನ್ನೂ ಈ ಬ್ರಹ್ಮಾಂಡದಲ್ಲಿ ಹದಿನಾಲ್ಕು ಲೋಕಗಳನ್ನೂ ಸೃಷ್ಟಿಮಾಡಿದನು. ವೈಕಾರಿಕಾಹಂಕಾರದಿಂದ ಹತ್ತು ಇಂದ್ರಿಯಾಭಿಮಾನಿದೇವತೆಗಳನ್ನೂ, ತೈಜಸಾಹಂಕಾರದಿಂದ ಕಣ್ಣು ಕಿವಿ ಮೂಗು ನಾಲಿಗೆ ತ್ವಕ್, ವಾಕ್, ಕೈ, ಕಾಲು, ಗುದ (ಮಲವಿಸರ್ಜನೇಂದ್ರಿಯ) ಉಪಸ್ಥ (ಮೂತ್ರವಿಸರ್ಜನೇಂದ್ರಿಯ) ಮನಸ್ಸು ಎಂಬ ಹನ್ನೊಂದು ಇಂದ್ರಿಯ ಗಳನ್ನೂ, ತಾಮಸಾಹಂಕಾರದಿಂದ ಇಂದ್ರಿಯಗಳಿಗೆ ವಿಷಯವಾದ ಗಂಧ ರಸ ರೂಪ ಸ್ಪರ್ಶ ಶಬ್ದಗಳನ್ನೂ ಭೂಮಿ, ನೀರು, ತೇಜಸ್ಸು, ವಾಯು, ಆಕಾಶವೆಂಬ ಪಂಚಭೂತಗಳನ್ನು ಸೃಷ್ಟಿಮಾಡಿದನು ಎಂಬ ವಿಶೇಷಕ್ರಮವನ್ನೂ ತಿಳಿಯಬೇಕು.

ವಿ.—ತ್ರಯಶ್ಚ ತೇ ಗುಣಾಶ್ಚ, ತ್ರಿಗುಣಾ ಏವ ಆಕೃತಯಃ ಯಸ್ಯಾಃ ಸಾ, ತ್ರಿಗುಣಾಕೃತಿಶ್ಚಾಸೌಪ್ರಕೃತಿಶ್ಚ, ತ್ರಿಗುಣಾಕೃತಿಪ್ರಕೃತೇಃ ಇತಿ ತ್ರಿಗುಣಾ-ಕೃತಿಪ್ರಕೃತಿತಃ, ತಿಸ್ರಃ ವಿಧಾಃ ಯಸ್ಯಾಃ ಸಾ ತಾಂ, ಅಮರ್ತ್ಯಾನಾಂ ಖಾನಿ ತಾನಿ, ಪಂಚಾನಾಂ ಸಮೂಹಃ ಪಂಚಕಂ ಭೂತಾನಾಂ ಪಂಚಕಂ ತತ್, ಅಂಡಂ ಇತಿ ಮಂಡಲಂ ತತ್,

ಕ್ರಿ.—ಅಸೃಜತ್ ಅಸೃಜತಾಂ ಅಸೃಜನ್, ಅಸೃಜಃ ಅಸೃಜತಂ ಅಸೃಜತ, ಅಸೃಜಂ ಅಸೃಜಾವ ಅಸೃಜಾಮ, ಸೃಜ ವಿಸರ್ಗೇ। ಸಕ.। ಅನಿ.। ಪರ.। to abandon ; to create ; to let loose ;

ಅವ.—ಬ್ರಹ್ಮಾದಿಸರ್ವಜಗತ್ತಿನ ಸೃಷ್ಟಿ ರಕ್ಷಣೆ ಸಂಹಾರಾದಿಗಳನ್ನು ಮಾಡುವವನೂ ಈತನೇ—

ವಿಧಿವಾಯುವೀಂದ್ರಶಿವಕೌಶಿಕೇಶಕಾ-
ನಮರಾಮರಾನುಗನರಾಸುರಾದಿಕಾನ್ ।
ಸೃಜತಿ ಪ್ರಪಾಲಯತಿ ಹಂತಿ ಸಂತತಂ
ಸ್ವಗತಿಂ ಪ್ರಯಾಪಯತಿ ಚೈಷ ಲೀಲಯಾ ॥೧೨॥

ಅ. ಅ — ಏಷಃ = ಈ ನಾರಾಯಣನು, ವಿಧಿ = ಬ್ರಹ್ಮದೇವರು, ವಾಯು = ಮುಖ್ಯಪ್ರಾಣದೇವರು, ವೀಂದ್ರ = ಗರುಡದೇವರು, ಶಿವ = ರುದ್ರದೇವರು, ಕೌಶಿಕ = ದೇವೇಂದ್ರ ಇವರೇ, ಈಶಕಾನ್ ಒಡೆಯರಾಗಿ ಉಳ್ಳ, ಅಮರ =

Rarest Archive

ದೇವತೆಗಳು, ಅಮರಾನುಗ = ದೇವತೆಗಳ ಸೇವಕರಾದ ಗಂಧರ್ವರು, ನರ = ಮನುಷ್ಯರು, ಅಸುರ = ದೈತ್ಯರು ಇವರೇ, ಆದಿಕಾನ್ = ಮೊದಲಾಗಿ ಉಳ್ಳವರನ್ನು, ಸಂತತಂ = ಯಾವಾಗಲೂ, ಸೃಜತಿ = ಸೃಷ್ಟಿಸುತ್ತಾನೆ, ಪ್ರಪಾಲಯತಿ = ಕಾಪಾಡುತ್ತಾನೆ, ಹಂತಿ = ಸಂಹರಿಸುತ್ತಾನೆ, ಚ = ಮತ್ತು ಸ್ವಗತಿಂ = (ಅವರಿಗೆ) ತಕ್ಕ ಗತಿಯನ್ನು, ಪ್ರಯಾಪಯತಿ = ಹೊಂದಿಸುತ್ತಾನೆ.

ತಾ.—ಈ ನಾರಾಯಣನೇ ಬ್ರಹ್ಮ, ವಾಯು, ಗರುಡ, ರುದ್ರ, ಇಂದ್ರದೇವರುಗಳ ಅಧೀನರಾಗಿರುವ ಗಂಧರ್ವರು, ಮಾನವರು, ದೈತ್ಯರು ಮೊದಲಾದ ಸಮಸ್ತಜೀವರನ್ನೂ ನಿತ್ಯದಲ್ಲಿಯೂ ಲೀಲೆಯಿಂದ ಸೃಜಿಸುತ್ತಾನೆ. ಕಾಪಾಡುತ್ತಾನೆ ಮತ್ತು ಸಂಹರಿಸುತ್ತಾನೆ. ಆ ಜೀವರಿಗೆ ಅವರವರ ಯೋಗ್ಯತಾನುಸಾರವಾಗಿ ಉತ್ತಮ, ಮಧ್ಯಮ, ಅಧಮ (ಮುಕ್ತಿ, ನಿತ್ಯಸಂಸಾರ, ಅಂಧಂತಮಸ್ಸು)ಗಳೆಂಬ ಗತಿಗಳನ್ನು ಕೊಡುತ್ತಾನೆ.

ಕ್ರಿ.—ಸೃಜತಿ ಸೃಜತಃ ಸೃಜಂತಿ ಇತ್ಯಾದಿ, ಸೃಜ ವಿಸರ್ಗೇ ಸಕ. ಲಟ್. ಪ್ರ+ಪಾಲಯತಿ ಪಾಲಯತಃ ಪಾಲಯಂತಿ ಇತ್ಯಾದಿ. ಪಾಲ ರಕ್ಷಣೇ to protect, ಸಕ.। ಅನಿ.। ಪರ.। ಲಟ್. ಹಂತಿ ಹತಃ ಘ್ನಂತಿ, ಹಂಸಿ ಹಥಃ ಹಥ, ಹನ್ಮಿ ಹನ್ವಃ ಹನ್ಮಃ. ಹನ ಹಿಂಸಾಗತ್ಯೋಃ, ಸಕ.। ಅನಿ.। ಪರ.। to kill. ಲಟ್. ಪ್ರ+ಯಾಪಯತಿ ಯಾಪಯತಃ ಯಾಪಯಂತಿ ಇತ್ಯಾದಿ ಯಾ ಪ್ರಾಪಣೇ ಣಿಜಂತ, ಲಟ್.

ಅವ.—ಇವನು ಭಕ್ತರ ಇಷ್ಟಾರ್ಥವನ್ನು ಸಲ್ಲಿಸುವುದಕ್ಕಾಗಿ ಅನೇಕ ಅವತಾರಗಳನ್ನು ಸ್ವೀಕರಿಸುತ್ತಾನೆ—

ಅಗಣಯ್ಯ(ಹೇಯ) ಸದ್ಗುಣಗಣೋ ವಿದೂಷಣಃ
ಸ್ವವಶಾಖಿಲೋಽಪ್ಯನುಪಚಾರತಃ ಸ್ವಯಂ ।
ಸ್ಮೃತಿಕೀರ್ತನಪ್ರಣತಿಭಿರ್ವಿಮುಕ್ತಯೇ
ಸ್ವಜನಸ್ಯ ಯಾತ್ಯಯಮನೇಕರೂಪತಾಂ ॥೧೩॥

ಅನ.—ಅಗಣಯ್ಯ(ಹೇಯ) = ಎಣಿಸಲು ಸಾಧ್ಯವಿಲ್ಲದ, ಸದ್ಗುಣಗಣಃ = ಒಳ್ಳೆಯ ಗುಣಗಳ ಸಮೂಹವುಳ್ಳ, ವಿದೂಷಣಃ = ದೋಷವಿಲ್ಲದ, ಅನುಪ-

Rarest Archiver

ಚಾರತಃ = ಮುಖ್ಯವಾಗಿ, ಸ್ವಯಂ = ತಾನು, ಸ್ವವಶ = ತನ್ನ ಅಧೀನವಾದ, ಅಖಿಲಃ ಅಪಿ = ಎಲ್ಲಾ ಲೋಕವುಳ್ಳವನಾದರೂ, ಅಯಂ = ಈ ಪರಮಾತ್ಮನು, ಸ್ಮೃತಿ = ಸ್ಮರಣೆ, ಕೀರ್ತನ=ಭಗವಂತನ ನಾಮವನ್ನು ಹೇಳುವುದು, ಪ್ರಣತಿಭಿಃ = ನಮಸ್ಕಾರ ಇವುಗಳಿಂದ, ಸ್ವಜನಸ್ಯ = ತನ್ನ ಭಕ್ತರ, ವಿಮುಕ್ತಯೇ = ಮೋಕ್ಷಕ್ಕಾಗಿ, ಅನೇಕರೂಪತಾಂ = ವಾಸುದೇವಾದಿ ಅನೇಕರೂಪವುಳ್ಳತನವನ್ನು, ಯಾತಿ = ಹೊಂದುತ್ತಾನೆ.

ತಾ.—ಈ ಪರಮಾತ್ಮನ ಗುಣಗಳನ್ನು ಲೆಕ್ಕಿಸಲು ಸಾಧ್ಯವಿಲ್ಲ. ಇವನು ನಿರ್ದೋಷಗಳಾದ ಜ್ಞಾನಾನಂದಾದಿಗುಣಗಳ ಸಮೂಹರೂಪನಾಗಿರುವನು. ಯಾವದೋಷವೂ ಇಲ್ಲದ ಇವನು ತನ್ನ ಶಕ್ತಿಯಿಂದಲೇ ಸಮಸ್ತಲೋಕಗಳನ್ನೂ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾನೆ. ಇವನೇ ಒಂದೇ ರೂಪದಿಂದ ಎಲ್ಲಾಕಾರ್ಯಗಳನ್ನು ಮಾಡಲು ಶಕ್ತನಾದರೂ ತನ್ನ ಭಕ್ತರು ಅವರವರ ಯೋಗ್ಯತಾನುಸಾರವಾಗಿ ತನ್ನನ್ನು ಸ್ಮರಿಸಿ ಧ್ಯಾನಿಸುವುದರಿಂದಲೂ, ನಾಮಗಳನ್ನು ಉಚ್ಚರಿಸುವುದರಿಂದಲೂ, ನಮಸ್ಕಾರಮಾಡುವುದರಿಂದಲೂ ಮುಕ್ತಿಯನ್ನು ಪಡೆಯಲೆಂದು ವಾಸುದೇವಾದಿ ಅನೇಕ ಅವತಾರಗಳನ್ನು ಸ್ವೀಕರಿಸಿ ಭಕ್ತರಿಗೆ ಇಷ್ಟವನ್ನು ಕೊಡುತ್ತಾನೆ.

ವಿ.—ಗಣಯಿತುಮಶಕ್ಯಾಃ ಅಗಣಯ್ಯಾಃ, ಅಗಣಯ್ಯಾಶ್ಚ ತೇ ಸಂತಶ್ಚ ತೇ ಗುಣಾಶ್ಚ, ಅಗಣಯ್ಯಸದ್ಗುಣಾನಾಂ ಗಣಃ ಯಸ್ಯ ಸಃ, ವಿಗತಂ ದೂಷಣಂ ಯಸ್ಯ ಸಃ, ಸ್ವಸ್ಯ ವಶಃ, ಸ್ವವಶಃ ಅಖಿಲಃ ಯಸ್ಯ ಸಃ, ಉಪಚಾರಸ್ಯ ಅಭಾವಃ, ಅನುಪಚಾರಾತ್ ಇತಿ ಅನುಪಚಾರತಃ, ಸ್ಮೃತಿಶ್ಚ ಕೀರ್ತನಂ ಚ ಪ್ರಣತಿಶ್ಚ ತಾಭಿಃ, ಸ್ವಸ್ಯ ಜನಃ ತಸ್ಯ,

ಕ್ರಿ.—ಯಾತಿ, ಸರ್ಗ ೭ ಶ್ಲೋಕ ೪೮. ನೋಡಿರಿ.

ಅವ.—ಆಚಾರ್ಯರು ಅವತಾರರೂಪಗಳನ್ನು ವರ್ಣಿಸುತ್ತಾ ಮೊದಲು ಮತ್ಸ್ಯಾವತಾರ ಮತ್ತು ಹಯಗ್ರೀವಾವತಾರಗಳನ್ನೂ, ಒಂದೇ ಶ್ಲೋಕದಲ್ಲಿ ಎರಡು ಅರ್ಥದ ಶಬ್ದಗಳಿಂದ ವರ್ಣಿಸುತ್ತಾರೆ—

ಚತುರಾನನಾಯ ಚತುರಃ ಪುರಾಗಮಾನ್
ಪ್ರದದಾವಸಾವನಿಮಿಷೇಶ್ವರಃ ಪ್ರಭುಃ ।

Rarest Archiver

ವಿನಿಹತ್ಯ ಹಿ ಶ್ರುತಿಮುಷಂ ಪುರಾತನಂ
ವಪುಷೋದ್ಧೃತಂ ಹಯಮುಖೇನ ಸದ್ರಿಪುಂ ॥೧೪॥

ಅ.ಅ—ಅಸೌ ಪ್ರಭುಃ = ಸಮರ್ಥನಾದ ಈ ನಾರಾಯಣನು, ಪುರಾ = ಹಿಂದೆ, ಅನಿಮಿಷೇಶ್ವರಃ (ಸನ್) = ಮೀನುಗಳಿಗೆ ಒಡೆಯನಾದ ಮತ್ಸ್ಯಾವ-ತಾರನಾಗಿ, ಹಯಮುಖೇನ = ಕುದುರೆಯಂತೆ ಮುಖವುಳ್ಳ, ವಪುಷಾ = ಶರೀರ ದಿಂದ, ಉದ್ಧೃತಂ = ಕೊಬ್ಬಿದ, ಶ್ರುತಿಮುಷಂ = ವೇದಗಳನ್ನು ಕದ್ದ, ಪುರಾತನಂ = ಹಿಂದಿನ ಕಾಲದ, ಸದ್ರಿಪುಂ = ಸಜ್ಜನರಿಗೆ ಶತ್ರುವಾದ ಹಯಗ್ರೀವಾಸುರ ನನ್ನು, ವಿನಿಹತ್ಯ = ಕೊಂದು, ಚತುರಾನನಾಯ = ಬ್ರಹ್ಮದೇವರಿಗೆ, ಚತುರಃ ನಾಲ್ಕು, ಆಗಮಾನ್ = ವೇದಗಳನ್ನು, ಪ್ರದದೌ ಹಿ=ಕೊಟ್ಟನಷ್ಟೆ !

ಮತ್ತು ಅನಿಮಿಷೇಶ್ವರಃ=ದೇವತೆಗಳಿಗೆ ಒಡೆಯನಾದ, ಅಸೌ ಪ್ರಭುಃ = ಈ ನಾರಾಯಣನು, ಹಯಮುಖೇನ = ಕುದುರೆಯ ಮುಖವುಳ್ಳ, ವಪುಷಾ = ಶರೀರದಿಂದ (ಕೂಡಿದವನಾಗಿ) ಶ್ರುತಿಮುಷಂ = ವೇದವನ್ನು ಕದ್ದ, ಪುರಾತನಂ = ಹಿಂದಿನ, ಸದ್ರಿಪುಂ ವಿನಿಹತ್ಯ = ಸಜ್ಜನರ ಶತ್ರುವಾದ ಮಧು ಎಂಬ ದೈತ್ಯ ನನ್ನು ಕೊಂದು, ಚತುರಾನನಾಯ ಚತುರಃ ಆಗಮಾನ್ ಪ್ರದದೌಹಿ = ಬ್ರಹ್ಮ ದೇವರಿಗೆ ನಾಲ್ಕು ವೇದಗಳನ್ನು ಕೊಟ್ಟನಷ್ಟೆ !

ಮತ್ಸ್ಯಾವತಾರ—ಸಮರ್ಥನಾದ ಈ ನಾರಾಯಣನು ಮೊದಲು ಮೀನುಗಳಿಗೆ ಸ್ವಾಮಿಯಾದ ಮತ್ಸ್ಯದ ಅವತಾರವನ್ನು ಸ್ವೀಕರಿಸಿದನು ಕುದುರೆಯ ಮುಖವುಳ್ಳ ಹಯಗ್ರೀವವೆಂಬ ಒಬ್ಬ ದೈತ್ಯನು ವೇದಗಳನ್ನು ಕದ್ದಾಗ ಸಜ್ಜನವೈರಿಯಾದ ಅವನನ್ನು ಕೊಂದು ಚತುರ್ಮುಖಬ್ರಹ್ಮನಿಗೆ ನಾಲ್ಕು ವೇದಗಳನ್ನು ತಂದುಕೊಟ್ಟನು.

ಹಯಗ್ರೀವ—ಸಜ್ಜನವೈರಿಯೂ ದುರಹಂಕಾರಿಯೂ ಆದ ಮಧು ಎಂಬ ದೈತ್ಯನು ವೇದಗಳನ್ನು ಕದ್ದನು. ಆಗ ದೇವತೆಗಳಿಗೆ ಸ್ವಾಮಿಯಾದ ಈ ನಾರಾಯಣನು ಕುದುರೆಯಂತಹ ಮುಖವುಳ್ಳ ಹಯಗ್ರೀವರೂಪದಿಂದ ಅವತರಿಸಿ ಆ ದೈತ್ಯನನ್ನು ಕೊಂದು ಬ್ರಹ್ಮದೇವರಿಗೆ ನಾಲ್ಕುವೇದಗಳನ್ನೂ ತಂದುಕೊಟ್ಟನು. ಹಯಗ್ರೀವ ಮತ್ತು ಮಧುದೈತ್ಯನು ಬ್ರಹ್ಮದೇವರಿಂದ ವೇದಗಳನ್ನು ಕದ್ದ ಕಾರಣ

Rarest Archiver

ಮತ್ಸ್ಯಾವತಾರ ಮತ್ತು ಹಯಗ್ರೀವಾವತಾರಗಳನ್ನು ಮಾಡಿದನೆಂದು ಅವತಾರ ಕಾರಣವನ್ನೂ, ದೈತ್ಯರನ್ನು ಕೊಂದು ವೇದಗಳನ್ನು ತಂದಿತ್ತನೆಂದು ಹೇಳಿದ್ದ ರಿಂದ ಅವತಾರಪ್ರಯೋಜನವನ್ನೂ ವರ್ಣಿಸಿದಂತಾಯಿತು.

ವಿ.—ಚತ್ವಾರಿ ಆನನಾನಿ ಯಸ್ಯ ಸಃ ತಸ್ಮೈ, ಅನಿಮಿಷಾಣಾಂ ಈಶ್ವರಃ, ಸುರಮತ್ಸ್ಯಾವನಿಮಿಷೌ—ಅಮರ. ಶ್ರುತೀಃ ಮುಷ್ಣಾತೀತಿ ಶ್ರುತಿಮುಟ್ ತಂ, ಹಯಸ್ಯ ಮುಖಮಿವ ಮುಖಂ ಯಸ್ಯ ತತ್ ತೇನ, ಸತಾಂ ರಿಪುಃ ತಂ.

ಕ್ರಿ.—ಪ್ರ+ದದೌ ಸರ್ಗ ೭ ಶ್ಲೋಕ ೩೪ ನೋಡಿರಿ.

ಅವ.—ಕೂರ್ಮ ಮತ್ತು ವರಾಹಾವತಾರಗಳೆರಡನ್ನೂ ವರ್ಣಿಸುತ್ತಾರೆ—

ಅಮರೇಂದ್ರವೈರಿಭುಜದಂಡಮಂಡಲ
ಪ್ರತಿಕರ್ಷಪುಷ್ಕರಪತದ್ಧರೋದ್ಧೃತಿಃ ।
ವಿದಧೇ ವರಾಹವಪುಷಾಮುನೋರ್ಮಿಮತ್
ಸೃತಿಸಿಂಧುಕಚ್ಛಪತಯಾಪ್ತರಕ್ಷಿಣಾ ॥೧೫॥

ಅ. ಅ—ವರಾಹವಪುಷಾ=(ವರ+ಆಹವಪುಷಾ) = ಉತ್ತಮವಾದ ಯುದ್ಧವನ್ನು ಪುಷ್ಟೀಕರಿಸುವ, ಅಥವಾ, ವರ=ಶ್ರೇಷ್ಠವಾದ, ಆಹವ = ದೇವತೆಗಳ ಪ್ರಾರ್ಥನೆಯನ್ನು, ಪುಷಾ=ಅಂಗೀಕರಿಸಿದ, ಆಪ್ತರಕ್ಷಿಣಾ=ಶರಣಾಗತರನ್ನು ರಕ್ಷಿಸುವ, ಅಮುನಾ=ಈ ನಾರಾಯಣನಿಂದ, ಊರ್ಮಿಮತ್ = ಅಲೆಗಳುಳ್ಳ, ಸೃತಿ = ವ್ಯಾಪ್ತಿಯುಳ್ಳ, ಸಿಂಧು=ಕ್ಷೀರಸಮುದ್ರದಲ್ಲಿ, ಕಚ್ಛಪತಯಾ =ಆಮೆಯ ರೂಪದಿಂದ, ಅಮರ = ದೇವತೆಗಳು, ಇಂದ್ರವೈರಿ = ದಾನವರು ಇವರ, ಭುಜ=ತೋಳುಗಳೆಂಬ, ದಂಡ = ದೊಣ್ಣೆಗಳ, ಮಂಡಲ=ಸಮೂಹಗಳಿಂದ, ಪ್ರತಿಕರ್ಷ = ಎಳೆಯುವುದರಿಂದ, ಪತತ್ = ಬಿದ್ದುಹೋಗುತ್ತಿರುವ, ಧರ=ಮಂದರಪರ್ವತದ, ಉದ್ಧೃತಿಃ=ಮೇಲಕ್ಕೆ ಎತ್ತುವಿಕೆಯು, ವಿದಧೇ = ಮಾಡಲ್ಪಟ್ಟಿತು.

ಮತ್ತು—ಊರ್ಮಿಮತ್=ಗರ್ಭವಾಸ, ಹುಟ್ಟುವುದು, ಬೆಳೆಯುವುದು, ಪರಿಣಾಮ, ಕ್ಷೀಣತೆ, ನಾಶ ಎಂಬ ಆರು ಊರ್ಮಿ(ಅವಸ್ಥೆ)ಗಳುಳ್ಳ, ಸೃತಿ = ಸಂಸಾರವೆಂಬ, ಸಿಂಧು = ಸಮುದ್ರದ, ಕಚ್ಛ-ಪತಯಾ = ದಡದಂತಿರುವ

Rarest Archiver

ಮೋಕ್ಷದ ರಕ್ಷಿಸುವಿಕೆಯಿಂದ, ಆಪ್ತರಕ್ಷಿಣಾ = ಶರಣಾಗತರಾದ ಭಕ್ತರಿಗೆ ಮೋಕ್ಷವನ್ನು ಕೊಟ್ಟು ಕಾಪಾಡುವ, ವರಾಹವಪುಷಾ = ಕಾಡುಹಂದಿಯ ದೇಹವುಳ್ಳ, ಅಮುನಾ = ಈ ನಾರಾಯಣನಿಂದ, ಅಮರೇಂದ್ರ=ದೇವಶ್ರೇಷ್ಠರ, ವೈರಿ = ಶತ್ರುವಾದ ಹಿರಣ್ಯಾಕ್ಷನ, ಭುಜದಂಡಮಂಡಲ = ದಂಡದಂತಿರುವ ತೋಳುಗಳ ಸಮೂಹದಿಂದ, ಪ್ರತಿಕರ್ಷ = ಎಳೆಯುವುದರಿಂದ, ಪುಷ್ಕರ = ನೀರಿನಲ್ಲಿ, ಪತತ್ = ಬೀಳುತ್ತಿರುವ, ಧರಾ = ಭೂಮಿಯ, ಉದ್ಧೃತಿಃ = ಎತ್ತುವಿಕೆಯು, ವಿದಧೇ = ಮಾಡಲ್ಪಟ್ಟಿತು.

ತಾ.—**ಕೂರ್ಮಾವತಾರ** — ಈ ನಾರಾಯಣನು ಉತ್ತಮವಾದ ಯುದ್ಧಗಳಲ್ಲಿ ಚತುರನು. ಅವನು ದೇವತೆಗಳು ಪ್ರಾರ್ಥಿಸಿ ಕರೆದೊಡನೆ ಬರುವನು. ತನ್ನ ಆಪ್ತಭಕ್ತರಾದ ದೇವತೆಗಳನ್ನು ಕಾಪಾಡುವನು. ಹಿಂದೆ ಒಂದು ಬಾರಿ ದೇವತೆಗಳೂ ಅಸುರರೂ ಸೇರಿ ಮಂದರಪರ್ವತವನ್ನು ಕಡಗೋಲಾಗಿ ಮಾಡಿಕೊಂಡು ಕ್ಷೀರಸಮುದ್ರವನ್ನು ಕಡೆದರು. ಆಗ ಮಂದರವು ಸಮುದ್ರದಲ್ಲಿ ಮುಳುಗಲಾರಂಭಿಸಿತು. ಆಗ ಶ್ರೀಹರಿಯು ಕೂರ್ಮರೂಪವನ್ನು ತಾಳಿ ಆ ಪರ್ವತವನ್ನು ತನ್ನ ಬೆನ್ನಿನಿಂದ ಎತ್ತಿದನು. ಅಮೃತಕ್ಕಾಗಿ ದೇವದೈತ್ಯರು ಸೇರಿ ಕ್ಷೀರಸಾಗರವನ್ನು ಕಡೆಯುವುದಕ್ಕಾಗಿ ಮಂದರಪರ್ವತವನ್ನು ತಂದು ಸಮುದ್ರದಲ್ಲಿಟ್ಟಾಗ ಅದು ಮುಳುಗಲು ವಿಷ್ಣುವು ದೇವತೆಗಳ ಪ್ರಾರ್ಥನೆಯಿಂದ ಕೂರ್ಮನಾಗಿ ಅವತರಿಸಿ ಪರ್ವತವನ್ನು ಎತ್ತಿದನು ಎಂದು ಭಾವ.

ವರಾಹಾವತಾರ — ಈ ನಾರಾಯಣನು ಗರ್ಭವಾಸ, ಹುಟ್ಟುವುದು, ಬೆಳೆಯುವುದು, ವಯಸ್ಸಿಗೆ ತಕ್ಕಂತೆ ಪರಿಣಮಿಸುವುದು, ಕ್ಷೀಣತೆ, ಮರಣಗಳೆಂಬ ಷಡೂರ್ಮಿಗಳಿಂದ ಕೂಡಿದ ಸಂಸಾರವೆಂಬ ಸಮುದ್ರದಿಂದ ಭಕ್ತರನ್ನು ಉದ್ಧರಿಸಿ ಮೋಕ್ಷವೆಂಬ ದಡಕ್ಕೆ ಸೇರಿಸುತ್ತಾನೆ. ಅಂತಹ ಈ ಸ್ವಾಮಿಯು ವರಾಹರೂಪವನ್ನು ತಾಳಿದನು. ದೇವತೆಗಳ ಶತ್ರುವಾದ ಹಿರಣ್ಯಾಕ್ಷನು ತನ್ನ ತೋಳುಗಳ ಬಲದಿಂದ ಭೂಮಿಯನ್ನು ಎಳೆದು ನೀರಿನಲ್ಲಿ ಮುಳುಗಿಸಿದಾಗ ಆ ಭೂಮಿಯನ್ನು ಈ ವರಾಹಸ್ವಾಮಿಯು ಉದ್ಧರಿಸಿದನು. (ಹಿರಣ್ಯಾಕ್ಷನನ್ನು ಕೊಂದು ಭೂಮಿಯನ್ನು ಮೇಲಕ್ಕೆತ್ತಿದನು ಎಂದು ಭಾವ, ಹಿರಣ್ಯಾಕ್ಷನಿಗೆ ಸಾವಿರತೋಳುಗಳಿದ್ದುವೆಂದು ಭಾರತದಲ್ಲಿ ಪ್ರಸಿದ್ಧವಾಗಿದೆ).

Rarest Archiver

ವಿ.—(ಕೂರ್ಮ) ಇಂದ್ರಸ್ಯವೈರಿಣಃ, ಅಮರಾಶ್ಚ ಇಂದ್ರವೈರಿಣಶ್ಚ, ಭುಜಾ ಏವ ದಂಡಾಃ, ಭುಜದಂಡಾನಾಂ ಮಂಡಲಾನಿ, ಅಮರೇಂದ್ರವೈರಿಣಾಂ ಭುಜದಂಡಮಂಡಲಾನಿ, ಅಮರೇಂದ್ರವೈರಿಭುಜದಂಡಮಂಡಲೈಃ ಪ್ರತಿಕರ್ಷಃ, ಅಮ ಕರ್ಷೇಣ ಪುಷ್ಕರೇ ಪತಂಶ್ಚಾಸೌ ಧರಶ್ಚ, ಅಮರೇಂದ್ರ... ಪತದ್ಧರಸ್ಯ ಉದ್ಧೃತಿಃ, ವರಶ್ಚಾಸೌ ಆಹವಶ್ಚ, ವರಾಹವಂ ಪುಷ್ಣಾತೀತಿ ವರಾಹವಪುಟ್ (ಷ್) ತೇನ, ಆಪ್ತಾನ್ ರಕ್ಷಿತುಂ ಶೀಲಂ ಅಸ್ಯೇತಿ ಆಪ್ತರಕ್ಷೀ ತೇನ, ಊರ್ಮಯಃ ಅಸ್ಯ ಸಂತೀತಿ, ಊರ್ಮಿಮತೀ ಸೃತಿಃ ಯಸ್ಯ, ಊರ್ಮಿಮತ್-ಸೃತಿಶ್ಚಾಸೌ ಸಿಂಧುಶ್ಚ, ಕಚ್ಛಪಸ್ಯ ಭಾವಃ ಕಚ್ಛಪತಾ, ಊರ್ಮಿಮತ್‌ಸಿಂಧೌ ಕಚ್ಛಪತಾ ಊರ್ಮಿಮತ್‌ಸೃತಿಸಿಂಧುಕಚ್ಛಪತಾ ತಯಾ;

(ವರಾಹ)—ಅಮರೇಂದ್ರಾಣಾಂ ವೈರೀ, ಅಮರೇಂದ್ರವೈರಿಣಃ ಭುಜ-ದಂಡಮಂಡಲಾನಿ, ಅಮರೇಂದ್ರವೈರಿಭುಜದಂಡಮಂಡಲೈಃ ಪುಷ್ಕರೇ ಪತಂತೀ ಚ ಸಾ ಧರಾ ಚ. ಅಮರೇಂದ್ರ....ಪತದ್ಧರಾಯಾಃ ಉದ್ಧೃತಿಃ, ವರಾಹಸ್ಯ ವಪುಃ ಯಸ್ಯ ಸಃ ವರಾಹವಪುಃ ತೇನ, ಊರ್ಮಿಮತೀ ಚ ಸಾ ಸೃತಿಶ್ಚ, ಊರ್ಮಿಮತ್‌ಸೃತಿರೇವ ಸಿಂಧುಃ, ತಸ್ಯ ಕಚ್ಛಃ, ತಂ ಪಾತೀತಿ ಊರ್ಮಿ.... ಕಚ್ಛಪಃ ತಸ್ಯ ಭಾವಃ ತಯಾ;

ಕ್ರಿ.—ವಿ+ದಧೇ. ಕರ್ಮಣಿ. ಸರ್ಗ ೭ ಶ್ಲೋಕ ೩೨. ನೋಡಿರಿ.

ಅವ.—ನರಸಿಂಹಾವತಾರ ಮತ್ತು ಗಜೇಂದ್ರನನ್ನು ಉದ್ಧರಿಸಿದ ತಾಪಸಾವತಾರಗಳನ್ನೂ ಇವನೇ ಸ್ವೀಕರಿಸಿದ್ದಾನೆ—

ನರಸಿಂಹ ಏಷ ವಿದದಾರ ದಾರುಣಂ
ಪ್ರತಿಘೋದಯೇ ನಖರಚಕ್ರತೇಜಸಾ ।
ಸ್ವರಿಪುಂ ಕ್ಷಣೇನ ಸರಸಃ ಸ್ಫುರತ್ತನುಂ
ಪೃಥುಸತ್ತ್ವಮಿಷ್ಟಜನಭೀತಿಭಂಜನಃ ॥೧೬॥

ಅ.ಅ—**ನರಸಿಂಹ** — ಇಷ್ಟಜನಭೀತಿಭಂಜನಃ = ಭಕ್ತಜನರ ಭಯವನ್ನು ನಿವಾರಿಸುವ, ಸರಸಃ = ಶೌರ್ಯದಿಂದ ಕೂಡಿದ, ಏಷಃ = ಈ ನಾರಾಯಣನು, ನರಸಿಂಹಃ = ನರಸಿಂಹರೂಪನಾಗಿ, ಪ್ರತಿಘೋದಯೇ (ಸತಿ)

Rarest Archive

ಕೋಪವುಂಟಾಗಲು, ನಖರಚಕ್ರ = ಉಗುರುಗಳ ಸಮೂಹದ ಶಕ್ತಿಯಿಂದ, ಸ್ಫುರತ್ತನುಂ = ಪ್ರಕಾಶಿಸುವ ಶರೀರವುಳ್ಳ, ಪೃಥುಸತ್ತ್ವಂ = ಹೆಚ್ಚುಬಲವುಳ್ಳ, ದಾರುಣಂ = ಭಯಂಕರನಾದ, ಸ್ವರಿಪುಂ = ತನ್ನ ಶತ್ರುವಾದ ಹಿರಣ್ಯಕಶಿಪುವನ್ನು, ಕ್ಷಣೇನ = ಕ್ಷಣಕಾಲದಲ್ಲಿ, ವಿದದಾರ = ಸೀಳಿದನು.

ತಾಪಸ—ನರಸಿಂಹಃ = ಪುರುಷೋತ್ತಮನಾದ, ಇಷ್ಟಜನಭೀತಿಭಂಜನಃ = ಭಕ್ತರ ಭಯವನ್ನು ನಿವಾರಿಸುವ, ಏಷಃ = ಈ ನಾರಾಯಣನು, ದಾರುಣಂ = ಕಠಿನನಾದ, ಸ್ವರಿಪುಂ = ತನ್ನ ಭಕ್ತ ಗಜೇಂದ್ರನ ಶತ್ರುವಾದ, ಸ್ಫುರತ್ತನುಂ = ಪ್ರಕಾಶಿಸುವ ದೇಹವುಳ್ಳ, ಪೃಥುಸತ್ತ್ವಂ = ದೊಡ್ಡ ಪ್ರಾಣಿಯಾದ ಮೊಸಳೆಯನ್ನು, ಪ್ರತಿಘೋದಯೇನ = ಕೋಪಉಂಟಾದುದರಿಂದ, ಖರಚಕ್ರತೇಜಸಾ = ಹರಿತವಾದ ಸುದರ್ಶನಚಕ್ರದ ಶಕ್ತಿಯಿಂದ, ಕ್ಷಣೇನ ವಿದದಾರ = ಸ್ವಲ್ಪ ಕಾಲದಲ್ಲಿಯೇ ಸೀಳಿದನು.

ತಾ.—ನರಸಿಂಹಾವತಾರ—ಪರಾಕ್ರಮಿಯೂ ಭಕ್ತರ ಭಯಪರಿಹಾರಕನೂ ಆದ ಈ ನಾರಾಯಣನು ನರಸಿಂಹಾವತಾರವನ್ನು ತಾಳಿ, ಕೋಪವು ಹುಟ್ಟಿದಾಗ ಉಗುರುಗಳ ಶಕ್ತಿಯಿಂದಲೇ ತನ್ನ ಭಕ್ತಪ್ರಹ್ಲಾದನ ತಂದೆಯಾಗಿದ್ದರೂ ಶತ್ರುವಾದ, ಪ್ರಕಾಶಮಾನವಾದ ದೇಹ ಮತ್ತು ಮಹಾಸಾಮರ್ಥ್ಯದಿಂದ ಕೂಡಿದ ಹಿರಣ್ಯಕಶಿಪುವನ್ನು ಸೀಳಿದನು.

ತಾಪಸಾವತಾರ—ಭಕ್ತರ ಭಯನಿವಾರಕನಾದ ಪುರುಷಶ್ರೇಷ್ಠನಾದ ಈ ನಾರಾಯಣನು ತನ್ನ ಭಕ್ತನಾದ ಗಜೇಂದ್ರನ ಶತ್ರುವೂ ಅತಿಕ್ರೂರವೂ ಬಹಳ ದೊಡ್ಡದೂ ಆದ ಮೊಸಳೆಯನ್ನು ಕೋಪದಿಂದ ಸರೋವರದಿಂದ ಮೇಲಕ್ಕೆಳೆದು ತನ್ನ ಚಕ್ರಾಯುಧದ ಶಕ್ತಿಯಿಂದ ಸೀಳಿದನು. (ನರಸಿಂಹನು ದೇವತೆಗಳ ಭಯವನ್ನು ಪರಿಹರಿಸಿ ಹಿರಣ್ಯಕಶಿಪುವನ್ನು ಕೊಂದು ಪ್ರಹ್ಲಾದನನ್ನು ಕಾಪಾಡಿದನು. ತಾಪಸನು ಮೊಸಳೆಯನ್ನು ಸೀಳಿ ಗಜೇಂದ್ರನನ್ನು ರಕ್ಷಿಸಿದನು.)

ವಿ.—(ನರಸಿಂಹ) ನರಶ್ಚಾಸೌ ಸಿಂಹಶ್ಚ, ಪ್ರತಿಘಾಯಾಃ (ಪ್ರತಿಘಸ್ಯ) ಉದಯಃ ತಸ್ಮಿನ್, ಪ್ರತಿಘಾ ರುಟ್‍ಕ್ರುಧೌ ಸ್ತ್ರಿಯೌ-ಅಮರ-ರೋಷಃ

Rarest Archiver

ಪ್ರತಿಘೆ ಉಚ್ಯತೇ–ಹಲ. ನಖರಾಣಾಂ ಚಕ್ರಂ, ನಖರಚಕ್ರಸ್ಯ ತೇಜಃ ತೇನ, ಸ್ವಸ್ಯ ರಿಪುಃ ತಂ, ರಸೇನ ಸಹಿತಃ ಸರಸಃ, ರಸ = ಪರಾಕ್ರಮ, ಸ್ಫುರಂತೀ ತನುಃ ಯಸ್ಯ ತಂ, ಪೃಥು ಸತ್ತ್ವಂ ಯಸ್ಯ ತಂ, ಇಷ್ಟಾಶ್ಚ ತೇ ಜನಾಶ್ಚ, ಇಷ್ಟಜನಾನಾಂ ಭೀತೇಃ ಭಂಜನಃ.

(ತಾಪಸ)—ನರೇಷು ಸಿಂಹಃ, ಪ್ರತಿಘಾಯಾಃ ಉದಯಃ ತೇನ, ಖರಂ ಚ ತತ್ ಚಕ್ರಂ ಚ, ಖರಚಕ್ರಸ್ಯ ತೇಜಃ ತೇನ, ಸರಸಃ ಸರಸ್‌ಶಬ್ದ. ಪಂ. ಏ. ಪೃಥುಶ್ಚಾಸೌ ಸತ್ತ್ವಶ್ಚ ತಂ.

ಕ್ರಿ.—ವಿ+ದದಾರ, ದದ್ರತುಃ ದದರತುಃ ದದ್ರುಃ ದದರುಃ, ದದರಿಥ ದದ್ರಥುಃ ದದರಥುಃ ದದ್ರ ದದರ, ದದಾರ ದದರ ದದ್ರಿವ ದದರಿವ, ದದ್ರಿಮ ದದರಿಮ. ದೄ ವಿದಾರಣೇ ಸಕ.। ಸೇಟ್.। ಪರ.। to bar, to spilt. ಲಿಟ್.

ಅನ.—ವಾಮನಾವತಾರ ಬುದ್ಧಾವತಾರಗಳನ್ನು ಈ ನಾರಾಯಣ ಮುನಿಯೇ ಮಾಡಿದನು—

ಅಪಿ ವಾಮನೋ ಲಲಿತಬಾಲ್ಯವಾನಯಂ
ಪ್ರತಿಭಾಬಲೇನ ಕೃತದೈತ್ಯಕೌತುಕಃ।
ಉಪಧೇರಧಃಕೃತಬಲೀಂದ್ರಶಾತ್ರವಃ
ಸ್ವಜನಾಯ ಕೇವಲಮದಾತ್ ಪರಂ ಪದಂ ॥೧೭॥

ಅ.ಅ— **ವಾಮನ** ಅಯಂ = ಈ ನಾರಾಯಣನು, ಲಲಿತಬಾಲ್ಯವಾನ್ = ಮನೋಹರವಾದ ಬಾಲ್ಯವುಳ್ಳ, ವಾಮನಃ ಅಪಿ = ಕುಳ್ಳಾದ ವಾಮನಾವತಾರ ಉಳ್ಳವನಾದರೂ, ಪ್ರತಿಭಾಬಲೇನ = ಬುದ್ಧಿಸಾಮರ್ಥ್ಯದಿಂದ, ಕೃತ = ಮಾಡಲ್ಪಟ್ಟ, ದೈತ್ಯ = ಅಸುರರಿಗೆ, ಕೌತುಕಃ = ಕುತೂಹಲವುಳ್ಳವನಾಗಿ, ಉಪಧೇಃ = ಕಪಟದಿಂದ, ಅಧಃಕೃತ = ಪಾತಾಳದಲ್ಲಿರುವಂತೆ ಮಾಡಲ್ಪಟ್ಟ, ಬಲಿ = ಬಲಿಯೆಂಬ, ಇಂದ್ರಶಾತ್ರವಃ = ಇಂದ್ರನ ಶತ್ರುವುಳ್ಳವನಾಗಿ, ಸ್ವಜನಾಯ = ತನ್ನ ಭಕ್ತನಾದ ಇಂದ್ರನಿಗೆ, ಕೇವಲಂ = ಮುಖ್ಯ

Rarest Archiver

ವಾದ, ಪರಂ ಪದಂ = ಉತ್ತಮವಾದ ಇಂದ್ರಪದವಿಯನ್ನು, ಅದಾತ್ = ಕೊಟ್ಟನು.

ಬುದ್ಧ—ಅಯಂ=ಈ ನಾರಾಯಣನು, ವಾಮನಃ ಅಪಿ=ಚಿಕ್ಕಬಾಲಕನಾದರೂ, ಲಲಿತಬಾಲ್ಯವಾನ್=ಶ್ರೇಷ್ಠವಾದ ಬಾಲ್ಯವುಳ್ಳವನಾಗಿ, ಪ್ರತಿಭಾಬಲೇನ=ಬುದ್ಧಿಸಾಮರ್ಥ್ಯದಿಂದ, ಕೃತ=ಮಾಡಲ್ಪಟ್ಟ, ದೈತ್ಯಕೌತುಕಃ=ಜಿನನೆಂಬ ದೈತ್ಯನಿಗೆ ಸಂಬಂಧಿಸಿದವರ ಕುತೂಹಲವುಳ್ಳವನಾಗಿ, ಉಪಧೇಃ=ಕಪಟದಿಂದ, ಅಧಃಕೃತ=ನರಕವಾಸಿಗಳಾಗಿ ಮಾಡಲ್ಪಟ್ಟ, ಬಲಿ = ಬಲಿಷ್ಠರಾದ, ಇಂದ್ರಶಾತ್ರವಃ=ಇಂದ್ರನ ಶತ್ರುಗಳಾದ ಜಿನನೇ ಮೊದಲಾದವರುಳ್ಳವನಾಗಿ, ಸ್ವಜನಾಯ=ತನ್ನ ಭಕ್ತ ಜನರಿಗೆ, ಕೇವಲಂ=ಮುಖ್ಯವಾದ, ಪರಂ ಪದಂ=ಉತ್ತಮವಾದ ವೈಕುಂಠವನ್ನು, ಅದಾತ್=ಕೊಟ್ಟನು.

ತಾ.— ವಾಮನಾವತಾರ— ಈ ನಾರಾಯಣನೇ ವಾಮನನೆಂಬ ಸುಂದರವಾದ ಬಾಲವಟುರೂಪವನ್ನು ಧರಿಸಿ, ಬುದ್ಧಿಶಕ್ತಿಯಿಂದ ಬಲಿಚಕ್ರವರ್ತಿಯೇ ಮೊದಲಾದ ದೈತ್ಯರಿಗೆ ಆಶ್ಚರ್ಯವನ್ನುಂಟುಮಾಡಿ ಮೂರಡಿ-ಭೂಮಿಯನ್ನು ಮಾತ್ರ ಕೇಳುವ ನೆಪದಿಂದ ಎಲ್ಲಾ ಲೋಕಗಳನ್ನೂ ದಾನವಾಗಿ ತೆಗೆದುಕೊಂಡನು. ಇಂದ್ರನ ಶತ್ರುವಾದ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತಳ್ಳಿದನು. ತನ್ನ ಭಕ್ತನಾದ ಇಂದ್ರನಿಗೆ ಕೈ ಬಿಟ್ಟುಹೋದ ಉತ್ತಮವಾದ ಸ್ವರ್ಗವನ್ನುಹಿಂದಕ್ಕೆ ಕೊಡಿಸಿದನು..

ಬುದ್ಧಾವತಾರ—ಈ ನಾರಾಯಣನು ಚಿಕ್ಕ ಸುಂದರ ಬಾಲರೂಪದಿಂದ ಬುದ್ಧಾವತಾರನಾಗಿ, ಬುದ್ಧಿಶಕ್ತಿಯಿಂದ ಜಿನನೇ ಮೊದಲಾದ ದೈತ್ಯರಿಗೆ ಆಶ್ಚರ್ಯವನ್ನುಂಟುಮಾಡಿದನು. ಬಲಿಷ್ಠರಾದ ದೇವಶತ್ರುಗಳಾದ ಜಿನನೇ ಮೊದಲಾದವರನ್ನು ಅಂಧಂತಮಸ್ಸಿಗೆ ತಳ್ಳಿದನು. ದೇವತೆಗಳೇ ಮೊದಲಾದ ತನ್ನ ಭಕ್ತರಿಗೆ ಮಾತ್ರವೇ ಉತ್ತಮವಾದ ವೈಕುಂಠಸ್ಥಾನವನ್ನು ಕೊಟ್ಟನು.

ವಿ.—ಲಲಿತಂ ಚ ತತ್ ಬಾಲ್ಯಂ ಚ, ಲಲಿತಬಾಲ್ಯಂ ಅಸ್ಯ ಅಸ್ತೀತಿ ಲಲಿತಬಾಲ್ಯವಾನ್, ಪ್ರತಿಭಾಯಾಃ ಬಲಂ ತೇನ, ಕೃತಂ ದೈತ್ಯಾನಾಂ ಕೌತುಕಂ ಯೇನ ಸಃ, ಉಪಧಿ=ಕಪಟ, ಕಪಟೋಽಸ್ತ್ರೀ ವ್ಯಾಜದಂಭೋಪಧಯಶ್ಛದ್ಮ-

Rarest Archiver

ಕೈತವೇ—ಆಮೆರ. ಇಂದ್ರಸ್ಯ ಶಾತ್ರವಃ, ಬಲಿರಿತಿ ಇಂದ್ರಶಾತ್ರವಃ, ಅಧಃಕೃತಃ ಬಲೀಂದ್ರಶಾತ್ರವಃ ಯೇನ ಸಃ, (ಇಂದ್ರಸ್ಯ ಶಾತ್ರವಾಃ, ಬಲಿನಶ್ಚ ತೇ ಇಂದ್ರ-ಶಾತ್ರವಾಶ್ಚ, ಅಧಃಕೃತಾಃ ಬಲೀಂದ್ರಶಾತ್ರವಾಃ ಯೇನ ಸಃ), ಸ್ವಸ್ಯ ಜನಃ ಸ್ವಜನಃ ತಸ್ಮೈ.

ಕಿ.—ಅದಾತ್ ಸರ್ಗ ೬ ಶ್ಲೋಕ ೩೨ ನೋಡಿರಿ.

ಅವ.—ಪರಶುರಾಮ ಮತ್ತು ವೇದವ್ಯಾಸಾವತಾರಗಳೆರಡನ್ನೂ ವರ್ಣಿಸು ತ್ತಾರೆ—

ಕಥೆಯೆಂತ್ಯಮುಂ ಪರಶುಭಾಸಮಾನಗೋ
ಹತಮರ್ತ್ಯದೇವತಮಸಂ ಮುಹುರ್ಮುಹುಃ ।
ಜಗತಾಂ ಹಿತಂ ಹರಿಮಿಮಾಪರಂ ಹರಿಂ
ಗುರುಶಕ್ತಿತಾಪಸವರಾನ್ವಯೋದ್ಭವಮ್ ॥೧೮॥

ಅ.ಅ—**ಪರಶುರಾಮ**—ಮುಹುಃ ಮುಹುಃ = ಬಾರಿಬಾರಿಗೂ (೨೧ ಸಲ) ಪರಶು = ಕೊಡಲಿಯಲ್ಲಿ, ಭಾಸಮಾನ = ಪ್ರಕಾಶಿಸುವ, ಗೋ = ತೇಜಸ್ಸಿನಿಂದ, ಹತ = ನಾಶಗೊಳಿಸಲ್ಪಟ್ಟ, ಮರ್ತ್ಯದೇವ = ಕ್ಷತ್ರಿಯರೆಂಬ, ತಮಸಂ = ಕತ್ತಲೆಯುಳ್ಳ, ಜಗತಾಂ = ಲೋಕಗಳಿಗೆ, ಹಿತಂ = ಅನುಕೂಲನಾದ, ಗುರುಶಕ್ತಿ = ಹೆಚ್ಚಾದ ಸಾಮರ್ಥ್ಯವುಳ್ಳ, ತಾಪಸವರ = ಮುನಿಶ್ರೇಷ್ಠನಾದ ಭೃಗುವಿನ, ಅನ್ವಯೋದ್ಭವಂ = ವಂಶದಲ್ಲಿ ಹುಟ್ಟಿದ, ಪರಶುರಾಮನಾದ, ಅಮುಂ ಹರಿಂ = ಈ ನಾರಾಯಣನನ್ನು,

ವೇದವ್ಯಾಸ—ಮುಹುಃ ಮುಹುಃ-ಮತ್ತೂ ಮತ್ತೂ, ಪರ = ಉತ್ತಮವಾದ, ಶುಭ = ಮಂಗಳಕರವಾದ, ಅಸಮಾನ = ಎಣೆಯಿಲ್ಲದ, ಗೋ = ಮಾತುಗಳಿಂದ, ಹತ = ನಿವಾರಿಸಲ್ಪಟ್ಟ, ಮರ್ತ್ಯ = ಮನುಷ್ಯರು, ದೇವ = ದೇವತೆಗಳೂ ಇವರ, ತಮಸಂ = ಅಜ್ಞಾನವುಳ್ಳ, ಜಗತಾಂ = ಲೋಕಗಳಿಗೆ, ಹಿತಂ = ಹಿತಕರನಾದ, ಗುರು = ಋಷಿಗಳಿಗೆ ಗುರುವಾದ, ಶಕ್ತಿ = ಶಕ್ತಿಯೆಂಬ, ತಾಪಸ-ವರ = ಮುನಿಶ್ರೇಷ್ಠರ, ಅನ್ವಯೋದ್ಭವಂ = ವಂಶದಲ್ಲಿ ಅವತಾರವುಳ್ಳ, ಅಪರಂ ಹರಿಂ ಇವ = ಬೇರೆಯಾದ ವೇದವ್ಯಾಸರಂತೆ ಇರುವವನನ್ನಾಗಿಯೂ, ಪರ-ಶುಭ-

Rarest Archiver

ಅಸಮಾನ=ಉತ್ತಮವಾದ ಮಂಗಳಕರವಾದ ಎಣೆಯಿಲ್ಲದ, ಗೋ = ಕಿರಣ ಗಳಿಂದ, ಹತ=ನಿವಾರಿಸಲ್ಪಟ್ಟ, ಮರ್ತ್ಯದೇವತಮಸಂ = ಮನುಷ್ಯ ಮತ್ತು ದೇವತೆಗಳ ಕತ್ತಲೆಯುಳ್ಳ, ಜಗತಾಂ ಹಿತಂ=ಪ್ರಪಂಚಕ್ಕೆ ಹಿತಕರನಾದ, ಗುರು ಶಕ್ತಿ=ಹೆಚ್ಚಾದ ಸಾಮರ್ಥ್ಯವುಳ್ಳ, ತಾಪಸವರ=ಮುನಿಶ್ರೇಷ್ಠರಾದ ಕಶ್ಯಪರ, ಅನ್ವಯೋದ್ಭವಂ = ವಂಶದಲ್ಲಿ ಜನಿಸಿದ, ಅಪರಂ ಹರಿಂ ಇವ=ಬೇರೆಯಾದ ಸೂರ್ಯನಂತೆ ಇರುವವನನ್ನಾಗಿಯೂ, ಕಥಯಂತಿ=ಹೇಳುತ್ತಾರೆ.

ತಾ.—ಪರಶುರಾಮಾವತಾರ—ಈ ನಾರಾಯಣನು ಜಗತ್ತಿಗೆ ಹಿತ ವನ್ನುಂಟುಮಾಡುವವನಾಗಿ, ಕೊಡಲಿಯ ಕಂಗೊಳಿಸುವ ಪ್ರಭೆಯಿಂದ ಕ್ಷತ್ರಿಯ ರೆಂಬ ಕತ್ತಲೆಯನ್ನು ನಾಶಗೊಳಿಸಿದನು. ಮಹತ್ತಾದ ಶಕ್ತಿಯುಳ್ಳ ಭೃಗುವಂಶದ ಜಮದಗ್ನಿಮಹರ್ಷಿಗಳ ಮಗನಾಗಿ ಅವತರಿಸಿದ ಮತ್ತೊಬ್ಬ ವೇದವ್ಯಾಸ ಮುನಿಯೋ ಎಂಬಂತಿರುವ ಈ ನಾರಾಯಣನನ್ನೇ ಪರಶುರಾಮನನ್ನಾಗಿ ಹೇಳುತ್ತಾರೆ.

ವೇದವ್ಯಾಸಾವತಾರ—ವೇದವ್ಯಾಸಮುನಿಯು ಹೇಗಿರತಕ್ಕವನೆಂದರೆ ಜಗತ್ತಿಗೆ ಹಿತಕರನಾಗಿ, ಮಹರ್ಷಿಗಳಿಗೆ ಗುರುವಾದ ಶಕ್ತಿಮುನಿಯ ಉತ್ತಮ ವಾದ ವಂಶದಲ್ಲಿ ಅವತರಿಸಿದವನು. ಉತ್ತಮವಾದ ಮಂಗಳಕರವಾದ ಅಸದೃಶ ವಾದ ತನ್ನ ವೇದಪುರಾಣಬ್ರಹ್ಮಸೂತ್ರಾದಿವಚನಗಳಿಂದ ದೇವತೆಗಳ ಮತ್ತು ಮನುಷ್ಯರ ಅಜ್ಞಾನವನ್ನು ಅಪಹರಿಸಿದವನು.

ಮತ್ತು ಈ ಪರಶುರಾಮ ಮತ್ತು ವೇದವ್ಯಾಸರನ್ನು ಸೂರ್ಯನಿಗೆ ಸಮಾನರೆಂದೂ ಹೇಳುತ್ತಾರೆ-ಸೂರ್ಯನು ಮಹತ್ತಾದಶಕ್ತಿಯುಳ್ಳ ಕಶ್ಯಪರೆಂಬ ಮುನಿಶ್ರೇಷ್ಠರ ವಂಶದಲ್ಲಿ ಹುಟ್ಟಿದವನು. ಪ್ರಪಂಚಕ್ಕೆ ಹಿತಕರನು. ಉತ್ಕೃಷ್ಟ ವಾದ, ಶೋಭಾಯಮಾನವಾದ ಎಣೆಯಿಲ್ಲದ ತನ್ನ ಕಿರಣಗಳಿಂದ ದೇವತೆಗಳ ಮತ್ತು ಮನುಷ್ಯರ ಕತ್ತಲೆಯನ್ನು, ನಿವಾರಿಸಿದವನು. ಸೂರ್ಯನು ಕತ್ತಲೆ ಯನ್ನು ನಿವಾರಿಸಿ ಪ್ರಕಾಶಗೊಳಿಸಿ ಸರ್ವರಿಗೂ ಹಿತಕರನಾಗಿರುವಂತೆ, ಶ್ರೀ ನಾರಾಯಣನು ಪರಶುರಾಮನಾಗಿ ಇಪ್ಪತ್ತೊಂದು ಬಾರಿ ದುಷ್ಟಕ್ಷತ್ರಿಯರನ್ನು ಕೊಂದು ಸಜ್ಜನರನ್ನು ಸಂತೋಷಪಡಿಸಿದನು. ವೇದವ್ಯಾಸನಾಗಿ ಅಜ್ಞಾನ ವನ್ನು ಕಳೆದು ಸುಜ್ಞಾನವನ್ನು ಕೊಟ್ಟನು ಎಂದು ಭಾವ.

Rarest Archiver

ವಿ.—ಪರಶುರಾಮ—ಪರಶೌ ಭಾಸಮಾನಾಃ ಗಾವಃ ಪರಶುಭಾಸಮಾನಗಾವಃ, ಮರ್ತ್ಯಾನಾಂ ದೇವಾಃ, ಮರ್ತ್ಯದೇವಾ ಏವ ತಮಾಂಸಿ, ಪರಶುಭಾಸಮಾನಗೋಭಿಃ ಹತಾನಿ ಮರ್ತ್ಯದೇವತಮಾಂಸಿ ಯೇನ ಸಃ ತಂ, ಗುರುಃ ಶಕ್ತಿಃ ಯಸ್ಯ, ತಾಪಸೇಷು ವರಃ, ಗುರುಶಕ್ತಿಶ್ಚಾಸೌ ತಾಪಸವರಶ್ಚ ಗುರುಶಕ್ತಿ-ತಾಪಸವರಸ್ಯ ಅನ್ವಯೇ ಉದ್ಭವಃ ಯಸ್ಯ ತಂ,

ವೇದವ್ಯಾಸ—ಪರಾಶ್ಚ ತಾಃ ಶುಭಾಶ್ಚ ತಾಃ ಅಸಮಾನಾಶ್ಚ ತಾಃ ಗಾವಶ್ಚ, ಪರಶುಭಾಸಮಾನಗೋಭಿಃ ಹತಾನಿ ಮರ್ತ್ಯಾನಾಂ ದೇವಾನಾಂ ಚ ತಮಾಂಸಿ ಯೇನ ತಂ, ಗುರುಶ್ಚಾಸೌ ಶಕ್ತಿಶ್ಚ, ಗುರುಶಕ್ತಿಶ್ಚಾಸೌ ತಾಪಸೇಷು ವರಶ್ಚ ತಸ್ಯ ಅನ್ವಯೇ ಉದ್ಭವಃ ಯಸ್ಯ ತಂ; ಹರಿಶಬ್ದಕ್ಕೆ ಸೂರ್ಯ ಎಂಬ ಅರ್ಥವೂ ಇದೆ. ತಾಪಸವರ ಎಂದರೆ ಭೃಗು, ಶಕ್ತಿ, ಕಶ್ಯಪಮುಷಿಗಳು.

ಕ್ರಿ.—ಕಥಯಂತಿ, ಕಥಯತಿ ಕಥಯತಃ ಕಥಯಂತಿ ಇತ್ಯಾದಿ. ಕಥ ವಾಕ್ಯಪ್ರಬಂಧೇ, ಸಕ.। ಸೇಟ್.। ಉಭ.। to tell. ಲಿಟ್.

ಅವ.—ಶ್ರೀರಾಮಾವತಾರ ಕೃಷ್ಣಾವತಾರಗಳೆರಡನ್ನು ವರ್ಣಿಸುತ್ತಾರೆ—(ಇಲ್ಲಿಂದ ೧೬ಶ್ಲೋಕಗಳಿಂದ ರಾಮ ಮತ್ತು ಕೃಷ್ಣರ ಅವತಾರಗಳನ್ನು ವರ್ಣಿಸುತ್ತಾರೆ.)

ಕರುಣಾಕರಃ ಸವಸುದೇವಮೋದದೋ
ಭಗವಾನ್ ಪುರಾಹಿಮಕರಾನ್ವಯೇಽಭವತ್।
ಜಿತವಾನ್ ದಿಶೋ ದಶರಥೋಽಗ್ರ್ಯಸಂಪದೋ
ಜನಕೋ ಬಭೂವ ಭುವಿ ಯಸ್ಯ ವೈರಿಹಾ ॥೧೯॥

ಅ.ಅ.—ರಾಮ—ಸವಸು-ದೇವಮೋದದಃ=ವಸುಗಳಿಂದ ಸಹಿತರಾದ ದೇವತೆಗಳಿಗೆ ಸಂತೋಷವನ್ನುಂಟುಮಾಡುವ, ಅಥವಾ ವಂಶದ ಮೂಲಪುರುಷನಾದ ಸೂರ್ಯನಿಗೆ ಸಂತೋಷಪ್ರದನಾದ, ಅಥವಾ ವಿಶ್ವಾಮಿತ್ರಾದಿಬ್ರಾಹ್ಮಣರಿಗೆ ಸಂತೋಷಕರನಾದ, ಕರುಣಾಕರಃ = ದಯಾಳುವಾದ, ಭಗವಾನ್ = ಪೂಜ್ಯನಾದ ಶ್ರೀನಾರಾಯಣನು, ಪುರಾ = ಹಿಂದೆ ತ್ರೇತಾಯುಗದಲ್ಲಿ, ಭುವಿ = ಭೂಮಿಯಲ್ಲಿ, ಅಹಿಮಕರಾನ್ವಯೇ = ಸೂರ್ಯವಂಶದಲ್ಲಿ, ಅಭವತ್ = ರಾಮ

Rarest Archiver

ನಾಗಿ ಹುಟ್ಟಿದನು, ಯಸ್ಯ = ಯಾವ ರಾಮನಿಗೆ, ಅಗ್ರ್ಯಸಂಪದಃ = ಉತ್ತಮ ಐಶ್ವರ್ಯವುಳ್ಳ, ದಿಶಃ=ದಿಕ್ಕುಗಳನ್ನು, ಜಿತವಾನ್=ಜಯಿಸಿದ, ವೈರಿಹಾ = ಶತ್ರು ನಾಶಕನಾದ, ದಶರಥಃ ಜನಕಃ ಬಭೂವ = ದಶರಥನು ತಂದೆಯಾದನು.

ಕೃಷ್ಣ—ಕರುಣಾಕರಃ ಭಗವಾನ್ ಸಃ = ದಯಾಳುವೂ, ಪೂಜ್ಯನೂ ಆದ ಆ ನಾರಾಯಣನು, ವಸುದೇವಮೋದದಃ = ವಸುದೇವನಿಗೆ ಸಂತೋಷ ವನ್ನುಂಟುಮಾಡುವವನಾಗಿ, ಪುರಾ = ಹಿಂದೆ, ದ್ವಾಪರದ ಕೊನೆಯಲ್ಲಿ, ಭುವಿ ಹಿಮಕರಾನ್ವಯೇ = ಭೂಮಿಯಲ್ಲಿ, ಚಂದ್ರವಂಶದಲ್ಲಿ, ಅಭವತ್ = ಕೃಷ್ಣನಾಗಿ ಅವತರಿಸಿದನು, ಯಸ್ಯ=ಯಾವ ಕೃಷ್ಣನಿಗೆ, ದಶದಿಶಃ = ಹತ್ತು ದಿಕ್ಕುಗಳನ್ನು, ಜಿತವಾನ್ = ಜಯಿಸಿದ, ವೈರಿಹಾ ರಥಃ = ಶತ್ರುಸಂಹಾರಕನಾದ ರಥವು, ಅಗ್ರ್ಯಸಂಪದಃ = ಶ್ರೇಷ್ಠವಾದ ಸಂಪತ್ತಿಗೆ, ಜನಕಃ ಬಭೂವ=ಉತ್ಪಾದಕವಾಗಿ ಆಯಿತು.

ತಾ.—**ರಾಮಾವತಾರ**—ದಯಾಳುವಾದ ಈ ನಾರಾಯಣನು ಹಿಂದೆ ತ್ರೇತಾಯುಗದಲ್ಲಿ ಸೂರ್ಯವಂಶದಲ್ಲಿ ಶ್ರೀರಾಮನಾಗಿ ಅವತರಿಸಿದನು. ಆದರಿಂದ ಅಷ್ಟವಸುಗಳಿಗೂ, ದೇವತೆಗಳಿಗೂ, ಕಿರಣಭರಿತನಾದ ವಂಶಮೂಲಪುರುಷ ನಾದ ಸೂರ್ಯನಿಗೂ, ವಿಶ್ವಾಮಿತ್ರಾದಿಬ್ರಾಹ್ಮಣೋತ್ತಮರಿಗೂ ಆನಂದ ವುಂಟಾಯಿತು. ಉತ್ತಮಸಂಪದ್‌ಭರಿತವಾದ ಹತ್ತುದಿಕ್ಕುಗಳನ್ನೂ ಜಯಿಸಿದ ಶತ್ರುಸಂಹಾರಕನಾದ ದಶರಥಮಹಾರಾಜನು ಈ ಶ್ರೀರಾಮನಿಗೆ ತಂದೆಯಾಗಿ ದ್ದನು.

ಶ್ರೀಕೃಷ್ಣಾವತಾರ—ದಯಾಳುವಾದ ಈ ನಾರಾಯಣನು ಹಿಂದೆ ದ್ವಾಪರಯುಗದ ಕೊನೆಯಲ್ಲಿ ವಸುದೇವನಿಗೆ ಆನಂದವನ್ನುಂಟುಮಾಡುತ್ತಾ ಚಂದ್ರವಂಶದಲ್ಲಿ ಶ್ರೀಕೃಷ್ಣನಾಗಿ ಅವತರಿಸಿದನು. ಅವನ ರಥವು ಶತ್ರುಗಳನ್ನು ನಿವಾರಿಸಿ ಹತ್ತು ದಿಕ್ಕುಗಳನ್ನೂ ಜಯಿಸಿ ಶ್ರೇಷ್ಠವಾದ ಸಂಪತ್ತನ್ನು ಗಳಿಸಿ ಕೊಟ್ಟಿತು. ನಾರಾಯಣನು ವಸುದೇವಪುತ್ರ ಶ್ರೀಕೃಷ್ಣನಾಗಿ ಅವತರಿಸಿ ಜಯ ಶೀಲವಾದ ರಥವನ್ನೇರಿ ಹತ್ತುದಿಕ್ಕುಗಳ ವೈರಿಗಳನ್ನೂ ಗೆದ್ದು, ಅವರ ಸಂಪತ್ತು ಗಳನ್ನು ತಂದನು ಎಂದು ಭಾವ.

Rarest Archiver

ವಿ.—ರಾಮ—ಕರುಣಾಯಾಃ ಆಕರಃ, ವಸುಭಿಃ ಸಹಿತಾಃ, ಸವಸವಶ್ಚ ತೇ ದೇವಾಶ್ಚ, ಸವಸುದೇವಾನಾಂ ಮೋದಂ ದದಾತೀತಿ ಸವಸುದೇವಮೋದದಃ, ನ ಹಿಮಾಃ ಅಹಿಮಾಃ, ಅಹಿಮಾಃ ಕರಾಃ ಯಸ್ಯ, ಅಹಿಮಕರಸ್ಯ ಅನ್ವಯಃ ತಸ್ಮಿನ್, ಅಗ್ರ್ಯಾಃ ಸಂಪದಃ ಯಾಸು ತಾಃ, ತಾಃ; ವೈರಿಣಃ ಹಂತೀತಿ ವೈರಿಹಾ ;

ಕೃಷ್ಣ—ವಸುದೇವಸ್ಯ ಮೋದಂ ದದಾತೀತಿ, ಹಿಮಾಃ ಕರಾಃ ಯಸ್ಯ, ಹಿಮಕರಸ್ಯ ಅನ್ವಯಃ ತಸ್ಮಿನ್, ಅಗ್ರ್ಯಾ ಚ ಸಾ ಸಂಪಚ್ಚ ಅಗ್ರ್ಯಸಂಪತ್ ತಸ್ಯಾಃ, 'ನ ಕೇಶವರಥೇ ಕಶ್ಚಿತ್ ಸ್ಥಿತೋ ಯಾತಿ ಪರಾಭವಂ' ಎಂಬ ವಚನ ದಂತೆ ಕೃಷ್ಣನ ರಥದಲ್ಲಿ ಕುಳಿತರೆ ಎಂದೂ ಸೋಲಿಲ್ಲ. ವಸು = ಕಿರಣ, ಅಗ್ನಿ, ಧನ, ಸವಸುಃ = ಭೂಮಿ, ಭೂಮಿಯ ದೇವತೆಗಳು, ಸವಸುದೇವಃ = ವಿಶ್ವಾಮಿತ್ರಾದಿಗಳು, ಸವಸುಃ = ಕಿರಣಸಹಿತನಾದ, ದೇವಃ = ಸೂರ್ಯ.

ಕ್ರಿ.—ಬಭೂವ ಸರ್ಗ ೫ ಶ್ಲೋಕ ೨ ನೋಡಿರಿ. ಅಭವತ್ ಅಭವತಾಂ ಅಭವನ್, ಅಭವಃ ಅಭವತಂ ಅಭವತ, ಅಭವಂ ಅಭವಾವ ಅಭವಾಮ ; ಭೂ ಸತ್ತಾಯಾಂ, to become, to be ಅಕ.। ಪರ.। ಸೇಟ್.। ಲಙ್.

ಅವ.—ಮತ್ತೂ ಆ ರಾಮಾವತಾರಕೃಷ್ಣಾವತಾರಗಳನ್ನು ವರ್ಣಿಸುತ್ತಾರೆ—

ಭುಜಗೇಶ್ವರೋಽಪಿ ಭುವನೇಶ್ವರಪ್ರಿಯಃ
ಸಮಜನ್ಯಥಾರಿದರಜನ್ಮ ಭುವ್ಯಭೂತ್ ।
ತಮಮುಷ್ಯಕಾಂತಿವಿಜಿತೇಂದುಮಗ್ರಜಂ
ರಮಣೀಯಮಾಹುರಿಹ ರಾಮನಾಮಕಂ ॥೨೦॥

ಅ. ಅ—ರಾಮ—ಭುವನೇಶ್ವರಪ್ರಿಯಃ = ಲೋಕಸ್ವಾಮಿಯಾದ ಶ್ರೀ ನಾರಾಯಣನಿಗೆ ಇಷ್ಟನಾದ, ಭುಜಗೇಶ್ವರಃ ಅಪಿ = ಮಹಾಶೇಷನೂ, ಭುವಿ = ಭೂಮಿಯಲ್ಲಿ, ಸಮಜನಿ = ಲಕ್ಷ್ಮಣನಾಗಿ ಹುಟ್ಟಿದನು. ಅಥ = ತರುವಾಯ, ಅರಿ = ಚಕ್ರ, ದರ = ಶಂಖ, ಇವುಗಳ, ಜನ್ಮ = ಉತ್ಪತ್ತಿಯು, ಅಭೂತ್ = ಆಯಿತು ; ಇಹ = ಈ ನಾಲ್ವರಲ್ಲಿ, ಅಮುಷ್ಯ = ಈ ಲಕ್ಷ್ಮಣನ, ಅಗ್ರಜಂ =

Rarest Archiver

ಅಣ್ಣನಾದ, ಕಾಂತಿವಿಜಿತೇಂದುಂ=ತೇಜಸ್ಸಿನಿಂದ ಜಯಿಸಲ್ಪಟ್ಟ ಚಂದ್ರನುಳ್ಳ, ರಮಣೀಯಂ=ಸುಂದರನಾದ, ತಂ=ಆ ದಶರಥನ ಮಗನನ್ನು, ರಾಮನಾಮಕಂ =ರಾಮನೆಂಬ ಹೆಸರುಳ್ಳವನನ್ನಾಗಿ, ಆಹುಃ=ಹೇಳುತ್ತಾರೆ.

ಕೃಷ್ಣ—ಭುವನೇಶ್ವರಪ್ರಿಯಃ ಭುಜಗೇಶ್ವರೋಽಪಿ = ಲೋಕಾಧಿಪತಿಯಾದ ಶ್ರೀಹರಿಗೆ ಇಷ್ಟನಾದ ಶೇಷನೂ, ಭುವಿ ಸಮಜನಿ = ಭೂಮಿಯಲ್ಲಿ ಬಲರಾಮನಾಗಿ ಹುಟ್ಟಿದನು ; ಅಥ = ಅನಂತರ, ಅರಿದರಜನ್ಮ ಅಭೂತ್ = ಶತ್ರುಗಳಿಗೆ ಭಯದ ಉತ್ಪತ್ತಿಯಾಯಿತು. ಕಾಂತಿವಿಜಿತೇಂದುಂ=ತೇಜಸ್ಸಿನಿಂದ ಚಂದ್ರನನ್ನು ಜಯಿಸಿದ, ರಮಣೀಯಂ = ಸುಂದರನಾದ, ಅಮುಷ್ಯ ಅಗ್ರಜಂ ತಂ=ಈ ಶ್ರೀಕೃಷ್ಣನ ಅಣ್ಣನಾದ ಬಲಭದ್ರನನ್ನು, ಇಹ = ಈ ಲೋಕದಲ್ಲಿ, ರಾಮನಾಮಕಂ = ಬಲರಾಮನೆಂದು ಹೆಸರುಳ್ಳವನನ್ನಾಗಿ, ಆಹುಃ=ಹೇಳುತ್ತಾರೆ.

ರಾಮಾವತಾರ—ಲೋಕಸ್ವಾಮಿಯಾದ ಶ್ರೀನಾರಾಯಣನಿಗೆ ಪ್ರೀತಿಪಾತ್ರನಾದ ಸರ್ಪಾಧಿಪತಿಯಾದ ಶೇಷದೇವರು ಲಕ್ಷ್ಮಣನಾಗಿ ಭೂಮಿಯಲ್ಲಿ ಅವತರಿಸಿದರು. ಅನಂತರ ಸುದರ್ಶನಚಕ್ರಾಭಿಮಾನಿಯಾದ ಕಾಮದೇವನು ಭರತನಾಗಿಯೂ, ಪಾಂಚಜನ್ಯಶಂಖಾಭಿಮಾನಿಮನ್ಮಥಪುತ್ರನಾದ ಅನಿರುದ್ಧನು ಶತ್ರುಘ್ನನಾಗಿಯೂ ಅವತರಿಸಿದರು. ಈ ನಾಲ್ವರಲ್ಲಿ ಲಕ್ಷ್ಮಣನ ಅಣ್ಣನನ್ನು ತನ್ನ ದೇಹಕಾಂತಿಯಿಂದ ಚಂದ್ರನಿಗಿಂತಲೂ ಅತಿಶಯಸುಂದರನಾದ ಶ್ರೀರಾಮನೆಂಬುದಾಗಿ ಹೇಳುತ್ತಾರೆ. ರಾಮಾವತಾರವಾದ ಮೇಲೆ ಲಕ್ಷ್ಮಣಭರತಶತ್ರುಘ್ನರಾಗಿ ಶೇಷ ಕಾಮ ಅನಿರುದ್ಧರು ಅವತರಿಸಿದರು ಎಂದು ಭಾವ.

ಕೃಷ್ಣಾವತಾರ—ಜಗತ್ಪತಿಯಾದ ಶ್ರೀಹರಿಗೆ ಇಷ್ಟನಾದ ಶೇಷನೂ ಕೂಡ ಬಲರಾಮನಾಗಿ ಭೂಮಿಯಲ್ಲಿ ಅವತರಿಸಿದನು. ಆಗ ವಿಷ್ಣುದ್ವೇಷಿಗಳಿಗೆ ಈ ಭೂಮಿಯಲ್ಲಿ ಭಯವುಂಟಾಯಿತು. ಶ್ರೀಕೃಷ್ಣನ ಅಣ್ಣನನ್ನು ದೇಹಕಾಂತಿಯಿಂದ ಚಂದ್ರನನ್ನು ಗೆದ್ದಿರುವ ಸುಂದರನಾದ ಬಲರಾಮನೆಂಬುದಾಗಿ ಹೇಳುತ್ತಾರೆ. ೧೯ನೆಯ ಶ್ಲೋಕದಲ್ಲಿ ಕೃಷ್ಣಾವತಾರವನ್ನು ಹೇಳಿ ಈ ಶ್ಲೋಕದಲ್ಲಿ ಬಲರಾಮಾವತಾರ ಹೇಳಿದ್ದರಿಂದ ಕೃಷ್ಣಾವತಾರದ ಅನಂತರ ಬಲರಾಮಾವತಾರವೆಂಬ ಭ್ರಾಂತಿಯನ್ನು ಪರಿಹರಿಸಲು ಕೃಷ್ಣನಿಗೆ ಅಣ್ಣನು ಬಲರಾಮನೆಂದು

Rarest Archiver

ಹೇಳಿರುತ್ತಾರೆ. ಬಲರಾಮನು ಬಿಳಿಯಾದುದರಿಂದ ಚಂದ್ರನನ್ನು ಜಯಿಸಿರುವ ನೆಂದು ಹೇಳಿರುತ್ತಾರೆ.

ವಿ.—ಭುಜಗಾನಾಂ ಈಶ್ವರಃ, ಭುವನಾನಾಂ ಈಶ್ವರಸ್ಯ ಪ್ರಿಯಃ, ಅರಿಶ್ಚ ದರಶ್ಚ, ಅರಿದರಯೋಃ ಜನ್ಮ, ಕಾಂತ್ಯಾ ವಿಜಿತಃ ಇಂದುಃ ಯೇನ ಸಃ, ತಂ, ರಾಮ ಇತಿ ನಾಮ ಯಸ್ಯ ಸಃ ತಂ; (ಕೃಷ್ಣಪಕ್ಷದಲ್ಲಿ) ಅರೀಣಾಂ ದರಸ್ಯ ಜನ್ಮ ಅರಿದರಜನ್ಮ.

ಕ್ರಿ.—ಸಮ್ + ಅಜನಿ, ಅಜನಿಷ್ಟ ಅಜನಿಷಾತಾಂ ಅಜನಿಷತ, ಅಜನಿಷ್ಠಾಃ ಅಜನಿಷಾಥಾಂ ಅಜನಿಢ್ವಂ, ಅಜನಿಷಿ ಅಜನಿಷ್ವಹಿ ಅಜನಿಷ್ಮಹಿ; ಜನೀ ಪ್ರಾದುರ್ಭಾವೇ। ಅಕ.। ಸೇಟ್.। ಆತ್ಮ.। to be born. ಲುಙ್. ಆಹುಃ ಸರ್ಗ ೬ ಶ್ಲೋಕ ೪೦ ನೋಡಿರಿ. ಅಭೂತ್ ಸರ್ಗ ೬ ಶ್ಲೋಕ ೨೧ ನೋಡಿರಿ.

ಅವ.—ರಾಮಾವತಾರ ಕೃಷ್ಣಾವತಾರ ಕಥೆಗಳನ್ನೇ ವರ್ಣಿಸುತ್ತಾರೆ—

ಜನಕೇನ ಸೋಽಥ ವಿರಹಾಸಹಿಷ್ಣುನಾ
ಮುಹುರೀಕ್ಷಿತೋ ವನಮನೀಯತ ಪ್ರಭುಃ।
ಚಕಿತೇನ ದುಷ್ಟಜನತಸ್ತಪಸ್ವಿನಾ
ತತ ಆಸುರೀಂ ನಿಶಿಚರೀಂ ಜಘಾನ ಸಃ ॥೨೧॥

ಅ.ಅ—ರಾಮ— ಅಥ = ಬಳಿಕ, ವಿರಹಾಸಹಿಷ್ಣುನಾ = ಮಗನ ಅಗಲಿಕೆಯನ್ನು ಸಹಿಸದಿರುವ, ಜನಕೇನ = ತಂದೆಯಾದ ದಶರಥನಿಂದ, ಮುಹುಃ ಈಕ್ಷಿತಃ = ಪುನಃ ಪುನಃ ನೋಡಲ್ಪಟ್ಟ, ಪ್ರಭುಃ = ಸಮರ್ಥನಾದ, ಸಃ = ಆ ರಾಮನು, ದುಷ್ಟಜನತಃ = ಕೆಟ್ಟವರಾದ ಸುಬಾಹುಮಾರೀಚಾದಿ ರಾಕ್ಷಸರಿಂದ, ಚಕಿತೇನ = ಹೆದರಿದ, ತಪಸ್ವಿನಾ = ವಿಶ್ವಾಮಿತ್ರಮುನಿಯಿಂದ, ವನಂ = ಕಾಡಿಗೆ, ಅನೀಯತ = ಒಯ್ಯಲ್ಪಟ್ಟನು, ತತಃ = ಅನಂತರ, ಸಃ = ಆ ರಾಮನು, ಆಸುರೀಂ ನಿಶಿಚರೀಂ = ಅಸುರವಂಶದಲ್ಲಿ ಹುಟ್ಟಿದ ತಾಟಕೆ ಯನ್ನು, ಜಘಾನ = ಕೊಂದನು.

Rarest Archiver

ಕೃಷ್ಣೆ—ಅಥ ವಿರಹಾಸಹಿಷ್ಣುನಾ = ಅನಂತರ ಮಗನ ವಿರಹವನ್ನು ಸಹಿಸದಿರುವ, ಜನಕೇನ = ತಂದೆ ವಸುದೇವನಿಂದ, ಮುಹುಃ ಈಕ್ಷಿತಃ = ಬಾರಿ ಬಾರಿಗೂ ನೋಡಲ್ಪಟ್ಟ, ಪ್ರಭುಃ ಸಃ = ಸಮರ್ಥನಾದ ಆ ಕೃಷ್ಣನು, ದುಷ್ಟ-ಜನತಃ ಚಕಿತೇನ = ದುಷ್ಟನಾದ ಕಂಸನಿಂದ ಹೆದರಿದ, ತಪಸ್ವಿನಾ = ಶೋಚ-ನೀಯನಾದ ಅಥವಾ ಭಗವಂತನ ಧ್ಯಾನನಿರತನಾದ ವಸುದೇವನಿಂದ, ವನಂ = ನಂದಗೋಪನ ವಾಸಸ್ಥಾನವಾದ ಗೋಕುಲಕ್ಕೆ (ಬೃಹದ್ವನಕ್ಕೆ), ಅನೀಯತ = ಒಯ್ಯಲ್ಪಟ್ಟನು, ತತಃ = ಅನಂತರ, ಸಃ = ಆ ಕೃಷ್ಣನು, ಆಸುರೀಂ = ರಾಕ್ಷಸಿಯಾದ, ನಿಶಿಚರೀಂ = ಪೂತನೆಯನ್ನು, ಜಘಾನ = ಕೊಂದನು.

ತಾ.— ರಾಮಾವತಾರ— ಕೆಲವು ವರ್ಷಗಳ ನಂತರ ವಿಶ್ವಾಮಿತ್ರ ಮಹರ್ಷಿಯು ದುಷ್ಟರಾದ ಸುಬಾಹುಮಾರೀಚಾದಿಗಳಿಂದ ಹೆದರಿ ತನ್ನ ಯಜ್ಞ ರಕ್ಷಣೆಗಾಗಿ ತಮ್ಮ ಲಕ್ಷ್ಮಣನಿಂದ ಸಹಿತನಾದ ಶ್ರೀರಾಮನನ್ನು ತನ್ನ ತಪೋ-ವನಕ್ಕೆ ಕರೆದುಕೊಂಡು ಹೋದನು. ಆಗ ಮಗನ ಅಗಲಿಕೆಯಿಂದ ದಶರಥನು ವ್ಯಸನಹೊಂದಿ ರಾಮನನ್ನು ಮತ್ತೂ ಮತ್ತೂ ನೋಡುತ್ತಿದ್ದನು. ರಾಮನು ದಾರಿಯಲ್ಲಿ ಅರಣ್ಯದಲ್ಲಿ ತಮ್ಮನ್ನು ತಡೆದ ತಾಟಕೆಯನ್ನು ಕೊಂದನು. ಯಜ್ಞ ರಕ್ಷಣೆಗಾಗಿ ವಿಶ್ವಾಮಿತ್ರರು ರಾಮನನ್ನು ಕಳುಹಿಸಬೇಕೆಂದಾಗ ದಶರಥನು ಬಹಳ ಕಷ್ಟದಿಂದ ಕಳುಹಿಸಲು ರಾಮನು ಕಾಡಿಗೆ ಹೋಗುತ್ತಾ ದಾರಿಯಲ್ಲಿ ತಾಟಕೆ ಯನ್ನು ಕೊಂದನು ಎಂದು ಭಾವ.

ಕೃಷ್ಣಾವತಾರ— ದುಷ್ಟನಾದ ಕಂಸನಿಂದ ಹೆದರಿ ತಪಸ್ವಿಯಾದ ವಸುದೇವನು ಕೃಷ್ಣನ ವಿರಹವನ್ನು ತಾಳಲಾರದೆ ಮರಳಿ ಮರಳಿ ನೋಡುತ್ತಾ ನಂದಗೋಕುಲದಲ್ಲಿ ಕೃಷ್ಣನನ್ನು ತಂದಿಟ್ಟನು. ಸಮರ್ಥನಾದ ಕೃಷ್ಣನು ಅಲ್ಲಿ ತನ್ನನ್ನು ಕೊಲ್ಲಲು ಬಂದ ಕಂಸನ ದಾದಿಯಾದ ಪೂತನೆಯೆಂಬ ರಾಕ್ಷಸಿಯನ್ನು ಕೊಂದನು. ಅರ್ಧರಾತ್ರಿಯಲ್ಲಿ ಅವತರಿಸಿದ ಶ್ರೀಕೃಷ್ಣನನ್ನು ಕಂಸನಿಂದ ಹೆದರಿ ವಸುದೇವನು ನಂದಗೋಕುಲದಲ್ಲಿ ಗುಟ್ಟಾಗಿಟ್ಟು ಹೋದ ಮೇಲೆ ಕಂಸನ ಪ್ರೇರಣೆಯಿಂದ ವಿಷದ ಮೊಲೆ ಹಾಲನ್ನುಣಿಸಿ ತನ್ನನ್ನು ಕೊಲ್ಲಲು ಬಂದ ಪೂತನೆಯನ್ನು ಕೃಷ್ಣನು ಸಂಹರಿಸಿದನು ಎಂದು ಭಾವ.

Rarest Archiver

ವಿ.—ವಿರಹಸ್ಯ ಅಸಹಿಷ್ಣುಃ ತೇನ, ದುಷ್ಟಶ್ಚಾಸೌ ಜನಶ್ಚ ತಸ್ಮಾತ್ ದುಷ್ಟಜನತಃ, ನಿಶಿಚರತೀತಿ ನಿಶಿಚರೀ ತಾಂ,

ಕ್ರಿ.—ಅನೀಯತ ಅನೀಯೇತಾಂ ಅನೀಯಂತ, ಅನೀಯಥಾಃ ಅನೀಯೇಥಾಂ ಅನೀಯಧ್ವಂ, ಅನೀಯೇ ಅನೀಯಾವಹಿ ಅನೀಯಾಮಹಿ, ಣೀಞ್ ಪ್ರಾಪಣೇ (ನೀ) ದ್ವಿಕ.। ಅನಿ.। ಉಭ.। to lead, to carry. ಕರ್ಮಣಿ ಲಙ್. ಜನಕಃ ತಂ ವನಂ ಅನಯತ್ ; ಜಘಾನ ಜಘ್ನತುಃ ಜಘ್ನುಃ, ಜಘನಿಥ ಜಘಂಥ, ಜಘ್ನಥುಃ ಜಘ್ನ, ಜಘಾನ ಜಘನ ಜಘ್ನಿವ ಜಘ್ನಿಮ. ಹನ ಹಿಂಸಾಗತ್ಯೋಃ to kill, ಸಕ.। ಅನಿ.। ಪರ.। ಲಿಟ್.

ಅವ.—ಸುಬಾಹುಮಾರೀಚನಿಗ್ರಹ-ಕೇಶಿಅರಿಷ್ಟಾಸುರಾದಿ ಸಂಹಾರ—

ಮುನಿಸಪ್ತತಂತುಕೃತವೈರಬಂಧನಂ
ಕಟುಕೇಶ್ಯರಿಷ್ಟಪದಮುಖ್ಯದುರ್ಜನಂ ।
ಕ್ಷಪಯಂತಮುದ್ಯತಸುಬಾಹುಮಾಹವೇ
ತಮಥಾಭ್ಯನಂದದಮರಾದಿಸದ್ಗಣಃ ॥೨೨॥

ಅ.ಅ.—ಅಥ = ಅನಂತರ, ಅಮರಾದಿ = ದೇವತೆಗಳೇ ಮೊದಲಾಗಿ ಉಳ್ಳ, ಸದ್ಗಣಃ = ಸಜ್ಜನರ ಸಮೂಹವು, ಮುನಿ = ವಿಶ್ವಾಮಿತ್ರಮುನಿಯ, ಸಪ್ತತಂತು = ಯಜ್ಞದಲ್ಲಿ, ಕೃತ = ಮಾಡಲ್ಪಟ್ಟ, ವೈರಬಂಧನಂ = ದ್ವೇಷದ ಅನುಸಂಧಾನ ಉಳ್ಳ, ಕಟುಕೇಶಿ = ಒರಟಾದ ಕೂದಲುಳ್ಳ, ಅರಿಷ್ಟಪದ = ಅನಿಷ್ಟಕ್ಕೆ ಆಶ್ರಯನಾದ, ಮುಖ್ಯದುರ್ಜನಂ = ಅತ್ಯಂತ ದುಷ್ಟನಾದ, ಉದ್ಯತ ಸುಬಾಹುಂ = ಯುದ್ಧದಲ್ಲಿ ತೊಡಗಿದ ಸುಬಾಹುವನ್ನು, ಆಹವೇ = ಯುದ್ಧದಲ್ಲಿ, ಕ್ಷಪಯಂತಂ ತಂ=ಸಂಹರಿಸುತ್ತಿರುವ ಆ ರಾಮದೇವರನ್ನು, ಅಭ್ಯನಂದತ್ = ಹೊಗಳಿತು.

ಮತ್ತು ಅಥ = ತರುವಾಯ, ಅಮರಾದಿಸದ್ಗಣಃ = ದೇವತೆಗಳೇ ಮೊದಲಾದ ಸಜ್ಜನರ ಸಮೂಹವು, ಮುನಿಸಪ್ತ = ಜಟೆಯಿಂದ ಕೂಡಿದ ಮುನಿಗಳ, ತಂತು = ಸಂತತಿಯಲ್ಲಿ, ಕೃತ = ಮಾಡಲ್ಪಟ್ಟ, ವೈರಬಂಧನಂ =

Rarest Archiver

ದ್ವೇಷಸಂಬಂಧವುಳ್ಳ, ಕಟು = ಕ್ರೂರರಾದ, ಕೇಶಿ ಅರಿಷ್ಟಪದ = ಕೇಶಿ ಅರಿಷ್ಟ ಎಂಬ ಹೆಸರುಳ್ಳವರೇ, ಮುಖ್ಯ = ಪ್ರಧಾನರಾಗಿ ಉಳ್ಳ, ದುರ್ಜನಂ = ಕೆಟ್ಟ ವರನ್ನು, ಕ್ಷಪಯಂತಂ = ಕೊಲ್ಲುತ್ತಿರುವ, ಆಹವೇ = ಯುದ್ಧದಲ್ಲಿ, ಉದ್ಯತ = ಉದ್ಯುಕ್ತವಾದ, ಸುಬಾಹುಂ = ಒಳ್ಳೆಯ ತೋಳುಗಳುಳ್ಳ, ತಂ = ಆ ಕೃಷ್ಣನನ್ನು, ಅಭ್ಯನಂದತ್ = ಹೊಗಳಿತು.

ತಾ.—ರಾಮಪಕ್ಷ— ತಾಟಕೆಯ ಸಂಹಾರಾನಂತರ ವಿಶ್ವಾಮಿತ್ರರು ತನ್ನ ಆಶ್ರಮದಲ್ಲಿ ಯಜ್ಞವನ್ನು ಆರಂಭಿಸಿದರು. ಆಗ ಒರಟಾದ ತಲೆಕೂದಲು ಗಳಿಂದ ಭಯಂಕರನಾದ ಅಮಂಗಳಸ್ವರೂಪನಾದ ಸುಬಾಹುವು ಯಜ್ಞವನ್ನು ವಿರೋಧಿಸಿ ಅದನ್ನು ಕೆಡಿಸಲು ಉದ್ಯುಕ್ತನಾದನು. ಶ್ರೀರಾಮನು ಸುಬಾಹು ರಾಕ್ಷಸನನ್ನು ಸಂಹರಿಸಿದಾಗ ದೇವತೆಗಳೇ ಮೊದಲಾದ ಎಲ್ಲಾ ಸಜ್ಜನರೂ ಗುಂಪುಗುಂಪಾಗಿ ಸೇರಿ ಶ್ರೀರಾಮನನ್ನು ಅಭಿನಂದಿಸಿದರು. (ಸಂತೋಷಪಟ್ಟು ಹೊಗಳಿದರು.)

ಶ್ರೀಕೃಷ್ಣಪಕ್ಷ— ಪೂತನೆಯ ಸಂಹಾರವಾಯಿತು. ಅನಂತರ ಕೆಲವು ಸಮಯ ಕಳೆದಾಗ ಕೇಶಿ ಮತ್ತು ಅರಿಷ್ಟ ಎಂಬ ಇಬ್ಬರು ಅಸುರರು ಶ್ರೀಕೃಷ್ಣ ನನ್ನು ಕೊಲ್ಲಲು ಬಂದರು. ಅವರು ಜಟಾಧಾರಿಗಳಾಗಿ ತಪಸ್ಸು ಮಾಡುತ್ತಿರುವ ಮುನಿಗಳ ಸಂತಾನವಾಗಿರುವ ಎಳೇಮಕ್ಕಳನ್ನೂ ಕೊಲ್ಲಬೇಕೆಂದು ವೈರವನ್ನು ಸಾಧಿಸುತ್ತಾ ತಿರುಗಾಡುತ್ತಿದ್ದರು. ಶ್ರೀಕೃಷ್ಣನು ಯುದ್ಧಮಾಡಿ ಇವರನ್ನು ಕೊಲ್ಲುವಾಗ ಸುಂದರವಾದ ತೋಳುಗಳನ್ನು ಮೇಲಕ್ಕೆತ್ತಿ ಹೊಡೆಯುತ್ತಿರು ವುದನ್ನು ಕಂಡು ದೇವತೆಗಳೇ ಮೊದಲಾದ ಸಜ್ಜನರು ಅಭಿನಂದಿಸಿದರು. ಕಂಸನ ಪ್ರೇರಣೆಯಿಂದ ಶಕಟ, ತೃಣಾವರ್ತ, ಬಕ, ಅರಿಷ್ಟ, ಕೇಶಿ ಮೊದಲಾದ ದೈತ್ಯರು ಸಜ್ಜನರ ಮಕ್ಕಳನ್ನೆಲ್ಲಾ ಕೊಲ್ಲುತ್ತಾ, ಶ್ರೀಕೃಷ್ಣನನ್ನು ಕೊಲ್ಲ ಬೇಕೆಂದು ಬಂದಾಗ ಶ್ರೀಕೃಷ್ಣನು ಅವರನ್ನೆಲ್ಲಾ ಲೀಲೆಯಿಂದ ಸಂಹರಿಸಿದ್ದನ್ನು ಕಂಡು ಸಜ್ಜನರೆಲ್ಲರೂ ಸಂತೋಷಪಟ್ಟರು ಎಂದು ಭಾವ.

ವಿ.— ಮುನೇಃ ಸಪ್ತತಂತುಃ, ಮುನಿಸಪ್ತತಂತೌ ಕೃತಂ ವೈರಸ್ಯ ಬಂಧನಂ ಯೇನ, ತಂ, ಕಟವಶ್ಚ ತೇ ಕೇಶಾಶ್ಚ, ಕಟುಕೇಶಾಃ ಅಸ್ಯ ಸಂತೀತಿ, ಅರಿಷ್ಟಸ್ಯ ಪದಂ, ಮುಖ್ಯಶ್ಚಾಸೌ ದುರ್ಜನಶ್ಚ, ಕಟುಕೇಶೀ ಚ ಅರಿಷ್ಟಪದಂ ಚ ಅಸೌ

Rarest Archiver

ಮುಖ್ಯದುರ್ಜನಶ್ಚ ತಂ, ಉದ್ಯತಶ್ಚಾಸೌ ಸುಬಾಹುಶ್ಚ ತಂ, ಅಮರಾಃ ಆದಯಃ ಯೇಷಾಂ ತೇ, ಅಮರಾದಯಶ್ಚ ತೇ ಸಂತಶ್ಚ, ಅಮರಾದಿಸತಾಂ ಗಣಃ,

ಪ್ತಯಾ(ಜಟಯಾ) ಸಹಿತಃ ಸಪ್ತಃ, ಸಪ್ತಶ್ಚಾಸೌ ತಂತುಶ್ಚ, ಮುನೀ-ನಾಂ ಸಪ್ತತಂತುಃ, ಮುನಿಸಪ್ತತಂತೌ ಕೃತಂ ವೈರಸ್ಯ ಬಂಧನಂ ಯೇನ ತಂ, ಕೇಶೀ ಚ ಅರಿಷ್ಟಶ್ಚ, ಕೇಶ್ಯರಿಷ್ಟಾವಿತಿಪದೇ ಯಯೋಸ್ತೌ, ಕೇಶರಿಷ್ಟಪದೌ ಮುಖ್ಯೌ ಯಸ್ಯ ಸಃ, ಕಟುಶ್ಚಾಸೌ ಕೇಶ್ಯರಿಷ್ಟಪದಮುಖ್ಯಶ್ಚಾಸೌ ದುರ್ಜನಶ್ಚ ತಂ, ಶೋಭನೌ ಚ ತೌ ಬಾಹೂ ಚ ಸುಬಾಹೂ, ಉದ್ಯತೌ ಸುಬಾಹೂ ಯಸ್ಯ ಸಃ ಉದ್ಯತಸುಬಾಹುಃ ತಂ,

ಕ್ರಿ.—ಅಭಿ + ಅನಂದತ್, ಅನಂದತಾಂ ಅನಂದನ್, ಆನಂದಃ ಅನಂದತಂ ಅನಂದತ, ಅನಂದಂ ಅನಂದಾವ ಅನಂದಾಮ; ಟುನದಿ ಸಮೃದ್ಧೌ, (ನಂದ್) ಸಕ.। ಸೇಟ್.। ಪರ.। ಲಙ್.

ಅನ.—ವಿಶ್ವಾಮಿತ್ರರೂ ಶ್ರೀರಾಮನನ್ನು ಅಭಿನಂದಿಸಿದರು, ಶ್ರೀಕೃಷ್ಣನು ರಾಸಕ್ರೀಡೆಯನ್ನು ನಡೆಸಿ ಗೋಪಿಕೆಯರನ್ನು ಸಂತೋಷಪಡಿಸಿದನು—

ಸವನೇ ವಿಕಸ್ವರಗುಣಸ್ವರದ್ವಿಜೇ
ಸ್ಫುರಿತೇ ಚರನ್ ಸಕಲಗೋಕುಲಪ್ರಿಯಃ।
ಇತಕಾಮತಾಪಸರಸಾರ್ದ್ರಧೀಗಿರಃ
ಪ್ರತಿಲಾಲಯನ್ನರಮತೈಷ ಸುಂದರೀಃ ॥೨೩॥

ಅ.ಅ—ರಾಮಪಕ್ಷ—ಸಕಲ = ಎಲ್ಲಾ, ಗೋಕುಲ = ವೇದಗಳ ಸಮೂಹವು, ಪ್ರಿಯಃ = ಇಷ್ಟವಾಗಿಉಳ್ಳ, ಅಥವಾ ಸಕಲಗೋಕುಲ = ಎಲ್ಲಾ ವೇದಗಳುಳ್ಳ ವಿಶ್ವಾಮಿತಾದ್ರಿಮುನಿಗಳಿಗೆ, ಪ್ರಿಯಃ = ಪ್ರಿಯನಾದ, ಏಷಃ = ಈ ಶ್ರೀರಾಮನು, ವಿಕಸ್ವರ = ಪ್ರಕಾಶಮಾನವಾದ, ಗುಣ = ಭಕ್ತ್ಯಾದಿಗುಣಗಳು, ಸ್ವರ = ಉದಾತ್ತಾದಿಸ್ವರಗಳೂ ಉಳ್ಳ, ದ್ವಿಜೇ = ಬ್ರಾಹ್ಮಣರುಳ್ಳ, ಸ್ಫುರಿತೇ = ವಿಜೃಂಭಿಸುತ್ತಿರುವ, ಸವನೇ = ಯಜ್ಞದಲ್ಲಿ, ಚರನ್ = ಸಂಚರಿಸುತ್ತಾ, ಸುಂದರೀಃ = ಮನೋಹರವಾದ, ಇತಕಾಮ = ಇಷ್ಟಾರ್ಥವನ್ನು ಹೊಂದಿರುವ,

Rarest Archiver

ತಾಪಸ=ವಿಶ್ವಾಮಿತ್ರಮುನಿಯು, ರಸಾರ್ದ್ರ = ಪ್ರೀತಿಪೂರ್ಣವಾದ, ಧೀ= ಬುದ್ಧಿಯಿಂದ ಹೇಳಲ್ಪಟ್ಟ, ಗಿರಃ = ಮಾತುಗಳನ್ನು, ಪ್ರತಿಲಾಲಯನ್ = ಗೌರವಿಸುತ್ತಾ, ಅರಮತ=ವಿಹರಿಸಿದನು.

ಕೃಷ್ಣಪಕ್ಷ—ಸಕಲಗೋಕುಲಪ್ರಿಯಃ=ಎಲ್ಲಾಗೋವುಗಳ ಸಮೂಹಕ್ಕೆ ಇಷ್ಟನಾದ, ಅಥವಾ ಎಲ್ಲಾ ನಂದಗೋಕುಲದ ಜನರಿಗೆ ಪ್ರಿಯನಾದ, ಇತ-ಕಾಮತಾಪ = ಮನ್ಮಥತಾಪವನ್ನು ಹೊಂದಿದ, ಸರಸಾರ್ದ್ರಧೀಗಿರಃ=ಪ್ರೀತಿ ಯಿಂದ ಸಹಿತವಾದ ಬುದ್ಧಿ ಮತ್ತು ಮಾತುಗಳುಳ್ಳ, ಸುಂದರೀಃ=ಸೌಂದರ್ಯ ಪೂರ್ಣರಾದ ಗೋಪಿಯರನ್ನು, ಪ್ರತಿಲಾಲಯನ್=ಇಷ್ಟಾರ್ಥವನ್ನು ಕೊಟ್ಟು ಸಂಮಾನಿಸುವ, ಸ ಏಷಃ=ಅಂತಹ ಈ ಶ್ರೀಕೃಷ್ಣನು, ವಿಕಸ್ವರ=ಸ್ಫುಟವಾದ, ಗುಣ=ಮಾಧುರ್ಯಗುಣವುಳ್ಳ, ಸ್ವರ=ಸ್ವರವುಳ್ಳ, ದ್ವಿಜೇ=ಗಿಣಿ ಕೋಗಿಲೆ ಮುಂತಾದ ಪಕ್ಷಿಗಳುಳ್ಳ, ಸ್ಫುರಿತೇ = ಬೆಳದಿಂಗಳಿನಿಂದ ವಿಜೃಂಭಿಸುತ್ತಿರುವ, ವನೇ=ವೃಂದಾವನದಲ್ಲಿ, ಚರನ್ = ಸಂಚರಿಸುತ್ತಾ, ಅರಮತ = ವಿಹರಿ ಸಿದನು.

ತಾ.—ರಾಮಪಕ್ಷ—ಶ್ರೀರಾಮನು ಸಕಲವೇದವಚನಗಳಿಗೂ ಇಷ್ಟ ನಾದವನು. ಸರ್ವವೇದಪ್ರತಿಪಾದ್ಯನು. ಅವನು ವಿಶ್ವಾಮಿತ್ರರ ಆಶ್ರಮಕ್ಕೆ ಹೋದನು. ಆ ಆಶ್ರಮವು ಭಕ್ತಿಶ್ರದ್ಧಾದಿಗುಣಸಂಪನ್ನರಾದ, ವೇದೋಚ್ಚಾ-ರಣಕ್ಕೆ ಬೇಕಾದ ಉದಾತ್ತಾದಿಸ್ವರಗಳನ್ನು ಸರಿಯಾಗಿ ಉಚ್ಚರಿಸುವ ಬ್ರಾಹ್ಮಣರಿಂದ ಕಂಗೊಳಿಸುತ್ತಿತ್ತು. ಅಲ್ಲಿ ವಿಶ್ವಾಮಿತ್ರರ ಯಜ್ಞದ ವಿಘ್ನ ಪರಿಹಾರಕ್ಕಾಗಿ ಶ್ರೀರಾಮನು ಎಲ್ಲಾ ಕಡೆಯಲ್ಲಿಯೂ ಸಂಚರಿಸುತ್ತಿದ್ದನು. ವಿರಕ್ತರಾದರೂ ವಿಶ್ವಾಮಿತ್ರರು ಸ್ನೇಹಪೂರ್ಣವಾದ ಮಧುರವಚನಗಳಿಂದ ಶ್ರೀರಾಮನನ್ನು ಸ್ತುತಿಸುತ್ತಾ ಗೌರವಿಸುತ್ತಿದ್ದರು. ಇಂತಹ ಸ್ಥಳದಲ್ಲಿ ಶ್ರೀರಾಮನು ವಿಹರಿಸಿದನು. ಶ್ರೀರಾಮನೇ! ನಿನ್ನ ಅನುಗ್ರಹದಿಂದ ನಮ್ಮ ಯಜ್ಞವು ನಿರ್ವಿಘ್ನವಾಗಿ ಪೂರ್ತಿಯಾಯಿತು ಮಿಥಿಲೆಯಲ್ಲಿ ನಡೆಯುವ ಸೀತಾ ಸ್ವಯಂವರಕ್ಕೆ ಹೊಗೋಣ ಎಂದು ವಿಶ್ವಾಮಿತ್ರರು ಪ್ರೀತಿಯಿಂದ ಹೊಗಳಿ ಅಭಿನಂದಿಸಿದ ಮಾತನ್ನು ಆದರದಿಂದ ಕೇಳುತ್ತಾ ಶ್ರೀರಾಮನು ಸಂತೋಷ ಪಟ್ಟನು ಎಂದು ಭಾವ.

Rarest Archiver

ಕೃಷ್ಣಪಕ್ಷ— ಕಿವಿಗಿಂಪಾಗಿ ಹಾಡುವ ಪಕ್ಷಿಗಳಿಂದ ಬೃಂದಾವನವು ಬೆಳದಿಂಗಳಿನಲ್ಲಿ ಕಂಗೊಳಿಸುತ್ತಿತ್ತು. ಗೋವುಗಳಿಗೂ ಗೋಕುಲದ ಗೋಪಾಲರಿಗೂ ಅತ್ಯಂತಪ್ರಿಯನಾದ ಶ್ರೀಕೃಷ್ಣನು ಅಲ್ಲಿ ಸಂಚರಿಸುತ್ತಾ ಇದ್ದನು. ಕಾಮಪೀಡಿತರಾದ ಸುಂದರಿಯರಾದ ಗೋಪಿಕಾಸ್ತ್ರೀಯರು ಅವನ ಬಳಿಗೆ ಓಡಿ ಬಂದರು. ಪ್ರೀತಿಯ ಮಾತನ್ನಾಡುವ ಅವರನ್ನು ಆನಂದಪಡಿಸುತ್ತಾ ಶ್ರೀಕೃಷ್ಣನು ವೃಂದಾವನದಲ್ಲಿ ವಿಹರಿಸಿದನು.

ವಿ.—ಸವನೇ ಎಂಬಲ್ಲಿ ಸಃ ವನೇ ಎಂದೂ ಪದಚ್ಛೇದ. ಗುಣಾಶ್ಚ ಸ್ವರಾಶ್ಚ, ವಿಕಸ್ವರಾಃ ಗುಣಸ್ವರಾಃ ಯೇಷಾಂ ತೇ, ವಿಕಸ್ವರಗುಣಸ್ವರಾಃ ದ್ವಿಜಾಃ ಯಸ್ಮಿನ್ ತತ್ (ಸವನಂ) ತಸ್ಮಿನ್, ಗವಾಂ ಕುಲಂ, ಸಕಲಂ ಚ ತತ್ ಗೋಕುಲಂ ಚ, ಸಕಲಗೋಕುಲಂ ಪ್ರಿಯಂ ಯಸ್ಯ ಸಃ, ಅಥವಾ ಸಕಲಂ ಗೋಕುಲಂ ಯೇಷಾಂ ತೇ, ಸಕಲಗೋಕುಲಾನಾಂ ಪ್ರಿಯಃ, ಇತಃ ಕಾಮಃ ಯಸ್ಯ, ಇತಕಾಮಶ್ಚಾಸೌ ತಾಪಸಶ್ಚ, ತಸ್ಯ ರಸೇನ ಆರ್ದ್ರಾ ಯಾ ಧೀಃ ತಯಾ (ಕೃತಾಃ) ಗಿರಃ, ತಾಃ,

ಸಕಲಗೋಕುಲಸ್ಯ ಪ್ರಿಯಃ, ಇತಃ ಕಾಮಸ್ಯ ತಾಪಃ ಯಾಭಿಃ ತಾಃ ಇತಕಾಮತಾಪಾಃ, ರಸೇನಾರ್ದ್ರಾಃ ರಸಾರ್ದ್ರಾಃ, ಧಿಯಶ್ಚ ಗಿರಶ್ಚ ಧೀಗಿರಃ, ರಸಾರ್ದ್ರಾಶ್ಚ ತಾಃ ಧೀಗಿರಶ್ಚ, ರಸಾರ್ದ್ರಧೀಗೀರ್ಭಿಃ ಸಹಿತಾಃ ಸರಸಾರ್ದ್ರ-ಧೀಗಿರಃ, ಇತಕಾಮತಾಪಾಶ್ಚ ತಾಃ ಸರಸಾರ್ದ್ರಧೀಗಿರಶ್ಚ ತಾಃ, ವಿಕಸ್ವರಃ ಗುಣಃ ಯಸ್ಯ ಸಃ, ವಿಕಸ್ವರಗುಣಃ ಸ್ವರಃ ಯೇಷಾಂ ತೇ, ವಿಕಸ್ವರಗುಣಸ್ವರಾಃ ದ್ವಿಜಾಃ ಯಸ್ಮಿನ್ ತತ್ (ವನಂ) ತಸ್ಮಿನ್,

ಕ್ರಿ.—ಅರಮತ ಅರಮೇತಾಂ ಅರಮಂತ, ಅರಮಥಾಃ ಅರಮೇಥಾಂ ಅರಮಧ್ವಂ, ಅರಮೇ ಅರಮಾವಹಿ ಅರಮಾಮಹಿ; ರಮು ಕ್ರೀಡಾಯಾಂ ಸಕ.। ಆತ್ಮ.। ಅನಿಟ್ to rejoice. ಲಜ್.

ಅನ್ವ.—ಶ್ರೀರಾಮನನ್ನು ನೋಡಿ ಮಿಥಿಲೆಯ ಜನರು, ಶ್ರೀಕೃಷ್ಣನನ್ನು ನೋಡಿ ಮಥುರೆಯ ಜನರು ಸಂತೋಷಪಟ್ಟರು—

Rarest Archive

ಸಹಜಾನ್ವಿತಃ ಸಕಲಮಿತ್ರಸಂಯುತೋ
ಮಧುರಾಂ ಪುರೀಂ ಜನಕವಲ್ಲಭಾಂ ಗತಃ
ಪ್ರವಿಶನ್ನಿಮಾಂ ಸ ಜಗದೇಕಸುಂದರೋ
ನರನಾರ್ಯುದಾರನಯನೋತ್ಸವೋಽಭವತ್ ॥೨೪॥

ಅ.ಅ—ಸಹಜಾನ್ವಿತಃ = ತಮ್ಮ ಲಕ್ಷ್ಮಣನಿಂದ ಸಹಿತನಾದ, ಸಕಲ-ಮಿತ್ರಸಂಯುತಃ=ವಿಶ್ವಾಮಿತ್ರರಿಂದ ಕೂಡಿದ ರಾಮನು, ಮಧುರಾಂ = ಮನೋಹರವಾದ, ಜನಕವಲ್ಲಭಾಂ = ಜನಕರಾಜನಿಗೆ ಪ್ರಿಯವಾದ, ಪುರೀಂ = ಮಿಥಿಲೆಯನ್ನು ಕುರಿತು, ಗತಃ = ಹೋದನು. ಇಮಾಂ ಪ್ರವಿಶನ್ = ಈ ಪಟ್ಟಣವನ್ನು ಪ್ರವೇಶಿಸುತ್ತಿರುವ, ಜಗದೇಕಸುಂದರಃ = ಪ್ರಪಂಚದಲ್ಲಿ ಮುಖ್ಯಸುಂದರನಾದ, ಸಃ = ಆ ರಾಮನು, ನರನಾರೀ = ಗಂಡಸರು ಮತ್ತು ಹೆಂಗಸರ, ಉದಾರನಯನ = ಉತ್ಕೃಷ್ಟವಾದ ಕಣ್ಣುಗಳಿಗೆ, ಉತ್ಸವಃ = ಸಂತೋಷದಾಯಕನು, ಅಭವತ್ = ಆದನು.

ಮತ್ತು—ಸಹಜಾನ್ವಿತಃ = ಅಣ್ಣ ಬಲರಾಮನಿಂದ ಸಹಿತನಾದ, ಸಕಲ-ಮಿತ್ರ = ಎಲ್ಲಾ ಸ್ನೇಹಿತರಾದ ಗೋಪರಿಂದ, ಸಂಯುತಃ = ಕೂಡಿದ ಈ ಶ್ರೀಕೃಷ್ಣನು, ಜನಕವಲ್ಲಭಾಂ=ತಂದೆ ವಸುದೇವನಿಗೆ ಪ್ರಿಯವಾದ, ಮಧುರಾಂ ಪುರೀಂ = ಮಧುರೆಯನ್ನು ಕುರಿತು, ಗತಃ = ಹೋದನು. ಇಮಾಂ ಪ್ರವಿಶನ್ = ಈ ಪಟ್ಟಣವನ್ನು ಪ್ರವೇಶಿಸುತ್ತಿರುವ, ಜಗದೇಕಸುಂದರಃ = ಪ್ರಪಂಚದಲ್ಲಿ ಮುಖ್ಯಸುಂದರನಾದ, ಸಃ = ಆ ಕೃಷ್ಣನು, ನರನಾರೀ = ಗಂಡಸರು ಹೆಂಗಸರ, ಉದಾರನಯನೋತ್ಸವಃ = ಉತ್ಕೃಷ್ಟವಾದ ಕಣ್ಣುಗಳಿಗೆ ಆನಂದದಾಯಕನು, ಅಭವತ್ = ಆದನು.

ತಾ.—**ರಾಮಪಕ್ಷ**—ಶ್ರೀರಾಮಚಂದ್ರನು ಲಕ್ಷ್ಮಣ ಮತ್ತು ವಿಶ್ವಾಮಿತ್ರ ಸಹಿತನಾಗಿ ಜನಕಮಹಾರಾಜನ ಮನೋಹರವಾದ ಮಿಥಿಲಾ ರಾಜಧಾನಿಗೆ ಹೋದನು. ಪ್ರಪಂಚದಲ್ಲಿ ಮುಖ್ಯ ಸುಂದರನಾದ ಈ ಶ್ರೀರಾಮನನ್ನು ಮಿಥಿಲೆಯ ಗಂಡಸರು ಮತ್ತು ಹೆಂಗಸರು ತಮ್ಮ ಉತ್ಕೃಷ್ಟವಾದ ಕಣ್ಣುಗಳಿಂದ ನೋಡಿ ಆನಂದಪಟ್ಟರು. ಅತ್ಯಂತಸುಂದರನಾದ ಶ್ರೀರಾಮನು ಮಿಥಿಲಾಪಟ್ಟಣವನ್ನು

Rarest Archiver

ಹೊಕ್ಕಾಗ ಅಲ್ಲಿನ ಸ್ತ್ರೀಪುರುಷರು ಬಹಳ ಕುತೂಹಲದಿಂದ ಅವನನ್ನು ನೋಡಿ ಆನಂದಿಸಿದರು.

ಕೃಷ್ಣಪಕ್ಷ— ಶ್ರೀಕೃಷ್ಣನು ಅಣ್ಣಬಲರಾಮನಿಂದಲೂ, ನಂದ ಗೋಪನೇ ಮೊದಲಾದ ತನ್ನ ಇಷ್ಟಜನರಿಂದಲೂ ಕೂಡಿಕೊಂಡು ತಂದೆಯ ವಾಸಸ್ಥಾನವಾದ ಮಥುರಾಪಟ್ಟಣಕ್ಕೆ ಹೋಗುತ್ತಾ, ಜಗತ್ತಿನಲ್ಲೇ ಅತ್ಯಂತ ಸುಂದರನಾದುದರಿಂದ ಗಂಡಸರು ಮತ್ತು ಹೆಂಗಸರ ಕಣ್ಣಿಗೆ ಆನಂದವನ್ನುಂಟು ಮಾಡಿದನು.

ವಿ.—ಸಹಜಾಯತೇ ಇತಿ ಸಹಜಃ, ಸಹಜೇನ ಅನ್ವಿತಃ, ಸಕಲಮಿತ್ರೇಣ (ವಿಶ್ವಾಮಿತ್ರೇಣ) ಸಂಯುತಃ, ಜನಕಸ್ಯ ವಲ್ಲಭಾ ತಾಂ, ಏಕಶ್ಚಾಸೌ ಸುಂದರಶ್ಚ ಏಕಸುಂದರಃ, ಜಗತಿ ಏಕಸುಂದರಃ ಜಗದೇಕಸುಂದರಃ, ನರಾಶ್ಚ ನಾರ್ಯಶ್ಚ, ಉದಾರಾಣಿ ಚ ತಾನಿ ನಯನಾನಿ ಚ, ನರನಾರೀಣಾಂ ಉದಾರ-ನಯನಾನಾಂ ಉತ್ಸವಃ, ಕೃಷ್ಣಪಕ್ಷದಲ್ಲಿ—ಸಕಲಾನಿ ಚ ತಾನಿ ಮಿತ್ರಾಣಿ ಚ ಸಕಲಮಿತ್ರಾಣಿ ತೈಃ ಸಂಯುತಃ.

ಕ್ರಿ.—ಅಭವತ್ ಸರ್ಗ ೮ ಶ್ಲೋಕ ೧೯ ನೋಡಿರಿ.

ಅವ.—ಶ್ರೀರಾಮನೂ ಶ್ರೀಕೃಷ್ಣನೂ ಶಿವಧನುಸ್ಸನ್ನು ಮುರಿದರು—

ಅಥ ಖಂಡಿತೇಶ್ವರಧನುಃ ಸ ಲೀಲಯಾ
ಕ್ಷಪಿತೋಗ್ರಸೇನನೃಪಪುತ್ರಪೌರುಷಃ ।
ಸಮುಪಾಸ್ಯ ವಿಪ್ರಗುರುಮಬ್ಜಭೂಗುರುಃ
ಸ್ವಜನಾನಮೋದಯದಮೇಯತೇಜಸಾ ॥೨೫॥

ಅ.ಅ—ಅಥ = ಮಿಥಿಲಾಪ್ರವೇಶಾನಂತರದಲ್ಲಿ, ಲೀಲಯಾ = ಅನಾಯಾಸದಿಂದ, ಖಂಡಿತೇಶ್ವರಧನುಃ = ತುಂಡರಿಸಿದ ಶಿವಧನುಸ್ಸು ಉಳ್ಳವನಾಗಿ, ಕ್ಷಪಿತ = ನಾಶಗೊಳಿಸಲ್ಪಟ್ಟ, ಉಗ್ರಸೇನ = ಕ್ರೂರವಾದ ಸೇನೆಯುಳ್ಳ, ನೃಪಪುತ್ರ = ರಾಜಕುಮಾರರ, ಪೌರುಷಃ = ಪರಾಕ್ರಮದ ಅಭಿಮಾನವುಳ್ಳ, ಅಬ್ಜಭೂಗುರುಃ = ಬ್ರಹ್ಮದೇವರ ತಂದೆಯಾದ, ಸಃ = ಆ ರಾಮನು, ವಿಪ್ರ-ಗುರುಂ ಸಮುಪಾಸ್ಯ = ವಿಶ್ವಾಮಿತ್ರರನ್ನು ಸಮೀಪಿಸಿ, ಅಮೇಯತೇಜಸಾ =

Rarest Archive

ಅಮಿತವಾದ ಸಾಮರ್ಥ್ಯದಿಂದ, ಸ್ವಜನಾನ್ = ಲಕ್ಷ್ಮಣಾದಿ ಬಂಧುಜನರನ್ನು, ಅಮೋದಯತ್ = ಸಂತೋಷಪಡಿಸಿದನು.

ಕೃಷ್ಣಪಕ್ಷ— ಅಥ = ಮಥುರಾಪ್ರವೇಶಾನಂತರದಲ್ಲಿ, ಲೀಲಯಾ ಖಂಡಿತೇಶ್ವರಧನುಃ = ಅನಾಯಾಸದಿಂದ, ಶಿವನು ಕಂಸನಿಗೆ ಕೊಟ್ಟಿದ್ದ ಧನು-ಸ್ಸನ್ನು ತುಂಡರಿಸಿದ, ಕ್ಷಪಿತ = ನಾಶಗೊಳಿಸಲ್ಪಟ್ಟ, ಉಗ್ರಸೇನನೃಪ = ಉಗ್ರ-ಸೇನರಾಜನ, ಪುತ್ರ = ಮಗನಾದ ಕಂಸನ, ಪೌರುಷಃ = ಸಾಮರ್ಥ್ಯವುಳ್ಳ, ಅಬ್ಜಭೂಗುರುಃ ಸಃ = ಬ್ರಹ್ಮದೇವರ ತಂದೆಯಾದ ಆ ಶ್ರೀಕೃಷ್ಣನು, ವಿಪ್ರ-ಗುರುಂ = ಬ್ರಾಹ್ಮಣಗುರುವಾದ ಸಾಂದೀಪನಿಯನ್ನು, ಸಮುಪಾಸ್ಯ = ಸೇವಿಸಿ, ಅಮೇಯತೇಜಸಾ = ಅಪರಿಮಿತಸಾಮರ್ಥ್ಯದಿಂದ, ಸ್ವಜನಾನ್ = ಬಂಧು ಗಳಾದ ವಸುದೇವ ಮೊದಲಾದವರನ್ನು, ಅಮೋದಯತ್ = ಸಂತೋಷ ಗೊಳಿಸಿದನು.

ತಾ.—ರಾಮಪಕ್ಷ—ಮಿಥಿಲಾಪ್ರವೇಶಾನಂತರದಲ್ಲಿ ಶ್ರೀರಾಮನು ರುದ್ರದೇವರ ಬಿಲ್ಲನ್ನು ಅನಾಯಾಸವಾಗಿ ಮುರಿದನು. ಬಲಿಷ್ಠವಾದ ಸೇನೆ ಯುಳ್ಳ ರಾಜಪುತ್ರರ ಸೊಕ್ಕನ್ನು ಮುರಿದನು. ಬ್ರಹ್ಮದೇವರಿಗೂ ತಂದೆಯಾದ ಶ್ರೀರಾಮನು ಬ್ರಾಹ್ಮಣರಿಗೆ ಗುರುವಾದ ವಿಶ್ವಾಮಿತ್ರರನ್ನು ಸೇವಿಸುತ್ತಾ, ಲಕ್ಷ್ಮಣನೇ ಮೊದಲಾದ ತನ್ನ ಜನರನ್ನು ಅಪರಿಮಿತವಾದ ಪ್ರತಾಪದಿಂದ ಸಂತೋಷಪಡಿಸಿದನು. ಜನಕನು ತಪಸ್ಸಿನಿಂದ ಈಶ್ವರನನ್ನು ಸಂತೋಷಪಡಿಸಿ ಈಶ್ವರನಿಂದ ಧನುಸ್ಸನ್ನು ಪಡೆದು ಅದನ್ನು ಎತ್ತಿ ಹೆದೆ ಏರಿಸಿದವನಿಗೆ ಸೀತೆ ಯನ್ನು ಕೊಡುವೆನೆಂದು ಪ್ರತಿಜ್ಞೆಮಾಡಿದ್ದನು. ಅನೇಕ ರಾಜರು ಬಂದು ಪ್ರಯತ್ನಿಸಿ ಎತ್ತಲಾರದೆ ಹೋದರು. ಶ್ರೀರಾಮನು ವಿಶ್ವಾಮಿತ್ರರ ಅಪ್ಪಣೆ ಯಿಂದ ಆ ಬಿಲ್ಲನ್ನು ಸುಲಭವಾಗಿ ಎತ್ತಿ ಹೆದೆಯೇರಿಸಿ ಮುರಿದಾಗ ಎಲ್ಲಾ ರಾಜರ ಅಹಂಕಾರವೂ ಮುರಿದು ಹೋಯಿತು. ಅನಂತರ ಶ್ರೀರಾಮನು ವಿಶ್ವಾಮಿತ್ರರ ಬಳಿ ಬಂದು ನಿಂತನು ಎಂದು ಭಾವ.

ಕೃಷ್ಣಪಕ್ಷ—ಮಥುರೆಗೆ ಹೋದಮೇಲೆ ಶ್ರೀಕೃಷ್ಣನು ಪೂಜೆಗೆಂದು ಇಟ್ಟಿದ್ದ ರುದ್ರದೇವರ ಬಿಲ್ಲನ್ನು ಮುರಿದು ಕಂಸನನ್ನು ಕೊಂದು, ತಾನು ಬ್ರಹ್ಮ ದೇವರಿಗೆ ತಂದೆಯಾಗಿದ್ದರೂ ಬ್ರಾಹ್ಮಣಗುರುವಾದ ಸಾಂದೀಪನಿಯನ್ನು ಸೇವಿಸಿ

Rarest Archiver

ವೇದಶಾಸ್ತ್ರಾದಿಗಳನ್ನು ಕಲಿತು, ತನ್ನ ತೇಜಸ್ಸಿನಿಂದ ಜರಾಸಂಧಾದಿಗಳನ್ನು ಗೆದ್ದು ವಸುದೇವನೇ ಮೊದಲಾದ ತನ್ನವರನ್ನು ಸಂತೋಷಪಡಿಸಿದನು.

ವಿ.—ಖಂಡಿತಂ ಈಶ್ವರಸ್ಯ ಧನುಃ ಯೇನ ಸಃ, ಉಗ್ರಾ ಸೇನಾ ಯೇಷಾಂ ತೇ, ನೃಪಾಣಾಂ ಪುತ್ರಾಃ ಕ್ಷಪಿತಂ ಉಗ್ರಸೇನಾನಾಂ ನೃಪಪುತ್ರಾಣಾಂ ಪೌರುಷಂ ಯೇನ ಸಃ, ವಿಪ್ರಾಣಾಂ ಗುರುಃ ತಂ, ಅಬ್ಜಾತ್ ಭವತೀತಿ ಅಬ್ಜಭೂಃ ಅಬ್ಜಭುವಃ ಗುರುಃ, ಸ್ವಸ್ಯ ಜನಾಃ ತಾನ್, ಅಮೇಯಂ ಚ ತತ್ ತೇಜಶ್ಚ ತೇನ, (ಕ್ಷಪಿತಂ ಉಗ್ರಸೇನನೃಪಸ್ಯ ಪುತ್ರಸ್ಯ ಪೌರುಷಂ ಯೇನ ಸಃ)

ಕ್ರಿ.—ಅಮೋದಯತ್ ಅಮೋದಯತಾಂ ಅಮೋದಯನ್ ಇತ್ಯಾದಿ. ಮುದ ಹರ್ಷೇ. ಅಕ. । ಸೇಟ್. । ಆತ್ಮ. । to rejoice, ಣಿಜಂತ ಲಙ್.

ಅವ.—ಮತ್ತೂ ರಾಮಕೃಷ್ಣರ ಮಹಿಮೆಗಳನ್ನು ವರ್ಣಿಸುತ್ತಾರೆ—

ಕಮಲಾಮಯಂ ಕಮಲಪತ್ರಲೋಚನಾಂ
ಭುವಮಾಗತಾಂ ನೃಪಸುತಾಂ ಗೃಹೀತವಾನ್ ।
ನಿಜಲೀಲಯಾ ವಿಜಿತರಾಜಶಾತ್ರವೋ
ಮುದಮಾಪದಾಪ್ಯ ಪುರಮಬ್ಧಿದುರ್ಗಮಂ ॥೨೬॥

ಅ. ಅ—ಅಯಂ = ಶ್ರೀರಾಮನು, ಕಮಲಪತ್ರಲೋಚನಾಂ = ತಾವರೆಯ ದಳದಂತೆ ಕಣ್ಣುಗಳುಳ್ಳ, ನೃಪಸುತಾಂ = ಜನಕರಾಜನ ಮಗಳಾದ, ಭುವಂ ಆಗತಾಂ = ಭೂಮಿಗೆ ಬಂದಿರುವ, ಕಮಲಾಂ = ಲಕ್ಷ್ಮಿಯೇ ಆಗಿರುವ ಸೀತೆಯನ್ನು, ಗೃಹೀತವಾನ್ = ವಿವಾಹವಿಧಿಯಿಂದ ಸ್ವೀಕರಿಸಿದನು, ನಿಜಲೀಲಯಾ = ತನ್ನ ವಿಲಾಸದಿಂದ, ವಿಜಿತರಾಜಶಾತ್ರವಃ = ಜಯಿಸಲ್ಪಟ್ಟ ಕ್ಷತ್ರಿಯಶತ್ರುವಾದ ಪರಶುರಾಮನುಳ್ಳವನಾಗಿ, ಅಬ್ಧಿದುರ್ಗಮಂ = ಸಮುದ್ರದಂತೆ ಪ್ರವೇಶಿಸಲು ಆಗದ, ಪುರಂ ಆಪ್ಯ = ಅಯೋಧ್ಯಾನಗರವನ್ನು ಸೇರಿ, ಮುದಂ ಆಪತ್ = ಸಂತೋಷವನ್ನು ಹೊಂದಿದನು.

ಮತ್ತು—ಅಯಂ = ಈ ಶ್ರೀಕೃಷ್ಣನು, ಕಮಲಪತ್ರಲೋಚನಾಂ ನೃಪಸುತಾಂ = ತಾವರೆದಳದಂತೆ ಕಣ್ಣುಗಳುಳ್ಳ, ಭೀಷ್ಮಕರಾಜನ ಮಗಳಾದ, ಭುವಂ

Rarest Archive

ಆಗತಾಂ ಕಮಲಾಂ=ಭೂಮಿಗೆ ಬಂದ ಲಕ್ಷ್ಮೀರೂಪಳಾದ ರುಕ್ಮಿಣಿಯನ್ನು, ಗೃಹೀತವಾನ್ = ಸ್ವೀಕರಿಸಿದನು, ನಿಜಲೀಲಯಾ = ತನ್ನ ವಿಲಾಸದಿಂದ, ವಿಜಿತರಾಜಶಾತ್ರವಃ= ಜಯಿಸಲ್ಪಟ್ಟ ರಾಜರಾದ ರುಕ್ಮಿ ಜರಾಸಂಧ ಮೊದ-ಲಾದ ಶತ್ರುಗಳುಳ್ಳವನಾಗಿ, ಅಬ್ಧಿದುರ್ಗಮಂ= ಸಮುದ್ರದಿಂದ ಪ್ರವೇಶಿಸಲು ಕಷ್ಟಕರವಾದ, ಪುರಂ ಆಪ್ಯ = ದ್ವಾರಕೆಯನ್ನು ಸೇರಿ, ಮುದಂ ಆಪತ್ = ಸಂತೋಷವನ್ನು ಹೊಂದಿದನು.

ತಾ.—ರಾಮಪಕ್ಷ—ಲಕ್ಷ್ಮೀದೇವಿಯೇ ತಾವರೆದಳದಂತೆ ವಿಶಾಲವಾದ ಕಣ್ಣುಗಳುಳ್ಳ ಜನಕರಾಜನ ಮಗಳಾದ ಸೀತಾದೇವಿಯಾಗಿ ಅವತರಿಸಿದ್ದಳು. ಶ್ರೀರಾಮನು ಈ ಸೀತೆಯನ್ನು ಮದುವೆಯಾಗಿ, ಮನುಷ್ಯರಂತೆ ನಟಿಸುತ್ತಾ, ತನ್ನ ಲೀಲೆಯಿಂದ ಕ್ಷತ್ರಿಯಶತ್ರುವಾದ ಪರಶುರಾಮನನ್ನು ಗೆದ್ದಂತೆ ತೋರಿಸಿ, ಸಮುದ್ರದಂತೆ ಶತ್ರುಗಳಿಗೆ ಪ್ರವೇಶಿಸಲು ಅಸಾಧ್ಯವಾದ ಅಯೋಧ್ಯಾಪಟ್ಟಣಕ್ಕೆ ಬಂದುಸುಖವಾಗಿ ವಾಸಮಾಡಿದನು. ನಾರಾಯಣನೇ ರಾಮನಾಗಿಯೂ ಪರಶು ರಾಮನಾಗಿಯೂ ಅವತಾರಮಾಡಿದ್ದರಿಂದ ಬೇರೆ ರೂಪದಂತೆ ತೋರಿದರೂ ಅವರಿಬ್ಬರೂ ಒಬ್ಬರೇ ಆಗಿದ್ದಾರೆ. ಆದರೂ ಅಜ್ಞಾನಿಗಳಿಗೆ ಮೋಹವನ್ನುಂಟು ಮಾಡುವುದಕ್ಕಾಗಿ ಪರಶುರಾಮನನ್ನು ಸೋಲಿಸಿದಂತೆ ತೋರಿಸಿದನು. ಪರಶು ರಾಮನ ದೇಹದಲ್ಲಿ ಬ್ರಹ್ಮವರದಿಂದ ಅವಧ್ಯನಾಗಿ ಪ್ರವೇಶಿಸಿದ ಆತುಲನೆಂಬ ಅಸುರನನ್ನು ಪರಶುರಾಮನ ಸಂಮತಿಯಿಂದ ಕೊಂದನು. ಪರಶುರಾಮನೂ ಸೋತಂತೆ ನಟಿಸಿದನು ಎಂದು ಗೂಢಾಭಿಪ್ರಾಯವು.

ಕೃಷ್ಣಪಕ್ಷ—ಶ್ರೀಕೃಷ್ಣನು ತಾವರೆಯಂತಹ ಕಣ್ಣುಳ್ಳ ಭೀಷ್ಮಕರಾಜನ ಮಗಳಾದ ರುಕ್ಮಿಣಿಯಾಗಿ ಅವತರಿಸಿದ ಲಕ್ಷ್ಮೀದೇವಿಯನ್ನು ಅಪಹರಿಸಿ ತಂದು, ಮದುವೆಯಾದನು. ತನ್ನನ್ನು ತಡೆಯಲು ಬಂದ ಜರಾಸಂಧ, ಶಿಶುಪಾಲ, ರುಕ್ಮಿ ಮೊದಲಾದ ಶತ್ರುಗಳನ್ನು ಗೆದ್ದು, ಸುತ್ತಲೂ ಸಮುದ್ರವಿರುವುದರಿಂದ ಶತ್ರು ಗಳಿಗೆ ಪ್ರವೇಶಿಸಲು ಅಶಕ್ಯವಾದ, ದ್ವಾರಕಾಪುರವನ್ನು ಪ್ರವೇಶಿಸಿ ಸಂತೋಷ ವನ್ನು ಹೊಂದಿದನು.

ವಿ.—ಕಮಲಸ್ಯ ಪತ್ರೇ ಇವ ಲೋಚನೇ ಯಸ್ಯಾಃ ಸಾ ತಾಂ, ನೃಪಸ್ಯ ಸುತಾ ತಾಂ, ನಿಜಾ ಚ ಸಾ ಲೀಲಾ ಚ ತಯಾ, ವಿಜಿತಃ ರಾಜ್ಞಾಂ ಶಾತ್ರವಃ

Rarest Archiver

ಯೇನ ಸಃ, ದುಃಖೇನ ಗಂತುಂ ಶಕ್ಯಂ, ಅಬ್ಧಿವತ್ (ಅಬ್ಧಿನಾ) ದುರ್ಗಮಂ ತತ್,

ಕ್ರಿ.—ಆಪತ್ ಆಪತಾಂ ಆಪನ್, ಆಪಃ ಆಪತುಃ ಆಪತ, ಆಪಂ ಆಪಿವ ಆಪಿಮ. ಆಪ್ಲೃ ವ್ಯಾಪ್ತೌ, ಸಕ.। ಅನಿ.। ಪರ.। to obtain, to pervade. ಲುಙ್.

ಅವ.—ಶ್ರೀರಾಮನ ವನವಾಸ ಮತ್ತು ಶ್ರೀಕೃಷ್ಣನು ನರಕಾಸುರ ಸಂಹಾರಕ್ಕಾಗಿ ಹೋಗುವುದು—

ಸ ಜಗಾಮ ಮಾತೃಜನತುಷ್ಟಯೇ ಕಿಲ
ತ್ವರಿತೋ ವನಂ ವಿದಧದೀಪ್ಸಿತಂ ಸತಾಂ।
ಸಹ ಭಾರ್ಯಯಾಪಿ ಶುಭಯಾ ಮಹಾಜಯ
ಧ್ವಜಲಕ್ಷ್ಮಣಾಗ್ರ್ಯಸುಹೃದಾವಿನಾಮುದಾ ॥೨೮॥

ಅ. ಅ.—ಸತಾಂ = ಸಜ್ಜನರಾದ ಮುನಿಗಳಿಗೆ, ಈಪ್ಸಿತಂ = ಇಷ್ಟವಾದು ದನ್ನು, ವಿದಧತ್ = ಮಾಡುತ್ತಿರುವ, ಸಃ = ಆ ರಾಮನು, ಮಾತೃಜನ = ಚಿಕ್ಕ ತಾಯಿಯಾದ ಕೈಕೇಯಿಯ, ತುಷ್ಟಯೇ ಕಿಲ = ಸಂತೋಷಕ್ಕಾಗಿ (ಎಂಬಂತೆ), ತ್ವರಿತಃ = ಅವಸರಿಸುವವನಾಗಿ, ಶುಭಯಾ ಭಾರ್ಯಯಾ = ಮಂಗಳಕರಳಾದ ಹೆಂಡತಿಯಾದ ಸೀತೆಯಿಂದ, ಅಪಿ = ಮತ್ತು, ಮಹಾಜಯ = ಹೆಚ್ಚಾದ ಜಯದ, ಧ್ವಜ = ಬಾವುಟದಂತಿರುವ, ಅಥವಾ ಹೆಚ್ಚಾದ ಜಯವನ್ನುಂಟುಮಾಡುವ ಧ್ವಜಸ್ತಂಭವುಳ್ಳ, ಲಕ್ಷ್ಮಣ = ಲಕ್ಷ್ಮಣನೆಂಬ, ಅಗ್ರ್ಯಸುಹೃದಾ = ಉತ್ತಮ ಸ್ನೇಹಿತನೊಡನೆಯೂ, ಅಮುದಾ ವಿನಾ = ಅಸಂತೋಷವಿಲ್ಲದೆ, ವನಂ ಜಗಾಮ = ಕಾಡಿಗೆ ಹೋದನು.

ಮತ್ತು—ಈಪ್ಸಿತಂ = ತನಗೆ ಇಷ್ಟವಾದ, ಸತಾಂ ಅವನಂ = ಸಜ್ಜನ ರಾದ ಋಷಿಗಳ ರಕ್ಷಣೆಯನ್ನು, ವಿಧದತ್ = ಮಾಡುತ್ತಿರುವ, ಸಃ = ಆ ಕೃಷ್ಣನು, ಮಾತೃಜನತುಷ್ಟಯೇ = ತಾಯಿ ಅದಿತಿಯ ಸಂತೋಷಕ್ಕಾಗಿ, ಶುಭಯಾ = ಮಂಗಳಕರಳಾದ, ಭಾರ್ಯಯಾ ಅಪಿ ಸಹ = ಹೆಂಡತಿಯಾದ ಸತ್ಯಭಾಮೆ ಯಿಂದಲೂ ಕೂಡಿ, ಅಗ್ರ್ಯಸುಹೃದಾ = ಉತ್ತಮಸ್ನೇಹಿತನಾದ, ಮಹಾಜಯ

Rarest Archive

ಧ್ವಜ = ಅತಿಶಯವಾದ ಜಯವನ್ನು ಸೂಚಿಸುವಧ್ವಜಕ್ಕೆ, ಲಕ್ಷ್ಮಣಾ = ಚಿಹ್ನೆಯಾದ, ವಿನಾ = ಗರುಡನಿಂದ, ಮುದಾ = ಸಂತೋಷದಿಂದ, ಜಗಾಮ ಕಿಲ = ಹೋದನಷ್ಟೆ !

ತಾ.—ಶ್ರೀರಾಮಪಕ್ಷ—ಶ್ರೀರಾಮನು ಸವತಿತಾಯಿಯಾದ ಕೈಕೇಯಿಯ ಪ್ರೀತಿಗಾಗಿ ಎಂದು ತೋರಿದರೂ, ವಾಸ್ತವವಾಗಿ ಸಜ್ಜನರಾದ ಮುನಿಗಳಿಗೆ ರಾಕ್ಷಸರ ಬಾಧೆಯನ್ನು ಪರಿಹರಿಸುವ ಸಲುವಾಗಿಯೇ ಪತಿವ್ರತೆಯಾದ ಸೀತಾದೇವಿಯಿಂದಲೂ, ಶತ್ರುಜಯದ ಧ್ವಜದಂತಿರುವ ತಮ್ಮನೂ ಮಿತ್ರನೂ ಆದ ಲಕ್ಷ್ಮಣನಿಂದಲೂ ಕೂಡಿಕೊಂಡು, ರಾಜ್ಯಾಭಿಷೇಕತಪ್ಪಿತೆಂದು ಮನಸ್ಸಿನಲ್ಲಿ ಸ್ವಲ್ಪವೂ ದುಃಖವಿಲ್ಲದೆ ಬೇಗನೆ ಕಾಡಿಗೆ ಹೋದನು.

ಕೃಷ್ಣಪಕ್ಷ—ನರಕಾಸುರನು ಅದಿತಿದೇವಿಯ ಕುಂಡಲಗಳನ್ನು ಅಪಹರಿಸಿದಾಗ ಶ್ರೀಕೃಷ್ಣನು ತಾಯಿಯಾದ ಅದಿತಿದೇವಿಯ ಪ್ರೀತಿಗಾಗಿ, ನರಕಾಸುರನ ಉಪದ್ರವವನ್ನು ಸಹಿಸಲಾರದ ಬದರಿಕಾಶ್ರಮದ ಸಜ್ಜನರಾದ ಮುನಿಗಳನ್ನು ರಕ್ಷಿಸುವುದಕ್ಕಾಗಿಯೂ, ಪತಿವ್ರತೆಯಾದ ಸತ್ಯಭಾಮಾದೇವಿಯಿಂದ ಕೂಡಿಕೊಂಡು, ಅತ್ಯಂತ ಸ್ನೇಹಿತನಾದ ಜಯಶೀಲವಾದ ತನ್ನ ರಥಕ್ಕೆ ಧ್ವಜವಾಗಿರುವ ಪಕ್ಷಿಯಾದ ಗರುಡನನ್ನು ಏರಿಕೊಂಡು ಸಂತೋಷದಿಂದ ಬೇಗನೇ ನರಕಾಸುರನ ಸಂಹಾರಮಾಡಲು ಹೋದನು.

ವಿ.—ರಾಮ—ಮಾತಾ ಇತಿ ಜನಃ, ಮಾತೃಜನಸ್ಯ ತುಷ್ಟಿಃ ತಸ್ಯೈ, 'ತ್ವರಿತೋವನಂ' ಎಂಬಲ್ಲಿ ತ್ವರಿತಃ ವನಂ ಎಂದು ಪದಚ್ಛೇದ. ಮಹಾಂಶ್ಚಾಸೌ ಜಯಶ್ಚ ಮಹಾಜಯಸ್ಯ ಧ್ವಜ ಇವ, ಮಹಾಜಯಧ್ವಜಶ್ಚಾಸೌ ಲಕ್ಷ್ಮಣಶ್ಚ, ಅಗ್ರ್ಯಶ್ಚಾಸೌ ಸುಹೃಚ್ಚ, ಮಹಾಜಯಧ್ವಜಲಕ್ಷ್ಮಣ ಇತಿ ಅಗ್ರ್ಯಸುಹೃತ್ ತೇನ, ಅವಿನಾ ಮುದಾ ಎಂದು ಪದಚ್ಛೇದ.

ಕೃಷ್ಣ—ಮಹಾಜಯಾಯ ಧ್ವಜಃ, ಮಹಾಜಯಧ್ವಜಸ್ಯ ಲಕ್ಷ್ಮ ತೇನ, ಅಗ್ರ್ಯಶ್ಚಾಸೌ ಸುಹೃಚ್ಚ ತೇನ, ಮಹಾಜಯಧ್ವಜಲಕ್ಷ್ಮಣಾ, ವಿನಾ, ಮುದಾ ಎಂದು ಪದಚ್ಛೇದ. ವಿ = ಪಕ್ಷಿ, ಗರುಡ. (ತ್ವರಿತಃ + ಅವನಂ)

ಕ್ರಿ.—ಜಗಾಮ ಸರ್ಗ ೫ ಶ್ಲೋಕ ೭ ನೋಡಿರಿ. ಗಮ್ಲೃ ಗತೌ ಸಕ.। ಪರ.। ಅನಿಟ್. (ಗಮ್ ಗಚ್ಛ್) to go.

Rarest Archiver

ಅವೆ—ರಾಮಕೃಷ್ಣರು ಮಾಡಿದ ರಾಕ್ಷಸಸಂಹಾರವನ್ನು ವರ್ಣಿಸುತ್ತಾರೆ—

ಸಮತೀತಪರ್ವತಪುರೋಗದುರ್ಗಮಃ
ಖರದೂಷಣಾದಿಸುಜನದ್ವಿಷೋ ಬಹೂನ್ ।
ಸ ನಿಹತ್ಯ ವಿಶ್ವಭಯದಂ ಸುದುಸ್ಸಹಂ
ನರಕಂ ಮಹಾತಮ ಉತಾ (ಉಪಾ)
ನಯತ್ ಕ್ರಮಾತ್ ॥೨೮॥

ಅ.ಅ.—ಸಃ = ಆ ಶ್ರೀರಾಮನು, ಸಮತೀತ = ದಾಟಲ್ಪಟ್ಟ, ಪರ್ವತ = ಚಿತ್ರಕೂಟಪರ್ವತವೇ, ಪುರೋಗ = ಮೊದಲಾಗಿ ಉಳ್ಳ, ದುರ್ಗಮಃ = ಹೋಗಲು ಕಷ್ಟಕರವಾದ ಪ್ರದೇಶವುಳ್ಳವನಾಗಿ, ಬಹೂನ್ = ಬಹಳ ಮಂದಿ, ಖರ—ದೂಷಣಾದಿ = ಖರಾಸುರ, ದೂಷಣಾಸುರ ಮೊದಲಾದ, ಸುಜನದ್ವಿಷಃ = ಸಜ್ಜನದ್ವೇಷಿಗಳನ್ನು, ನಿಹತ್ಯ = ಕೊಂದು, (ಉತ = ಮತ್ತು) ಕ್ರಮಾತ್ = ಪ್ರಾರಬ್ಧಕರ್ಮವನ್ನು, ಅನುಭವಿಸಿದ ಮೇಲೆ, ವಿಶ್ವ = ಸಮಸ್ತಜನರಿಗೆ, ಭಯದಂ = ಭಯವನ್ನುಂಟುಮಾಡುವ, ಸುದುಸ್ಸಹಂ = ಸಹಿಸಲು ಅತ್ಯಂತ ಅಸಾಧ್ಯವಾದ, ನರಕಂ = ನರಕವನ್ನು, ಉಪಾನಯತ್ (ಆನಯತ್) = ಹೊಂದಿಸಿದನು.

ಮತ್ತು—ಸಮತೀತ = ದಾಟಲ್ಪಟ್ಟ, ಪರ್ವತ = ಬೆಟ್ಟಗಳೇ, ಪುರೋಗ = ಮೊದಲಾಗಿ ಉಳ್ಳ, ದುರ್ಗಮಃ = ಹೋಗಲು ಕಠಿನವಾದ ಸ್ಥಳಗಳುಳ್ಳ, ಸಃ = ಆ ಶ್ರೀಕೃಷ್ಣನು, ಬಹೂನ್ = ಬಹಳವಾದ, ಖರ=ಕಠಿನವಾದ, ದೂಷಣ = ದೋಷವುಳ್ಳ, ಆದಿಸುಜನದ್ವಿಷಃ = ಮೊದಲಿನಿಂದಲೂ ಸಜ್ಜನರಾಗಿದ್ದವರ ಶತ್ರುಗಳಾದ ಮುರಾದಿದೈತ್ಯರನ್ನೂ, ಕ್ರಮಾತ್ = ಕ್ರಮವಾಗಿ, ನರಕಂ = ನರಕಾಸುರನನ್ನೂ, ನಿಹತ್ಯ = ಕೊಂದು, ವಿಶ್ವಭಯದಂ = ಜಗತ್ತಿಗೆ ಭಯವನ್ನುಂಟುಮಾಡುವ, ಸುದುಸ್ಸಹಂ ಸಹಿಸಲಾಗದ, ಮಹಾತಮಃ = ಅಂಧತಮಸ್ಸನ್ನು, ಉಪಾನಯತ್ = ಹೊಂದಿಸಿದನು.

ತಾ.—ರಾಮಪಕ್ಷ—ಶ್ರೀರಾಮನು ಚಿತ್ರಕೂಟಪರ್ವತವೇ ಮೊದಲಾದ ಅಸಾಧ್ಯವಾದ ಗೊಂಡಾರಣ್ಯಗಳ ಪ್ರದೇಶಗಳನ್ನು ದಾಟಿ, ದಂಡಕಾರಣ್ಯದಲ್ಲಿ

Rarest Archiver

ವಾಸ ಮಾಡುತ್ತಾ ಇದ್ದನು. ಆಗ ಖರ ಮತ್ತು ದೂಷಣವೊದಲಾದ ಸಜ್ಜನರಿಗೆ ವಿರೋಧಿಗಳಾದ ದುಷ್ಟರಾಕ್ಷಸರನ್ನು ಕೊಂದನು. ಎಲ್ಲರಿಗೂ ಕೇಳುವಾಗಲೇ ಭಯವನ್ನುಂಟುಮಾಡುವ, ತಾಳಲಾರದಷ್ಟು ದುಃಖಮಯವಾದ ನರಕದಲ್ಲಿ ಆ ದುಷ್ಟರನ್ನು ಹಾಕಿದನು. ಕ್ರಮದಿಂದ ಪ್ರಾರಬ್ಧಕರ್ಮಭೋಗವು ಮುಗಿದ ಮೇಲೆ ಅವರನ್ನು ಅಂಧತಮಸ್ಸಿಗೆ ಕಳುಹಿಸಿದನು.

ಕೃಷ್ಣಪಕ್ಷ—ನರಕಾಸುರನ ಪಟ್ಟಣಕ್ಕೆ ಕೋಟೆಯಂತಿರುವ ಬೆಟ್ಟಗಳ ಆವರಣ, ನೀರಿನ ಕಂದಕ, ಮುರಾಸುರನ ಪಾಶದ ಆವರಣ (ಕಬ್ಬಿಣದ ಹಗ್ಗದ ಬಲೆ) ಮುಂತಾದ ರಕ್ಷಣೆಗಳಿದ್ದುವು. ಶ್ರೀಕೃಷ್ಣನು ಈ ವಿಘ್ನಗಳನ್ನೆಲ್ಲಾ ಪರಿಹರಿಸಿಕೊಂಡು ಕ್ರೂರವಾದ ವಿಷ್ಣುವೈಷ್ಣವರ ದ್ವೇಷವೆಂಬ ದೋಷವುಳ್ಳ, ಸಜ್ಜನ ವೈರಿಗಳಾದ ಮುರ, ನಿಶುಂಭ, ಹಯಗ್ರೀವ ವೊದಲಾದ ದೈತ್ಯರನ್ನೂ, ನರಕಾಸುರನನ್ನೂ ಕ್ರಮವಾಗಿ ಕೊಂದು, ಆ ದುಷ್ಟರನ್ನು ಅತಿಭಯಂಕರವಾದ ಸಹಿಸಲಸಾಧ್ಯವಾದ ದುಃಖವುಳ್ಳ ತಮಸ್ಸಿಗೆ ಕಳುಹಿಸಿದನು.

ವಿ.—ಪರ್ವತಾಃ ಪುರೋಗಾಃ ಯೇಷಾಂ ತೇ, ಸಮತೀತಾಃ ಪರ್ವತ-ಪುರೋಗಾಃ ದುರ್ಗಮಾಃ ಯೇನ ಸಃ, ಖರಶ್ಚ ದೂಷಣಶ್ಚ, ಖರದೂಷಣೌ ಆದೀ ಯೇಷಾಂ ತೇ, ಸುಜನಾನಾಂ ದ್ವಿಷಃ, ಖರದೂಷಣಾದಯಶ್ಚ ತೇ ಸುಜನದ್ವಿಷಶ್ಚ, ತಾನ್, ವಿಶ್ವಸ್ಯ ಭಯಂ ದದಾತೀತಿ ವಿಶ್ವಭಯದಂ ತತ್, ಅತೀವದುಃಖೇನ ಸೋಢುಂ ಶಕ್ಯಂ ಸುದುಸ್ಸಹಂ ತತ್, ಮಹಚ್ಚ ತತ್ ತಮಶ್ಚ ತತ್, (ಖರಾಣಿ ದೂಷಣಾನಿ ಯೇಷಾಂ ತೇ, ಆದೌ ಸುಜನಾಃ ಆದಿಸುಜನಾಃ ತೇಷಾಂ ದ್ವಿಷಃ, ಖರದೂಷಣಾದಯಶ್ಚ ತೇ ಆದಿಸುಜನದ್ವಿಷಶ್ಚ ತಾನ್,)

ಕ್ರಿ.—ಉಪ+ಅನಯತ್, ಅನಯತಾಂ ಅನಯನ್, ಅನಯಃ ಅನಯತಂ• ಅನಯತ, ಅನಯಂ ಅನಯಾವ ಅನಯಾಮ; ಣೀಞ್ (ನೀ) ಪ್ರಾಪಣೇ ದ್ವಿಕ.। ಉಭ.। ಅನಿಟ್. ಲಙ್.

ಅವ.—ಖರಾದಿಸಂಹಾರ ಮತ್ತು ಪಾರಿಜಾತಾಪಹರಣಗಳನ್ನು ಒಂದೇ ಶ್ಲೋಕದಿಂದ ವರ್ಣಿಸುತ್ತಾರೆ—

Rarest Archiver

ರುಚಿರಾಶ್ರಮಾಜಿರಚಿತಾಗ್ರ್ಯತೇಜಸಾ
ಪ್ರಿಯಯಾ ಪ್ರಿಯೋ ಭುವನಮಾನ್ಯಯಾ ಸಮಂ ।
ಭೃಶಮಾಕುಲೀಕೃತಮದಪ್ರಮಾದವತ್
ಸುರಪಾರಿಜಾತಹೃದವಾಪಧಾಮ ಸಃ ॥೨೯॥

ಅ.ಅ.—ಭೃಶಂ= ಅತಿಶಯವಾಗಿ, ಆಕುಲೀಕೃತ= ವ್ಯಥೆಗೊಳಿಸಲ್ಪಟ್ಟ, ಮದ=ಅಹಂಕಾರವು, ಪ್ರಮಾದವತ್ = ವಿಸ್ಮರಣೆ ಇವುಗಳುಳ್ಳ, ಸುರಪ–ಅರಿ = ಇಂದ್ರಶತ್ರುಗಳಾದ ಖರದೂಷಣಾದಿರಾಕ್ಷಸರ, ಜಾತ = ಸಮೂಹವನ್ನು, ಹೃತ್ = ನಾಶಮಾಡಿದ, ಪ್ರಿಯಃ = ಭಕ್ತಪ್ರಿಯನಾದ, ಸಃ= ಆ ಶ್ರೀರಾಮನು, ರುಚಿರ–ಆಶ್ರಮ = ಮನೋಹರವಾದ ಪಂಚವಟಿಯ ಆಶ್ರಮದ, ಅಜಿರ= ಅಂಗಳದಲ್ಲಿ, ಚಿತ = ವ್ಯಾಪ್ತವಾದ, ಅಗ್ರ್ಯತೇಜಸಾ = ಉತ್ತಮಕಾಂತಿಯುಳ್ಳ, ಭುವನಮಾನ್ಯಯಾ = ಲೋಕಪೂಜ್ಯಳಾದ, ಪ್ರಿಯಯಾ ಸಮಂ = ಪತ್ನಿಯಾದ ಸೀತೆಯೊಡನೆ, ಧಾಮ = ತೇಜಸ್ಸನ್ನು, ಅವಾಪ= ಹೊಂದಿದನು.

ಮತ್ತು—ಭೃಶಂ = ಬಹಳವಾಗಿ, ಆಕುಲೀಕೃತ= ವ್ಯಥೆಗೊಳಿಸಲ್ಪಟ್ಟ, ಮದಪ್ರಮಾದವತ್ = ಅಹಂಕಾರ ವಿಸ್ಮರಣೆ ಇವುಗಳುಳ್ಳ, ಸುರ = ದೇವತೆಗಳ, ಪಾರಿಜಾತ= ಪಾರಿಜಾತವೃಕ್ಷವನ್ನು, ಹೃತ್= ಅಪಹರಿಸಿದ, ಪ್ರಿಯಃ ಸಃ= ಭಕ್ತಪ್ರಿಯನಾದ ಆ ಶ್ರೀಕೃಷ್ಣನು, ರುಚಿರ = ಮನೋಹರವಾದ, ಆಶ್ರಮ= ಆಯಾಸವಿಲ್ಲದ, ಆಜಿ = ಯುದ್ಧದಲ್ಲಿ, ರಚಿತ = ಮಾಡಲ್ಪಟ್ಟ (ತೋರಿಸಲ್ಪಟ್ಟ), ಅಗ್ರ್ಯತೇಜಸಾ = ಶ್ರೇಷ್ಠವಾದ ಸಾಮರ್ಥ್ಯವುಳ್ಳ, ಭುವನಮಾನ್ಯಯಾ = ಲೋಕಪೂಜ್ಯಳಾದ, ಪ್ರಿಯಯಾ ಸಮಂ = ಸತ್ಯಭಾಮೆಯೊಡನೆ, ಧಾಮ= ದ್ವಾರಕೆ ಎಂಬ ಮನೆಯನ್ನು, ಅವಾಪ= ಹೊಂದಿದನು.

ತಾ.—ರಾಮಪಕ್ಷ—ಶ್ರೀರಾಮನು ಅವಿವೇಕಿಗಳೂ ದುರಹಂಕಾರಿಗಳೂ ಕರ್ತವ್ಯಮೂಢರೂ ಇಂದ್ರಶತ್ರುಗಳೂ ಆದ ಖರದೂಷಣಾದಿಹದಿನಾಲ್ಕು ಸಾವಿರ ರಾಕ್ಷಸರನ್ನು ಸಂಹರಿಸಿದನು. ಅಲ್ಲಿ ಪಂಚವಟಿಯ ಆಶ್ರಮದ ಅಂಗಳವನ್ನೇ ತನ್ನ ದೇಹಕಾಂತಿಯಿಂದ ಬೆಳಗಿಸುತ್ತಿದ್ದ, ಲೋಕಮಾನ್ಯಳೂ ತನಗೆ ಅತ್ಯಂತಪ್ರೀತ್ಯಾಸ್ಪದಳೂ ಆದ ಸೀತೆಯೊಡನೆ ಭಕ್ತಪ್ರಿಯನೂ ಸೀತಾಪ್ರಿಯನೂ ಆದ ಶ್ರೀರಾಮನು ಕಂಗೊಳಿಸಿದನು.

Rarest Archiver

ಕೃಷ್ಣಪಕ್ಷ—ಶ್ರೀಕೃಷ್ಣನು ನರಕಾಸುರನನ್ನು ಕೊಂದು ಅದಿತಿದೇವಿಯ ಕುಂಡಲಗಳನ್ನು ಕೊಡಲು ಸ್ವರ್ಗಕ್ಕೆ ಹೋಗಿದ್ದನು. ಆಗ ಸತ್ಯಭಾಮೆಯ ಅಪೇಕ್ಷೆಯಂತೆ ಪಾರಿಜಾತವೃಕ್ಷವನ್ನು ತೆಗೆದುಕೊಂಡು ಹೋಗುತ್ತಿದ್ದಾಗ ದೇವತೆಗಳು ಶ್ರೀಕೃಷ್ಣನು ಪರಮಾತ್ಮನು ಎಂಬ ವಿವೇಕವಿಲ್ಲದೆ, ದುರಭಿಮಾನಿಗಳೂ ಕರ್ತವ್ಯ ಮೂಢರೂ ಆಗಿ ವಿರೋಧಿಸಿದರು. ಈ ಸಂದರ್ಭದಲ್ಲಿ ಲೋಕಮಾನ್ಯಳಾದ ಸತ್ಯಭಾಮೆಯೂ ಆಯಾಸವಿಲ್ಲದೆ ಯುದ್ಧಮಾಡಿ ತನ್ನ ಪ್ರತಾಪವನ್ನು ತೋರಿಸಿದಳು. ದೇವತೆಗಳು ಸೋತು ಇವನು ಸಾಕ್ಷಾತ್ ನಾರಾಯಣನೇ ಎಂದು ತಿಳಿದಾಗ, ಶ್ರೀಕೃಷ್ಣನು ಅವರಲ್ಲಿ ಪ್ರೀತಿತೋರಿದನು. ಅನಂತರ ಶ್ರೀಕೃಷ್ಣನು ಗರುಡನ ಮೇಲೆ ಪಾರಿಜಾತವೃಕ್ಷವನ್ನಿಟ್ಟುಕೊಂಡು ಸತ್ಯಭಾಮಾಸಮೇತನಾಗಿ ದ್ವಾರಕೆಗೆ ಬಂದನು.

ವಿ.—ರುಚಿರಶ್ಚಾಸೌ ಆಶ್ರಮಶ್ಚ, ರುಚಿರಾಶ್ರಮಸ್ಯ ಅಜಿರಂ, ರುಚಿರಾಶ್ರಮಾಜಿರೇ ಚಿತಂ ಅಗ್ರ್ಯಂ ತೇಜಃ ಯಸ್ಯಾಃ ತಯಾ, ಭುವನೇಷು ಮಾನ್ಯಾ ತಯಾ, ಅನಾಕುಲಂ ಆಕುಲಂ ಸಂಪದ್ಯಮಾನಂ ಕೃತಂ, ಮದಶ್ಚ ಪ್ರಮಾದಶ್ಚ, ಮದಪ್ರಮಾದೌ ಅಸ್ಯ ಸ್ತ ಇತಿ, ಸುರಾನ್ ಪಾತೀತಿ ಸುರಪಃ, ಸುರಪಸ್ಯ ಅರೀಣಾಂ ಜಾತಂ, ಆಕುಲೀಕೃತಂ ಮದಪ್ರಮಾದವತ್‌ಸುರಪಾರಿಜಾತಂ ಹರತೀತಿ ; ಕೃಷ್ಣಪಕ್ಷದಲ್ಲಿ—ನ ವಿದ್ಯತೇ ಶ್ರಮಃ ಯಸ್ಯಾಂ ಸಾ, ರುಚಿರಾ ಚ ಸಾ ಅಶ್ರಮಾ ಚ ಸಾ ಆಜಿಶ್ಚ, ರುಚಿರಾಶ್ರಮಾಜೌ ಚಿತಂ ಅಗ್ರ್ಯಂ ತೇಜಃ ಯಸ್ಯಾಃ ಸಾ, ಆಕುಲೀಕೃತಾಶ್ಚ ಮದಪ್ರಮಾದವಂತಶ್ಚ ತೇ ಸುರಾಶ್ಚ, ಆಕುಲೀಕೃತ ಮದಪ್ರಮಾದವತ್‌ಸುರಾಣಾಂ ಪಾರಿಜಾತಂ ಹರತೀತಿ ;

ಕ್ರಿ.—ಅವ+ಆಪ. ಸರ್ಗ ೫ ಶ್ಲೋಕ ೫೦ ನೋಡಿರಿ.

ಅವ.—ಸೀತಾಪಹರಣ, ಕೌರವರು ಜೂಜಿನಲ್ಲಿ ಪಾಂಡವರ ಸಂಪತ್ತನ್ನು ಅಪಹರಿಸಿದಾಗ ಶ್ರೀಕೃಷ್ಣನ ಉದಾಸೀನತೆ—

ಹರಿತಾಮಧೀಶನರದೇವಮಂಡಲಂ
ದಶಕಂ ವಿಜಿತ್ಯ ಪರಭೀಷಣಂ ಮುಹುಃ ।
ಸ್ಫುರಿತಾಮಿಹ ಪ್ರಿಯತಮಾಂ ನಿಜಶ್ರಿಯಂ
ಭಗವಾನುಪೈಕ್ಷತ ಹರಂತಮಪ್ರಿಯಂ ॥೩೦॥

Rarest Archiver

ಅ. ಅ.—ಭಗವಾನ್ = ಪೂಜ್ಯನಾದ ಶ್ರೀರಾಮನು, ಇಹ = ಈ ಆಶ್ರಮದಲ್ಲಿ, ಸ್ಫುರಿತಾಂ = ಪ್ರಕಾಶಿಸುತ್ತಿರುವ, ನಿಜಶ್ರಿಯಂ = ತನ್ನ ಸಂಪತ್ತಿನ ರೂಪಳಾದ ಸೀತೆಯನ್ನು, ಹರಂತಂ = ಅಪಹರಿಸುತ್ತಿರುವ, ಅಪ್ರಿಯಂ = ಶತ್ರುವಾದ, ಹರಿತಾಂ = ದಿಕ್ಕುಗಳಿಗೆ, ಅಧೀಶ = ಒಡೆಯರಾದ, ನರ = ಮನುಷ್ಯರು, ದೇವ = ದೇವತೆಗಳು ಇವರ, ಮಂಡಲಂ = ಸಮೂಹವನ್ನು, ಮುಹುಃ = ಬಾರಿಬಾರಿಗೂ, ವಿಜಿತ್ಯ = ಜಯಿಸಿ, ಪರಭೀಷಣಂ = ಶತ್ರುಗಳಿಗೆ ಭಯಂಕರನಾದ, ದಶಕಂ = ಹತ್ತುತಲೆಯ ರಾವಣನನ್ನು, ಉಪೈಕ್ಷತ = ಉದಾಸೀನ ಮಾಡಿದನು.

ಮತ್ತು—ಭಗವಾನ್ = ಪೂಜ್ಯನಾದ ಶ್ರೀಕೃಷ್ಣನು, ಹರಿತಾಂ = ದಿಕ್ಕುಗಳ, ದಶಕಂ = ಹತ್ತನ್ನು, ಮುಹುಃ ವಿಜಿತ್ಯ = ಬಾರಿ ಬಾರಿಗೂ ಜಯಿಸಿ, ಪರಭೀಷಣಂ = ಶತ್ರುಗಳಿಗೆ ಭಯುವನ್ನುಂಟುಮಾಡುವ, ಅಧೀಶನರದೇವಮಂಡಲಂ = ಅಧಿಕವಾದ ಐಶ್ವರ್ಯವುಳ್ಳ ರಾಜರ ಸಮೂಹವನ್ನು, ವಿಜಿತ್ಯ = ಜಯಿಸಿ, ಇಹ = ಈ ಇಂದ್ರಪ್ರಸ್ಥ ಪಟ್ಟಣದಲ್ಲಿ, ಸ್ಫುರಿತಾಂ = ಪ್ರಕಾಶಗೊಂಡ, ಪ್ರಿಯತಮಾಂ = ಅತ್ಯಂತ ಪ್ರಿಯವಾದ, ನಿಜಶ್ರಿಯಂ = ತನ್ನವರಾದ ಪಾಂಡವರ ಸಂಪತ್ತನ್ನು, ಹರಂತಂ = (ಜೂಜಿನಿಂದ) ಅಪಹರಿಸುತ್ತಿರುವ, ಅಪ್ರಿಯಂ = ಶತ್ರುವಾದ ದುರ್ಯೋಧನನನ್ನು, ಉಪೈಕ್ಷತ = ಉದಾಸೀನಮಾಡಿದನು.

ತಾ.—ರಾಮಪಕ್ಷ—ಷಡ್ಗುಣೈಶ್ವರ್ಯಪೂರ್ಣನಾದ ಶ್ರೀರಾಮಚಂದ್ರನು ಪಂಚವಟಿಯಲ್ಲಿ ಕಂಗೊಳಿಸುವ ತನ್ನ ಪ್ರಾಣಪ್ರಿಯಳಾದ ಲಕ್ಷ್ಮೀರೂಪಳಾದ ಸೀತಾದೇವಿಯನ್ನು, ರಾವಣನು ಅಪಹರಿಸುವನೆಂದು ಗೊತ್ತಿದ್ದರೂ ಉಪೇಕ್ಷಿಸಿದನು. ರಾವಣನು ದಿಕ್ಪಾಲಕರಾದ ಇಂದ್ರಾದಿದೇವತೆಗಳನ್ನೂ, ಅನೇಕರಾಜರನ್ನೂ ಗೆದ್ದು ಎಲ್ಲಾ ಲೋಕಗಳಿಗೂ ಭಯಂಕನಾಗಿದ್ದನು. ಶ್ರೀರಾಮನಿಗೆ ಅವನನ್ನು ಆಗಲೇ ತಡೆದು ನಿಗ್ರಹಿಸುವ ಸಾಮರ್ಥ್ಯವಿದ್ದರೂ ಭವಿಷ್ಯತ್ತಿನ ಕಾರ್ಯದೃಷ್ಟಿಯಿಂದ ಕೊಲ್ಲದೆ ಉಪೇಕ್ಷಿಸಿದನು.

ಕೃಷ್ಣಾವತಾರ—ಪಾಂಡವರು ಇಂದ್ರಪ್ರಸ್ಥದಲ್ಲಿ ರಾಜ್ಯವಾಳುತ್ತಿರುವಾಗ ದಿಕ್ಕುದಿಕ್ಕುಗಳಲ್ಲಿರುವ ರಾಜರನ್ನು ಗೆದ್ದು ಶ್ರೀಕೃಷ್ಣನಿಗೆ ಪ್ರೀತಿಕರವಾದ ಸಂಪತ್ತನ್ನು ಶೇಖರಿಸಿದ್ದರು. ಆದರೆ ದುರ್ಯೋಧನನು ಕಪಟದ್ಯೂತದಿಂದ ಆ ಸಂಪತ್ತನ್ನು ಅಪಹರಿಸುತ್ತಿರುವಾಗ ಶತ್ರುವಾದ ಅವನನ್ನು ಷಡ್ಗುಣೈಶ್ವರ್ಯ

Rarest Archiver

ಸಂಪೂರ್ಣನಾದ ಶ್ರೀಕೃಷ್ಣನು ಉಪೇಕ್ಷಿಸಿದನು. ಪಾಂಡವರನ್ನು ಜೂಜಿನಲ್ಲಿ ಸೋಲಿಸಿ ಅವರ ಸಂಪತ್ತನ್ನು ಅಪಹರಿಸುವಾಗಲೇ ಶ್ರೀಕೃಷ್ಣನು ದುರ್ಯೋಧನನನ್ನು ಶಿಕ್ಷಿಸಲು ಶಕ್ತನಿದ್ದರೂ ಶಿಕ್ಷಿಸದೆ ಬಿಟ್ಟನು ಎಂದು ಭಾವ. (ಭಕ್ತರು ಐಶ್ವರ್ಯವನ್ನು ಅನುಭವಿಸುವುದು ಪರಮಾತ್ಮನಿಗೆ ಪ್ರೀತಿಕರವು–'ತದ್ಭೋ-ಗೋऽಪ್ಯತೀವ ಹರಿತೋಷಣಂ')

ವಿ.—ಅಧೀಶಾಶ್ಚ ತೇ ನರಾಶ್ಚ ದೇವಾಶ್ಚ ತೇಷಾಂ ಮಂಡಲಂ, ತತ್, ದಶ ಕಾನಿ ಯಸ್ಯ ಸಃ ತಂ, ಮಾರುತೇ ವೇಧಸಿ ಬ್ರಧ್ನೇ ಪುಂಸಿ ಕಃ ಕಂ ಶಿರೋऽಂಬುನೋಃ, ಕಂ = ತಲೆ, ಪರೇಷಾಂ ಪರಾಣಾಂ ವಾ ಭೀಷಣಃ ತಂ, ಅತಿಶಯೇನ ಪ್ರಿಯಾ ಪ್ರಿಯತಮಾ ತಾಂ, ನಿಜಾ ಚ ಸಾ ಶ್ರೀಶ್ಚ ನಿಜಶ್ರೀಃ ತಾಂ, ನ ಪ್ರಿಯಃ ಅಪ್ರಿಯಃ ತಂ,

ನರಾಣಾಂ ದೇವಾಃ, ಅಧೀಶಾಶ್ಚ (ಅಧಿಕೈಶ್ವರ್ಯಶಾಲಿನಶ್ಚ) ತೇ ನರದೇವಾಶ್ಚ ಅಧೀಶನರದೇವಾಃ, ತೇಷಾಂ ಮಂಡಲಂ, ತತ್, ದಶಾನಾಂ ಸಮೂಹಃ ದಶಕಂ, ತತ್, ನಿಜಾನಾಂ ಶ್ರೀಃ, ತಾಂ,

ಕ್ರಿ.—ಉಪ + ಐಕ್ಷತ, ಸರ್ಗ ೫ ಶ್ಲೋಕ ೨೬ ನೋಡಿರಿ.

ಅವ.—ವಾಲಿಸಂಹಾರ ಸುಗ್ರೀವರಾಜ್ಯಭಾರ, ದುರ್ಯೋಧನನ ಸಂಹಾರ ಧರ್ಮರಾಜನ ರಾಜ್ಯಭಾರ—

ಅಭಿವಂದಿತಃ ಪವನನಂದನಾದಿಭಿಃ
ಸ ಕದಾಚಿದಿಂದ್ರಸುತವರ್ಧಕೋ ಗವಾ ।
ನಿಜರಾಜ್ಯಮಾತ್ಮದಯಿತಾಯ ದತ್ತವಾನ್
ಹರಿಸೂನವೇ ಹತವಿಪಕ್ಷಮುತ್ತಮಂ ॥೩೦॥

ಅ.ಅ—ಪವನನಂದನಾದಿಭಿಃ = ವಾಯುಪುತ್ರನಾದ ಹನುಮಂತನೇ ಮೊದಲಾದವರಿಂದ, ಅಭಿವಂದಿತಃ = ನಮಸ್ಕರಿಸಲ್ಪಟ್ಟ ಸಃ = ಆ ಶ್ರೀರಾಮನು, ಕದಾಚಿತ್ = ಒಂದಾನೊಂದು ದಿನ, ಗವಾ = ಬಾಣದಿಂದ, ಇಂದ್ರಸುತವರ್ಧಕಃ = ಇಂದ್ರಪುತ್ರನಾದ ವಾಲಿಯನ್ನು ಕತ್ತರಿಸುವವನಾಗಿ, ಆತ್ಮದಯಿತಾಯ = ತನಗೆ ಪ್ರಿಯನಾದ, ಹರಿಸೂನವೇ = ಸೂರ್ಯಪುತ್ರನಾದ

Rarest Archiver

ಸುಗ್ರೀವನಿಗೆ, ಹತವಿಪಕ್ಷಂ=ಕೊಲ್ಲಲ್ಪಟ್ಟ ಶತ್ರುವುಳ್ಳ, ಉತ್ತಮಂ ನಿಜರಾಜ್ಯಂ =ಶ್ರೇಷ್ಠವಾದ ಅವನಿಗೆ ಸಂಬಂಧಿಸಿದ ಕಿಷ್ಕಿಂಧಾರಾಜ್ಯವನ್ನು, ದತ್ತವಾನ್= ಕೊಟ್ಟನು.

ಮತ್ತು ಪವನನಂದನಾದಿಭಿಃ=ವಾಯುಪುತ್ರನಾದ ಭೀಮಮೊದಲಾದ ವರಿಂದ, ಅಭಿವಂದಿತಃ ಸಃ=ನಮಸ್ಕರಿಸಲ್ಪಟ್ಟ, ಆ ಶ್ರೀಕೃಷ್ಣನು, ಕದಾಚಿತ್ =ಒಂದಾನೊಂದು ವೇಳೆಯಲ್ಲಿ, ಗವಾ=ಗೀತಾವಾಕ್ಯದಿಂದ, ಇಂದ್ರಸುತ-ವರ್ಧಕಃ=ಇಂದ್ರಪುತ್ರನಾದ ಅರ್ಜುನನನ್ನು ಹುರಿದುಂಬಿಸುವವನಾಗಿ, ಆತ್ಮ-ದಯಿತಾಯ=ತನಗೆ ಪ್ರಿಯನಾದ, ಹರಿಸೂನವೇ=ಯಮಪುತ್ರನಾದ ಧರ್ಮ ರಾಜನಿಗೆ, ಹತವಿಪಕ್ಷಂ ಉತ್ತಮಂ ನಿಜರಾಜ್ಯಂ = ಶತ್ರುಸಂಹಾರವಾಗಿರುವ ಅವನಿಗೆ ಸಂಬಂಧಪಟ್ಟ ಶ್ರೇಷ್ಠವಾದ ರಾಜ್ಯವನ್ನು, ದತ್ತವಾನ್=ಕೊಟ್ಟನು.

ತಾ.— ರಾಮಪಕ್ಷ— ಋಷ್ಯಮೂಕಪರ್ವತದಲ್ಲಿ ಶ್ರೀರಾಮನು ಹನುಮಂತನೇ ಮೊದಲಾದ ಕಪಿಶ್ರೇಷ್ಠರ ವಂದನೆಯನ್ನು ಸ್ವೀಕರಿಸಿದನು. ಸುಗ್ರೀವನು ಸೂಚಿಸಿದ ಸಮಯದಲ್ಲಿ ವಾಲಿಯನ್ನು ಕೊಂದನು. ತನ್ನ ಮಿತ್ರ ನಾದ ಸುಗ್ರೀವನಿಗೆ ಶತ್ರುಪೀಡೆಯಿಲ್ಲದ ಸಂಪದ್ಭರಿತವಾದ ಕಪಿರಾಜ್ಯವನ್ನು ಕೊಟ್ಟನು. ಸೀತೆಯನ್ನು ಹುಡುಕುವ ನೆವದಿಂದ ಋಷ್ಯಮೂಕಪರ್ವತಕ್ಕೆ ಹೋಗಿ ಹನುಮಂತನ ಮೂಲಕ ಸುಗ್ರೀವನ ಸಖ್ಯವನ್ನು ಬೆಳೆಸಿ ವಾಲಿಯನ್ನು ಕೊಂದು ಕಿಷ್ಕಿಂಧಾರಾಜ್ಯವನ್ನು ಸುಗ್ರೀವನಿಗೆ ಕೊಟ್ಟನು.

ಕೃಷ್ಣಪಕ್ಷ—ಶ್ರೀಕೃಷ್ಣನು ಭೀಮಸೇನನೇ ಮೊದಲಾದ ಪಾಂಡವರಿಂದ ವಂದನೆಯನ್ನು ಕೈಗೊಂಡನು. ಭಾರತಯುದ್ಧಾರಂಭದಲ್ಲಿ ಗೀತಾವಚನಗಳಿಂದ ಅರ್ಜುನನ ಜ್ಞಾನೋತ್ಸಾಹಗಳನ್ನು ಬೆಳೆಸಿದನು. ದುರ್ಯೋಧನಾದಿ ಶತ್ರುಗಳ ಸಂಹಾರವಾದುದರಿಂದ ಶತ್ರುಬಾಧೆಯಿಲ್ಲದ ಉತ್ತಮವಾದ ಹಸ್ತಿನಾವತೀರಾಜ್ಯ ವನ್ನು, ತನ್ನ ಭಕ್ತನಾದ ಧರ್ಮರಾಜನಿಗೆ ಕೊಟ್ಟನು. ಪಾಂಡವರು ವನವಾಸ ಅಜ್ಞಾತವಾಸಗಳನ್ನು ಮುಗಿಸಿ ಉಪಪ್ಲಾವ್ಯದಲ್ಲಿ ಶ್ರೀಕೃಷ್ಣನನ್ನು ವಂದಿಸಿದರು. ಅನಂತರ ನಡೆದ ಯುದ್ಧಾರಂಭದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಜ್ಞಾನೋಪದೇಶ ಮಾಡಿದನು. ಕೌರವರ ಸಂಹಾರ ಮಾಡಿಸಿ ರಾಜ್ಯವನ್ನು ಪಾಂಡವರಿಗೆ ಕೊಟ್ಟನು ಎಂದು ಭಾವ.

Rarest Archive

ವಿ.—ಪವನನಂದನಃ ಆದಿಃ ಯೇಷಾಂ ತೇ, ತೈಃ, ಇಂದ್ರಸ್ಯ ಸುತಃ, ಇಂದ್ರಸುತಸ್ಯ ವರ್ಧಕಃ, ವರ್ಧನಂ = ಕತ್ತರಿಸುವುದು, ಬೆಳೆಸುವುದು; ಗೋ= ಬಾಣ, ಮಾತು, ವಜ್ರವಾಗ್‌ಬಾಣವಾರಿಷು। ಭೂಮೌ ಪಶೌ ಚ ಗೋಶಬ್ದಃ —ಹಲ. ನಿಜಂ ಚ ತತ್ ರಾಜ್ಯಂ ಚ ತತ್, ಆತ್ಮನಃ ದಯಿತಃ ತಸ್ಮೈ, ಹರೇಃ ಸೂನುಃ ತಸ್ಮೈ, ಹತಃ ವಿಪಕ್ಷಃ ಯಸ್ಮಿನ್ ತತ್, ಹರಿ = ಇಂದ್ರ, ಸೂರ್ಯ, ಯಮ;

ಕ್ರಿ.—ಈ ಶ್ಲೋಕದಲ್ಲಿ ಕ್ರಿಯಾಪದವಿಲ್ಲ. ದತ್ತವಾನ್ ಎಂಬ ಕೃದಂತ ನಾಮಪದವೇ ಕ್ರಿಯಾಪದದ ಅರ್ಥವನ್ನು ಕೊಡುತ್ತದೆ.

ಅವ.—ಮತ್ತೂ ರಾಮ, ಕೃಷ್ಣಾವತಾರಗಳ ಮುಂದಿನ ಕಥೆಯನ್ನು ವರ್ಣಿಸುತ್ತಾರೆ—

ಮುದಮಾಪ್ಯ ತತ್ರ ದಯಿತೋರುವಾರ್ತಯಾ
ಮಧುಹಾ ಮರುತ್ಸುತಮುಖಪ್ರವೃತ್ತಯಾ।
ಹರಿತಿಗ್ಮಚಕ್ರಲಸಿತೋಽಬ್ಧಿಮಧ್ಯಗಂ
ಪ್ರಯಯೌ ಸ ಪುಣ್ಯಜನಸೇವಿತಂ ಪುರಂ ॥೩೨॥

ಅ. ಅ.—ತತ್ರ = ಆ ಋಷ್ಯಮೂಕಪರ್ವತದಲ್ಲಿ, ಮಧುಹಾ = ಮಧು ದೈತ್ಯಸಂಹಾರಕನಾದ ಶ್ರೀರಾಮನು, ಮರುತ್ಸುತ = ವಾಯುಪುತ್ರನಾದ ಆಂಜನೇಯನ, ಮುಖ = ಬಾಯಿಯಿಂದ, ಪ್ರವೃತ್ತಯಾ = ಉಂಟಾದ, ದಯಿತಾ = ಹೆಂಡತಿಯಾದ ಸೀತೆಯ, ಉರುವಾರ್ತಯಾ = ಉತ್ತಮವಾದ ಸಮಾಚಾರ ದಿಂದ, ಮುದಂ = ಸಂತೋಷವನ್ನು, ಆಪ್ಯ = ಹೊಂದಿ, ಹರಿ = ಕಪಿಗಳ, ತಿಗ್ಮಚಕ್ರ = (ಪರಾಕ್ರಮದಿಂದ) ಕ್ರೂರವಾದ ಸೈನ್ಯದಿಂದ, ಲಸಿತಃ (ಸನ್) = ಪ್ರಕಾಶಿಸುತ್ತಾ, ಅಬ್ಧಿಮಧ್ಯಗಂ = ಸಮುದ್ರದ ನಡುವೆ ಇರುವ, ಪುಣ್ಯಜನ-ಸೇವಿತಂ = ರಾಕ್ಷಸರಿಂದ ಸೇವಿಸಲ್ಪಟ್ಟ, ಪುರಂ = ಲಂಕಾಪಟ್ಟಣವನ್ನು ಕುರಿತು, ಪ್ರಯಯೌ = ಹೋದನು.

ಮತ್ತು—ಮಧುಹಾ = ಮಧುಸೂದನನಾದ ಶ್ರೀಕೃಷ್ಣನು, ತತ್ರ ಆ ಉಪಪ್ಲಾವ್ಯನಗರದಲ್ಲಿ, ಮರುತ್ಸುತಮುಖ = ವಾಯುಪುತ್ರನಾದ ಭೀಮಸೇನನ

Rarest Archiver

ಬಾಯಿಯಿಂದ, ಪ್ರವೃತ್ತಯಾ=ಹೇಳಲ್ಪಟ್ಟ, ದಯಿತ=ಪ್ರಿಯರಾದ ಪಾಂಡವರ, ಉರುವಾರ್ತಯಾ= ಅಜ್ಞಾತವಾಸದ ಕೀಚಕಸಂಹಾರ ಮುಂತಾದ ಶ್ರೇಷ್ಠವಾದ ವಾರ್ತೆಯಿಂದ, ಮುದಂ ಆಪ್ಯ= ಸಂತೋಷವನ್ನು ಹೊಂದಿ, ಹರಿ= ಸೂರ್ಯ ನಂತೆ, ತಿಗ್ಮ= ಹರಿತವಾದ, ಚಕ್ರ= ಸುದರ್ಶನಚಕ್ರದಿಂದ, ಲಸಿತಃ=ಪ್ರಕಾಶಿತ ನಾಗಿ, ಅಬ್ಧಿಮಧ್ಯಗಂ= ಸಮುದ್ರದ ನಡುವೆ ಇರುವ, ಪುಣ್ಯಜನಸೇವಿತಂ= ಪವಿತ್ರರಾದ ಜನರಿಂದ ಸೇವಿಸಲ್ಪಟ್ಟ, ಪುರಂ = ದ್ವಾರಕೆಯನ್ನು ಕುರಿತು, ಪ್ರಯಯೌ= ಹೋದನು.

ತಾ.—**ರಾಮಪಕ್ಷ**—ಮಧುಸೂದನನಾದ ಶ್ರೀರಾಮನು ಋಷ್ಯಮೂಕ ಪರ್ವತದ ಹತ್ತಿರದಲ್ಲಿ ಪ್ರಸ್ರವಣಪರ್ವತದಲ್ಲಿದ್ದನು. ವಾಯುನಂದನನಾದ ಹನುಮಂತನ ಮುಖದಿಂದ ಪತ್ನಿಯಾದ, ಸೀತಾದೇವಿಯು ಲಂಕೆಯ ಅಶೋಕ ವನದಲ್ಲಿರುವಳೆಂಬ ವಾರ್ತೆಯನ್ನು ಕೇಳಿ ಸಂತೋಷಪಟ್ಟನು. ಅನಂತರ ಭಯಂಕರವಾದ ಕಪಿಸೇನೆಯ ಮಧ್ಯದಲ್ಲಿ ವಿರಾಜಮಾನನಾಗಿ, ರಾವಣನ ಮೇಲೆ ವಿಜಯಯಾತ್ರೆಗೆ ಹೊರಟು ಸಮುದ್ರದಲ್ಲಿರುವ ರಾಕ್ಷಸರ ವಾಸಸ್ಥಳ ವಾದ ಲಂಕಾಪಟ್ಟಣಕ್ಕೆ ಹೋದನು.

ಕೃಷ್ಣಪಕ್ಷ—ಮಧುದೈತ್ಯವೈರಿಯಾದ ಶ್ರೀಕೃಷ್ಣನು ಸ್ವಲ್ಪಸಮಯ ಉಪಪ್ಲಾವ್ಯದಲ್ಲಿದ್ದನು. ವಾಯುಪುತ್ರನಾದ ಭೀಮಸೇನನೇ ಮೊದಲಾದ ಪ್ರೀತಿ ಪಾತ್ರರಾದ ಪಾಂಡವರು ಹೇಳಿದ ಅನೇಕವೃತ್ತಾಂತವನ್ನು ಕೇಳಿ ಸಂತೋಷ ಪಟ್ಟನು. ಅನಂತರ ಸೂರ್ಯನಂತಹ ಪ್ರಕಾಶವುಳ್ಳ ಸುದರ್ಶನ ಚಕ್ರವನ್ನು ಧರಿಸಿ ಪುಣ್ಯಶಾಲಿಗಳಾದ ಮುನಿಗಳಿಗೂ ಯಾದವರಿಗೂ ವಾಸಸ್ಥಳವಾದ, ಸಮುದ್ರ ಮಧ್ಯದಲ್ಲಿರುವ ದ್ವಾರಕಾಪಟ್ಟಣಕ್ಕೆ ಹೋದನು.

ವಿ.—ಉರುಶ್ಚ ಸಾ ವಾರ್ತಾ ಚ, ದಯಿತಾಯಾಃ ಉರುವಾರ್ತಾ ತಯಾ, ಮಧುಂ ಹಂತೀತಿ ಮಧುಹಾ, ಮರುತಃ ಸುತಃ ಮರುತ್ಸುತಸ್ಯ ಮುಖಂ ಮರುತ್ಸುತಮುಖಾತ್ ಪ್ರವೃತ್ತಾ ತಯಾ, ತಿಗ್ಮಂ ಚ ತತ್ ಚಕ್ರಂ ಚ, ಹರೀಣಾಂ ತಿಗ್ಮಚಕ್ರಂ, ಹರಿತಿಗ್ಮಚಕ್ರೇಣ ಲಸಿತಃ, ಅಬ್ಧೇಃ ಮಧ್ಯಂ ಗಚ್ಛತೀತಿ ಅಬ್ಧಿಮಧ್ಯಗಂ ತತ್, ಪುಣ್ಯಜನೈಃ ಸೇವಿತಂ ತತ್, ಪುಣ್ಯಜನ= ರಾಕ್ಷಸರು, ಯಾತುಧಾನಃ ಪುಣ್ಯಜನಃ—ಅಮರ. (ದಯಿತಾನಾಂ ಉರುಶ್ಚ ಸಾ ವಾರ್ತಾ

Rarest Archive

ಚ ತಯಾ, ಹರಿವತ್ (ಸೂರ್ಯವತ್) ತಿಗ್ಮೇನ ಚಕ್ರೇಣ ಲಸಿತಃ, ಹರಿ = ಕಪಿ ಸೂರ್ಯ, ಪುಣ್ಯಾಶ್ಚ ತೇ ಜನಾಶ್ಚ, ಪುಣ್ಯಜನ್ಯೈಃ ಸೇವಿತಂ ತತ್,

ಕ್ರಿ.—ಪ್ರಿಯಯತೌ ಸರ್ಗ ೫ ಶ್ಲೋಕ ೮ ನೋಡಿರಿ.

ಅವ.—ರಾಮಕೃಷ್ಣಾವತಾರಗಳ ಕಥೆಯನ್ನೇ ಮತ್ತೂ ವರ್ಣಿಸುತ್ತಾರೆ—

ಪೃಥುಕುಂಭಕರ್ಣಗಜರಾಜಮುದ್ಧತಂ
ಸಸಹೋದರಂ ಸವಿಬುಧೇಂದ್ರಶಾತ್ರವಂ।
ಧರಣೀಭರಂ ಪೃಥುಲಚಕ್ರಮಕ್ಷಿಣೋ -
ನ್ನಿಶಿತೇಷುಚಕ್ರಕೃತವಿಕ್ರಮಃ ಪ್ರಭುಃ ॥೩೩॥

ಅ.ಅ.—ನಿಶಿತ = ಹರಿತವಾದ, ಇಷು = ಬಾಣಗಳ, ಚಕ್ರ = ಸಮೂಹದಿಂದ, ಕೃತವಿಕ್ರಮಃ = ಮಾಡಲ್ಪಟ್ಟ ಪರಾಕ್ರಮವುಳ್ಳ, ಪ್ರಭುಃ = ಸಮರ್ಥನಾದ ಶ್ರೀರಾಮನು, ಉದ್ಧತಂ = ಬಲದಿಂದ ಕೊಬ್ಬಿದ, ಸಸಹೋದರಂ = ಅಣ್ಣ ರಾವಣನಿಂದ ಸಹಿತನಾದ, ಸವಿಬುಧೇಂದ್ರಶಾತ್ರವಂ = ಇಂದ್ರನ ಶತ್ರುವಾದ ಇಂದ್ರಜಿತುವಿನಿಂದ ಸಹಿತನಾದ, ಪೃಥು = ದಪ್ಪನಾಗಿರುವ, ಕುಂಭಕರ್ಣಗಜರಾಜಂ = ಕುಂಭಕರ್ಣನೆಂಬ ಶ್ರೇಷ್ಠವಾದ ಆನೆಯನ್ನು, ಅಕ್ಷಿಣೋತ್ = ಕೊಂದನು.

ಮತ್ತು—ನಿಶಿತೇಷು = ಹರಿತವಾದ ಬಾಣಗಳು, ಚಕ್ರ = ಸುದರ್ಶನ ಚಕ್ರ ಇವುಗಳಿಂದ, ಕೃತವಿಕ್ರಮಃ = ಮಾಡಲ್ಪಟ್ಟಪರಾಕ್ರಮವುಳ್ಳ, ಪ್ರಭುಃ = ಸಮರ್ಥನಾದ ಶ್ರೀಕೃಷ್ಣನು, ಪೃಥು = ವಿಶಾಲವಾದ, ಕುಂಭ = ಕುಂಭಸ್ಥಳಗಳು, ಕರ್ಣ = ಕಿವಿಗಳು ಇವುಗಳುಳ್ಳ, ಗಜರಾಜಂ = ಶ್ರೇಷ್ಠವಾದ ಆನೆಗಳುಳ್ಳ, ಉದ್ಧತಂ = ಕೊಬ್ಬಿದ, ಸಸಹೋದರಂ = ವೇಗದಿಂದ ಸಹಿತವಾಗಿ ಹೆದರಿಕೆ ಇಲ್ಲದ, ಸವಿಬುಧೇಂದ್ರಶಾತ್ರವಂ = ದೇವತೆಗಳ ಶತ್ರುಗಳಾದ ದೈತ್ಯರಿಂದ ಸಹಿತವಾದ, ಧರಣೀಭರಂ = ಭೂಮಿಗೆ ಭಾರವಾದ, ಪೃಥುಲಚಕ್ರಂ = ಕೌರವನ ದೊಡ್ಡ ಸೈನ್ಯವನ್ನು, ಅಕ್ಷಿಣೋತ್ = ಕೊಂದನು.

ತಾ.—ರಾಮಪಕ್ಷ—ಸರ್ವಸಮರ್ಥನಾದ ಶ್ರೀರಾಮನು ತನ್ನ ಪರಾಕ್ರಮವನ್ನು ಪ್ರಕಟಿಸುತ್ತಾ ಹರಿತವಾದ ಬಾಣಗಳ ಸಮೂಹದಿಂದ, ಆನೆಯಂತಿರುವ

Rarest Archiver

ದೊಡ್ಡ ಕುಂಭಕರ್ಣನನ್ನೂ, ಇಂದ್ರವೈರಿಯಾದ ಇಂದ್ರಜಿತುವನ್ನೂ, ಕುಂಭಕರ್ಣನ ಅಣ್ಣನಾದ ರಾವಣನನ್ನೂ, ಮತ್ತು ಭೂಮಿಗೆ ಭಾರದಂತಿರುವ ದುಷ್ಟ ರಾಕ್ಷಸರ ಹಿಂಡನ್ನೂ ಸಂಹರಿಸಿದನು.

ಕೃಷ್ಣಪಕ್ಷ—ಸರ್ವಸಮರ್ಥನಾದ ಶ್ರೀಕೃಷ್ಣನು ಅರ್ಜುನಾದಿಗಳಲ್ಲಿ ತಾನೇ ನಿಂತು ಹರಿತವಾದ ಬಾಣಗಳಿಂದಲೂ, ಭೀಷ್ಮಾಚಾರ್ಯರ ಮೇಲೆ ಸಿಟ್ಟುಮಾಡಿದಾಗ ತಾನೇ ಸುದರ್ಶನಚಕ್ರವನ್ನು ಹಿಡಿದೂ ಪರಾಕ್ರಮವನ್ನು ಪ್ರಕಟಗೊಳಿಸಿದನು. ದೊಡ್ಡ ಕುಂಭಸ್ಥಳಗಳೂ, ಕಿವಿಗಳೂ ಇರುವ ಕೌರವರ ಸೈನ್ಯದ ಆನೆ ಹಿಂಡುಗಳನ್ನೂ, ಇತರ ಅನೇಕ ದುರಹಂಕಾರಿಗಳಾದ ಮನುಷ್ಯರೂಪದ ದೈತ್ಯರನ್ನೂ ಸಂಹರಿಸಿದನು. ಕೌರವನ ಸೈನ್ಯವು ಬಲಿಷ್ಠವಾಗಿ ಭಯವಿಲ್ಲದೆ ಇದ್ದಿತು. ಅಂತಹ ಭೂಮಿಗೆ ಭಾರವಾದ ಬಹಳವಾದ ಸೈನ್ಯವನ್ನೂ ಶ್ರೀಕೃಷ್ಣನು ಭೀಮಸೇನ ಅರ್ಜುನಾದಿಗಳ ಮೂಲಕ ನಾಶಗೊಳಿಸಿದನು.

ವಿ.—ನಿಶಿತಾಶ್ಚ ತೇ ಇಷವಶ್ಚ, ನಿಶಿತೇಷೂಣಾಂ ಚಕ್ರಂ, ನಿಶಿತೇಷು ಚಕ್ರೇಣ ಕೃತಃ ವಿಕ್ರಮಃ ಯೇನ ಸಃ, ಪೃಥುಶ್ಚಾಸೌ ಕುಂಭಕರ್ಣಶ್ಚ, ಪೃಥು-ಕುಂಭಕರ್ಣ ಏವ ಗಜರಾಜಃ ತಂ, ಸಹೋದರೇಣ ಸಹ ವರ್ತತೇ ಇತಿ ಸಸಹೋದರಃ ತಂ, ವಿಬುಧಾನಾಂ ಇಂದ್ರಃ ವಿಬುಧೇಂದ್ರಸ್ಯ ಶಾತ್ರವಃ, ವಿಬುಧೇಂದ್ರಶಾತ್ರವೇಣ ಸಹ ವರ್ತತೇ ಇತಿ ಸವಿಬುಧೇಂದ್ರಶಾತ್ರವಃ ತಂ, ಧರಣ್ಯಾಃ ಭರಃ ತಂ, ಪೃಥುಲಂ ಚಕ್ರಂ ಯಸ್ಯ ಸಃ ತಂ,

ಕೃಷ್ಣ—ನಿಶಿತೇಷವಶ್ಚ ಚಕ್ರಂ ಚ, ನಿಶಿತೇಷುಚಕ್ರೈಃ ಕೃತಃ ವಿಕ್ರಮಃ ಯೇನ ಸಃ, ಸಹಸಾ ಸಹಿತಂ ಸಸಹಃ ತತ್, ನ ವಿದ್ಯತೇ ದರಃ ಯಸ್ಯ, ತತ್, ಸಹಃ = ಬಲ, ಸಹೋ ಬಲಂ ಸಹಾ ಮಾರ್ಗಃ,-ದರ-ಭಯ, ದರೋऽಸ್ತ್ರಿಯಾಂ ಭಯೇ ಶ್ವಭ್ರೇ—ಅಮರ. ಕುಂಭಾಶ್ಚ ಕರ್ಣಾಶ್ಚ ಪೃಥವಃ ಕುಂಭಕರ್ಣಾಃ ಯೇಷಾಂ, ಗಜಾನಾಂ ರಾಜಾನಃ (ಗಜರಾಜಾಃ), ಪೃಥುಕುಂಭಕರ್ಣಾಃ ಗಜ-ರಾಜಾಃ ಯಸ್ಮಿನ್, ತತ್, ವಿ ಬು ಧಾ ನಾ ಂ ಇಂದ್ರಾಃ (ದೇವಶ್ರೇಷ್ಠಾಃ) ವಿಬುಧೇಂದ್ರಾಣಾಂ ಶಾತ್ರವಾಃ ವಿಬುಧೇಂದ್ರಶಾತ್ರವೈಃ ಸಹವರ್ತತೇ ಇತಿ ತಂ, ಪೃಥುಲಂ ಚ, ತತ್, ಚಕ್ರಂ ಚ, ತತ್.

Rarest Archiver

ಕ್ರಿ.—ಅಕ್ಷಿಣೋತ್ ಅಕ್ಷೇಣೋತ್ ಅಕ್ಷಿಣುತಾಂ ಅಕ್ಷಿಣ್ವನ್, ಅಕ್ಷಿಣೋಃ ಅಕ್ಷೇಣೋಃ ಅಕ್ಷಿಣುತಂ ಅಕ್ಷಿಣುತ, ಅಕ್ಷಿಣವಂ ಅಕ್ಷೇಣವಂ ಅಕ್ಷಿಣುವ ಅಕ್ಷಿಣ್ವ ಅಕ್ಷೇಣುವ ಅಕ್ಷೇಣ್ವ ಅಕ್ಷಿಣುಮ ಅಕ್ಷಿಣ್ಮ, ಅಕ್ಷೇಣುಮ ಅಕ್ಷೇಣ್ಮ. ಕ್ಷಿಣು (ಕ್ಷಿಣ್)=ಹಿಂಸಾಯಾಂ। ಸಕ.। ಸೇಟ್.। ಉಭ.। to kill.

ಅವ.—ರಾಮಕೃಷ್ಣಾವತಾರಗಳ ವರ್ಣನೆಯನ್ನು ಉಪಸಂಹರಿಸುತ್ತಾರೆ—

ಅಥ ಭಾರ್ಯಯಾ ಹುತವಹಂ ಪ್ರವಿಷ್ಟಯಾ
ಸಹಿತಃ ಸಹೋದರಪುರಸ್ಸರೈರಪಿ ।
ಅಯಮಾಪ್ಯ ಧಾಮ ಚಿರಮಿಷ್ಟದಸ್ಸತಾಂ
ನಿಜಮೂಲರೂಪಪರಮೈಕ್ಯಮೇಯಿವಾನ್ ॥೩೪॥

ಅ.ಅ—ಅಥ = ಕುಂಭಕರ್ಣಮೊದಲಾದವರನ್ನು ಕೊಂದತರುವಾಯ, ಹುತವಹಂ=ಅಗ್ನಿಯನ್ನು, ಪ್ರವಿಷ್ಟಯಾ = ಪ್ರವೇಶಮಾಡಿದ, ಭಾರ್ಯಯಾ = ಹೆಂಡತಿಯಾದ ಸೀತೆಯಿಂದ, ಸಹೋದರಪುರಸ್ಸರೈಃ ಅಪಿ = ಲಕ್ಷ್ಮಣ ಮೊದಲಾದವರಿಂದಲೂ, ಸಹಿತಃ = ಕೂಡಿದವನಾಗಿ, ಧಾಮ = ವಾಸಸ್ಥಾನವಾದ ಅಯೋಧ್ಯೆಯನ್ನು, ಆಪ್ಯ = ಹೊಂದಿ, ಚಿರಂ=ಬಹಳಕಾಲ, ಸತಾಂ=ಸಜ್ಜನರಿಗೆ, ಇಷ್ಟದಃ = ಅಭೀಷ್ಟಪ್ರದನಾದ, ಅಯಂ = ಈ ಶ್ರೀರಾಮನು, ನಿಜ = ತನ್ನ, ಮೂಲರೂಪ = ಮೂಲರೂಪವಾದ ವಿಷ್ಣುರೂಪದಿಂದ, ಪರಮೈಕ್ಯಂ = ಅತ್ಯಂತಾಭೇದವನ್ನು, ಏಯಿವಾನ್ = ಹೊಂದಿದನು.

ಮತ್ತು—ಅಥ = ಕೌರವಸೈನ್ಯವನ್ನು ನಾಶಗೊಳಿಸಿದ ತರುವಾಯ, ಚಿರಂ = ಬಹುಕಾಲ, ಸತಾಂ ಇಷ್ಟದಃ=ಸಜ್ಜನರಿಗೆ ಹಿತವನ್ನುಂಟುಮಾಡುವ, ಅಯಂ = ಈ ಶ್ರೀಕೃಷ್ಣನು, ಹುತವಹಂ ಪ್ರವಿಷ್ಟಯಾ = ಅಗ್ನಿಯನ್ನು ಪ್ರವೇಶಿಸಿದ, ಭಾರ್ಯಯಾ = ಹೆಂಡತಿಯಾದ ರುಕ್ಮಿಣಿಯಿಂದ, ಸಹೋದರಪುರಸ್ಸರೈಃ ಅಪಿ = ಅಣ್ಣ ಬಲರಾಮಮೊದಲಾದವರಿಂದಲೂ, ಸಹಿತಃ = ಕೂಡಿದವನಾಗಿ, ಧಾಮ = ವೈಕುಂಠಲೋಕವನ್ನು, ಆಪ್ಯ = ಸೇರಿ, ನಿಜಮೂಲರೂಪ ಪರಮೈಕ್ಯಂ = ತನ್ನ ಮೂಲರೂಪದಿಂದ ಅತ್ಯಂತಾಭೇದವನ್ನು, ಏಯಿವಾನ್ = ಹೊಂದಿದನು.

ತಾ.—**ರಾಮಪಕ್ಷ**—ರಾವಣಸಂಹಾರವಾದ ಮೇಲೆ ಶ್ರೀರಾಮಚಂದ್ರನು,

Rarest Archiver

ಪಾತಿವ್ರತ್ಯಪರೀಕ್ಷೆಗಾಗಿ ಅಗ್ನಿಯಲ್ಲಿ ಪ್ರವೇಶಿಸಿದ ಪತ್ನಿಯಾದ ಸೀತಾದೇವಿಯಿಂದಲೂ, ಲಕ್ಷ್ಮಣ, ಹನುಮಂತ, ಸುಗ್ರೀವ, ಅಂಗದ, ಜಾಂಬವಂತ, ವಿಭೀಷಣ ಮುಂತಾದವರಿಂದಲೂ ಕೂಡಿಕೊಂಡು ತನ್ನ ಅಯೋಧ್ಯಾಪಟ್ಟಣಕ್ಕೆ ಬಂದು ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗಿ ಬಹುಕಾಲ ಧರ್ಮದಿಂದ ರಾಜ್ಯವನ್ನಾಳಿದನು. ಅವನು ಅನೇಕ ಸಜ್ಜನರಿಗೆ ಅಭೀಷ್ಟವನ್ನು ಕೊಡುತ್ತಾ ಅವತಾರ ಕಾರ್ಯವು ಮುಗಿದ ಮೇಲೆ ತನ್ನ ಮೂಲರೂಪದಲ್ಲಿಯೇ ಸೇರಿಕೊಂಡನು. (ಸೀತಾದೇವಿಯ ಅಗ್ನಿಪ್ರವೇಶವೆಂದರೆ ಸೀತೆಯ ಪ್ರತಿಕೃತಿಯು ಅಗ್ನಿಯನ್ನು ಪ್ರವೇಶಿಸಿದ ಕೂಡಲೇ ಕೈಲಾಸದಲ್ಲಿ ವಾಸಿಸುತ್ತಿದ್ದ ನಿಜವಾದ ಸೀತೆಯು ಅಗ್ನಿಕುಂಡದಿಂದ ಮೇಲಕ್ಕೆ ಬಂದಿರುವುದೇ ಆಗಿದೆ.)

ಕೃಷ್ಣಪಕ್ಷ—ಶ್ರೀಕೃಷ್ಣನು ಬಹುಕಾಲ ಸಜ್ಜನರಿಗೆ ಇಷ್ಟಪ್ರದನಾಗಿ ಭೂಮಿಗೆ ಭಾರವಾಗಿರುವ ದುಷ್ಟದೈತ್ಯರನ್ನು ಕೊಂದು ತನ್ನ ಅವತಾರಕಾರ್ಯವು ಮುಗಿದ ಕೂಡಲೇ ವೈಕುಂಠಕ್ಕೆ ಹೋಗಿ ತನ್ನ ಮೂಲರೂಪದಲ್ಲಿ ಸೇರಿಕೊಂಡನು. ರುಕ್ಮಿಣೀದೇವಿಯೂ ಮೂಢರಿಗೆ ಭ್ರಾಂತಿಯನ್ನು ಹುಟ್ಟಿಸುವುದಕ್ಕಾಗಿ ಅಗ್ನಿಯಲ್ಲಿ ಪ್ರವೇಶಿಸಿ ತನ್ನ ದೇಹವನ್ನು ಬಿಟ್ಟಂತೆ ತೋರಿಸಿದಳು. (ತನ್ನ ಮೂಲರೂಪವನ್ನು ಸೇರಿಕೊಂಡಳು) ಬಲರಾಮನೇ ಮೊದಲಾದ ಎಲ್ಲಾ ಯಾದವರೂ ತಮ್ಮ ದೇಹವನ್ನು ಬಿಟ್ಟು ಶ್ರೀಕೃಷ್ಣನ ಜೊತೆಗೇ ಹೋದರು. ಭೂಭಾರಪರಿಹಾರಕಾರ್ಯವು ಮುಗಿದಮೇಲೆ ಇನ್ನು ಮುಂದೆ ಕಲಿಯುಗವು ಬರಬೇಕಾದುದರಿಂದ ಯಾದವರಾಗಿ ಅವತಾರಮಾಡಿದ್ದ ದೇವತೆಗಳು ಇನ್ನು ಮುಂದೆ ಭೂಮಿಯಲ್ಲಿ ಇರಬಾರದೆಂದು ನಿಶ್ಚಯಿಸಿ ಶ್ರೀಕೃಷ್ಣನು ಅವರಲ್ಲಿ ಪರಸ್ಪರ ವೈರವನ್ನು ಹುಟ್ಟಿಸಿ ಅನ್ಯೋನ್ಯವಾಗಿ ಹೊಡೆದುಕೊಂಡು ಸಾಯುವಂತೆ ಮಾಡಿದನು. ತಾನೂ ವೈಕುಂಠಕ್ಕೆ ಹೋದನು.

ವಿ.—ಸಹೋದರಃ ಪುರಸ್ಸರಃ ಯೇಷಾಂ ತೇ ತೈಃ, ಇಷ್ಟಂ ದದಾತೀತಿ, ಏಕಸ್ಯ ಭಾವಃ ಐಕ್ಯಂ, ಪರಮಂ ಚ ತತ್ ಐಕ್ಯಂ ಚ, ಮೂಲಂ ಚ ತತ್ ರೂಪಂ ಚ, ನಿಜಂ ಚ ತತ್ ಮೂಲರೂಪಂ ಚ, ನಿಜಮೂಲರೂಪೇಣ ಪರಮೈಕ್ಯಂ, ತತ್, ಏಯಿವಸ್ ಸಾಂತ, ಏಯಿವಾನ್ ಏಯಿವಾಂಸೌ ಏಯಿವಾಂಸಃ ಕೃದಂತ, ಇದು ಕ್ರಿಯಾಪದದ ಅರ್ಥವನ್ನು ಕೊಡುತ್ತದೆ.

Rarest Archiver

ಅವ.—ಮಹಿದಾಸ ಮತ್ತು ಕಲ್ಕಿ ಅವತಾರಗಳನ್ನೂ ಎರಡರ್ಥದ ಶಬ್ದ ಗಳಿಂದ ಒಂದೇ ಶ್ಲೋಕದಿಂದ ವರ್ಣಿಸುತ್ತಾರೆ—

ಮಹಿದಾಸಪೂಜ್ಯಚರಣೋ ದ್ವಿಜಾದಭೂದ್
ವಿದಿತಾತ್ ಸ ವಿಷ್ಣುಯಶಸೋಽಮಲಾತ್ಮನಃ ।
ಇಹ ಯೋ ದಧೇ ಜಗತಿ ಪಾಪಶಾಂತಯೇ
ಬಹುಧಾಮಹೇತಿಮತಿದೀಪ್ತಗೋಸ್ಥಿತಿಂ ॥೩೫॥

ಅ.ಅ—ಮಹಿದಾಸ—ಸಃ = ಆ ನಾರಾಯಣನು, ವಿಷ್ಣುಯಶಸಃ = ವಿಷ್ಣುವಿನ ಕೀರ್ತಿಯನ್ನು ಕೇಳುವುದೇ ಮೊದಲಾದುದರಿಂದ, ಅಮಲಾತ್ಮನಃ = ನಿರ್ಮಲವಾದ ಮನಸ್ಸುಳ್ಳ, ವಿದಿತಾತ್ ದ್ವಿಜಾತ್ = ಪ್ರಸಿದ್ಧನಾದ ಬ್ರಾಹ್ಮಣನ ದೆಸೆಯಿಂದ, (ಇತರಾದೇವಿಯಲ್ಲಿ) ಮಹಿದಾಸಪೂಜ್ಯಚರಣಃ = ಮಹಿದಾಸನೆಂಬ ಭಗವತ್ಪಾದಾಚಾರ್ಯನಾಗಿ, ಅಭೂತ್ = ಅವತಾರಮಾಡಿದನು. ಯಃ=ಯಾವ ಮಹಿದಾಸನು, ಮಹೇತಿಮತಿ = ಹೆಚ್ಚಾದ ಈತಿ ಬಾಧೆಗಳುಳ್ಳ (ಉಪದ್ರವ ಗಳುಳ್ಳ), ಇಹ ಜಗತಿ = ಈ ಪ್ರಪಂಚದಲ್ಲಿ, ಪಾಪಶಾಂತಯೇ = ಪಾಪಪರಿಹಾರ ಕ್ಕಾಗಿ, ಬಹುಧಾ = ಬಹಳವಾಗಿ, ದೀಪ್ತಗೋಸ್ಥಿತಿಂ = ಸ್ಪಷ್ಟವಾದ, ವೈಷ್ಣವ-ತಂತ್ರಶಾಸ್ತ್ರರೂಪವಾದ ಮಾತುಗಳ ಸ್ಥಿತಿಯನ್ನು, ದಧೇ = ಮಾಡಿದನು.

ಮತ್ತು—ಸಃ = ಆ ನಾರಾಯಣನು, ವಿದಿತಾತ್ = ಪ್ರಸಿದ್ಧನಾದ, ಅಮಲಾತ್ಮನಃ = ಶುದ್ಧಮನಸ್ಸುಳ್ಳ, ವಿಷ್ಣುಯಶಸಃ, ದ್ವಿಜಾತ್=ವಿಷ್ಣುಯಶಸ್ ಎಂಬ ಬ್ರಾಹ್ಮಣನಿಂದ, ಅಭೂತ್ = ಕಲ್ಕಿಯಾಗಿ ಅವತರಿಸಿದನು. ಮಹಿದಾಸ ಪೂಜ್ಯಚರಣಃ = ಬ್ರಹ್ಮಾದಿದೇವತೆಗಳಿಂದ ಪೂಜ್ಯವಾದ ಪಾದಗಳುಳ್ಳ, ಯಃ ಯಾವ ಕಲ್ಕಿಯು, ಇಹ ಜಗತಿ = ಈ ಪ್ರಪಂಚದಲ್ಲಿ, ಪಾಪಶಾಂತಯೇ = ಪಾಪಾತ್ಮರಾದ ಕಳ್ಳರನ್ನು ದಂಡಿಸಲು, ಅತಿದೀಪ್ತಗೋಸ್ಥಿತಿಂ = ಅತ್ಯಂತ ಪ್ರಕಾಶಮಾನವಾದ ವಜ್ರದ ರೀತಿಯುಳ್ಳ, ಬಹುಧಾಮಹೇತಿಂ = ಹೆಚ್ಚು ಪ್ರಕಾಶವುಳ್ಳ ಕತ್ತಿಯನ್ನು, ದಧೇ = ಧರಿಸಿದನು. (ಪ್ರಯೋಗಿಸಿದನು.)

ತಾ.— ಮಹಿದಾಸಾವತಾರ — ಷಡ್ಗುಣೈಶ್ವರ್ಯಪರಿಪೂರ್ಣನಾದ ಶ್ರೀಮನ್ನಾರಾಯಣನು ಶ್ರೀಹರಿಯ ಕೀರ್ತಿಕಥೆಯನ್ನು ಭಕ್ತಿಯಿಂದ ಕೇಳುವುದ

Rarest Archiver

ರಿಂದ ನಿರ್ಮಲವಾದ ಮನಸ್ಸುಳ್ಳ ಪ್ರಸಿದ್ಧನಾದ ಬ್ರಾಹ್ಮಣಶ್ರೇಷ್ಠನಿಂದ, ಇತರಾ ದೇವಿಯಲ್ಲಿ, ಮಹಿದಾಸನೆಂಬ ಹೆಸರುಳ್ಳ ಪೂಜ್ಯಸ್ವರೂಪನಾದ ಆಚಾರ್ಯನಾಗಿ ಅವತರಿಸಿದನು. ಅವನು ಅನೇಕವಿಧವಾದ ತಾಪಗಳುಳ್ಳ ಈ ಜಗತ್ತಿನಲ್ಲಿ ಭಕ್ತರ ಪಾಪಪರಿಹಾರಕ್ಕಾಗಿ ಅನೇಕರೀತಿಯಿಂದ ವೈಷ್ಣವತಂತ್ರಶಾಸ್ತ್ರವನ್ನು ನಿರ್ಮಿಸಿದನು. ಶ್ರೀಹರಿಯು ಮಹಿದಾಸನಾಗಿ ಅವತಾರ ಮಾಡಿ ವೈಷ್ಣವಶಾಸ್ತ್ರವನ್ನು ನಿರ್ಮಾಣಮಾಡಿ ಸಜ್ಜನರಿಗೆ ಜ್ಞಾನಮಾರ್ಗವನ್ನು ತೋರಿದನು ಎಂದು ಭಾವ.

ಕಲ್ಕ್ಯವತಾರ—ಈ ಭಗವಂತನು ಪ್ರಸಿದ್ಧನಾದ ನಿರ್ಮಲಮನಸ್ಸುಳ್ಳ ವಿಷ್ಣುಯಶನೆಂಬ ಬ್ರಾಹ್ಮಣನಿಂದ ಕಲ್ಕಿಯೆಂಬ ಹೆಸರಿನಿಂದ ಅವತರಿಸಿದನು. ಆಗ ಬ್ರಹ್ಮಾದಿದೇವತೆಗಳು ಸಂತುಷ್ಟರಾಗಿ ಇವನ ಪಾದಗಳನ್ನು ಪೂಜಿಸಿದರು. ಈ ಕಲ್ಕಿಯು ಜಗತ್ತಿನಲ್ಲಿರುವ ಪಾಪಿಷ್ಠರ ಸಂಹಾರಕ್ಕಾಗಿ ವಜ್ರಾಯುಧದಂತೆ ಪ್ರಕಾಶಿಸುವ ಅತ್ಯಂತತೇಜಸ್ಸುಳ್ಳ ಖಡ್ಗವನ್ನು ಧರಿಸಿದನು. ವಿಷ್ಣುಯಶನೆಂಬ ಬ್ರಾಹ್ಮಣನ ಮಗನೇ ಕಲ್ಕಿಯು. ಇವನು ಧರ್ಮವನ್ನು ಕೆಡಿಸಿದ ಮ್ಲೇಚ್ಛರನ್ನು ಖಡ್ಗದಿಂದ ಸಂಹರಿಸಿದನು. ಆಗ ಬ್ರಹ್ಮಾದಿಗಳು ಉತ್ಸವವನ್ನು ಮಾಡುತ್ತಾ ಆತನ ಪಾದಗಳನ್ನು ಸೇವಿಸಿದರು.

ವಿ.—ಮಹಿದಾಸ ಇತಿ ಪೂಜ್ಯಚರಣಃ, ವಿಷ್ಣೋಃ ಯಶಃ ತಸ್ಮಾತ್, ಅಮಲಃ ಆತ್ಮಾ ಯಸ್ಯ ತಸ್ಮಾತ್, ಪಾಪಾನಾಂ ಶಾಂತಿಃ ತಸ್ಯೈ, ಮಹತೀ ಚ ಸಾ ಈತಿಶ್ಚ, ಮಹೇತಿಃ ಅಸ್ಮಿನ್ ಅಸ್ತೀತಿ, ತಸ್ಮಿನ್, (ಜಗತಿ) ದೀಪ್ತಾಶ್ಚ ತಾಃ ಗಾವಶ್ಚ ದೀಪ್ತಗವಾಂ ಸ್ಥಿತಿಃ ತಾಂ, ಬಹುಧಾ, ಮಹೇತಿಮತಿ, ದೀಪ್ತಗೋಸ್ಥಿತಿಂ ಎಂದು ಪದಚ್ಛೇದ.

ಮಹಃ ಏಷಾಂ ಅಸ್ತೀತಿ ಮಹಿನಃ ಮಹಿನಶ್ಚ ತೇ ದಾಸಾಶ್ಚ, ಮಹಿದಾಸೈಃ ಪೂಜ್ಯೌ ಚರಣೌ ಯಸ್ಯ ಸಃ, ಅತಿದೀಪ್ತಸ್ಯ ಗೋಃ ಸ್ಥಿತಿಃ ಯಸ್ಯಾಂ ಸಾ ತಾಂ, ಬಹು ಧಾಮ ಯಸ್ಯಾಃ ಸಾ, ಬಹುಧಾಮಾ ಚ ಸಾ ಹೇತಿಶ್ಚ ತಾಂ; ಬಹುಧಾಮಹೇತಿಂ, ಅತಿದೀಪ್ತಗೋಸ್ಥಿತಿಂ.

ಕ್ರಿ.—ಅಭೂತ್, ಸರ್ಗ ೬ ಶ್ಲೋಕ ೨೧ ನೋಡಿರಿ. ದಧೇ ಸರ್ಗ ೭ ಶ್ಲೋಕ ೩೨ ನೋಡಿರಿ.

Rarest Archiver

ಅವ.—ಯಜ್ಞಾವತಾರ ಮತ್ತು ಕಪಿಲಾವತಾರಗಳೆರಡನ್ನೂ ವರ್ಣಿಸುತ್ತಾರೆ—

ಸುತಪೋರುಚೇರಯಮಪಾಪಕರ್ದಮಾ-
ನ್ನನು ಮಾನವೀತನಯತಾಮುಪೇಯಿವಾನ್ ।
ಸಮಯೇನ ಭೂರಿತರನಿಜಭಕ್ತಿಪೂರಿತಾನ್
ಸಮಜೀಜನತ್ ಸುಮನಸಃ ಸ ದೇವರಾಟ್ ॥೩೬॥

ಅ.ಅ.—ಅಯಂ = ಈ ನಾರಾಯಣನು, ಅಪಾಪಕರ್ದಮಾತ್ = ಪಾಪವೆಂಬಕೆಸರಿಲ್ಲದ, ಸುತಪೋರುಚೇಃ = ಒಳ್ಳೆಯ ತಪಸ್ಸುಳ್ಳ ರುಚಿಪ್ರಜಾಪತಿಯಿಂದ, ಮಾನವೀತನಯತಾಂ=ಸ್ವಯಂಭೂಮನುವಿನ ಮಗಳಾದ ಆಕೂತಿಯು, ಮಗನಾಗುವಿಕೆಯನ್ನು, ಉಪೇಯಿವಾನ್ ನನು = ಹೊಂದಿದ ನಷ್ಟೆ. ಸಃ = ರುಚಿಪ್ರಜಾಪತಿಯ ಮಗನಾದ ಯಜ್ಞನೆಂಬ ಪರಮಾತ್ಮನು, ಸಮಯೇನ = ಕಾಲಾಂತರದಲ್ಲಿ, ದೇವರಾಟ್ = ದೇವೇಂದ್ರನಾಗಿ, ಭೂರಿನಿಜಭಕ್ತಿಪೂರಿತಾನ್ = ಬಹಳವಾದ ತನ್ನಲ್ಲಿರುವ ಭಕ್ತಿಯಿಂದ ತುಂಬಿದ, ಸುಮನಸಃ ದೇವತೆಗಳನ್ನು, ಅಜೀಜನತ್ = ದಕ್ಷಿಣೆಯೆಂಬ ಲಕ್ಷ್ಮಿಯಲ್ಲಿ ಉಂಟುಮಾಡಿದನು.

ಮತ್ತು—ಅಯಂ = ಈ ನಾರಾಯಣನು, ಸುತಪೋರುಚೇಃ = ಒಳ್ಳೆಯ ತಪಸ್ಸಿನಲ್ಲಿ ಅಭಿಲಾಷೆಯುಳ್ಳ, ಅಪಾಪಕರ್ದಮಾತ್ = ಪಾಪವಿಲ್ಲದ ಕರ್ದಮ ಪ್ರಜಾಪತಿಯಿಂದ, ಮಾನವೀತನಯತಾಂ=ಮನುವಿನ ಮಗಳಾದ ದೇವಹೂತಿಯು ಮಗನಾಗುವಿಕೆಯನ್ನು, ಉಪೇಯಿವಾನ್ ನನು = ಹೊಂದಿದನಷ್ಟೆ! ದೇವರಾಟ್ ಸಃ = ದೇವೋತ್ತಮನಾದ ಆ ಪರಮಾತ್ಮನು ಕಪಿಲನಾಗಿ, ಸುಮನಸಃ = ಒಳ್ಳೆ ಮನಸ್ಸುಳ್ಳ, ದೇವತೆಗಳು, ಮುನಿಗಳು ಮೊದಲಾದ ಸಜ್ಜನರನ್ನು, ಸಮಯೇನ = ತಾನು ಮಾಡಿದ ಸಾಂಖ್ಯಶಾಸ್ತ್ರದಿಂದ, ಭೂರಿ = ಬಹಳವಾದ, ನಿಜಭಕ್ತಿ = ತನ್ನಲ್ಲಿರುವ ಭಕ್ತಿಯಿಂದ, ಪೂರಿತಾನ್ = ತುಂಬಿದವರನ್ನಾಗಿ, ಸಮಜೀಜನತ್ = ಉಂಟುಮಾಡಿದನು.

ತಾ.—ಯಜ್ಞಾವತಾರ—ಈ ನಾರಾಯಣನು ಕೆಸರಿನಂತಹ ಪಾಪಗಳ ಸಂಪರ್ಕವಿಲ್ಲದ, ತಪಸ್ವಿಯಾದ ರುಚಿಪ್ರಜಾಪತಿಯಿಂದ ಸ್ವಾಯಂಭುವಮನುವಿನ

Rarest Archiver

ಮಗಳಾದ ಆಕೂತಿದೇವಿಯ ಮಗನಾಗಿ **ಯಜ್ಞ**ನೆಂಬ ಹೆಸರಿನಿಂದ ಅವತರಿಸಿದನು. ಅವನು ದೇವೇಂದ್ರನಾಗಿ ಸ್ವರ್ಗಾಧಿಪತ್ಯವನ್ನೂ ವಹಿಸಿದನು. ಲಕ್ಷ್ಮೀಸ್ವರೂಪಳಾದ **ದಕ್ಷಿಣಾ** ಎಂಬ ತನ್ನ ಪತ್ನಿಯಲ್ಲಿ ತನ್ನಲ್ಲಿ ಬಹಳ ಭಕ್ತಿಯುಳ್ಳ ದೇವತೆಗಳನ್ನು ಮಕ್ಕಳನ್ನಾಗಿ ಪಡೆದನು. ಯಜ್ಞಾವತಾರ ಮಾಡಿ ಸ್ವರ್ಗಾಧಿಪತಿಯಾಗಿ ದಕ್ಷಿಣಾದೇವಿಯಲ್ಲಿ ದೇವತೆಗಳನ್ನೇ ಮಕ್ಕಳನ್ನಾಗಿ ಪಡೆದನು ಎಂದು ಭಾವ.

ಕಪಿಲಾವತಾರ—ತಪಸ್ಸಿನಲ್ಲಿ ಅತಿಪ್ರೀತಿಯುಳ್ಳ ಪಾಪಸಂಪರ್ಕವಿಲ್ಲದ ಕರ್ದಮಪ್ರಜಾಪತಿಗೆ ಸ್ವಾಯಂಭುವಮನುವಿನ ಮಗಳಾದ ದೇವಹೂತಿಯು ಹೆಂಡತಿಯಾಗಿದ್ದಳು. ಈ ದಂಪತಿಗಳಿಗೆ ಶ್ರೀಹರಿಯು **ಕಪಿಲ**ನೆಂಬ ಹೆಸರಿನಿಂದ ಮಗನಾಗಿ ಅವತರಿಸಿದನು. ದೇವತೆಗಳಿಗೆ ಸ್ವಾಮಿಯಾದ ಆ ಕಪಿಲನು ಒಳ್ಳೆಯ ಮನಸ್ಸಿನ ದೇವತೆಗಳಿಗೂ ಮುನಿಗಳಿಗೂ ತಾನು ಮಾಡಿದ ಸಾಂಖ್ಯಶಾಸ್ತ್ರವನ್ನು ಉಪದೇಶಿಸಿ ತನ್ನಲ್ಲಿ ಬಹಳ ಭಕ್ತಿ ಹುಟ್ಟುವಂತೆ ಮಾಡಿದನು. ಕಪಿಲಾವತಾರದಲ್ಲಿ ಸಾಂಖ್ಯಶಾಸ್ತ್ರನಿರ್ಮಾಣ ಮಾಡಿ ದೇವತೆಗಳಿಗೂ ಮುನಿಗಳಿಗೂ ಉಪದೇಶಿಸಿದನೆಂದು ಭಾವ.

ವಿ.—ಪಾಪಂ ಏವ ಕರ್ದಮಃ, ನ ವಿದ್ಯತೇ ಪಾಪಕರ್ದಮಃ ಯಸ್ಯ ಸಃ ತಸ್ಮಾತ್, ಶೋಭನಂ ತಪಃ ಯಸ್ಯ, ಸುತಪಾಶ್ಚಾಸೌ ರುಚಿಶ್ಚ ತಸ್ಮಾತ್, ಮನೋಃ ಅಪತ್ಯಂ ಸ್ತ್ರೀ ಮಾನವೀ, ಮಾನವ್ಯಾಃ ತನಯಃ, ಮಾನವೀತನಯಸ್ಯ ಭಾವಃ ಮಾನವೀತನಯತಾ ತಾಂ, ಭೂರಿಶ್ಚ ಸಾ ನಿಜಾ ಚ ಸಾ ಭಕ್ತಿಶ್ಚ ಭೂರಿನಿಜಭಕ್ತ್ಯಾ ಪೂರಿತಾಃ ತಾನ್,

ಶೋಭನಂ ಚ ತತ್ ತಪಶ್ಚ ಸುತಪಸಿ ರುಚಿಃ ಯಸ್ಯ ತಸ್ಮಾತ್, ಸುಶೋಭನಂ ಮನಃ ಯೇಷಾಂ ತೇ ಸುಮನಸಃ ತಾನ್ ;

ಕ್ರಿ.—ಸಮ್ + ಅಜೀಜನತ್ ಅಜೀಜನತಾಂ ಅಜೀಜನನ್, ಅಜೀಜನಃ ಅಜೀಜನತಂ ಅಜೀಜನತ, ಅಜೀಜನಂ ಅಜೀಜನಾವ ಅಜೀಜನಾಮ ; ಜನೀ ಪ್ರಾದುರ್ಭಾವೇ ಣಿಜಂತಾತ್ ಲುಜ್.

ಅವ.—ಧನ್ವಂತರಿ ಮತ್ತು ಮೋಹಿನಿ ಅವತಾರಗಳೆರಡನ್ನೂ ವರ್ಣಿಸುತ್ತಾರೆ—

Rarest Archiver

ಸುಬೃಹತ್ಪಯೋಧರಮಿಥಃಪ್ರಸಂಹತಿ
ಪ್ರಕಟೀಭವತ್ಪರಮಯೌವನಾಕೃತಿಃ ।
ಅಸುರಾಹಿತಾಂ ವರವಿಲಾಸಿನೀತನುಃ
ಪ್ರದದಾವಮುಷ್ಯ ಸುರರಾಶಯೇ ಸುಧಾಂ ॥೩೭॥

ಅ.ಅ.—ಅಮುಷ್ಯ = ಈ ನಾರಾಯಣನ, ಸುಬೃಹತ್ = ಬಹಳ ಹೆಚ್ಚಾದ (ದೊಡ್ಡ) ಪಯಃ = ನೀರು, ಧರ=ಮಂದರ ಪರ್ವತ ಇವುಗಳ, ಮಿಥಃಪ್ರಸಂಹತಿ =ಪರಸ್ಪರಸಂಘರ್ಷದಿಂದ (ಕಡೆಯುವಿಕೆಯಿಂದ), ಪ್ರಕಟೀಭವತ್=ವ್ಯಕ್ತವಾದ, ಪರಮಯೌವನ = ಉತ್ತಮವಾದ ತಾರುಣ್ಯವುಳ್ಳ, ಆಕೃತಿಃ=ಆಕಾರವುಳ್ಳ, ವರ = ಉತ್ತಮವಾದ, ವಿಲಾಸಿನೀ = ಹಾವಭಾವವುಳ್ಳ, ತನುಃ = ಧನ್ವಂತರಿ ರೂಪವು, ಅಸುರಾಹಿತಾಂ= ದೈತ್ಯರಿಗೆ ಸೇರಲು ಯೋಗ್ಯವಲ್ಲದ, ಸುಧಾಂ= ಅಮೃತವನ್ನು, ಸುರರಾಶಯೇ = ದೇವತೆಗಳ ಗುಂಪಿಗೆ, ಪ್ರದದೌ = ಕೊಟ್ಟಿತು.

ಮತ್ತು—ಅಮುಷ್ಯ = ಈ ನಾರಾಯಣನ, ಸುಬೃಹತ್ = ಬಹಳ ದೊಡ್ಡ, ಪಯೋಧರ = ಸ್ತನಗಳ, ಮಿಥಃಪ್ರಸಂಹತಿ = ಅನ್ಯೋನ್ಯವಾದ ತಿಕ್ಕಾಟದಿಂದ, ಪ್ರಕಟೀಭವತ್ = ಸ್ಪಷ್ಟವಾಗುವ, ಪರಮಯೌವನಾಕೃತಿಃ= ಉತ್ತಮವಾದ ತಾರುಣ್ಯದ ಆಕಾರವುಳ್ಳ, ವರವಿಲಾಸಿನೀತನುಃ = ಶ್ರೇಷ್ಠವಾದ ಸ್ತ್ರೀ ಆಕಾರದ ಮೋಹಿನೀರೂಪವು, ಅಸುರಾಹಿತಾಂ = ದೈತ್ಯರಲ್ಲಿ ಇಟ್ಟಿದ್ದ, ಸುಧಾಂ ಸುರರಾಶಯೇ ಪ್ರದದೌ = ಅಮೃತವನ್ನು ದೇವತೆಗಳ ಸಮೂಹಕ್ಕೆ (ಕಿತ್ತುಕೊಂಡು) ಕೊಟ್ಟಿತು.

ತಾ.—ಧನ್ವಂತರಿ — ದೊಡ್ಡದಾದ ಕ್ಷೀರಸಮುದ್ರವನ್ನು ಮಂದರ ಪರ್ವತದಿಂದ ಕಡೆದಾಗ ಈ ನಾರಾಯಣನು ಧನ್ವಂತರಿರೂಪದಿಂದ ಪ್ರಕಟನಾದನು. ಯೌವನದಿಂದ ವಿರಾಜಿಸುತ್ತಿರುವ ಇವನು ಕಿರುನಗೆಯೇ ಮೊದಲಾದ ವಿಲಾಸಗಳಿಂದ ಕೂಡಿದ್ದನು. ಅವನು ಅಸುರರಿಗೆ ದೊರಕಲಾರದ ಅಮೃತವನ್ನು ದೇವತೆಗಳಿಗೆ ಮಾತ್ರವೇ ಕೊಟ್ಟನು. (ಅಸುರರು ಮೊದಲು ಅಮೃತಕಲಶವನ್ನು ಕಿತ್ತುಕೊಂಡರೂ ಅದು ಕೊನೆಗೆ ಅವರಿಗೆ ದೊರಕಲಿಲ್ಲ.)

Rarest Archiver

ಮೋಹಿನೀ— ದೊಡ್ಡದಾದ ಎರಡು ಸ್ತನಗಳು ಒಂದನ್ನೊಂದು ಘರ್ಷಿಸುತ್ತಾ ಇರುವುದರಿಂದ ಶ್ರೇಷ್ಠವಾದ ತಾರುಣ್ಯವು ಪ್ರಕಟವಾಗುತ್ತಿರುವ, ಉತ್ತಮವಾದ ಸ್ತ್ರೀಸಹಜವಿಲಾಸಗಳಿಂದ ಕೂಡಿದ ಮೋಹಿನೀರೂಪವನ್ನು ಈ ನಾರಾಯಣನು ಧರಿಸಿದನು. ಅಸುರರಿಗೆ ಅಯೋಗ್ಯವಾದ ಅಮೃತವನ್ನು ಅಸುರರು ಬಲಾತ್ಕಾರದಿಂದ ಕಿತ್ತುಕೊಂಡು ಹೋಗಿದ್ದರು. ಅದನ್ನು ಈ ಮೋಹಿನಿಯು ತಿರುಗಿ ತೆಗೆದುಕೊಂಡು ದೇವತೆಗಳಿಗೆ ಮಾತ್ರ ಹಂಚಿದ(ನು)ಳು. ಧನ್ವಂತರಿಯು ದೇವತೆಗಳ ಕೈಯಲ್ಲಿ ಕೊಟ್ಟ ಅಮೃತವನ್ನು ದೈತ್ಯರು ಬಲಾತ್ಕಾರವಾಗಿ ಸೆಳೆದು ಒಯ್ದಾಗ, ಈ ನಾರಾಯಣನು ಅತಿಸುಂದರಿಯಾದ ಮೋಹಿನಿಯಾಗಿ ತನ್ನ ಸೌಂದರ್ಯಕ್ಕೆ ದೈತ್ಯರು ಹುಚ್ಚಾಗಿ ಅಮೃತವನ್ನು ತನ್ನ ಕೈಯಲ್ಲೇ ಕೊಟ್ಟಾಗ ಈ ಮೋಹಿನಿಯು ದೈತ್ಯರನ್ನು ವಂಚಿಸಿ ದೇವತೆಗಳಿಗೆ ಮಾತ್ರವೇ ಅಮೃತವನ್ನು ಕುಡಿಸಿದನು.

ವಿ.—ಪಯಶ್ಚ ಧರಶ್ಚ, ಸುಬೃಹಂತೌ ಚ ತೌ ಪಯೋಧರೌ ಚ, ಸುಬೃಹತ್ಪಯೋಧರಯೋಃ ಮಿಥಃ ಪ್ರಸಂಹತಿಃ, ಅಪ್ರಕಟಾ ಪ್ರಕಟಾ ಸಂಪದ್ಯಮಾನಾ ಭವಂತೀ, ಪರಮಂ ಯೌವನಂ ಯಸ್ಯಾಃ ಸಾ, ಸುಬೃಹತ್ಪಯೋಧರಯೋಃ ಮಿಥಃಪ್ರಸಂಹತ್ಯಾ ಪ್ರಕಟೀಭವಂತೀ ಪರಮಯೌವನಾ ಆಕೃತಿಃ ಯಸ್ಯಾಃ ಸಾ, ಅಸುರಾಣಾಂ ಅಹಿತಾ ತಾಂ, ಅಸುರೇಷು ಅಹಿತಾ ತಾಂ, ವರಃ ವಿಲಾಸಃ ಅಸ್ಯ ಅಸ್ತೀತಿ, ವರವಿಲಾಸಿನ್ಯಾಃ ತನುಃ, ಸುರಾಣಾಃ ರಾಶಿಃ ತಸ್ಮೈ.

ಕ್ರಿ.—ಪ್ರದದೌ—ಸರ್ಗ ೭ ಶ್ಲೋಕ ೩೪ ನೋಡಿರಿ.

ಅವ.—ದತ್ತಾತ್ರೇಯಾವತಾರ ಮತ್ತು ಕುಮಾರಾವತಾರಗಳೆರಡನ್ನೂ ಒಂದೇ ಶ್ಲೋಕದಿಂದ ವರ್ಣಿಸುತ್ತಾರೆ—

ಸುಜನಾಯ ದತ್ತಪದ ಆತ್ಮಶುದ್ಧಿದಃ
ಸುಕುಮಾರರೂಪ್ಯಭವದೇಷ ಶಾಶ್ವತಃ ।
ಅನಸೂಯಯಾ ಶುಚಿಮನೀಷಯಾ ಧೃತಃ
ಪರಮಾದರೇಣ ಮುನಿಪುಂಗವೋಢಯಾ ॥೩೮॥

Rarest Archiver

ಅ. ಅ — ಸುಜನಾಯ = ಸಜ್ಜನರಿಗೆ, ಆತ್ಮಶುದ್ಧಿದಃ = ಮನಸ್ಸಿಗೆ ಪವಿತ್ರತೆಯನ್ನು ಕೊಡುವ, ಶಾಶ್ವತಃ ಏಷಃ = ನಾಶರಹಿತನಾದ ಈ ನಾರಾಯಣನು, ಮುನಿಪುಂಗವ = ಮುನಿಶ್ರೇಷ್ಠರಾದ ಅತ್ರಿಋಷಿಗಳಿಂದ, ಊಢಯಾ = ವಿವಾಹಮಾಡಿಕೊಳ್ಳಲ್ಪಟ್ಟ, ಶುಚಿಮನೀಷಯಾ = ಶುದ್ಧವಾದ ಜ್ಞಾನವುಳ್ಳ, ಅನಸೂಯಯಾ = ಅನಸೂಯಾದೇವಿಯಿಂದ, ಪರಮಾದರೇಣ = ಅತ್ಯಂತಪ್ರೀತಿಯಿಂದ, ಧೃತಃ = ಗರ್ಭದಲ್ಲಿ ಧರಿಸಲ್ಪಟ್ಟ, ಸುಕುಮಾರರೂಪೀ = ಕೋಮಲರೂಪವುಳ್ಳ, ದತ್ತಪದಃ = **ದತ್ತಾತ್ರೇಯ**ನೆಂಬ ಹೆಸರುಳ್ಳವನು, ಅಭವತ್ = ಆದನು.

ಮತ್ತು — ಶಾಶ್ವತಃ ಏಷಃ = ನಾಶವಿಲ್ಲದ ಈ ನಾರಾಯಣನು, ಅನಸೂಯಯಾ = ಅಸೂಯೆಯಿಲ್ಲದ, ಮುನಿಪುಂಗವೋಢಯಾ = ಮುನಿಶ್ರೇಷ್ಠರಿಂದ ಧರಿಸಲ್ಪಟ್ಟ, ಶುಚಿಮನೀಷಯಾ = ಪವಿತ್ರಬುದ್ಧಿಯಿಂದ, ಪರಮಾದರೇಣ = ಅತಿಶಯಭಕ್ತಿಯಿಂದ, ಧೃತಃ = ಧ್ಯಾನದಿಂದ ಧರಿಸಲ್ಪಟ್ಟ, ಸುಜನಾಯ = ಸುಜನರಿಗೆ, ದತ್ತಪದಃ = ಕೊಡಲ್ಪಟ್ಟ ಸ್ಥಾನವುಳ್ಳ, ಆತ್ಮಶುದ್ಧಿದಃ = ಮನಸ್ಸಿಗೆ ಪವಿತ್ರತೆಯನ್ನು ಕೊಡುವ, ಸುಕುಮಾರರೂಪೀ = ಸನತ್ಕುಮಾರನೆಂಬ ಹೆಸರಿನ ರೂಪವುಳ್ಳವನು, ಅಭವತ್ = ಆದನು.

ತಾ. — **ದತ್ತಾತ್ರೇಯಾವತಾರ** — ಸಜ್ಜನರ ಮನಸ್ಸನ್ನು ಜ್ಞಾನೋಪದೇಶದಿಂದ ಪವಿತ್ರವನ್ನಾಗಿ ಮಾಡುವ, ನಿತ್ಯನಾದ ಈ ಶ್ರೀಮನ್ನಾರಾಯಣನು ಋಷಿಶ್ರೇಷ್ಠರಾದ ಅತ್ರಿಮಹರ್ಷಿಗಳ ಪತ್ನಿಯಾದ ನಿರ್ಮಲಹೃದಯಳಾದ ಅನಸೂಯಾದೇವಿಯು ಗರ್ಭದಲ್ಲಿ ಕೋಮಲದೇಹವುಳ್ಳ ದತ್ತಾತ್ರೇಯನೆಂಬ ರೂಪದಿಂದ ಅವತರಿಸಿದನು. (ದತ್ತ—ಆತ್ರೇಯ ಅತ್ರಿಋಷಿಗಳ ಮಗ–) ದತ್ತಾತ್ರೇಯನೆಂಬ ಅವತಾರವನ್ನು ಮಾಡಿ ಸಜ್ಜನರಿಗೆ ಜ್ಞಾನೋಪದೇಶವನ್ನು ಮಾಡಿದನು ಎಂದು ಭಾವ.

ಸನತ್ಕುಮಾರಾವತಾರ — ಮತ್ಸರವಿಲ್ಲದ ಪರಿಶುದ್ಧವಾದ ಬುದ್ಧಿಯಿಂದ ಅತ್ಯಂತ ಭಕ್ತಿಯಿಂದ ಮುನಿಶ್ರೇಷ್ಠರು 'ಸ್ವಾಮಿ! ಅವತರಿಸು, ನಮಗೆ ಜ್ಞಾನೋಪದೇಶಮಾಡು, ಉದ್ಧರಿಸು' ಎಂದು ಪ್ರಾರ್ಥಿಸಿ ಧ್ಯಾನಮಾಡಿದಾಗ

Rarest Archiver

ಈ ಶ್ರೀಮನ್ನಾರಾಯಣನು ಕುಮಾರನೆಂಬ ಅವತಾರವನ್ನು ಸ್ವೀಕರಿಸಿ ಭಕ್ತರಿಗೆ ಜ್ಞಾನೋಪದೇಶಮಾಡಿ ಮೋಕ್ಷಸ್ಥಾನವನ್ನು ಕೊಟ್ಟನು.

ವಿ.—ಶೋಭನಶ್ಚಾಸೌ ಜನಶ್ಚ ತಸ್ಮೈ, ದತ್ತ ಇತಿ ಪದಂ ಯಸ್ಯ ತಸ್ಮೈ, ಆತ್ಮನಃ ಶುದ್ಧಿಂ ದದಾತೀತಿ, ಸುಕುಮಾರಂ ರೂಪಂ ಅಸ್ಯ ಅಸ್ತೀತಿ, ಶುಚಿಃ ಮನೀಷಾ ಯಸ್ಯಾಃ ಸಾ ತಯಾ, ಪರಮಶ್ಚಾಸೌ ಆದರಶ್ಚ ತೇನ, ಪುಮಾನ್ ಗೌರಿವ ಪುಂಗವಃ, ಮುನೀನಾಂ ಪುಂಗವಃ ಮುನಿಪುಂಗವೇನ ಊಢಾ ತಯಾ ;

ನ ವಿದ್ಯತೇ ಅಸೂಯಾ ಯಸ್ಯಾಸ್ತಯಾ, ಶುಚಿಶ್ಚ ಸಾ ಮನೀಷಾ ಚ ತಯಾ, ದತ್ತಂ ಪದಂ ಯೇನ ಸಃ ;

ಕ್ರಿ.—ಅಭವತ್, ಸ. ೮ ಶ್ಲೋಕ ೧೯ ನೋಡಿರಿ.

ಅವ.—ಋಷಭಾವತಾರ ಮತ್ತು ಹಂಸಾವತಾರಗಳನ್ನು ವರ್ಣಿಸುತ್ತಾರೆ—

ದಯಿತಃ ಸತಾಮೃಷಭ ಏಷ ಭೂಧರೋ
ವಪುರುದ್ವಹನ್ ಪರಮಹಂಸಲಕ್ಷಣಂ ।
ವ್ಯಹರದ್ ವಲಕ್ಷತಮಪಕ್ಷಶೋಭನಂ
ಪರತತ್ತ್ವಲಿಪ್ಸುಸನಕಾದಿವಂದಿತಃ ॥೩೯॥

ಅ.ಅ—ಸತಾಂ ದಯಿತಃ = ಸಜ್ಜನರಿಗೆ ಪ್ರಿಯನಾದ, ಏಷಃ = ಈ ನಾರಾಯಣನು, ಋಷಭಃ ಭೂಧರಃ = ಋಷಭನೆಂಬ ರಾಜನಾಗಿ, ವಲಕ್ಷತಮ = ಅತ್ಯಂತಶುದ್ಧವಾದ, ಪಕ್ಷ = ಸಿದ್ಧಾಂತದಿಂದ, ಶೋಭನಂ = ಮಂಗಳಕರವಾದ, ಪರಮಹಂಸಲಕ್ಷಣಂ ವಪುಃ=ಯತಿಚಿಹ್ನವುಳ್ಳ ಶರೀರವನ್ನು, ಉದ್ವಹನ್ = ಧರಿಸಿದವನಾಗಿ, ಪರತತ್ತ್ವಲಿಪ್ಸು=ಉತ್ತಮವಾದ ತತ್ತ್ವವನ್ನು ಹೊಂದಲು ಇಚ್ಛೆಯುಳ್ಳ, ಸ ನ ಕಾ ದಿ ವಂ ದಿ ತಃ = ಸನಕಾದಿಮುನಿಗಳಿಂದ ಸ್ತೋತ್ರ ಮಾಡಲ್ಪಟ್ಟವನಾಗಿ, ವ್ಯಹರತ್ = ವಿಹರಿಸಿದನು.

ಮತ್ತು—ಸತಾಂ = ಸಜ್ಜನರಿಗೆ, ದಯಿತಃ = ಪ್ರಿಯನಾದ, ಋಷಭಃ = ಸ್ವಾಮಿಯಾದ, ಭೂಧರಃ = ಭೂಮಿಯನ್ನು ಹೊತ್ತಿರುವ, ಏಷಃ = ಈ

Rarest Archiver

ನಾರಾಯಣನು, ಪರತತ್ತ್ವಲಿಪ್ಸುಸನಕಾದಿವಂದಿತಃ = ಉತ್ತಮವಾದ ತತ್ತ್ವವನ್ನು ಹೊಂದಲು ಇಚ್ಛೆಯುಳ್ಳ ಸನಕಾದಿಗಳಿಂದ ನಮಸ್ಕಾರಮಾಡಲ್ಪಟ್ಟವನಾಗಿ, ವಲಕ್ಷತಮ = ಅತ್ಯಂತ ಬೆಳ್ಳಗಿರುವ, ಪಕ್ಷ = ರೆಕ್ಕೆಗಳಿಂದ, ಶೋಭನಂ = ಮಂಗಳಕರವಾದ, ಪರಮಹಂಸ = ಉತ್ತಮಹಂಸದ, ಲಕ್ಷಣಂ = ಚಿಹ್ನೆಯುಳ್ಳ, ವಪುಃ = ಶರೀರವನ್ನು, ಉದ್ವಹನ್ = ಧರಿಸಿದವನಾಗಿ, ವ್ಯಹರತ್ = ವಿಹರಿಸಿದನು.

ತಾ. — ಋಷಭಾವತಾರ — ಸಜ್ಜನರಿಗೆ ಇಷ್ಟವಾದ ಪರಬ್ರಹ್ಮತತ್ವವನ್ನು ತಿಳಿಯಬೇಕೆಂದು ಸನಕಾದಿಮುನಿಶ್ರೇಷ್ಠರು ಅಪೇಕ್ಷಿಸಿದರು. ಅವರು ಪ್ರಾರ್ಥಿಸಿದಾಗ ಈ ಶ್ರೀಮನ್ನಾರಾಯಣನು ಋಷಭನೆಂಬ ಅರಸನಾಗಿ ಅವತರಿಸಿದನು. ಅತ್ಯಂತ ನಿರ್ಮಲವಾದ ಪರಬ್ರಹ್ಮತತ್ವವನ್ನು ನಿರ್ಣಯಿಸಿ, ಸಿದ್ಧಾಂತವನ್ನು ತಿಳಿಯುವ ಅಧಿಕಾರವುಳ್ಳ ಪರಮಹಂಸಸಂನ್ಯಾಸವನ್ನು ಸ್ವೀಕರಿಸಿ ವಿಹರಿಸಿದನು. ಶ್ರೀಹರಿಯು ಋಷಭಾವತಾರಮಾಡಿ ರಾಜನಾಗಿ ಧರ್ಮದಿಂದ ರಾಜ್ಯವನ್ನಾಳಿದನು. ಕೊನೆಗೆ ಸಂನ್ಯಾಸವನ್ನು ಸ್ವೀಕರಿಸಿ ಸನಕಾದಿಗಳಿಗೆ ತತ್ವೋಪದೇಶವನ್ನು ಮಾಡಿದನು.

ಹಂಸಾವತಾರ — ಸನಕಾದಿಮುನಿಶ್ರೇಷ್ಠರು ಸಜ್ಜನರಿಗೆ ಇಷ್ಟನೂ, ಎಲ್ಲರಿಗೂ ಸ್ವಾಮಿಯೂ, ಭೂಮಿಯನ್ನು ಹೊತ್ತವನೂ ಆದ ಈ ನಾರಾಯಣನನ್ನು ಪರಬ್ರಹ್ಮತತ್ವವನ್ನು ತಿಳಿಯುವುದಕ್ಕಾಗಿ ಪ್ರಾರ್ಥಿಸಿದರು. ಆಗ ಇವನು ಬಿಳಿಯ ರೆಕ್ಕೆಗಳಿಂದ ಕಂಗೊಳಿಸುವ ಉತ್ತಮವಾದ ಹಂಸಪಕ್ಷಿಯ ರೂಪವನ್ನು ಧರಿಸಿ ವಿಹರಿಸಿದನು. ಹಂಸಾವತಾರಮಾಡಿ ಸನಕಾದಿಗಳಿಗೆ ತತ್ವವನ್ನು ಉಪದೇಶಿಸಿದನು ಎಂದು ಭಾವ.

ವಿ. — ಧರತೀತಿ ಧರಃ, ಭುವಃ ಧರಃ ಭೂಧರಃ, ಪರಮಾಶ್ಚ ತೇ ಹಂಸಾಶ್ಚ, ಪರಮಹಂಸಾನಾಂ ಲಕ್ಷಣಂ, ಯಸ್ಯ ತತ್, ಅತಿಶಯೇನ ವಲಕ್ಷಃ, ವಲಕ್ಷತಮಶ್ಚಾಸೌ ಪಕ್ಷಶ್ಚ, ವಲಕ್ಷತಮಪಕ್ಷೇಣ ಶೋಭನಂ, ತತ್, ಪರಂ ಚ ತತ್ ತತ್ವಂ ಚ, ಪರತತ್ವಂ ಲಿಪ್ಸವಃ, ಸನಕಃ ಆದಿಃ ಯೇಷಾಂ ತೇ, ಪರತತ್ವಲಿಪ್ಸವಶ್ಚ ತೇ ಸನಕಾದಯಶ್ಚ, ಪರತತ್ವಲಿಪ್ಸುಸನಕಾದಿಭಿಃ ವಂದಿತಃ (ಅತಿಶಯೇನ ವಲಕ್ಷೌ ವಲಕ್ಷತಮೌ, ವಲಕ್ಷತಮೌ ಚ ತೌ ಪಕ್ಷೌ ಚ, ವಲಕ್ಷ-

Rarest Archiver

ತಮಪಕ್ಷಾಭ್ಯಾಂ ಶೋಭನಂ, ತತ್, ಪರಮಶ್ಚಾಸೌ ಹಂಸಶ್ಚ, ಪರಮಹಂಸಸ್ಯ ಲಕ್ಷಣಂ ಯಸ್ಯ, ತತ್)

ಕ್ರಿ.—ವಿ+ಅಹರತ್, ಅಹರತಾಂ ಅಹರನ್, ಅಹರಃ ಅಹರತವ್ ಅಹರತ, ಅಹರವ್ ಅಹರಾವ ಅಹರಾಮ. ಹೃಞ್ ಹರಣೇ.। ಸಕ.। ಅನಿ.। ಉಭ.। to take, to lead, ಲಙ್.

ಅವ.—ಹರಿ, ಕೃಷ್ಣ, ನರ, ನಾರಾಯಣ ಎಂಬ ನಾಲ್ಕು ಅವತಾರಗಳನ್ನು ವಿವರಿಸುತ್ತಾರೆ—

ಉದಪಾದಿ ಧರ್ಮತನಯೋ ಹ್ಯಯಂ ಹರಿ-
ರ್ನರದೇವಸೋದರ ಉದಾರವಿಕ್ರಮಃ।
ಅಪಿ ಕೃಷ್ಣ ಇತ್ಯಭಿಹಿತೋ ಮುದೇ ಸತಾಂ
ಸ್ವಯಮೇವ ಯಸ್ಯ ಸಹಜೋ ವ್ಯಜಾಯತ ॥೪೦॥

ಅ.ಅ—ಉದಾರವಿಕ್ರಮಃ = ಹೆಚ್ಚಾದ ಕಾಂತಿ ಮತ್ತು ಪರಾಕ್ರಮವುಳ್ಳ, ಅಯಂ = ಈ ಪರಮಾತ್ಮನು, ನರದೇವಸೋದರಃ = ದೇವತಾರೂಪಿಯಾದ ಶೇಷಾವತಾರನಾದ ನರನ ಸಹೋದರನು, ಸತಾಂ ಮುದೇ = ಸಜ್ಜನರ ಸಂತೋಷಕ್ಕಾಗಿ, ಕೃಷ್ಣಃ ಇತಿ = ಕೃಷ್ಣ ಎಂದು, ಅಭಿಹಿತೋಽಪಿ = ಹೇಳಲ್ಪಟ್ಟವನಾದರೂ, ಸ್ವಯಮೇವ = ತಾನೇ, ಯಸ್ಯ = ಯಾವ ಹರಿಗೆ, ಸಹಜಃ = ಸಹೋದರನಾಗಿ, ವ್ಯಜಾಯತ = ಹುಟ್ಟಿದನು. ಹರಿಃ = ಆ ಹರಿಯು, ಧರ್ಮತನಯಃ ಸನ್ = ಧರ್ಮಪ್ರಜೇಶ್ವರನ ಮಗನಾಗಿ, ಉದಪಾದಿ ಹಿ = ಹುಟ್ಟಿದ್ದಾನಷ್ಟೆ.

ಮತ್ತು—ನರದೇವಸೋದರಃ = ಶೇಷಾವತಾರನಾದ ನರನ ಸಹೋದರನಾದ, ಉದಾರವಿಕ್ರಮಃ = ಅತಿಶಯಪರಾಕ್ರಮವುಳ್ಳ ಈ ಹರಿಯು, ಸ್ವಯಮೇವ = ತಾನಾಗಿಯೇ, ಸತಾಂ ಮುದೇ = ಸಜ್ಜನರ ಸಂತೋಷಕ್ಕಾಗಿ, ಕೃಷ್ಣಃ ಇತಿ ಅಭಿಹಿತೋಽಪಿ = ಕೃಷ್ಣನೆಂದು ಹೇಳಲ್ಪಟ್ಟಿದ್ದರೂ, ಯಸ್ಯ = ಯಾವ ನಾರಾಯಣನ, ಸಹಜಃ = ಸಹೋದರನಾಗಿ, ವ್ಯಜಾಯತ = ಹುಟ್ಟಿದನೋ,

Rarest Archiver

ಅಯಂ ಹರಿಃ = ಈ ಆಶ್ರಮದಲ್ಲಿರುವ ನಾರಾಯಣನು, ಧರ್ಮತನಯಃ = ಯಮಧರ್ಮನ ಮಗನಾಗಿ, ಉದಪಾದಿ = ಹುಟ್ಟಿದನು.

ತಾ.—ಶ್ರೀಮನ್ನಾರಾಯಣನು ಹರಿಯೆಂಬ ಹೆಸರಿನಿಂದ ಧರ್ಮಪ್ರಜಾಪತಿಯ ಮಗನಾಗಿ ಜನಿಸಿದನು. ಈ ನಾರಾಯಣನು ಅತಿಶಯ ಪರಾಕ್ರಮವುಳ್ಳವನು. ಶೇಷಾವತಾರನಾದ ನರನ ಸಹೋದರನು. ಇವನಿಗೆ ಕೃಷ್ಣ ಎಂಬ ಹೆಸರೂ ಇದೆ. ಇವನು ಸಜ್ಜನರನ್ನು ಸಂತೋಷಗೊಳಿಸಲು ತಾನೇ ಆ ಹರಿಯ ಸಹೋದರನಾಗಿ ಜನಿಸಿರುತ್ತಾನೆ.

ಈ ಆಶ್ರಮದಲ್ಲಿ ವಿರಾಜಿಸುತ್ತಿರುವ ನಾರಾಯಣನೆಂಬ ಹರಿಯೂ ಯಮಧರ್ಮನ ಮಗನು. ಇವನು ಹೆಚ್ಚಾದ ಪರಾಕ್ರಮವುಳ್ಳವನು. ನರನ ಸಹೋದರನು. ಇವನು ತಾನೇ ಕೃಷ್ಣನೆಂಬ ಹೆಸರುಳ್ಳವನಾದರೂ ಸಜ್ಜನರನ್ನು ಸಂತೋಷಗೊಳಿಸಲು ನಾರಾಯಣನಿಗೆ ಸಹೋದರನಾಗಿ ಜನಿಸಿದನು. ಎಂದರೆ ನರ, ನಾರಾಯಣ, ಹರಿ, ಕೃಷ್ಣರು ಮಹಾವಿಷ್ಣುವಿನ ಅವತಾರರು.

ವಿ.—ಧರ್ಮಸ್ಯ ತನಯಃ, ನರಶ್ಚಾಸೌ ದೇವಶ್ಚ, ನರದೇವಸ್ಯ ಸೋದರಃ, ಉದಾರಃ ವಿಕ್ರಮಃ ಯಸ್ಯ,

ಕ್ರಿ.—ಉದ್ + ಅಪಾದಿ ಅಪತ್ಸಾತಾಂ ಅಪತ್ಸತ, ಅಪತ್ಥಾಃ ಅಪತ್ಸಾಥಾಂ ಅಪದ್ಧ್ವಮ್, ಅಪತ್ಸಿ ಅಪತ್ಸ್ವಹಿ ಅಪತ್ಸ್ಮಹಿ. ಪದ.। ಗತೌ.। ಸಕ.। ಅನಿ.। ಆತ್ಮ.। to go, to attain. ಲುಙ್. ವಿ + ಅಜಾಯತ. ಸರ್ಗ ೭ ಶ್ಲೋಕ ೨೦ ನೋಡಿರಿ.

ಅವ.—ಈ ರೀತಿ ಶ್ರೀನಾರಾಯಣನ ಕೆಲವು ಅವತಾರಗಳನ್ನು ವರ್ಣಿಸಿ ವ್ಯೂಹರೂಪದಿಂದ ಇರುವ ಭಗವಂತನನ್ನು ಆಚಾರ್ಯರು ಧ್ಯಾನಿಸಿ ನಮಿಸಿದರು–

ಪರಮಾತ್ಮನೇ ಸತತಮೇಕರೂಪಿಣೇ
ದಶರೂಪಿಣೇ ಶತಸಹಸ್ರರೂಪಿಣೇ।
ಅವಿಕಾರಿಣೇ ಸ್ಫುಟಮನಂತರೂಪಿಣೇ
ಸುಖಚಿತ್ಸಮಸ್ತತನವೇ ನಮೋ ನಮಃ ||೪೧||

ಅ.ಅ— ಪರಮಾತ್ಮನೇ = ಮುಖ್ಯವಾಗಿ ಆತ್ಮಶಬ್ದವಾಚ್ಯನಾದ, ಸತತಂ = ಯಾವಾಗಲೂ, ಏಕರೂಪಿಣೇ = ಒಂದೇ ಆದ ಮುಖ್ಯರೂಪವುಳ್ಳ, ದಶರೂಪಿಣೇ = ಮತ್ಸ್ಯಾದಿ ದಶಾವತಾರರೂಪಿಯಾದ, ಶತಸಹಸ್ರರೂಪಿಣೇ = ನಾರಾಯಣಾದಿ ನೂರು ಮತ್ತು ವಿಶ್ವಾದಿ ಸಾವಿರರೂಪಗಳುಳ್ಳ, ಅವಿಕಾರಿಣೇ = ವಿಕಾರವಿಲ್ಲದ, ಸ್ಫುಟಂ = ಸ್ಪಷ್ಟವಾಗಿ, ಅನಂತರೂಪಿಣೇ = ಅಸಂಖ್ಯ ರೂಪಗಳುಳ್ಳ, ಸುಖಚಿತ್ = ಆನಂದಜ್ಞಾನಗಳೇ, ಸಮಸ್ತತನವೇ = ಪೂರ್ಣ ದೇಹವಾಗಿ ಉಳ್ಳ, ಶ್ರೀನಾರಾಯಣನೇ, ನಿನಗೆ, ನಮೋ ನಮಃ = ನಮಸ್ಕಾರ, ನಮಸ್ಕಾರ.

ತಾ.— ಈ ಪರಮಾತ್ಮನು ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ, ಎಂಬ ಹತ್ತು ಅವತಾರ ರೂಪಗಳುಳ್ಳವನು, ನಾರಾಯಣ ಮೊದಲಾದ ನೂರು ರೂಪಗಳುಳ್ಳವನು ಸಹಸ್ರನಾಮದಲ್ಲಿ ಹೇಳಿದ ವಿಶ್ವ ಮೊದಲಾದ ಸಾವಿರರೂಪಗಳುಳ್ಳವನು, ಅಪರಿಮಿತರೂಪಗಳುಳ್ಳವನು. ಇಷ್ಟುರೂಪಗಳನ್ನು ನಿರಂತರವಾಗಿ ಧರಿಸುತ್ತಿದ್ದರೂ ಯಾವ ವಿಕಾರವೂ ಇಲ್ಲದವನು. ಇವನ ಸಮಸ್ತದೇಹಗಳೂ ಜ್ಞಾನ ಆನಂದ ಸ್ವರೂಪಗಳು. ಜೀವರ ದೇಹದಂತೆ ಸತ್ವರಜಸ್ಸುತಮಸ್ಸುಗಳೆಂಬ ಪ್ರಕೃತಿಗೆ ಸಂಬಂಧಿಸಿದುವುಗಳಲ್ಲ. ಹೀಗೆ ಅನಂತ ಅವತಾರಗಳಿದ್ದರೂ ಈ ಅವತಾರರೂಪ ಗಳಿಗೂ ಮೂಲರೂಪಕ್ಕೂ ಯಾವ ಭೇದವೂ ಇಲ್ಲದಿರುವುದರಿಂದ ಮೂಲ ರೂಪ ಒಂದೇ ಉಳ್ಳವನು. ಇಂತಹ ಪರಮಾತ್ಮನಿಗೆ ಅನೇಕ ವಂದನೆಗಳು.

ವಿ.—ಪರಮಶ್ಚಾಸೌ ಆತ್ಮಾ ಚ ತಸ್ಮೈ, ಏಕಂ ರೂಪಂ ಅಸ್ಯ ಅಸ್ತೀತಿ ತಸ್ಮೈ, ದಶ ರೂಪಾಣಿ ಅಸ್ಯ ಸಂತೀತಿ ತಸ್ಮೈ, ಶತಾನಿ ಸಹಸ್ರಾಣಿ ರೂಪಾಣಿ ಅಸ್ಯ ಸಂತೀತಿ ತಸ್ಮೈ, ವಿಕಾರಸ್ಯಾಭಾವಃ, ಅವಿಕಾರಃ ಅಸ್ಯ ಅಸ್ತೀತಿ ತಸ್ಮೈ, ನ ವಿದ್ಯತೇ ಅಂತಃ ಯೇಷಾಂ ತಾನಿ, ಅನಂತಾನಿ ರೂಪಾಣಿ ಅಸ್ಯ ಸಂತೀತಿ, ಸುಖಂ ಚ ಚಿಚ್ಚ, ಸುಖಚಿತೌ ಸಮಸ್ತಾಃ ತನವಃ ಯಸ್ಯ ತಸ್ಮೈ.

ಅವ.—ಆಚಾರ್ಯರು ಈ ರೀತಿ ಧ್ಯಾನಿಸುತ್ತಾ ನಾರಾಯಣಮುನಿ ಗಳನ್ನು ವಂದಿಸಿ ವ್ಯಾಸನಾರಾಯಣರು ಕುಳಿತ ಮೇಲೆ ತಾನೂ ಕುಳಿತರು—

Rarest Archiver

ಇತಿ ಚಿಂತಯನ್ನವಿರಲಾಂತರೋ ಹರಿಂ
ಪ್ರಣನಾಮ ಸಪ್ರಣಯಮಾದೃತೋಽಮುನಾ ।
ಅಜಿತೌ ಪರಸ್ಪರಸಭಾಜಿತೌ ಸ ತೌ
ನಿಕಷಾ ನಿಷೀದತಿ ಪುರೋಪವೇಶಿನೌ ॥೪೨॥

ಅ ಅ.— ಇತಿ = ಈ ರೀತಿ, ಚಿಂತಯನ್ = ಆಲೋಚಿಸುತ್ತಿರುವ, ಅವಿರಲಾಂತರಃ ಸಃ = ಪೂರ್ಣಜ್ಞಾನವುಳ್ಳ ಆ ಮಧ್ವಾಚಾರ್ಯರು, ಹರಿಂ = ಶ್ರೀನಾರಾಯಣನನ್ನು, ಪ್ರಣನಾಮ = ನಮಿಸಿದರು. ಅಮುನಾ = ಈ ನಾರಾಯಣ ಮುನಿಯಿಂದ, ಸಪ್ರಣಯಂ = ಪ್ರೀತಿಯಿಂದ ಸಹಿತವಾಗಿ, ಆದೃತಃಸನ್ = ಸನ್ಮಾನಿಸಲ್ಪಟ್ಟವರಾಗಿ, ಪರಸ್ಪರಸಭಾಜಿತೌ = ಅನ್ಯೋನ್ಯವಾಗಿ ಸನ್ಮಾನ ಮಾಡಿಸಿಕೊಳ್ಳಲ್ಪಟ್ಟ, ಅಜಿತೌ = ಜಯಶಾಲಿಗಳಾದ, ಉಪವೇಶಿನೌ = ಕುಳಿತು ಕೊಂಡಿರುವ, ತೌ ನಿಕಷಾ = ಆ ವ್ಯಾಸನಾರಾಯಣರ ಹತ್ತಿರ, ನಿಷೀದತಿ ಪುರಾ = ಕುಳಿತುಕೊಂಡರು.

ತಾ.— ಈ ರೀತಿಯಲ್ಲಿ ಶ್ರೀಮಧ್ವಾಚಾರ್ಯರು ಧ್ಯಾನಮಾಡುತ್ತಾ ಶ್ರೀನಾರಾಯಣಮುನಿಯನ್ನು ನಮಸ್ಕರಿಸಿದರು. ಆ ಮೇಲೆ ವಿಷ್ಣುವಿನ ಅವತಾರ ರಾದ ಶ್ರೀವೇದವ್ಯಾಸಮುನಿಗಳೂ ನಾರಾಯಣಮುನಿಗಳೂ ಪರಸ್ಪರ ಸಂಮಾನ ವನ್ನು ಮಾಡಿಕೊಂಡು ಆಸನವನ್ನು ಅಲಂಕರಿಸಿದರು. ಶ್ರೀನಾರಾಯಣನು ಆಚಾರ್ಯರನ್ನು ಮಮತೆಯಿಂದ ಆದರಿಸಿದ ನಂತರ ಆಚಾರ್ಯರು ಆ ಮುನಿವರ ರಿಬ್ಬರ ಸಮೀಪದಲ್ಲಿ ಕುಳಿತರು. ವ್ಯಾಸನಾರಾಯಣರಿಬ್ಬರೂ ಅಭಿನ್ನರು, ಒಬ್ಬನೇ ಮಹಾವಿಷ್ಣುವಿನ ಅವತಾರರಾಗಿದ್ದರೂ ಲೋಕವಿಡಂಬನಕ್ಕಾಗಿ ಮನುಷ್ಯರಂತೆ ನಟಿಸುತ್ತಾ ಪರಸ್ಪರ ಉಪಚರಿಸಿಕೊಂಡರು.

ವಿ.— ಅವಿರಲಂ ಆಂತರಂ ಯಸ್ಯ ಸಃ, ಪ್ರಣಯೇನ ಸಹಿತಂ ಯಥಾ ಭವತಿ ತಥಾ, ನ ಜಿತೌ ಅಜಿತೌ, ಪರಸ್ಪರಂ ಸಭಾಜಿತೌ ಪರಸ್ಪರಸಭಾಜಿತೌ,

ಕ್ರಿ.— ಪ್ರ + ನನಾಮ ಸರ್ಗ ೫ ಶ್ಲೋಕ ೩೦ ನೋಡಿರಿ. ನಿಷೀದತಿ. ನಿ + ಸೀದತಿ ಸೀದತಃ ಸೀದಂತಿ ಇತ್ಯಾದಿ. ಷದ್‍ಲೃ ವಿಶರಣಗತ್ಯವಸಾದನೇಷು. (ಸದ್, ಸೀದ್,) ಅನಿ.। ಪರ. ಲಟ್. 'ಪುರಿ ಲುಙ್ ಚಾಸ್ಮೇ' ಎಂಬ ಸೂತ್ರ ದಿಂದ ಭೂತಕಾಲದ ಅರ್ಥದಲ್ಲಿ ಪುರಾಶಬ್ದವಿದ್ದಾಗ ಲಟ್ ಬಂದಿದೆ.

Rarest Archiver

ಅವ.—ಶ್ರೀನಾರಾಯಣಮುನಿಯು ವ್ಯಾಸರ ಸಂಮತಿಯಿಂದ ಏಕಾಂತ ದಲ್ಲಿ ಶ್ರೀಮಧ್ವಾಚಾರ್ಯರಿಗೆ ಆಜ್ಞೆ ಮಾಡಲು ಆರಂಭಿಸಿದರು—

ವಿವಿಧಾ ವಿಧಾಯ ಕಿಲ ತತ್ರ ಸತ್ಕಥಾ (ಸಂಕಥಾ)
ವದನಂ ಮುನೀಂದ್ರತನಯಸ್ಯ ಸುಂದರಂ ।
ಅವಲೋಕ್ಯ ಲೋಕಪತಿರಾನತಂ ಮಹಾ
ಸುಖತೀರ್ಥಮಾಹ ರಹಸಿ ಸ್ಮ ಗಾಮಿಮಾಂ ॥೪೩॥

ಅ.ಅ.—ಲೋಕಪತಿಃ = ಜಗತ್ಸ್ವಾಮಿಯಾದ ಶ್ರೀನಾರಾಯಣನು, ತತ್ರ = ಆ ಬದರಿಕಾಶ್ರಮದಲ್ಲಿ, ವಿವಿಧಾಃ = ನಾನಾಬಗೆಯ, ಸತ್ಕಥಾಃ = ಒಳ್ಳೆಯ ಸಂಭಾಷಣೆಗಳನ್ನು, ವಿಧಾಯ = ಮಾಡಿ, ಮುನೀಂದ್ರ = ಪರಾಶರಮುನಿಗಳ, ತನಯಸ್ಯ = ಮಗನಾದ ವ್ಯಾಸರ, ಸುಂದರಂ ವದನಂ = ಮನೋಹರವಾದ ಮುಖವನ್ನು, ವಿಲೋಕ್ಯ = ನೋಡಿ, ಆನತಂ = ವಿನಯದಿಂದ ಬಾಗಿದ್ದ, ಮಹಾಸುಖತೀರ್ಥಂ = ಅತ್ಯಂತಸುಖಕ್ಕೆ ಕಾರಣವಾದ ಶಾಸ್ತ್ರವುಳ್ಳ ಆಚಾರ್ಯ ರನ್ನು ಕುರಿತು, ರಹಸಿ = ಗುಟ್ಟಾಗಿ, ಇಮಾಂ ಗಾಂ = ಈ ಮಾತನ್ನು, ಆಹ ಸ್ಮ ಕಿಲ = ಹೇಳಿದನು.

ತಾ.—ಸರ್ವಲೋಕಸ್ವಾಮಿಯಾದ ನಾರಾಯಣನು ಅನೇಕ ಉತ್ತಮ ವಿಷಯಗಳನ್ನು ಪ್ರಸ್ತಾಪಿಸಿ, ಅನಂತರ ಶ್ರೀವೇದವ್ಯಾಸರ ಸುಂದರಮುಖವನ್ನು ನೋಡಿ, ತನ್ನೆದುರು ವಿನಯದಿಂದ ಬಾಗಿ ಕುಳಿತಿರುವ, ಶ್ರೀಮಧ್ವಾಚಾರ್ಯರಿಗೆ ಏಕಾಂತದಲ್ಲಿ ಈ ಮಾತನ್ನು ಹೇಳಿದನು.

ವಿ.—ಸತ್ಯಶ್ಚ ತಾಃ ಕಥಾಶ್ಚ, ಮುನೀನಾಂ ಇಂದ್ರಃ ಮುನೀಂದ್ರಸ್ಯ ತನಯಃ ತಸ್ಯ, ಲೋಕಾನಾಂ ಪತಿಃ, ಮಹತ್ ಸುಖಂ ಯಸ್ಮಾತ್, ಮಹಾಸುಖಂ ತೀರ್ಥಂ ಯಸ್ಮಾತ್ ಸಃ ತಂ ;

ಕ್ರಿ.—ಆಹ ಸ್ಮ. ಸರ್ಗ ೮ ಶ್ಲೋಕ ೨೦ ನೋಡಿರಿ. 'ಲಟ್ ಸ್ಮೇ' ಎಂಬ ಸೂತ್ರದಿಂದ ಸ್ಮ ಯೋಗವಿದ್ದಾಗ ಭೂತಕಾಲದ ಅರ್ಥ.

ಅವ.—ನಾರಾಯಣ ಮುನಿಗಳ ಮಾತನ್ನೇ ವಿವರಿಸುತ್ತಾರೆ—

Rarest Archiver

ಶೃಣು ದೇವಕಾರ್ಯಮವಧಾರ್ಯ ಧೈರ್ಯವದ್
(ಧೈರ್ಯವಾನ್‌ಮ)
ಯದುದೀರ್ಯಮಾಣಮಿದಮಾರ್ಯಸಂಮತಂ।
ಭವಿತಾನ್ಯದುಷ್ಕರತರಂ ವಿಧಾಯ ಯತ್
ತರುಣಂ ತವಾವತರಣಂ ಮಹಾಫಲಂ ||೪೪||

ಅ.ಅ.—ಧೈರ್ಯವತ್ = ಧೀರತೆಯಿಂದ ಸಹಿತವಾಗಿ, (ದೃಢವಾಗಿ) (ಧೈರ್ಯವುಳ್ಳವನಾಗಿ, ಮತ್ = ನನ್ನಿಂದ) ಉದೀರ್ಯಮಾಣಂ=ಹೇಳಲ್ಪಡುತ್ತಿರುವ, ಆರ್ಯಸಂಮತಂ=ಪೂಜ್ಯರಾದ ಶ್ರೀವ್ಯಾಸರಿಗೆ ಒಪ್ಪಿಗೆಯಾದ, ಯತ್ = ಯಾವ, ಇದಂ ದೇವಕಾರ್ಯಂ= ಈ ದೇವತೆಗಳ ಕೆಲಸವನ್ನು, ಶೃಣು= ಕೇಳು. ಯತ್ = ಯಾವ ದೇವತೆಗಳ ಕೆಲಸವನ್ನು, ಅನ್ಯದುಷ್ಕರತರಂ=ಇತರರಿಗೆ ಮಾಡಲು ಅಶಕ್ಯವಾದದ್ದನ್ನಾಗಿ, ಅವಧಾರ್ಯ = ನಿಶ್ಚಯಿಸಿ, ವಿಧಾಯ = ಮಾಡಿ, ತರುಣಂ = ಹೊಸದಾದ, ತವ ಅವತರಣಂ = ನಿನ್ನ ಅವತಾರವು, ಮಹಾಫಲಂ = ಹೆಚ್ಚು ಫಲವುಳ್ಳದ್ದು, ಭವಿತಾ = ಆಗುವುದು.

ತಾ.—ಎಲೈ ಆನಂದತೀರ್ಥನೇ! ನಾನು ನಿಶ್ಚಯಿಸಿ ಹೇಳುವ ಮಾತನ್ನು ಧೈರ್ಯದಿಂದ ಕೇಳು, ಈ ಮಾತು ವ್ಯಾಸರಿಗೂ ಸಂಮತವಾದುದು. ದೇವತೆಗಳ ಕಾರ್ಯಕ್ಕೆ ಅನುಕೂಲವಾದುದು. ನೀನಲ್ಲದೆ ಇನ್ನು ಯಾರಿಂದಲೂ ಪೂರೈಸಲು ಅಸಾಧ್ಯವಾದ ಈ ದೇವತಾಕಾರ್ಯವನ್ನು ನೀನು ಮಾಡಿದಿಯಾದರೆ ನಿನ್ನ ಹೊಸದಾದ ಈ ಅವತಾರದಿಂದ ದೊಡ್ಡ ಪ್ರಯೋಜನವನ್ನು ಸಾಧಿಸಿದಂತಾಗುವುದು.

ವಿ.—ದೇವಾನಾಂ ಕಾರ್ಯಂ ತತ್, ಧೈರ್ಯಂ ಅಸ್ಯ ಅಸ್ತೀತಿ ಧೈರ್ಯವತ್ ಯಥಾ ಭವತಿ ತಥಾ, ಆರ್ಯಸ್ಯ ಸಂಮತಂ, ದುಃಖೇನ ಕರ್ತುಂ ಶಕ್ಯಂ, ಅತಿಶಯೇನ ದುಷ್ಕರಂ, ಅನ್ಯೈಃ ದುಷ್ಕರತರಂ, ಮಹತ್ ಫಲಂ ಯಸ್ಯ ತತ್,

ಕ್ರಿ.—ಶೃಣೋತು ಶೃಣುತಾತ್ ಶೃಣುತಾಂ ಶೃಣ್ವಂತು, ಶೃಣು ಶೃಣುತಾತ್ ಶೃಣುತಂ ಶೃಣುತ, ಶೃಣವಾನಿ ಶೃಣವಾವ ಶೃಣವಾಮ. ಶ್ರು ಶ್ರವಣೇ to hear, ಸಕ.। ಅನಿ.। ಪರ.। ಲೋಟ್. ಭವಿತಾ ಭವಿತಾರೌ ಭವಿತಾರಃ,

Rarest Archiver

ಭವಿತಾಸಿ ಭವಿತಾಸ್ಥಃ ಭವಿತಾಸ್ಥ, ಭವಿತಾಸ್ಮಿ ಭವಿತಾಸ್ವಃ ಭವಿತಾಸ್ಮಃ. ಭೂ ಸತ್ತಾಯಾಂ ಅಕ.। ಸೇಟ್.। ಪರ.। to be, to become, ಅನದ್ಯತನ ಭವಿಷ್ಯತಿ ಲುಟ್.

ಅವ.—ಆ ದೇವತಾಕಾರ್ಯವನ್ನೇ ವಿವರಿಸುವುದಕ್ಕಾಗಿ ಲೋಕಕ್ಕೆ ಒದಗಿದ ಸಂಕಷ್ಟವನ್ನು ಹೇಳುತ್ತಾರೆ—

ಅಪಿಧಾಯ ಸೂತ್ರಹೃದಯಂ ಸತಾಂ ಪ್ರಿಯಂ
ಪ್ರವಿಧಾಯ ಭಾಷ್ಯಮಧುನಾ ನಿಜೇಚ್ಛಯಾ ।
ಅಪರೈಃ ಶ್ರುತಿಸ್ಮೃತಿನಿಜಾರ್ಥದೂಷಕೈಃ
ಸುತರಾಂ ತಿರೋಭವತಿ ಸಂವಿದಾಹತಾ ॥೪೫॥

ಅ.ಅ—ಅಧುನಾ = ಈಗ, ಶ್ರುತಿಸ್ಮೃತಿ = ವೇದ ಮತ್ತು ಸ್ಮೃತಿಗಳ, ನಿಜಾರ್ಥ = ಸರಿಯಾದ ಅರ್ಥಗಳನ್ನು, ದೂಷಕೈಃ = ಕೆಡಿಸುವ, ಅಪರೈಃ=ಇತರರಾದ ಅಸುರರಿಂದ, ಸತಾಂ ಪ್ರಿಯಂ=ಸಜ್ಜನರಿಗೆ ಇಷ್ಟವಾದ, ಸೂತ್ರಹೃದಯಂ = ಬ್ರಹ್ಮಸೂತ್ರಾಭಿಪ್ರಾಯವನ್ನು, ಅಪಿಧಾಯ=ಮುಚ್ಚಿ, ನಿಜೇಚ್ಛಯಾ = ತಮ್ಮ ಇಚ್ಛೆಯಿಂದ, ಭಾಷ್ಯಂ = ವೇದ, ಉಪನಿಷತ್ತು, ಸೂತ್ರಗಳ, ವಿವರಣೆಯನ್ನು, ಪ್ರವಿಧಾಯ = ಮಾಡಿ, ಆಹತಾ = ಹಾಳು ಮಾಡಲ್ಪಟ್ಟ, ಸಂವಿತ್ = ತತ್ವಜ್ಞಾನವು, ಸುತರಾಂ = ಬಹಳವಾಗಿ, ತಿರೋಭವತಿ = ಮರೆಯಾಗುತ್ತಿದೆ.

ತಾ.—ಈ ಕಲಿಕಾಲದಲ್ಲಿ ದುರ್ವಾದಿಗಳು ಸಜ್ಜನರಿಗೆ ಸಂಮತವಾದ ಸರಿಯಾದ ಅರ್ಥಗಳನ್ನು ಮುಚ್ಚಿಟ್ಟು ವೇದ ಉಪನಿಷತ್ತು ಮತ್ತು ಬ್ರಹ್ಮಸೂತ್ರಗಳಿಗೆ ತಮಗೆ ತೋಚಿದಂತೆ ಭಾಷ್ಯಗಳನ್ನು ಮಾಡಿ ಈ ಶ್ರೇಷ್ಠಗ್ರಂಥಗಳ ತಾತ್ಪರ್ಯವನ್ನು ಕೆಡಿಸಿದ್ದಾರೆ. ಆದುದರಿಂದ ಈಗ ಭರತಖಂಡದಲ್ಲಿ, ತತ್ತ್ವಜ್ಞಾನಮಾರ್ಗವು ಹಾಳಾಗಿರುತ್ತದೆ.

ವಿ.—ಸೂತ್ರಾಣಾಂ ಹೃದಯಂ, ತತ್, ನಿಜಾ ಚ ಸಾ ಇಚ್ಛಾ ಚ ತಯಾ, ಶ್ರುತಯಶ್ಚ ಸ್ಮೃತಯಶ್ಚ ಶ್ರುತಿಸ್ಮೃತೀನಾಂ ನಿಜಾಶ್ಚ ತೇ ಅರ್ಥಾಶ್ಚ, ತೇಷಾಂ ದೂಷಕಾಃ ತೈಃ

Rarest Archiver

ಕ್ರಿ.—ತಿರಸ್ (ಅವ್ಯಯ), ಭವತಿ ಭವತಃ ಭವಂತಿ. ಭೂ ಧಾತುಲಟ್.

ಅವ.—ದುರ್ಮತಗಳನ್ನು ನಿರಾಕರಿಸಿ ಸಜ್ಜನರನ್ನು ಉದ್ಧರಿಸುವುದಕ್ಕಾಗಿ ಬ್ರಹ್ಮಸೂತ್ರಗಳಿಗೆ ನಮಗೆ ಸಂಮತವಾದ ಅರ್ಥವನ್ನು ಪ್ರಕಟಿಸು ಎಂದು ನಾರಾಯಣಮುನಿಗಳು ಅಪ್ಪಣೆ ಮಾಡಿದರು—

ಅಪನೇತುಮೇನಮನಯಂ ಕೃತಂ ಖಲೈಃ
ಪ್ರತಿನೇತುಮಾತ್ಮಜನತಾಂ ಶುಭಾಂ ಗತಿಂ ।
ಕುರು ಸೂತ್ರಭಾಷ್ಯಮವಿಲಂಬಿತಂ ವ್ರಜೇಃ
ಸುಮತೇನ ಯೋಜಯ ಕವೇ
(ಕವೇಃ) ಶ್ರುತಿಸ್ಮೃತೀಃ ॥೪೬॥

ಅ.ಅ.—ಖಲೈಃ ಕೃತಂ = ದುಷ್ಟರಿಂದ ಮಾಡಲ್ಪಟ್ಟ, ಏನಂ ಅನಯಂ = ಈ ಕುಯುಕ್ತಿಯ ದುಶ್ಶಾಸ್ತ್ರವನ್ನು, ಅಪನೇತುಂ = ನಿವಾರಿಸುವುದಕ್ಕೆ, ಆತ್ಮಜನತಾಂ = ನಮ್ಮ ಜನರ ಸಮೂಹವನ್ನು, ಶುಭಾಂ ಗತಿಂ = ಒಳ್ಳೆಯ ಸ್ಥಿತಿಯನ್ನು (ಮೋಕ್ಷವನ್ನು), ಪ್ರತಿನೇತುಂ = ಹೊಂದಿಸುವುದಕ್ಕೆ, ಸೂತ್ರ-ಭಾಷ್ಯಂ ಕುರು = ಬ್ರಹ್ಮಸೂತ್ರಭಾಷ್ಯವನ್ನು ಮಾಡು. ಅವಿಲಂಬಿತಂ ವ್ರಜೇಃ =ಬೇಗನೆ ಹೋಗು. ಕವೇ!=ಜ್ಞಾನಿಯೇ ! (ಕವೇಃ=ಜ್ಞಾನಿಗಳಾದ ವೇದ ವ್ಯಾಸರ), ಶ್ರುತಿಸ್ಮೃತೀಃ=ವೇದ ಮತ್ತು ಸ್ಮೃತಿಗಳನ್ನು, ಸುಮತೇನ=ಒಳ್ಳೆ ಸಿದ್ಧಾಂತದಿಂದ, ಯೋಜಯ=ಕೂಡಿಸು.

ತಾ.—ಜ್ಞಾನಿಯಾದ ಶ್ರೀಪೂರ್ಣಪ್ರಜ್ಞನೇ! ನೀನು ದುಷ್ಟರು ಮಾಡಿದ ದುಶ್ಶಾಸ್ತ್ರವನ್ನು ಖಂಡಿಸಬೇಕಾಗಿದೆ. ನಮ್ಮವರನ್ನು ಮೋಕ್ಷಕ್ಕೆ ಒಯ್ಯಬೇಕಾಗಿದೆ. ಅದಕ್ಕಾಗಿ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸು. ಬೇಗನೆ ಇಲ್ಲಿಂದ ಹೊರಡು. ವೇದ ಮತ್ತು ಸ್ಮೃತಿಗಳ ಸರಿಯಾದ ಸಿದ್ಧಾಂತವನ್ನು ಪ್ರಕಟಗೊಳಿಸು.

ವಿ.—ನ ನಯಃ ಅನಯಃ ತಂ, ಜನಾನಾಂ ಸಮೂಹಃ ಜನತಾ, ಆತ್ಮನಃ ಜನತಾ ತಾಂ, ಸೂತ್ರಾಣಾಂ ಭಾಷ್ಯಂ ತತ್, ಶ್ರುತಯಶ್ಚ ಸ್ಮೃತಯಶ್ಚ ತಾಃ ;

Rarest Archiver

ಕ್ರಿ.—ಕುರು, ಸರ್ಗ ೫ ಶ್ಲೋಕ ೨೫. ನೋಡಿರಿ. ಪ್ರಜೇಃ, ಸರ್ಗ ೬ ಶ್ಲೋಕ ೪೮ ನೋಡಿರಿ. ಯೋಜಯತು ಯೋಜಯತಾತ್ ಯೋಜಯತಾಂ ಯೋಜಯಂತು, ಯೋಜಯ ಯೋಜಯತಾತ್ ಯೋಜಯತಂ ಯೋಜಯತ, ಯೋಜಯಾನಿ ಯೋಜಯಾವ ಯೋಜಯಾಮ. ಯುಜಿರ್ ಯೋಗೇ ಣಿಜಂತ, ಕರ್ತರಿ ಲೋಟ್.

ಅವ.—ಆಗ ಶ್ರೀ ಮ ಧ್ವಾ ಚಾ ರ್ಯ ರು ಶ್ರೀಮನ್ನಾರಾಯಣನಲ್ಲಿ ವಿಜ್ಞಾಪಿಸಿದರು—

ಅಮಿತಾಂ ಮಿತಾಮಪಿ ಗಿರಂ ಜಗದ್ಗುರೋ-
ರಿತಿ ತಾಂ ನಿಶಮ್ಯ ವಿರಲೇತರಾಂತರಃ ।
ವದತಾಂ ವರಸ್ತಮವದತ್ತದಾ ತಯೋ-
ರ್ವಿರಹಾಕ್ಷಮಃ ಖಲು ಚರಾಚರೇಶಯೋಃ ॥೪೭॥

ಅ. ಅ—ತದಾ = ಆಗ, ವದತಾಂ ವರಃ = ಮಾತಾಡುವವರ ಮಧ್ಯದಲ್ಲಿ ಶ್ರೇಷ್ಠರಾದ, ವಿರಲೇತರಾಂತರಃ = ಶ್ರೀಪೂರ್ಣಪ್ರಜ್ಞಾಚಾರ್ಯರು, ಮಿತಾಂ ಅಪಿ = ಮಿತವಾಗಿದ್ದರೂ (ಸ್ವಲ್ಪವೇ ಆಗಿದ್ದರೂ,) ಅಮಿತಾಂ = ಬಹಳ ಅರ್ಥ ವುಳ್ಳದ್ದರಿಂದ ಮಿತಿಯಿಲ್ಲದ, ಜಗದ್ಗುರೋಃ = ಪ್ರಪಂಚದ ಗುರುವಾದ ಶ್ರೀನಾರಾಯಣನ, ತಾಂ ಗಿರಂ = ಆ ಮಾತನ್ನು, ನಿಶಮ್ಯ = ಕೇಳಿ, ತದಾ = ಆವಾಗ, ಚರಾಚರೇಶಯೋಃ = ಜಂಗಮಸ್ಥಾವರಾತ್ಮಕವಾದ ಪ್ರಪಂಚಕ್ಕೆ ಸ್ವಾಮಿಯಾದ, ತಯೋಃ = ಆ ವ್ಯಾಸನಾರಾಯಣರ, ವಿರಹಾಕ್ಷಮಃ ಖಲು = ವಿಯೋಗವನ್ನು ಸಹಿಸಲು ಅಸಮರ್ಥರಾಗಿ ಮಾತ್ರವೇ, ತಂ = ಆ ನಾರಾಯಣ ಮುನಿಯನ್ನು ಕುರಿತು, ಅವದತ್ = ಮಾತನಾಡಿದರು.

ತಾ.— ಶಬ್ದದಿಂದ ಕಡಿಮೆಯಾಗಿದ್ದರೂ ಅರ್ಥದಿಂದ ವಿಸ್ತಾರವಾದ ಜಗತ್ತಿಗೇ ತಂದೆಯಾದ ಶ್ರೀನಾರಾಯಣನ ಆ ಮಾತನ್ನು ಕೇಳಿ ಮಾತಾಡುವವ ರಲ್ಲಿ ಶ್ರೇಷ್ಠರಾದ ಶ್ರೀಮಧ್ವಾಚಾರ್ಯರು ಈ ಪ್ರಪಂಚಕ್ಕೇ ಪ್ರಭುಗಳಾದ ಆ ವ್ಯಾಸ ನಾರಾಯಣರನ್ನು, ಬಿಟ್ಟು ಹೋಗಲು ಅಸಮರ್ಥರಾಗಿ ಹೀಗೆ ಹೇಳಿದರು.

ವಿ.—ಜಗತಾಂ ಗುರುಃ ತಸ್ಯ, ವಿರಲಾತ್ ಇತರತ್, ವಿರಲೇತರತ್

Rarest Archiver

ಅಂತರಂ ಯಸ್ಯ, ನಕ್ಷಮಃ ಅಕ್ಷಮಃ ವಿರಹೇ ಅಕ್ಷಮಃ, ಚರಂ ಚ ಅಚರಂ ಚ ಚರಾಚರಾಚರೇ ಚರಾಚರಯೋಃ ಈಶೌ ಚರಾಚರೇಶೌ ತಯೋಃ,

ಕ್ರಿ.—ಅವದತ್. ಸರ್ಗ ೫, ಶ್ಲೋಕ ೩೧ ನೋಡಿರಿ. ವದ ವ್ಯಕ್ತಾಯಾಂ ವಾಚಿ ಲಙ್. to speak.

ಅವ.—ಆಚಾರ್ಯರು ಏನನ್ನು ವಿಜ್ಞಾಪಿಸಿದರು ?

ಭವತೋರಿತಃ ಸ್ವತತಸೇವನಾಮೃತೇ
ಮಮ ಮಂಕ್ತುಮಸ್ತು ಭಗವನ್ನನುಗ್ರಹಃ ।
ನ ಲಭೇಯ ವಲ್ಲಭತಮೇದೃಶಂ ಸುಖಂ
ಜಗತಾಂ ತ್ರಯೇऽಪಿ ಜಗದೇಕಮಂಗಲಂ ॥೪೮॥

ಅ.ಅ—ಭಗವನ್ ! = ಪೂಜ್ಯರೇ !, ಇತಃ = ಇಲ್ಲಿ, ಭವತೋಃ = ನಿಮ್ಮಿಬ್ಬರ, ಸತತಸೇವನಾಮೃತೇ = ಎಡೆಬಿಡದ ಸೇವೆಯೆಂಬ ಅಮೃತದಲ್ಲಿ, ಮಮ = ನನಗೆ, ಮಂಕ್ತುಂ = ಸ್ನಾನಮಾಡಲು, ಅನುಗ್ರಹಃ ಅಸ್ತು = ಅನುಗ್ರಹವು ಆಗಲಿ. ವಲ್ಲಭತಮ ! = ಅತ್ಯಂತಪ್ರಿಯರಾದ ನಾರಾಯಣದೇವರೇ !, ಜಗದೇಕಮಂಗಲಂ = ಲೋಕದಲ್ಲಿ ಮುಖ್ಯಮಂಗಳಕರವಾದ, ಈದೃಶಂ ಸುಖಂ = ಇಂತಹ ಆನಂದವನ್ನು, ಜಗತಾಂ ತ್ರಯೇ ಅಪಿ = ಲೋಕಗಳ ಮೂರರಲ್ಲಿಯೂ, ನ ಲಭೇಯ = ಹೊಂದಲಾರೆನು.

ತಾ.—ಪೂಜ್ಯರಾದ ನಾರಾಯಣದೇವರೇ ! ನಾನು ಇಲ್ಲೇ ಇದ್ದು ತಮ್ಮಿಬ್ಬರನ್ನು ಎಡೆಬಿಡದೆ ಸೇವಿಸಲು ಅವಕಾಶವನ್ನು ಮಾಡಿಕೊಟ್ಟು ಅನುಗ್ರಹಿಸಿರಿ. ನಿಮ್ಮಿಬ್ಬರ ಸೇವೆಯು ನನಗೆ ಅಮೃತಸ್ನಾನಕ್ಕೆ ಸಮಾನವಾಗಿದೆ. ಅತ್ಯಂತಪ್ರಿಯರಾದ ನಾರಾಯಣದೇವರೆ ! ಜಗತ್ತಿಗೆ ಮುಖ್ಯಮಂಗಳಕರವಾದ ಇಂತಹ ಆನಂದವು ನನಗೆ ಮೂರುಲೋಕಗಳಲ್ಲಿಯೂ ದೊರೆಯಲಾರದು.

ವಿ.—ಸತತಂ ಚ ತತ್ ಸೇವನಂ ಚ, ಸತತಸೇವನಮೇವ ಅಮೃತಂ ತಸ್ಮಿನ್, ಅತಿಶಯೇನ ವಲ್ಲಭಃ ವಲ್ಲಭತಮಃ ತಸ್ಯ ಸಂಬುದ್ಧಿಃ, ಏಕಂ ಚ ತತ್ ಮಂಗಲಂ ಚ, ಜಗತಃ ಏಕಮಂಗಲಂ, ತತ್,

Rarest Archiver

ಕ್ರಿ.—ಅಸ್ತು-ಸರ್ಗ ೫ ಶ್ಲೋಕ ೨೮ ನೋಡಿರಿ. ಲಭೇತ ಲಭೇಯಾತಾಂ ಲಭೇರನ್, ಲಭೇಥಾಃ ಲಭೇಯಾಥಾಂ ಲಭೇಧ್ವಂ, ಲಭೇಯ ಲಭೇವಹಿ ಲಭೇಮಹಿ. ಡುಲಭಷ್ (ಲಭ್) ಪ್ರಾಪ್ತೌ, ಸಕ.। ಅನಿ.। ಆತ್ಮ.। to get, to obtain, ವಿಧಿಲಿಙ್

ಅವ.—ಹಾಗಾದರೆ ಸಜ್ಜನರಿಗೆ ಜ್ಞಾನೋಪದೇಶಮಾಡುವವರಾರು ಎಂದರೆ ಉತ್ತರವನ್ನು ಹೇಳುತ್ತಾರೆ—

ಕಲಿಕಾಲಕಾಲಿತಗುಣೇ ಧರಾತಲೇ
ಸುಜನೋ ನ ನೂನಮಧುನಾಸ್ತಿ ಯೋಗ್ಯಧೀಃ।
ಪರತತ್ತ್ವವರ್ಣನಮಯೋಗ್ಯತಾವತೇ
ನನು ಹವ್ಯದಾನಮಿವ ನಿಂದ್ಯತೇ ಶುನೇ ॥೪೯॥

ಅ.ಅ—ಅಧುನಾ = ಈಗ, ಕಲಿಕಾಲ = ಕಲಿಕಾಲದಿಂದ, ಕಾಲಿತ = ಓಡಿಸಲ್ಪಟ್ಟ (ಹಾಳುಮಾಡಲ್ಪಟ್ಟ), ಗುಣೇ = ಜ್ಞಾನಭಕ್ತಿವೈರಾಗ್ಯಾದಿಗುಣಗಳುಳ್ಳ, ಧರಾತಲೇ = ಭೂಮಿಯಲ್ಲಿ, ಯೋಗ್ಯಧೀಃ = ತತ್ತ್ವಜ್ಞಾನಯೋಗ್ಯವಾದ ಬುದ್ಧಿಯುಳ್ಳ, ಸುಜನಃ = ಸಜ್ಜನನು, ನೂನಂ ನಾಸ್ತಿ = ನಿಜವಾಗಿಯೂ ಇಲ್ಲ. ಅಯೋಗ್ಯತಾವತೇ = ಬ್ರಹ್ಮಜ್ಞಾನಕ್ಕೆ ಯೋಗ್ಯನಲ್ಲದವನಿಗೆ, ಪರತತ್ತ್ವವರ್ಣನಂ = ಪರಬ್ರಹ್ಮಜ್ಞಾನದ ಉಪದೇಶವು, ಶುನೇ = ನಾಯಿಗೆ, ಹವ್ಯದಾನಂ ಇವ = ಯಜ್ಞದ ಹವಿಸ್ಸಿನ ಕೊಡುವಿಕೆಯಂತೆ, ನಿಂದ್ಯತೇ ನನು = ನಿಂದಿಸಲ್ಪಡುತ್ತದೆಯಷ್ಟೆ!

ತಾ.—ಸ್ವಾಮಿಯೇ! ಈ ಭೂಲೋಕದಲ್ಲಿ ಕಲಿಯ ಪ್ರಭಾವದಿಂದ, ಜ್ಞಾನಭಕ್ತಿವೈರಾಗ್ಯಾದಿಗುಣಗಳುಳ್ಳ ಜನರಿಲ್ಲ. ಆದುದರಿಂದ ತತ್ತ್ವಜ್ಞಾನೋಪದೇಶಕ್ಕೆ ಅರ್ಹನಾದ ಮನುಷ್ಯನೇ ಇಲ್ಲ. ಯೋಗ್ಯತೆ ಇಲ್ಲದ ಜೀವನಿಗೆ ಪರಬ್ರಹ್ಮತತ್ತ್ವೋಪದೇಶವು ಯಜ್ಞದ ಪವಿತ್ರವಾದ ಹವಿಸ್ಸನ್ನು ನಾಯಿಗೆ ತಿನ್ನಲು ಕೊಟ್ಟಂತಾಗಿ ನಿಂದಾಸ್ಪದವಾಗುತ್ತದೆ.

ವಿ.—ಕಲೇಃ ಕಾಲಃ, ಕಲಿಕಾಲೇನ ಕಾಲಿತಾಃ ಗುಣಾಃ ಯಸ್ಮಿನ್ ತತ್, ತಸ್ಮಿನ್, ಧರಾಯಾಃ ತಲಂ ತಸ್ಮಿನ್, ಶೋಭನಶ್ಚಾಸೌ ಜನಶ್ಚ,

Rarest Archiver

ಯೋಗ್ಯಾ ಧೀಃ ಯಸ್ಯ ಸಃ, ಪರಂ ಚ ತತ್ ತತ್ವಂ ಚ, ಪರತತ್ವಸ್ಯ ವರ್ಣನಂ, ಯೋಗ್ಯತಾಯಾಃ ಅಭಾವಃ ಅಯೋಗ್ಯತಾ, ಅಯೋಗ್ಯತಾ ಅಸ್ಯಾಸ್ತೀತಿ ತಸ್ಮೈ, ಹವ್ಯಸ್ಯ ದಾನಂ,

ಕ್ರಿ.—ಸಂತಿ-ಸರ್ಗ ೫ ಶ್ಲೋಕ ೩೨ ನೋಡಿರಿ. ನಿಂದ್ಯತೇ ನಿಂದ್ಯೇತೇ ನಿಂದ್ಯಂತೇ, ನಿಂದ್ಯಸೇ ನಿಂದ್ಯೇಥೇ ನಿಂದ್ಯಧ್ವೇ, ನಿಂದ್ಯೇ ನಿಂದ್ಯಾವಹೇ ನಿಂದ್ಯಾಮಹೇ, ಣಿದಿ (ನಿಂದ್) ಕುತ್ಸಾಯಾಂ (ನಿಂದ್) ಸಕ.। ಸೇಟ್.। ಪರ.। to blame· ಕರ್ಮಣಿ ಲಟ್. (ಜನಾಃ ಶುನೇ ಹವ್ಯದಾನಂ ನಿಂದಂತಿ)

ಅವ.—ಆಗ ಶ್ರೀನಾರಾಯಣದೇವರು ಹೇಳಿದ ಸಮಾಧಾನವನ್ನು ವಿವರಿಸುತ್ತಾರೆ—

ಇತಿ ತಂ ಬ್ರುವಾಣಮಯಮಬ್ರವೀದ್ವಿಭುಃ
ಭುವಿ ಸಂತಿ ಸೌಮ್ಯ ಪುರುಷಾ ಗುಣೋಚಿತಾಃ।
ವಿಮಲಾನ್ ಮಣೀನಿವ ಗುಣೋಜ್ಝಿತಾನಿಮಾನ್
ದಯಯಾ ವಿಶೋಧಯ ವಿಶುದ್ಧಗೋಗಣೈಃ ॥೫೦॥

ಅ.ಅ.—ವಿಭುಃ=ಸರ್ವವ್ಯಾಪಿಯಾದ, ಅಯಂ=ಈ ನಾರಾಯಣನು, ಇತಿ=ಹೀಗೆಂದು, ಬ್ರುವಾಣಂ ತಂ=ಹೇಳುತ್ತಿರುವ ಆ ಮಧ್ವಾಚಾರ್ಯರನ್ನು ಕುರಿತು, ಅಬ್ರವೀತ್=ಹೇಳಿದನು. ಸೌಮ್ಯ=ಸಾಧುವಾದ ಮಧ್ವನೇ! ಭುವಿ=ಲೋಕದಲ್ಲಿ, ಗುಣೋಚಿತಾಃ=ಜ್ಞಾನಭಕ್ತ್ಯಾದಿಗುಣಗಳಿಗೆ ಯೋಗ್ಯರಾದ, ಪುರುಷಾಃ=ಮನುಷ್ಯರು, ಸಂತಿ=ಇದ್ದಾರೆ. ವಿಮಲಾನ್=ಶುದ್ಧರಾದ, ಸ್ವಭಾವದಿಂದ ಕೊಳೆಇಲ್ಲದ, ಗುಣೋಜ್ಝಿತಾನ್=ಗುಣಗಳಿಲ್ಲದ, ಭಂಗಾರದ ತಂತಿ ಇಲ್ಲದ, ಇಮಾನ್=ಈ ಜೀವರನ್ನು, ಮಣೀನ್ ಇವ=ರತ್ನಗಳನ್ನೋಪಾದಿಯಲ್ಲಿ, ದಯಯಾ=ದಯೆಯಿಂದ, ವಿಶುದ್ಧಗೋಗಣೈಃ=ಶುದ್ಧವಾದ ಮಾತುಗಳ ಸಮೂಹಗಳಿಂದ, ಶುದ್ಧವಾದ ನೀರಿನ ಸಮೂಹಗಳಿಂದ, ವಿಶೋಧಯ=ಅಜ್ಞಾನಾದಿದೋಷವಿಲ್ಲದವರನ್ನಾಗಿ ಮಾಡು, ತೊಳೆ.

ತಾ.—ಈ ರೀತಿ ಆಚಾರ್ಯರು ವಿಜ್ಞಾಪಿಸಿದಾಗ ಶ್ರೀನಾರಾಯಣದೇವರು ಹೀಗೆ ಅಪ್ಪಣೆಮಾಡಿದರು—ಎಲೈ ಮಧ್ವಾಚಾರ್ಯನೇ! ಭೂಮಿಯಲ್ಲಿ

Rarest Archiver

ಜ್ಞಾನಭಕ್ತಿವೈರಾಗ್ಯಾದಿಗುಣಗಳಿಗೆ ಯೋಗ್ಯರಾದ ಅಧಿಕಾರಿಗಳಾದ ಸಜ್ಜನರು ಈಗಲೂ ಇದ್ದಾರೆ. ಸಜ್ಜನರ ಸಂಗವಿಲ್ಲದಿರುವುದರಿಂದ ಅವರ ಜ್ಞಾನಾದಿಗುಣ ಗಳು ಪ್ರಕಾಶಕ್ಕೆ ಬಂದಿಲ್ಲ. ಆದರೂ ಸ್ವಭಾವದಿಂದ ಪರಿಶುದ್ಧರಾದ ಅವರನ್ನು, ನಿರ್ಮಲವಾದ ನೀರಿನಿಂದ ತೊಳೆದು ರತ್ನಗಳನ್ನು ಶುದ್ಧಿಗೊಳಿಸುವಂತೆ ಅವರ ಮೇಲೆ ದಯೆಯಿಟ್ಟು ನಿನ್ನ ತತ್ತ್ವೋಪದೇಶಗಳಿಂದ ಪವಿತ್ರೀಕರಿಸು. ರತ್ನಗಳನ್ನು ಭಂಗಾರದ ತಂತಿಗಳಿಂದ ಪೋಣಿಸಬೇಕು. ಆದರೆ ಅವುಗಳನ್ನು ಪೋಣಿಸದೇ ಇದ್ದಾಗ, ತ್ರಾಸ (ಮಂಕುತನ) ಮುಂತಾದ ದೋಷವಿಲ್ಲದೆ ಇದ್ದ ಆ ರತ್ನಗಳನ್ನು ಒಳ್ಳೆಯ ರತ್ನಪರೀಕ್ಷಕನು ಶುದ್ಧಗೊಳಿಸುವಂತೆ ಗುಣಗಳಿಗೆ ಉಚಿತರಾದ ಸಜ್ಜನರು ಪ್ರಕೃತದಲ್ಲಿ ಗುಣರಹಿತರಾಗಿದ್ದರೂ ಸ್ವಭಾವದಿಂದ ಶುದ್ಧರಾದ ಅವರನ್ನು ತತ್ತ್ವೋಪದೇಶದಿಂದ ಉದ್ಧರಿಸು ಎಂದು ಭಾವ.

ವಿ.—ಗುಣಾನಾಂ ಉಚಿತಾಃ, ಗುಣೈಃ ಉಜ್ಝಿತಾಃ ತಾನ್, ವಿಶುದ್ಧಾಶ್ಚ ತಾಃ ಗಾವಶ್ಚ, ವಿಶುದ್ಧಗವಾಂ ಗಣಾಃ ತೈಃ ;

ಕ್ರಿ.—ಅಬ್ರವೀತ್ ಸರ್ಗ ೫ ಶ್ಲೋಕ ೨೭ ನೋಡಿರಿ, ವಿ + ಶೋಧಯತು ಶೋಧಯತಾತ್ ಶೋಧಯತಾಂ ಶೋಧಯಂತು, ಶೋಧಯ ಶೋಧಯತಾತ್ ಶೋಧಯತಂ ಶೋಧಯತ, ಶೋಧಯಾನಿ ಶೋಧಯಾವ ಶೋಧಯಾಮ. ಶುಧ. ಶೌಚೇ ಅಕ.। ಅನಿ.। ಪರ.। ಣಿಜಂತಸಕರ್ಮಕ. ಲೋಟ್. to cleanse.

ಅವ.—ದುರ್ಮತನಿರಾಕರಣದಲ್ಲಿಯೂ ಸನ್ಮತಸ್ಥಾಪನೆಯಲ್ಲಿಯೂ ನನ್ನ ಆಜ್ಞೆಯೇ ನಿನಗೆ ಬೆಂಬಲವಾಗಿರುತ್ತದೆ. ಆದುದರಿಂದ ನೀನು ಸಜ್ಜನರಿಗೆ ತತ್ತ್ವೋಪದೇಶವನ್ನು ಮಾಡಲೇಬೇಕು—

ತವ ಕೀರ್ತಿರಾರ್ತಿಮತಿಮಾತ್ರಮಾನಯೇ
ದಶುಭಾನ್ ಪ್ರಭಾಕರವಿಭೇವ ಕೌಶಿಕಾನ್ ।
ಕಮಲಾಕರನಿವ ಶುಭಾನ್ ಪ್ರಬೋಧಯೇತ್
ಪರಮಾಜ್ಞಯಾ ಮಮ ವಿಶೇಷತೋಽನಿಶಂ ॥೫೧॥

Rarest Archiver

ಅ.ಅ—ತವ ಕೀರ್ತಿಃ = ನಿನ್ನ ಯಶಸ್ಸು, ಮಮ ಪರಮಾಜ್ಞಯಾ = ನನ್ನ ಉತ್ತಮವಾದ ಅಪ್ಪಣೆಯಿಂದ, ವಿಶೇಷತಃ = ಹೆಚ್ಚಾಗಿ, ಅನಿಶಂ = ಯಾವಾಗಲೂ, ಪ್ರಭಾಕರವಿಭಾ ಕೌಶಿಕಾನ್ ಇವ = ಸೂರ್ಯನ ಪ್ರಭೆಯು ಗೂಬೆಗಳನ್ನೆಂಬಂತೆ, ಅಶುಭಾನ್ = (ತಾಮಸರನ್ನು) ದುಷ್ಟರನ್ನು ಕುರಿತು, ಅತಿಮಾತ್ರಂ = ಹೆಚ್ಚಾಗಿ, ಆರ್ತಿಂ = ವ್ಯಥೆಯನ್ನು, ಆನಯೇತ್ = ಹೊಂದಿಸಲಿ, ಶುಭಾನ್ = ಸಾತ್ವಿಕರನ್ನು, ಕಮಲಾಕರಾನ್ ಇವ = ತಾವರೆಹೂವುಗಳ ಕೊಳಗಳನ್ನೆಂಬಂತೆ, ಪ್ರಬೋಧಯೇತ್ = ಎಚ್ಚರಗೊಳಿಸಲಿ, ಅರಳಿಸಲಿ.

ತಾ.—ಎಲೈ ಮಧ್ವನೇ! ಸೂರ್ಯನ ಪ್ರಭೆಯು ಗೂಬೆಗಳಿಗೆ ಕಣ್ಣು ಕಾಣಿಸದಂತೆ ಮಾಡಿ ದುಃಖವನ್ನುಂಟುಮಾಡುವಂತೆ ನಿನ್ನ ಕೀರ್ತಿಯು ದುರ್ಜನರಿಗೆ ಬಹಳ ದುಃಖವನ್ನುಂಟುಮಾಡಲಿ. ಮತ್ತು ಸೂರ್ಯನ ಪ್ರಭೆಯು ಕೆರೆಗಳಲ್ಲಿರುವ ತಾವರೆಗಳನ್ನು ಅರಳಿಸುವಂತೆ ನಿನ್ನ ಕೀರ್ತಿಯು ಸಜ್ಜನರನ್ನು ಸಂತೋಷಪಡಿಸಲಿ. ಈ ಸಾಮರ್ಥ್ಯವು ಸ್ವತಃ ನಿನಗೇ ಇದೆ. ನಮ್ಮ ಅಪ್ಪಣೆಯಿಂದ ನಿನ್ನ ಕೀರ್ತಿಯು ದುಷ್ಟರಿಗೆ ದುಃಖಕರವೂ ಸಾಧುಗಳಿಗೆ ಸುಖಕರವೂ ಆಗಲಿ ಎಂದು ಶ್ರೀನಾರಾಯಣದೇವರು ಆಜ್ಞಾಪಿಸಿದರು. ಭೂಮಿಯಲ್ಲಿ ದುಷ್ಟರೂ ಸಾಧುಗಳೂ ಇರುತ್ತಾರೆ. ದುಷ್ಟರ ದುರ್ಮತಗಳನ್ನು ನಿರಾಕರಿಸಿ, ಸಾಧುಗಳನ್ನು ಉದ್ಧರಿಸಲು ದೇವತೆಗಳ ಪ್ರಾರ್ಥನೆಯಂತೆ ವಿಷ್ಣುವಿನ ಆಜ್ಞೆಯಿಂದ ಅವತರಿಸಿರುವ ನೀನು ಈ ಕಾರ್ಯವನ್ನು ಸಾಧಿಸಲೇ ಬೇಕೆಂದು ಶ್ರೀ ನಾ ರಾ ಯ ಣ ಮುನಿಯು ಶ್ರೀಮಧ್ವಾಚಾರ್ಯರನ್ನು ನಿರ್ಬಂಧಿಸಿದರು ಎಂದು ಭಾವ.

ವಿ.—ನ ಶುಭಾಃ ಅಶುಭಾಃ ತಾನ್, ಪ್ರಭಾಕರಸ್ಯ ವಿಭಾ, ಕೌಶಿಕ = ಗೂಬೆ, ದಿವಾಂಧಃ ಕೌಶಿಕಃ ಘೂಕಃ—ಅಮರ. ಕಮಲಾನಾಂ ಆಕರಾಃ ತಾನ್, ಪರಮಾ ಚ ಸಾ ಆಜ್ಞಾ ಚ ತಯಾ ;

ಕ್ರಿ.—ಆ + ನಯೇತ್ ನಯೇತಾಂ ನಯೇಯುಃ, ನಯೇಃ ನಯೇತಂ ನಯೇತ, ನಯೇಯಂ ನಯೇವ ನಯೇಮ, ಣೀಞ್ (ನೀ) ಸಕ.। ಅನಿ.। ಉಭ.। to take, ವಿಧಿಲಿಙ್. ಪ್ರ + ಬೋಧಯೇತ್ ಬೋಧಯೇತಾಂ ಬೋಧಯೇಯುಃ, ಬೋಧಯೇಃ ಬೋಧಯೇತಂ ಬೋಧಯೇತ, ಬೋಧ-

Rarest Archiver

ಯೇಯಂ ಬೋಧಯೇವ ಬೋಧಯೇಮ. ಬುಧ ಅವಗಮೇ-(ದಿವಾದಿ)ಣಿಜಂತ ವಿಧಿಲಿಙ್ to make to know.

ಅವ.—ಹೀಗೆ ಶ್ರೀನಾರಾಯಣನು ಮಾಡಿದ ಅಪ್ಪಣೆಯಿಂದ ಆ ಕಾರ್ಯವು ಶ್ರೀಮಧ್ವಾಚಾರ್ಯರ ಮನಸ್ಸಿಗೆ ಒಪ್ಪಿಗೆಯಾಯಿತು—

ಇತಿ ಸಾ ಮಹೀಧರಮುಖಾದ್ವಿನಿಸ್ಸೃತಾ
ಜಗತಾಂ ಸುಖಾಯ ವಿಶದಾ ಸರಸ್ವತೀ ।
ದ್ವಿಜರಾಜಗೋವಿಷಯತಾತಿಪೂರಿತಂ
ಪ್ರವಿವೇಶ ಮಧ್ವಪೃಥುಬುದ್ಧಿವಾರಿಧಿಂ ॥೫೨॥

ಅ.ಅ.—ಜಗತಾಂ ಸುಖಾಯ = ಲೋಕಗಳ ಹಿತಕ್ಕಾಗಿ, ಇತಿ = ಈ ರೀತಿ, ಮಹೀಧರ=ಭೂಮಿಧಾರಕನಾದ ನಾರಾಯಣನ, ಪರ್ವತದ, ಮುಖಾತ್ =ಬಾಯಿಯಿಂದ, ಗುಹೆಯಿಂದ, ವಿನಿಸ್ಸೃತಾ = ಹೊರಟ, ವಿಶದಾ = ಸ್ವಚ್ಛವಾದ, (ಮಂಗಳಕರವಾದ) ಸಾ ಸರಸ್ವತೀ = ಆ ಮಾತು, ಆ ನದಿಯು, ದ್ವಿಜರಾಜ = ಶ್ರೀವ್ಯಾಸರ, ಚಂದ್ರನ, ಗೋ = ಮಾತಿನ, ಕಿರಣಗಳ, ವಿಷಯತಾ = ಗೋಚರತೆಯಿಂದ, ಅತಿಪೂರಿತಂ = ಅತ್ಯಂತವಾಗಿ ತುಂಬಿದ, ಮಧ್ವ = ಶ್ರೀಮಧ್ವರ, ಪೃಥು = ವಿಶಾಲವಾದ, ಬುದ್ಧಿವಾರಿಧಿಂ=ಜ್ಞಾನಸಮುದ್ರವನ್ನು, ಪ್ರವಿವೇಶ = ಪ್ರವೇಶಿಸಿತು.

ತಾ.—ಪರ್ವತದಿಂದ ಹುಟ್ಟಿದ ನಿರ್ಮಲವಾದ ನದಿಯು ಚಂದ್ರಕಿರಣಗಳ ಸಂಪರ್ಕದಿಂದ ಅಭಿವೃದ್ಧಿ ಹೊಂದಿ, ಸಮುದ್ರವನ್ನು ಪ್ರವೇಶಿಸುತ್ತದೆ. ಅದರಂತೆ ಹಿಂದೆ ಹೇಳಿದಂತೆ ಶ್ರೀನಾರಾಯಣಮುನಿಯ ಮುಖದಿಂದ ಹೊರಟ ಪರಿಶುದ್ಧವಾದ ವಚನವು ಶ್ರೀವೇದವ್ಯಾಸದೇವರ ಆಜ್ಞೆಯಿಂದ ಮೊದಲೇ ತುಂಬಿದ್ದ ಶ್ರೀಮಧ್ವಾಚಾರ್ಯರ ವಿಶಾಲವಾದ ಬುದ್ಧಿಯನ್ನು ಪ್ರವೇಶಿಸಿತು. ವ್ಯಾಸರ ಉಪದೇಶ ಮತ್ತು ನಾರಾಯಣ ಮುನಿಗಳ ಆದೇಶ (ಅಪ್ಪಣೆ) ವಚನಗಳಿಂದ ಸಜ್ಜನರಿಗೆ ಜ್ಞಾನಮಾರ್ಗವನ್ನು ತೋರಿಸಬೇಕೆಂಬ ಬುದ್ಧಿಯು ಶ್ರೀಮಧ್ವಾಚಾರ್ಯರಿಗೆ ಉಂಟಾಯಿತು ಎಂದು ಭಾವ. (ಶ್ರೀವ್ಯಾಸರು ಮೊದಲೇ ಈ ವಿಷಯವನ್ನು ಆಚಾರ್ಯರಿಗೆ ಉಪದೇಶಿಸಿದ್ದರು.)

Rarest Archiver

ವಿ.—ಧರತೀತಿ ಧರಃ ಮಹ್ಯಾಃ ಧರಃ, ಮಹೀಧರಸ್ಯ ಮುಖಂ ತಸ್ಮಾತ್, ದ್ವಿಜಾನಾಂ ರಾಜಾ, ದ್ವಿಜರಾಜಸ್ಯ ಗಾವಃ, ದ್ವಿಜರಾಜಗವಾಂ ವಿಷಯಃ, ತಸ್ಯ ಭಾವಃ ತಯಾ ಅತಿಪೂರಿತಃ ತಂ, ಪೃಥುಶ್ಚ ಸಾ ಬುದ್ಧಿಶ್ಚ, ಮಧ್ವಸ್ಯ ಪೃಥು-ಬುದ್ಧಿರೇವ ವಾರಿಧಿಃ ತಂ.

ಕ್ರಿ.—ಪ್ರ + ವಿವೇಶ. ಸರ್ಗ ೫ ಶ್ಲೋಕ ೪೯ ನೋಡಿರಿ.

ಅವ.—ಶ್ರೀಮಧ್ವಾಚಾರ್ಯರು ಆ ಮಹನೀಯಮುನಿವರರಿಬ್ಬರ ಅಪ್ಪಣೆಯನ್ನು ಶಿರಸಾ ವಹಿಸಿದರು—

ಮತಮಿತ್ಯವೇತ್ಯ ಮಹಿತಂ ಮಹತೋ-
ರಭಿಧಾಯ ಬಾಢಮಿತಿ ಧೀರಮತಿಃ ।
ಅನಯೋರ್ನಿಯೋಗಮಧಿರೋಪಿತವಾನ್
ಸ್ವಶಿರಸ್ಯನನ್ಯಸು(ಸು)ವಹಂ ಪ್ರಣಮನ್ ॥೫೩॥

ಅ.ಅ.—ಧೀರಮತಿಃ = ದೃಢಬುದ್ಧಿಯುಳ್ಳ ಶ್ರೀಮಧ್ವಾಚಾರ್ಯರು, ಮಹತೋಃ = ಪೂಜ್ಯರಾದ ಶ್ರೀವ್ಯಾಸನಾರಾಯಣರ, ಮಹಿತಂ ಮತಂ = ಮಾನ್ಯವಾದ ಅಭಿಪ್ರಾಯವನ್ನು, ಇತಿ ಅವೇತ್ಯ=ಈ ರೀತಿ ತಿಳಿದು, ಪ್ರಣಮನ್ = ನಮಸ್ಕಾರಮಾಡುವವರಾಗಿ, ಬಾಢಂ ಇತಿ = ಹಾಗೆಯೇ ಆಗಲೆಂದು, ಅಭಿಧಾಯ = ಹೇಳಿ, ಅನನ್ಯಸುವಹಂ = ಅವರ ಹೊರತು ಬೇರೊಬ್ಬರಿಂದ ನಿರ್ವಹಿಸಲು ಸಾಧ್ಯವಿಲ್ಲದ, ಅನಯೋಃ=ಈ ವ್ಯಾಸನಾರಾಯಣರ, ನಿಯೋಗಂ = ಅಪ್ಪಣೆಯನ್ನೂ, ಸ್ವಶಿರಸಿ = ತನ್ನ ತಲೆಯ ಮೇಲೆ, ಅಧಿರೋಪಿತವಾನ್ = ಹೊರಿಸಿಕೊಂಡರು.

ತಾ.—ತಾನು ಭರತಖಂಡಕ್ಕೆ ಹಿಂತಿರುಗಿ ಸಜ್ಜನರಿಗೆ ಜ್ಞಾನಮಾರ್ಗವನ್ನು ತೋರಿಸಬೇಕೆಂಬುದೇ ಮಹಾತ್ಮರಾದ ವ್ಯಾಸನಾರಾಯಣರಿಗೆ ಸಂಮತವಾದ ವಿಷಯವೆಂದು ಸ್ಥಿರಬುದ್ಧಿಯುಳ್ಳ ಶ್ರೀಮಧ್ವಾಚಾರ್ಯರು ತಿಳಿದರು. ಅವರಿಬ್ಬರನ್ನೂ ನಮಸ್ಕರಿಸಿದರು. 'ತಮ್ಮ ಅಪ್ಪಣೆಯಂತೆ ನಡೆಯುವೆನು' ಎಂದು ವಿಜ್ಞಾಪಿಸಿ ಇನ್ನೊಬ್ಬರಿಗೆ ನಿರ್ವಹಿಸಲು ಸಾಧ್ಯವಿಲ್ಲದ ಅವರ ಅಪ್ಪಣೆಯನ್ನು ಶಿರಸಾ ವಹಿಸಿದರು.

Rarest Archiver

ವಿ.—ಧೀರಾ ಮತಿಃ ಯಸ್ಯ, ಸುಖೇನ ಸೋಢುಂ ಶಕ್ಯಃ ಸುವಹಃ, ಅನ್ಯೇನ ಸುವಹಃ ಅನ್ಯಸುವಹಃ, ಅನ್ಯಸುವಹಃ ನ ಭವತೀತಿ ಅನನ್ಯಸುವಹಃ ತಂ; ಇಲ್ಲಿ ಕ್ರಿಯಾಪದವಿಲ್ಲ.

ವೃತ್ತ—'ಪ್ರಮಿತಾಕ್ಷರಾ ಸಜಸಸ್ಯೈಃ ಕಥಿತಾ' ಎಂಬ ಲಕ್ಷಣದಂತೆ ಇಲ್ಲಿ ಪ್ರಮಿತಾಕ್ಷರಾ ವೃತ್ತ.

ಅವ.—ಈರೀತಿ ಲೋಕಹಿತಕರವಾದ ತಮ್ಮ ಸಂಭಾಷಣೆಗಳನ್ನು ಮುಗಿಸಿ ಮಹಾಬದರಿಯಲ್ಲಿ ಆ ಮೂವರು ಮಹಾತ್ಮರೂ ಆನಂದದಿಂದ ಕಂಗೊಳಿಸಿದರು—

ಆಮ್ನಾಯಾಸ್ತ್ರಯ ಇವ ತತ್ವಬೋಧಕಾಸ್ತೇ
ಪಾಪಘ್ನಾಸ್ತ್ರಯ ಇವ ಪಾವಕಾಃ ಪ್ರಜಾನಾಂ।
ಲೋಕಾ ವಾ ಸಕಲಭೃತಸ್ತ್ರಯೋಽತ್ರ ರೇಜುಃ
ಸಾನಂದಾ ಮುನಿಸುತಧರ್ಮಸೂನುಮಧ್ವಾಃ ॥೫೪॥

ಅ.ಅ.—ತ್ರಯಃ ಆಮ್ನಾಯಾಃ ಇವ=ಮೂರಾದ ಋಕ್, ಯಜುಸ್, ಸಾಮ ಎಂಬ ವೇದಗಳಂತೆ, ತತ್ವಬೋಧಕಾಃ = ಜೀವರಿಗೆ ತತ್ವೋಪದೇಶಕರಾದ, ತ್ರಯಃ ಪಾವಕಾಃ ಇವ = ಮೂರಾದ ದಕ್ಷಿಣಾಗ್ನಿ, ಗಾರ್ಹಪತ್ಯ ಆಹವನೀಯ ಎಂಬ ಅಗ್ನಿಗಳಂತೆ, ಪ್ರಜಾನಾಂ ಪಾಪಘ್ನಾಃ = ಜನರ ಪಾಪಪರಿಹಾರಕರಾದ, ತ್ರಯಃ ಲೋಕಾಃ ವಾ = ಮೂರಾದ ಭೂರ್ಲೋಕ, ಭುವರ್ಲೋಕ, ಸುವರ್ಲೋಕಗಳಂತೆ, ಸಕಲಭೃತಃ = ಎಲ್ಲವನ್ನೂ ಧರಿಸಿದ, ಸಾನಂದಾಃ=ಆನಂದಪೂರ್ಣರಾದ, ತೇ **ಮುನಿಸುತ-ಧರ್ಮಸೂನುಮಧ್ವಾಃ** = ಆ ಪರಾಶರಮುನಿಪುತ್ರರಾದ ಶ್ರೀವ್ಯಾಸರು, ಯಮಧರ್ಮನ ಮಗನಾದ ಶ್ರೀನಾರಾಯಣನು, ಶ್ರೀಮಧ್ವಾಚಾರ್ಯರು, ಅತ್ರ ರೇಜುಃ=ಈ ಬದರಿಕಾಶ್ರಮದಲ್ಲಿ ವಿರಾಜಿಸಿದರು.

ತಾ.—ಋಗ್ವೇದ ಯಜುರ್ವೇದ ಸಾಮವೇದಗಳೆಂಬ ಮೂರುವೇದಗಳಂತೆ ತತ್ವಬೋಧಕರು, ದಕ್ಷಿಣಾಗ್ನಿ ಗಾರ್ಹಪತ್ಯ ಆಹವನೀಯ ಎಂಬ ಮೂರು ಅಗ್ನಿಗಳಂತೆ ದರ್ಶನಾದಿಗಳಿಂದ ಜೀವರ ಪಾಪವನ್ನು ಪರಿಹರಿಸತಕ್ಕವರೂ, ಭೂರ್ಲೋಕ, ಭುವರ್ಲೋಕ, ಸುವರ್ಲೋಕಗಳಂತೆ ಸಕಲರನ್ನೂ ಪೋಷಿಸ

Rarest Archiver

ತಕ್ಕವರೂ ಆದ ಶ್ರೀವೇದವ್ಯಾಸದೇವರು, ಶ್ರೀನಾರಾಯಣದೇವರು, ಶ್ರೀಮಧ್ವಾಚಾರ್ಯರು, ಈ ಮೂವರು ಮಹಾತ್ಮರೂ ಕೂಡ ಶ್ರೀನಾರಾಯಣ ದೇವರ ಮಹಾಬದರಿಕಾಶ್ರಮದಲ್ಲಿ ಆನಂದದಿಂದ ವಿರಾಜಮಾನರಾಗಿದ್ದರು.

ವಿ.—ತತ್ವಂ ಬೋಧಯಂತೀತಿ ತತ್ವಬೋಧಕಾಃ, ಪಾಪಾನಿ ಘ್ನಂತೀತಿ ಪಾಪಘ್ನಾಃ, ಸಕಲಂ ಬಿಭ್ರತೀತಿ ಸಕಲಭೃತಃ, ಮುನೇಃ ಸುತಃ, ಧರ್ಮಸ್ಯ ಸೂನುಃ, ಮುನಿಸುತಶ್ಚ ಧರ್ಮಸೂನುಶ್ಚ ಮಧ್ವಶ್ಚ ಮುನಿಸುತಧರ್ಮಸೂನು-ಮಧ್ವಾಃ.

ಕ್ರಿ.—ರರಾಜ ರೇಜತುಃ ರರಾಜತುಃ ರೇಜುಃ ರರಾಜುಃ, ರೇಜಿಥ ರರಾಜಿಥ ರೇಜಥುಃ ರರಾಜಥುಃ ರೇಜ ರರಾಜ, ರರಾಜ ರೇಜಿವ ರರಾಜಿವ ರೇಜಿಮ ರರಾಜಿಮ. ರಾಜೃ ದೀಪ್ತೌ (ರಾಜ್) to shine ಅಕ.। ಸೇಟ್. ಉಭ.। ಲಿಟ್.

ವೃತ್ತ—'ಮ್ನೌ ಜ್ರೌ ಗಸ್ತ್ರಿದಶಯತಿಃ ಪ್ರಹರ್ಷಿಣೀಯಂ' ಎಂಬ ಲಕ್ಷಣ ದಂತೆ ಮ, ನ, ಜ, ರ, ಗಣಗಳು ಗುರು, ಒಂದು ಪಾದಕ್ಕೆ ೧೩ ಅಕ್ಷರಗಳ ಪ್ರಹರ್ಷಿಣೀವೃತ್ತವು.

ಇಲ್ಲಿಗೆ ಶ್ರೀಕವಿಕುಲತಿಲಕಶ್ರೀಮನ್ನಾರಾಯಣಪಂಡಿತಚಾರ್ಯರಿಂದ
ರಚಿತವಾದ ಶ್ರೀಮತ್ಸುಮಧ್ವವಿಜಯಮಹಾಕಾವ್ಯದ
ಎಂಟನೆಯ ಸರ್ಗದ ಕನ್ನಡಭಾಷಾನುವಾದವು
ಸಮಾಪ್ತವಾಯಿತು.

Rarest Archiver